ಕರ್ನಾಟಕದ ಬಂದರುಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಇತಿಹಾಸ

[ಆರಂಭಕಾಲದಿಂದ ಕ್ರಿ.ಶ ೧೪೦೦.ರ ವರೆಗೆ]

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ
ಸುರೇಶ ಎಮ್. ತಾಂಡೇಲ

ಮಾರ್ಗದರ್ಶಕರು
ಡಾ. ಕೆ. ಮೋಹನ್‌ಕೃಷ್ಣ ರೈ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೂಲಕ
ಡಾ. ಹಾಮಾನಾ ಸಂಶೋಧನಾ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು,
ಉಜಿರೆ ೫೭೪೨೪೦ (ದ.ಕ)

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ- ೫೮೩. ೨೭೬
೨೦೧೬

ಕರ್ನಾಟಕದ ಬಂದರುಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಇತಿಹಾಸ
[ಆರಂಭಕಾಲದಿಂದ ಕ್ರಿ.ಶ ೧೪೦೦ರ ವರೆಗೆ]

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಚರಿತ್ರೆ ವಿಭಾಗಕ್ಕೆ
ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧನಾ ವಿದ್ಯಾರ್ಥಿ
ಸುರೇಶ ಎಮ್. ತಾಂಡೇಲ

ಮಾರ್ಗದರ್ಶಕರು
ಡಾ. ಕೆ. ಮೋಹನ್‌ಕೃಷ್ಣ ರೈ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ಮೂಲಕ
ಡಾ. ಹಾಮಾನಾ ಸಂಶೋಧನಾ ಕೇಂದ್ರ
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜು,
ಉಜಿರೆ ೫೭೪೨೪೦ (ದ.ಕ)

೨೦೧೯

ಚರಿತ್ರೆ ವಿಭಾಗ
ಸಮಾಜ ವಿಜ್ಞಾನಗಳ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬
೨೦೧೬

<u>ಮಾರ್ಗದರ್ಶಕರ ದೃಢೀಕರಣ ಪತ್ರ</u>

ಸುರೇಶ ಎಂ. ತಾಂಡೇಲ್ ರವರು **"ಕರ್ನಾಟಕದ ಬಂದರುಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಇತಿಹಾಸ"** (ಆರಂಭಕಾಲದಿಂದ ಕ್ರಿ.ಶ ೧೪೦೦ರ ವರೆಗೆ) ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕ : ೧೭.೯.೧೬

ಸ್ಥಳ : ವಿದ್ಯಾರಣ್ಯ

ಮಾರ್ಗದರ್ಶಕರು

ಡಾ.ಕೆ. ಮೋಹನ್‌ಕೃಷ್ಣ ರೈ
ಪ್ರಾಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ಸಂಶೋಧಕರ ಪ್ರಮಾಣ ಪತ್ರ

"ಕರ್ನಾಟಕದ ಬಂದರುಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಇತಿಹಾಸ" (ಆರಂಭಕಾಲದಿಂದ ಕ್ರಿ.ಶ ೧೫೦೦ರ ವರೆಗೆ) ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪ್ರಾಧ್ಯಾಪಕರಾದ ಡಾ. ಕೆ. ಮೋಹನ್‌ಕೃಷ್ಣ ರೈ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ದಿನಾಂಕ : ೧೨.೯.೧೬
ಸ್ಥಳ : ಉಜಿರೆ

ಸಂಶೋಧಕರು

ಸುರೇಶ ಎಲ್ ತಾಂಡೇಲ್
ಪಿಎಚ್.ಡಿ ಸಂಶೋಧನ ವಿದ್ಯಾರ್ಥಿ
ಚರಿತ್ರೆ ವಿಭಾಗ
ಹಮಾನಾ ಸಂಶೋಧನಾ ಕೇಂದ್ರ ಉಜಿರೆ
ಉಜಿರೆ

ಪರಿವಿಡಿ

ಕರ್ನಾಟಕದ ಬಂದರುಗಳ ಸಾಂಸ್ಕೃತಿಕ ಮತ್ತು ಆರ್ಥಿಕ ಇತಿಹಾಸ
(ಆರಂಭಕಾಲದಿಂದ ಕ್ರಿ.ಶ ೧೪೦೦ ರ ವರೆಗೆ)

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನದ ಸಮೀಕ್ಷೆ, ವಿಧಾನ, ಸ್ವರೂಪ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನಗಳ ಸಮೀಕ್ಷೆ, ವಿಧಾನ, ಸ್ವರೂಪ

೧.೧ ಉದ್ದೇಶ

ವ್ಯಾಪಾರ-ವ್ಯವಹಾರಗಳೆನ್ನುವುದು ದುಡಿಯುವ ವರ್ಗದ ತುತ್ತನ್ನು ಕಿತ್ತುಕೊಳ್ಳಲು ಇರುವ ಸೌಮ್ಯ ರೂಪದ ಶಬ್ದಗಳಾಗಿಯೂ ಕಂಡುಬರುತ್ತವೆ. ವ್ಯಾಪಾರ ವ್ಯವಹಾರಗಳು ಉತ್ಪಾದನೆಯನ್ನು ಅಗತ್ಯವುಳ್ಳವರಿಗೆ ನೀಡುವುದು ಹಾಗೂ ಅಗತ್ಯವುಳ್ಳವರು ಪಡೆಯುವುದು ಆಗಿದ್ದರೆ ಅದೊಂದು ಉತ್ತಮ ವ್ಯವಸ್ಥೆ ಆಗಿರುತ್ತದೆ. ಆದರೆ ಇಂದು ದುಡಿಯುವ ವರ್ಗಗಳ ಶ್ರಮವನ್ನು ದಂಡಿನ ಭಯ ಒಡ್ಡಿ ಅಥವಾ ಆಮಿಶಗಳಿಗೆ ಒಳಪಡಿಸಿ ಕಿತ್ತುಕೊಳ್ಳುವ ಬಗೆಯೇ ವ್ಯಾಪಾರಎಂಬಂತಾಗಿದೆ. ಇದು ಅಂತರಾಷ್ಟ್ರೀಯವಾಗಿದ್ದರೆ ಇನ್ನೂ ಭೀಕರವಾಗಿರುತ್ತದೆ. ಸಾಮ್ರಾಜ್ಯಗಳ ವಿಸ್ತರಣೆಗೆ ಈ ವ್ಯಾಪಾರ ವ್ಯವಹಾರಗಳು ಮೊದಲ ಹಂತಗಳಾಗಿದ್ದವು. ವ್ಯಾಪಾರಕ್ಕೆಂದೇ ಹೋದ ಅನೇಕ ಶ್ರೀಮಂತ ವರ್ತಕರ ಗುಂಪುಗಳು, ರಾಜಪ್ರಭುತ್ವದಿಂದ ನಿರ್ದೇಶಿತ ಕಾರಾವಾನ್‌ಗಳ ದಂಡಿನೊಂದಿಗೆ ಬಂದು ಸ್ಥಳೀಯ ಆಡಳಿತವನ್ನು ವಶಪಡಿಸಿಕೊಂಡದ್ದು ಪ್ರಪಂಚದ ಅನೇಕ ಕಡೆ ಕಂಡುಬರುತ್ತದೆ. ಭಾರತದಲ್ಲಿ ಭೂಮಾರ್ಗವಾಗಿ, ಕಡಲಮಾರ್ಗವಾಗಿ ಉಂಟಾದ ವ್ಯಾಪಾರಿ ಸಂಪರ್ಕಗಳು ವಿವಿಧ ಬಗೆಯ ಚಟುವಟಿಕೆ ನಡೆಸಿದ್ದು ಚರಿತ್ರೆಯ ಪುಟಗಳಲ್ಲಿ ದಾಖಲಾಗಿವೆ. ಇದರ ಪರಾಕಾಷ್ಠೆ ಕಂಡುಬರುವುದು ಹದಿನಾರನೇ ಶತಮಾನದಲ್ಲಿ. ಕಡಲ ಮಾರ್ಗವಾಗಿ ಬಂದ ಐರೋಪ್ಯ ವ್ಯಾಪಾರಿಗಳ ಚಟುವಟಿಕೆಗಳಲ್ಲಿ. ಅಲ್ಲಿಯ ಶ್ರೀಮಂತ ವರ್ತಕರು ರಾಜಪ್ರಭುತ್ವದ ಬೆಂಬಲದೊಂದಿಗೆ ನಿರ್ಮಿಸಿಕೊಂಡ 'ಈಸ್ಟ್ ಇಂಡಿಯಾ ಕಂಪನಿ'ಗಳ ಮೂಲಕ ವ್ಯಾಪಾರಕ್ಕೆಂದು ಬಂದು ಆಡಳಿತವನ್ನು ವಶಪಡಿಸಿಕೊಂಡು ಸ್ಥಳೀಯ ಸಂಪತ್ತಿಗೆ ಒಡೆಯರಾದರು.

ಅಲೆಮಾರಿ ಮಾನವನು ಒಂದೆಡೆ ನೆಲೆನಿಂತು ಬದುಕು ಕಟ್ಟಿಕೊಂಡ ಮೇಲೆ ಜೀವನ ಪದ್ಧತಿಯಲ್ಲಿ, ರೀತಿ-ನೀತಿಗಳಲ್ಲಿ ಹಲವು ಬದಲಾವಣೆಗಳಾದವು. ವರ್ಗಗಳು ಕಂಡುಬರಲಾರಂಭಿಸಿದವು. ವರ್ಗ ವೈಷಮ್ಯಗಳನ್ನು ಅಂಕೆಯಲ್ಲಿಡುವ ಅಗತ್ಯತೆಯಿಂದ ರಾಜ್ಯಗಳು ಉದ್ಭವಿಸಿದವು. ಅದೇ ಹೊತ್ತಿನಲ್ಲಿ ಅದು ವರ್ಗಗಳ ಘರ್ಷಣೆಯ ಮಧ್ಯದಿಂದ ಉದ್ಭವಿಸಿದುದರಿಂದಾಗಿ, ಅದು ಅತ್ಯಂತ ಪ್ರಬಲವಾದ, ಆರ್ಥಿಕವಾಗಿ ಮೇಲುಗೈ ಪಡೆದ ವರ್ಗದ ರಾಜ್ಯವಾಗಿ ಬದಲಾಗಿತ್ತು[೧]. ಉಳ್ಳವರ ವರ್ಗವು ಇಲ್ಲದವರ ವರ್ಗದ ವಿರುದ್ಧ ತನ್ನ ರಕ್ಷಣೆಗಾಗಿ ಹೊಂದಿರುವ ಸಾಧನವಾಗಿ ರಾಜ್ಯ ಬೆಳೆದು ಬಂದಾಗ ಗುಲಾಮ-ಒಡೆಯ, ಸಾಮಂತ ಜೀತದಾಳು,

ಮಾಲಿಕ-ಕಾರ್ಮಿಕ ಎಂಬ ಭೇದವನ್ನು ವ್ಯಾಪಕವಾಗಿ ಪೋಷಿಸಿಕೊಂಡು ಬಂದಿತು[೨]. ರಾಜ್ಯಗಳ ಉದಯ ಅಲ್ಲಿಯ ಶ್ರಮಜೀವಿಗಳನ್ನು ಅಂಕಿತದಲ್ಲಿರಿಸಿಕೊಂಡಿತು. ಶ್ರಮವಿಭಜನೆ ಹೆಚ್ಚುತ್ತಾ ಸಾಗಿದ್ದರಿಂದ ಮಿಗುತಾಯದ ಉತ್ಪಾದನೆ ಕಂಡುಬಂದಿತು[೩]. ಇದು ವಿನಿಮಯ ಪದ್ಧತಿಗೆ ದಾರಿಯಾಯಿತು. ಹೀಗೆ ಉಂಟಾದ ಶ್ರಮವಿಭಜನೆಯ ಮೂರನೇ ಹಂತವಾಗಿ, ಉತ್ಪಾದನೆಯಲ್ಲಿ ಪಾಲ್ಗೊಳ್ಳದಂಥ ಆದರೆ ಉತ್ಪನ್ನಗಳ ವಿನಿಮಯದಲ್ಲಷ್ಟೇ ತೊಡಗಿರುವಂಥ ಒಂದು ವರ್ಗವನ್ನು-ವರ್ತಕ ವರ್ಗವನ್ನು ಸೃಜಿಸಿತು[೪]. ಯಾವುದೇ ಶ್ರಮದಲ್ಲಿ ಭಾಗಿಗಳಾಗದೇ, ಮೈಗಳ್ಳರಾಗಿದ್ದು, ಸಮಾಜದಲ್ಲಿ ದೊಡ್ಡ ಶೋಷಕ ವರ್ಗವಾಗಿ ಬೆಳೆದು ಬಂದು, ಶ್ರಮಿಕರ ಉತ್ಪಾದನೆಗಳನ್ನು ದೇಶ, ವಿದೇಶಗಳಲ್ಲಿ ವಿನಿಮಯ, ಮಾರಾಟ ಮಾಡುವ ಮೂಲಕ ಲಾಭಖೋರರಾಗಿ ಬದಲಾದ ಈ ವರ್ಗ, ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಪಡೆಯಿತು. ಇಂಥಹ ವರ್ಗವನ್ನು ಪೋಷಿಸಿದ ಆಳುವ ವರ್ಗ ತನ್ನ ಪ್ರಭುತ್ವವನ್ನು ಗಟ್ಟಿಗೊಳಿಸಿಕೊಳ್ಳಲು ಹಾಗೂ ಲಾಭಗಳಿಸಿಕೊಳ್ಳಲು ಈ ವರ್ತಕ ಸಮೂಹದ ಮೂಲಕ ವ್ಯಾಪಾರ ವ್ಯವಹಾರಗಳನ್ನು ಭರದಿಂದ ನಡೆಸಿತು. ಬೇಡಿಕೆ ಇದ್ದ ವಸ್ತುಗಳನ್ನು ದುಡಿಯುವ ವರ್ಗದ ಸಹಾಯದಿಂದ ಉತ್ಪಾದಿಸಿ ದೇಶಿಯರಿಗೆ ಹಾಗೂ ವಿದೇಶಿಯರಿಗೆ ಮಾರಿ ಲಾಭ ಮಾಡಿಕೊಳ್ಳತೊಡಗಿದರು. ದೇಶದೊಳಗಿನ ಶ್ರೀಮಂತರು, ಸಾಮಂತರು, ರಾಜ ಪರಿವಾರದವರು, ಪುರೋಹಿತರೂ ಈ ವ್ಯಾಪಾರದ ಲಾಭದ ಫಲಾನುಭವಿಗಳಾಗಿದ್ದರು. ಕರ್ನಾಟಕದ ತೀರದ ಆಳಕಡಲಿನಿಂದ, ದುರ್ಗಮ ಪಶ್ಚಿಮ ಘಟ್ಟಗಳಿಂದ ಮೊಗೆದು ತಂದ ನೈಸರ್ಗಿಕ ಸಂಪತ್ತು ದೊಡ್ಡ ವ್ಯಾಪಾರಿ ಸರಕಾಗಿತ್ತು. ಈ ಲಾಭದಾಯಕ ಸರಕನ್ನು ತಂದವರು ಸ್ಥಳೀಯ ಶ್ರಮ ಜೀವಿಗಳು. ಇವರ ದಣಿವರಿಯದ ದುಡಿಮೆ ಆಳುವ ವರ್ಗದ ವೈಭವವನ್ನು ಹೆಚ್ಚಿಸಿತು. ಆದರೆ ಶ್ರಮಿಕರು ನಿರ್ಗತಿಕರಾದರು.

ಕರ್ನಾಟಕದ ಕರಾವಳಿಯ ಭೌಗೋಳಿಕ ಲಕ್ಷಣವು ಕಡಲೋತ್ತರ ವ್ಯಾಪಾರಕ್ಕೆ ತುಂಬಾ ಅನುಕೂಲವಾಗಿತ್ತು. ಸುರಕ್ಷಿತವಾದ ಕಡಲು ಮಾರ್ಗ ನೇರವಾಗಿ ಪರ್ಶಿಯಾ, ಅರಬ್ ರಾಷ್ಟ್ರಗಳಿಗೂ ಹಾಗೂ ಕೆಂಪು ಸಮುದ್ರ ಮಾರ್ಗವಾಗಿ ಭೂಮಧ್ಯ ಸಮುದ್ರ ದೇಶಗಳಿಗೂ ಸಂಪರ್ಕ ಕಲ್ಪಿಸಿತ್ತು. ಭಾರತದ ಪಶ್ಚಿಮ ಕರಾವಳಿ ಮತ್ತು ಬ್ಯಾಬಿಲೋನಿನ ಊರ್ ನಡುವೆ ಕ್ರಿ.ಪೂ. ಎರಡನೇ ಸಹಸ್ರಮಾನ ಅವಧಿಯ ಪ್ರಾರಂಭದಿಂದಲೂ ಸಾಗರೋತ್ತರ ವಾಣಿಜ್ಯ ನಡೆಯುತ್ತಿತ್ತೆಂದು ತಿಳಿದು ಬರುತ್ತದೆ[೫]. ಕರ್ನಾಟಕದ ಜನರು ಇತಿಹಾಸ ಪ್ರಾರಂಭದ ಕಾಲದಿಂದಲೂ ಕರಾವಳಿಯಲ್ಲಿ ನೌಕಾಯಾನ ಚಟುವಟಿಕೆಯಲ್ಲಿ ತೊಡಗಿದ್ದರೆಂಬುದಕ್ಕೆ ಸಾಕಷ್ಟು

ಆಧಾರಗಳು ದೊರೆತಿವೆ[1]. ಹೆರೋಡೋಟಸನು[2] ಕೆಂಪು ಸಮುದ್ರ ಮತ್ತು ಚೀನಾಗಳಿಗೆ ಜಲಮಾರ್ಗ ಇದ್ದುದ್ದನ್ನು ತಿಳಿಸಿದ್ದಾನೆ. ಈಜಿಪ್ಟ್, ಚೀನಾ, ಪರ್ಶಿಯಾ ಮುಂತಾದ ರಾಷ್ಟ್ರಗಳು ದಕ್ಷಿಣ ಭಾರತದ ಬಂದರುಗಳ ಮೂಲಕ ವಾಣಿಜ್ಯ ಸಂಪರ್ಕ ಪಡೆದಿದ್ದವು. ಹೀಗೆ ನಡೆದ ದೊಡ್ಡ ವ್ಯಾಪಾರ ವ್ಯವಹಾರಗಳು ಸ್ಥಳೀಯರ ಆರ್ಥಿಕ ಬದುಕಿನಲ್ಲಿ ಪರಿವರ್ತನೆ ತಂದಿತು. ಗ್ರೀಕ್‌ನಲ್ಲಿ ಉಂಟಾದ ಬೌದ್ಧಿಕ ಬೆಳವಣಿಗೆ ಹಾಗೂ ವಿಸ್ತಾರ ಸಾಮ್ರಾಜ್ಯ ನಿರ್ಮಾಣದ ಕನಸು ಭಾರತದಂಥಹ ನೈಸರ್ಗಿಕ ಸಂಪನ್ನ ದೇಶದೊಂದಿಗೆ ವ್ಯಾಪಾರಕ್ಕೆ ಪ್ರಚೋದಿಸಿತು. ಇದರಿಂದ ಕಡಲುಗಳನ್ನು ದಾಟಿದ ವ್ಯಾಪಾರಿ ನೌಕೆಗಳು ಕರ್ನಾಟಕ ತೀರವನ್ನು ಪ್ರವೇಶಿಸಿದವು. ಈ ವ್ಯಾಪಾರ ವನೋತ್ಪನ್ನ, ತೋಟಗಳ ಉತ್ಪನ್ನ, ಕಡಲೋತ್ಪನ್ನ ಹಾಗೂ ಬೆಲೆಬಾಳುವ ಹರಳುಗಳು, ಪ್ರಾಣಿಗಳು ಕೊನೆಯಲ್ಲಿ ಗುಲಾಮರ ವ್ಯಾಪಾರದವರೆಗೂ ಮುಂದುವರೆಯಿತು. ರೋಮನ್ನರ ವಿಲಾಸಿ ಪಾನೀಯ ಮದ್ಯಕ್ಕೂ ಸ್ಥಳೀಯ ಶ್ರಮಜೀವಿಗಳು ವಿನಿಮಯವಾದ ಬಗ್ಗೆ ತಿಳಿಯುತ್ತದೆ. ರೋಮನ್ನಿನ ಕೂಲಿಯಾಳುಗಳು ಸೈನಿಕರಾಗಿ ಭಾರತದಲ್ಲಿದ್ದದ್ದು ತಿಳಿಯುತ್ತದೆ. ಗ್ರೀಕ್‌ನ ತತ್ವಜ್ಞಾನದ ಮೇಲೆ ಭಾರತದ ಪ್ರಭಾವ, ಅರಬ್, ಪರ್ಶಿಯಾದ ಖಗೋಳ ಶಾಸ್ತ್ರದ ಮೇಲೆ ಭಾರತೀಯರ ಪ್ರಭಾವ, ಭಾರತೀಯ ಉಡುಪು, ಆಹಾರ, ಆರಾಧನಾ ಪದ್ಧತಿಯ ಮೇಲೆ ವಿದೇಶಿಗಳ ಅಚ್ಚಳಿಯದ ಪ್ರಭಾವ ಉಂಟಾಗಿದೆ.

೧.೨ ವ್ಯಾಪ್ತಿ

ಕಡಲೋತ್ತರ ವ್ಯಾಪಾರವೆನ್ನುವುದು ಸ್ಥಳೀಯ ಪ್ರಭುತ್ವಗಳಿಗೆ ಸಂಪತ್ತನ್ನು ತಂದುಕೊಡುವ ದೊಡ್ಡ ಲಾಭದಾಯಕ ಮಾರ್ಗವಾಗಿತ್ತು. ಬಂದರುಗಳು ಅಂದಿನ ಕಾಲದಲ್ಲಿ ಬಹುಮುಖ್ಯ ವ್ಯಾಪಾರಿ ಮಾರ್ಗಗಳಾಗಿದ್ದವು. ಅಶೋಕಮೌರ್ಯನು ಕೈಗೊಂಡ ಏಕೈಕ ಯುದ್ಧ ಕಳಿಂಗದ ಮೇಲಿನ ದಾಳಿಯಾಗಿತ್ತು. ಇದು ಅಲ್ಲಿಯ ಬಂದರುಗಳನ್ನು ಗುರಿಯಾಗಿಟ್ಟುಕೊಂಡು ಮಾಡಿದ ಯುದ್ಧ. ಮುಂದೆ ಅಧಿಕಾರಕ್ಕೆ ಬಂದ ಖಾರವೇಲನು ಪೂರ್ವದ ಬಂದರುಗಳನ್ನು ಗುರಿಯಾಗಿಟ್ಟು ಕೊಂಡು ಯುದ್ಧಗಳನ್ನು ಮಾಡಿದ್ದನು. ತರುವಾಯದ ಶಾತವಾಹನರು ಪೂರ್ವ-ಪಶ್ಚಿಮ ಬಂದರುಗಳನ್ನು ಆಶ್ರಯಿಸಿ ವ್ಯಾಪಾರದ ಮೂಲಕವೇ ಸಾಮ್ರಾಜ್ಯವನ್ನು ಕಟ್ಟಿದರು. ಇದು ಅಂದಿನ ಬಂದರುಗಳ ಪ್ರಾಮುಖ್ಯತೆಯನ್ನು ಹಾಗೂ ಅದರಿಂದ ಬರುತ್ತಿದ್ದ ಲಾಭವನ್ನು ತಿಳಿಸುತ್ತದೆ. ವ್ಯಾಪಾರಕ್ಕಾಗಿ ಸ್ಥಳೀಯ ವರ್ತಕರು ವಿದೇಶಗಳಿಗೂ, ಅಲ್ಲಿನ ವ್ಯಾಪಾರಿಗಳು ಕರ್ನಾಟಕದ ರೇವುಪಟ್ಟಣಗಳಿಗೂ ಬಂದು ತಿಂಗಳಾನುಗಟ್ಟಲೆ ವಾಸವಾಗಿರುತ್ತಿದ್ದರು. ಇಂಥಹ ಸಂದರ್ಭದಲ್ಲಿ ಉಂಟಾದ ಸಂಪರ್ಕವು ಆರಾಧನಾ ಪದ್ಧತಿ, ಉಡುಪು, ಆಹಾರ, ಭಾಷೆ ಮುಂತಾದವುಗಳ ಮೇಲೆ ಪ್ರಭಾವ ಬೀರಿದೆ.

ಇದಕ್ಕೂ ಹಿಂದೆ ನಡೆದ ಜನಾಂಗಗಳ ವಲಸೆಗಳಿಗೂ ಈ ತೀರ ಪ್ರದೇಶಗಳು ನೆಲೆಗಳಾಗಿದ್ದವು. ಇವೆಲ್ಲವುಗಳಿಂದ ಕರ್ನಾಟಕದ ತೀರ ಪ್ರದೇಶದಲ್ಲಿ ಜಾಗತಿಕ ಎನ್ನ ಬಹುದಾದ ಜೀವನ ಪದ್ಧತಿ ಹಾಗೂ ಶೋಷಣೆಗೆ ಒಳಪಡಿಸುವ ಆರ್ಥಿಕ ಪದ್ಧತಿ ರೂಪುಗೊಂಡಿತ್ತು.

ಈ ಅಧ್ಯಯನವು ಕ್ರಿ.ಪೂ೩೦೦ ರಿಂದ ಕ್ರಿ.ಶ ೧೪೦೦ರವರೆಗೆ ವ್ಯಾಪಿಸಿರುವುದರಿಂದ ಇಲ್ಲಿ ಕಡಲಮೂಲಕ ನಡೆದ ವ್ಯವಹಾರದ ಅಧ್ಯಯನ ಕುತೂಹಲಕಾರಿಯೂ, ರೋಚಕವೂಆಗಿದೆ. ಆ ಕಾಲದ ಒಲವು ನಿಲುವುಗಳು, ಹೊಸತರ ಸೇರ್ಪಡೆ, ಕೊಡುಕೊಳುಗೆಗಳು ಈ ಅಧ್ಯಯನದ ಮುಖ್ಯ ವಸ್ತುವಾಗಿದೆ. ಹಿಂದಿನದನ್ನು ಮರೆತರೆ ಮುಂದಿನದನ್ನು ಸೃಷ್ಟಿಸಿಕೊಳ್ಳಲು ಸಾಧ್ಯವಿಲ್ಲ. ಹಿಂದಿನ ದಿನಗಳೆಲ್ಲ ಒಳ್ಳೆಯವು ಅಥವಾ ಕೆಟ್ಟವು ಎಂದು ತೀರ್ಮಾನಿಸಲು ಬರುವುದಿಲ್ಲ. ಆದರೆ ಅದರ ಅಧ್ಯಯನವು ಮುಂದಿನ ಪೀಳಿಗೆಗೆ ಸಹಾಯಕವಾಗಿರುತ್ತದೆ.

೧.೩. ಅಧ್ಯಯನಗಳ ಸಮೀಕ್ಷೆ

ಕರ್ನಾಟಕದ ಬಂದರುಗಳ ಮೂಲಕ ನಡೆದ ವ್ಯಾಪಾರ ವ್ಯವಹಾರಗಳ ಕುರಿತು ಮತ್ತು ಅವುಗಳ ಪರಿಣಾಮದ ಕುರಿತು ಸಾಕಷ್ಟು ಅಧ್ಯಯನಗಳು ನಡೆದಿವೆ. ಆ ಅಧ್ಯಯನಗಳ ಸಮೀಕ್ಷೆಯನ್ನು ಇಲ್ಲಿ ನಡೆಸಲಾಗಿದೆ.

ಇದುವರೆಗೆ ಸಾಲೆತೋರೆ ಬಿ.ಎ. (೧೯೩೬), ರಾವ್.ಎಸ್.ಆರ್. (೧೯೭೦), ರಾಮಚಂದ್ರನ್ (೧೯೭೦), ನಾಗರಾಜ್‌ರಾವ್ ಎಂ.ಎಸ್. (೧೯೯೦), ಲಲನ್ ಜಯ ಗೋಪಾಲ್ (೧೯೭೦) ಮತ್ತಿತರರು ಕರ್ನಾಟಕದ ಕಡಲತೀರದ ಮೂಲಕ ನಡೆದ ವಿದೇಶಿ ಸಂಪರ್ಕದ ಬಗ್ಗೆ ದಿಕ್ಸೂಚಿ ಅಧ್ಯಯನಗಳನ್ನು ನಡೆಸಿದ್ದಾರೆ. ಸುಂದರ ಅ., ರಘುನಾಥ ಭಟ್ಟ ಎಚ್.ಆರ್., ವಸಂತಮಾಧವ ಕೆ.ಜಿ., ಗೋವಿಂದ ಪೈ ಎಂ., ಗುರುರಾಜ ರಾವ್ ಬಿ.ಕೆ., ನಾಗರಾಜು, ಶ್ರೀಕಂಠ ಶಾಸ್ತ್ರೀ ಎಸ್., ಶೇಷಾದ್ರಿ ಎಸ್., ಶಂಬಾಜೋಶಿ ಎಂ., ನರಸಿಂಹ ಮೂರ್ತಿ ಎ.ವಿ., ಗೋಪಾಲ ಬಿ.ಆರ್., ರಮೇಶ ಕೆ.ವಿ., ಜಯಪ್ಪಗೌಡ ಡಿ.ಎಸ್., ಬ್ರಜೇಶ್ ಕೃಷ್ಣ, ಮಕ್ಬೂಲ್ ಅಹ್ಮದ್, ಅಪ್ಪಾದೊರೈ ಎ., ಚಂಪಕಲಕ್ಷ್ಮಿ ಆರ್., ಸತೀಶಚಂದ್ರ, ಚೌದರಿ ಕೆ.ಎನ್., ಕೃಷ್ಣಪ್ಪ ಎಂ. ವಿ., ಸ್ವಾಮಿ ಲ.ನ., ಶೆಟ್ಟಿ.ಎಸ್.ಡಿ., ಫಣಿಕ್ಕರ್ ಕೆ.ಎಂ., ಸುನೀತಿಕುಮಾರ ಚಟರ್ಜಿ, ಲಹೋವರಿ ಮುಂತಾದವರು ಕೃತಿಗಳನ್ನು, ಲೇಖನಗಳನ್ನು ಬರೆದಿದ್ದಾರೆ. ಮುಖ್ಯವಾಗಿ ಉಪಾಧ್ಯಾಯ.ಯು.ಪಿ. ರವರ 'ಕೋಸ್ಟಲ್ ಕರ್ನಾಟಕ', ಕಿಲ್ಲೆ ಎನ್.ಎಸ್. ಹಾಗೂ ಶೀನಪ್ಪಹೆಗ್ಡೆಯವರ 'ಪ್ರಾಚೀನ ತುಳುನಾಡು', ಕೇಶವಕೃಷ್ಣ ಕುಡ್ವರವರ 'ದಕ್ಷಿಣ ಕನ್ನಡದ ಇತಿಹಾಸ', ಗಣಪಯ್ಯ.ಭಟ್.ಪಿ. ರವರ ಅಪ್ರಕಟಿತ ಸಂಶೋಧನಾ ಪ್ರಬಂಧ 'ಹಿಸ್ಟಾರಿಕಲ್ ಆ್ಯಂಡ್ ಕಲ್ಚರಲ್ ಜಿಯೋಗ್ರಫಿ ಎಂಡ್

ಎತ್ನೋಗ್ರಫಿ ಆಫ್ ತುಳುನಾಡು', ಗಣಪತಿರಾವ್ ಐಗಳ್.ಎಂ., ರವರ 'ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಚೀನ ಇತಿಹಾಸ', ಗುರುರಾಜ ಭಟ್ ಪಿ. ರವರ 'ತುಳುನಾಡು', 'ಸ್ಟಡೀಸ್ ಇನ್ ತುಳುವ ಹಿಸ್ಟರಿ ಆ್ಯಂಡ್ ಕಲ್ಚರ', 'ಬಸರೂರು ಒಂದು ಸಮೀಕ್ಷೆ' ಹಾಗೂ 'ತುಳುನಾಡಿನ ಸಪ್ತಕ್ಷೇತ್ರಗಳು', ಗೋವಿಂದ ಪೈ ಎಂ. ರವರ 'ತುಳುನಾಡು ಪೂರ್ವ ಸ್ಮೃತಿ', ಚಿನ್ನಪ್ಪ ಗೌಡ ಕೆ.ರವರ 'ಭೂತ ಆರಾಧನೆಯ ಜಾನಪದೀಯ ಅಧ್ಯಯನ', ನಾಗೇಂದ್ರರಾವ್ ರವರ ಪ್ರಬಂಧ 'ದಿ ಹಿಸ್ಟಾರಿಕಲ್ ಟ್ರೆಡಿಶನ್ ಆಫ್ ಸೌತ್ ಕೆನರಾ ಆ್ಯಂಡ್ ದಿ ಬ್ರಾಹ್ಮಣಿಕಲ್ ಗ್ರೂಪ್ಸ್ ಎ ಸ್ಟಡಿ ಆಫ್ ಗ್ರಾಮ ಪದ್ಧತಿ ಎಂಡ್ ಸಹ್ಯಾದ್ರಿಖಂಡ', ರಮೇಶ ಕೆ.ವಿ. ಹಾಗೂ ಶರ್ಮಾ ಎಂ.ಜೆ. ರವರ 'ತುಳುನಾಡಿನ ಅರಸು ಮನೆತನಗಳು', ವಸಂತ ಮಾಧವ ಕೆ.ಜಿ., ರವರ 'ವೆಸ್ಟರ್ನ ಕರ್ನಾಟಕ ಇಟ್ಸ ಆಗ್ರೇರಿಯನ್ ರಿಲೇಶನ್ಸ್ ೧೫೦೦-೧೮೦೦' ಹಾಗೂ 'ರಿಲೀಜಿಯನ್ಸ್ ಇನ್ ಕೋಸ್ಟಲ್ ಕರ್ನಾಟಕ ಎ ಹಿಸ್ಟ್ರಿ ೧೫೦೦-೧೭೬೩' ಮತ್ತು 'ಪಾಲಿಟಿಕಲ್ ಹಿಸ್ಟ್ರಿ ಆಫ್ ಕೆನರಾ', ಶೆಟ್ಟಿ ವಸಂತ ಬಿ. ರವರ ಅಪ್ರಕಟಿತ ಮಹಾಪ್ರಬಂಧ 'ಬಾರ್ಕೂರು-ಎ ಮೆಟ್ರೋಪಾಲಿಟನ್ ಸಿಟಿ ಆಫ್ ಆ್ಯಂಟಿಕ್ವಿಟಿ ಹಿಸ್ಟರಿ ಆ್ಯಂಡ್ ಕಲ್ಚರ್', ಶೈಲಾವರ್ಮ ಟಿ. ರವರ 'ತುಳುನಾಡಿನ ಶಾಸನಗಳ ಸಾಂಸ್ಕ್ರತಿಕ ಅಧ್ಯಯನ', ಸ್ಟರಕ್ ಜೆ., 'ಸೌತಕೆನರಾ'. ಸಂಪುಟ ೧. ಸಾಲೆತೋರೆ ಬಿ.ಎ., 'ಎನ್‌ಶ್ಯಂಟ್ ಕರ್ನಾಟಕ', 'ಹಿಸ್ಟರಿ ಆಫ್ ತುಳುವ', ಸ್ಟುವರ್ಟ ಹೆಚ್.ಎ., 'ಸೌತ್ ಕೆನರಾ' ಸಂಪುಟ ೧, ಬಿ.ಆರ್ ಅಂಬೇಡ್ಕರರವರ ಆರ್ಥಿಕ ಅಧ್ಯಯನದ ಮಹಾಪ್ರಬಂಧ, ಶೆಟ್ಟರ್ ಶ.,ರವರ ಸಾವಿಗೆ ಆಹ್ವಾನ, ಭಟ್ ಕೃಷ್ಣ ಹೆರಂಜೆ ಹಾಗೂ ಶೆಟ್ಟಿ ಎಸ್.ಡಿ. ಸಂಪಾದಕತ್ವದ 'ತುಳು ಕರ್ನಾಟಕ ಅರಸು ಮನೆತನಗಳು', ಮೋಹನಕೃಷ್ಣ ರೈ ಕೆ., ರವರ 'ವಸಾಹತು ಪೂರ್ವ ಕರ್ನಾಟಕದ ನಗರ ಚರಿತ್ರೆ'. ರಸಿಕ್ಯುನಾರವರ 'ಪೊಲಿಟಿಕಲ್ ಹಿಸ್ಟ್ರಿ ಆಫ್ ಉತ್ತರಕನ್ನಡ', ಬ್ರಜೇಶ್‌ಕೃಷ್ಣ 'ಫೊರೆನ್‌ಟ್ರೇಡ್ ಇನ್ ಅರ್ಲಿಮಿಡಿವಲ್ ಇಂಡಿಯಾ', ಕುಪ್ಪುಸ್ವಾಮಿ ಜಿ.ಆರ್. 'ಎಕನಾಮಿಕಲ್ ಎನ್‌ಸ್ಯೆಂಟ್ ಕರ್ನಾಟಕ', ಗುರುರಾಜಾಚಾರ ಎಸ್. ರವರ, 'ಸಂ ಎಸ್ಪೆಕ್ಟ ಆಫ್ ಎಕೊನಾಮಿಕ್ ಎಂಡ್ ಸೋಶಿಯಲ್ ಲೈಫ್ ಇನ್ ಕರ್ನಾಟಕ', ಹಿರೇಮಠ ಬಿ.ಆರ್., 'ಶಾಸನಗಳಲ್ಲಿ ಕರ್ನಾಟಕದ ವರ್ತಕರು', ಚಿದಾನಂದಮೂರ್ತಿ ಎಂ. 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಗೀತಾ ಬಿ.ಎಸ್. 'ಕರ್ನಾಟಕ ಸಾಂಸ್ಕೃತಿಕ ಸಂಘರ್ಷ', ಮಂಜುನಾಥ ಸಿ.ಯು. 'ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ', ಮುಂತಾದ ಕೃತಿಗಳು ಬಂದಿದ್ದು ಅವುಗಳು ಕರಾವಳಿಯ ಚರಿತ್ರೆಯ ಮೇಲೆ ಬೆಳಕು ಬೀರುತ್ತವೆ.

ಸಾಂಸ್ಕೃತಿಕ ಅಧ್ಯಯನಕ್ಕೆ ಸಹಾಯ ಮಾಡಿರುವ ಜೆ. ಎಫ್. ಫ್ಲೀಟ್‌ರವರ 'ಎಫಿಗ್ರಾಫಿಯಾ ಇಂಡಿಕಾ', ಬಿ. ಎಲ್ ರೈಸ್‌ರವರ 'ಎಪ್ರಿಗ್ರಾಫಿಯಾ ಕರ್ನಾಟಕ', ಭಟ್ ರಘುನಾಥ ಎಚ್.ಆರ್. ರವರ 'ಕರ್ನಾಟಕ ಶಾಸನ ಹಾಗೂ ಕಲೆ', ಶೇಷಶಾಸ್ತ್ರಿ ಆರ್., 'ಕರ್ನಾಟಕದ ವೀರಗಲ್ಲುಗಳು'.

ಅಂತೆಯೇ ದೇಸಾಯಿ ಪಿ.ಬಿ., ಕೃಷ್ಣ ಎಂ.ಎಚ್., ಪಾಠಕ್ ಕೆ.ಬಿ., ಅಣ್ಣಿಗೇರಿ ಎ.ಎಂ., ನರಸಿಂಹಾಚಾರ್ ಆರ್., ಪಂಚಮುಖಿ ಆರ್.ಎಸ್., ಗಾಯಿ ಜಿ.ಎಸ್., ಮುಂತಾದವರು ಶಾಸನಗಳನ್ನು ವಿವಿಧ ಬಗೆಯಲ್ಲಿ ಅಧ್ಯಯನ ನಡೆಸಿ ದಾಖಲಿಸಿದ್ದಾರೆ. ದೀಕ್ಷಿತ್ ಜಿ.ಎಸ್. ರವರ 'ಲೋಕಲ್ ಸೆಲ್ಫ ಗೌರ್ನಮೆಂಟ್ ಇನ್ ಮಿಡಿವಲ್ ಕರ್ನಾಟಕ' ಬಸವರಾಜು ಕೆ.ಆರ್.,ರವರ 'ದಿ ಎಡ್ಮಿನಿಸ್ಟ್ರೇಶನ್ ಸಿಸ್ಟಮ್ ಅಂಡರ್ ದ ಚಾಲುಕ್ಯಾಸ್ ಆಫ್ ಕಲ್ಯಾಣ', ಕೆ. ಮೋಹನ್‌ಕೃಷ್ಣ ರೈರವರ, 'ಕೆನರಾ ವಿಭಜನೆ', 'ತುಳುನಾಡು ಕನ್ನಡ ನುಡಿ', ಕಡಲ ತೀರದ ವ್ಯಾಪಾರದ ಬಗ್ಗೆ ತಿಳಿಸುವ ಜಯಪ್ಪಗೌಡ ಡಿ.ಎಸ್.,ರವರ 'ಕರ್ನಾಟಕದ ಕಡಲಾಚೆಯ ಸಂಪರ್ಕಗಳು', ಕಡಲಲ್ಲಿ ಪ್ರಯಾಣಕ್ಕೆ ಬಳಸುವ ಸಾಧನಗಳನ್ನು ತಿಳಿಸುವ ಸ್ವಾಮಿ ಎಲ್.ಎನ್.,ರವರ 'ಬೋಟ್ಸ ಎಂಡ್ ಶಿಪ್ಸ್ ಇನ್ ಇಂಡಿಯನ್ ಆರ್ಟ' ಮತ್ತು 'ಮೆರಿಟೈಮ್ ಕಂಟೆಕ್ಸ್ಟ ಎಲೊಂಗ್ ದ ವೆಸ್ಟಕೊಸ್ಟ್ ಆಫ್ ಇಂಡಿಯಾ ಸ್ಪೆಷಲ್ ರೆಫರೆನ್ಸ ಟು ಕರ್ನಾಟಕ', ಮುಖರ್ಜಿಯವರ 'ನೋಟ್ಸ ಆನ್ ಎನ್ಸಂಟ್ ಹಿಂದೂ ಶಿಪ್ಪಂಗ್', ರಿತ್ತಿ ಎಸ್. ಎಚ್.,ರವರ 'ಶಿಪ್ಪಿಂಗ್ ಇನ್ ಎಸ್ಸೆಂಟ್ ಇಂಡಿಯಾ', ಗುರುರಾಜರಾವ್ ಬಿ.ಕೆ. 'ಸೋಶಿಯಲ್ ಎಕೊನಾಮಿಕ್ ಲೈಫ್ ಇನ್ ಪ್ರೊಟೋ ಹಿಸ್ಟೋರಿಕ್ ಕರ್ನಾಟಕ' ಮುಂತಾದವುಗಳು.

ಕಡತಗಳು, ಶಾಸನಗಳು, ಅಪ್ರಕಟಿತ ಸಂಶೋಧನಾ ಪ್ರಬಂಧಗಳು, ಲೇಖನಗಳು ಮತ್ತು ಕೈಪಿಯತ್ತುಗಳು ಈ ಕುರಿತು ತಿಳಿಸುತ್ತವೆ. ಎಚ್.ಎಲ್. ನಾಗೇಗೌಡರು ಅನುವಾದಿಸಿರುವ ಪ್ರವಾಸಿ ಕಂಡ ಇಂಡಿಯಾದ ಸಂಪುಟಗಳು ಕರ್ನಾಟಕದ ಕಡಲೋತ್ತರ ಸಂಪರ್ಕಗಳ ಬಗ್ಗೆ ತಿಳಿಸುತ್ತವೆ.

ಈ ಮುಂತಾದ ಕೃತಿಗಳನ್ನು, ಲೇಖನಗಳನ್ನು ಈ ಅಧ್ಯಯನದ ಸಂದರ್ಭದಲ್ಲಿ ಪರಿಶೀಲಿಸಲಾಗಿದೆ. ಅಗತ್ಯ ಕಂಡಲ್ಲಿ ಇವುಗಳಲ್ಲಿ ಬಂದ ವಿಚಾರಗಳನ್ನು ಬಳಸಿಕೊಳ್ಳಲಾಗಿದೆ.

೧.೪ ವಿಧಾನ

ಇಂದು ಚರಿತ್ರೆ ಅಧ್ಯಯನ ಚರಿತ್ರೆಗಳ ಅಧ್ಯಯನ ಎಂದು ಬದಲಾಗಿದೆ. ಚರಿತ್ರೆಯ ಅಧ್ಯಯನ ಆಧುನಿಕ ವೈಚಾರಿಕ ದೃಷ್ಟಿ ಹಾಗೂ ಗ್ರಹಿಕೆಯೊಂದಿಗೆ ಅಧ್ಯಯನಕ್ಕೆ ಒಳಗಾಗಿದೆ. ಅರಸ, ರಾಜಕೀಯ ಕೇಂದ್ರಿತ, ಧರ್ಮ ಕೇಂದ್ರಿತ ಎಂಬ ಚರಿತ್ರೆ ಮತ್ತು ಗ್ರಹಿಕೆಗಳು ಬದಲಾಗಿವೆ. ಜನಕೇಂದ್ರಿತ ನೆಲೆಯಲ್ಲಿ ಸಾಂಸ್ಕೃತಿಕ ಹಾಗೂ ಆರ್ಥಿಕ ಚರಿತ್ರೆ ಅರ್ಥೈಸುವ ಅಧ್ಯಯನ ನಡೆಯುತ್ತಿವೆ. ಚರಿತ್ರೆಯ ಬದಲಾದ ವೈದಾನಿಕತೆ, ಸೈದ್ಧಾಂತಿಕತೆಯನ್ನು ಈ ಮಹಾ ಪ್ರಬಂಧದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಪ್ರತಿ ಘಟನೆಯಲ್ಲಿ ಕಾರ್ಯಕಾರಣ ಸಂಬಂಧವಿರುತ್ತದೆ. ಚಲನಶೀಲವಾಗಿರುವ ಸಮಾಜದಲ್ಲಿ ಉಂಟಾಗುವ ಪರಿವರ್ತನೆಯಲ್ಲಿ ಉತ್ಪಾದಕರು ಹಾಗೂ ಉತ್ಪಾದನಾ ಸಾಧನಗಳ

ಸಂಬಂಧವು ಪ್ರಮುಖ ಕಾರಣವಾಗಿರುತ್ತದೆ. ಮಾರ್ಕ್ಸ್ ಮತ್ತು ಎಂಗೆಲ್ಸ್‌ರು ಪ್ರತಿಪಾದಿಸಿದ ಚಾರಿತ್ರಿಕ ಭೌತವಾದವನ್ನು ಈ ಅಧ್ಯಯನದ ಸಂದರ್ಭದಲ್ಲಿ ಅನುಸರಿಸಲಾಗಿದೆ. ಉತ್ಪಾದನೆ ಬೆಳವಣಿಗೆಯ ಕಾಲಘಟ್ಟಗಳನ್ನು ಉತ್ಪಾದಕ ಶಕ್ತಿಗಳು ಹಾಗೂ ಜನತೆಯ ಉತ್ಪಾದನಾ ಸಂಬಂಧದ ಹಿನ್ನೆಲೆಯಲ್ಲಿ ಅರ್ಥೈಸುವ ಪ್ರಯತ್ನ ಮಾಡಲಾಗಿದೆ. ಆಹಾರೇತರ ವಸ್ತುಗಳನ್ನು ನಿರ್ಮಿಸುವ ಸಾಮರ್ಥ್ಯ ಬೆಳೆದಂತೆಲ್ಲಾ ಸಾಮಾಜಿಕ ಸಂಬಂಧಗಳು ಬದಲಾದವು. ಅಧಿಕಾರದ ಮೇಲ್ತುದಿಯಲ್ಲಿ ಆಳುವ ವರ್ಗದ ಪ್ರತಿನಿಧಿಗಳು, ಅಧಿಕಾರಿ ವರ್ಗ, ಪುರೋಹಿತರು, ಮಾಂಡಳಿತರು, ಭೂ ಮಾಲಿಕರು, ಶ್ರೀಮಂತ ವರ್ತಕರು ಇದ್ದರೆ, ಅಧಿಕಾರ ಶಕ್ತಿ ಕೇಂದ್ರದಿಂದ ಬಹುದೂರದಲ್ಲಿದ್ದು, ಶ್ರೇಣಿಕೃತ ಸಮಾಜ ವ್ಯವಸ್ಥೆಯ ಕೆಳಭಾಗದಲ್ಲಿದ್ದ ಜನಸಾಮಾನ್ಯರು ಇದ್ದರು. ಪ್ರಭುತ್ವದ ಬೆಳವಣಿಗೆಯಲ್ಲಿ ಬಹುತರದ ಕಾಣಿಕೆಯನ್ನು ಈ ದುಡಿಯುವ ವರ್ಗ ನೀಡಿದೆ. ಆದರೆ ರಾಜ ಕೇಂದ್ರಿತ ಚರಿತ್ರೆಯಲ್ಲಿ ಅವರು ನಿರ್ಲಕ್ಷಿತರಾಗಿದ್ದಾರೆ. ಆದ್ದರಿಂದ ಇಲ್ಲಿ ಕರಾವಳಿಯ ಒಟ್ಟೂ ಜೀವನವನ್ನು ಸಾಂಸ್ಕೃತಿಕ ಆರ್ಥಿಕ ಜೀವನವನ್ನಾಗಿ ನೋಡಿ ದುಡಿಯುವ ವರ್ಗದ ಕೊಡುಗೆಯನ್ನು ಕೊಡಲಾಗಿದೆ. ಜನಮುಖಿ ನೆಲೆಯಲ್ಲಿ ಈ ಎಲ್ಲ ಘಟನೆಗಳನ್ನು ನೋಡುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಬಂದರು ಚರಿತ್ರೆಯನ್ನು ಆರ್ಥಿಕ ಚರಿತ್ರೆಯಾಗಿ ಭಾವಿಸಿ ಅಧ್ಯಯನ ಮಾಡಲಾಗಿದೆ.

ಕರಾವಳಿಯ ಜನ ಜೀವನವನ್ನು ಬಹುಮುಖಿ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಭೇಟೆ, ಮೀನುಗಾರಿಕೆ, ಕೃಷಿ, ವ್ಯಾಪಾರ, ಕೈಗಾರಿಕೆ, ಬಂದರುಗಳ ರಚನೆ, ಪೇಟೆ–ಪಟ್ಟಣ–ಸಂತೆ ಎಲ್ಲವನ್ನು ಜನಕೇಂದ್ರಿತವಾದ ಸಮಾಜಮುಖಿ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

ಬಂದರು ಪಟ್ಟಣಗಳ ರಚನೆ, ಬಂದರಿನ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಹಾಗೂ ಕಡಲಿಗೆ ಸೇರುವ ನದಿಗಳನ್ನು, ಅವುಗಳ ಮೂಲಕ ಉಂಟಾದ ಸಂಪರ್ಕವನ್ನು ಅಧ್ಯಯನ ಮಾಡಲು ಕ್ಷೇತ್ರ ಕಾರ್ಯ ಮಾಡಲಾಗಿದೆ. ಹಿನ್ನಾಡಿನ ಸಂಪರ್ಕ ಹಾಗೂ ಬಂದರಿಗೆ ಸೇರುವ ಪ್ರಮುಖ ಮಾರ್ಗಗಳನ್ನು ಅರಿಯಲು ಕ್ಷೇತ್ರಕಾರ್ಯ ಮಾಡಿ ಪ್ರಬಂಧ ಸಿದ್ಧಪಡಿಸಲಾಗಿದೆ.

ಬಂದರುಗಳ ಅಧ್ಯಯನಕ್ಕೆ ಸಂಬಂಧಿಸಿದಂತೆ ಇದುವರೆಗೆ ಬಂದಿರುವ ಪ್ರಾಥಮಿಕ ಹಾಗೂ ಆನುಷಂಗಿಕ ವರದಿಗಳನ್ನು, ಅಧ್ಯಯನಗಳನ್ನು ಪರಿಶೀಲಿಸಿ, ಅಗತ್ಯವಿರುವಲ್ಲಿ ಅವುಗಳನ್ನು ಬಳಸಿಕೊಂಡು ಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

೧.೫ ಸ್ವರೂಪ

ಭಾರತದ ಚರಿತ್ರೆಯನ್ನು ಬಹುತೇಕವಾಗಿ ಉತ್ತರ ಭಾರತದ ಚರಿತ್ರೆಗೆ ಸೀಮಿತಗೊಳಿಸಿ ಕೊಂಡಿರುವಂತೆ, ದಕ್ಷಿಣ ಭಾರತದ ಚರಿತ್ರೆಯಲ್ಲಿ ಕರ್ನಾಟಕ ನಿರ್ಲಕ್ಷಿಸಲ್ಪಟ್ಟಿದೆ. ಹಾಗೇ ಕರ್ನಾಟಕದ ಚರಿತ್ರೆ ಕೇವಲ ಸಾಮ್ರಾಜ್ಯಗಳ ನಿರ್ಮಾಣ, ರಾಜವಂಶಗಳ ರಾಜಕೀಯ ಹಾಗೂ ಯುದ್ಧದ ಕಥನಗಳಿಗೆ ಮೀಸಲಾಗಿದೆ. ಕೆಲವು ತಳಸ್ಪರ್ಶಿ ಚರಿತ್ರೆ ಕೃತಿಗಳು ಬಂದಿವೆಯಾದರೂ ಅವುಗಳಲ್ಲಿ ಕರಾವಳಿ ಪ್ರದೇಶದ ಚರಿತ್ರೆಗೆ ಸಿಗಬೇಕಾದ ಸ್ಥಾನ ಸಿಕ್ಕಿಲ್ಲ. ಇಲ್ಲಿ ಕರ್ನಾಟಕದ ಬಂದರುಗಳ ಮೂಲಕ ನಡೆದ ಆರ್ಥಿಕ ಚಟುವಟಿಕೆ ಹಾಗೂ ಸಾಂಸ್ಕೃತಿಕ ಬದುಕನ್ನು ಅಧ್ಯಯನ ಮಾಡಲಾಗಿದೆ.

ಒಟ್ಟು ಏಳು ಅಧ್ಯಾಯಗಳಲ್ಲಿ ಈ ಅಧ್ಯಯನವನ್ನು ವಿಭಾಗಿಸಲಾಗಿದ್ದು, ಒಂದನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನಗಳ ಸಮೀಕ್ಷೆ ಹಾಗೂ ಸ್ವರೂಪ ನಿರೂಪಿಸಲಾಗಿದೆ. ಬಂದರುಗಳ ಅಧ್ಯಯನದ ಅವಶ್ಯಕತೆ, ವ್ಯಾಪಾರ ಹಾಗೂ ಸಾಂಸ್ಕೃತಿಕ ಜೀವನದ ಅಧ್ಯಯನದ ಹಿನ್ನಲೆ ಹಾಗೂ ಅದರ ವ್ಯಾಪ್ತಿಯನ್ನು ಗುರುತಿಸಿಕೊಳ್ಳಲಾಗಿದೆ. ಮತ್ತು ಬಂದರುಗಳ ಬಗ್ಗೆ ಬಂದಿರುವ ಪ್ರಮುಖ ಅಧ್ಯಯನಗಳ ಸಮೀಕ್ಷೆ ನಡೆಸಲಾಗಿದೆ.

ಅಧ್ಯಾಯ ಎರಡರಲ್ಲಿ ಬಂದರುಗಳ ಭೌಗೋಳಿಕ ಲಕ್ಷಣಗಳನ್ನು ಅಧ್ಯಯನ ಮಾಡಲಾಗಿದೆ. ಕಾರವಾರದಿಂದ ಮಂಗಳೂರಿನವರೆಗೆ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿರುವ ಒಟ್ಟು ಒಂಬತ್ತು ಬಂದರುಗಳ ಭೌಗೋಳಿಕ ಲಕ್ಷಣ, ಪಶ್ಚಿಮ ಘಟ್ಟದೊಂದಿಗಿನ ಸಂಬಂಧ, ನದಿಗಳ ಸಂಪರ್ಕ, ರೇವು ಪಟ್ಟಣದ ಸ್ಥಿತಿಗತಿ, ಬಂದರುಗಳಲ್ಲಿ ನೀರಿನ ಸ್ಥಿತಿ, ಬಂದರುಗಳಿಗೆ ಅನುಕೂಲವಾಗಿರುವ ದ್ವೀಪಗಳು, ಮತ್ತು ಆಂತರಿಕ ಹಾಗೂ ಬಾಹ್ಯ ಸಂಪರ್ಕ ಮಾರ್ಗಗಳ ಅಧ್ಯಯನ ನಡೆಸಲಾಗಿದೆ.

ಅಧ್ಯಾಯ ಮೂರರಲ್ಲಿ ಬಂದರುಗಳ ಚಾರಿತ್ರಿಕತೆಯನ್ನು ಅಧ್ಯಯನ ಮಾಡಲಾಗಿದೆ. ಇಲ್ಲಿ ಆರಂಭದಿಂದ ಅಂದರೆ ಮೌರ್ಯ–ಪಲ್ಲವ–ಕದಂಬರಿಂದ ಕ್ರಿ.ಶ ೧೪೦೦ ರವರೆಗೆ ರಾಜಕೀಯ ಪ್ರಭುತ್ವನಡೆಸಿದ ಅರಸುಮನೆತನಗಳ ಚರಿತ್ರೆ, ಅವರು ಬಂದರುಗಳನ್ನು ವಶಪಡಿಸಿಕೊಳ್ಳಲು ನಡೆಸಿದ ಪೈಪೋಟಿ ಹಾಗೂ ಅವುಗಳ ಮೂಲಕ ನಡೆಸಿದ ವ್ಯಾಪಾರವನ್ನು ಅಧ್ಯಯನ ಮಾಡಲಾಗಿದೆ. ನಂತರ ಬಂದರು ಪ್ರದೇಶವನ್ನು ಆಳಿದ ಸಾಮಂತರ ಆಡಳಿತಕಾಲದ ಚರಿತ್ರೆ ಹಾಗೂ ಬಂದರುಗಳಿಗೆ ಸಂಬಂಧಿಸಿದಂತೆ ನಡೆದ ರಾಜಕೀಯ ಸಂಘರ್ಷ ಹಾಗೂ ಒಪ್ಪಂದಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಬಂದರು ಪಟ್ಟಣಗಳ ಬೆಳವಣಿಗೆ, ಆಡಳಿತ, ವ್ಯಾಪಾರದ ಸಂಬಂಧದಲ್ಲಿ ರೇವುಪಟ್ಟಣದಲ್ಲಿ ನಡೆದ ಕೈಗಾರಿಕೆಗಳ ಬೆಳವಣಿಗೆ, ವಿವಿಧ ಆಡಳಿತ ವಿಭಾಗಗಳನ್ನು, ಅವುಗಳ ಆಡಳಿತದ ರೀತಿಗಳನ್ನು ಅಧ್ಯಯನ ಮಾಡಲಾಗಿದೆ.

ಅಧ್ಯಾಯ ಐದರಲ್ಲಿ ಬಂದರುಗಳ ಸಾಂಸ್ಕೃತಿಕ ಪರಿಸ್ಥಿತಿಗಳನ್ನು ಅಧ್ಯಯನ ಮಾಡಲಾಗಿದೆ. ಈ ಅಧ್ಯಾಯ ಧಾರ್ಮಿಕ ಪರಿಸರ ಹಾಗೂ ಸಾಮಾಜಿಕ ಪರಿಸರ ಎಂದು ಎರಡು ಭಾಗಗಳನ್ನಾಗಿ ವಿಭಾಗಿಸಿಕೊಳ್ಳಲಾಗಿದೆ. ಧಾರ್ಮಿಕ ಪರಿಸರದಲ್ಲಿ ಅಂದು ಚಟುವಟಿಕೆಯಲ್ಲಿದ್ದ ಪ್ರಮುಖ ಧರ್ಮಗಳು, ಜನಪದ ಧರ್ಮ, ಆರಾಧನೆಗಳು ಹಾಗೂ ಸಂಪ್ರದಾಯಗಳ ಅಧ್ಯಯನ ಮಾಡಲಾಗಿದೆ. ಸಾಮಾಜಿಕ ಪರಿಸರದಲ್ಲಿ ಜಾತಿವಿಂಗಡಣೆ, ದುಡಿಯುವ ವರ್ಗ, ಸಾಮಾಜಿಕ ರಚನೆ ಹಾಗೂ ಸಮುದಾಯಗಳ ವಸತಿ ನೆಲೆಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ.

ಅಧ್ಯಾಯ ಆರರಲ್ಲಿ ಬಂದರುಗಳ ಆರ್ಥಿಕ ಜೀವನವನ್ನು ವಿಸ್ತಾರವಾಗಿ ಅಧ್ಯಯನ ಮಾಡಲಾಗಿದೆ. ಇದರಲ್ಲಿ ಬಂದರುಗಳ ಆರ್ಥಿಕತೆ, ವ್ಯಾಪಾರ, ವಾಣಿಜ್ಯ, ಸರಕುಗಳು, ವ್ಯಾಪಾರಿ ಮಾರ್ಗ, ಸಂತೆ–ಪೇಟೆ–ಪಟ್ಟಣ ಹಾಗೂ ಉದ್ದಿಮೆಗಳು, ತೆರಿಗೆ, ತೂಕಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ. ಬಹುಮುಖ್ಯವಾಗಿ ಅಂದಿನ ಕಾಲದಲ್ಲಿ ವ್ಯಾಪಾರದಲ್ಲಿ ಪ್ರಮುಖ ಪಾತ್ರವಹಿಸಿದ್ದ ದೇಶಿ ಹಾಗೂ ವಿದೇಶಿ ವರ್ತಕ ಸಂಘಗಳ ಬಗ್ಗೆ ಹಾಗೂ ಅವುಗಳ ಚಟುವಟಿಕೆಗಳ ಬಗ್ಗೆ ಅಧ್ಯಯನ ನಡೆಸಲಾಗಿದೆ. ಬಂದರುಗಳ ವ್ಯಾಪಾರಕ್ಕೆ ಸಹಕಾರಿಯಾಗಿದ್ದ ಒಳನಾಡುಗಳ ಬಗ್ಗೆ ಅಧ್ಯಯನ ಮಾಡಿ ಅವುಗಳಿಗಿದ್ದ ಸಂಪರ್ಕ ಮಾರ್ಗ, ಅಲ್ಲಿ ಸಿಗುತ್ತಿದ್ದ ಸರಕುಗಳು ಹಾಗೂ ಹಿನ್ನಾಡಿನೊಂದಿಗೆ ಬಂದರಿನ ಸಂಪರ್ಕ ವಿವರಿಸಲಾಗಿದೆ. ಆಫ್ರಿಕಾ, ಚೀನಾ, ಗ್ರೀಕ್, ರೋಮ್, ಪರ್ಷಿಯಾ, ಅರೇಬ್ಬಿಯಾ ಮುಂತಾದ ದೇಶಗಳ ವರ್ತಕರ ಸಂಘಟನೆಗಳು ಬಳಸುತ್ತಿದ್ದ ವ್ಯಾಪಾರಿ ಸರಕುಗಳ ಹಾಗೂ ಭಾರತದಿಂದ ಹೊರಹೋದ ಹಾಗೂ ಒಳಬಂದ ವಸ್ತುಗಳ ಬಗೆಗೂ ವಿವೇಚಿಸಲಾಗಿದೆ.

ಏಳನೇ ಅಧ್ಯಾಯದಲ್ಲಿ ಒಟ್ಟು ಅಧ್ಯಯನದಿಂದ ಕಂಡುಕೊಂಡ ಫಲಿತಗಳನ್ನು ನೀಡಲಾಗಿದೆ. ಆರಂಭದಲ್ಲಿ ಗುರುತಿಸಿಕೊಂಡಂತೆ ಬಂದರುಗಳ ಮೂಲಕ ನಡೆದ ವ್ಯಾಪಾರ–ವಾಣಿಜ್ಯದೊಂದಿಗೆ ಸಾಂಸ್ಕೃತಿಕ ಹಾಗೂ ಆರ್ಥಿಕ ಜೀವನದ ಮೇಲೆ ಉಂಟಾದ ಪರಿಣಾಮ, ವಿದೇಶಿಯರೊಂದಿಗೆ ನಡೆದ ವ್ಯಾಪಾರದ ಸಂದರ್ಭದಲ್ಲಿ ಉಂಟಾದ ಕೊಡುಕೊಳುಗೆಯ ವಿವರವನ್ನು ನೀಡಲಾಗಿದೆ.

ಈ ಅಧ್ಯಯನಕ್ಕೆ ಅನೇಕ ಬಗೆಯ ನೇರ, ಪರೋಕ್ಷ ಆಕರಗಳು ಉಪಲಬ್ಧವಿದ್ದು, ಅವುಗಳನ್ನು ಬಳಸಿಕೊಳ್ಳಲಾಗಿದೆ. ಬಂದರುಗಳ ಭೌಗೋಳಿಕ ಲಕ್ಷಣ ತಿಳಿಯಲು ಹಾಗೂ ಹಿನ್ನಾಡಿಗೆ ಸಂಪರ್ಕ ಕಲ್ಪಿಸುವ ಮಾರ್ಗಗಳ ಬಗ್ಗೆ ತಿಳಿಯಲು ಕ್ಷೇತ್ರಕಾರ್ಯ ಮಾಡಲಾಗಿದೆ. ಬಂದರುಗಳ ಚಟುವಟಿಕೆ ತಿಳಿಸುವ ಪ್ರವಾಸಿಗರ ಕಥನ, ಅನೇಕ ಪ್ರಕಟಿತ ಕೃತಿಗಳು ಹಾಗೂ ಕರಾವಳಿಯ ಪ್ರಮುಖ ವ್ಯಾಪಾರಿ ಚಟುವಟಿಕೆ ತಿಳಿಸುವ ಶಾಸನಗಳನ್ನು ಈ ಅಧ್ಯಯನಕ್ಕೆ

ಬಳಸಿಕೊಳ್ಳಲಾಗಿದೆ. ಸ್ಥಳೀಯ ಚರಿತ್ರೆಯ ಪ್ರಮುಖ ಘಟ್ಟಗಳನ್ನು ವಿಶ್ಲೇಷಿಸಲು ಐತಿಹ್ಯ ಹಾಗೂ ಪೌರಾಣಿಕ ಕಥನಗಳನ್ನು ಬಳಸಿಕೊಳ್ಳಲಾಗಿದೆ. ಪ್ರಕಟಿತ ಶಾಸನಗಳನ್ನು ಹಾಗೂ ಕರಾವಳಿಯ ಶಾಸನಗಳ ಅಧ್ಯಯನಗಳನ್ನು ಬಳಸಲಾಗಿದೆ. ಸಂಗಂ ಸಾಹಿತ್ಯ, ವಿದೇಶಿ ಪ್ರವಾಸಿಗರ ಬರಹಗಳು ಮತ್ತು ಲಭ್ಯ ವಾಸ್ತುಶಿಲ್ಪಗಳನ್ನು ಹಾಗೂ ಉತ್ಖನನದ ವರದಿಗಳನ್ನು ಪರಿಶೀಲಿಸಲಾಗಿದೆ.

ಟಿಪ್ಪಣಿಗಳು

೧. ಫ್ರೆಡರಿಕ್ ಏಂಗೆಲ್ಸ್ ಕುಟುಂಬ ಖಾಸಗಿ ಆಸ್ತಿ ಹಾಗೂ ರಾಜ್ಯ ಇವುಗಳ ಉಗಮ, ಪುಟ ೨೪೪

೨. ಅದೇ, ಪುಟ ೨೪೫

೩. ಅದೇ, ಪುಟ ೨೩೪

೪. ಅದೇ, ಪುಟ ೨೩೫

೫. ಜಯಪ್ಪಗೌಡ ಡಿ.ಎಸ್., ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಪುಟ ೧೭

೬. ಅದೇ, ಪುಟ ೨೧೨

೭. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ. ೧, ಪ

ಅಧ್ಯಾಯ : ಎರಡು

ಕರ್ನಾಟಕದ ಬಂದರುಗಳ ಭೌಗೋಳಿಕ ಲಕ್ಷಣಗಳು

ಅಧ್ಯಾಯ : ಎರಡು

ಕರ್ನಾಟಕದ ಬಂದರುಗಳ ಭೌಗೋಳಿಕ ಲಕ್ಷಣಗಳು

ಪೀಠಿಕೆ

ಭಾರತ ದೇಶ ಹೊಂದಿರುವ ವಿಸ್ತಾರದ ಕಾರಣದಿಂದ ದೇಶದ ವಿವಿಧ ಭಾಗಗಳು ಭೌಗೋಳಿಕ ವೈವಿಧ್ಯತೆಯಿಂದ ಕೂಡಿವೆ. ದಕ್ಷಿಣ ಭಾರತವು ಪರ್ಯಾಯ ದ್ವೀಪವಾಗಿರುವಂತೆ, ಅದರ ಎರಡೂ ಬದಿಯಲ್ಲಿ ಹಬ್ಬಿರುವ ಪಶ್ಚಿಮ-ಪೂರ್ವ ಪರ್ವತಾವಳಿಗಳು ಮತ್ತು ಆ ಪರ್ವತಾವಳಿಗಳನ್ನು ಜನ್ಮ ಭೂಮಿಯಾಗಿ ಪಡೆದು ಘಟ್ಟದಿಂದ ಕಡಲೆಡೆಗೆ ಹರಿಯುವ ನದಿಗಳಿಂದ ಈ ಭೂಭಾಗ ವೈಶಿಷ್ಟ್ಯ ಪೂರ್ಣವಾಗಿವೆ.

ಕರ್ನಾಟಕ ರಾಜ್ಯವು ಇಂದು ಭಾಷಾವಾರು ಪ್ರಾಂತ್ಯದ ವಿಂಗಡಣೆಯೊಂದಿಗೆ ಒಂದು ನಿರ್ದಿಷ್ಟ ಗಡಿ ಎಲ್ಲೆಯಲ್ಲಿ ಗುರುತಿಸಲ್ಪಡುತ್ತಿದೆ. ಆದರೆ ಪ್ರಾಚೀನ ಕಾಲದಲ್ಲಿ ಇಂದಿನ ಕರ್ನಾಟಕ ಇನ್ನೂ ವಿಸ್ತಾರವಾಗಿತ್ತು. ಪಕ್ಕದಲ್ಲಿರುವ ಗೋವಾ ರಾಜ್ಯ ಹಾಗೂ ಕೇರಳದ ಉತ್ತರದ ಭೂಭಾಗ, ಮಹಾರಾಷ್ಟ್ರದ ಪಶ್ಚಿಮದ ಬಹುಭಾಗ ಅಂದಿನ ಕರ್ನಾಟಕವಾಗಿತ್ತು. ಭಾಷೆ, ಜನಾಂಗ ಮುಂತಾದ ಕಾರಣಕ್ಕಿಂತ ಸ್ಥಳೀಯ ಆಡಳಿತಗಾರರ ರಾಜಕೀಯ ಆಕಾಂಕ್ಷೆಗಳಿಂದ ಕರ್ನಾಟಕದ ವಿಸ್ತಾರ ಕಾಲಕಾಲಕ್ಕೆ ಬದಲಾದದ್ದು ಕಂಡುಬರುತ್ತದೆ. ಆದರೆ ಅದರ ಪಶ್ಚಿಮ ಕಡಲತಡಿಯು ಇಂದಿನ ಕೇರಳದ ನಿಲೇಶ್ವರದಿಂದ ಉತ್ತರದತ್ತ ಕಾರವಾರದವರೆಗೆ ಮತ್ತು ಹಲವು ಬಾರಿ ಗೋವಾದವರೆಗೆ ವ್ಯಾಪಿಸಿದ್ದು ಕಂಡುಬರುತ್ತದೆ. ಭಾರತ ಪ್ರಸ್ತುತ ೧೪೦೦ ಕಿ.ಮೀ ಉದ್ದದ ಪಶ್ಚಿಮಕರಾವಳಿ ಹೊಂದಿದ್ದು, ಈ ಕರಾವಳಿಯು ವಿಸ್ತಾರದಲ್ಲಿ ಕೆಲವೆಡೆ ೧೦ ರಿಂದ ೮೦ ಕಿ.ಮೀ. ವರೆಗೆ ಹಬ್ಬಿದೆ. ಒಟ್ಟು ೬೪,೨೮೪ ಚ್ಚಚೌಕ ಪ್ರದೇಶ ಹೊಂದಿದೆ. ಕೊಂಕಣ, ಕೆನರಾ ಮತ್ತು ಮಲಬಾರ್ ಎಂದು ಇದನ್ನು ಗುರುತಿಸಲಾಗುತ್ತಿದ್ದು, ಕೆನರಾ ತೀರ ಪ್ರದೇಶವು ಕರ್ನಾಟಕದ ತೀರ ಪ್ರದೇಶವಾಗಿದೆ. ಇದನ್ನು ಕರಾವಳಿಯೆಂದೂ ಕರೆಯುತ್ತಾರೆ.

ಕರ್ನಾಟಕದ ಭೂಭಾಗವು ಗಟ್ಟಿ ನೆಲದಿಂದ ಕೂಡಿದೆ. ಪುರಾತನ ಅಗ್ನಿ ಶಿಲೆಗಳಿಂದ ರಚಿತವಾದ ಇದು ಜಗತ್ತಿನಲ್ಲಿ ಮೊದಲು ರೂಪುಗೊಂಡ ಭೂಭಾಗಗಳಲ್ಲಿ ಒಂದಾಗಿದೆ[೧]. ಕವಿರಾಜಮಾರ್ಗಕಾರನಿಂದ ತಿಳಿದು ಬರುವಂತೆ ಗೋದಾವರಿ ಉತ್ತರದ ಗಡಿಯಾದರೆ ದಕ್ಷಿಣದಲ್ಲಿ ಕಾವೇರಿ ಗಡಿಯಾಗಿದ್ದ ನಾಡು ಕನ್ನಡನಾಡು ಎಂದು ತಿಳಿಯುತ್ತದೆ. ಇದಕ್ಕೆ ನೀಲಗಿರಿ ಪರ್ವತಶ್ರೇಣಿ ಹಾಗೂ ಅರಬ್ಬೀ ಸಮುದ್ರದ ಮೇರೆಗಳನ್ನು ಸೇರಿಸಿದರೆ ಅಂದಿನ ಕನ್ನಡನಾಡಿನ ಸಾಮಾನ್ಯ ಕಲ್ಪನೆ ಮೂಡಿಬರುತ್ತದೆ[೨]. ಕರ್ನಾಟಕ ಭೌಗೊಳಿಕವಾಗಿ ಭಾರತ ಉಪಖಂಡದ ದಖಿನ್ ಪ್ರಸ್ಥಭೂಮಿ ಮತ್ತು ಪಶ್ಚಿಮ ಕರಾವಳಿಯ ಭಾಗಗಳನ್ನು ಒಳಗೊಂಡಿದೆ.[೩] ಇಲ್ಲಿ ದೊರೆಯುತ್ತಿದ್ದ

ವನೋತ್ಪನ್ನಗಳಾದ ಸಾಂಬಾರ ದಿನಿಸುಗಳು, ಮರಮಟ್ಟುಗಳು, ಜೀವಸಂಕುಲಗಳು ವಿದೇಶಿಯರನ್ನು ಸೆಳೆದಂತೆ, ದಖ್ಖನ್‌ದ ವಜ್ರ, ಪಚ್ಚೆಗಳು, ಪುನ್ನಾಡಿನ ಕೆಂಪುಹರಳು ಮತ್ತು ಮಾಣಿಕ್ಯಗಳಿಗೆ ಬಹುಬೇಡಿಕೆ ಇದ್ದಿತ್ತು. ಪ್ರಸ್ತುತ ಕರ್ನಾಟಕದ ಕೆನರಾ ತೀರ ಪ್ರದೇಶವು ೩೨೦ ಕಿ.ಮೀ ಉದ್ದವಿದ್ದು, ಭೌಗೋಳಿಕವಾಗಿ ಕಡಲೋತ್ತರ ವ್ಯಾಪಾರಕ್ಕೆ ಹೇಳಿ ಮಾಡಿಸಿದಂತಿದೆ. ಇದು ನೈಸರ್ಗಿಕವಾಗಿ ಶ್ರೀಮಂತ ಪ್ರದೇಶವಾಗಿದೆ. ಇಲ್ಲಿ ದೊರೆಯುವ ವನೋತ್ಪನ್ನಗಳು ವೈಶಿಷ್ಟ್ಯಪೂರ್ಣವಾಗಿದೆ. ಬೆಲೆಬಾಳುವ ತೇಗ, ಶ್ರೀಗಂಧ ಹಾಗೂ ಹಗುರವೂ, ಬಹುತಾಳಿಕೆಯವೂ ಆದ ವಿವಿಧ ಜಾತಿಯ ಮರಗಳಿಂದ ಕೂಡಿದೆ. ಪಶ್ಚಿಮ ಘಟ್ಟಗಳಲ್ಲಿ ಕಂಡುಬರುವ ನವಿಲು, ಸಿಂಗಳೀಕ, ಆನೆ ಮತ್ತು ಹಾರುವ ಓತಿಗಳು, ಅಂಟುವಾಳಕಾಯಿ, ಜೇನುತುಪ್ಪ, ಕಾಳುಮೆಣಸು, ಮಸಾಲೆ ದಿನಿಸುಗಳಾದ ಲವಂಗ, ಏಲಕ್ಕಿ, ದಾಲ್ಚಿನಿ ವಿದೇಶಿಯರನ್ನು ಬಹುವಾಗಿ ಸೆಳೆದಿದ್ದವು.

ಪಶ್ಚಿಮ ಘಟ್ಟಗಳ ಕಣಿವೆಗಳಲ್ಲಿ ಹಬ್ಬಿದ್ದ ಬಳ್ಳಿಗಳಲ್ಲಿ ಹಾಗೂ ಗಿಡಮರಗಳಲ್ಲಿ ಸಿಗುತ್ತಿದ್ದ ಸಾಂಬಾರ ಪದಾರ್ಥಗಳು ಪಾಶ್ಚಾತ್ಯ ಶೀತಲ ಹವಾಗುಣದ ಜನರಿಗೆ ಜೀವಾಳವಾಗಿದ್ದವು. ಇಲ್ಲಿಯ ಕರಿಮೆಣಸಿನ ಕಾರಣದಿಂದ ಭೂಮಧ್ಯ ಸಮುದ್ರದ ಸುತ್ತಮುತ್ತಲಿನ ದೇಶದ ಜನರು ಭಾರತದತ್ತ ಆಕರ್ಷಿತರಾಗಿದ್ದರು.

ಕೆನರಾ ಕರಾವಳಿಯ ಇನ್ನೊಂದು ವೈಶಿಷ್ಟ್ಯವೆಂದರೆ ಇಲ್ಲಿಯ ಗಗನ ಚುಂಬಿ ಪಶ್ಚಿಮ ಘಟ್ಟಗಳು. ಈ ಪಶ್ಚಿಮ ಘಟ್ಟಗಳು, ಪಶ್ಚಿಮ ಕರಾವಳಿಗೆ ಎದುರಾಗಿ ದೊಡ್ಡ ಗೋಡೆಯಂತೆ ನಿಂತಿವೆ. ಇವು ಕಡಲೆಡೆಯಿಂದ ಬೀಸಿಬರುವ ಭೀಕರ ಮಾರುತವನ್ನು ಶಾಂತಗೊಳಿಸುವ ಮಾಂತ್ರಿಕ ಮಣಿಯಂತಿವೆ. ಪಶ್ಚಿಮ ಘಟ್ಟಗಳು ಹಲವೆಡೆ ನೇರವಾಗಿ ಕಡಲಿಗೆ ಚಾಚಿದ್ದರೆ, ಇನ್ನೂ ಕೆಲವೆಡೆ ೮–೧೦ ಕಿ.ಮೀ ವಿಸ್ತೀರ್ಣದ ತೀರಪ್ರದೇಶವನ್ನು ನಿರ್ಮಿಸಿವೆ. ಈ ಎರಡು ವಿಭಿನ್ನ ನೈಸರ್ಗಿಕ ಪರಿಸರದಲ್ಲೂ ಈ ಪರ್ವತ ಶ್ರೇಣಿಗಳು ಅರ್ಧಚಂದ್ರಾಕೃತಿಯಲ್ಲಿ ಕಡಲಿಗೆ ಚಾಚಿವೆ. ಕೆಲವೆಡೆ ಕುದುರೆ ಲಾಳಾಕಾರದಲ್ಲಿ ಬಗ್ಗಿಕೊಡಿವೆ. ಇದರಿಂದಾಗಿ ಕಡಲೆಡೆಯಿಂದ ಬೀಸಿ ಬರುವ ಬಿರುಗಾಳಿ ಪರ್ವತದ ಗುಂಟ ಚಲಿಸುತ್ತಾ ಶಾಂತವಾಗಿ ಬಿಡುತ್ತದೆ. ಇಂಥಹ ಸ್ಥಳಗಳು ಬಂದರುಗಳಾಗಿ ಉತ್ತಮ ರೇವುಪಟ್ಟಣಗಳಾಗಿದ್ದವು. ಪಶ್ಚಿಮ ಘಟ್ಟದ ಕೆಂಪು ಬಣ್ಣದ ಗಟ್ಟಿ ಮಣ್ಣು, ಶಿಲಾಮಯ ತಳಭಾಗ ಕಡಲ ನೀರನ್ನು ಸಮತಟ್ಟಾಗಿ ಸಂಗ್ರಹಿಸಿಟ್ಟಿದೆ. ಹಲವೆಡೆ ಕಡಲು ಪಶ್ಚಿಮ ಘಟ್ಟಕ್ಕೆ ಬಂದು ತಾಕುತ್ತದೆ. ಇಂಥ ಸ್ಥಳದಲ್ಲಿ ಯಾವುದೇ ಉತ್ಪಾತವಿಲ್ಲದೆ ೫ ರಿಂದ ೧೨ ಮೀಟರವರೆಗೆ ನೀರು ನಿಂತಿರುತ್ತದೆ. ಇಂಥಹ ಪ್ರದೇಶದಲ್ಲಿ ಬೇಕಾದಷ್ಟು ಹಡಗುಗಳನ್ನು ಲಂಗರುಮಾಡಬಹುದಾಗಿದೆ. ತಳಭಾಗವು ಶಿಲೆಗಳಿಂದ ಅಥವಾ ಕೆಂಪು ಗಟ್ಟಿ ಮಣ್ಣಿನಿಂದ ಕೂಡಿರುವುದರಿಂದ ಯಾವುದೇ ಹೂಳು ಇಲ್ಲಿ ಕಂಡುಬರುವುದಿಲ್ಲ. ಇಂಥಹ ಬಂದರುಗಳು ವಿಶ್ವಕ್ಕೆ ಸಂಪರ್ಕಕಲ್ಪಿಸುವ ಬೃಹತ್

ಸುರಕ್ಷಿತ ಮಾರ್ಗಗಳಾಗಿವೆ. ಕಾರವಾರದಿಂದ ಆರಂಭಿಸಿ ಮಂಗಳೂರಿನವರೆಗೆ ಅಂಥಹ ಹಲವು ಬಂದರುಗಳಿವೆ. ಕರ್ನಾಟಕದ ಬಂದರುಗಳು ನಿಸರ್ಗದ ಮುಕುಟ ಮಣಿಗಳು ಎಂದು ಖ್ಯಾತಗೊಂಡಿವೆ. ಸಂಪೂರ್ಣ ಕರಾವಳಿ ನೈಸರ್ಗಿಕ ಕೊಡುಗೆಗಳ ವರಮಾಲೆ ಧರಿಸಿ ನಿಂತಿದೆ. ಕಾರವಾರ ಬಂದರು ಭೌಗೋಳಿಕ ಲಕ್ಷಣದಿಂದ ಜಾಗತಿಕ ಬಂದರಾಗಿ ಬೆಳಗಿತ್ತು. ಬಂದರುಗಳ ಬಳಿಯಲ್ಲಿ ಕಡಲಲ್ಲಿ ಇರುವ ದ್ವೀಪಗಳಿಂದ ಬಂದರಿನೆಡೆಗೆ ಬರುವ ಭೀಕರ ಮಾರುತಗಳು ಮಂದವಾಗುತ್ತವೆ. ಅಲ್ಲದೆ ತೆರೆಗಳೊಂದಿಗೆ ಹೂಳು ಬಂದರಿನೆಡೆಗೆ ಬರುವುದಿಲ್ಲ.

ಪಶ್ಚಿಮ ಘಟ್ಟಗಳು ಉತ್ತರ ದಕ್ಷಿಣವಾಗಿ ಪದರು ಪದರಾಗಿ ನಿಂತಿದ್ದು, ರಕ್ಷಣಾ ಗೋಡೆಯಂತಿವೆ. ಪರ್ವತಗಳ ನಡುವಿನ ಕಣಿವೆಗಳು, ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಕಡಲನ್ನು ಸೇರುವ ನದಿಗಳು ಹಾಗೂ ಈ ಎಲ್ಲ ಬಂದರನ್ನು ಸೇರಿಸುವ ತೀರದ ನೇರ ಮಾರ್ಗಗಳು ಕರಾವಳಿಯ ಭೌಗೊಳಿಕ ಲಕ್ಷಣಗಳಲ್ಲಿ ಮುಖ್ಯವಾದದ್ದು.

ಹಿನ್ನಾಡಿನೊಂದಿಗೆ ಸಂಪರ್ಕ ಏರ್ಪಡಿಸುವ ಘಟ್ಟಮಾರ್ಗಗಳು ಮತ್ತು ಹಿನ್ನಾಡಿನ ಸರಕನ್ನು ಬಂದರಿಗೆ ತಲುಪಿಸುವ ಹಾಗೂ ಬಂದರಿನಿಂದ ಒಳನಾಡಿಗೆ ಸಾಗಿಸುವ ನದಿ ಮಾರ್ಗಗಳು ಇನ್ನೊಂದು ಮುಖ್ಯ ಲಕ್ಷಣ. ಈ ನದಿಗಳು ಒಳನಾಡಿಗೆ ನೇರ ಸಂಪರ್ಕ ಕಲ್ಪಿಸುವ ನದಿಗಳ ಜಾಲವಾಗಿವೆ. ಕರ್ನಾಟಕದ ಪ್ರಮುಖ ನದಿಗಳೆಲ್ಲಾ ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಕಡಲೆಡೆಗೆ ಹರಿಯುತ್ತವೆ. ಕಾರವಾರದ ತುದಿಯಲ್ಲಿ ಹುಟ್ಟುವ ಕಾಳಿನದಿಯಿಂದ ಕೇರಳದ ಚಂದ್ರಗಿರಿ ನದಿಯವರೆಗೆ ಹಲವಾರು ನದಿಗಳಿವೆ. ಈ ನದಿಗಳ ಇನ್ನೊಂದು ವೈಶಿಷ್ಟ್ಯವೆಂದರೆ ಇವುಗಳ ಕಣಿವೆಯಲ್ಲಿ ವಿದೇಶಿಯರನ್ನು ಸೆಳೆಯುವ ಕರಿಮೆಣಸು, ದಾಲ್ಚಿನಿ, ಲವಂಗ ಮುಂತಾದವು ಹೇರಳವಾಗಿ ದೊರೆಯುತ್ತವೆ. ಇಲ್ಲಿ ಸಿಗುವ ವಿವಿಧ ಮರಗಳು ಸುಲಭದಲ್ಲಿ ಬೃಹತ್‌ಹಡಗುಗಳನ್ನು ನಿರ್ಮಿಸಲು ಅನುಕೂಲಕರವಾಗಿದ್ದವು.

ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಕಡಲತ್ತ ಹರಿಯುವ ನದಿಗಳಲ್ಲಿ ಒಳನಾಡಿನವರೆಗೆ ನೌಕೆಗಳ ಮೂಲಕ ಸಂಪರ್ಕ ಕಲ್ಪಿಸಬಹುದು. ಸರಕುಗಳ, ಕಚ್ಚಾಪದಾರ್ಥಗಳ ಸಾಗಾಣಿಕೆಗೆ ಇವು ಸಹಾಯಕವಾಗಿದ್ದವು. ನದಿಯ ತೀರಗಳು ವಿದೇಶಿ ಬೇಡಿಕೆಯ ಉತ್ಪನ್ನಗಳನ್ನು ಬೆಳೆಯಲು ಸಹಾಯ ಮಾಡುತ್ತಿದ್ದವು. ಈ ಪ್ರದೇಶದಲ್ಲಿ ಜನವಸತಿಗೆ ಅನುಕೂಲತೆಗಳಿದ್ದವು. ಇಂಥಹ ಪ್ರದೇಶದಲ್ಲಿ ಶ್ರಮಜೀವಿಗಳು ವಾಸವಾಗಿದ್ದು ಕಡಲೋತ್ತರ ವ್ಯಾಪಾರಕ್ಕೆ ಬೇಕಾದ ಸರಕುಗಳನ್ನು ಸಂಗ್ರಹಿಸುತ್ತಿದ್ದರು.

೨.೧ ಕಾರವಾರ ಬಂದರು

ಕಾರವಾರವು ಉತ್ತರಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಉತ್ತರ ತುದಿಯಲ್ಲಿರುವ ತಾಲೂಕು ಕೇಂದ್ರ. ಇದು ಪ್ರಸ್ತುತ ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಕೇಂದ್ರವೂ ಹೌದು. ತಾಲೂಕಿನ ವಿಸ್ತೀರ್ಣ ೭೩೨.೦ ಚದರ ಕಿಲೋಮೀಟರುಗಳು[೪]. ವರ್ಷದಲ್ಲಿ ಜೂನ್‌ನಿಂದ ಆರಂಭಿಸಿ ಸುಮಾರು ಐದು ತಿಂಗಳು ಕಾಲದವರೆಗೆ ನಿರಂತರ ಮಳೆ ಬೀಳುತ್ತದೆ. ಜೂನ್‌ನಿಂದ-ಅಕ್ಟೋಬರ್ ತಿಂಗಳವರೆಗೆ ಮಳೆ ಬೀಳುತ್ತದೆ. ಡಿಸೆಂಬರ್-ಜನವರಿಯಲ್ಲಿ ಚಳಿಗಾಲವಿರುತ್ತದೆ. ಆದರೆ ಹೆಚ್ಚು ಚಳಿ ಇರುವುದಿಲ್ಲ. ಬಿಸಿಲ ದಿನಗಳಲ್ಲಿ ಪ್ರಖರ ಬಿಸಿಲಿರುತ್ತದೆ. ಇಲ್ಲಿ ಹರಿಯುವ ಪ್ರಮುಖ ನದಿ ಕಾಳಿ. ಇದರ ನೀರು ಕಪ್ಪು ಬಣ್ಣದಂತೆ ಗೋಚರಿಸುವುದರಿಂದ ಇದನ್ನು ಕಾಳಿ (ಕಪ್ಪು) ಎಂದು ಕರೆಯಲಾಗುತ್ತದೆ. ಕಾರವಾರದ ಪಶ್ಚಿಮ ಘಟ್ಟದ ಪ್ರದೇಶದಲ್ಲಿ ಹುಟ್ಟುವ ಕಾಳಿನದಿಯು ಕಾರವಾರದ ಬಳಿ ಕಡಲನ್ನು ಸೇರುತ್ತದೆ. ಕಾಳಿನದಿಯಿಂದ ಕಡವಾಡದ ಬಳಿಯಲ್ಲಿ ಬಂದರು ನಿರ್ಮಾಣವಾಗಿದೆ. ಕಾರವಾರದ ಸುತ್ತಮುತ್ತ ಜೊಯಿಡಾ, ಅಂಕೋಲಾ ಮತ್ತು ಯಲ್ಲಾಪುರ ತಾಲೂಕುಗಳಿವೆ. ದಕ್ಷಿಣದ ಬದಿಯಲ್ಲಿ ಅಂಕೋಲಾ ತಾಲೂಕು, ಈಶಾನ್ಯದಲ್ಲಿ ಜೊಯಿಡಾ (ಹಿಂದಿನ ಸೂಪಾ ತಾಲೂಕು) ಪೂರ್ವದಲ್ಲಿ ಯಲ್ಲಾಪುರ ತಾಲ್ಲೂಕು ಹಾಗೂ ವಾಯುವ್ಯದಲ್ಲಿ ಗೋವಾ ರಾಜ್ಯಗಳಿವೆ. ಪಶ್ಚಿಮ ದಿಕ್ಕು ಅರಬ್ಬೀ ಸಮುದ್ರದಿಂದಲೂ ಪೂರ್ವ ದಿಕ್ಕು (ಉತ್ತರ-ದಕ್ಷಿಣವಾಗಿ) ಪಶ್ಚಿಮ ಘಟ್ಟಗಳ ಪದರು-ಪದರಾದ ಪರ್ವತ ಸಾಲುಗಳಿಂದ ಕೂಡಿವೆ.

ಈ ಪರ್ವತ ಸಾಲಿನಲ್ಲಿ ಉಷ್ಣ ವಲಯದ ಮರಗಳು ಹಾಗೂ ಮಸಾಲೆ ದಿನಿಸುಗಳು ಹೇರಳವಾಗಿ ಬೆಳೆಯುತ್ತವೆ. ಇಲ್ಲಿ ಬೆಳೆಯುವ ಕರಿಮೆಣಸು ಬಹು ಪ್ರಖ್ಯಾತವಾದದ್ದು. ಪಶ್ಚಿಮಘಟ್ಟದ ಉಳಿದ ಮೆಣಸಿನ ಕಾಳುಗಳಿಗಿಂತ ದೊಡ್ಡವಿದ್ದು, ಹೆಚ್ಚು ಖಾರವನ್ನು ಹೊಂದಿರುವುದಿಲ್ಲ.

ಕಾರವಾರದ ಬಳಿಯಲ್ಲಿ ಅರಬ್ಬೀ ಸಮುದ್ರದಲ್ಲಿ ಐದು ದ್ವೀಪಗಳು ನಿಂತಿವೆ. ಇವುಗಳು ಬಂದರನ್ನೂ ರಕ್ಷಿಸುವ ನಿಸರ್ಗನಿರ್ಮಿತ ಸೈನಿಕರಂತಿದ್ದಾರೆ. ಇವುಗಳು ಕಡಲೋತ್ತರ ವ್ಯಾಪಾರಕ್ಕೆ ತುಂಬಾ ಸಹಾಯಕವಾಗಿವೆ. ಕಾರವಾರದ ವಾಯುವ್ಯದಿಂದ ಅಂದರೆ ಗೋವಾದ ದಕ್ಷಿಣ ತುದಿಯಿಂದ ಕಡಲಡಿಯಿಂದಲೇ ಪಶ್ಚಿಮ ಘಟ್ಟಗಳು ಎದ್ದು ನಿಂತಿವೆ[೫]. ಗಗನಚುಂಬಿಯಾಗಿರುವ ಈ ಪರ್ವತ ಶ್ರೇಣಿಗಳು ಕಾರವಾರ ನಗರವನ್ನು ಬಿಣಗಾ-ಅಲಿಗದ್ದಾವರೆಗೆ ಅರ್ಧಚಂದ್ರಾಕೃತಿಯಲ್ಲಿ ಸುತ್ತುವರೆದಿವೆ. ಇದರಿಂದ ಕಾರವಾರದ ಹವಾಮಾನ, ಮಳೆ ಹಾಗೂ ವಾಣಿಜ್ಯದ ಮೇಲೆ ದೊಡ್ಡ ಪ್ರಭಾವವನ್ನೂ ಬೀರಿವೆ.

ಈ ನೈಸರ್ಗಿಕ ಲಕ್ಷಣವು ಕಾರವಾರವನ್ನು ವಿಶ್ವದ ಪ್ರಖ್ಯಾತ ನೈಸರ್ಗಿಕ ಬಂದರುಗಳಲ್ಲಿ ಒಂದನ್ನಾಗಿಸಿದೆ. ಕಾರವಾರದ ಬಳಿಯಲ್ಲಿ ಹಳೆಬಂದರನ್ನು ಒಳಗೊಂಡಂತೆ ಪಶ್ಚಿಮಘಟ್ಟಗಳ ಸಾಲುಗಳು ಕಡಲಿಗೆ ಅರ್ಧಚಂದ್ರಾಕಾರವಾಗಿ ಹಬ್ಬಿವೆ. ಕಡಲೆಡೆಯಿಂದ ಬೀಸಿಬರುವ ಮಾರುತಗಳು ಇದರೊಂದಿಗೆ ಸಾಗುತ್ತಾ ಶಾಂತಗೊಳ್ಳುತ್ತವೆ. ಲಂಗರು ಹಾಕಿದ ದೊಡ್ಡ ಹಡಗುಗಳು ಇಲ್ಲಿ ಸುರಕ್ಷಿತವಾಗಿ ನಿಲ್ಲುತ್ತಿದ್ದವು. ಬಂದರಿನ ಬಳಿಯಲ್ಲಿ ಕನಿಷ್ಟ ೮–೧೨ ಮೀಟರ್ ನೀರು ನಿಂತಿದ್ದು ಸಮತಳ ಕಾಯ್ದುಕೊಳ್ಳುತ್ತದೆ. ಕಾರವಾರವು ಭಾರತದ ಪಶ್ಚಿಮತೀರದ ಮಧ್ಯದಲ್ಲಿ ಇರುವುದರಿಂದ ಪರ್ಶಿಯಾ – ಅರೇಬಿಯಾ ದೇಶಗಳಿಗೆ ನೇರಕಡಲ ಮಾರ್ಗವನ್ನು ಹೊಂದಿತ್ತು.

ಕೊಂಕಣ ಕರಾವಳಿಯ ದಕ್ಷಿಣ ತುದಿಯಲ್ಲಿ ಗೋವಾಕ್ಕೆ ಹೊಂದಿ ಕೊಂಡಂತಿರುವ ಕಾರವಾರವು ಕರ್ನಾಟಕದ ಸರ್ವರುತು ಬಂದರುಗಳಲ್ಲಿ ಒಂದಾಗಿದೆ. ಪಶ್ಚಿಮ ಘಟ್ಟಗಳು ಕಡಲಿಗೆ ಚಾಚಿರುವುದರಿಂದ ಹಾಗೂ ಕುದುರೆ ಲಾಳಾಕಾರದಲ್ಲಿ ಬಾಗಿರುವುದರಿಂದ ಕಡಲ ನೀರು ೮–೧೨ ಮೀಟರವರೆಗೆ ಶಾಂತವಾಗಿ ನಿಂತಿರುತ್ತದೆ. ಇದರಿಂದ ಸರಕುಗಳನ್ನು ಹೊತ್ತ ಹಡಗುಗಳು ಸಲೀಸಾಗಿ ಒಳಪ್ರವೇಶಿಸಿ ಲಂಗರು ಹಾಕಬಹುದಾಗಿದೆ.

ಸಂಗಮ್ ಸಾಹಿತ್ಯದಲ್ಲಿ ಉಲ್ಲೇಖಿತವಾಗುವ ಕಡಲ್ಗಳ್ಳರಸ್ಥಳ ಇದೆನ್ನುವ ತೀರ್ಮಾನಕ್ಕೆ ಹಲವು ವಿದ್ವಾಂಸರು ಬಂದಿದ್ದು, ಆದಿಕದಂಬರು ಇಲ್ಲಿಯೇ ತಮ್ಮ ಅಸ್ತಿತ್ವ ಕಂಡುಕೊಂಡಿದ್ದರು[೬]. ಚೇರರ ರಾಜ್ಯ ಇಲ್ಲಿಯವರೆಗೆ ವಿಸ್ತರಿಸಿತ್ತೆಂದು ಸಂಗಮ್ ಸಾಹಿತ್ಯ ಹೇಳುತ್ತದೆ[೭]. ಟೋಲೆಮಿಯ 'ಭೂಗೋಳ' ಹಾಗೂ ಅನಾಮಿಕ ಲೇಖಕರೊಬ್ಬರ 'ಪೆರಿಪ್ಲಸ್ ಆಫ್ ದಿ ಎರಿತ್ರಿಯನ್ ಸಿ' ಕೃತಿಗಳು ಕಾರವಾರವನ್ನು ಉಲ್ಲೇಖಿಸುತ್ತವೆ[೮]. ಬೆಬಿಲೋನ್ ಹಾಗೂ ಸಿತಿಯನ್ನರೊಂದಿಗೆ ಪ್ರಾಚೀನ ಕಾಲದಲ್ಲೆ ಈ ಬಂದರು ಸಂಪರ್ಕ ಪಡೆದಿತ್ತು[೯]. ಪರ್ಶಿಯಾ–ಅರೇಬಿಯಾ–ಆಫ್ರೀಕಾದ ದೇಶಗಳಿಗೆ ಕಾರವಾರ ಬಂದರು ಪ್ರಮುಖ ಸಂಪರ್ಕ ಸೇತು ಆಗಿತ್ತು.

ಕಾರವಾರ ಬಂದರಿನ ಬಳಿ ಕಡಲಲ್ಲಿ ನಿಂತಿರುವ ಐದು ದ್ವೀಪಗಳು ಬಂದರಿಗೆ ರಕ್ಷಕನಂತಿವೆ. ಕಾಳಿ ನದಿ ಅನತಿದೂರದಲ್ಲಿ ಕಡವಾಡದ ಬಳಿ ಕಡಲನ್ನು ಸೇರುತ್ತದೆ. ಇದೂ ಕೂಡಾ ಕಾರವಾರ ಬಂದರಿಗೆ ಸಹಾಯಕವಾಗಿದೆ. ದುರ್ಗಮ ಪಶ್ಚಿಮ ಘಟ್ಟಗಳಲ್ಲಿ ಬೆಳೆಯುವ ವನೋತ್ಪನ್ನಗಳಾದ ಸಾಂಬಾರ ದಿನಿಸುಗಳನ್ನು ಸರಾಗವಾಗಿ ನದಿ ಮಾರ್ಗವಾಗಿ ಬಂದರನ್ನು ತಲುಪಿಸಬಹುದಾಗಿತ್ತು. ಕಾರವಾರ ಬಂದರಿನ ಸಮೀಪ ಬೈತ್–ಎ–ಖೋಲ್, ಅಮದಳ್ಳಿ, ಅವರ್ಸಾ ಮುಂತಾದವುಗಳಿದ್ದು ಕಾರವಾರ ಬಂದರಿಗೆ ಪೂರಕವಾಗಿವೆ. ಸರ್ವರುತು ಬಂದರು, ನೈಸರ್ಗಿಕ ಬಂದರು ಆಗಿ ಕಾರವಾರ ರಾಜಕೀಯ ಪ್ರಭುತ್ವದೊಂದಿಗೆ ಹಂತಹಂತವಾಗಿ ಬೆಳೆದು ಬಂದಿತು.

ಕಾರವಾರ ತಾಲೂಕಿನಲ್ಲಿ ಪಶ್ಚಿಮಘಟ್ಟಗಳು, ತೀರಕ್ಕೆ ಎದುರು ವಾಯುವ್ಯ ದಿಕ್ಕಿನಲ್ಲಿ ಆರಂಭವಾಗಿ ಉತ್ತರದತ್ತ ಚಲಿಸಿ ಮುಂದೆ ಅರ್ಧ ಚಂದ್ರಾಕೃತಿಯಲ್ಲಿ ದಕ್ಷಿಣಕ್ಕೆ ಚಾಚಿವೆ. ಹೀಗೆ ದಕ್ಷಿಣಕ್ಕೆ ಹಬ್ಬುತ್ತಾ–ಬಿಣಗಾ–ಬೈತ್‌ಖೋಲ್–ಅಲಿಗದ್ದಾ ಪ್ರದೇಶದಲ್ಲಿ ಮತ್ತೆ ಪಶ್ಚಿಮದತ್ತ ಚಲಿಸಿವೆ. ಇವು ೩೦೦೦ ದಿಂದ ೪೨೦೦ ಮೀಟರ್‌ವರೆಗೆ ಎತ್ತರವನ್ನು ಕಾಯ್ದುಕೊಂಡಿವೆ. ಹೀಗೆ ಎತ್ತರವೂ, ಗಟ್ಟಿಯೂ, ವಿಸ್ತಾರವು ಆದ ಪರ್ವತ ಶ್ರೇಣಿಯು ನಿಂತಿರುವುದರಿಂದ ಬಂದರಿನಲ್ಲಿ ಕನಿಷ್ಠ ೮–೧೨ ಮೀಟರ್ ಆಳದವರೆಗೆ ನೀರು ಎಲ್ಲ ಋತುಗಳಲ್ಲಿ ನಿಂತಿರುತ್ತದೆ. ಅಲ್ಲದೇ ಕಡಲ ಮಧ್ಯದಲ್ಲಿರುವ ದ್ವೀಪಗಳು ಕಡಲೆಡೆಯಿಂದ ಬೀಸಿ ಬರುವ ಮಾರುತಗಳಿಗೆ ತಡೆಯೊಡ್ಡುತ್ತವೆ. ಒಂದು ವೇಳೆ ಮಾರುತಗಳು ಬೀಸಿ ಬಂದರೂ ಬಂದರಿನ ಗುಂಟ ಅರ್ಧಚಂದ್ರಾಕೃತಿಯಲ್ಲಿ ನಿಂತಿರುವ ಪಶ್ಚಿಮ ಘಟ್ಟಗಳು, ಅವುಗಳನ್ನು ಶಾಂತಗೊಳಿಸುತ್ತವೆ. ವಾಯುವ್ಯದ ಬದಿಯಿಂದ ಒಳಬರುವ ಬಿರುಗಾಳಿ ಪರ್ವತ ಸಾಲಿನ ಗುಂಟ ಚಲಿಸುತ್ತಾ ಒಳಬಂದು ಬಂದರಿನ ಮೇಲೆ ಯಾವುದೇ ದುಷ್ಪರಿಣಾಮ ಉಂಟಾಗದಂತೆ ಮಾಡುತ್ತದೆ[೧೦]. ಕಾರವಾರ ಬಂದರಿನ ಇನ್ನೊಂದು ಅಪೂರ್ವ ಲಕ್ಷಣವೆಂದರೆ, ಇಲ್ಲಿ ಹೂಳಿನ ತೊಂದರೆ ಇಲ್ಲದಿರುವುದು[೧೧]. ಪರ್ವತಗಳು ಕಡಲಿಗೆ ಚಾಚಿಕೊಂಡು ಕೊಲ್ಲಿ ರೀತಿಯಲ್ಲಿ ಬಂದರನ್ನು ಸೃಷ್ಟಿಸಿರುವುದರಿಂದ ಬಂದರು ಪ್ರದೇಶ ಗಟ್ಟಿತಳದಿಂದ ಕೂಡಿದೆ. ಕಾರವಾರದಲ್ಲಿ ಕಾಳಿನದಿ ಕಡಲು ಸೇರುವ ಪ್ರದೇಶ, ಬೈತ್‌ಖೋಲ್ ಪ್ರದೇಶ, ಬಿಣಗಾ, ಅಲಿಗದ್ದಾ, ಅಮದಳ್ಳಿ ಮುಂತಾದವು ದೊಡ್ಡ ದೊಡ್ಡ ಹಡಗುಗಳನ್ನು ಲಂಗರು ಮಾಡಲು ಅನುಕೂಲವಾಗಿವೆ. ಇವುಗಳಿಂದ ಕಾರವಾರದ ಪ್ರಮುಖ ಬಂದರಿನ ಮೇಲೆ ಸರಕು ಸಾಗಾಣಿಕೆಯ ನೌಕೆಗಳ ಒತ್ತಡ ಕಡಿಮೆಯಾಗುತ್ತದೆ. ಈ ಯಾವ ಬಂದರುಗಳೂ ಹೂಳಿನ ಸಮಸ್ಯೆ ಹೊಂದಿಲ್ಲ. ಕಡವಾಡ ಒಂದು ಪ್ರದೇಶ ಬಿಟ್ಟರೆ ಉಳಿದ ಬಂದರುಗಳು ಕಡಲೊತ್ತಿನಿಂದ ಉಂಟಾದವುಗಳು. ಇದರಿಂದ ಎಷ್ಟು ಆಳದವರೆಗೆ ನೀರು ಹೊಂದಿರುತ್ತದೆಯೋ ಅಷ್ಟೇ ಆಳವನ್ನು ಕಾಯ್ದುಕೊಳ್ಳಲು ಸಾಧ್ಯವಾಗಿದೆ. ಅಲ್ಲದೇ ಇಲ್ಲಿ ಬೇರೆಡೆಯಿಂದ ಯಾವುದೇ ನೀರು ಹರಿದು ಬರದಿರುವುದರಿಂದ ನದಿ ಮುಖಜ ಬಂದರುಗಳಲ್ಲಿ ಉಂಟಾಗುವ ಹೂಳು–ಕೆಸರು ಅಥವಾ ಮರಳ ರಾಶಿಯ ತೊಂದರೆ ಇಲ್ಲಿ ಉಂಟಾಗುವುದಿಲ್ಲ. ಇಲ್ಲಿಯ ಇನ್ನೊಂದು ಪ್ರಮುಖ ಅಂಶವೆಂದರೆ, ಕಡಲ ಮುಖಾಂತರ ಬಂದರು ಪ್ರವೇಶಿಸುವ ಮಾರ್ಗವು ಅಡೆತಡೆಗಳಿಂದ ಮುಕ್ತವಾಗಿದೆ. ಎಷ್ಟೋ ನೈಸರ್ಗಿಕ ಬಂದರುಗಳು ಬಂಡೆಗಲ್ಲುಗಳ ತೊಂದರೆಯಿಂದ ಬಳಲುತ್ತವೆ[೧೨]. ಕಾರವಾರ ಬಂದರಿನ ನೈಸರ್ಗಿಕ ಲಕ್ಷಣದ ಕುರಿತು ದೀರ್ಘ ಅಧ್ಯಯನ ಮಾಡಿರುವ ಕೃಷ್ಣಕುಮಾರ್ ಕಲ್ಲೂರ್ ಅವರು 'ಕಾರವಾರ ಎಂಡ್ ಕೆನರಾ ಪೋರ್ಟ್'[೧೩] ಎಂಬ ಗ್ರಂಥ ರಚಿಸಿದ್ದಾರೆ. ಅದರಲ್ಲಿ ಕಾರವಾರ ಬಂದರಿನ ನೈಸರ್ಗಿಕ

ಕೊಡುಗೆಗಳ ಬಗ್ಗೆ ಸುಧೀರ್ಘವಾಗಿ ವಿವರಿಸಿದ್ದಾರೆ. ಅವರು ಕಾರವಾರ ಬಂದರವನ್ನು ಅದರ ನೈಸರ್ಗಿಕ ಲಕ್ಷಣಗಳನ್ನು ಈ ಕೆಳಗಿನಂತೆ ವಿವರಿಸಿದ್ದಾರೆ.

೧. ಕಾರವಾರ ಬಂದರಿನ ನೈಸರ್ಗಿಕ ಸೌಕರ್ಯ್ಯಗಳು ಪ್ರಶ್ನಾತೀತವಾಗಿವೆ.

೨. ಕಾರವಾರಕ್ಕೆ ಹಿನ್ನಾಡಿನೊಡನೆ ಸಂಪರ್ಕ ಪಡೆಯಲು ಅಸಾಮಾನ್ಯ ಸೌಕರ್ಯ್ಯಗಳಿವೆ. ಕಾರವಾರ ಬಂದರಿಗೆ ಹಿನ್ನಾಡು ವಿಸ್ತಾರವಾಗಿರುವಂತೆ ಅದಕ್ಕೆ ಸಂಪರ್ಕ ಕಲ್ಪಿಸಲು ಉತ್ತಮ ಮಾರ್ಗಗಳಿವೆ. ಪಶ್ಚಿಮ ಘಟ್ಟದ ಕೊರಕಲುಗಳು ಘಟ್ಟಕ್ಕೆ ಸಂಪರ್ಕ ಕಲ್ಪಿಸುವ ಉತ್ತಮ ಮಾರ್ಗಗಳಾಗಿವೆ.

೩. ಭಾರತದ ಇತರ ಮುಖ್ಯ ಬಂದರುಗಳ ತೆರದಲ್ಲಿ ಇದು ನದಿ ಮುಖಜ ಅಥವಾ ಕಡಲ ಒತ್ತಿನಿಂದಾದ ಬಂದರವಲ್ಲ. ಇದು ಕೊಲ್ಲಿ ಬಂದರು. ಅಲ್ಲದೆ ಕಾರವಾರ ಭೂಶಿರ ಆಳ ಸಮುದ್ರದಲ್ಲಿ ಚಾಚಿಕೊಂಡಿರುವುದರಿಂದಲೂ ಸುತ್ತಲೂ ದ್ವೀಪಗಳಿಂದಲೂ ಗುಡ್ಡಗಳಿಂದಲೂ ಆವೃತ್ತವಾಗಿರುವುದರಿಂದಲೂ ವರ್ಷದ ೧೨ ತಿಂಗಳೂ ಸುರಕ್ಷಿತ ಬಂದರು ಎನಿಸುತ್ತದೆ. ಕೊಲ್ಲಿ ಬಂದರಿಗೆ, ವಾಣಿಜ್ಯ ಹಾಗೂ ನೌಕಾಸಾರಿಗೆ, ಸಂರಕ್ಷಣಾ ಸೌಲಭ್ಯ ಮತ್ತು ಬಂದರಿನ ರಚನೆ ಈ ಎಲ್ಲ ದೃಷ್ಟಿಯಿಂದಲೂ ಹೆಚ್ಚಿನ ಅನುಕೂಲಗಳಿವೆ.

೪. ಕಾರವಾರ ಬಂದರು ಕಡಲ ಬದಿಯಿಂದಲೂ ಹಾಗೂ ಭೂಭಾಗದೆಡೆಯಿಂದಲೂ ಅಪೂರ್ವ ರಕ್ಷಣೆ ಪಡೆದಿದೆ. ಎಲ್ಲ ಋತುಗಳಲ್ಲೂ ಕಡಲೆಡೆಯಿಂದ ಬಂದರಿನತ್ತ ಬರಲು ವಿಶಾಲ ಮಾರ್ಗಗಳಿವೆ. ಎಲ್ಲಿಯೂ ಬಂಡೆಗಲ್ಲುಗಳಾಗಲಿ ನೀರಿನ ಕೊರತೆಯಾಗಲೀ ಉಂಟಾಗುವುದಿಲ್ಲ. ಭಾರತದ ಪಶ್ಚಿಮದ ಕಡಲತಡಿಯು ಬಹುತೇಕವಾಗಿ ನೈರುತ್ಯ ಮಾನ್ಸೂನ್ ಬೀಸುವ ಸಮಯದಲ್ಲಿ ಉತ್ಪಾತಗಳಿಂದ ಕೂಡಿರುತ್ತದೆ. ಆದರೆ ಕಾರವಾರ ಬಂದರಿಗೆ ಇರುವ ನೈಸರ್ಗಿಕ ಸೌಲಭ್ಯದ ರಕ್ಷಣೆಗಳಿಂದ ನೈರುತ್ಯ ಮಾನ್ಸೂನ್ ಸಮಯದಲ್ಲೂ ಯಾವುದೆ ಅನಾಹುತ ಸಂಭವಿಸುವುದಿಲ್ಲ.

೫. ಕಾರವಾರ ಬಂದರಿಗೆ ಏಕಕಾಲದಲ್ಲಿ ಹತ್ತಾರು ಸಾಗರಗಾಮಿ ನೌಕೆಗಳು ಲಂಗರು ಹಾಕಿ ನಿಲ್ಲಬಲ್ಲಂಥ ಗಟ್ಟಿತಳವಿದೆ. ದೊಡ್ಡ ಬಂದರು ಕಟ್ಟೆಗಳ ನಿರ್ಮಾಣಕ್ಕೆ ಅನುಕೂಲ ಸ್ಥಳವಿದೆ. ಇಲ್ಲಿ ಹದಿನೈದರಿಂದ ಇಪ್ಪತ್ತು ಹಡಗುಗಳು ಏಕಕಾಲದಲ್ಲಿ ಲಂಗರು ಹಾಕಬಹುದಾಗಿದೆ. ಕಾರವಾರದ ವ್ಯಾಪ್ತಿ ವಿಸ್ತಾರವಾಗಿದ್ದು ಸರಕುಗಳನ್ನು ಇಳಿಸಲು ಸಂಗ್ರಹಿಸಲು ಅನುಕೂಲವಾಗಿದೆ.

೬. ಕಾರವಾರ ಬಂದರಿಗೆ ಸಂಪರ್ಕ ಕಲ್ಪಿಸುವ ಹಲವು ಮಾರ್ಗಗಳಿವೆ. ಇದರಿಂದ ಅಂದರೆ, ಒಂದಕ್ಕಿಂತ ಹೆಚ್ಚು ಮಾರ್ಗಗಳಿರುವುದರಿಂದ ಒಂದೆಡೆಯಿಂದ ಬಂದರು ಪ್ರವೇಶಿಸಿದರೆ ಇನ್ನೊಂದು ಮಾರ್ಗದಿಂದ ಹಡಗುಗಳು ಹೊರಹೋಗಲು ಅನುಕೂಲವಾಗುತ್ತದೆ. ಇದು ಪ್ರಾಚೀನ ಕಾಲದ ಕಾರವಾನ್‌ಗಳಿಗೆ ತುಂಬಾ ಅನುಕೂಲವಾಗಿತ್ತು. ಗುಂಪು ಗುಂಪಾಗಿ ಬರುವ ಹಡಗುಗಳು ಒಂದೆಡೆಯಿಂದ ಬಂದರು ಪ್ರವೇಶಿಸಿದರೆ ಇನ್ನೊಂದು ಮಾರ್ಗದಿಂದ ಹಡಗುಗಳು ಹೊರಹೋಗಬಹುದಿತ್ತು. ಏಕಕಾಲದಲ್ಲಿ ಒಳಬರುವ ಹಾಗೂ ಹೊರಹೋಗುವ ಪ್ರಕ್ರಿಯೆ ನಡೆಯುತ್ತಿತ್ತು.

೭. ಕಾರವಾರ ಬಂದರಿನ ಬಳಿಯಲ್ಲಿ ಕಡಲಲ್ಲಿ ನಿಂತಿರುವ ಬೃಹತ್ ಐದು ದ್ವೀಪಗಳು ಹಡಗುಗಳಿಗೆ ರಕ್ಷಾ ಕವಚದಂತಿವೆ. ಸಂದರ್ಭ ಬಂದಾಗ ಈ ದ್ವೀಪಗಳಲ್ಲೇ ಸರಕುಗಳನ್ನು ಇಳಿಸಿ ಸಂಗ್ರಹಿಸಬಹುದು. ಮತ್ತು ಇಲ್ಲಿರುವ ಸಿಹಿನೀರು ಇತ್ಯಾದಿಗಳ ಅನುಕೂಲತೆ ಬಳಸಿಕೊಳ್ಳಬಹುದು. ಇದು ವ್ಯಾಪಾರಿ ಹಡಗುಗಳ ವರ್ತಕರಿಗೆ ಅನುಕೂಲವಾಗಿತ್ತು.

೮. ಕಾರವಾರ ಕೊಲ್ಲಿಯು ಏಳು ಮೈಲು ಉದ್ದ ಹಾಗೂ ಎರಡು ಮೈಲು ಅಗಲವಾಗಿದೆ. ಆದರೂ ಇಲ್ಲಿರುವ ಕಡಲ ದ್ವೀಪಗಳಿಂದ ತೆರೆಗಳ ಹೊಡೆತ ನಿಷ್ಕ್ರಿಯವಾಗಿದೆ. ಈ ದ್ವೀಪಗಳು ಅಲೆತಡೆಗಳಂತೆ ಕೆಲಸ ನಿರ್ವಹಿಸುತ್ತವೆ. ಇದರಿಂದ ಇನ್ನೊಂದು ಉಪಯೋಗವೆಂದರೆ ಮರಳು, ಹೂಳು ತೀರಕ್ಕೆ ಬರುವುದಿಲ್ಲ. ಪಶ್ಚಿಮ ಘಟ್ಟಗಳ ಎತ್ತರವಾದ ಪರ್ವತಗಳು ಹಾಗೂ ಭೂಶಿರ ಕಡಲಲ್ಲಿರುವ ಹಡಗುಗಳಿಗೆ ದಾರಿತೋರುವ 'ದೀಪ'ದಂತೆ ನಿಂತಿವೆ. ಜೊತೆಯಲ್ಲಿ ಕಡಲ ನಡುವಿರುವ ದ್ವೀಪಗಳೂ ಹಡಗುಗಳಿಗೆ ಸುರಕ್ಷಿತವಾಗಿ ತೀರ ತಲುಪಲು ಸಹಾಯ ಮಾಡುತ್ತವೆ.

ಹಿನ್ನಾಡು

ಯಾವುದೇ ಬಂದರಿನ ಅಭಿವೃದ್ಧಿ ಅದು ತನ್ನ ಹಿನ್ನಾಡಿನೊಂದಿಗೆ ಸಂಪರ್ಕ ಹೊಂದಲು ಪಡೆದಿರುವ ಸೌಲಭ್ಯಗಳನ್ನು ಅವಲಂಭಿಸಿರುತ್ತದೆ. ಕಡಲೋತ್ತರ ವ್ಯಾಪಾರಕ್ಕೆ ಬೇಕಾದ ಸರಕುಗಳ ಲಭ್ಯತೆ, ಕೃಷಿಭೂಮಿ ಹಾಗೂ ನೈಸರ್ಗಿಕ ಉತ್ಪನ್ನವನ್ನೂ ಇದು ಅವಲಂಭಿಸಿದೆ. ಹಿನ್ನಾಡು ವಿಸ್ತಾರವಾಗಿದ್ದಷ್ಟು ಬಂದರಿನ ವ್ಯಾಪಾರ, ವ್ಯವಹಾರ ಹೆಚ್ಚಾಗುತ್ತದೆ.

ಕಾರವಾರ ಬಂದರು ಮೇಲಿನ ಎಲ್ಲ ಸೌಲಭ್ಯಗಳನ್ನು ಅಪೂರ್ವವಾಗಿ ಹೊಂದಿದೆ. ಕಾರವಾರ ಬಂದರು ನಮ್ಮ ದೇಶದ ಪಶ್ಚಿಮ ಕರಾವಳಿಯ ನಟ್ಟನಡುವೆ ಇದೆ[೧೪]. ಕಾರವಾರ

ಬಂದರಿಗೆ ಹಿನ್ನಾಡಾಗಿ ವಿಜಯಪುರ, ಬಳ್ಳಾರಿ, ಕಲಬುರ್ಗಿ, ಕೋಲಾರ, ಬೆಂಗಳೂರು, ಹೈದ್ರಾಬಾದ್, ವಿಜಯವಾಡ, ಕರ್ನೂಲು, ಕೊಲ್ಲಾಪುರ ಹಾಗೂ ಸೊಲ್ಲಾಪುರಗಳು ಸೇರಿವೆ. ಲೋಹಗಳು, ಪುನ್ನಾಡಿನ ಮಣಿಗಳು, ಪಶ್ಚಿಮಘಟ್ಟದ ಮರಮಟ್ಟು, ಮಸಾಲೆಸಾಮಗ್ರಿಗಳು, ಹತ್ತಿ, ಕಬ್ಬು ಮತ್ತು ಅಕ್ಕಿ ಇಲ್ಲಿಯ ಮುಖ್ಯ ನಿರ್ಯಾತಗಳಾಗಿದ್ದವು. ಜೊತೆಗೆ ಬಹು ಅಪರೂಪದ ನವಿಲು, ಮಂಗ, ಪಕ್ಷಿ-ಪ್ರಾಣಿಗಳೂ ನಿರ್ಯಾತವಾಗುತ್ತಿದ್ದವು.

ಕಾರವಾರ ಬಂದರಿನಿಂದ ಹಿನ್ನಾಡಿಗೆ ತಲುಪಲು ಉತ್ತಮವಾದ ನೈಸರ್ಗಿಕ ಮಾರ್ಗಗಳಿವೆ. ಹೇರು ಮತ್ತು ನದಿಗಳ ಮೂಲಕ ನೌಕಾ ಮಾರ್ಗವಾಗಿ ಈ ಪ್ರದೇಶಗಳನ್ನು ಸುಲಭವಾಗಿ ತಲುಪಬಹುದಿತ್ತು. ಕರ್ನಾಟಕದ ಪಶ್ಚಿಮ ಕರಾವಳಿಯ ಗುಂಟ, ಪಶ್ಚಿಮ ಘಟ್ಟಗಳು ಉತ್ತರ ದಕ್ಷಿಣವಾಗಿ ಹಬ್ಬಿದ್ದರೆ, ಕಾರವಾರಕ್ಕೆ ಎದುರಲ್ಲಿ ಕಾಳಿ ಹಾಗೂ ಗಂಗಾವಳಿ ನದಿಗಳ ಮಧ್ಯದಲ್ಲಿ ಪಶ್ಚಿಮಘಟ್ಟಗಳು ಪೂರ್ವ-ಪಶ್ಚಿಮವಾಗಿ ನಿಂತಿವೆ. ಇದು ಹಿನ್ನಾಡಿನೊಂದಿಗೆ ಉತ್ತಮ ಸಂಪರ್ಕ ಮಾರ್ಗಗಳನ್ನು ನಿರ್ಮಿಸಿದೆ. ಈ ಕಣಿವೆಗಳಲ್ಲಿ ಸುರಕ್ಷಿತವಾಗಿರುವ ಅನೇಕ ಮಾರ್ಗಗಳು ನಿರ್ಮಿತವಾಗಿವೆ.

ಈ ಸಂಪರ್ಕ ಮಾರ್ಗಗಳ ಕುರಿತು ಕೃಷ್ಣಕುಮಾರ್ ಕಲ್ಲೂರ್‌ರವರು "ಹುಬ್ಬಳ್ಳಿ-ಕಾರವಾರ ಮಾರ್ಗದಲ್ಲಿ ಯಲ್ಲಾಪುರದ ಬಳಿಯಿರುವ ತಟಗಾರ ಘಟ್ಟದ ಎತ್ತರ ಸಮುದ್ರಪಾತಳಿಯಿಂದ ೧೬೦೦ ಅಡಿ ಮಾತ್ರವಿದೆ, ಆದರೆ ಇದರ ಸಮೀಪದಲ್ಲೇ ಪಶ್ಚಿಮಘಟ್ಟಗಳು ಎರಡುಸಾವಿರಅಡಿ ಎತ್ತರವಾಗಿವೆ"[೧೫] ಎನ್ನುತ್ತಾರೆ. ಇದು ನಿಜವಾಗಿದ್ದು, ಕಾಳಿ-ಗಂಗಾವಳಿ ನದಿ ಕಣಿವೆಗಳು ಘಟ್ಟದ ಸಂಪರ್ಕಕ್ಕೆ ಸಹಾಯಕವಾಗಿವೆ. ಅಲ್ಲದೇ ಈ ನದಿಗಳೆರಡೂ ಬಹುದೂರದವರೆಗೆ ನೌಕಾಯಾನಕ್ಕೆ ಅನುಕೂಲಕರವಾಗಿವೆ. ಸರಕುಗಳು ಬಂದರಿನಿಂದ ಹುಬ್ಬಳ್ಳಿಗೂ ಅಥವಾ ಹಿನ್ನಾಡುಗಳಿಂದ ಹುಬ್ಬಳ್ಳಿಗೂ ತಲುಪಿತ್ತೆಂದರೆ ಅದು ಮುಂದೆ ಹೋಗಬೇಕಿದ್ದ ಸ್ಥಳಗಳಿಗೆ ಸುಲಭವಾಗಿ ತಲುಪುತ್ತಿತ್ತು.

ಬಂದರಿನ ಉಪಯುಕ್ತತೆ

ಕಾರವಾರ ಬಂದರು ಕೊಲ್ಲಿ ಬಂದರಾಗಿರುವುದರಿಂದ ಇಲ್ಲಿ ಸದಾ ೬ ರಿಂದ ೮ ಮೀಟರ್ ನೀರು ನಿಂತಿರುತ್ತದೆ. ಇದರಿಂದ ಸರಕು ತುಂಬಿದ ಭಾರಿ ಗಾತ್ರದ ಹಡಗುಗಳನ್ನು ಇಲ್ಲಿ ಲಂಗರು ಮಾಡಬಹುದು. ಹಾಗೂ ಸರಕುಗಳನ್ನು ಸಂಗ್ರಹಿಸಲು ಮತ್ತು ಸರಕುಗಳನ್ನು ತುಂಬಲು ವಿಶಾಲವಾದ ಸ್ಥಳವೂ ಇಲ್ಲಿದೆ.

ಕಾರವಾರದ ಪ್ರಮುಖ ಬಂದರಿಗೆ ಸಹಾಯಕವಾಗಿ ಕಡವಾಡದ ಬಂದರಿದೆ. ಕಾಳಿನದಿ ಕಡಲನ್ನೂ ಸೇರುವಲ್ಲಿ ನಿರ್ಮಾಣವಾಗಿರುವ ಈ ಬಂದರು ದೊಡ್ಡ ಹಡಗುಗಳನ್ನು

ಲಂಗರುಮಾಡಲು ಅನುಕೂಲಕರವಾಗಿದೆ. ಈ ಬಂದರಿನ ಮೂಲಕ ಪ್ರಧಾನಬಂದರಿಗೆ ಸರಕುಗಳನ್ನು ಸಾಗಿಸಲು ಸಹಾಯಕವಾಗಿದೆ. ಸದಾಶಿವಗಡಕ್ಕೆ ಬಂದರೆ ಮುಂದೆ ಅದು ತಲುಪಬೇಕಾದ ಸ್ಥಳಕ್ಕೆ ತಲುಪಿದಂತೆ. ಕಾಳಿನದಿಯು ಹಿನ್ನಾಡಿನ ಸರಕನ್ನು ಸುಲಭದಲ್ಲಿ ಬಂದರು ಪ್ರದೇಶಕ್ಕೆ ತರಲು ಸಹಾಯಕವಾಗಿದೆ.

ಸದಾಶಿವಗಡದ ಕುರಿತು ಕಲ್ಲೂರವರು "ಕಾರವಾರದಿಂದ ಕೆಲವೇ ಮೈಲುಗಳಷ್ಟು ಉತ್ತರಕ್ಕೆ ನದಿ ಬಂದರಾದ ಸದಾಶಿವಗಡವಿದೆಯಲ್ಲದೆ, ಕೆಲಮೈಲುಗಳಷ್ಟು ದಕ್ಷಿಣಕ್ಕೆ ದ್ವೀಪ ಬಂದರಾದ ಅಂಜದೀವ್ ಇದೆ. ಇವೆರಡೂ ಬಂದರುಗಳನ್ನೂ ಒಳಗೊಳ್ಳುವಂತೆ ಕಾರವಾರವನ್ನು ಒಂದು ಸಂಕೀರ್ಣ ಬಂದರಾಗಿ ಬೆಳೆಸಿದರೆ ಅಕ್ಷರಶಃ ಅದರ ಭವಿಷ್ಯದ ಅಭಿವೃದ್ಧಿಗೆ ಎಲ್ಲೆಯೆಂಬುದೇ ಉಳಿಯುವುದಿಲ್ಲ"[೧೬] ಎಂದು ಹೇಳಿದ್ದಾರೆ. ಸದಾಶಿವಗಡ-ಕಡವಾಡಗಳು, ಕಾರವಾರ ಬಂದರಿಗೆ ಸಹಾಯಕ ಬಂದರುಗಳಾಗಿವೆ. ಕಡವಾಡ ಬಂದರು ಕಾರವಾರದ ಪ್ರಾಚೀನ ಬಂದರು. 'ಕಾರವಾರ' ಹೆಸರೂ ಕಡವಾಡದ ಸುಧಾರಿತ ರೂಪವಾಗಿದೆ. ಬ್ರಿಟಿಷರಿಗೆ 'ಕಡವಾಡ'ದ ಉಚ್ಚಾರ ಕಷ್ಟವಾದ್ದರಿಂದ ಅವರು ಅದನ್ನು ಸರಳೀಕರಿಸಿ 'ಕಾರವಾರ' ಮಾಡಿಕೊಂಡರೆಂದು ನಂಬಲಾಗಿದೆ. ಕಾರವಾರ ಬಂದರಿನ ಬೆಳವಣಿಗೆಯ ನಂತರವೂ ಕಡವಾಡ ಬಂದರು ಚಟುವಟಿಕೆಯಿಂದ ಇತ್ತು ಕಾರವಾರ ಬಂದರಿನ ಬೆಳವಣಿಗೆಯಲ್ಲಿ ಕಡವಾಡ ಬಂದರಿನ ಕೊಡುಗೆ ಅಪೂರ್ವವಾದದ್ದು.

ಕಾರವಾರವನ್ನು ಒಂದು ಬಂದರುಗಳ ಸಂಕೀರ್ಣವನ್ನಾಗಿ ರೂಪಿಸುವ ನೈಸರ್ಗಿಕ ಲಕ್ಷಣ ಅಲ್ಲಿದೆ. ಒಂದನೆಯದು ಬಾಡ ಮತ್ತು ಕಾರವಾರಗಳ ನಡುವೆ ಇರುವ ಕಾಳಿನದಿ ಮತ್ತು ಎರಡನೆಯದು ಸದಾಶಿವಗಡ ಮತ್ತು ಕಣಸಗಿರಿ ಗುಡ್ಡಗಳ ನಡುವಿನ ಜೌಗು. ಇವೆಲ್ಲವನ್ನು ಸೇರಿಸಿದಾಗ ಈ ಸಂಕೀರ್ಣ ಬಂದರಿನ ವ್ಯಾಪ್ತಿ ೮-೧೦ ಚದರ ಮೈಲಿಗಳಷ್ಟಾಗುತ್ತದೆ[೧೭]. ಈ ರೀತಿಯ ಸೌಲಭ್ಯಗಳನ್ನು ಪ್ರಾಚೀನ ಕಾಲದಲ್ಲಿ ವ್ಯಾಪಾರಿಗಳು ಚೆನ್ನಾಗಿ ಬಳಸಿಕೊಂಡಿದ್ದರು. ಏಕಕಾಲದಲ್ಲಿ ಬರುವ ದೇಶಿಯ ಹಾಗೂ ವಿದೇಶೀಯ ಕಾರವಾನ್‌ಗಳನ್ನು ಲಂಗರು ಮಾಡಲು ಈ ಎಲ್ಲ ಬಂದರುಗಳು ಉಪಯುಕ್ತವಾಗಿದ್ದವು.

ಕಾರವಾರದ ದಕ್ಷಿಣದಲ್ಲಿ ಇನ್ನೊಂದು ನದಿ ಬಂದರಿದೆ. ಅದು ಅಘನಾಶಿನಿ ನದಿಯಿಂದ ಉಂಟಾದ ಬಂದರು. ಅಘನಾಶಿನಿ ನದಿ ಕಡಲನ್ನು ಸೇರುವುದು ತದಡಿಯ ಬಳಿ. ಆದ್ದರಿಂದ ಈ ನದಿ ಬಂದರನ್ನು ತದಡಿ ಊರಿನ ಹೆಸರಿನೊಂದಿಗೆ ತದಡಿ ಬಂದರು ಎಂದು ಕರೆಯುತ್ತಾರೆ. ಇದೂ ಕಾರವಾರ ಬಂದರಿಗೆ ಪೂರಕ ಬಂದರಾಗಿತ್ತು. ಅಘನಾಶಿನಿ ನದಿಯಗುಂಟ-ಪಶ್ಚಿಮ ಘಟ್ಟಗಳಲ್ಲಿ ಸಿಗುತ್ತಿದ್ದ ನೈಸರ್ಗಿಕ ಮಸಾಲೆ ದಿನಿಸುಗಳನ್ನು ನೌಕೆಗಳ ಮೂಲಕ ತಂದು ವಿದೇಶಕ್ಕೆ ಕಳಿಸಲು ಸಹಾಯ ಮಾಡುತ್ತಿತ್ತು. ಕಾರವಾರ ಬಂದರಿನ 'ಕಾರ್ಗೋ'ಗಳ ದಟ್ಟಣೆಯನ್ನು ಕಡಿಮೆ

ಮಾಡಲು ಈ ಬಂದರು ಸಹಾಯಮಾಡುತ್ತಿತ್ತು. ಕಾರವಾರ ಬಂದರಿಗೆ ಇದ್ದ ಹಿನ್ನಾಡೆ ಈ ಬಂದರಿಗೂ ಸೇರಿತ್ತು. ಹಿನ್ನಾಡಿಗೆ ಸಂಪರ್ಕ ಕಲ್ಪಿಸಲು ಬಾಳೆಗುಳಿಯ ಮೂಲಕ ಇದ್ದ ಕಣಿವೆ ಮಾರ್ಗ ಸುಲಭವು ಉಪಯುಕ್ತವುಆಗಿತ್ತು. ಈ ಮಾರ್ಗವು ಕಾರವಾರ ಬಂದರಿಗೂ ಸಹಾಯಕವಾಗಿತ್ತು.

ಎರಿತ್ರಿಯನ್ ಸಿ ಕೃತಿಯಲ್ಲಿ ಉಲ್ಲೇಖಿತವಾದ ಸೀನಿತಿಯು ಕಾರವಾರ ಬಳಿಯ ಕಡಲಲ್ಲಿರುವ ದ್ವೀಪಗಳೆಂದೂ, ಚೆರ್ಸೋನಿಸಸ್[೧೮.] ಎಂಬುದು (ಗ್ರೀಕ್ ಭಾಷೆಯಲ್ಲಿ ಭೂಶಿರವಾಗಿದ್ದು) ಕಾರವಾರದ ಭೂಶಿರ ಎಂದು ವಿದ್ವಾಂಸರು ತರ್ಕಿಸಿದ್ದಾರೆ. ಇದರಿಂದ ಗ್ರೀಕ್ ಹಾಗೂ ರೋಮನ್ ವರ್ತಕರಿಗೆ ಕಾರವಾರವು ಬಹು ಪರಿಚಿತವಾದ ಬಂದರಾಗಿತ್ತೆಂದು ತಿಳಿಯಬಹುದು. ರೋಮನ್‌ನೊಂದಿಗೆ ಕರ್ನಾಟಕ ಹೊಂದಿದ್ದ ಸಂಪರ್ಕವನ್ನು ತೋರಿಸುವ ಅನೇಕ ಪ್ರಾಚೀನ ಕಾಲದ ಅವಶೇಷಗಳು ದೊರೆತಿವೆ[೧೯]. ರೋಮನ್ನರ ಹೂಜಿಗಳು, ನಾಣ್ಯಗಳು ಮುಂತಾದವುಗಳು ದೊರೆಯುವದರೊಂದಿಗೆ ವಿದೇಶಿ ಪ್ರವಾಸಿಗರ ಕಥನಗಳು ಈ ವ್ಯಾಪಾರಕ್ಕೆ ಸಾಕ್ಷಿ ಒದಗಿಸುತ್ತವೆ.

ಕಾರವಾರವು ಇದ್ದ ಸ್ಥಳವು ಭೌಗೋಳಿಕವಾಗಿ ಪಶ್ಚಿಮ ಏಶಿಯಾ ಹಾಗೂ ಯುರೋಪಿನ ದೇಶಗಳಿಗೆ ನೇರ ಸಂಪರ್ಕ ಹೊಂದಲು ಅನುಕೂಲವಾಗಿತ್ತು. ಹಿಪ್ಪಲಸ್[೨೦] ಮಾರುತವು ಕಾರವಾರವನ್ನು ಪಶ್ಚಿಮದಿಂದ ಹಡಗುಗಳನ್ನು ಸುರಕ್ಷಿತವಾಗಿ ತಲುಪಿಸುವ ಮಾರುತವಾಗಿತ್ತು. ವರ್ಷದ ಐದು ತಿಂಗಳು ಈ ಮಾರುತದ ಪ್ರಯೋಜನ ಪಡೆಯಬಹುದಾಗಿತ್ತು. ಮೆಡಿಟರೇನಿಯನ್ ಸಾಗರದ ಮೂಲಕ ಬರುವ ಹಡಗುಗಳು ಅಲೆಗ್ಸಾಂಡ್ರಿಯಾದ ಮೂಲಕ ಅಥವಾ ಅಥೆನ್ಸ್‌ನ್ನು ಹಾದು ಬರುತ್ತಿದ್ದವು. ಮುಂದೆ ಈ ಮಾರ್ಗ ಕೊಂಚ ಬದಲಾವಣೆಯೊಂದಿಗೆ ಮೈಯೋಸ್ ಹಾರ್ಮಸ್ ಮೂಲಕ ಜಿದ್ದಾ, ಏಡನ್, ಸುಕೋತ್ರಾ ಬಳಸಿ ಕಾರವಾರ ತಲುಪುತ್ತಿತ್ತು. ಕಾರವಾರ ತಲುಪಲು ಬಳಸುತ್ತಿದ್ದ ಇನ್ನೊಂದು ಮಾರ್ಗವೆಂದರೆ ಅಥೆನ್ಸ್‌ನ ಮೂಲಕ ಬ್ಯಾಬಿಲೋನ್, ಬಗ್ದಾದ್, ಸೂಸ್‌ಗಳನ್ನು ಬಳಸಿ ಹಾಗೂ ಪರ್ಶಿಯಾ ಕೊಲ್ಲಿಯ ಮಸ್ಕತ್ ಮೂಲಕ ನೇರವಾಗಿ ಕಾರವಾರ ತಲುಪುತ್ತಿತ್ತು.

ವಿದೇಶಗಳಿಂದ ಬರುವ ಹಡಗುಗಳಂತೆ ಕಾರವಾರ ಬಂದರಿನ ಮೂಲಕ ವಿದೇಶಕ್ಕೆಹೋಗುತ್ತಿದ್ದ ಹಡಗುಗಳಿಗೂ ಈ ಮಾರ್ಗ ಸುರಕ್ಷಿತ ಮಾರ್ಗವಾಗಿತ್ತು. ಪೂರ್ವದತ್ತ ಹೋಗುತ್ತಿದ್ದ ವ್ಯಾಪಾರಿ ಹಡಗುಗಳಿಗೆ ಸುಮಾತ್ರಾ, ಜಾವಾ, ಬಾಲಿ, ಬೋರ್ನಿಯೋ, ಮಲಯಾ, ಕಾಂಬೋಜ, ಚಂಪಾ, ಬರ್ಮಾ, ಚೀನಾ ಮುಂತಾದೆಡೆಗೆ ಸಾಗಲು ಕಾರವಾರ ಬಂದರು ಪ್ರಮುಖ ಸ್ಥಳವಾಗಿತ್ತು. ಕಾರವಾರದಿಂದ ದಕ್ಷಿಣಕ್ಕೆ ತೀರದ ಗುಂಟಸಾಗಿ ದಕ್ಷಿಣದ ತುದಿಯಲ್ಲಿ ಕುಮಾರಿ–

ಶ್ರೀಲಂಕಾಗಳ ಮಧ್ಯದಿಂದ ಸುರಕ್ಷಿತವಾಗಿ ಸಾಗುತ್ತಿದ್ದವು. ಇದಲ್ಲದೇ ಕಾರವಾರ ಬಂದರಿನ ಮೂಲಕ ಹೊರಟ ಭೂಮಾರ್ಗವು ಪೂರ್ವ ಕರಾವಳಿಗೆ ಸಂಪರ್ಕಕಲ್ಪಿಸಿತ್ತು. ಕಾರವಾರ ಬಂದರಿನ ಹಿನ್ನಾಡಾದ ಕೋಲಾರ, ಬೆಂಗಳೂರು ತಲುಪುವ ಭೂಮಾರ್ಗವು ಮುಂದೆ ಅರಿಕಮೇಡು, ಕಾವೇರಿ ಪಟ್ಟಣಂ, ಮಧುರೈಗಳಿಗೆ ತಲುಪಿ ಪೂರ್ವದ ಬಂದರುಗಳ ಮೂಲಕ ವಿದೇಶಗಳಿಗೆ ಸಂಪರ್ಕ ಪಡೆಯುತ್ತಿದ್ದವು.

ಕಾರವಾರ ಬಂದರಿಗೆ ಸೇರುವ ನದಿಗಳು, ನದಿಮುಖಜ ಭೂಮಿ, ಬಂದರಿನ ಸ್ಥಿತಿ, ಕಡಲ ಗಾಳಿ, ದ್ವೀಪಗಳು

ಕಾರವಾರದಲ್ಲಿ ಹರಿಯವ ನದಿಗಳಲ್ಲಿ ಕಾಳಿನದಿಯು ದೊಡ್ಡ ನದಿಯಾಗಿದೆ. ಪಶ್ಚಿಮ ಘಟ್ಟದಲ್ಲಿ ಇದು ಜನಿಸುತ್ತದೆ. ಜೊಯಿಡಾ ತಾಲೂಕಿನ ಡಿಗ್ಗಿಯಲ್ಲಿ ಜನಿಸುವ ಕಾಳಿನದಿಯು ಪೂರ್ವಾಭಿಮುಖವಾಗಿ ಹರಿಯುತ್ತದೆ. ಕಾಳಿನದಿ ಸಣ್ಣ ತೊರೆಯಾಗಿ ಘಟ್ಟವನ್ನು ಇಳಿದು ಹರಿಯುತ್ತ ಬರುತ್ತಿದ್ದಂತೆ ತಿನ್ನೈಪರ್ವತದಿಂದ ಹುಟ್ಟಿಬರುವ ತೊರೆಯೊಂದು ಕಾಳಿನದಿಯನ್ನು ಸೇರುತ್ತದೆ. ಇದನ್ನು ಉಜಲಿಹೊಳೆ ಅಥವಾ ಪಾಂಡರಿ ಎಂದು ಕರೆಯುತ್ತಾರೆ. ಈ ತೊರೆಯು ಕಾಳಿಯನ್ನು ಸೇರಿದಾಗ ಕಾಳಿ ತನ್ನ ವಿಸ್ತಾರ ಹಾಗೂ ವೇಗವನ್ನು ಹೆಚ್ಚಿಸಿಕೊಳ್ಳುತ್ತದೆ. ಇದು ಕಾಳಿಯನ್ನು ಸೇರುವ ಪ್ರಮುಖ ತೊರೆಯಾಗಿದೆ. ಇಲ್ಲಿಂದ ಕಾಳಿ ಹೆಸರು ಸ್ಪಷ್ಟಗೊಳ್ಳುತ್ತದೆ.

ಕಾಳಿ ನದಿಯು ಉತ್ತರ ಕನ್ನಡದ ಘಟ್ಟದ (ಪಶ್ಚಿಮ ಘಟ್ಟದಲ್ಲಿರುವ) ತಾಲೂಕುಗಳಾದ ಜೊಯಿಡಾ, ಯಲ್ಲಾಪುರ, ಮತ್ತು ಹಳಿಯಾಳ ತಾಲೂಕುಗಳಿಗೆ ಗಡಿಯಂತಿದೆ. ಈ ಮೂರೂ ತಾಲೂಕುಗಳ ಗಡಿಯಗುಂಟ ಹರಿಯುವ ಕಾಳಿನದಿಯು ದಾಂಡೇಲಿ ಬಳಿ ಬಂದಾಗ ತಟ್ಟಿಹಳ್ಳವನ್ನು ಸೇರಿಸಿಕೊಳ್ಳುತ್ತದೆ. ಸ್ವಲ್ಪ ಮುಂದೆ ಹರಿದ ಮೇಲೆ ಬರ್ಚಿ, ಕರ್ಕನಾಲ, ಕಾನೇರಿ, ವಾಕಿ ಹಾಗೂ ಮಂಡಿ ಎಂಬ ಉಪನದಿಗಳನ್ನು ಕೂಡಿಕೊಂಡು ವಿಶಾಲವಾಗುತ್ತಾ ಸಾಗುತ್ತದೆ. ಡಿಗ್ಗಿಯಿಂದ ೧೯೪ ಕಿ.ಮೀ ಹರಿದು ಬರುವ ಕಾಳಿ ನದಿಯು ಕಾರವಾರ ತಲುಪುತ್ತಿದ್ದಂತೆ ತನ್ನ ಪಾತ್ರ ಮತ್ತು ವೇಗವನ್ನೂ ಹೆಚ್ಚಿಸಿಕೊಳ್ಳುತ್ತದೆ. ಕಡವಾಡದಬಳಿಯಲ್ಲಿ ಕಾಳಿ ನದಿಯು ವಿಸ್ತಾರಗೊಳ್ಳುತ್ತದೆ. ವಿಸ್ತಾರವಾದ ಕಾಳಿನದಿಯಲ್ಲಿ ದೊಡ್ಡ ದೊಡ್ಡ ಹಲವು ಹಡಗುಗಳನ್ನು ನಿಲ್ಲಿಸಲು ಅನುಕೂಲತೆಗಳಿವೆ. ಮುಂದೆ ಕಾಳಿನದಿ ಬಾಡ, ಸಾವರಗಡಗಳನ್ನು ಬಳಸಿ, ಸದಾಶಿವಗಡದ ಬಳಿ ಕಡಲನ್ನು ಸೇರುತ್ತದೆ.

ಕಾಳಿನದಿಯು ಕಡಲನ್ನು ಸೇರುವಲ್ಲಿ–ಸದಾಶಿವಗಡದ ಬಳಿ, ಮುಖಜ ಭೂಮಿಯಲ್ಲಿ ಶಾಂತವೂ, ವಿಸ್ತಾರವೂ ಆಗಿದೆ. ಆದ್ದರಿಂದ ಒಳಪ್ರವೇಶಿಸುವ ಸರಕು ತುಂಬಿದ ಹಡಗುಗಳು ಸರಾಗವಾಗಿ ಒಳಬರುತ್ತವೆ. ಕಡಲಲ್ಲಿರುವ ದ್ವೀಪಗಳು ಕಡಲ ತೆರೆಯವೇಗವನ್ನು

ನಿಯಂತ್ರಿಸುವದರಿಂದ ಸಂಗಮದಲ್ಲಿ ಹೆಚ್ಚಿನ ಒತ್ತಡ ಉಂಟಾಗುವುದಿಲ್ಲ. ಅಲ್ಲದೆ ಕಡಲೆಡೆಯಿಂದ ಮರಳು ಹೆಚ್ಚಿನ ಪ್ರಮಾಣದಲ್ಲಿ ಬರದಿರುವುದರಿಂದ ಮುಖಜಭೂಮಿಯಲ್ಲಿ ಹೂಳು ತುಂಬುವುದಿಲ್ಲ.

ಕಾಳಿನದಿಯ ಮುಖಜ ಪ್ರದೇಶದಲ್ಲಿ ಕಡಲೆಡೆಯಿಂದ ಬೀಸಿ ಬರುವ ಗಾಳಿಯು ಸದಾಶಿವಗಡದ ಕಡಲಿಗೆ ಚಾಚಿರುವ ಎತ್ತರವಾದ ಗುಡ್ಡಗಳ ದೆಸೆಯಿಂದ, ಪರ್ವತದ ಬದಿಯಿಂದಲೇ ತೇಲಿ ಒಳಬರುತ್ತದೆ. ಇದರಿಂದ ಯಾವುದೇ ಹಾನಿ ಉಂಟಾಗುವುದಿಲ್ಲ. ಮುಖ್ಯವಾಗಿ ಕಡಲಲ್ಲಿರುವ ದ್ವೀಪಗಳು ಗಾಳಿಯ ವೇಗವನ್ನು ಕುಂಟಿತಗೊಳಿಸುತ್ತವೆ. ಪಶ್ಚಿಮ ಘಟ್ಟಗಳು ಅಲ್ಲಲ್ಲಿ ಉಂಟುಮಾಡಿರುವ ಕೊರಕಲುಗಳು ಘಟ್ಟಕ್ಕೆ ಸಂಪರ್ಕ ಕಲ್ಪಿಸುವ ಉತ್ತಮ ಭೂಮಾರ್ಗಗಳಾಗಿವೆ. ಇಂಥಹ ಕಣಿವೆಗಳಲ್ಲಿ ಬಂದರಿಗೆ ನೇರ ಮಾರ್ಗಕಲ್ಪಿಸುವ ಬೇಲಿಕೇರಿ–ಬಾಳೆಗುಳಿ–ಅಗಸೂರು–ರಾಮನಗರ–ಅರೆಬೈಲ್ ಮಾರ್ಗವು ಪ್ರಮುಖವಾಗಿದ್ದು, ಅರೆಬೈಲ್ ಮಾರ್ಗವಾಗಿ ಹುಬ್ಬಳ್ಳಿ ಅಥವಾ ಧಾರವಾಡ ತಲುಪಿದರೆ ಹಿನ್ನಾಡಿನೊಂದಿಗೆ ಸಂಪರ್ಕ ಸುಲಭವಾಗಿ ಪಡೆಯಬಹುದಾಗಿತ್ತು.

ಕಾರವಾರ ಬಂದರಿನ ಬೆಳವಣಿಗೆ

ಕಾರವಾರ ಬಂದರು ಪ್ರಾಚೀನ ಕಾಲದಿಂದಲೂ ಜಾಗತಿಕ ವ್ಯಾಪಾರ ವಹಿವಾಟಿನಲ್ಲಿ ತೊಡಗಿದ್ದ ಬಂದರು. ಅದಕ್ಕಿರುವ ನೈಸರ್ಗಿಕ ಹಾಗೂ ಭೌಗೋಳಿಕ ಕೊಡುಗೆಗಳು ಅದನ್ನೊಂದು ಸುರಕ್ಷಿತ ನೈಸರ್ಗಿಕ ಬಂದರಾಗಿ ನಿರ್ಮಿಸಿದೆ. ಈಗಲೂ ೨೧ನೇ ಶಾತಮಾನದ ಆದಿಯಲ್ಲೂ ಯಾವುದೇ ಹೆಚ್ಚಿನ ಕೃತಕ ಸೌಲಭ್ಯಗಳನ್ನು ಒದಗಿಸದಿದ್ದರೂ ಅದು ತನ್ನ ಹಿಂದಿನ ಸುರಕ್ಷತೆಯನ್ನು ರಕ್ಷಿಸಿ ಕೊಂಡು ಬಂದಿದೆ.

ಭಾರತದ ಪಶ್ಚಿಮ ಕರಾವಳಿ ಆಫ್ರಿಕಾ ಹಾಗೂ ಏಷ್ಯಾದ ಅರಬ್ ರಾಷ್ಟ್ರಗಳು ಮತ್ತು ಯೂರೋಪಿನ ತೀರ ಪ್ರದೇಶದ ದೇಶಗಳೊಂದಿಗೆ ನೇರಸಂಪರ್ಕ ಪಡೆಯಲು ಅನುಕೂಲವಾಗಿದೆ. ಕಡಲಮಾರ್ಗವಾಗಿ ಮೇಲ್ಕಾಣಿಸಿದ ದೇಶಗಳಿಗೆ ಸಂಪರ್ಕಿಸಲು ಸುಲಭವಾಗಿದೆ. ಕಾರವಾರ ಬಂದರಿನ ಚರಿತ್ರೆ ಆರಂಭದ ಕಾಲಗತಿಯವರೆಗೆ ಅಂದರೆ ಕ್ರಿಸ್ತಶಕದ ಆರಂಭಕ್ಕೆ ಹೋಗುತ್ತದೆ.

ಕ್ರಿ.ಶ ೨೩ ರಿಂದ ೭೭ರವರೆಗೆ ಬದುಕಿದ್ದ ಹಿರಿಯ ಪ್ಲಿನಿಯು ಬರೆದಿರುವ ಕೃತಿ ಪ್ರಾಕೃತಿಕ ಚರಿತ್ರೆ[೨೧] ಯಲ್ಲಿ ಉಲ್ಲೇಖಿತಗೊಂಡಿರುವ ಭಾರತದ ಕಡಲ ತೀರದ ವಿವರದಲ್ಲಿ ಕರ್ನಾಟಕದ ಕಡಲ ತೀರವೂ ಸೇರಿದೆ. ಈತನ ಪ್ರವಾಸಿ ಕಥನವು ಕನ್ನಡ ಕರಾವಳಿ ಅರಬ್ ರಾಷ್ಟ್ರಗಳೊಂದಿಗೆ ನೇರ ಸಂಪರ್ಕ ಹೊಂದಿದ್ದನ್ನು ಸ್ಪಷ್ಟಪಡಿಸುತ್ತದೆ. "ಅರೇಬಿಯಾದಲ್ಲಿಯ ಸೈಯಾಗ್ರಸ್ ಎಂಬ ಭೂಶಿರದಿಂದ ಇಂಡಿಯಾಕ್ಕೆ ಸಾವಿರದ ಮುನ್ನೂರ ಮುವತ್ತೈದು ಮೈಲಿ ದೂರದ ಪ್ರಯಾಣವನ್ನು ಹಿಪ್ಪಾಲಸ್ ಎಂದು

ಕರೆಯಲ್ಪಡುವ ಮಾರುತದ ಸಹಾಯದಿಂದ ಸೇರಬಹುದೆಂದು ಈಚೆಗೆ ಖಚಿತವಾಗಿ ಗೊತ್ತಾಗಿದೆ. ಇದಕ್ಕಿಂತಲೂ ಹತ್ತಿರವಾದ ಹಾಗೂ ಸುರಕ್ಷಿತವಾದ ದಾರಿಯೆಂದರೆ ಇಂಡಿಯಾದಲ್ಲಿರುವ ಸೈಗರಸ್ ಎಂಬ ಬಂದರಿನ, ಮೇಲೆ ಹೇಳಿದ ಭೂಶಿರದ ಮಾರ್ಗದಲ್ಲಿರುವ ದಾರಿಯೆಂದು ಗೊತ್ತಾಗಿದೆ[೨೨]". ಮುಂದುವರಿದು 'ಬಹಳ ಕಾಲ ಸಮುದ್ರಯಾನ ಈ ಮಾರ್ಗವಾಗೇ ನಡೆಯುತ್ತಿತ್ತು. ಇದಕ್ಕಿಂತಲೂ ಹತ್ತಿರದ ಮಾರ್ಗವನ್ನು ಒಬ್ಬ ವರ್ತಕನು ಕಂಡುಹಿಡಿದನು ಈ ವರ್ತಕನ ಹಣದಾಸೆಯ ಕಾರಣವಾಗಿ ನಮಗೂ ಇಂಡಿಯಾದೇಶಕ್ಕೂ ಒಂದು ಹತ್ತಿರದ ದಾರಿ ಸಿಕ್ಕಂತಾಯಿತು. ಹೀಗಾಗಿ ಈಗ ಪ್ರತಿವರ್ಷವೂ ಇಂಡಿಯಾ ದೇಶಕ್ಕೆ ಸಮುದ್ರಯಾನಗಳು ಆಗುತ್ತಲೇ ಇರುತ್ತವೆ. ಇಂಡಿಯಾ ದೇಶಕ್ಕೆ ಹೋಗುವಾಗ ಇಂಡಿಯಾ ಸಮುದ್ರಗಳಲ್ಲಿರುವ ಕಡಲುಗಳ್ಳರ ಹಾವಳಿಯನ್ನು ತಪ್ಪಿಸಿಕೊಳ್ಳಲು ಬಿಲ್ಲಾಳುಗಳ ತಂಡಗಳನ್ನೇ ಹಡಗಿನಲ್ಲಿ ಇಲ್ಲಿಂದ ಕರೆದುಕೊಂಡು ಹೋಗಬೇಕು. ಮೇಲೆ ಹೇಳಿದ ಹಿಪ್ಪಾಲಸ್ ಮಾರುತ ಬೀಸುತ್ತಿದ್ದರೆ ಇಂಡಿಯಾ ದೇಶದ ಅತ್ಯಂತ ಹತ್ತಿರವಾದ ಮುಜೈರಿಸ್ ಎಂಬ ಸ್ಥಳವನ್ನು ನಲವತ್ತು ದಿವಸಗಳಲ್ಲಿ ಮುಟ್ಟಬಹುದು. ಆದರೆ ಈ ಮುಜೈರಿಸ್ ಎಂಬ ಸ್ಥಳ ಅಷ್ಟು ಅನುಕೂಲವಾಗಿಲ್ಲ. ಏಕೆಂದರೆ ಇದಕ್ಕೆ ಹತ್ತಿರದಲ್ಲೇ ಕಡಲ್ಗಳ್ಳರಿರುವ ಸ್ಥಳವಿದೆ. ಅಲ್ಲದೇ ವ್ಯಾಪಾರಕ್ಕೆ ಬೇಕಾದ ವಸ್ತುಗಳು ಅಷ್ಟಿಲ್ಲ. ಇಲ್ಲಿಗೆ ಬಂದ ಹಡಗುಗಳು ತೀರದಿಂದ ಬಹುದೂರದಲ್ಲಿ ಲಂಗರು ಹಾಕಬೇಕಾಗುತ್ತದೆ. ಹಡಗಿನ ಸಾಮಾನುಗಳನ್ನು ದೋಣಿಗಳಲ್ಲಿ ಹೇರಿಕೊಂಡು ಹೋಗಿ ಭೂಮಿಯನ್ನು ಮುಟ್ಟಬೇಕು. ನಾನು ಇದನ್ನು ಬರೆಯುವಾಗ ಈ ಮುಜೈರಸ್ ನಾಡನ್ನು ಕಾಯಲೋಬೋತ್ರಾಸ್ (ಕೇರಳ ಪುತ್ರ) ಎಂಬ ದೊರೆ ಆಳುತ್ತಿದ್ದಾನೆ"[೨೩] ಎಂದು ಹೇಳಿದ್ದಾನೆ. ಇದು ಕಾರವಾರ ಬಂದರಿನ ಸ್ಥಿತಿಯನ್ನು ತಿಳಿಸುತ್ತದೆ.

ಮುಜೈರಿಸ್ ಬಂದರೆಂದರೆ ಕೆಲವರು ಮಂಗಳೂರು ಎಂದೂ ಇನ್ನೂ ಕೆಲವರು ಕ್ರಾಂಗನೂರ್ಎನ್ನುತ್ತಾರೆ. ಒಟ್ಟಿನಲ್ಲಿ ಭಾರತದ ಪಶ್ಚಿಮ ಕರಾವಳಿಯ ದಕ್ಷಿಣದ ಒಂದು ಬಂದರು ಮುಜೈರಿಸ್. ಈ ಬಂದರಿನ ಮಾರ್ಗದಲ್ಲಿ ಅಂದರೆ ಪ್ರಸ್ತುತ ಗೋವಾದ ಗಡಿಯಿಂದ ದಕ್ಷಿಣದ ದಿಕ್ಕಿನ ಕಡೆಯಲ್ಲಿ ಕಡಲುಗಳ್ಳರ ಹಾವಳಿ ಇರುವುದು ತಿಳಿಯುತ್ತದೆ. ಈ ಪ್ರದೇಶ ಹೆಚ್ಚಾಗಿ ಕಾರವಾರ ಬಂದರು ಪ್ರದೇಶವಾಗಿದೆ ಎಂದು ಹಲವು ಇತಿಹಾಸಕಾರರು ಗುರುತಿಸಿದ್ದಾರೆ. ಇದನ್ನು ಸಮರ್ಥಿಸುವಂತೆ 'ಎರಿತ್ರಿಯನ್‌ಸಿ'ಯ ಲೇಖಕನೂ ಈ ಬಗ್ಗೆ ಹೇಳುತ್ತಾನೆ. ಭಾರತದ ಪಶ್ಚಿಮ ಕರಾವಳಿಯ ಗುಂಟ ನಡೆಯುವ ಶಾಸನೋಕ್ತ ಸಂತೆ ನಡೆಯುವ ಊರುಗಳನ್ನು ಹೆಸರಿಸಿದ್ದಾನೆ. ".....ಔರನ್ನೋಬೊಸ್, ಸಿಸಿಕ್ರೇನಿ, ಈಗಿಡೆ, ಸೀನಿತಿ ಸಿಕ್ಕುತ್ತವೆ. ಸೀನಿತಿಗೆ ಎದುರಾಗಿ ಚರ್ಸೋನಿಸಸ್ ಎಂಬ ಸ್ಥಳವಿದೆ. ಇಲ್ಲಿ ಕಡಲುಗಳ್ಳರಿದ್ದಾರೆ. ಇಲ್ಲಿಂದ ಮುಂದೆ ಬಿಳಿ ದ್ವೀಪಗಳುಸಿಗುತ್ತವೆ[೨೪]" ಎಂದು ಹೇಳುತ್ತಾನೆ. ಇಲ್ಲಿಬರುವ ಸೀತಿನಿಯನ್ನು ಕಾರವಾರದ ಬಳಿಯಲ್ಲಿ ಕಡಲಲ್ಲಿರುವ ದ್ವೀಪಗಳೆಂದು, ಚರ್ಸೋನಿಸಸ್ ಅನ್ನು

ಕಾರವಾರದ ಬಳಿ ಚಾಚಿಕೊಂಡಿರುವ ಭೂಶಿರ ಎಂದು ಷಾಪರರವರು ಅಭಿಪ್ರಾಯಪಟ್ಟಿದ್ದಾರೆ. ಇದರಿಂದ ಕಾರವಾರ ಬಂದರು ಕಡಲುಗಳ್ಳರ ತಾಣವಾಗಿದ್ದಂತೆ ಕಾಣುತ್ತದೆ. ಈ ಕಡಲುಗಳ್ಳರ ತಂಡ ಎಷ್ಟು ಪ್ರಭಲವಾಗಿತ್ತೆಂದರೆ, ಇಂಡಿಯಾ ಸಮುದ್ರದಲ್ಲಿರುವ ಕಡಲುಗಳ್ಳರ ಹಾವಳಿಯನ್ನು ತಪ್ಪಿಸಿಕೊಳ್ಳಲು ಬಿಲ್ಲಾಳುಗಳ ತಂಡಗಳನ್ನೇ ಹಡಗಿನಲ್ಲಿ ಇಲ್ಲಿಂದ ಕರೆದುಕೊಂಡು ಹೋಗಬೇಕು ಎಂದು ಪ್ಲಿನಿಯು ಹೇಳುತ್ತಾನೆ. ಆದ್ದರಿಂದ ಈ ಪ್ರದೇಶ ಪ್ರಬಲ ಕಡಲುಗಳ್ಳರ ಸ್ಥಳವಾಗಿತ್ತೆಂದು ತಿಳಿಯುತ್ತದೆ.

ಟಾಲಾಮಿಯು[೨೫] ತನ್ನ ಭೂಗೋಳ ವಿಜ್ಞಾನದ ಕೈಪಿಡಿಯಲ್ಲಿ ಭಾರತದ ಅನೇಕ ವಿಚಾರಗಳ ಕುರಿತು ಬರೆದಿದ್ದಾನೆ. ಆತ ಭಾರತದ ಪಶ್ಚಿಮ ಕರಾವಳಿ ಗುಂಟ ಗುರುತಿಸಿದ ಹಲವಾರು ಬಂದರುಗಳು ವ್ಯಾಪಾರಿ ಕೇಂದ್ರಗಳಾಗಿವೆ. ಅದರಲ್ಲಿ ಕೊಂಕಣ ಪ್ರದೇಶದ ಪ್ರಮುಖವಾಗಿರುವ ವ್ಯಾಪಾರಿ ಬಂದರುಗಳನ್ನು ಹೆಸರಿಸುತ್ತಾ ಕಡಲುಗಳ್ಳರನ್ನು ಉಲ್ಲೇಖಿಸಿದ್ದಾನೆ. ಈ ಕಡಲುಗಳ್ಳರು ಕಾರವಾರ ತೀರ ಪ್ರದೇಶದ ಸಮೀಪ ಕಡಲು ದ್ವೀಪಗಳಲ್ಲಿ ಕಾದುಕುಳಿತು ಬೆಲೆಬಾಳುವ ಸಾಮಾನುಗಳೊಂದಿಗೆ ಬರುವ ಹಡಗನ್ನು ದೋಚುತ್ತಿದ್ದಿರಬೇಕು. ಕಾರವಾರದ ಬಂದರಿಗೆ ಇರುವ ನೈಸರ್ಗಿಕ ಕೊಡುಗೆಗಳು ಕಡಲಲ್ಲಿ ದಾರಿ ತಪ್ಪಿದ ಹಡಗುಗಳಿಗೆ ಸುರಕ್ಷಿತವಾಗಿ ಬಂದರು ತಲುಪಿಸುವಂತಿತ್ತು. ಹೀಗಾಗಿ ಕಡಲಲ್ಲಿ ದಾರಿತಪ್ಪಿದ ಹಡಗುಗಳು ಈ ದಿಕ್ಕಿನತ್ತ ಬರುತ್ತಿದ್ದವು. ಲಿಮೀರಿಕೆಯ ಒಳನಾಡಿನಲ್ಲಿ ಬನೌಸೆಯಿಂದ ಪಶ್ಚಿಮಕ್ಕಿರುವ ನಗರಗಳಾವವು ಎಂದರೆ ನರೂಲ್ಲ, 'ಕೂಬ' (ಗೋವಾ) ಮತ್ತು ಪಲ್ಲೂಕ ಎಂದು ಪ್ಲೀನಿ ಹೇಳಿದ್ದಾನೆ ಇಲ್ಲಿ ಕೂಬ ಗೋವಾ ಎನ್ನುವುದಕ್ಕಿಂತಲೂ ಕಾರವಾರ ಬಂದರು ಪ್ರದೇಶ ಎಂದು ಹೇಳಲು ಯಾವ ತೊಂದರೆಯು ಇಲ್ಲ. ಯಾಕೆಂದರೆ ಪುನ್ನಾಟದ ವಸ್ತುಗಳಾದ ಪಚ್ಚೆ, ರತ್ನಗಳನ್ನು ಗ್ರೀಕ್ ವ್ಯಾಪಾರಿಗಳು ಕೊಂಡುಕೊಳ್ಳಲು ಬರುತ್ತಿದ್ದರು. ಅವರಿಗೆ ನೇರವಾದ ಹತ್ತಿರದ ಸುರಕ್ಷಿತ ಮಾರ್ಗವೆಂದರೆ ಕಾರವಾರವಾಗಿತ್ತು. ಹೀಗೆ ವ್ಯಾಪಾರಿ ಉದ್ದೇಶದಿಂದ ಮತ್ತು ಆಕಸ್ಮಿಕವಾಗಿ ದಾರಿತಪ್ಪಿದ ಹಡಗುಗಳಿಗೆ ಕಾರವಾರದ ಬಳಿ ಕಡಲುಗಳ್ಳರ ಉಪಟಳ ಉಂಟಾಗುತ್ತಿತ್ತು. ಈ ಉಪಟಳ ದೊಡ್ಡ ಆಕ್ರಮಣದ ರೀತಿಯಲ್ಲಿಯೇ ನಡೆಯುತ್ತಿದ್ದರಬೇಕು. ಇದನ್ನು ತಿಳಿದಿದ್ದ ವ್ಯಾಪಾರಿಗಳು ಬಿಲ್ಲುಗಾರರ ಸೈನ್ಯ ತೆಗೆದುಕೊಂಡು ಬರುತ್ತಿದ್ದರು. ಇದು ಕೂಡ ಒಂದೆರಡು ಸಂಖ್ಯೆಯದಾಗಿರದೆ ದೊಡ್ಡ ಸೈನ್ಯವೆ ಆಗಿರುತ್ತಿತ್ತು.

ಕಾರವಾರ ಪ್ರದೇಶದ ಕಡಲುಗಳ್ಳರ ಕುರಿತು ಸಂಗಂ ಸಾಹಿತ್ಯದಲ್ಲೂ[೨೬] ಪ್ರಸ್ತಾಪವಿದೆ. ಮೌರ್ಯರ ಕಾಲದಲ್ಲಿ ಈ ಬಂದರೂ ಮೌರ್ಯ ಸಾಮ್ರಾಜ್ಯಕ್ಕೆ ಒಳಪಟ್ಟಿತ್ತು. ಚೇರರು ತಮ್ಮ ನೌಕಾದಳದೊಂದಿಗೆ ಕಾರವಾರದವರೆಗೂ ಬರುತ್ತಿದ್ದರು ಎಂದು ಸಂಗಂ ಸಾಹಿತ್ಯವು ತಿಳಿಸುತ್ತದೆ[೨೭]. ಶಾತವಾಹನರ ಕಾಲದಲ್ಲಿ ಈ ಬಂದರನ್ನು ವ್ಯಾಪಾರಿ ಉದ್ದೇಶಕ್ಕಾಗಿ ಬಳಸಿಕೊಂಡಿದ್ದರು. ಕದಂಬರ ಆರಂಭದ ದಿನಗಳಲ್ಲಿ ಇದು ಕರಾವಳಿ ಮೌರ್ಯರ ಅಧಿನಕ್ಕೆ ಒಳಪಟ್ಟಿತ್ತು. ನಂತರ ಕದಂಬರು ಇದನ್ನು

ಗೆದ್ದುಕೊಂಡರು. ನಂತರ ಚಾಲುಕ್ಯರು, ರಾಷ್ಟ್ರಕೂಟರು ಕಾರವಾರವನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಂಡರು. ನಂತರದ ಗೋವಾ ಕಾದಂಬರು, ಚಂದಾವರ ಕಾದಂಬರು ಈ ಪ್ರದೇಶದಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿಕೊಂಡಿದ್ದರು.

ಈ ಎಲ್ಲಾ ಆಡಳಿತ ಕಾಲದಲ್ಲಿ ಕಾರವಾರ ಬಂದರೂ ಕಡಲೋತ್ತರ ವ್ಯಾಪಾರದ ಮುಕುಟಮಣಿಯಂತ್ತಿತ್ತು. ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಸಂದರ್ಭದಲ್ಲಿ ಬಿಜಾಪುರ ಸುಲ್ತಾನರ ವಶದಲ್ಲಿದ್ದ ಈ ಬಂದರು ಮುಂದೆ ಗೋವಾ ವಿಜಯನಗರಕ್ಕೆ ಸೇರುತ್ತಿದ್ದಂತೆ ವಿಜಯನಗರದ ವಶವಾಗಿತ್ತು.

೨.೨. ಅಂಕೋಲಾ ಬಂದರು

ಕಾರವಾರದಿಂದ ದಕ್ಷಿಣಕ್ಕೆ ಸುಮಾರು ಮೂವತ್ತು ಕಿಲೋ ಮೀಟರ್ ದೂರದಲ್ಲಿ ಅಂಕೋಲಾ ಬಂದರಿದೆ. ಅಂಕೋಲಾ ತಾಲೂಕಾ ಕೇಂದ್ರವಾಗಿದೆ. ಗಂಗಾವಳಿ ನದಿ ಇಲ್ಲಿ ಹರಿಯುವ ದೊಡ್ಡ ನದಿಯಾಗಿದ್ದು, ಮಂಜುಗುಣಿಯ ಬಳಿಯಲ್ಲಿ ಕಡಲು ಸೇರುತ್ತದೆ. ಅಂಕೋಲಾದ ಬಂದರೆಂದರೆ ಬೇಲಿಕೇರಿ. ಬೇಲಿಕೇರಿಯ ಬಂದರು ಈಗ ಮ್ಯಾಂಗನೀಸ್ ಖನಿಜದ ವಿದೇಶಿ ರಫ್ತಿಗಾಗಿ ಹೆಸರು ಮಾಡಿದ್ದು, ಇದರ ಚರಿತ್ರೆ ಕ್ರಿಸ್ತಶಕ ಆರಂಭಕ್ಕೆ ಹೋಗುತ್ತದೆ. ಸಂಗಂ ಕಾಲದಲ್ಲಿ ಚೇರರ ಆಡಳಿತ ವ್ಯಾಪ್ತಿಗೆ ಒಳಪಟ್ಟ ಈ ಪ್ರದೇಶವು ಆದಿಕದಂಬರ ಕಡಲ್ಗಳ್ಳತನದ ಕೇಂದ್ರವಾಗಿತ್ತು ಎಂದು ಸಂಗಮ ಸಾಹಿತ್ಯದಿಂದ ತಿಳಿಯುತ್ತದೆ[೨೮].

ಕದಂಬರು ಬನವಾಸಿಯಲ್ಲಿ ನೆಲೆ ನಿಂತ ಮೇಲೆ ಅಂಕೋಲಾ ಬಂದರಿನಲ್ಲಿ ತಮ್ಮ ಪ್ರಭುತ್ವ ಸಾಧಿಸಿದರು. ಕ್ರಿ.ಶ ೭೫೩ ರಲ್ಲಿ ರಾಷ್ಟ್ರಕೂಟ ದಂತಿದುರ್ಗನು ಈ ಪ್ರದೇಶ ಗೆದ್ದು ಕೊಂಡು ಇಲ್ಲಿಯ ಕಡಲೋತ್ತರ ವ್ಯಾಪಾರಕ್ಕೆ ಬಂದರನ್ನು ಬಳಸಿದನು. ರಾಷ್ಟ್ರಕೂಟರು ತಮ್ಮ ಆಸ್ಥಾನಕ್ಕೆ ಕರೆಸಿಕೊಂಡ ವಿದೇಶಿ ರಾಜತಾಂತ್ರಿಕರನ್ನು ಸ್ವಾಗತಿಸಿದ್ದು ಇದೇ ಬಂದರಿನಲ್ಲಾಗಿರುವ ಸಾಧ್ಯತೆಗಳಿವೆ. ಯಾಕೆಂದರೆ ಉತ್ತರದ ಭೂಮಾರ್ಗವು ಇವರಿಗೆ ಮುಕ್ತವಾಗಿಲ್ಲದ್ದರಿಂದ ಕಡಲು ಮಾರ್ಗವೇ ಅನುಕೂಲವಾಗಿತ್ತು. ಹಾಗೂ ಈ ತೀರ ಪ್ರದೇಶ ಸಂಪೂರ್ಣ ರಾಷ್ಟ್ರಕೂಟರ ವಶದಲ್ಲಿ ಇತ್ತು.

ಜೈನರ ಪ್ರಾಚೀನತೆ ತಿಳಿಸುವ ಹೊನ್ನೆಬೈಲಿನ ಜೈನ್ ಗುಹೆಗಳು, ನಾಥ ಪಂಥದ ಹಾಗೂ ಬೌದ್ಧ ಧರ್ಮದ ಕುರುಹುಗಳಿರುವ ಬಬ್ರುವಾಡ ಇಲ್ಲೇ ಸಮೀಪದಲ್ಲಿವೆ. ಅಂಕೋಲಾದ ಬಂದರಿನ ಮೂಲಕ ಹೋದವರೇ 'ಅಂಕೋರವಾಟ್' ನಿರ್ಮಾಣಕ್ಕೆ ಕಾರಣರಾಗಿದ್ದರೆಂಬ ವಿಚಾರಗಳೂ ಪ್ರಚಲಿತದಲ್ಲಿದ್ದು[೨೯], ಅಂಕೋಲಾ ಎಂಬ ಹಗುರವೂ, ಗಟ್ಟಿಯೂ ಆದಮರವು ಇಲ್ಲಿ ಬೆಳೆಯುತ್ತವೆ. ಆದ್ದರಿಂದ ಈ ಊರಿಗೆ ಅಂಕೋಲಾ ಹೆಸರು ಬಂದಿತ್ತೆಂದು ಹೇಳುತ್ತಾರೆ.

ಭೌಗೋಳಿಕ ಲಕ್ಷಣ

ಅಂಕೋಲಾ ಕಾರವಾರದ ದಕ್ಷಿಣಕ್ಕಿದೆ. ಇದರ ಪೂರ್ವದಲ್ಲಿ ಯಲ್ಲಾಪುರ, ಶಿರ್ಶಿ ತಾಲೂಕುಗಳಿದ್ದರೆ, ದಕ್ಷಿಣದಲ್ಲಿ ಕುಮಟಾ ತಾಲೂಕಿದೆ. ಪಶ್ಚಿಮದಲ್ಲಿ ಅರಬ್ಬೀ ಸಮುದ್ರ ಇದ್ದು, ಪಶ್ಚಿಮ ಘಟ್ಟಗಳು ಉತ್ತರ ದಕ್ಷಿಣವಾಗಿ ಹಬ್ಬಿದೆ. ಈ ಪಶ್ಚಿಮ ಘಟ್ಟಗಳು ತಾಲೂಕಿನಾದ್ಯಂತ ಪಸರಿಸಿದೆ. ತಾಲೂಕಿನ ಒಟ್ಟೂ ಕ್ಷೇತ್ರ ೯೧೭.೬ ಚ.ಕಿ.ಮೀಟರುಗಳು[೨೦]. ಕಡಲತೀರ ಪ್ರದೇಶದಲ್ಲಿ ಸೆಕೆ ಹೆಚ್ಚಿದ್ದರೆ, ಘಟ್ಟಪ್ರದೇಶವು ತಂಪಾಗಿರುತ್ತದೆ. ಅಂಕೋಲಾವು ಮಳೆಗಾಗಿ ಮಾನ್ಸೂನ್ ಮಾರುತವನ್ನು ಅವಲಂಬಿಸಿದೆ. ಡಿಸೆಂಬರ್-ಜನವರಿ ತಿಂಗಳು ಚಳಿಯಿಂದ ಕೂಡಿರುತ್ತದೆ. ಗಂಗಾವಳಿ ಮತ್ತು ಬೇಡ್ತಿ ನದಿಗಳು ತಾಲೂಕಿನ ಪ್ರಮುಖ ನದಿಗಳಾಗಿವೆ. ಅಂಕೋಲಾ ತಾಲೂಕಿನ ಪ್ರಮುಖ ಬಂದರೆಂದರೆ ಬೇಲಿಕೇರಿ. 'ಬೇಲೆ'(ತೀರಪ್ರದೇಶ)ಯ ಊರು-ಬೇಲಿಕೇರಿ ಅಂಕೋಲಾದಲ್ಲಿ ಪಶ್ಚಿಮ ಘಟ್ಟಗಳು ಪದರು ಪದರಾಗಿ, ಉತ್ತರ ದಕ್ಷಿಣವಾಗಿ ಹಬ್ಬಿದ್ದು, ಹಂತ ಹಂತವಾಗಿ ತನ್ನ ಎತ್ತರವನ್ನು ಹಚ್ಚಿಸಿಕೊಳ್ಳುತ್ತಾ ಸಾಗಿವೆ. ಅಂಕೋಲಾದ ಪೂರ್ವದತ್ತ ಈ ದೃಶ್ಯ ಕಂಡುಬರುತ್ತದೆ. ಅಂಕೋಲಾ-ಬೇಲಿಕೇರಿ ಬಂದರಿನ ಬಳಿಯಲ್ಲಿ ಭೂಮಿಯು ಲೆಟರೈಟ್ ಮಣ್ಣಿನಿಂದ ಕೂಡಿದ್ದು ಗಟ್ಟಿಯಾಗಿದೆ. ಈ ಭಾಗದಲ್ಲಿ ಮೈದಾನ ಪ್ರದೇಶವಿದೆ. ಬೋಳು ಗುಡ್ಡದಂತೆ ಚಿಕ್ಕಪುಟ್ಟ ದಿಣ್ಣೆಗಳೂ ಬಂದರಿನಬಳಿಯಲ್ಲಿ ಹಬ್ಬಿವೆ. ಕಡಲತಡಿಯು ಗಟ್ಟಿಯಾದ ಎತ್ತರದ ದಿಣ್ಣೆಗಳಿಂದ ಕೂಡಿದ್ದು ೬-೭ ಮೀಟರ್‌ವರೆಗೆ ನೀರಿನ ಮಟ್ಟವನ್ನು ಕಾಪಾಡಿ ಕೊಳ್ಳುತ್ತದೆ. ಬೇಲಿಕೇರಿ ಬಳಿಯಲ್ಲಿ ಕಡಲಲ್ಲಿ ಮೂರು ದ್ವೀಪಗಳಿವೆ. ಜ್ವಾಲಾಮುಖಿಯಿಂದ ಉಂಟಾದ ಕಡಗಲ್ಲು ಹಾಗೂ ಗಟ್ಟಿ ಮಣ್ಣಿನಿಂದ ನಿರ್ಮಿತ ಈ ದ್ವೀಪಗಳು ಬಂದರುಗಳತ್ತ ಬರುವ ದೊಡ್ಡ ತೆರೆಗಳನ್ನು ತಡೆಯುತ್ತದೆ.

ಪಶ್ಚಿಮ ಘಟ್ಟಗಳು ತೀರ ಪ್ರದೇಶದಿಂದ ಸ್ವಲ್ಪ ದೂರದಲ್ಲಿದ್ದು, ಮಧ್ಯದಲ್ಲಿ ಸ್ಥಳಾವಕಾಶವನ್ನು ಸೃಷ್ಟಿಸಿದೆ. ಪೂರ್ವದತ್ತ, ಉತ್ತರ ದಕ್ಷಿಣವಾಗಿ ಹಬ್ಬಿರುವ ಘಟ್ಟಸಾಲು ನಿತ್ಯಹರಿದ್ವರ್ಣ-ಎಲೆ ಉದುರಿಸುವ ಮರಗಳಿಂದ ತುಂಬಿವೆ. ಈ ಘಟ್ಟಸಾಲುಗಳು ಒಂದು ರೀತಿಯಲ್ಲಿ ಬಂದರಿಗೆ ರಕ್ಷಾಕವಚದಂತೆ ನಿಂತಿವೆ. ಪದರು ಪದರಾಗಿರುವ ಈ ಪರ್ವತ ಸಾಲುಗಳು ಬಂದರುಪ್ರದೇಶವನ್ನು ಕಡಲಗಾಳಿಯ ದಾಳಿ ಹಾಗು ತಾಪಮಾನಗಳಿಂದ ರಕ್ಷಿಸುತ್ತವೆ.

ಅಂಕೋಲಾ ಬಳಿಯ ಪಶ್ಚಿಮ ಘಟ್ಟಸಾಲಿನಲ್ಲಿ ಬೆಲೆಬಾಳುವ ಮರಗಳಾದ ಎಬೋನಿ, ಮತ್ತಿ, ದೇವದಾರು ಮುಂತಾದವುಗಳು, ಮಸಾಲೆ ಸಾಮಗ್ರಿಗಳಾದ ಕಾಳುಮೆಣಸು, ದಾಲ್ಚಿನಿ, ಲವಂಗ ಮುಂತಾದವುಗಳು ಬೆಳೆಯತ್ತವೆ. ಬೇಡ್ತಿ, ಗಂಗಾವಳಿ ನದಿಯ ಕಾಡುಗಳಲ್ಲಿಯ ನವಿಲುಗಳು, ಮಂಗಗಳು ವಿದೇಶದಲ್ಲಿ ಬೆಲೆಬಾಳುತ್ತಿದ್ದವು. ಇವುಗಳ ಸಾಗಾಟಕ್ಕೆ ಬೇಡ್ತಿ-ಗಂಗಾವಳಿ

ನದಿಗಳು ಉಪಯುಕ್ತವಾಗಿದ್ದವು. ಉಳಿದ ಸ್ಥಳಗಳಲ್ಲಿ ಹೇರುಗಳ ಮೂಲಕ ಸರಕು ಸಾಗಾಟ ನಡೆಸಲಾಗುತ್ತಿತ್ತು.

ನದಿಗಳು–ಶಾಲ್ಮಲಾ, ಬೇಡ್ತಿ, ಗಂಗಾವಳಿ

ಅಂಕೋಲಾ ಬಂದರು ಕಾರವಾರದಷ್ಟು ನೈಸರ್ಗಿಕ ಅನುಕೂಲತೆಯನ್ನು ಪಡೆಯದಿದ್ದರೂ, ಸೀಮಿತವಾದ ಕೊಡುಗೆಗಳಿಂದ ಸಹಜ ಬಂದರಾಗಿ ರೂಪಿತಗೊಂಡಿದೆ. ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಅಂಕೋಲಾದಲ್ಲಿ ಹರಿಯುವ ನದಿಗಳು ಈ ಬಂದರಿಗೆ ಅನೇಕ ರೀತಿಯ ಅನುಕೂಲತೆಗಳನ್ನು ಉಂಟುಮಾಡಿದೆ.

ಧಾರವಾಡದ ದಕ್ಷಿಣದ ಸೋಮೇಶ್ವರ ದೇವಾಲಯದ ಬಳಿ ಜನಿಸುವ ಶಾಲ್ಮಲಾ[೩೧] ನದಿಯು ಮುಂದೆ ಹುಬ್ಬಳ್ಳಿ ಬಳಿ ಜನಿಸುವ ಬೇಡ್ತಿಯನ್ನು ಸೇರುತ್ತದೆ. ಕಲಘಟಗಿ ಬಳಿ ಇವುಗಳು ಸಂಧಿಸುತ್ತವೆ. ಮುಂದೆ ಈ ನದಿ ಬೇಡ್ತಿ ಹೆಸರಿನಿಂದಲೇ ಗುರುತಿಸಿ ಕೊಳ್ಳುತ್ತದೆ. ಸಯ್ಯಾದ್ರಿಯಲ್ಲಿ ದಾರಿ ಮಾಡಿಕೊಂಡು ದಕ್ಷಿಣದತ್ತ ಹರಿಯುತ್ತದೆ. ಹಾಗೇ ಈಶಾನ್ಯದತ್ತ ತನ್ನ ಹಾದಿ ಬದಲಾಯಿಸಿಕೊಂಡು, ಅಂಕೋಲಾದ ಬಳಿ ಕಡಲನ್ನು ಸೇರುತ್ತದೆ. ಕಾಳಿನದಿ ಕಾರವಾರದಲ್ಲಿ ಕಡಲು ಸೇರುವ ಸದಾಶಿವಗಡದಿಂದ ದಕ್ಷಿಣದಲ್ಲಿ ೩೨ ಕಿ.ಮೀ ದೂರದಲ್ಲಿ ಈ ಸಂಗಮವಿದೆ. ಅಂಕೋಲಾದ ಪ್ರಸ್ತುತ ನಗರದಿಂದ ೮ ಕಿ.ಮೀ ದೂರದಲ್ಲಿದೆ.

ಶಾಲ್ಮಲಾ ನದಿಯು ಧಾರವಾಡದಿಂದ ಹರಿದು ಬಂದು, ಶಿರಸಿಯ ಸೋಂದಾದ ಬಳಿ ಬಂದಾಗ ಇದನ್ನು ಸೋಂದಾ ಹೊಳೆ ಎಂದು ಕರೆಯುತ್ತಾರೆ. ಘಟ್ಟವನ್ನು ಇಳಿದು ಕರಾವಳಿ ಪ್ರದೇಶ ತಲುಪುತಿದ್ದಂತೆ, ಇದನ್ನು ಗಂಗಾವಳಿಯೆಂದು ಕರೆಯುತ್ತಾರೆ. ಯಲ್ಲಾಪುರದ ಮೆಣಸಿಯ ಬಳಿ ಒಂದು ಚಿಕ್ಕಜಲಪಾತವು ಈ ನದಿಯಿಂದ ಉಂಟಾಗಿದೆ. ಅದನ್ನು ಮಾಗೋಡಪಾಲ್ಸ ಅಥವಾ ಗಣೇಶಪಾಲ್ಸ ಎಂದು ಕರೆಯುತ್ತಾರೆ.

ಮಾಗೋಡಪಾಲ್ಸನಿಂದ ಧುಮ್ಮಿಕ್ಕುವ ಬೇಡ್ತಿಯು, ಅರೆಬೈಲ್ ಬಳಿಯಲ್ಲಿ ಕಣಿವೆಗಳ ಮೂಲಕ ಹರಿದು ಬರುತ್ತದೆ. ಕರಾವಳಿ ಪ್ರದೇಶದಲ್ಲಿ ತನ್ನ ಹೆಸರನ್ನು ಗಂಗಾವಳಿಎಂದು ಪಡೆದುಕೊಂಡು, ೬೧ ಕಿ.ಮೀ ಹರಿದು ಮಂಜುಗುಣಿಬಳಿಯ ಗಂಗಾವಳಿ ಊರಿನ ಹತ್ತಿರ ಕಡಲನ್ನು ಸೇರುತ್ತದೆ. ಇದು ಉತ್ತರ ಕನ್ನಡ ಜಿಲ್ಲೆಯಲ್ಲಿ ಒಟ್ಟು ೧೬೮ ಕಿ.ಮೀ ಹರಿಯುತ್ತದೆ. ಗಂಗಾವಳಿ–ಬೇಡ್ತಿ–ಶಾಲ್ಮಲಾ ನದಿಗೆ ಬಂದು ಸೇರುವ ಉಪನದಿಗಳು, ತೊರೆಗಳು ಅತಿ ಕಡಿಮೆ. ಈ ನದಿಯು ಪಶ್ಚಿಮ ಘಟ್ಟದಲ್ಲಿ ಹರಿದು ಬರುವಾಗ ಉಂಟಾಗಿರುವ ಕೊರಕಲು–ಕಣಿವೆಯು ನೈಸರ್ಗಿಕ ವನೋತ್ಪನ್ನಗಳ ಗಣಿಯಾಗಿದೆ. ಗಂಗಾವಳಿಯಲ್ಲಿ ನದಿ ತೀರದಿಂದ ಒಳನಾಡಿಗೆ

೨೦ಕಿ.ಮೀ ನೌಕಾಯಾನ ಕೈಗೊಳ್ಳಬಹುದು. ಕಾಳಿನದಿ ಕಾರವಾರ ಬಂದರಿಗೆ ನೀಡಿದ ಸೌಲಭ್ಯವನ್ನು ಬೇಡ್ತಿ-ಗಂಗಾವಳಿ ನದಿಗಳು ಅಂಕೋಲಾ ಬಂದರಿಗೆ ನೀಡಿವೆ.

ಅಂಕೋಲಾದ ಬಳಿಯಲ್ಲಿ ಅಂಕೋಲಾ ಎಂಬ ನದಿಯಿದೆ. ಇದರ ಪೂರ್ವ ಭಾಗವನ್ನು ಶಂಕದಹೊಳೆ ಎನ್ನುತ್ತಾರೆ. ಇದರ ಬಳಿಯಲ್ಲಿಯೇ ಬೇಲಿಕೇರಿ ನದಿ ಹರಿಯುತ್ತದೆ. ಇವುಗಳೊಂದಿಗೆ ಗಂಗಾವಳಿ ನದಿಯು ತನ್ನ ಪಾತ್ರವನ್ನು ವಿಸ್ತರಿಸಿಕೊಂಡು ಕಡಲನ್ನು ಸೇರುತ್ತದೆ. ಈ ಪ್ರದೇಶದಲ್ಲಿ ವಿಸ್ತಾರವಾದ ಅಳಿವೆ ಉಂಟಾಗಿದೆ. ಇದರ ಮೂಲಕ ಕಡಲೆಡೆಯಿಂದಬಂದ ಹಡಗುಗಳು ಒಳಪ್ರವೇಶಿಸುತ್ತವೆ. ಗಂಗಾವಳಿನದಿಯ ಮೂಲಕ ಬರುವ ಹೂಳು, ಮರಳು ಅಳಿವೆಯಲ್ಲಿ ಸಂಗ್ರಹಗೊಂಡು ಹಡಗುಗಳನ್ನು ಲಂಗರು ಮಾಡಲು ಹಾಗೂ ನೌಕಾಯಾನಕ್ಕೆ ತೊಂದರೆ ಉಂಟುಮಾಡುತ್ತದೆ.

ಪರ್ವತಗಳು

ಅಂಕೋಲಾದಲ್ಲಿ ಹಬ್ಬಿರುವ ಪಶ್ಚಿಮಘಟ್ಟ ಸಾಲುಗಳಲ್ಲಿ ಅರೇಬೈಲ್ ಘಾಟಿ ಪ್ರಖ್ಯಾತವಾದದ್ದು. ೧೪೦೦
ರಿಂದ ೨೪೦೦ ಮೀಟರ್ ಎತ್ತರದವರೆಗೆ ಹಬ್ಬಿರುವ ಇಲ್ಲಿಯ ಪರ್ವತ ಸಾಲುಗಳಲ್ಲಿ, ಗಂಗಾವಳಿ-ಬೇಡ್ತಿ ನದಿ ಕಣವೆಯ ಪಕ್ಕದಲ್ಲಿ ಈ ಅರೇಬೈಲ್ ಘಾಟಿಯಿದೆ. ಇದು ಘಟ್ಟದಪ್ರದೇಶಕ್ಕೆ ಸಂಪರ್ಕಕಲ್ಪಿಸುವ ಉತ್ತಮ ರಸ್ತೆ ಮಾರ್ಗವಾಗಿದೆ.

ಚಕ್ಕಡಿಹೇರುಗಳ ಮೂಲಕ ಹಿನ್ನಾಡನ್ನು ತಲುಪಲು ಪ್ರಾಚೀನ ಕಾಲದ ವ್ಯಾಪಾರಿಗಳು ಈ ಮಾರ್ಗವನ್ನು ಬಳಸಿಕೊಳ್ಳುತ್ತಿದ್ದರು. ಈ ಮಾರ್ಗದ ಬದಿಯಲ್ಲಿರುವ ಕಣಿವೆ ಉತ್ತಮ ಮಸಾಲೆ ಸಾಮಗ್ರಿಗಳ ನೈಸರ್ಗಿಕ ಮಳಿಗೆಯಂತಿದೆ. ಇಲ್ಲಿಯ ನದಿಗಳ ಮೂಲಕ ನೌಕೆಗಳಲ್ಲಿ ವನೋತ್ಪನ್ನಗಳನ್ನು ಬಂದರಿಗೆ ತಲುಪಿಸುವುದು ಸುಲಭವಾಗಿತ್ತು.

ಬಂದರಿನ ಉಪಯುಕ್ತತೆ

ಬೇಲಿಕೇರಿಬಂದರು ಸದಾ ೪ ರಿಂದ ೬ ಮೀಟರ್ ನೀರನ್ನು ಹೊಂದಿರುವುದ್ದರಿಂದ ಮಧ್ಯಮ ಗಾತ್ರದ ಸರಕು ತುಂಬಿದ ಹಡಗುಗಳನ್ನು ಇಲ್ಲಿ ಲಂಗರು ಮಾಡಬಹುದಾಗಿತ್ತು. ಕಾರವಾರ ಬಂದರಿನಲ್ಲಿ ಉಂಟಾಗುತ್ತಿದ್ದ ವ್ಯಾಪಾರಿ ಹಡಗುಗಳ ಒತ್ತಡ ಕಡಿಮೆ ಮಾಡಿಕೊಳ್ಳಲು ಬೇಲಿಕೇರಿ ಬಂದರು ಸಹಾಯಕವಾಗಿತ್ತು.

ಬೇಲಿಕೇರಿ ಬಂದರಿನ ಆಸುಪಾಸಿನಲ್ಲಿ ವಿಶಾಲವಾದ ಗಟ್ಟಿ ನೆಲವಿದ್ದುದ್ದರಿಂದ ಸರಕುಗಳನ್ನು ಸಂಗ್ರಹಿಸಿಸಲು ಮತ್ತು ಹಡಗುಗಳಿಗೆ ತುಂಬಲು ಉಪಯುಕ್ತವಾಗಿತ್ತು. ಗಂಗಾವಳಿ ನದಿಯು

ಕಡಲನ್ನು ಸೇರುವಲ್ಲಿ ಉಂಟಾಗಿದ್ದ ಕೊಲ್ಲಿಯಲ್ಲಿ ಹಡಗುಗಳನ್ನು ಸುರಕ್ಷಿತವಾಗಿ ಲಂಗರು ಮಾಡಬಹುದಾಗಿತ್ತು.

ಕಾರವಾರದಿಂದ ದಕ್ಷಿಣಕ್ಕೆ ಕೇವಲ ೩೨ ಕಿ.ಮೀ. ದೂರದಲ್ಲಿ ಈ ಬಂದರಿರುವದರಿಂದ ಇದುಕೂಡಾ ಹಿಪ್ಪಲಸ್ ಮಾರುತಗಳ ಸಹಾಯದಿಂದ ಪಶ್ಚಿಮ ಏಷ್ಯಾ ಹಾಗೂ ಆಫ್ರಿಕಾ ಮತ್ತು ಮೆಡಿಟರೆನಿಯನ್ ದೇಶಗಳೊಡನೆ ನೇರ ಸಂಪರ್ಕ ಹೊಂದುತ್ತಿತ್ತು.

ಅಂಕೋಲಾ ಬಂದರಿಗೆ ಕಾರವಾರ ಬಂದರಿಗಿದ್ದ ಪ್ರದೇಶಗಳೇ ಹಿನ್ನಾಡಾಗಿತ್ತು. ಆಂಧ್ರಪ್ರದೇಶದ ಅನಂತಪುರಂ, ತಮಿಳುನಾಡಿನ ಪೂರ್ವ ಕರಾವಳಿ ಬಂದರುಗಳು, ಸೊಲ್ಲಾಪುರ, ಕೊಲ್ಲಾಪುರದವರೆಗಿನ ಪ್ರದೇಶಗಳು ಇದರ ಹಿನ್ನಾಡಾಗಿದ್ದವು. ಹತ್ತಿ, ಕಬ್ಬು, ಹತ್ತಿಬಟ್ಟೆ, ಅಕ್ಕಿ ಹಾಗೂ ಮರಮಟ್ಟು, ವನಸ್ಪತಿ, ಉತ್ಪನ್ನಗಳನ್ನು ಈ ಬಂದರಿನ ಮೂಲಕ ನಿರ್ಯಾತ ಮಾಡಲಾಗುತ್ತಿತ್ತು.

ಅಂಕೋಲಾ ಬಂದರಿನ ಇನ್ನೊಂದು ವೈಶಿಷ್ಟ್ಯವೆಂದರೆ ತೀರದ ಬಳಿಯಲ್ಲಿ ಬಂಡೆಗಲ್ಲುಗಳಿಲ್ಲದಿರುವುದು. ಹೀಗಾಗಿ ಹಗಲು ರಾತ್ರಿಯೆನ್ನದೇ ಹಡಗುಗಳು ತೀರವನ್ನು ತಲುಪಬಹುದಾಗಿತ್ತು. ಸನ್ ೨೦೧೩ರ ಕೇಂದ್ರ ರೇಲ್ವೆ ಬಜೆಟ್ ಮಂಡನೆಯಾದಾಗ, ಸ್ಥಳೀಯ ಸಂಘ ಸಂಸ್ಥೆಗಳು, ಹಾಗೂ ಅನೇಕ ರಾಜಕೀಯ ಮುಖಂಡರು ಹುಬ್ಬಳ್ಳಿ-ಅಂಕೋಲಾ ರೈಲು ಮಾರ್ಗಕ್ಕೆ ಒಪ್ಪಿಗೆ ದೊರೆಯದ್ದರಿಂದ ಬೇಸತ್ತು ಪರಿಸರಕ್ಕೆ ಹಾನಿಯಾಗದಂತೆ ರೇಲ್ವೆ ಹಳಿ ಜೋಡಿಸಬಹುದೆಂದು ಬೇಡಿಕೆ ಇಟ್ಟಿದ್ದರು. ಅವರು ಈಗಿನ ರಸ್ತೆ ಮಾರ್ಗದ ಪಕ್ಕದಲ್ಲೇ ಅರಣ್ಯ ನಾಶ ಮಾಡದೇ ರೈಲು ಮಾರ್ಗ ಕಲ್ಪಿಸಬಹುದೆಂದು ಹೇಳಿದ್ದಾರೆ[೩೨]. ಅಂದರೆ ಈ ಕಣಿವೆ ಮಾರ್ಗವು ಅಷ್ಟೊಂದು ಸರಳ ಹಾಗೂ ಪ್ರಯಾಣಕ್ಕೆ ಸುಲಭದಾಗಿದೆ. ಬೇಲಿಕೇರಿ ಬಂದರಿನಿಂದ ಹಿನ್ನಾಡಿಗೆ ಸಂಪರ್ಕ ಪಡೆಯಲು ಉತ್ತಮವಾದ ಮಾರ್ಗವಿತ್ತು. ಅರೇಬೈಲ್ ಮಾರ್ಗ ಹುಬ್ಬಳ್ಳಿ, ಅಲ್ಲಿಂದ ಮುಂದೆ ಗುಲ್ಬರ್ಗಾ, ಹೊಸಪೇಟೆ ಹಾಗೂ ಉತ್ತರದ ಹಿನ್ನಾಡಿಗೆ ಹೋಗಲು ಸಂಪರ್ಕ ಕಲ್ಪಿಸುತ್ತಿತ್ತು.

ಅಂಕೋಲಾ ಬಂದರಿನ ಬೆಳವಣಿಗೆ

ಬನವಾಸಿಯಲ್ಲಿ ಕದಂಬರ ಸ್ವಾತಂತ್ರ ಸಾಮ್ರಾಜ್ಯ ಸ್ಥಾಪಿತವಾಗುತ್ತಿದ್ದಂತೆ ಉತ್ತರ ಕನ್ನಡದ ಕರಾವಳಿ ಅವರ ರಾಜ್ಯದ ಭಾಗವಾಯಿತು. ಆದಿಕದಂಬರ ಕಾಲದಲ್ಲಿ ಕಡಲು ಅವರ ಪ್ರಮುಖ ಆರ್ಥಿಕಮೂಲದ ಕೇಂದ್ರವಾಗಿತ್ತು. ಸಂಗಮ್ ಸಾಹಿತ್ಯದಲ್ಲಿ ಉಲ್ಲೇಖಗೊಳ್ಳುವ ಕಡಲ್ಗಳ್ಳರು ಆದಿಕದಂಬರೆಂದು ಹಲವು ಚರಿತ್ರಕಾರರು ಗುರುತಿಸಿದ್ದಾರೆ. ಕದಂಬರತರುವಾಯ ಆಳಿದ ಕರ್ನಾಟಕದ ಎಲ್ಲಾ ಪ್ರಮುಖ ರಾಜವಂಶಗಳು ಕಾರವಾರದಂತೆ ಅಂಕೋಲಾ ಪ್ರದೇಶವನ್ನು ತಮ್ಮ ಆಡಳಿತದಲ್ಲಿ ಸೇರಿಸಿಕೊಂಡಿದ್ದರು. ಕಾರವಾರ ಬಂದರಿನಂತೆ ಅಂಕೋಲಾವನ್ನು ವ್ಯಾಪಾರ

ವ್ಯವಹಾರಗಳಿಗಾಗಿ ಬಳಸಿಕೊಂಡಿದ್ದರು. ಕಾರವಾರ ಬಂದರಿನ ಮೇಲೆ ಉಂಟಾಗುತ್ತಿದ್ದ ವ್ಯಾಪಾರಿ ಭಾರವನ್ನು, ಸಾಮಗ್ರಿಗಳ ಸಂಗ್ರಹದ ಹೊರೆಯನ್ನು ಕಡಿಮೆ ಮಾಡಲು ಅಂಕೋಲಾ ಬಂದರು ಉಪಯುಕ್ತವಾಗಿತ್ತು. ಅಲ್ಲದೇ ಕಾರವಾರ ಬಂದರಿನಂತೆ ಇದರ ಹಿನ್ನಾಡು ಘಟ್ಟಪ್ರದೇಶದ ಮೇಲ್ಭಾಗದಲ್ಲಿದ್ದವು. ಆದರೆ ಕಾರವಾರಕ್ಕಿಂತ ಸಮೀಪವಾದ ಸಂಪರ್ಕ ಮಾರ್ಗ ಇದಕ್ಕಿದೆ. ಅರೈಬೈಲ್ ಘಟ್ಟ ರಸ್ತೆ ಇದಕ್ಕೆ ವರವಾಗಿ ಪರಿಣಮಿಸಿತ್ತು.

ಕನ್ನಡ ಕರಾವಳಿಯ ಪ್ರದೇಶವನ್ನು ಬಳಸಿಕೊಂಡು ಬಾದಮಿ ಚಾಲುಕ್ಯರು, 'ರಿಡಿ' ದ್ವೀಪವನ್ನು ಗೆದ್ದರು. ಹೀಗೆ ರಿಡಿ ದ್ವೀಪ ತಲುಪಲು ಅವರು ಬಳಸಿದದಾರಿ ಅರಬ್ಬಿ ಸಮುದ್ರಮಾರ್ಗ. ಮುಂದೆ ರಾಷ್ಟ್ರಕೂಟ, ಹೊಯ್ಸಳರ ಅವಧಿಯಲ್ಲೂ ಕನ್ನಡ ಕರಾವಳಿಯು ಸಮೃದ್ಧ ವ್ಯಾಪಾರಿ ಕೇಂದ್ರವಾಗಿತ್ತು.

ಚಾಲುಕ್ಯವಿಕ್ರಮಾದಿತ್ಯನ ಕಾಲದಲ್ಲಿ ಗುಜರಾತ್‌ನಲ್ಲಿ ಚಾಲುಕ್ಯರ ಆಡಳಿತ ಆರಂಭವಾಗಿತ್ತು. ಗುಜರಾತ್ ಅವರಿಗೆ ಸೆಳೆದದ್ದೇ ವ್ಯಾಪಾರದಿಂದ ಗುಜರಾತ್‌ನ ಕೊಲ್ಲಿಗಳು ಅರಬ್ಬ–ಪರ್ಶಿಯಾದ ವ್ಯಾಪಾರಿಗಳ ಕೇಂದ್ರವಾಗಿದ್ದವು. ಗುಜರಾತಿನಲ್ಲಿ ಬೆಳೆಯುತ್ತಿದ್ದ ಮರಗಳು ವ್ಯಾಪಾರದ ಮುಖ್ಯ ಸರಕ್ಕಾಗಿದ್ದವು. ಅಲ್ಲಿ ಮಾರಾಟಕ್ಕೆ ಬರುತ್ತಿದ್ದ ಮರಗಳಿಗೆ ಅಂಕೋಲಾದ ಬಂದರೂ ಕೂಡಾ ಒಂದು ಮಾರ್ಗವಾಗಿತ್ತು. ಗಂಗಾವಳಿಯ ಕೊಳ್ಳ ಉತ್ತಮ ತೇಗಕ್ಕೆ ಹೆಸರಾಗಿದೆ. ಅಲ್ಲಿಂದ ಸಾಗಾಟವು ಸುಲಭವಾಗಿತ್ತು.

ಅಂಕೋಲಾ ಬಂದರು ಚಾಲುಕ್ಯರ ಕಾಲದಲ್ಲಿ ಬನವಾಸಿಯಲ್ಲಿ ನಡೆಯುತ್ತಿದ್ದ ವ್ಯಾಪಾರಕ್ಕೆ ಸಹಾಯಕವಾಗಿತ್ತು. ರಾಷ್ಟ್ರಕೂಟರ ಕಾಲದಲ್ಲಿ ಅಂಕೋಲಾ ಅವರ ವಶವಾಗಿತ್ತು. ಕರ್ನಾಟಕದ ಉತ್ತರ ಕರಾವಳಿ ಹಿಂದೆ ಚಾಲುಕ್ಯರ ಕೈಯಲ್ಲಿದ್ದಂತೆ ಈಗ ರಾಷ್ಟ್ರಕೂಟರ ವಶವಾಯಿತು. ಈ ಸಂದರ್ಭದಲ್ಲಿ ಈ ಬಂದರು ಪ್ರದೇಶಗಳೆಲ್ಲಾ ಉತ್ತಮ ವ್ಯಾಪಾರಿ ಕೇಂದ್ರಗಳಾಗಿದ್ದವು.

ಇದೇ ಕಾಲದಲ್ಲಿ ಪಲ್ಲವರ ಸ್ಥಳೀಯ ಶಾಖೆ ಒಂದು ಕರ್ನಾಟಕದ ಉತ್ತರ ಕರಾವಳಿಯಲ್ಲಿ ಆಡಳಿತ ನಡೆಸುತ್ತಿದ್ದ ಬಗ್ಗೆ ತಿಳಿಯುತ್ತದೆ. ಹೊನ್ನಾವರ ಬಳಿಯ ಹಳದೀಪುರದಲ್ಲಿ ದೊರೆತಿರುವ ತಾಮ್ರಶಾಸನವು ಶ್ರೀಪ್ರಥ್ವೀವಲ್ಲಭಪಲ್ಲವಗೋಪಾಲದೇವ ಎಂಬ ಅರಸನನ್ನು ಹೆಸರಿಸುತ್ತದೆ. ಆತ ಚಾಲುಕ್ಯರ ಆಶ್ರಿತನಾಗಿ ಈ ಪ್ರದೇಶದಲ್ಲಿ ಆಳುತ್ತಿದ್ದ ಎಂದು ತಿಳಿಯಲಾಗಿದೆ.

ರಾಷ್ಟ್ರಕೂಟರ ವೈಭವದ ಬೃಹತ್ ಸಾಮ್ರಾಜ್ಯಕ್ಕೆ ಕಡಲ ವ್ಯಾಪಾರ ಬಹುತರದ ಸಹಾಯ ಮಾಡಿತ್ತು. ಅರಬ್ಬೀ ವ್ಯಾಪಾರಿಗಳಿಗೆ ರಾಷ್ಟ್ರಕೂಟರ ಸಾಮ್ರಾಜ್ಯ ತಲುಪಲು ಇದ್ದ ಹತ್ತಿರದಕಡಲಮಾರ್ಗ ಕರ್ನಾಟಕದ ಉತ್ತರದ ಬಂದರುಗಳಾಗಿದ್ದವು. ಹಾಗಾಗಿ ಅಂಕೋಲಾ ಬಂದರೂ ಕೂಡಾ ಇವರ ವ್ಯಾಪಾರದ ಪ್ರಮುಖ ಕೇಂದ್ರವಾಗಿತ್ತು. ಕಡಲ ತಡಿಯಿಂದ ತಮ್ಮ

ವಸ್ತುಗಳನ್ನು ರಾಜ್ಯದ ವಿವಿಧ ಪ್ರದೇಶಗಳಿಗೆಸಾಗಿಸಲು ಹೇರು, ಚಕ್ಕಡಿ ಇತ್ಯಾದಿ ಮಾರ್ಗ ಅನುಸರಿಸುತ್ತಿದ್ದರು. ಇಂಥಹ ಮಾರ್ಗಗಳಿಗೆ ಬೇಲಿಕೇರಿ ಬಂದರು ಹೆಸರುವಾಸಿಯಾಗಿದೆ. ೧೦-೧೫ ಕಿ.ಮಿ ಪೂರ್ವದತ್ತ ಚಲಿಸಿದರೆ ಸುರಕ್ಷಿತವೂ, ನೇರವೂಆದ ಅರೆಬೈಲ್ ಕಣಿವೆಮಾರ್ಗ ಇವರನ್ನು ಘಟಕ್ಕೆ, ರಾಷ್ಟ್ರಕೂಟರ ಪ್ರಮುಖ ನಗರಗಳಿಗೆ ತಲುಪಿಸುತ್ತಿದ್ದವು.

ಕಾರವಾರ ಬಂದರಿಗೆ ಹೆಚ್ಚಾದ ಅಥವಾ ಕಾರವಾರ ಬಂದರು ಹಡಗುಗಳಿಂದ ತುಂಬಿದ್ದ ಸಂದರ್ಭದಲ್ಲಿ ಅಂಕೋಲಾ ಬಂದರು ತುಂಬಾ ಉಪಯುಕ್ತವಾಗಿತ್ತು. ವ್ಯಾಪಾರಿಗಳು ಈ ಸುರಕ್ಷಿತ ಮತ್ತು ಹತ್ತಿರದ ಬಂದರನ್ನೆ ಹೆಚ್ಚಾಗಿ ಉಪಯೋಗಿಸುತ್ತಿದ್ದರು. ನಂತರ ಮತ್ತೆ ಅಧಿಕಾರಕ್ಕೆ ಬಂದ ಚಾಲುಕ್ಯರ (ಕಲ್ಯಾಣಿ) ೬ನೆಯ ವಿಕ್ರಮಾದಿತ್ಯನು ಗೋವಾ ಕದಂಬರೊಂದಿಗೆ ಮೈತ್ರಿಯಿಂದಿದ್ದನು. ಇದೇ ಸಂದರ್ಭದಲ್ಲಿ ಚಾಲುಕ್ಯರ ರಾಜ್ಯದಲ್ಲಿ ಕಾಣಬರುವ ವ್ಯಾಪಾರಿವೃತ್ತಿ ಸಂಘಗಳು ಕಡಲವ್ಯಾಪಾರದಲ್ಲಿ ದೊಡ್ಡ ಪ್ರಮಾಣದಲ್ಲಿ ಭಾಗಿಗಳಾಗಿದ್ದವು.

ಹತ್ತನೇ ಶತಮಾನದಿಂದ ಹದಿಮೂರನೆ ಶತಮಾನದವರೆಗೆ ಅಂಕೋಲಾದ ಹಳ್ಳಿಗಳು ಹಾಗೂ ಗಂಗಾವಳಿ ನದಿಯ ಇಕ್ಕೆಲಗಳು ವಿವಿಧ ಆಡಳಿತ ವಿಭಾಗಗಳಲ್ಲಿ ಹಂಚಿಹೋಗಿದ್ದವು. ಪಲಸಿಗೆ ಪನ್ನಿರ್ಚ್ಛಾಸಿರದಲ್ಲಿ ಗಂಗಾವಳಿಯ ಉತ್ತರದ ೬೦ ಹಳ್ಳಿಗಳು, ಹೈವೆಯ್ಯೆನೂರರಲ್ಲಿ ಗಂಗಾವಳಿಯ ದಕ್ಷಿಣಕ್ಕಿದ್ದ ೪೮ ಹಳ್ಳಿಗಳು, ಸಮಾವೇಶಗೊಂಡಿದ್ದವು. ಕೊಂಕಣ ಒಂಬೈನೂರರಲ್ಲಿ ಗಂಗಾವಳಿಯ ಉತ್ತರದ ೪೮ ಹಳ್ಳಿಗಳು, ಬನವಾಸಿಪನ್ನಿರ್ಚ್ಛಾಸಿರದಲ್ಲಿ ಗಂಗಾವಳಿಯ ದಕ್ಷಿಣದ ಸುಮಾರು ೪೩ ಹಳ್ಳಿಗಳು ಸೇರಿಕೊಂಡಿದ್ದವು[೩೩]. ಈ ಕಾಲಾವಧಿಯು ಕರ್ನಾಟಕದಲ್ಲಿ ಪ್ರಬಲ ರಾಜವಂಶಗಳ ವೈಭವದ ಆಡಳಿತದ ಕಾಲಾವಧಿಯಾಗಿವೆ. ಈ ಸಂದರ್ಭದಲ್ಲಿ ಈ ಪ್ರದೇಶಗಳು ನೇರವಾಗಿ ಅಥವಾ ಆ ಕಾಲದ ಪ್ರಬಲರಾಜಾಶ್ರಿತರ ಆಡಳಿತಕ್ಕೆ ಒಳಪಟ್ಟಿತ್ತು. ಈ ಎಲ್ಲಾ ಅವಧಿಯಲ್ಲಿ ಕರ್ನಾಟಕದ ಬಂದರುಗಳು ಆರ್ಥಿಕ ಚಟುವಟಿಕೆಯಲ್ಲಿ ತೊಡಗಿದ್ದವು. ಅಂತೆಯೆ ಅಂಕೋಲಾದ ಬಂದರು ಈ ಚಟುವಟಿಕೆಯಲ್ಲಿ ಭಾಗಿಯಾಗಿತ್ತು.

ಅಂಕೋಲಾ ಜೈನಧರ್ಮದ ಪ್ರಬಲ ಕೇಂದ್ರವಾಗಿತ್ತು. ಜೈನರು ವ್ಯಾಪಾರ ವ್ಯವಹಾರದಲ್ಲಿ ತೊಡಗಿದ್ದ ಜನಾಂಗ. ಅಂಕೋಲೆಯ ಹತ್ತಿರದ ಹೊನ್ನೇಬೈಲಿನಲ್ಲಿ ಜೈನರ ಗುಹೆಗಳು ಸಿಕ್ಕಿವೆ. "ಜೈನ್‌ಬೀರ" ಎಂಬುದು ಮಂಜುಗುಣಿ ಹಾಗೂ ಬೇಲೆಕೇರಿ ಹಳ್ಳಿಗಳಲ್ಲಿ ಗ್ರಾಮ ದೇವರಾಗಿದ್ದಾರೆ. ಇವುಗಳು ಅಂಕೋಲಾ ಪ್ರಬಲ ವ್ಯಾಪಾರಿ ಕೇಂದ್ರವಾಗಿದ್ದನ್ನು ಸೂಚಿಸುತ್ತದೆ. ಹಾಗೇ ಅಂಕೋಲಾದ ಸುತ್ತಲಿನ ಹಳ್ಳಿಗಳ ಹೆಸರುಗಳೂ ಪ್ರಾಚೀನ ಕಾಲದಲ್ಲಿ ಅಂಕೋಲಾದ ಮೂಲಕ ವ್ಯಾಪರ ವ್ಯವಹಾರ ನಡೆಯುತ್ತಿದ್ದುದ್ದನ್ನೂ ಸೂಚಿಸುತ್ತವೆ. ಉದಾ: ಸುಂಕಸಾಳ, ಹೊನ್ನೆಬೈಲು ಮುಂತಾದವು.

ವಿಜಯನಗರದ ಆಡಳಿತದ ಆರಂಭದಿಂದಲೇ ಅಂಕೋಲಾ ಪ್ರಮುಖ ಬಂದರಾಗಿತ್ತು. ಅರಬ್ಬರು ಈ ಬಂದರಿನ ಮೂಲಕ ವಿಜಯನಗರದರಸರಿಗೆ ಬೇಕಿದ್ದ ಕುದುರೆ ಇತ್ಯಾದಿಗಳನ್ನೂ ಈ ಮಾರ್ಗವಾಗಿಯೂ ತರುತ್ತಿದ್ದರು. ಹಾಗೇ ಮುಂದೆ ಈ ಬಂದರೊಂದು ಪ್ರಮುಖ ವ್ಯಾಪರಿ ಸರಕುಗಳನ್ನು ಸಾಗಿಸುವ ಕೇಂದ್ರವಾಗಿ ಪರಿವರ್ತನೆ ಹೊಂದಿತ್ತು.

೨.೩. ಕುಮಟಾ ಬಂದರು

ಅಂಕೋಲಾದಿಂದ ೪೦ ಕಿ.ಮೀ ದಕ್ಷಿಣದಲ್ಲಿ ಕುಮಟಾ ತಾಲೂಕು ಇದೆ. ಕುಮಟಾ ಪ್ರಾಚೀನ ಕಾಲದಿಂದಲೂ ಕಡಲೋತ್ತರ ವ್ಯಾಪಾರದಲ್ಲಿ ಪ್ರಖ್ಯಾತವಾಗಿದ್ದ ಬಂದರು. ಇಲ್ಲಿಂದ ನಿರ್ಯಾತವಾಗುತ್ತಿದ್ದ ಹತ್ತಿ ಮಧ್ಯಕಾಲೀನ ಯುರೋಪಿನ ಆರ್ಥಿಕತೆಯನ್ನು ರೂಪಿಸಿತ್ತು. ಇಂದಿಗೂ ಲಂಡನ್ ಪಟ್ಟಣದ ಒಂದು ಪೇಟೆ ಕಾಟನ್ ಮಾರ್ಕೇಟ್ ಅಥವಾ ಕುಮಟಾ ಮಾರ್ಕೇಟ್ ಎಂದು ಕರೆಯಲ್ಪಡುತ್ತಿದೆ.

ಭೌಗೋಳಿಕ ಲಕ್ಷಣ

ಕುಮಟಾದ ಉತ್ತರದಲ್ಲಿ ಅಂಕೋಲಾ ತಾಲ್ಲೂಕು, ದಕ್ಷಿಣದಲ್ಲಿ ಹೊನ್ನಾವರ ತಾಲ್ಲೂಕು ಪೂರ್ವದಲ್ಲಿ ಶಿರ್ಶಿ ಮತ್ತು ಸಿದ್ಧಾಪುರ ತಾಲ್ಲೂಕುಗಳಿವೆ. ಪಶ್ಚಿಮದಲ್ಲಿ ಅರಬ್ಬೀಸಮುದ್ರವಿದೆ. ಪೂರ್ವದಲ್ಲಿ ಉತ್ತರ ದಕ್ಷಿಣವಾಗಿ ಸಹ್ಯಾದ್ರಿ ಪರ್ವತಗಳು ಹಬ್ಬಿವೆ. ಈ ಪರ್ವತ ಶ್ರೇಣಿಯ ಉದ್ದಕ್ಕೂ ಪೂರ್ವದಿಂದ ಪಶ್ಚಿಮದಲ್ಲಿ ಅಲ್ಲಲ್ಲಿ ಕಣಿವೆಗಳು ಉಂಟಾಗಿವೆ. ಈ ಇಳಿಜಾರಿನಲ್ಲಿ ನಿರ್ಮಿತವಾಗಿರುವ ರಸ್ತೆಮಾರ್ಗವು ಬಂದರನ್ನು ಹಾಗೂ ಘಟ್ಟ ಪ್ರದೇಶವನ್ನು ಸಂಪರ್ಕಿಸುತ್ತದೆ.

ಕುಮಟಾ ಬಂದರಿಗೆ ನಿಸರ್ಗ ನೀಡಿದ ಬಹುದೊಡ್ಡ ಕೊಡುಗೆ ಎಂದರೆ ಈ ಪಶ್ಚಿಮ ಘಟ್ಟಗಳು. ಕುಮಟಾ ಬಂದರು ಅಘನಾಶಿನಿ ನದಿಯ ಸಣ್ಣ ತೊರೆಯೊಂದು ಕಡಲು ಸೇರುವಲ್ಲಿ ನಿರ್ಮಾಣಗೊಂಡಿದೆ. ಇಂದು ವನ್ನಳ್ಳಿ ಎಂದು ಕರೆಯಲ್ಪಡುವ ಈ ಸ್ಥಳವು ಹಿಂದೆ ಹೊನ್ನಹಳ್ಳಿಯಾಗಿತ್ತು. ಬಂದರು ಮೂಲಕ ನಡೆಯುವ ಭಾರಿ ವ್ಯಾಪಾರ ಮತ್ತು ಲಾಭ ಈ ಸ್ಥಳಕ್ಕೆ ಆ ಹೆಸರನ್ನು ತಂದಿತ್ತು. ಕುಮಟಾ ಬಂದರಿನ ಮುಖಜ ಭೂಮಿಯ ಎಡಭಾಗವು (ದಕ್ಷಿಣ ಭಾಗ) ಹೆಚ್ಚು ಎತ್ತರವಲ್ಲದ ಮರಳ ದಿನ್ನೆಗಳಿಂದ ಕೂಡಿದೆ. ಜನವಸತಿಯೂ ಇದೆ. ಪೂರ್ವದ (ಬಲಗಡೆ ಭಾಗ) ಪ್ರದೇಶವು ಗುಡ್ಡಗಳಿಂದ ಕೂಡಿದೆ. ಮರಗಿಡಗಳಿಂದಕೂಡಿರುವ ಗಟ್ಟಿಮಣ್ಣಿನ ಈ ಗುಡ್ಡವು ಕಡಲಲ್ಲಿ ಚಾಚಿಕೊಂಡಿದೆ. ಇದರಿಂದ ಸರಕು ತುಂಬಿದ ಹಡಗುಗಳು ಯಾವ ಭಯವೂ ಇಲ್ಲದೆ ಅಂದರೆ, ತೆರೆಗಳ ಮತ್ತು ಕಡಲೆಡೆಯಿಂದ ಬೀಸಿಬರುವ ಗಾಳಿಗೆ ಅಂಜದೆ ಲಂಗರು ಮಾಡಬಹುದಿತ್ತು. ಅಳಿವೆಯನ್ನು ದಾಟಿ ಒಳಬಂದರೆ ಅದು ಒಂದು ನೈಸರ್ಗಿಕ ಕೋಟೆಯನ್ನು ಪ್ರವೇಶಿಸಿದಂತೆ ಆಗುತ್ತಿತ್ತು. ಗುಡ್ಡದ ಬುಡವಾಗಿದ್ದರಿಂದ (ಗುಡ್ಡವೇ ಅರ್ಧಚಕ್ರಾಕಾರವಾಗಿ

ಸುತ್ತುವರಿದಿದ್ದರಿಂದ) ಇದು ತಳದಲ್ಲಿ ಗಟ್ಟಿ ನೆಲವಾಗಿದೆ. ಇಲ್ಲಿ ಹೂಳು ಅಥವಾ ಕೆಸರು ತುಂಬಿಕೊಳ್ಳುವ ಭಯವಿರಲಿಲ್ಲ. ಹಡಗುಗಳಿಗೆ ಲಂಗರು ಮಾಡಲು ಅನುಕೂಲವಾಗುವಂತೆ ೪ ರಿಂದ ೫ ಮೀಟರ್ ನೀರು ಇಲ್ಲಿ ಸದಾ ನಿಂತಿರುತ್ತಿತ್ತು.

ಕುಮಟಾ ಬಂದರಿಗೆ ಬಂದು ಸೇರುತ್ತಿದ್ದ ತೊರೆಯು ಊರಿನ ಒಳಗೆ ಅಂದರೆ ಹಿನ್ನಾಡಿಗೆ ೩ ರಿಂದ ೪ ಕಿ.ಮೀವರೆಗೂ ನೌಕಾಯಾನಕ್ಕೆ ಯೋಗ್ಯವಾಗಿತ್ತು. ಇದು ಆಯಾತ ನಿರ್ಯಾತದ ಸರಕುಗಳನ್ನು ಬಂದರಿಗೆ ತಲುಪಿಸಲು ಉಪಯುಕ್ತವಾಗಿತ್ತು. ಕುಮಟಾ ಬಂದರಿನ ದಕ್ಷಿಣತಡಿಯು ಸಮತಟ್ಟಾದ ವಿಶಾಲಭೂಮಿಯಿಂದ ಕೂಡಿದೆ. ಇದು ಆಯಾತ ನಿರ್ಯಾತದ ಸರಕುಗಳನ್ನು ಸಂಗ್ರಹಿಸಿಡಲು ಸಹಾಯ ಮಾಡುತ್ತಿತ್ತು. ಬಂದರಿನ ಈ ಮುಖ್ಯ ಸೌಲಭ್ಯಗಳಿಂದ ಇಲ್ಲಿ ಏಕಕಾಲದಲ್ಲಿ ನಾಲ್ಕರಿಂದ ಆರು ಬೃಹತ್ ಹಡಗುಗಳನ್ನು ಲಂಗರು ಮಾಡಬಹುದಾಗಿತ್ತು.

ತದಡಿ ಬಂದರು

ಕುಮಟಾ ತಾಲೂಕಿನ ಇನ್ನೊಂದು ಬಂದರು ತದಡಿ. ಇದು ನದಿ ಮುಖಜ ಬಂದರು. ಅಘನಾಶಿನಿ ನದಿಯು ಕಡಲನ್ನು ಸೇರುವಲ್ಲಿ ಈ ಬಂದರು ನಿರ್ಮಾಣವಾಗಿದೆ. ತದಡಿಯ ಆಗ್ನೇಯದಲ್ಲಿ ಆರು ಮೈಲಿ ದೂರದಲ್ಲಿ ಮಿರ್ಜಾನ ಇದೆ. ಇದು ಪ್ರಾಚೀನಕಾಲದಿಂದಲೂ ದೇಶೀಯ ಹಾಗೂ ವಿದೇಶೀಯರ ವ್ಯಾಪಾರ ಕೇಂದ್ರವಾಗಿತ್ತು. ತದಡಿಯಿಂದ ಉತ್ತರದಲ್ಲಿ ಎರಡು ಮೈಲಿ ದೂರದಲ್ಲಿ ಗೋಕರ್ಣವಿದೆ. ಪ್ರಖ್ಯಾತ ಉಪ್ಪು ಉತ್ಪಾದನಾ ಕೇಂದ್ರ ಸಾಣಿಕಟ್ಟೆಯೂ ಇದರ ಬಳಿಯಲ್ಲಿಯೇ ಇದೆ.

ತದಡಿ ಬಂದರಿಗೆ ಸನಿಹದಲ್ಲಿ ಪಶ್ಚಿಮ ಘಟ್ಟಗಳು ಕಡಲಿನೆಡೆಗೆ ಚಾಚಿಕೊಂಡಿವೆ. ಸುಮಾರು ೪೦೦ ಅಡಿ ಎತ್ತರದ ಎರಡು ಬೃಹತ್ ಗುಡ್ಡಗಳು ಪೂರ್ವದೆಡೆಯಿಂದ ಪಶ್ಚಿಮದತ್ತ ಹಬ್ಬಿವೆ. ಇದು ಕಡಲೋತ್ತರ ವ್ಯಾಪಾರಕ್ಕೆ ತೊಡಗಿದ್ದ ಬೃಹತ್ ಹಡಗುಗಳಿಗೆ ಉಪಯುಕ್ತವಾಗಿತ್ತು. ಅಘನಾಶಿನಿ ನದಿ ಈ ಗುಡ್ಡಗಳ ನಡುವಿನಿಂದ ಕಡಲನ್ನು ಪ್ರವೇಶಿಸುತ್ತದೆ. ಅಘನಾಶಿನಿ ನದಿ ಕಡಲು ಸೇರುವಾಗ ವಿಸ್ತಾರವೂ, ಶಾಂತವೂ ಆಗಿದ್ದು, ಮುಖಜ ಪ್ರದೇಶವು ವಿಸ್ತಾರವಾಗಿದೆ. ಈ ಪ್ರದೇಶದಲ್ಲಿ ಏಕಕಾಲದಲ್ಲಿ ೮ ರಿಂದ ೧೦ ಟನ್ ತೂಕದ ೪ ರಿಂದ ೬ ಹಡಗುಗಳನ್ನು ಲಂಗರು ಮಾಡಬಹುದಾಗಿತ್ತು. ಈಗಲೂ ಇದು ಸಾಧ್ಯವಿದೆ.

ಮಿರ್ಜಾನ ಕೂಡಾ ಅಘನಾಶಿನಿ ನದಿಯ ದಂಡೆಯ ಮೇಲಿದೆ. ಮಿರ್ಜಾನ ಹಾಗೂ ತದಡಿಗಳ ನಡುವಿನ ಅಂತರ ಸುಮಾರು ಆರು ಕಿಲೋಮೀಟರ್‌ಗಳು ಇಲ್ಲಿ ಮಿರ್ಜಾನ್‌ವರೆಗೂ ನದಿಯ ಗುಂಟ ಸುರಕ್ಷಿತವಾದ ನೌಕಾಯಾನ ನಡೆಸಬಹುದಿತ್ತು. ನಿರ್ಯಾತವಾಗುತ್ತಿದ್ದ

ಸರಕುಗಳನ್ನು ಮಿರ್ಜಾನಿನಲ್ಲಿಯೇ ಹಡಗುಗಳಿಗೆ ತುಂಬಬಹುದಿತ್ತು. ಹಾಗೇ ಆಯಾತದ ವಸ್ತುಗಳನ್ನು ಇಲ್ಲಿ ಸಂಗ್ರಹಿಸಬಹುದಾಗಿತ್ತು.

ಪರ್ವತಗಳು, ಕಣಿವೆಗಳು

ಕುಮಟಾ ಮತ್ತು ತದಡಿ ಬಂದರುಗಳು ಆರ್ಥಿಕ ಚಟುವಟಿಕೆಯಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಿದ್ದರ ಹಿಂದೆ ಪಶ್ಚಿಮ ಘಟ್ಟಗಳ ಕೊಡುಗೆ ದೊಡ್ಡದಿದೆ. ಪಶ್ಚಿಮ ಘಟ್ಟಗಳು ತೀರಕ್ಕೆ ಎದುರಾಗಿ ನಿಂತಿರುವಂತೆ ತದಡಿ ಹಾಗೂ ಕುಮಟಾಗಳಲ್ಲಿ ಅಲ್ಲಲ್ಲಿ ಪೂರ್ವ ಪಶ್ಚಿಮವಾಗಿ ಪದರುಪದರಾಗಿ ಹಬ್ಬಿದೆ. ತದಡಿಯ ಬಳಿಯಲ್ಲಿ ದೊಡ್ಡ ಎರಡು ಗುಡ್ಡಗಳು ಕಡಲಿನೆಡೆಗೆ ಚಾಚಿಕೊಂಡು ಅಘನಾಶಿನಿ ನದಿಯು ಸುರಕ್ಷಿತವಾಗಿ ಹಾಗೂ ವಿಶಾಲವಾಗಿ ಕಡಲನ್ನು ಸೇರುವಂತೆಮಾಡಿದೆ. ಕುಮಟಾ ಬಂದರಿನ ಬಳಿಯಲ್ಲಿ ಗುಡ್ಡವು ಕಡಲಿಗೆಚಾಚಿಕೊಂಡು ನಿಂತಿದೆ. ಇದು ಬಂದರನ್ನು ನೈಸರ್ಗಿಕ ಸುರಕ್ಷಿತ ಬಂದರಾಗಿ ರೂಪಿಸುವಲ್ಲಿ ಸಹಾಯ ಮಾಡಿದೆ.

ಅಘನಾಶಿನಿ ನದಿಯ ನೇರದಲ್ಲಿ ಘಟ್ಟಕ್ಕೆ ತಲುಪುವ ಮಾರ್ಗವು ಉತ್ತಮ ಹೇರು ಮಾರ್ಗವಾಗಿತ್ತು. ಈ ಮಾರ್ಗವು ಅಂದಿನ ಪ್ರಖ್ಯಾತ ವ್ಯಾಪಾರಿ ಕೇಂದ್ರಗಳಿಗೆ ಸಂಪರ್ಕ ಕಲ್ಪಿಸುತ್ತಿತ್ತು. ಪಶ್ಚಿಮಘಟ್ಟದಲ್ಲಿ ಸಿಗುತಿದ್ದ ಬೆಲೆಬಾಳುವ ವನಸ್ಪತಿಗಳು, ಮಂಗ, ನವಿಲು ಇತ್ಯಾದಿ ಪ್ರಾಣಿಗಳು, ಮಸಾಲೆ ದಿನಿಸುಗಳು ಕಡಲಮಾರ್ಗವಾಗಿ ವಿದೇಶಕ್ಕೆ ಹೋಗುವ ವಸ್ತುಗಳಾಗಿದ್ದವು. ಇಲ್ಲಿ ದೊರೆಯುವ ಕರಿಮೆಣಸು ಸಹ್ಯಾದ್ರಿಯ ಉಳಿದ ಪ್ರದೇಶಗಳಲ್ಲಿ ದೊರೆಯುವ ಕರಿಮೆಣಸಿಗಿಂತ ವಿಶಿಷ್ಟವಾದದ್ದು ಎಂದು ವಿದೇಶಿ ಪ್ರವಾಸಿಗರು ಹೇಳಿದ್ದಾರೆ[೩೪].

ಕುಮಟಾ ಬಂದರಿನಿಂದ ದಕ್ಷಿಣಕ್ಕೆ ಹೋದಂತೆಲ್ಲಾ ಆಳ್ವೆಕೋಡಿ, ಧಾರೇಶ್ವರಗಳು ಸಿಗುತ್ತವೆ. ಈ ಪ್ರದೇಶಗಳಲ್ಲಿ ಪಶ್ಚಿಮಘಟ್ಟಗಳು ಹೆಚ್ಚು ಮರಗಳಿಂದ ಕೂಡಿರದೇ ಬೋಳಾಗಿವೆ. ಧಾರೇಶ್ವರದ ಬಳಿಯಲ್ಲಿ ಗುಡ್ಡಗಳು ಕಡಲಿಗೆ ಚಾಚಿಕೊಂಡಿದೆ. ಈ ಪ್ರದೇಶವನ್ನು ರಾಮನಗಂಡಿ ಎಂದು ಕರೆಯುತ್ತಾರೆ. ಸಾಂದರ್ಭಿಕವಾಗಿ ಇಲ್ಲಿಯೂ ಸರಕು ತುಂಬಿದ ಹಡಗುಗಳನ್ನು ಲಂಗರು ಮಾಡಬಹುದಿತ್ತು. ನೇರವಾಗಿ ಕಡಲ ಅಲೆಗಳು ಬಂದು ಅಪ್ಪಳಿಸುವುದರಿಂದ ಹಡಗುಗಳ ಸುರಕ್ಷಿತತೆಗೆ ತೊಂದರೆ ಉಂಟಾಗುವ ಸಾಧ್ಯತೆಇತ್ತು. ಇನ್ನೂ ಕುಮಟಾದ ಉತ್ತರದಲ್ಲಿರುವ ಗೋಕರ್ಣದಲ್ಲೂ ಎತ್ತರವಾದ ಗುಡ್ಡಗಳು ಕಡಲಿಗೆಚಾಚಿರುವುದು ಕಾಣುತ್ತದೆ. ಇಲ್ಲೂ ಸಾಂದರ್ಭಿಕವಾಗಿ ಹಡಗುಗಳನ್ನು ಲಂಗರುಮಾಡಬಹುದಿತ್ತು. ಇಲ್ಲಿ ತೆರೆಗಳಉಪಟಳ ಹೆಚ್ಚಾಗಿದ್ದರಿಂದ ಎಲ್ಲಾ ಸಂದರ್ಭಗಳಲ್ಲೂ ಹಡಗುಗಳನ್ನು ಲಂಗರು ಮಾಡುತ್ತಿರಲಿಲ್ಲ.

ನದಿಗಳು

ಕುಮಟಾ ತಾಲೂಕಿನಲ್ಲಿ ಹರಿಯುವ ನದಿ ಅಘನಾಶಿನಿ[೩೫]. ಇದು ಸ್ಥಳೀಯರ ತೋಟಗಾರಿಕೆ, ಕೃಷಿಗೆ ಮೂಲಾಧಾರವಾಗಿದೆ. ಈ ನದಿಯ ಹೆಸರು 'ಅಘನಾಶಿನಿ'ಯು 'ಪಾಪನಾಶಿನಿ' ಎಂಬ ಅರ್ಥವನ್ನು ಹೊಂದಿದೆ. ನಾಡಿನ ಜನ ಜೀವನದಲ್ಲಿ ಈ ನದಿ ಪುಣ್ಯಪ್ರದಾಯಿನಿಯಾಗಿದ್ದಾಳೆ ಎಂದು ಸ್ಥಳೀಯರ ನಂಬಿಕೆ. ಸಹಸ್ರಾರು ಜನರ ಜೀವದಾಯಿಯಾಗಿದ್ದಾಳೆ. ಅಘನಾಶಿನಿನದಿಯು ಉತ್ತರ ಕನ್ನಡದ ಶಿರ್ಶಿ ತಾಲೂಕಿನಲ್ಲಿ ಜನ್ಮಪಡೆಯುತ್ತಾಳೆ. ಘಟ್ಟದ ಮೇಲಿನ ಶಿರ್ಶಿ–ಸಿದ್ದಾಪುರವನ್ನು ಹಾದು ಕರಾವಳಿಯ ಕುಮಟಾ ತಾಲೂಕನ್ನು ಪ್ರವೇಶಿಸುತ್ತದೆ. ಮುಂದೆ ತದಡಿಯ ಬಳಿಯಲ್ಲಿ ಅರಬ್ಬಿಸಮುದ್ರ ಸೇರುತ್ತದೆ. ಘಟ್ಟದ ಕೆಳಗೆ ಸುಮಾರು ೧೨ ಕಿ.ಮಿ.[೩೬] ಪಯಣದೊಂದಿಗೆ ಕಡಲು ಸೇರುತ್ತದೆ. ಈ ನದಿಯು ತನ್ನ ತೀರದಲ್ಲಿ ಅನೇಕ ಐತಿಹಾಸಿಕ ಕೇಂದ್ರಗಳನ್ನು, ವ್ಯಾಪಾರಿ ಕೇಂದ್ರಗಳನ್ನು ಹೊಂದಿದೆ. ಹುಟ್ಟಿನಲ್ಲಿ ಅಘನಾಶಿನಿ ಎಂದು ಕರಾವಳಿ ಪ್ರದೇಶ ಸೇರುತ್ತಿದ್ದಂತೆ ಡೋಣಿ ಎಂದೂ, ಕಡಲು ಸೇರುವಲ್ಲಿ ಕಾಮಾಘನಾಶಿನಿ ಎನಿಸಿಕೊಳ್ಳುತ್ತದೆ,

ಐತಿಹ್ಯಗಳ ಪ್ರಕಾರ ಅಘನಾಶಿನಿಯ ಜನ್ಮ ಸ್ಥಳಗಳು ಎರಡು. ಶಿರಸಿಯ ಶಂಕರ ದೇವರ ಕೆರೆ ಒಂದಾದರೆ, ಇನ್ನೊಂದು ಶಿರಸಿಯ ಮಂಜುಗುಣಿಯ ವೆಂಕಟರಮಣ ದೇವಸ್ಥಾನದ ಬಳಿಯಿರುವಕೆರೆ. ಈ ಎರಡೂ ಜನ್ಮಸ್ಥಳಗಳಲ್ಲಿ ಈ ನದಿಯನ್ನು ಅಘನಾಶಿನಿ ಎಂದೇ ಸಂಬೋಧಿಸುತ್ತಾರೆ[೩೭].

ಶಂಕರಹೊಂಡ (ಕೆರೆ) ದಿಂದ ಜನಿಸುವ ಅಘನಾಶಿನಿ ದಕ್ಷಿಣಾಭಿಮುಖವಾಗಿ ಹರಿದು ಸುಮಾರು ೨೦ಕಿ.ಮೀ ತಲುಪಿದಾಗ ಮಂಜುಗುಣಿಯಲ್ಲಿ ಇನ್ನೊಂದು ಅಘನಾಶಿನಿ ಸೇರಿಕೊಳ್ಳುತ್ತದೆ. ಅದು ಸೋಮಾಘನಾಶಿನಿ ಕೆರೆಯ ತೊರೆ. ಇಲ್ಲಿಂದ ಮುಂದೆ ಬಿಳಗಿ ಎಡೆಯಿಂದ ಹರಿದು ಬರುವ ಬಿಳಗಿ ಹೊಳೆಯನ್ನು ಸೇರಿಸಿಕೊಂಡು ವಿಶಾಲವಾಗಿ ಹರಿದುಬಂದು ಉಂಚಳ್ಳಿ ಊರಿನಬಳಿ ಜಲಪಾತವಾಗಿ ಧುಮುಕಿ, ಮುಂದೆ ಹರಿಯುತ್ತಾಳೆ. ಉಂಚಳ್ಳಿಯು ಸಿದ್ಧಾಪುರ ತಾಲೂಕಿನ ಊರು. ಕೇಂದ್ರದಿಂದ ಪಶ್ಚಿಮಕ್ಕೆ ಸುಮಾರು ೧೨ ಮೈಲಿ ದೂರದಲ್ಲಿದೆ. ಇದರ ಅನೇಕ ಹೆಸರುಗಳಲ್ಲಿ ನಿಲ್ಕುಂದ ಜೋಗ ಎನ್ನುವುದು ಒಂದು. ವ್ಯಾಪಾರಿ ಮಾರ್ಗವಾದ ನಿಲ್ಕುಂದದ ಹೆಸರಿನಿಂದ ಇದನ್ನು ಗುರುತಿಸುತ್ತಾರೆ. ನಿಲ್ಕುಂದ ಎನ್ನುವದು ಸಂಸ್ಕೃತದಲ್ಲಿ ಮಯೂರಗುಂದ[೩೮] ಎಂದು ಆಗುತ್ತದೆ. ಹಾಗೆ ನೋಡಿದರೆ ಮಯೂರ ಕದಂಬನೊಡನೆ ಈ ಮಾರ್ಗವನ್ನು ಗುರುತಿಸಿಬಹುದು. ಕದಂಬರ ಕಾಲದಲ್ಲಿ ಈ ಮಾರ್ಗವಾಗಿ ಕಡಲೋತ್ತರ ವ್ಯಾಪಾರಕ್ಕೆ ಹೇರು, ಚಕ್ಕಡಿ ಮತ್ತು ಕುದುರೆ ಗಾಡಿಗಳ ಮೇಲೆ ಸರಕು ಸಾಗಿಸಲು ಬಳಸುತ್ತಿದ್ದರು.

ಇಲ್ಲಿಂದ ಮುಂದೆ ಅಕ್ಕ-ಪಕ್ಕದ ತೊರೆಹಳ್ಳಗಳನ್ನು ತನ್ನೊಡಲಲ್ಲಿ ಸೇರಿಸಿಕೊಂಡು ಹರಿಯುವ ಅಘನಾಶಿನಿಯು ಕರಾವಳಿಯನ್ನು ಸೇರುವ ಮುನ್ನ ಇಳಿಮನೆಹಳ್ಳ ಹಾಗೂ ಬೆಣ್ಣೆ ಹಳ್ಳಗಳೆಂಬ ಎರಡು ದೊಡ್ಡ ಹೊಳೆಗಳನ್ನು ಸೇರಿಸಿಕೊಳ್ಳುತ್ತದೆ. ಇಲ್ಲಿಂದ ಮುಂದೆ ಅಘನಾಶಿನಿ ನದಿ ತನ್ನ ಪಾತ್ರವನ್ನು ಹಾಗೂ ವೇಗವನ್ನು ಹೆಚ್ಚಿಸಿಕೊಳ್ಳುತ್ತದೆ.

ಅಘನಾಶಿನಿ ನದಿಯು ದೀವಗಿ, ಉಪ್ಪಿನ ಪಟ್ಟಣ, ಮಿರ್ಜಾನ, ಸಾಣಿಕಟ್ಟಾ ಮುಂತಾದ ವ್ಯಾಪಾರಿ ಸ್ಥಳಗಳನ್ನು ಹಾದು ತದಡಿಯ ಬಳಿ ಅರಬ್ಬಿ ಸಮುದ್ರ ಸೇರುತ್ತದೆ. ಅಘನಾಶಿನಿ ನದಿಯಗುಂಟ ತದಡಿಯಿಂದ ಮಿರ್ಜಾನವರೆಗೂ ಹಾಗೂ ಕೋಡಕಣಿ-ದೀವಗಿವರೆಗೆ ನೌಕಾಯಾನ ಸರಾಗವಾಗಿ ನಡೆಸಬಹುದಾಗಿದೆ. ಹಿಂದೆ ಪಶ್ಚಿಮ ಘಟ್ಟಗಳ ಉತ್ಪನ್ನಗಳನ್ನು ನೌಕೆಗಳ ಮೂಲಕ ತಂದು ಮುಂದೆ ತದಡಿ ಬಂದರಿನ ಮೂಲಕ ಸಾಗಿಸಲಾಗುತ್ತಿತ್ತು.

ಅಘನಾಶಿನಿ ನದಿಯು ದೀವಗಿಯನ್ನು ಸುತ್ತುವರಿದಿದೆ. ದೀವಗಿಯು ಪ್ರಾಚೀನ ಕಾಲದಲ್ಲಿ ದಿವೋ-ಗಾಂವ್ ಎಂದು ಕರೆಯಲ್ಪಡುತ್ತಿದ್ದ ಬೌದ್ಧ ಕೇಂದ್ರವಾಗಿತ್ತು[೩೯]. ಉಪ್ಪಿನ ಪಟ್ಟಣ ಹೆಸರೇ ಸೂಚಿಸುವಂತೆ ದೊಡ್ಡ ಉಪ್ಪಿನ ಆಗರವಾಗಿತ್ತು. ಮಿರ್ಜಾನ ಪ್ರಖ್ಯಾತ ವಾಣಿಜ್ಯ ಕೇಂದ್ರ. ಮಿರ್ಜಾನ ಗ್ರೀಕ್[೪೦]ರೊಂದಿಗೆ ವ್ಯಾಪಾರಿ ಸಂಪರ್ಕಪಡೆದ ಬಂದರು. ಇಲ್ಲಿ ಕತ್ತೆ, ಕುದುರೆ, ಎತ್ತುಗಳ ಮೂಲಕ ದಖ್ಖನ್ನಿನಿಂದ ಸರಕು ಹೇರಿಕೊಂಡು ಬಂದು ವ್ಯಾಪಾರ ನಡೆಸುತ್ತಿದ್ದರು. ಇದರ ಪ್ರಾಚೀನಹೆಸರು ಮಿಡಜಿಯಾಗಿತ್ತು. ತದಡಿಯ ಬಳಿಯಲ್ಲಿರುವ ಸಾಣಿಕಟ್ಟಾ ಕೂಡಾ ಪ್ರಖ್ಯಾತ ಉಪ್ಪು ತಯಾರಿಕಾ ಘಟಕವಾಗಿತ್ತು.

ಅಘನಾಶಿನಿ ನದಿಯು ಮೀನುಗಾರಿಕೆ, ಕೃಷಿ ಹಾಗೂ ವ್ಯಾಪಾರಕ್ಕೆ ಉಪಯುಕ್ತವಾದ ನದಿಯಾಗಿದೆ. ಇಲ್ಲಿ ವಿವಿಧ ಬಗೆಯ ಮೀನುಗಳು ದೊರಕುತ್ತವೆ. ಯಾಂತ್ರಿಕೃತ ದೋಣಿಯಲ್ಲಿ ಮೀನುಗಾರಿಕೆಯನ್ನೂ ನಡೆಸುತ್ತಾರೆ. ಅಘನಾಶಿನಿಯ ಕೊಳ್ಳದಲ್ಲಿ ದೊರೆಯುವ ಜೇನುತುಪ್ಪ, ಸೀಗೆಕಾಯಿ ಮತ್ತಿತರ ಅರಣ್ಯ ಉತ್ಪನ್ನಗಳು ಬಹು ಬೆಲೆ ತಂದು ಕೊಡುವಂಥವು. ತೋಟಗಾರಿಕೆಯ ಉತ್ಪನ್ನಗಳಾದ ವೀಳ್ಯದ ಎಲೆ, ಅಡಿಕೆ, ತೆಂಗುಗಳು ವಿದೇಶದಲ್ಲಿ ಬಹು ಬೇಡಿಕೆಯ ವಸ್ತುಗಳಾಗಿದ್ದವು.

ಬಂದರಿನ ಉಪಯುಕ್ತತೆ

ಕುಮಟಾ ಬಂದರು ಒಂದೆಡೆ ಗಟ್ಟಿ ಲೆಟರೈಟ್ ಮಣ್ಣಿನ ಗುಡ್ಡ ಹಾಗೂ ಇನ್ನೊಂದೆಡೆ ವಿಶಾಲ ಮರಳರಾಶಿಯ ಮಧ್ಯೆ ಇರುವುದರಿಂದ, ಇಲ್ಲಿ ನೀರು ಸದಾಕಾಲ ೫ ರಿಂದ ೬ ಮೀಟರ್ ಇರುತ್ತಿತ್ತು. ಜೊತೆಯಲ್ಲಿ ತೊರೆಯೊಂದು ಬಂದು ಬಂದರಿನಲ್ಲಿ ಸೇರುತ್ತಿದ್ದರಿಂದ ಸರಕುಗಳನ್ನು ನೌಕೆಗಳಮೂಲಕ ಊರಿನಒಳಗೆ ಸಾಗಿಸಲು ಅನುಕೂಲವಾಗಿತ್ತು. ಪಶ್ಚಿಮ ಘಟ್ಟದ ಸಣ್ಣಗುಡ್ಡ

ಒಂದು ಬಂದರನ್ನು ಸುತ್ತುವರಿದು ನಿಂತಿರುವುದರಿಂದ ಕಡಲೆಡೆಯಿಂದ ಬೀಸಿಬರುವ ಮಾರುತಗಳ ಹೊಡೆತದಿಂದ ರಕ್ಷಣೆ ಪಡೆಯಲು ಅನುಕೂಲವಾಗಿತ್ತು.

ತದಡಿ ಬಂದರು ಕೂಡಾ ವಿಶಾಲ ಅಘನಾಶಿನಿ ಮುಖಜ ಭೂಮಿಯಲ್ಲಿ ಉಂಟಾಗಿದ್ದರಿಂದ ಇಲ್ಲಿಯೂ ಸದಾ ನೀರು ನಿಂತಿರುತ್ತದೆ. ಅಲ್ಲದೇ ಮುಖಜಭೂಮಿ ವಿಸ್ತಾರವಾಗಿರುವುದರಿಂದ ಹಲವು ದೊಡ್ಡ ಹಡಗುಗಳು ಕಡಲನ್ನು ದಾಟಿ ಬಂದರಿಗೆ ಬರಲು ಅನುಕೂಲವಾಗಿತ್ತು. ಮುಂದೆ ಮಿರ್ಜಾನವರೆಗೂ ಹಡಗುಗಳು ಒಳಬಂದು ಆಯಾತ-ನಿರ್ಯಾತದ ಸರಕುಗಳನ್ನು ಇಳಿಸುವುದು ಹಾಗೂ ತುಂಬುದಕ್ಕೆ ಅನುಕೂಲತೆಗಳಿದ್ದವು.

ಈ ಎರಡೂ ಬಂದರುಗಳಿಂದ ಪಶ್ಚಿಮ ಘಟ್ಟದಲ್ಲಿ ದೊರೆಯುತ್ತಿದ್ದ ಮಸಾಲೆ ದಿನಿಸುಗಳು ಅಘನಾಶಿನಿ ನದಿಯ ಇಕ್ಕೆಲಗಳಲ್ಲಿ ಬೆಳೆಯುತ್ತಿದ್ದ ತೋಟಗಾರಿಕಾ ಹಾಗೂ ಕೃಷಿ ಉತ್ಪನ್ನಗಳು ಮತ್ತು ಹಿನ್ನಾಡುಗಳಿಂದ ಬರುತ್ತಿದ್ದ ಹತ್ತಿ, ಹತ್ತಿಬಟ್ಟೆ, ಕಬ್ಬು, ಅಕ್ಕಿ ಮುಂತಾದ ವಸ್ತುಗಳು ವ್ಯಾಪಾರಿ ಸರಕುಗಳಾಗಿದ್ದವು.

ಈ ಬಂದರುಗಳಿಗೆ ಹಿನ್ನಾಡಾಗಿ ಹುಬ್ಬಳ್ಳಿ, ಶಿವಮೊಗ್ಗಾ ಪ್ರಮುಖವಾಗಿದ್ದವು. ಶಿವಮೊಗ್ಗ ಮತ್ತು ಹುಬ್ಬಳ್ಳಿಯನ್ನು ಸಂಪರ್ಕಿಸುವ ಗುಲ್ಬರ್ಗಾ, ಬಳ್ಳಾರಿ, ಕೋಲಾರ, ಬೆಂಗಳೂರುಗಳು, ಆಂಧ್ರಪ್ರದೇಶದ ಗುತ್ತಿ, ತಮಿಳುನಾಡಿನ ಪೂರ್ವದ ಜಿಲ್ಲೆಗಳು ಮತ್ತು ಮೈಸೂರುಗಳು ಹಿನ್ನಾಡಾಗಿದ್ದವು. ಇಲ್ಲಿಂದ ಯುರೋಪಿನ ದೇಶಗಳಿಗೆ, ಏಷ್ಯಾದ ಪಶ್ಚಿಮದ ದೇಶಗಳಿಗೆ ಮತ್ತು ಆಫ್ರಿಕಾದ ದೇಶಗಳೊಂದಿಗೆ ವ್ಯಾಪಾರ ನಡೆಯುತ್ತಿತ್ತು. ಫಿನಿಷಿಯನ್ನರು ಮಿರ್ಜಾನ, ಕುಮಟಾ ಬಂದರಿನವರೊಂದಿಗೆ ವ್ಯಾಪಾರಿ ಸಂಪರ್ಕ ಹೊಂದಿದ್ದರು. ಬಹುಮುಖ್ಯವಾಗಿ ಕುಮಟಾ-ತದಡಿ ಬಂದರುಗಳಿಂದ ಹಿನ್ನಾಡನ್ನು ತಲುಪಲು ಪಶ್ಚಿಮ ಘಟ್ಟಗಳಲ್ಲಿ ಉಂಟಾಗಿರುವ ನೀಲಕುಂದ, ವಡ್ಡಿ ಹಾಗೂ ದೇವಿಮನೆ ಕೊರಕಲು/ಕಣಿವೆಗಳು ಸಹಾಯಕವಾಗಿವೆ. ಈ ಮಾರ್ಗವಾಗಿ ಸುರಕ್ಷಿತವಾಗಿ ಬನವಾಸಿ, ಬೆಳ್ಳಿಗಾವೆ ಹಾಗೂ ಶಿವಮೊಗ್ಗಾಗಳಿಗೆ ಸಂಪರ್ಕಪಡೆಯಬಹುದಾಗಿತ್ತು. ಈ ಮೇಲಿನ ವ್ಯಾಪಾರಿ ಕೇಂದ್ರಗಳಿಗೆ ತಲುಪಲು ಇದ್ದ ಹತ್ತಿರದ ಮಾರ್ಗಗಳು ಇವಾಗಿದ್ದವು. ಪಶ್ಚಿಮ ಘಟ್ಟಗಳು ಅಲ್ಲಲ್ಲಿ ಉಂಟುಮಾಡಿರುವ ಕೊರಕಲುಗಳು ಘಟ್ಟಕ್ಕೆ ಸಂಪರ್ಕಕಲ್ಪಿಸುವ ಉತ್ತಮ ರಸ್ತೆ ಮಾರ್ಗಗಳಾಗಿವೆ. ಇಂಥಹ ಕಣಿವೆಗಳಲ್ಲಿ ಬಂದರಿಗೆ ನೇರ ಮಾರ್ಗಕಲ್ಪಿಸುವ ಬೇಲಿಕೇರಿ-ಬಾಳೆಗುಳಿ-ಅಗಸೂರು-ರಾಮನಗರ-ಅರೆಬೈಲ್ ಮಾರ್ಗವು ಪ್ರಮುಖವಾಗಿದ್ದು, ಅರೆಬೈಲ್ ಮಾರ್ಗವಾಗಿ ಹುಬ್ಬಳ್ಳಿ ಅಥವಾ ಧಾರವಾಡ ತಲುಪಿದರೆ ಹಿನ್ನಾಡಿನೊಂದಿಗೆ ಸಂಪರ್ಕ ಸುಲಭವಾಗಿ ಪಡೆಯಬಹುದಾಗಿತ್ತು.

ಕುಮಟಾ ಬಂದರುಗಳ ಬೆಳವಣಿಗೆ

ಶಾತವಾಹನರು ಆಳುವ ಸಂದರ್ಭದಲ್ಲಿ ಕುಮಟಾ ಅವರ ಆಡಳಿತಕ್ಕೆ ಒಳಪಟ್ಟಿತ್ತು.[೪೧] ಮುಂದೆ ಬನವಾಸಿ ಕೇಂದ್ರವಾಗಿ ಆಳಿದ ಕದಂಬರು, ನಂತರದ ಕನ್ನಡನಾಡನ್ನಾಳಿದ ಎಲ್ಲಾ ಅರಸರು ಕುಮಟಾವನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡಿದ್ದರು.

ಕದಂಬರು ಈ ಪ್ರದೇಶವನ್ನು ಆಳುವಾಗ ಕುಮಟಾ ಹಾಗೂ ತದಡಿ ಬಂದರುಗಳನ್ನು ವ್ಯಾಪಾರ ವಹಿವಾಟಿಗೆ ಬಳಸಿಕೊಂಡಿದ್ದರು. ಬಹುಮುಖ್ಯವಾಗಿ ಬಾದಾಮಿ ಚಾಳುಕ್ಯರು ತಮ್ಮ ಕಡಲೋತ್ತರ ವ್ಯಾಪಾರಕ್ಕೆ ಮತ್ತು ಸೈನಿಕ ಚಟುವಟಿಕೆಗಳಿಗೆ ಕುಮಟಾ ಬಂದರನ್ನು ಬಳಸಿಕೊಂಡರು[೪೨]. ಚೀನಾದ ಪ್ರವಾಸಿ ಹೂ–ಎನ್–ತ್ಸಾಂಗ್‌ನು ಬನವಾಸಿಗೆ ಬಂದ ಸಂದರ್ಭದ ವಿವರಗಳಲ್ಲಿ ಚೀನಾ ಹಾಗೂ ಕರ್ನಾಟಕದ ಸಂಬಂಧ ಕಾಣುತ್ತದೆ. ಆತ ಹೇಳುವ ಕೊಂಕಣದಲ್ಲಿ ಕುಮಟಾವೂ ಸೇರಿದೆ. ದೊಡ್ಡ ಹಡಗು ಕಾಂಬೋಡಿಯಾ ಮೂಲಕ ಚೀನಾಕ್ಕೆ ತಲುಪಿದ್ದನ್ನು ಚೀನಾದ ದಾಖಲೆಯೊಂದು ಹೇಳುತ್ತದೆ[೪೩]. ಕುಮಟಾದ ಶಾಂತಿಕಾಂಬಾ ದೇವಾಲಯದ ಪ್ರಾಂಗಣದಲ್ಲಿ ಚೀನಾ ಭಾಷೆಯ ಶಾಸನ ಒಂದಿದೆ. ಇದರಲ್ಲಿ ದಿನಾಂಕ ಇರವುದಿಲ್ಲ. ಈ ಶಾಸನವು ಕಾ–ಸಂಗ್–ವೆನ್ ನೌಕಾಯಾತ್ರಿ, ಚೀನಾದ ಗು–ಅಂಗ್–ಡನ್ ಊರಿನವನು ಇಲ್ಲಿ ವಾಸವಾಗಿದ್ದನು[೪೪]. ಎಂದಿದೆ. ಇದು ಚೀನಾದವರು ಕರ್ನಾಟಕದ ಬಂದರು ಪ್ರದೇಶದಲ್ಲಿ ತಮ್ಮ ವಾಸ್ತವ್ಯ ನಡೆಸುತ್ತಿದ್ದುದನ್ನು ಸೂಚಿಸುತ್ತದೆ.

ಕುಮಟಾದ ಬಳಿಯ ಅಘನಾಶಿನಿ ದಡದಲ್ಲಿ ದೀವಗಿ ಎಂಬ ಊರೊಂದಿದೆ. ಇದು ಬೌದ್ಧರ ಕೇಂದ್ರವಾಗಿತ್ತು.[೪೫] ಇದರ ಹಿಂದಿನ ಹೆಸರು ದೀವೋಗಾಂವ್. ಇಲ್ಲೊಂದು ಬೌದ್ಧ ವಿಹಾರವೂ ಇತ್ತೆನ್ನುತ್ತಾರೆ. ತದಡಿಯಿಂದ ದ್ೀವಗಿಯವರೆಗೆ ಅಘನಾಶಿನಿಯಲ್ಲಿ ಸರಾಗವಾಗಿ ನೌಕಾಯಾನ ಮಾಡಬಹುದು. ೭–೮ ನೇ ಶತಮಾನದಲ್ಲಿ ಇಲ್ಲಿ ಬೌದ್ಧ ಬೀಕ್ಷುಗಳು ಒಂದು ಬೌದ್ಧವಿಹಾರ ನಿರ್ಮಿಸಿಕೊಂಡಿದ್ದರು. ಇದರೊಂದಿಗೆ ಮಿರ್ಜಾನ ಕೂಡಾ ಒಂದು ವ್ಯಾಪಾರಿ ಕೇಂದ್ರವಾಗಿತ್ತು. ಕಡಲಮಾರ್ಗವಾಗಿ ಬಂದ ವಸ್ತುಗಳು ಮಿರ್ಜಾನಿನಲ್ಲಿ ಮಾರಾಟವಾಗುತ್ತಿದ್ದವು. ಇಲ್ಲವೇ ಇಲ್ಲಿಂದ ಮುಂದೆ ಘಟ್ಟಕ್ಕೆ ಹೇರುಮಾರ್ಗದಲ್ಲಿ ಹೋಗುತ್ತಿದ್ದವು. ತದಡಿ ಬಂದರಿನ ಮೂಲಕ ಕಡಲವ್ಯಾಪಾರ ನಡೆದುದ್ದಕ್ಕೆ ಸಾಕ್ಷಿಯಾಗಿ ಮಿರ್ಜಾನಿನಲ್ಲಿ ಎರಡು ಹಳ್ಳಗಳು ನೋಡಸಿಗುತ್ತವೆ. ಅಲ್ಲಿರುವ ಕೋಟೆಯ ಹತ್ತಿರ ಕುದುರೆಹಳ್ಳ–ಕತ್ತೆಹಳ್ಳಗಳೆಂಬ ಎರಡು ಕಿರುತೊರೆಗಳಿವೆ. ಹೇರು ಮತ್ತು ಚಕ್ಕಡಿಗಳಿಗೆ ಬಳಸಿದ ಎತ್ತು–ಕತ್ತೆ–ಕುದುರೆಗಳನ್ನು ಈ ಹಳ್ಳಗಳಲ್ಲಿ ಮೈತೊಳೆಯಲು, ನೀರುಣಿಸಲು ಬಳಸುತ್ತಿದ್ದರೆಂದು ತಿಳಿಯುತ್ತದೆ.

ಅಘನಾಶಿನಿಯು ಸಮುದ್ರ ಸೇರುವಲ್ಲಿ ಸುಮಾರು ೫ ಕಿ.ಮೀವರೆಗೆ ಉಪ್ಪು ನೀರು ಒಳಗೆ ಬರುತ್ತದೆ. ಇಲ್ಲಿ ಬಹು ಪ್ರಾಚೀನ ಕಾಲದಿಂದ ನೈಸರ್ಗಿಕವಾಗಿ ಉಪ್ಪು ತಯಾರಿಸುತ್ತಾರೆ. ಹೀಗೆ ಇಲ್ಲಿ

ತಯಾರಾದ ಉಪ್ಪು ಘಟ್ಟದ ಪ್ರದೇಶಗಳಿಗೆ ಹೇರು–ಚಕ್ಕಡಿ–ಕುದುರೆ–ಕತ್ತೆಗಾಡಿಗಳ ಮೂಲಕ ಸಾಗುತ್ತಿತ್ತು. ಕಡಲೋತ್ತರ ವ್ಯಾಪಾರಕ್ಕೂ ಬಳಕೆಯಾಗುತ್ತಿತ್ತು.

ಹೊನ್ನಾವರದ ಅಣ್ಣೇಯರಸನ ಕೆಕ್ಕಾರಿನ ಶಾಸನ ಹಾಗೂ ಹಳದೀಪುರದ ತಾಮ್ರಶಾಸನಗಳು ಪಯ್ವುಗುಂದಪರಮೇಶ್ವರಪಲ್ಲವದೇವ[೪೬] ಚಾಲುಕ್ಯರ ಅಧೀನರಾಗಿದ್ದನೆಂದು ತಿಳಿಸುತ್ತವೆ. ಇವರ ಕಾಲದಲ್ಲಿ ಹೊನ್ನಾವರದಂತೆ ಕುಮಟಾ ಬಂದರೂ ಇವರ ಆಳ್ವಿಕೆಗೆ ಒಳಪಟ್ಟಿತ್ತು. ಕೆಕ್ಕಾರ ಮತ್ತು ಹಳದೀಪುರಗಳು ಇಂದು ಹೊನ್ನಾವರ ತಾಲೂಕಿಗೆ ಒಳಪಟ್ಟಿದ್ದರೂ ಇವು ಕುಮಟಾಕ್ಕೆ ಹತ್ತಿರದ ಹಳ್ಳಿಗಳು.

ನಂತರದ ಗೋವಾ, ಚಂದಾವರ ಕಾದಂಬರು, ದೇವಗಿರಿಯ ಯಾದವರು, ಹಾನಗಲ್ಲ್ ಕಾದಂಬರು ಕುಮಟಾದಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿದ್ದರು.

ಚಂದಾವರ ಕಾದಂಬರು ಕುಮಟಾದ ಬಳಿಯ ಚಂದಾವರ ಕೇಂದ್ರ ಮಾಡಿಕೊಂಡಿದ್ದರು. ಇವರ ರಾಜ್ಯಕ್ಕೆ ಕುಮಟಾ–ಗೋಕರ್ಣಗಳೂ ಸೇರಿದ್ದವು. ಗೋಕರ್ಣದಲ್ಲಿ ದೊರೆತಿರುವ ಶಾಸನಗಳಲ್ಲಿ ಒಂದಾದ ಕಾದಂಬಕಾಮದೇವನ ೧೨೫೫ ಶಾಸನ ಭೂಮಿಯನ್ನು ಅಗ್ರಹಾರಕ್ಕೆ ದತ್ತಿನೀಡಿದ್ದನ್ನು ಸೂಚಿಸುತ್ತದೆ[೪೭]. ಕ್ರಿ.ಶ ಹತ್ತನೇ ಶತಮಾನದಿಂದ ಹದಿಮೂರನೇ ಶತಮಾನದವರೆಗೆ ಅಸ್ತಿತ್ವದಲ್ಲಿದ್ದ ಸ್ಥಳೀಯ ಆಡಳಿತ ವಿಭಾಗಗಳಾದ ಹೈವೆಯ್ಯೆನೂರರಲ್ಲಿ ಗಂಗಾವಳಿಯ ದಕ್ಷಿಣದಲ್ಲಿಯ ೬೩ ಹಳ್ಳಿಗಳು ಸೇರಿದ್ದವು. ಅಂದರೆ ಹೈವೆಯಲ್ಲಿ ತದಡಿಯವರೆಗಿನ ಪ್ರದೇಶ ಸೇರಿತ್ತು. ಹೈಗುಂದವನ್ನು ಕೇಂದ್ರವಾಗಿ ಆಳಿದ್ದ ಹೈವರಸರು ಕಡಲನ್ನು ತಮ್ಮ ವಶದಲ್ಲಿಟ್ಟು ಕೊಂಡಿದ್ದರು. ಚಾಲುಕ್ಯರು 'ರಿಡಿ' ದ್ವೀಪ ವಶಪಡಿಸಿಕೊಳ್ಳುವಲ್ಲೂ ಈ ಕುಮಟಾ ಬಂದರು ಸಹಾಯಮಾಡಿದ್ದು ತಿಳಿಯುತ್ತದೆ. ಇವರು ಕುಮಟಾ ಬಂದರನ್ನು ಹಾಗೇ ಮಿರ್ಜಾನ್, ತದಡಿ ಗೋಕರ್ಣಗಳನ್ನು ತಮ್ಮ ವ್ಯಾಪಾರದ ಪ್ರಮುಖ ಕೇಂದ್ರ ಮಾಡಿಕೊಂಡಿದ್ದರು.

ನಂತರ ಬಂದ ನಗಿರೆಯ ಅರಸರು ಗೇರುಸೋಪ್ಪಾ ಕೇಂದ್ರ ಮಾಡಿಕೊಂಡು ರಾಜ್ಯವಾಳಿದರು. ಹೊನ್ನನೆಂಬುವನು ಈ ಅರಸು ಮನೆತನದ ಮೂಲ ಪುರುಷ ಇವನು ಹೊಯ್ಸಳಚಕ್ರವರ್ತಿ ವೀರಬಲ್ಲಾಳನ ಸೈನಿಕ[೪೮]. ಹೊಯ್ಸಳರ ಅವನತಿಯ ತರುವಾಯ ಈತ ಸ್ವಾತಂತ್ರನಾಗಿ ಆಳಿದ. ಈತನ ರಾಜ್ಯ ಭಟ್ಕಳ, ನಗರೆ, ಹೊನ್ನಾವರ, ಚಂದಾವರ, ಗೋಕರ್ಣ, ಬನವಾಸಿಯವರೆಗಿನ ಪ್ರದೇಶ ಒಳಗೊಂಡಿತ್ತು[೪೯]. ಗೇರಸೋಪ್ಪಾದಲ್ಲಿ ಮೂಡೆಜಿನದೇವರ ಪೀಠದಲ್ಲಿ ದೊರೆತಿರುವ ಹೈವೆಯ ಭೂಪಾಲನ ಸುಮಾರು ೧೩೦೦ರ ಶಾಸನಾಧಾರದಲ್ಲಿ ಈ ಮನೆತನದ ಪ್ರಾಚೀನತೆಯು ತಿಳಿಯುತ್ತದೆ. ಇದು ಹದಿಮೂರನೇ ಶಾತಮಾನದವರೆಗೆ ಹೋಗುತ್ತದೆ[೫೦]. ಜೈನರಾಗಿದ್ದ ಈ ವಂಶದವರು ಸಹಜವಾಗಿ ವ್ಯಾಪರಕ್ಕೆ ಪ್ರೋತ್ಸಾಹ ನೀಡಿದ್ದರು. ಕರಾವಳಿಯ ಪ್ರಮುಖ ಬಂದರುಗಳಾದ ಭಟ್ಕಳ, ಹೊನ್ನಾವರ

ಮತ್ತು ಕುಮಟಾ, ತದಡಿ ಗೋಕರ್ಣಗಳು ಇವರ ಕಾಲದಲ್ಲಿ ವ್ಯಾಪಾರಕ್ಕೆ ದೊಡ್ಡ ಪ್ರಮಾಣದಲ್ಲಿ ತೆರೆದುಕೊಂಡವು.

ಕ್ರಿ.ಶ ೧೪೧೭ರ ಶಾಸನವು ವಿಜಯನಗರದ ಸೇನಾನಾಯಕ ಹೊನ್ನಾವರ ವಾಸಿ ನಾಗಣ್ಣ ಒಡೆಯನು ಗೇರುಸೊಪ್ಪೆಯ ಮೇಲೆ ದಾಳಿ ಮಾಡಿದ್ದು ತಿಳಿಯುತ್ತದೆ. ವಿಜಯನಗರ ಪ್ರಭುತ್ವದ ಕಾಲದಲ್ಲಿ ಗೇರುಸೊಪ್ಪೆಯ ಅರಸರು ಮಹಾಮಂಡಳೇಶ್ವರರಾಗಿ ರಾಜ್ಯಭಾರ ಮಾಡುತ್ತಿದ್ದರು. ಈ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದಿತ್ತು. ವಿಜಯನಗರ ಸಾಮ್ರಾಜ್ಯಕ್ಕೆಬೇಕಾಗಿದ್ದ ಸೈನ್ಯಾಶ್ವಗಳು ಈ ಬಂದರುಗಳ ಮೂಲಕವೂ ಅರಬ್ಬ ರಾಷ್ಟ್ರಗಳಿಂದ ಬರುತ್ತಿದ್ದವು.

೨.೪. ಹೊನ್ನಾವರ ಬಂದರು

ಕನ್ನಡ ಕರಾವಳಿಯ ಪ್ರಮುಖ ಬಂದರು ಹೊನ್ನಾವರ. ಮೌರ್ಯರ ಕಾಲದಿಂದಲೂ ಕಡಲೋತ್ತರ ಸಂಪರ್ಕಕ್ಕೆ ಈ ರೇವುಪಟ್ಟಣ ಪ್ರಮುಖ ಕೊಂಡಿಯಾಗಿತ್ತು. ಶರಾವತಿ ನದಿ ಕಡಲು ಸೇರುತ್ತಿದ್ದ ಪ್ರದೇಶದಲ್ಲಿ ಈ ಬಂದರಿಗೆ ಅನತಿ ದೂರದಲ್ಲಿ ಕಡಲಲ್ಲಿ ಎತ್ತರವಾದ ದ್ವೀಪ ನವಿಲೇದುರ್ಗ-ಬಸವರಾಜದುರ್ಗ ಇರುವುದರಿಂದ ವ್ಯಾಪಾರಿ ನೌಕೆಗಳಿಗೆ ದಾರಿ ದೀಪದಂತಿದೆ. ಶರಾವತಿ ನದಿಯಲ್ಲಿ ಪೂರ್ವದತ್ತ ಸುಮಾರು ಮುವತ್ತು ಕಿಲೋ ಮೀಟರವರೆಗೆ ಸರಾಗವಾಗಿ ನೌಕಾಯಾನ ಮಾಡಬಹುದಾಗಿದೆ. ಇದರಿಂದ ವನೋತ್ಪನ್ನ ಹಾಗೂ ಇನ್ನಿತರ ಸರಕುಗಳನ್ನು ಸುಲಭವಾಗಿ ತಂದು ವ್ಯಾಪಾರ ಮಾಡಲು ಅನುಕೂಲವಾಗಿತ್ತು. ಒಳನಾಡಿನೊಂದಿಗೆ ಸಂಪರ್ಕ ಕಲ್ಪಿಸುವ ಇಷ್ಟು ಉತ್ತಮ ವ್ಯವಸ್ಥೆ ಬೇರೆ ಯಾವುದೇ ಕನ್ನಡ ನಾಡಿನ ರೇವು ಪಟ್ಟಣಗಳಿಗೆ ಇಲ್ಲ.

ಹೊನ್ನಾವರ ಬಂದರು ಶ್ರೀಲಂಕಾ ಹಾಗೂ ಆಫ್ರಿಕಾದ ದೇಶಗಳಿಗೆ ಸಂಪರ್ಕ ಕಲ್ಪಿಸಲು ಇದ್ದ ಉತ್ತಮ ಮಾರ್ಗವಾಗಿತ್ತು. ಬನವಾಸಿ ಬೌದ್ಧ ಕೇಂದ್ರದಿಂದ ಶ್ರೀಲಂಕಾಕ್ಕೆ ಹೋದ ಬೌದ್ಧ ಭಿಕ್ಷುಗಳು ಬಳಸಿದ್ದು ಇದೇ ಬಂದರು ಮಾರ್ಗ ಎಂದು ಹಲವು ವಿದ್ವಾಂಸರು ಸ್ಪಷ್ಟಪಡಿಸಿದ್ದಾರೆ[೫೧], ಹೊನ್ನಾವರದಲ್ಲಿ ದೊರೆತಿರುವ ಕೈಕೇಯ ಚಿತ್ರಸೇನನ ಆರನೇ ಶತಮಾನದ ಶಾಸನ ಈ ರೇವಿನ ಪ್ರಾಚೀನತೆಗೆ ಒಂದು ಸಾಕ್ಷಿಯಾಗಿದೆ. ಕೈಕೇಯ ವಂಶವು ಪಂಜಾಬಮೂಲದೆಂದೂ ಮುಂದೆ ಸ್ಥಳೀಯ ರಾಜವಂಶಗಳೊಂದಿಗೆ ಸಂಬಂಧ ಬೆಳೆಸಿ ಇಲ್ಲಿಯೇ ನೆಲೆಸಿದರೆಂದು ತಿಳಿಯಲಾಗಿದೆ[೫೨]. ಶರಾವತಿ ನದಿಯಲ್ಲಿರುವ ಹೈಗುಂದವು ಪ್ರಾಚೀನ ವ್ಯಾಪಾರಿ ಹಾಗೂ ಆಡಳಿತ ಕೇಂದ್ರವಾಗಿತ್ತು. ಇಲ್ಲಿ ದೊರೆತ್ತಿರುವ ಕ್ರಿ.ಶ.ಪೂ ಒಂದು ಹಾಗೂ ಕ್ರಿ.ಶ ಒಂದನೇ ಶತಮಾನದ ಸುಟ್ಟ ಇಟ್ಟಿಗೆಗಳರಾಶಿ ಹಾಗೂ ಕ್ರಿ.ಶ ಐದನೇ ಶತಮಾನಕ್ಕೆ ಸೇರಿಸಬಹುದಾದ ಮರಳುಕಲ್ಲಿನ ಎರಡು ದುಂಡು ಬೌದ್ಧ ಶಿಲ್ಪಗಳು ಈ ಸ್ಥಳ ಹಿಂದೆ ಹೊಂದಿದ್ದ ಸ್ಥಾನವನ್ನು ತಿಳಿಸುತ್ತದೆ. ರಾಜಧಾನಿಯಾಗಿ, ಧಾರ್ಮಿಕ

ಕೇಂದ್ರವಾಗಿ ಹಾಗೂ ವ್ಯಾಪಾರಿ ಕೇಂದ್ರವಾಗಿದ್ದ ಹೈಗುಂದವು ಒಂದು ಸುರಕ್ಷಿತ ತಾಣವಾಗಿತ್ತು. ಇಲ್ಲಿ ಚದುರಿಬಿದ್ದಿರುವ ಇಟ್ಟಿಗೆಗಳು ಹಿಂದೆ ಇಲ್ಲಿ ಇದ್ದಿರಬಹುದಾದ ಒಂದು ಬೃಹತ್‌ಸ್ತೂಪದ ಅವಶೇಷಗಳಾಗಿರಬುದೆಂದು ತಿಳಿಯಲಾಗಿದೆ.

ಹೊನ್ನಾವರ ಬಂದರೆಂದು ಕರೆಯುವ ಬಂದರವು ಶರಾವತಿ ನದಿಯ ಮುಖಜ ಭೂಮಿಯಲ್ಲಿದೆ. ಬಂದರಿನಬಳಿ ದೊಡ್ಡಗುಡ್ಡ ಶರಾವತಿಯ ಬಲಭಾಗದಲ್ಲಿ ನದಿಯನ್ನು ಬಳಸಿ ನಿಂತಿದೆ. ಆ ಗುಡ್ಡವನ್ನು ದಾಟಿ ನದಿಯು ಮುಂದೆ ಹರಿದು, ಉತ್ತರದಿಂದ ಬರುವ ಬಡಗಣಿನದಿಯೊಂದಿಗೆ ಕಡಲನ್ನೂ ಸೇರುತ್ತದೆ. ಈ ಸಂಗಮದಲ್ಲಿ ಶರಾವತಿ ಹಾಗೂ ಬಡಗಣಿ ನದಿಗಳೆರಡೂ ಅರಬ್ಬಿ ಸಮುದ್ರವನ್ನು ಸೇರುತ್ತವೆ. ಸಂಗಮದಿಂದ ೨ ಕಿ.ಮೀ. ದೂರ ಪಶ್ಚಿಮದಲ್ಲಿ ಕಡಲ ಮಧ್ಯದಲ್ಲೇ ಬಸವರಾಜದುರ್ಗ ಎಂದು ಇಂದು ಕರೆಯಲ್ಪಡುವ ಎತ್ತರವಾದ ಗುಡ್ಡ ಒಂದಿದೆ. ಇದು ಸುಮಾರು ೩ ಕಿ.ಮೀ. ವ್ಯಾಪ್ತಿ ಹೊಂದಿರುವ ದ್ವೀಪ. ಲೈಟರೈಟ್ ಕಲ್ಲು ಹಾಗೂ ಮಣ್ಣಿನಿಂದ ಕೂಡಿದೆ.

ಈ ದ್ವೀಪವು ಪ್ರಾಚೀನ ಕಾಲದಿಂದ ಕಡಲ ವ್ಯಾಪಾರಿಗಳಿಗೆ ದಾರಿದೀಪದಂತೆ ಸಹಕರಿಸುತ್ತಾ ಬಂದಿದೆ. ಇಲ್ಲಿರುವ ಸ್ಥಳಾವಕಾಶ ಮತ್ತು ನೀರು ಕಡಲಯಾನಿಗಳಿಗೆ ತುಂಬಾ ಸಹಾಯಕವಾಗಿತ್ತು. ಮುಂದೆ ಕೆಳದಿಯ ರಾಣಿ ಚೆನ್ನಮ್ಮಾಜಿಯ ಮಗ ಬಸವರಾಜನು ಇಲ್ಲೊಂದು ಕೋಟೆ ನಿರ್ಮಿಸಿ ಕಡಲೋತ್ತರ ವ್ಯಾಪಾರಕ್ಕೆ ಹಾಗೂ ಹೊನ್ನಾವರ ಬಂದರಿನ ರಕ್ಷಣೆಗೆ[೫೩] ಬಳಸಿಕೊಂಡನು. ಅಂದಿನಿಂದ ಈ ದ್ವೀಪವು ಬಸವರಾಜ ದುರ್ಗವಾಯಿತು. ಹಿಂದೆ ಇದನ್ನು ನವಿಲೇದುರ್ಗ ಎಂದು ಕರೆಯುತ್ತಿದ್ದರು.

ಹೊನ್ನಾವರ ಬಂದರವು ಶರಾವತಿ ನದಿಯು ಅರಬ್ಬಿ ಸಮುದ್ರ ಸೇರುವಲ್ಲಿ ನಿರ್ಮಾಣಗೊಂಡಿದೆ. ಸಂಗಮದ ದಕ್ಷಿಣ ದಿಕ್ಕಿನಲ್ಲಿ ಕಾಸರಕೋಡ, ಕಳಸನಮೋಟೆ, ಮಾವಿನಕುರ್ವಾಗಳು ಲಾಳಾಕಾರವಾಗಿ ನಿಂತಿವೆ. ಈ ಊರುಗಳನ್ನು ಬಳಸಿ ಹರಿಯುವ ಶರಾವತಿ ಆಳವಾಗಿರುವುದರಿಂದ ಮತ್ತು ಮೇಲ್ಕಾಣಿಸಿದ ಊರುಗಳಲ್ಲಿ ತೀರಕ್ಕೆ ಸಮೀಪದಲ್ಲಿ ತೆಂಗಿನ ಮರಗಳ ತೋಟ ಇರುವುದರಿಂದ ಇದೊಂದು ಕೊಲ್ಲಿಯ ರೂಪ ಪಡೆದಿದೆ. ಸರಕು ತುಂಬಿದ ದೊಡ್ಡ ದೊಡ್ಡ ಹಡಗುಗಳನ್ನು ಇಲ್ಲಿ ಲಂಗರು ಮಾಡಬಹುದಿತ್ತು.

ಬಂದರಿನ ಉತ್ತರಕ್ಕೆ ಹೊನ್ನಾವರ, ಬೆಲಕೊಂಡ, ಕರ್ಕಿಕೋಡಿ, ಕರ್ಕಿ, ಪಾವಿನಕುರ್ವಾಗಳು ಹಬ್ಬಿವೆ. ಇಲ್ಲಿ ಕರ್ಕಿ, ಪಾವಿನಕುರ್ವಾದ ಮಧ್ಯದಿಂದ ಬಡಗಣಿ ಹೊಳೆಯು ಹರಿದು ಬಂದು ಕಡಲನ್ನು ಸೇರುತ್ತದೆ. ಪಶ್ಚಿಮದತ್ತ ಸಂಗಮಕ್ಕೆ ಎದುರಾಗಿ ಬಸವರಾಜದುರ್ಗ ನಿಂತಿದೆ. ಪ್ರಸ್ತುತ ಹೊನ್ನಾವರ ಬಂದರಿರುವ ಸ್ಥಳದಲ್ಲಿ ಪಶ್ಚಿಮಘಟ್ಟದಗುಡ್ಡ ಒಂದು ನದಿಗೆ ಚಾಚಿ ನಿಂತಿದೆ. ಗೋವಾ

ಕಾದಂಬರು ತಮ್ಮ ಕಾಲದಲ್ಲಿ ಒಂದು ಕೋಟೆ ನಿರ್ಮಿಸಿದ್ದರು[೫೪]. ಈ ಗುಡ್ಡವು ನದಿಗೆ ಚಾಚಿದ್ದಲ್ಲಿ ಕನಿಷ್ಟ ೪ ರಿಂದ ೫ ಮೀಟರ್‌ವರೆಗೆ ನೀರು ನಿಂತಿರುತ್ತಿತ್ತು. ಆದ್ದರಿಂದ ಇಲ್ಲಿ ಸರಕು ತುಂಬಿದ ದೊಡ್ಡ ಹಡಗುಗಳನ್ನು ಲಂಗರು ಮಾಡುವುದು ಸುಲಭವಾಗಿತ್ತು. ಕಾಸರಕೋಡ್, ಹೊನ್ನಾವರ, ಕರ್ಕಿ, ಹಳದೀಪುರಗಳು ವಿಸ್ತಾರ ಭೂಪ್ರದೇಶಗಳಿಂದ ಕೂಡಿವೆ. ಇಲ್ಲಿ ಸರಕುಗಳನ್ನು ಸಂಗ್ರಹಮಾಡುವುದು ಹಾಗೂ ಹಡಗುಗಳಿಗೆ ತುಂಬುವುದು ಮತ್ತು ಇಳಿಸುವುದು ಸುಲಭವಾಗಿತ್ತು[೫೫].

ಹೈಗುಂದ

ಹೊನ್ನಾವರ ಬಂದರಿಗೆ ಪೂರಕವಾಗಿ ಹೈಗುಂದ ಹಾಗೂ ಗೇರುಸೊಪ್ಪಾ ಬಂದರುಗಳಿದ್ದವು. ಹೊನ್ನಾವರದಿಂದ ಸುಮಾರು ೨೦ಕಿ.ಮೀ. ಪೂರ್ವಕ್ಕೆ ಯಾನ ಮಾಡಿದರೆ ಹೈಗುಂದ ಸಿಗುತ್ತದೆ. ಇದು ಶರಾವತಿ ನದಿಯಲ್ಲಿರುವ ದ್ವೀಪ. ಸುಮಾರು ಮೂರು ಕಿ.ಮೀ. ವ್ಯಾಪ್ತಿಯ ಈ ದ್ವೀಪವು ಕೃತಕ ಸೃಷ್ಟಿ ಎಂಬ ವಾದವೂ ಇದೆ.[೫೬]

ಎಂಟನೆಯ ಶತಮಾನದಿಂದಲೇ ಹೈವೆಯ ಉಲ್ಲೇಖವು ಶಾಸನಗಳಲ್ಲಿ ಕಂಡು ಬರುವುದು. ಕ್ರಿ.ಶ.ಸುಮಾರು ೯೯೧ರ ಅಣ್ಣೇಯರಸನ ಹಳದೀಪುರ ತಾಮ್ರ ಪತ್ರವು ಪಯ್ಪುಗುಂದ ಪರಮೇಶ್ವರ ಎಂದು ಉಲ್ಲೇಖಿಸುತ್ತದೆ. ಈ ಹೈಗುಂದವು ಹೈವೆನಾಡಿನ ಪ್ರಾಚೀನ ಬಂದರಾಗಿದೆ[೫೭]. ಹೈಗುಂದವು ಸುಮಾರು ೭೦ಮೀಟರ್ ಎತ್ತರವಾದ ದಿಬ್ಬದಿಂದ ಕೂಡಿದ್ದು, ಈ ದಿಬ್ಬ ದ್ವೀಪದಪೂರ್ವ ತುದಿಯಲ್ಲಿದೆ. ದಕ್ಷಿಣದತ್ತ ಈ ದ್ವೀಪ ಪ್ರವೇಶಕ್ಕೆ ಮಾರ್ಗವಿದ್ದು, ಉಳಿದ ಭಾಗ ಬಯಲು ಪ್ರದೇಶವಾಗಿದೆ. ಇಲ್ಲಿ ಪ್ರಾಚೀನ ಕಾಲದ ವಿಗ್ರಹಗಳು, ಇಟ್ಟಿಗೆಯರಾಶಿಯು ಕಂಡುಬರುತ್ತದೆ. ಈ ಇಟ್ಟಿಗೆಗಳು ಕ್ರಿ.ಶ. ಪೂರ್ವ ಹಾಗೂ ಕ್ರಿ.ಶ ಒಂದನೇ ಶತಮಾನವೆಂದು ತಿಳಿಯಲಾಗಿದೆ. ಇಲ್ಲಿ ಎರಡು ಅಡಿ ಎತ್ತರದ ಎರಡು ಮರಳು ಕಲ್ಲಿನ ಬುದ್ಧನ ವಿಗ್ರಹಗಳಿವೆ ಇವುಗಳ ಕಾಲವನ್ನು ಕ್ರಿ.ಶ. ಐದನೇ ಶತಮಾನವೆಂದು ಗುರುತಿಸಿದ್ದಾರೆ. ಇವುಗಳೊಂದಿಗೆ ಸೂರ್ಯನದೆಂದು ಗುರುತ್ತಿಸುವ ತ್ರುಟಿತಶಿಲ್ಪ, ಕುಬ್ಜಯಕ್ಷ ಹಾಗೂ ಜನಾರ್ಧನ ವಿಗ್ರಹ ಹಾಗೂ ಅಮ್ಮನವರ ದೇವಾಲಯದಲ್ಲಿ ಕೆಲವು ಲೋಹದ ವಿಗ್ರಹಗಳಿವೆ. ಇವುಗಳಲ್ಲಿ ಭೂದೇವಿಯ ವಿಗ್ರವು ಇದೆ. ಬಬ್ರಿಗುಂದದಲ್ಲಿ ಒಂದು ಸ್ಥಾನಿಕ ಶೈಲಿಯ ೬ ಅಡಿ ಎತ್ತರದ ವಿಗ್ರಹವಿದೆ. ಇದು ತಾಂತ್ರಿಕ ಪಂಥದ ಬುದ್ಧನಾಗಿರಬುದೆಂದು ತಿಳಿಯಲಾಗಿದೆ. ಇದೊಂದು ದೊಡ್ಡ ವ್ಯಾಪಾರಿ ಕೇಂದ್ರವಾಗಿತ್ತೆಂದು ತಿಳಿದುಬರುತ್ತದೆ.

ಹೈಗುಂದದ ದಕ್ಷಿಣ ದಿಕ್ಕಿನಲ್ಲಿ ದೊಡ್ಡ ಹಡಗುಗಳನ್ನು ಲಂಗರು ಮಾಡಲು ಸಾಧ್ಯವಿತ್ತು. ದ್ವೀಪದ ದಕ್ಷಿಣದಲ್ಲಿ ಕೊಡಾಣಿ, ಕುದ್ರಗಿ ಇತ್ಯಾದಿ ದ್ವೀಪಗಳಿವೆ. ಹೈಗುಂದದ ಪೂರ್ವ ಭಾಗದ

ನದಿಯ ದಂಡೆಯಲ್ಲಿ ಅಳ್ಳಂಕಿ ಎಂಬ ಊರು ಇದ್ದು ಅಲ್ಲಿಯ ಹೊನ್ನಾವರ ಶಿವಮೊಗ್ಗಾ ರಾಜ್ಯ ಹೆದ್ದಾರಿಯ ಪಕ್ಕದಲ್ಲಿ ಪಶ್ಚಿಮ ಘಟ್ಟಗಳು ಉತ್ತರ ದಕ್ಷಿಣವಾಗಿ ಹಬ್ಬಿವೆ. ಇದರಿಂದ ಹಾಗೂ ದಕ್ಷಿಣದತ್ತ ಇರುವ ಕುದ್ರಗಿ, ಸಂಶಿ, ಬಸವನ ಬೆಟ್ಟ ಮತ್ತು ಕೊಡಾಣಿಗಳಿಂದ ಹೈಗುಂದಕ್ಕೆ ನೈಸರ್ಗಿಕ ರಕ್ಷಣೆ ದೊರಕಿತ್ತು. ಇದು ಶರಾವತಿಯ ಮುಖಜ ಭೂಮಿಯಿಂದ ದೂರದಲ್ಲೂ ಹಾಗೂ ಸಹ್ಯಾದ್ರಿಯ ಘಟ್ಟದ ಬುಡದಲ್ಲೂ ಇದ್ದುದರಿಂದ ಪಶ್ಚಿಮಘಟ್ಟಗಳಲ್ಲಿಯ ನೈಸರ್ಗಿಕ ಉತ್ಪನ್ನಗಳನ್ನು ವ್ಯಾಪಾರಕ್ಕೆ ಬಳಸಲು ಅನುಕೂಲವಾಗಿತ್ತು.

ಗೇರುಸೋಪ್ಪಾ

ಹೈಗುಂದದಿಂದ ಪೂರ್ವಕ್ಕೆ ಚಲಿಸಿದರೆ ಸುಮಾರು ೧೩-೧೪ ಕಿ.ಮೀ ದೂರದಲ್ಲಿ ಗೇರುಸೊಪ್ಪಾ ಇದೆ. ಇದನ್ನು ಹಿಂದೆ ನಗಿರೆ, ನಗರೆ, ಕ್ಷೇಮಪುರ, ಭಲ್ಲಾತಕೀಪುರ ಮುಂತಾದ ಹೆಸರು[೫೮]ಗಳಿಂದ ಕರೆಯುತ್ತಿದ್ದರು. ಇದು ಶರಾವತಿಯ ನಡುವೆ ಇದ್ದ ಪ್ರದೇಶವಾಗಿತ್ತು. ಶರಾವತಿ ನದಿ ಇಲ್ಲಿ ನಗರೆಯನ್ನು ದ್ವೀಪವಾಗಿಸಿದೆ. ಮಧ್ಯದಲ್ಲಿ ನಗಿರೆ ರಾಜ್ಯದ ಕೇಂದ್ರವಿತ್ತು. ಪ್ರಾಚೀನ ಕಾಲದಿಂದಲೂ ಈ ಪ್ರದೇಶವು ಕಡಲೋತ್ತರ ವ್ಯಾಪಾರಕ್ಕೆ ಬೇಕಿದ್ದ ಮಸಾಲೆ ದಿನಿಸುಗಳು, ವನಸ್ಪತಿ, ಔಷಧಿಸಸ್ಯ ಹಾಗೂ ಮರಮಟ್ಟುಗಳನ್ನು ಒದಗಿಸುತ್ತಿತ್ತು. ಹೊನ್ನಾವರದವರೆಗೆ ಶರಾವತಿನದಿಯಲ್ಲಿ ಸರಕುಗಳನ್ನು ನೌಕೆಗಳಮೂಲಕ ಸಾಗಿಸಿ ಮುಂದೆ ಕಡಲೋತ್ತರ ವ್ಯಾಪಾರಕ್ಕೆ ಹಡಗುಗಳ ಮೂಲಕ ಕಳಿಸುತ್ತಿದ್ದರು. ಇಂದಿಗೂ ಶರಾವತಿನದಿಯಲ್ಲಿ ಹೊನ್ನಾವರದಿಂದ-ಗೇರಸೊಪ್ಪಾದವರೆಗೆ ನೌಕಾಯಾನ ಮಾಡಬಹುದು. ಗೇರಸೊಪ್ಪಾದಿಂದ ಬನವಾಸಿ, ಬೆಳ್ಗಿಗಾವೆ, ಶಿವಮೊಗ್ಗಾ ಮತ್ತಿತರ ಪ್ರದೇಶಗಳಿಗೆ ಹೇರು, ಚಕ್ಕಡಿ ಹಾಗೂ ಎತ್ತು, ಕುದುರೆ, ಕತ್ತೆಗಳ ಮೇಲೆ ಸರಕುಗಳನ್ನು ಹೇರಿಕೊಂಡು ಹೋಗುತ್ತಿದ್ದರು. ಅಲ್ಲಿಯ ಸರಕುಗಳನ್ನು ಅದೇ ರೀತಿ ಇಲ್ಲಿ ತರುತ್ತಿದ್ದರು.

ಗೇರಸೊಪ್ಪಾ, ನಗಿರೆಯು ಸಂಪೂರ್ಣವಾಗಿ ಪಶ್ಚಿಮ ಘಟ್ಟದ ಎತ್ತರ ಪರ್ವತ ಸಾಲುಗಳಿಂದ ಸುತ್ತುವರಿದಿದೆ. ವೈರಿಗಳಿಂದ ದುರ್ಭೆಧ್ಯ ಎನಿಸಿದ ಈ ಪಟ್ಟಣದಲ್ಲಿ ಒಂದು ಬಲವಾದ ಕೋಟೆ ಇತ್ತು. ಇಂದಿಗೂ ಆ ಕೋಟೆಯ ಅವಶೇಷಗಳನ್ನು ನೋಡಬಹುದು. ವನ, ಗಿರಿ, ಜಲ ಹಾಗೂ ಬಯಲು ದುರ್ಗಗಳಲಕ್ಷಣ ಇದಕ್ಕಿದೆ.

ಹೊನ್ನಾವರದ ಶರಾವತಿಯ ದಂಡೆಯಲ್ಲಿದ್ದ ಇನ್ನೊಂದು ವ್ಯಾಪಾರಿ ಕೇಂದ್ರ ಎಂದರೆ ಹೊಸಾಡ-ಗುಂಡಬಾಳ. ಇಲ್ಲಿ ಗುಂಡಬಾಳ ಹೆಸರಿನ ಹೊಳೆಯಿದೆ. ಗುಂಡಬಾಳ ಹೊಳೆಯು ಪಶ್ಚಿಮ ಘಟ್ಟದಲ್ಲಿ ಹುಟ್ಟಿ, ಶರಾವತಿಯನ್ನು ಸೇರಿ ಕಡಲನ್ನು ತಲುಪುತ್ತದೆ. ಈ ಗುಂಡಬಾಳ ಹೊಳೆಯು ನೈಸರ್ಗಿಕವನೋತ್ಪತ್ತಿಗಳನ್ನು ವ್ಯಾಪಾರಕ್ಕೆ ತರಲು ಸಹಾಯಕವಾಗಿತ್ತು. ಇಂದಿಗೂ

ಅಲ್ಲಲ್ಲಿ ಗುಂಡಬಾಳ, ಹಡಿನಬಾಳ, ಹೊಸಾಡಗಳಲ್ಲಿ ಕಡಲ ವ್ಯಾಪಾರಕ್ಕೆ ಸರಕುಗಳನ್ನುಸಂಗ್ರಹಿಸಲು-ಸಾಗಿಸಲು ಬಳಸುತ್ತಿದ್ದ ತಂತ್ರಗಳ ಅವಶೇಷ ನೋಡಬಹುದು.

ನದಿಗಳು

ಶಿವಮೊಗ್ಗಾ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಅಂಬುತೀರ್ಥ ಎಂಬಲ್ಲಿ ಜನಿಸುವ ಶರಾವತಿಯು ಜೋಗದ ಬಳಿ ಸುಮಾರು ೯೦೦ ಅಡಿ ಎತ್ತರದಿಂದ ಧುಮ್ಮಿಕ್ಕುತ್ತಾಳೆ. ಅಲ್ಲಿ ಜಲವಿದ್ಯುತ್ ಉತ್ಪಾದನೆಗೆ ಶರಾವತಿ ನದಿಯನ್ನು ಬಳಸಿಕೊಳ್ಳಲಾಗಿದೆ. ಮುಂದೆ ಗಿರಿ-ಕಂದರಗಳನ್ನು ಹಾದು ಗೇರುಸೊಪ್ಪಾ ತಲುಪುತ್ತಲೇ ನಗಿರೆ ಪ್ರದೇಶವನ್ನು ದ್ವೀಪವನ್ನಾಗಿ ಮಾಡಿ ಮುಂದೆ ಸುಮಾರು ೩೨ ಕಿ.ಮೀ. ಹರಿದು ಹೊನ್ನಾವರದ ಬಳಿ ಕಡಲನ್ನೂ ಸೇರುತ್ತದೆ.

ತೀರ್ಥಹಳ್ಳಿಯಿಂದ ದಕ್ಷಿಣಾಭಿಮುಖವಾಗಿ ಹರಿಯುವ ಶರಾವತಿ ೩೦ಕಿ.ಮೀ. ಪ್ರಯಾಣಿಸಿ, ಜೋಗ ಜಲಪಾತ ನಿರ್ಮಿಸಿ ಮುಂದೆ ಸುಮಾರು ೨೫ಕಿ.ಮೀ. ಹರಿದು ಗೇರಸೊಪ್ಪಾ ತಲುಪುತ್ತದೆ. ಸರಿಸುಮಾರು ೯೦ಕಿ.ಮೀ. ಪಯಣದಲ್ಲಿ ತನ್ನ ಹರಿವಿನ ಆಸುಪಾಸಿನಲ್ಲಿ ಲಕ್ಷಾಂತರ ಜನರಿಗೆ ಜೀವದಾಯಿಯಾಗಿದ್ದಾಳೆ. ಶರಾವತಿ ದಂಡೆಯಲ್ಲಿ ಸಾವಿರಾರು ಎಕರೆಭೂಮಿಯಲ್ಲಿ ಕೃಷಿ, ತೋಟಗಾರಿಕೆನಡೆಯುತ್ತಿದೆ. ಇಲ್ಲಿ ಕಾಳುಮೆಣಸು, ಅಡಿಕೆ, ತೆಂಗುಗಳು ತೋಟದ ಬೆಳೆಯೂ ಹೌದು.

ಪರ್ವತಗಳು

ಹೊನ್ನಾವರವು ಪಶ್ಚಿಮ ಘಟ್ಟಗಳ ಸಾಲುಗಳಿಂದ ಸುತ್ತುವರಿದಿದೆ. ಹೊನ್ನಾವರದ ಬಳಿ ಉತ್ತರ-ದಕ್ಷಿಣವಾಗಿ ಹಬ್ಬಿರುವ ಈ ಪರ್ವತ ಸಾಲುಗಳು ಪದರುಪದರಾಗಿವೆ. ನಿತ್ಯ ಹರಿದ್ವರ್ಣ ಮರಗಳಿಂದ ಕೂಡಿರುವ ಈ ಪರ್ವತ ಸಾಲುಗಳು ನೈಸರ್ಗಿಕ ಸಂಪತ್ತಿನಿಂದ ಕೂಡಿವೆ. ಇಲ್ಲಿಯ ನವಿಲು, ಮಂಗ ಮುಂತಾದ ಜೀವಿಗಳು ಹಾಗೂ ಶ್ರೀಗಂಧ ಮತ್ತು ಇತ್ಯಾದಿ ಮರಗಳು ವಿದೇಶಿಯರ ಮನಸೆಳೆದಿದ್ದವು. ಇಲ್ಲಿ ದೊರೆಯುವ ಅತಿಖಾರದ ಕಾಳುಮೆಣಸು ಹಾಗೂ ಇತರೆ ಮಸಾಲೆದಿನಿಸುಗಳು ಬಹುಪ್ರಖ್ಯಾತವಾಗಿವೆ. ಪಶ್ಚಿಮ ಘಟ್ಟಗಳು ದುರ್ಗಮವಾಗಿದ್ದರೂ, ನಡುನಡುವೆ ಕೆಲವು ಕಣಿವೆಗಳನ್ನೂ ನಿರ್ಮಿಸಿದೆ. ಈ ಕಣಿವೆಯ ಬದಿಯಲ್ಲಿ ಸಾಗಿದರೆ ಹೊನ್ನಾವರ ಬಂದರಿನ ಹಿನ್ನಾಡಾಗಿರುವ ಶಿವಮೊಗ್ಗಾ, ಬೆಂಗಳೂರು, ಕೋಲಾರಗಳನ್ನು ಸುಲಭವಾಗಿ ತಲುಪಬಹುದಾಗಿತ್ತು. ಅಲ್ಲಿಂದ ಮುಂದೆ ಪೂರ್ವ ಕರಾವಳಿಯ ಬಂದರುಗಳು ಕರ್ನೂಲು, ಅನಂತಪುರ, ಧರ್ಮಾವರ, ಮಾಮಲ್ಲಪುರಗಳನ್ನು ತಲುಪಬಹುದಿತ್ತು.

ಹೀಗೆ ಪಶ್ಚಿಮ ಘಟ್ಟದಲ್ಲಿ ಉಂಟಾಗಿರುವ ಎರಡು ಕಣಿವೆ ಮಾರ್ಗಗಳು. ಇವುಗಳಲ್ಲಿ ಒಂದು, ಮಾಪಿನಗುಂಡಿ-ಕತ್ತಲೆಕಾನು ಹಾಗೂ ಎರಡು, ರಾಮತೀರ್ಥ, ಚಂದಾವರ ಮೂಲಕ

ಬಡಾಳ ಮಾರ್ಗ. ಹೊನ್ನಾವರ ಬಂದರಿನಿಂದ ಹೊರಟ ಭೂಮಾರ್ಗ ಕವಲಕ್ಕಿ, ಹಡಿನಬಾಳ, ಮೂಡ್ಕಣಿ, ಗೇರಸೊಪ್ಪಾ, ಕತ್ತಲೆಕಾನು, ಮಾವಿನಗುಂಡಿ ಮೂಲಕ ಸಿದ್ಧಾಪುರಕ್ಕೂ ಮತ್ತು ಜೋಗಕ್ಕೂ ಸಂಪರ್ಕ ಕಲ್ಪಿಸುತ್ತಿತ್ತು. ಗೇರಸೊಪ್ಪಾದವರೆಗೆ ಬಂದರಿನಿಂದ ನೌಕೆಯ ಮೂಲಕ ಬಂದ ಸರಕು ಮುಂದೆ ರಸ್ತೆ ಮಾರ್ಗವಾಗಿ ಈ ದಾರಿಯ ಮೂಲಕ ಸಾಗುತ್ತಿತ್ತು. ಜೋಗದಿಂದ ಶಿವಮೊಗ್ಗಾ, ಬೆಂಗಳೂರು, ಮೈಸೂರು, ಕೋಲಾರದವರೆಗೂ ಈ ಮಾರ್ಗ ಸಂಪರ್ಕ ಸಾಧಿಸುತ್ತಿತ್ತು.

ಇನ್ನೊಂದು ಮಾರ್ಗವಾದ ಹೊನ್ನಾವರ ಅರೇಅಂಗಡಿ, ಮೂಲಕ ಸಿದ್ಧಾಪುರ–ಬಿಳಗಿಗಳಿಗೆ ಅಲ್ಲಿಂದ ಶಿರ್ಶಿಗೆ ಸಂಪರ್ಕ ಕಲ್ಪಿಸುತ್ತಿತ್ತು. ಇದೇ ಮಾರ್ಗ ಅರೆಅಂಗಡಿಯಿಂದ ಚಂದಾವರ ಹಾಗೂ ಅಲ್ಲಿಂದ ಬಡಾಳಘಾಟಿ ಮಾರ್ಗವಾಗಿ ಶಿರ್ಶಿ–ಬನವಾಸಿ–ಬೆಳ್ಳಿಗಾವಿ–ಹುಬ್ಬಳ್ಳಿಗಳಿಗೆ ಸಂಪರ್ಕ ಕಲ್ಪಿಸುತ್ತಿತ್ತು.

ಇನ್ನೊಂದು ಹೊನ್ನಾವರ ಹಳದೀಪುರ–ಅಗ್ರಹಾರ–ಚಿಪ್ಪಿಹಕ್ಕಲು–ಕೆಕ್ಕಾರ ಮೂಲಕ ಬಡಾಳಕ್ಕೆ ಹೋಗುತ್ತಿತ್ತು. ಇವುಗಳೆಲ್ಲ ಸುರಕ್ಷಿತ ಹಾಗೂ ಸುಲಭದ ಮಾರ್ಗಗಳಾಗಿದ್ದವು. ಸರಕು ಸಾಗಣೆ ಹಾಗೂ ಸರಕುಗಳ ಸಂಗ್ರಹಕ್ಕೆ ಈ ಪ್ರದೇಶದ ತೋಟಗಳು, ಗದ್ದೆಗಳು ಸಹಾಯಕವಾಗಿದ್ದವು. ಬಡಾಳಮಾರ್ಗವು ಕುಮಟಾ ಬಂದರಿಗೂ ಹಾಗೂ ಹಿನ್ನಾಡಿಗೂ ಸಂಪರ್ಕ ಕಲ್ಪಿಸುವ ಮಾರ್ಗವೂವಾಗಿತ್ತು.

ಬಂದರಿನ ಉಪಯುಕ್ತತೆ

ಹೊನ್ನಾವರ ಬಂದರು ನೈಸರ್ಗಿಕ ಕೊಡುಗೆಗಳಿಂದ ಕೂಡಿದೆ. ಇಲ್ಲಿ ಶರಾವತಿ ನದಿಯು ಕಡಲನ್ನು ಸೇರುವ ಸ್ಥಳವು ಅರ್ಧಚಂದ್ರಾಕೃತಿಯನ್ನೂ ನಿರ್ಮಿಸಿದೆ. ಇದು ಒಂದು ಚಿಕ್ಕ ಕೊಲ್ಲಿಯಂತಾಗಿದೆ. ಕಡಲಲ್ಲಿ ನಿಂತಿರುವ ಬಸವರಾಜದುರ್ಗವು ಹಡಗುಗಳನ್ನು ಲಂಗರು ಮಾಡಲು ಅನುಕೂಲವಾಗಿತ್ತು. ಅಲ್ಲದೇ ದೂರ ಕಡಲಲ್ಲಿರುವ ಹಡಗುಗಳಿಗೆ ದಿಕ್ಸೂಚಿಯಂತೆ ಮಾರ್ಗದರ್ಶನ ಮಾಡುತ್ತಿತ್ತು.

ಹೊನ್ನಾವರ ಬಂದರಿನ ಬಳಿ ಎತ್ತರವಾದ ಗುಡ್ಡ ನದಿಗೆ ಚಾಚಿಕೊಂಡಿದೆ. ಇಲ್ಲಿ ನೀರು ಸದಾ ೫ ರಿಂದ ೬ ಮೀಟರ್ ನಿಂತಿರುತ್ತಿತ್ತು. ಆದ್ದರಿಂದ ಸರಕು ತುಂಬಿದ ಹಲವು ಹಡಗುಗಳನ್ನು ಏಕಕಾಲದಲ್ಲಿ ಈ ಪ್ರದೇಶದಲ್ಲಿ ಲಂಗರು ಹಾಕಲು ಸಾಧ್ಯವಾಗುತ್ತಿತ್ತು. ಶರಾವತಿಯ ಮುಖಜ ಪ್ರದೇಶದ ಕಾಸರಕೋಡ, ಹೊಸಪಟ್ಟಣ, ಮಾವಿನಕುರ್ವಾಗಳಲ್ಲೂ ಹಡಗುಗಳನ್ನು ನಿಲ್ಲಿಸಬಹುದಿತ್ತು. ಇಂದಿನ ಕೆಳಗಿನ ಪಾಳ್ಯಾ ಪ್ರದೇಶವು ಶರಾವತಿಯ ಮೂಲಕ ಗೇರಸೊಪ್ಪಾಕ್ಕೆ ಹೋಗುವ ಹಡಗುಗಳಿಗೂ ಹಾಗೂ ಮೇಲಿನಿಂದ ಸರಕು ತುಂಬಿಕೊಂಡು ಬರುವ ಹಡಗುಗಳಿಗೆ

ಉತ್ತಮ ಆಶ್ರಯ ತಾಣಗಳಾಗಿದ್ದವು. ಹಡಗುಗಳ ರಿಪೇರಿ, ಹೊಸಹಡಗುಗಳ ನಿರ್ಮಾಣ ಮುಂತಾದ ಕೆಲಸಕ್ಕೆ ಈ ಪ್ರದೇಶ ಬಳಕೆಯಾಗುತ್ತಿತ್ತು.

ಉತ್ತರದ ಕರ್ಕಿ, ಹಳದೀಪುರ, ಪಾವಿನಕುರ್ವಾ ಪ್ರದೇಶಗಳೂ ಕಡಲೋತ್ತರಯಾನದ ಹಡಗುಗಳಿಗೆ ಸಹಾಯಕವಾಗಿದ್ದವು. ಇಲ್ಲಿ ಕಡಲನ್ನೂ ಸೇರುವ ಬಡಗಣಿ ನದಿಯು ನೌಕಾಯಾನಕ್ಕೆ ಅನುಕೂಲಕರವಾಗಿತ್ತು. ಚಂದಾವರ ಬಡಾಳವನ್ನು ಸಂಪರ್ಕಿಸಲು ಈ ಬಡಗಣಿ ಹೊಳೆಯನ್ನು ಬಳಸಲಾಗುತ್ತಿತ್ತು.

ಗುಂಡಬಾಳ ಪ್ರದೇಶವು, ಗುಂಡಬಾಳ ಹೊಳೆಯ ಮೂಲಕ ಊರನ್ನು ಸಂಪರ್ಕಿಸಲು ಹಾಗೇ ಪಶ್ಚಿಮ ಘಟ್ಟಗಳನ್ನು ತಲುಪಲು ಉತ್ತಮ ಮಾಧ್ಯಮವಾಗಿತ್ತು. ಗುಂಡಬಾಳಹೊಳೆಯ ಮೂಲಕ ತಂದ ವನೋತ್ಪನ್ನಗಳನ್ನು ಶರಾವತಿನದಿಯ ಮೂಲಕ ಬಂದರು ತಲುಪಿಸಲಾಗುತ್ತಿತ್ತು. ಹಡಿನಬಾಳ, ಜಲವಳಕರ್ಕಿ ಹಾಗೂ ಅನಿಲಗೋಡಗಳು ಕಡಲ ವ್ಯಾಪಾರಕ್ಕೆ ಸರಕುಗಳನ್ನು ತುಂಬಲು ಇಳಿಸಲು ಅನುಕೂಲಕರ ಸ್ಥಳಗಳಾಗಿದ್ದವು.

ಹೈಗುಂದವು ತಾನೆ ಒಂದು ಬಂದರಾಗಿದ್ದರಿಂದ ಇಲ್ಲಿ ಯಾವುದೇ ದಿಕ್ಕಿನಲ್ಲಿ ಸರಕು ತುಂಬಿದ ಹಡಗನ್ನು ಲಂಗರು ಮಾಡಬಹುದಾಗಿತ್ತು. ನೈಸರ್ಗಿಕವಾದ ಅನುಕೂಲತೆಗಳು ಈ ಬಂದರಿಗಿದ್ದವು.

ಅಂತೆಯೇ ಗೇರಸೊಪ್ಪಾ, ನಗಿರೆ ಪ್ರದೇಶವು ಉತ್ತಮ ರೇವು ಆಗಿದ್ದವು. ಇಲ್ಲಿ ಸಹ್ಯಾದ್ರಿಯ ಮಡಿಲಲ್ಲಿ ದೊರಕುತ್ತಿದ್ದ ಮಸಾಲೆದಿನಿಸುಗಳು ನೇರವಾಗಿ ಹಡಗಿಗೆ ತುಂಬಲು ಸಾಧ್ಯವಿತ್ತು. ಗೇರಸೊಪ್ಪಾದ ಬಳಿ ಶರಾವತಿಯು ತನ್ನ ವೇಗವನ್ನು ಕಳೆದುಕೊಂಡು ವಿಸ್ತಾರವೂ, ಶಾಂತವೂ ಆಗಿರುವುದರಿಂದ ಹಡಗುಗಳಲ್ಲಿ ಸರಕು ತುಂಬುವುದು ಹಾಗೂ ಇಳಿಸುವುದು ಸುಲಭವಾಗಿತ್ತು. ಶರಾವತಿಯ ನಡುವೆ ಅಲ್ಲಲ್ಲಿ ಕಂಡುಬರುವ ಕುದ್ರುಗಳು, ದ್ವೀಪಗಳು ಉತ್ತಮ ಕೃಷಿಭೂಮಿಯಾಗಿದ್ದವು. ಇಲ್ಲಿ ಬೆಳೆಯುವ ಅಕ್ಕಿ ಹಾಗೂ ತೆಂಗು ಬಹು ಬೇಡಿಕೆಯನ್ನು ಹೊಂದಿದ್ದವು.

ಹೊನ್ನಾವರ ಬಂದರಿನ ಪ್ರದೇಶವು ಹೂಳಿನಿಂದ ಮುಕ್ತವಾಗಿತ್ತು. ಶರಾವತಿ ನದಿಯು ಗೇರಸೊಪ್ಪಾದಿಂದ ಬಂದರು ಸೇರುವರೆಗಿನ ಪ್ರದೇಶವು ಹೆಚ್ಚು ಅಂಕುಡೊಂಕುಗಳನ್ನು ಹೊಂದಿಲ್ಲ. ಅಲ್ಲದೇ ನದಿಮುಖಜದವರೆಗೂ ಗಟ್ಟಿ ಕೆಂಪು ಮಣ್ಣಿನ ಭೂ ಪ್ರದೇಶವನ್ನು ಹೊಂದಿದೆ. ಇದರಿಂದ ಹೂಳು ಉತ್ಪನ್ನವಾಗುತ್ತಿರಲಿಲ್ಲ. ಕಡಲ ಮಧ್ಯದಲ್ಲಿ ನಿಂತಿರುವ ಬಸವರಾಜದುರ್ಗವು ಕಡಲೆಡೆಯಿಂದ ಬೀಸಿ ಬರುವ ದೊಡ್ಡ ದೊಡ್ಡ ತೆರೆಗಳಿಗೆ ಅಲೆತಡೆಯಂತೆ ವರ್ತಿಸುವುದರಿಂದ

ಬಂದರಿನೆಡೆ ದೊಡ್ಡ ತೆರೆಗಳು ಹೊಡೆಯುತ್ತಿರಲಿಲ್ಲ. ಅಲ್ಲದೇ ದುರ್ಗದ ಎರಡೂ ಬದಿಗಳಿಂದ ದೊಡ್ಡ ಹಡಗುಗಳಿಗೆ ಬಂದರು ಸೇರಲು ಸುರಕ್ಷಿತ ಮಾರ್ಗ ನಿರ್ಮಾಣವಾಗಿತ್ತು.

ಹೊನ್ನಾವರ ಬಂದರಿನ ಬೆಳವಣಿಗೆ

ಹೊನ್ನಾವರ ಬಂದರು ಪ್ರಾಚೀನ ಶಿಲಾಯುಗ ಹಾಗೂ ನೂತನ ಶಿಲಾಯುಗ ಕಾಲದಲ್ಲೂ ಸಹ ಜನವಸತಿಯ ಕೇಂದ್ರವಾಗಿತ್ತಲ್ಲದೇ ಸಮಕಾಲೀನ ಸಂಸ್ಕೃತಿಯೊಂದಿಗೆ ಸಂಬಂಧ ಹೊಂದಿದ್ದನ್ನು ಅ.ಸಂದರ ಹಾಗೂ ಎಸ್.ಆರ್.ರಾವ್‌ರವರ ಸಂಶೋಧನೆಗಳು ತಿಳಿಸುತ್ತವೆ. ಶಿವಮೊಗ್ಗಾದಲ್ಲಿ ದೊರೆತಿರುವ ನವಶಿಲಾಯುಗದ ನುಣುಪು ಕೈಕೊಡಲಿಗಳು ಹೊನ್ನಾವರದ ಬಂದರಿನ ಸಂಪರ್ಕದಿಂದ ತಲುಪಿರುವ ಬಗ್ಗೆ ಹಲವು ಸಂಶೋಧನೆಗಳು ಶೃತಪಡಿಸಿವೆ. ಎಸ್.ಆರ್.ರಾವ್ ಹಾಗೂ ಅ.ಸುಂದರರವರು ತಮ್ಮ ಅಧ್ಯಯನದ ಮೂಲಕ ಹೊನ್ನಾವರ ಬಂದರು ಹರಪ್ಪ ಸಂಸ್ಕೃತಿಯೊಂದಿಗೆ ಹಾಗೂ ಕರ್ನಾಟಕದ ಒಳಭಾಗದ ಪ್ರಾಚೀನ ಮಾನವ ನೆಲೆಗಳೊಂದಿಗೆ ಸಂಪರ್ಕ ಸಾಧಿಸಿದ್ದನ್ನು ಮತ್ತು ಹಟ್ಟಿ ಚಿನ್ನದ ಗಣಿಯಿಂದ ತೆಗೆದ ಚಿನ್ನವನ್ನು ಹರಪ್ಪ ಸಂಸ್ಕೃತಿಯ ಜನರೊಂದಿಗೆ ಸ್ನಿಯಟಾಯನ್ ಮಣಿಗಳೊಂದಿಗೆ ವಿನಿಮಯ ಮಾಡಿಕೊಳ್ಳಲು ಈ ಬಂದರನ್ನು ಸಾಗಾಟ ಮಾರ್ಗವಾಗಿಸಿಕೊಂಡಿದ್ದರು ಎಂದು ತಿಳಿಸಿರುತ್ತಾರೆ.[೫೯]

ಶ್ರೀಲಂಕಾಕ್ಕೆ ಹೋದ ಥೇರರಕ್ಕಿತ ಮತ್ತು ಆತನ ಅನುಯಾಯಿಗಳು ಬಳಸಿದ ಮಾರ್ಗ ಹೊನ್ನಾವರದ ಬಂದರಾಗಿತ್ತು.[೬೦] ಶ್ರೀಲಂಕಾದೊಂದಿಗೆ ನಡೆದ ಅನೇಕ ಪ್ರಮುಖ ಸಂಪರ್ಕಕ್ಕೆ ಹೊನ್ನಾವರ ಬಂದರು ಮಾರ್ಗವಾಗಿತ್ತು. ಅಶೋಕನ ಮಗ ಮಹೇಂದ್ರ ತಾಮ್ರಪರ್ಣಿ ಅಥವಾ ಶ್ರೀಲಂಕಾಕ್ಕೆ ಕೈಗೊಂಡ ಯಾತ್ರೆಗೆ ಹೊನ್ನಾವರ ಬಂದರು ಮಾರ್ಗವಾಗಿತ್ತು. ಇದೇ ಮಾರ್ಗವಾಗಿ ಶ್ರೀಲಂಕಾಕ್ಕೆ ಬ್ರಾಹ್ಮಿಲಿಪಿ ತಲುಪಿತ್ತು. ದಕ್ಷಿಣ ಭಾರತದ ಮೂಲಕ ಅದರಲ್ಲೂ ಹೊನ್ನಾವರ ಬಂದರಿನ ಮೂಲಕ ಸಂಪರ್ಕ ಪಡೆದಿದ್ದರಿಂದಲೇ ಶ್ರೀಲಂಕಾದ ಪಶ್ಚಿಮ ಜಿಲ್ಲೆಗಳಲ್ಲಿ ಸಂಪರ್ಕದ ಕುರುಹುಗಳನ್ನು ದಟ್ಟವಾಗಿ ಕಾಣಬಹುದು[೬೧].

ಶಂಗಂ ಕವಿಗಳು 'ಮೊರಿಯ' ಮತ್ತು "ವೆಂಬಮೊರಿಯ" ರನ್ನು ಹಲವು ಬಾರಿ ಉಲ್ಲೇಖಿಸಿರುವರು. ಆದರೆ ಕ್ರಿ.ಶ ೫ನೆಯ ಶತಮಾನದ ಈ ಮೋರಿಯರು ಕೊಂಕಣ ಮೌರ್ಯರಾಗಿರಲು ಸಾಧ್ಯ. ಅಂದರೆ ಕದಂಬರಂತೆ ಪಶ್ಚಿಮ ಕರಾವಳಿಯ ಪ್ರದೇಶದವರಾದ ಇವರೂ ಸಿಂಹಳದೊಡನೆ ಸಂಪರ್ಕಹೊಂದಿದ್ದರೆಂದು ಭಾವಿಸಬೇಕಾಗುವುದು. ಇದರಿಂದ ಹೊನ್ನಾವರ ಬಂದರು ಮೌರ್ಯ-ಕದಂಬರ ಕಾಲದಲ್ಲೇ ವಿದೇಶ ಸಂಪರ್ಕದ ಪ್ರಮುಖ ಕೊಂಡಿಯಾಗಿತ್ತು. ಹೊನ್ನಾವರ ಬಂದರು ಇರುವ ಭೌಗೋಳಿಕ ಪರಿಸರ ಹಾಗೂ ನೈಸರ್ಗಿಕಕೊಡುಗೆಗಳು ಅದಕ್ಕೆ ಸಹಾಯಕವಾಗಿದ್ದವು. ಮೂಲಕದಂಬರು ಪಶ್ಚಿಮ ಕರಾವಳಿಯ ಉತ್ತರದ ಬಂದರುಗಳಲ್ಲಿ

ಕಾರವಾರದಂತೆ ಹೊನ್ನಾವರದ ಬಂದರೂ ಅವರ ಚಟುವಟಿಕೆಯ ಸ್ಥಳವಾಗಿರಲೇಬೇಕು. ಯಾಕೆಂದರೆ ಕಾರವಾರ ಬಂದರಿನಂತೆ ಹೊನ್ನಾವರ ಬಂದರೂ ಪಶ್ಚಿಮ ಕರಾವಳಿಯ ಇತರ ಬಂದರುಗಳಿಗೆ ಸಾಗುವ ಹಡಗುಗಳಿಗೆ ಮಧ್ಯದ ನಿಲ್ದಾಣವಾಗಿದ್ದಂತೆ, ಪರದೇಶದ ಬಂದರುಗಳಿಗೆ ಸುರಕ್ಷಿತ ನೌಕಾಮಾರ್ಗ ಹೊಂದಿದ್ದ ಕೇಂದ್ರವಾಗಿತ್ತು. ಈ ಕಾರಣಗಳಿಂದ ಈ ಬಂದರಿಗೆ ಬರುತ್ತಿದ್ದ ಹಡಗುಗಳನ್ನು ದೋಚಲು ಕಡಲ್ಗಳ್ಳರು ಹೊಂಚುಹಾಕಿ ಕುಳಿತಿರುತ್ತಿದ್ದರು. ಹೀಗೆ ಹೊಂಚುಹಾಕಲು ಹಾಗೂ ಪರಾರಿಯಾಗಲು ಈ ಬಂದರು ನೈಸರ್ಗಿಕ ಪರಿಸರ ಹೊಂದಿದೆ. ಇದೇ ಕಾಲದಲ್ಲಿ ಕರ್ನಾಟಕದಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿದ ಶಾತವಾಹನರು ವ್ಯಾಪಾರಿಗಳಾಗಿದ್ದರು. ಅಥವಾ ವ್ಯಾಪಾರಕ್ಕೆ ಹೆಚ್ಚಿನ ಮಾನ್ಯತೆ ನೀಡಿದ್ದರು. ಇವರ ನಾಣ್ಯಗಳು ನೌಕಾಚಿತ್ರ ಹೊಂದಿದ್ದು ಇವರು ಕಡಲೋತ್ತರ ವ್ಯಾಪಾರಕ್ಕೆ ನೀಡಿದ ಮಹತ್ವ ತಿಳಿಯುತ್ತದೆ. ಈ ವಂಶದ ಶಾಸನ ಒಂದು ಬನವಾಸಿಯಲ್ಲಿ ದೊರೆತಿದೆ. ಇದು ಉತ್ತರ ಕನ್ನಡದಲ್ಲಿ ದೊರೆತಿರುವ ಶಾಸನಗಳಲ್ಲಿ ಪ್ರಾಚೀನ ಶಾಸನವಾಗಿದೆ. ವಾಸಿಷ್ಠಿ ಶಿವಶ್ರೀಪುಳಮಾವಿಯ ಈ ಶಾಸನ ಬ್ರಾಹ್ಮಿಲಿಪಿ ಪಾಕೃತ ಭಾಷೆಯಲ್ಲಿದೆ. ಇದರಿಂದ ಈ ಬನವಾಸಿ ಪ್ರದೇಶ ಶಾತವಾಹನರ ಅಧೀನಕ್ಕೆ ಒಳಪಟ್ಟಿತ್ತೆನ್ನಬಹುದು. ಹಾಗೆ ಈ ವಂಶದ ಶಾಖೆಯಾದ ಚುಟುಕುಲದ ಚುಟುಕುಲಾನಂದ ಶಾತಕರ್ಣಿಯ ಶಾಸನ ಒಂದು ಇಲ್ಲಿ ದೊರೆತಿದೆ. ಇದೂ ಕೂಡ ಬ್ರಾಹ್ಮಿಲಿಪಿ ಪ್ರಾಕೃತಭಾಷೆಯಲ್ಲಿದೆ. ಈ ಶಾಸನದ ಕಾಲ ಸುಮಾರು ಮೂರನೇ ಶತಮಾನ ಎಂದು ಹೇಳಬಹುದು. ಬನವಾಸಿ ಇವರೆಲ್ಲರ ಕೇಂದ್ರ ಪ್ರದೇಶವಾಗಿತ್ತು. ಟೋಲೇಮಿಯ ಕೃತಿಯು ಬನವಾಸಿಯನ್ನು ಪ್ರಮುಖ ವ್ಯಾಪಾರಿ ಕೇಂದ್ರವೆಂದು ಉಲ್ಲೇಖಿಸುತ್ತದೆ. ಈ ಎಲ್ಲ ಉದಾಹರಣೆ ನೋಡಿದಾಗ ಬನವಾಸಿಗೆ ಬರುತಿದ್ದ ಕಡಲೋತ್ತರ ವ್ಯಾಪಾರದ ಮಾರ್ಗಕ್ಕೆ ಹೊನ್ನಾವರ ಬಂದರು ಪ್ರಮುಖ ಮಾರ್ಗವಾಗಿತ್ತು.

ಹೊನ್ನಾವರ ಬಂದರಿನ ಪ್ರಾಚೀನತೆಯು ಬ್ರಹ್ಮಗಿರಿಯ ಬೃಹತ್ ಶಿಲಾ ಸಂಸ್ಕೃತಿಯವರೆಗೆ ಹೋಗುತ್ತದೆ. ಈ ಸಂಸ್ಕೃತಿಯನ್ನು ರೂಪಿಸಿದವರು ಸಿಥಿಯ–ಇರಾಣ ಬುಡಕಟ್ಟಿಗೆ ಸೇರಿದ ಜನರಲ್ಲಿ ಕಲ್ಗೋರಿಗಳನ್ನು ಕಟ್ಟುವ ಸಂಪ್ರದಾಯ ಮತ್ತು ಕಬ್ಬಿಣದ ಉಪಯೋಗ ಇದ್ದಿರಬಹುದೆಂದು ತೋರುವುದು. ಇಲ್ಲಿಗೆ ಬರಲು ಇವರಿಗೆ ಇದ್ದ ಉತ್ತಮ ಮಾರ್ಗವೆಂದರೆ ಹೊನ್ನಾವರ ಬಂದರಾಗಿತ್ತು.

ಹೊನ್ನಾವರದ ಬಂದರು ಮತ್ತು ಸಿಂಧುನದಿ ನಾಗರಿಕತೆಯ ಸಂಬಂಧದ ಕುರಿತು ಅನೇಕ ಹೊಸ ವಿವರಗಳು ದಾಖಲಾಗಿವೆ. ಹಟ್ಟಿ ಹಾಗೂ ಕೆ.ಜಿ.ಎಫ್ ಚಿನ್ನದ ಗಣಿಗಳ ಕಾಲದಲ್ಲಿ ಭಾರತದಲ್ಲಿ ಬೇರೆಯಾವುದೇ ಚಿನ್ನದ ಗಣಿಗಳಿರಲಿಲ್ಲ. ಆದ್ದರಿಂದ ಇಲ್ಲಿಯ ಚಿನ್ನ ಹೊನ್ನಾವರ ಬಂದರು ಮಾರ್ಗವಾಗಿ ಸಿಂಧುನದಿ ನಾಗರಿಕತೆಯ ಜನರಿಗೆ ತಲುಪಿತ್ತೆಂದು ನಿರ್ಧರಿಸಿದ್ದಾರೆ.

ಪ್ರಾಯಶಃ ಪಶ್ಚಿಮ ಕರಾವಳಿಯ ಪ್ರಮುಖ ಬಂದರಾದ ಹೊನ್ನಾವರದ ಮೂಲಕ ಸಿಂಧು ಕಣಿವೆಗೆ ಸಾಗರ ಮಾರ್ಗವಾಗಿ ಚಿನ್ನ ಪೂರೈಕೆಯಾಗಿರಬಹುದು ಎಂದು ಊಹಿಸಲಾಗಿದೆ. ಹೊನ್ನಾವರದ ಹೆಸರೇ ಚಿನ್ನವನ್ನು ಸೂಚಿಸುತ್ತದೆ.

ಮೌರ್ಯ, ಶಾತವಾಹನರ ಕಾಲದಲ್ಲಿ ರೋಮ್ ದೇಶದ ವರ್ತಕರು ಕೋಠಿಗಳನ್ನು ಕಟ್ಟಿಕೊಂಡು ವ್ಯಾಪಾರ ನಡೆಸುತ್ತಿದ್ದರು. ಹೀಗೆ ರೋಮನ್ ನಿಂದ ಬರುತ್ತಿದ್ದ ವರ್ತಕರು ಕರ್ನಾಟಕವನ್ನು ಕಡಲಮಾರ್ಗವಾಗಿ ಸಂಪರ್ಕಿಸುತ್ತಿದ್ದರು. ಆಗಲೂ ಅವರಿಗೆ ಪಶ್ಚಿಮ ಕರಾವಳಿಗೆ ಹತ್ತಿರದ ಹಾಗೂ ಸುರಕ್ಷಿತ ಮಾರ್ಗ ಹೊನ್ನಾವರವಾಗಿತ್ತು.

ಶಾತವಾಹನರ ಕಾಲದಲ್ಲಿ ಹೊನ್ನಾವರ ಬಂದರು ಇವರ ಅಧೀನವಾಗಿದ್ದದ್ದು ತಿಳಿಯುತ್ತದೆ. ಶಾತವಾಹನರ ಕಾಲದ ಸುಡಾವೆ ಮಣ್ಣಿನ ಆಟದ ಸಾಮಾಗ್ರಿಗಳು ಹೈಗುಂದದಲ್ಲಿ ದೊರೆತಿವೆ. ಹೈಗುಂದದಲ್ಲಿರುವ ಇತರ ಶಿಲ್ಪಗಳು ಹೊನ್ನಾವರ ಶಾತವಾಹನರ ಕಾಲದಲ್ಲಿ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತೆಂದು ತಿಳಿಸುತ್ತದೆ. ಹೈಗುಂದ ಶರಾವತಿ ನದಿಯಲ್ಲಿರುವ ದ್ವೀಪವಾಗಿದೆ. ಇದು ಹೊನ್ನಾವರದಿಂದ ಸುಮಾರು ೨೨ ಕಿ.ಮೀ ದೂರದಲ್ಲಿದೆ. ಇಲ್ಲಿದೊರೆತಿರುವ ಕ್ರಿ.ಶ.ಪೂ ೧ ಹಾಗೂ ಕ್ರಿ.ಶ ೧ ನೇ ಶತಮಾನದ ಇಟ್ಟಿಗೆಗಳು ಹಾಗೂ ಕ್ರಿ.ಶ ೫ ನೇ ಶತಮಾನಕ್ಕೆ ಸೇರಿದ ಬುದ್ಧನ ದುಂಡು ಶಿಲ್ಪಗಳು ಈ ದ್ವೀಪವನ್ನು ಶಾತವಾಹನರ ಪ್ರಮುಖ ವ್ಯಾಪಾರಿ ಕೇಂದ್ರವೆಂದು ತೋರಿಸುತ್ತವೆ. ಶಾತವಾಹನರ ಕಾಲದಲ್ಲಿ ಇದು ಪ್ರಮುಖ ವ್ಯಾಪಾರಿ ಹಾಗೂ ಧಾರ್ಮಿಕ ಕ್ಷೇತ್ರವಾಗಿತ್ತು. ಸುತ್ತಲೂ ಶರಾವತಿ ನದಿ ತುಂಬಿ ಹರಿಯುತ್ತಿದ್ದುದರಿಂದ ಹಾಗೂ ಹೊನ್ನಾವರ ಬಂದರಿನಿಂದ ದೂರದಲ್ಲಿರುವುದುರಿಂದ ಕಡಲ್ಗಳ್ಳರ ಹಾಗೂ ಇತರ ತೊಂದರೆಗಳಿಂದ ರಕ್ಷಣೆ ಪಡೆದಿತ್ತು. ಜೊತೆಯಲ್ಲಿ ವ್ಯಾಪಾರಕ್ಕೆ ಅನುಕೂಲಕರವಾಗಿತ್ತು. ಬಂಗ್ಲೆಗುಡ್ಡ ಎಂದು ಇಂದು ಕರೆದು ಕೊಳ್ಳುತ್ತಿರುವ ಗುಡ್ಡದ ಸುತ್ತಲೂ ಚದುರಿ ಬಿದ್ದಿರುವ ಇಟ್ಟಿಗೆಯ ರಾಶಿ ಗಮನಿಸಿದಾಗ, ಇಲ್ಲಿ ಒಂದು ಬೌದ್ಧ-ಸ್ತೂಪ ಅಥವಾ ವಿಹಾರ ಇತ್ತೆಂದು ತಿಳಿಯಬಹುದು. ಈ ಗುಡ್ಡದ ಪಕ್ಕದಲ್ಲಿ ವಿಶಾಲವಾದ ಬಯಲು ಪ್ರದೇಶ ಇರುವುದರಿಂದ ವ್ಯಾಪಾರದ ಸಾಮಾಗ್ರಿಗಳನ್ನು ಇಲ್ಲಿ ಸಂಗ್ರಹಿಸಿಡ ಬಹುದಾಗಿತ್ತು. ವ್ಯಾಪಾರಿಗಳಿಗೆ ತಂಗಲು ವಿಹಾರ ಹಾಗೂ ಇಲ್ಲಯೇ ಆಹಾರ ಧಾನ್ಯ ಬೆಳೆದು ಕೊಳ್ಳಲು ಅನುಕೂಲವಾದಂಥಹ ಪ್ರದೇಶವಿತ್ತು. ಇದೆಲ್ಲ ಕಾರಣಗಳಿಂದ ಹೊನ್ನಾವರ ಬಂದರಿನ ಮೊದಲ ರೂಪ ಹೈಗುಂದ ಎಂದು ಹೇಳಬಹುದು.

ನಂತರ ಬಂದ ಕದಂಬರು ಸಹಜವಾಗಿ ಹೈಗುಂದವನ್ನೂ ಹಾಗೂ ಹೊನ್ನಾವರ ಬಂದರನ್ನು ವ್ಯಾಪಾರ ವ್ಯವಹಾರಕ್ಕಾಗಿ ಬಳಸಿಕೊಂಡರು. ಈ ಸಂದರ್ಭದಲ್ಲಿ ಕಡಲತಡಿಯಲ್ಲಿ ಕಡಲ್ಗಳ್ಳರ ಹಾವಳಿ ನಿಂತಿತ್ತು. ಬನವಾಸಿ ಕೇಂದ್ರವಾಗಿ ಕದಂಬರಾಳತೊಡಗಿದ್ದರು. ಹೈಗುಂದ

ವ್ಯಾಪಾರಿ ಕೇಂದ್ರಕಿಂತ ಹೆಚ್ಚಾಗಿ ಆಡಳಿತ ಕೇಂದ್ರವಾಗತೊಡಗಿತ್ತು. ಮುಂದೆ ಅನೇಕ ಅರಸರು ಇದನ್ನು ರಾಜಧಾನಿಯನ್ನಾಗಿ ಮಾಡಿ ಆಳತೊಡಗಿದರು.

ಕದಂಬರ ಆಡಳಿತಾವದಿಯಲ್ಲಿ ಸಂಪೂರ್ಣ ಉತ್ತರಕನ್ನಡ ಅವರ ವಶವಾಗಿತ್ತೆನ್ನಬಹುದು. ಕದಂಬರು ನಿರ್ಮಿಸಿರುವ ಅನೇಕ ಶಿಲ್ಪಗಳು ಇದಕ್ಕೆ ಪುರಾವೆ ಒದಗಿಸುತ್ತವೆ. ಕದಂಬರು ಬನವಾಸಿ ಕೇಂದ್ರವಾಗಿರಿಸಿ ಕೊಂಡಾಗ ಅವರ ರಾಜ್ಯದಲ್ಲಿ ಸಂಪೂರ್ಣ ಉತ್ತರ ಕನ್ನಡವಲ್ಲದೆ ಇಂದಿನ ದಕ್ಷಿಣ ಕನ್ನಡದ ಉತ್ತರ ತುದಿಯ ಕೇಲವು ಭಾಗವೂ ಒಳಗೊಂಡಿತ್ತು. ಬಹುತೇಕ ಗೋವಾದ ಕರಾವಳಿಭಾಗಗಳು ಒಳಗೊಂಡಿದ್ದವು.

ಕದಂಬರ ಅಧೀನರಾಗಿದ್ದ ಕೆಲವು ಅರಸು ಮನೆತನಗಳು ಅವರ ಕರಾವಳಿ ಭೂ ಭಾಗದ ಆಡಳಿತ ನೋಡಿಕೊಳ್ಳುತ್ತಿದ್ದರು. ಹೊನ್ನಾವರದಲ್ಲಿ ದೊರೆತಿರುವ ಅತಿ ಪ್ರಾಚೀನ ಶಾಸನವಾದ ಕೆಕೇಯ ಚಿತ್ರಸೇನನ ತಾಮ್ರ ಶಾಸನವು ಬಹು ಅಪರೂಪದ ಚರಿತ್ರೆಯನ್ನು ಹೇಳುತ್ತದೆ. ಶಾಸನ ಸಂಸ್ಕೃತ ಭಾಷೆ, ದಕ್ಷಿಣಾತ್ಯ ಪೆಟ್ಟಗೆತಲೆಕಟ್ಟಿನ ಬ್ರಾಹ್ಮಿಲಿಪಿಯಲ್ಲಿ ರಚಿತವಾದ ಕದಂಬ ಮೃಗೇಶ ಹಾಗೂ ರವಿವರ್ಮನ ಶಾಸನಗಳ ಲಿಪಿಯನ್ನು ಹೋಲುತ್ತದೆ. ಇದರ ಕಾಲಾವಧಿ ಸುಮಾರು ೬ನೇ ಶತಮಾನ.

ಈ ಶಾಸನವೂ ಜಂಬುದ್ವೀಪ ಕೇಂದ್ರ ಮಾಡಿಕೊಂಡ ಕೈಕೇಯ ಕುಲಸಂಬೂತ ಮಹಾಕೆಲ್ಲ ಚಿತ್ರಸೇನನು, ನಾಪಿತಪಲ್ಲಿ ಗ್ರಾಮದಲ್ಲಿ ಒಂದು ತೋಟ ಹಾಗೂ ಭೂಮಿಯನ್ನು ಆರ್ಯಸಂಘಕ್ಕೆ ವಿಧಿಪೂರ್ವಕವಾಗಿ ಕೊಟ್ಟನೆಂದು ತಿಳಿಸುತ್ತದೆ. ಉಕ್ತವಾಗಿರುವ ರವಿಮಹಾರಾಜ ಕದಂಬ ರವಿವರ್ಮ, ಆತನ ಮಹಾಮಂಡಲಾಧಿಪತಿ ಆಗಿ ಚಿತ್ರಸೇನನು ಆಡಳಿತನಡೆಸುತ್ತಿದ್ದ ಎಂದು ಸೂಚಿಸುತ್ತದೆ. ಇಲ್ಲಿ ಬಂದಿರುವ ಅಂಬುದ್ವೀಪ ಹೈಗುಂದವಾಗಿದ್ದು ಆತನು ಬೌದ್ಧಸಂಘಕ್ಕೆ ದಾನ ನೀಡಿದ್ದು ತಿಳಿದು ಬರುತ್ತದೆ. ಹೈಗುಂದ ಕೇಂದ್ರವಾಗಿ ಚಿತ್ರಸೇನ ಹೈವೆ ನಾಡನ್ನೂ ಆಳುತ್ತಿದ್ದ ಎಂದು ತಿಳಿಯುತ್ತದೆ. ಕ್ರಿ.ಶ ೭೫೦ ರ ಪಲ್ಲವಗೋಪಾಲದೇವನ ಹಳದೀಪುರ ತಾಮ್ರಪತ್ರವು ಅರಸನನ್ನು ಪಯ್ವಗುಂದ ಪರಮೇಶ್ವರ ಎಂದು ಸಂಬೋಧಿಸಿ ವಿಕ್ರಮಾದಿತ್ಯ ಸತ್ಯಾಶ್ರಯ ಶ್ರೀಪ್ರಥ್ವಿವಲ್ಲಭಪಲ್ಲವರಾಜ ಎಂದು ಕರೆದಿದೆ. ಅದನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡು ರಾಜ್ಯಬಾರ ಮಾಡುತ್ತಿದ್ದನು. ಈತನ ಹೆಸರಿನೊಂದಿಗಿರುವ ವಿಕ್ರಮಾದಿತ್ಯ ಸತ್ಯಾಶ್ರಯ ಶ್ರೀಪ್ರಥ್ವಿವಲ್ಲಭ ಎಂಬ ಬಿರುದು ಚಾಲುಕ್ಯ ಸಾಮ್ರಾಟ ಎರಡನೆಯ ವಿಕ್ರಮಾದಿತ್ಯ (ಕ್ರಿ.ಶ ೭೩೩-೭೪೫) ನದು. ಪಲ್ಲವಗೋಪಾಲದೇವನು ಕದಂಬರಿಂದ ಸೋತ ಪಲ್ಲವ ವಂಶದ ಒಂದು ಶಾಖೆಯ ಅರಸ. ಕದಂಬರಿಂದ ಸೋತ ಪಲ್ಲವರು ನೊಳಂಬಪಲ್ಲವರೆಂಬ ಹೆಸರಿನಿಂದ ಕರ್ನಾಟಕದ ತುಮಕೂರು, ಆಂಧ್ರದ ಅನಂತಪುರ ಪ್ರದೇಶದಲ್ಲಿ ರಾಜ್ಯ ಸ್ಥಾಪಿಸಿಕೊಂಡಿದ್ದರು. ಆದರೆ ಯಾವುದೋ ಪಲ್ಲವ

ವಂಶ ಒಂದು ಕಾರವಾರ ಜಿಲ್ಲೆಯ ಕರಾವಳಿಯ ಪ್ರದೇಶದಲ್ಲಿ ರಾಜ್ಯಭಾರ ನಡೆಸುತ್ತಿತ್ತೆಂದು ಈ ಶಾಸನಗಳಿಂದ ತಿಳಿಯುತ್ತದೆ. ಚಾಲುಕ್ಯರ ಎರಡನೇ ವಿಕ್ರಮಾದಿತ್ಯ ಪ್ರಬಲ ದೊರೆ. ಮುಂದೆ 'ಪುರಿ' ಹಾಗೂ 'ರೇವತಿ' ದ್ವೀಪಗಳನ್ನು ಗೆದ್ದು ಕೊಂಡಿದ್ದನ್ನು. ಈ ಗೆಲುವಿನಲ್ಲಿ ಆತನ ಸಾಮಂತ ಪಲ್ಲವ ಗೋಪಾಲದೇವನ ಸಹಾಯವಿತ್ತು. ಅಂತಯೇ ಹೊನ್ನಾವರ ಬಂದರಿನ ಮೂಲಕ ವಿದೇಶದೊಂದಿಗೆ ವ್ಯಾಪಾರ ವ್ಯವಹಾರ ನಡೆಸುತ್ತಿದ್ದನು. ಈ ಎರಡನೇ ಪುಲಕೇಶಿಯು ಪರ್ಶಿಯಾದ ದೊರೆ ಎರಡನೇ ಖುಸ್ರುವಿನ ಆಸ್ಥಾನಕ್ಕೆ ತನ್ನ ಪ್ರತಿನಿಧಿಯನ್ನು ಕಳುಹಿಸಿದ ಬಗ್ಗೆ ದಾಖಲೆಗಳಿವೆ. ಇಂಥಹ ಸಂಬಂಧಕ್ಕೆ ಹೊನ್ನಾವರ ಬಂದರು ಪ್ರಮುಖ ಮಾರ್ಗವಾಗಿತ್ತು. ಪುಲಕೇಶಿಯು ಭೂಮಾರ್ಗದ ಮೇಲೆ ಸಂಪೂರ್ಣ ಪ್ರಭುತ್ವ ಹೊಂದಿಲ್ಲದ ಕಾರಣ ಸಮುದ್ರದ ಪರ್ಯಾಯಮಾರ್ಗ ಅನುಸರಿಸಿರುವ ಸಾದ್ಯತೆಗಳು ತುಂಬಾ ಇವೆ. ಇದೆ ಕಾಲದಲ್ಲಿ ಬೃಹತ್ ಪ್ರಮಾಣದಲ್ಲಿ ಅರಬ್ಬರೊಂದಿಗೂ ಹಾಗೂ ಪರ್ಶಿಯಾದೊಂದಿಗೂ ಕಡಲಮಾರ್ಗದಲ್ಲಿ ವ್ಯಾಪಾರಗಳು ನಡೆಯುತ್ತಿದ್ದವು.

ನಂತರದ ಇನ್ನೊಂದು ಪ್ರಮುಖ ಶಾಸನವೆಂದರೆ ಕೆಕ್ಕಾರಿನಲ್ಲಿ ದೊರೆತಿರುವ ಕ್ರಿ.ಶ ೮೦೦ ರ ಅಣ್ಣೇಯರಸನ ತಾಮ್ರಪಟ. ಕೆಕ್ಕಾರ ಹೊನ್ನಾವರದಿಂದ ೧೮ ಮೈಲಿ ದೂರದಲ್ಲಿರುವ ಗ್ರಾಮ. ಈತನನ್ನು ಪಯ್ವುಗುಂದಪರಮೇಶ್ವರ ಅಣ್ಣೇಯರಸ ಎಂದು ಕರೆಯಲಾಗಿದೆ. ಇದರಲ್ಲಿ ಆತ ಕಡತೋಕೆಯಿಂದ ಶಿವಳ್ಳಿಯವರೆಗಿನ ನಾಡನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಕಡತೋಕೆ, ಕೆಕ್ಕಾರಿನ ಪಶ್ಚಿಮದಲ್ಲಿ ೩ ಕಿ.ಮಿ ಅಂತರದಲ್ಲಿರುವ ಗ್ರಾಮವಾದರೆ ಶಿವಳ್ಳಿಯು ಉಡುಪಿ ಬಳಿಯ ಶಿವಳ್ಳಿ ಎನ್ನಲಾಗಿದೆ. ಇದರಿಂದ ಕುಮಟಾದಿಂದ ಉಡುಪಿಯವರೆಗಿನ ತೀರ ಪ್ರದೇಶದಲ್ಲಿ ಇವರ ಪ್ರಭುತ್ವ ನಡೆಯುತ್ತಿದ್ದ ಬಗ್ಗೆ ತಿಳಿಯುತ್ತದೆ.

ಈ ತರುವಾಯ ರಾಷ್ಟ್ರಕೂಟರು ನಂತರ ಚಾಲುಕ್ಯ ತೈಲಪರು ಕನ್ನಡ ಕರಾವಳಿಯಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿದರು. ಸಹಜವಾಗಿ ಹೊನ್ನಾವರ ಬಂದರು ಅವರ ವಶವಾಯಿತು. ಸೇವುಣರ ಪ್ರವೇಶವೂ ಉತ್ತರ ಕನ್ನಡದಲ್ಲಿ ನಡೆದಿತ್ತು. ಕರ್ನಾಟಕದಲ್ಲಿ ಆಳಿದ ಪ್ರಬಲ ಅರಸು ಮನೆತನಗಳು ಒಂದಲ್ಲ ಒಂದು ರೀತಿಯಲ್ಲಿ ತಮ್ಮ ಪ್ರಭುತ್ವವನ್ನು ಸಾಮಂತರ ಮೂಲಕವೋ, ಆಡಳಿತಾಧಿಕಾರಿಗಳ ಮೂಲಕವೊ ಅಥವಾ ಸ್ಥಳೀಯವಾಗಿ ಪಟ್ಟವೇರಿದ ಸಣ್ಣ ರಾಜವಂಶಗಳ ಮೂಲಕವೊ ಪ್ರಭುತ್ವ ಪ್ರತಿಪಾದಿಸಿದರು. ಹೊನ್ನಾವರದ ಬಂದರು ಈ ಎಲ್ಲ ರಾಜವಂಶಗಳ ಕಾಲದಲ್ಲಿ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು.

ಕ್ರಿ.ಶ ೧೦೭೮-೭೯ ರಿಂದ ಸು ಕ್ರಿ.ಶ ೧೧೬೭-೬೮ರ ವರೆಗಿನ ಶಾಸನಗಳು ಹೊನ್ನಾವರ, ಗೋಕರ್ಣ ಮತ್ತು ಸಿರಿವೂರು (ಶಿರೂರು) ಗಳನ್ನು ಮುಖ್ಯ ಕೇಂದ್ರವನ್ನಾಗಿರಿಸಿಕೊಂಡಿದ್ದ

ಶಿಶುಗಲಿಯ ಪಾಂಡ್ಯ ಅಥವಾ ಸೋಮವಂಶದ ಅರಸರ ಆಡಳಿತವನ್ನು ತಿಳಿಸುತ್ತವೆ. ಪಾಂಡ್ಯ ವಂಶಜರು ಬನವಾಸಿಪುರವರಾಧೀಶ್ವರ, ಜಯಂತಿ ಮಧುಕೇಶ್ವರ ಲಬ್ಧವರಪ್ರಸಾದ, ಶ್ರೀ ಗೋಕರ್ಣ ಮಹಾಬಳದೇವ ಪಾದ ಪದ್ಮಾರಾಧಕ ಮುಂತಾದ ಬಿರುದುಗಳನ್ನು ಹೊಂದಿದ್ದರು.

ಆ ತರುವಾಯ ಆಳಿದ ಚಂದಾವರ ಕಾದಂಬರು, ಸೇವುಣ ಇಮ್ಮಡಿ ಸಿಂಗಣನ (ಸು೧೧೯೮–೧೨೪೭) ಅಧೀನನೆಂದು ಸೊರಬತಾಲೂಕಿನ ಶಾಸನ ತಿಳಿಸುತ್ತದೆ. ಗೋಕರ್ಣದತಾಮ್ರಪಟವು ಈ ಕಾದಂಬ ವೀರಕಾಮದೇವನನ್ನು ಪಶ್ಚಿಮ ಸಮುದ್ರಾಧಿಪತಿ ಎಂದು ಕರೆದಿದೆ. ಹೀಗೆ ಸೇವುಣರ ನಂತರ ಆಳುಪ ರಾಣಿ ಕೃಷ್ಣಾಯಿತಾಯಿ (ಮುಮ್ಮಡಿ ಬಲ್ಲಾಳನ ಮಡದಿ) ವಿಜಯನಗರದ ಸಂಗಮ ಅರಸರ ಆಳ್ವಿಕೆಯನ್ನು ೧೩೪೬ರ ಹೊತ್ತಿಗೆ ಒಪ್ಪಿಕೊಂಡಳು. ಇಡಗುಂಜಿ (ಹೊನ್ನಾವರ)ಯ ಕ್ರಿ.ಶ ೧೩೪೮ ರ ಶಾಸನ ಆ ಪ್ರದೇಶದ ಮೇಲೆ ಮಹಾಪ್ರಧಾನಮಲೆಯ ದಂಡನಾಯಕನ ಹಿಡಿತವಿತ್ತೆಂದು ಸೂಚಿಸುತ್ತದೆ. ನಗಿರೆಯಲ್ಲಿ ಪ್ರವರ್ಧಮಾನಕ್ಕೆ ಬಂದ ಅರಸರು (ಗೇರಸೊಪ್ಪ) ಸಾಳುವ ಅರಸರು, ವಿಜಯನಗರದ ಅಧೀನತೆಯನ್ನೂ ಒಪ್ಪಿಕೊಂಡು ಹೊನ್ನಾವರ–ಭಟ್ಕಳ ಪ್ರದೇಶದಲ್ಲಿ ತಮ್ಮ ಪ್ರಾಧಾನ್ಯ ಮೆರೆದರು. ಮುಂದೆ ವಿಜಯನಗರದ ಕಾಲದ ಪ್ರಾರಂಭದಲ್ಲಿಯೇ ಹೊನ್ನಾವರ ಬಂದರು ಪ್ರಮುಖ ವಾಣಿಜ್ಯ ಬಂದರಾಗಿ ತೆರೆದುಕೊಂಡಿತ್ತು. ಅರಬ್ಬೀ, ಪರ್ಶಿಯಾ ದೇಶಗಳಿಂದ ತರಿಸುತ್ತಿದ್ದ ಉತ್ತಮ ತಳಿಯ ಕುದುರೆಗಳನ್ನು ಹೊನ್ನಾವರ ಬಂದರಿನ ಮೂಲಕವೂ ತರಿಸುತ್ತಿದ್ದರು. ಹೊನ್ನಾವರದಲ್ಲಿ ಕೇಂದ್ರಸ್ಥಾಪಿಸಿ ರಾಜ್ಯಪಾಲರನ್ನು ನೇಮಿಸಿ ಆಡಳಿತನಡೆಸಿದರು. ೧೩ನೇ ಶತಮಾನದಲ್ಲಿ ಚೀನಾದ ವ್ಯಾಪಾರಿ ಹಡಗುಗಳು ಕ್ವಿಲಾನ ತಲುಪಿದ ಬಗ್ಗೆ ದಾಖಲೆಗಳಿವೆ. ಅವು ವ್ಯಾಪಾರಿ ಉದ್ದೇಶಗಳಿಗೆ ಹೊನ್ನಾವರ ಬಂದರನ್ನು ಸಂದರ್ಶಿಸಿದ ಸಾಧ್ಯತೆಗಳಿವೆ. ಅಪ್ಪಾದೊರೈಯವರು ಹೊನ್ನಾವರ ಬಂದರು ಚೀನಾದೊಂದಿಗೆ ವಾಣಿಜ್ಯ ಸಂಪರ್ಕ ಹೊಂದಿದ್ದನ್ನು 'ಎಕನಾಮಿಕಲ್ ಕಂಡಿಶನ್ ಇನ್ ಸೌಥ್ ಇಂಡಿಯಾ'ದಲ್ಲಿ ವಿವರಿಸಿದ್ದಾರೆ.

ಹೀಗೆ ಕನ್ನಡ ನಾಡಿನ ಪ್ರಮುಖ ರಾಜವಂಶಗಳ ಆಡಳಿತಾವಧಿಯಲ್ಲಿ ಮತ್ತು ಸ್ಥಳೀಯವಾಗಿ ಆಳಿದ ಅರಸು ಮನೆತನಗಳ ಕಾಲಾವಧಿಯಲ್ಲಿ ಹೊನ್ನಾವರ ಬಂದರು ಒಂದು ಪ್ರಮುಖ ಕೇಂದ್ರವಾಗಿ ವಾಣಿಜ್ಯ–ವ್ಯವಹಾರ ನಡೆಸಿದ್ದು ತಿಳಿದು ಬರುತ್ತದೆ.

೨.೫. ಭಟ್ಕಳ ಬಂದರು

ಉತ್ತರ ಕನ್ನಡದ ದಕ್ಷಿಣ ತುದಿಯಲ್ಲಿರುವ ತಾಲೂಕಾ ಕೇಂದ್ರಪ್ರದೇಶ ಭಟ್ಕಳ. ಇಲ್ಲಿ ಭಟ್ಕಳ ನದಿ ಕಡಲು ಸೇರುವ ಸ್ಥಳದಲ್ಲಿ ಬಂದರು ನಿರ್ಮಾಣವಾಗಿದ್ದು, ಇದು ನೈಸರ್ಗಿಕ ಕೊಡುಗೆಗಳಿಂದ ಅತ್ಯಂತ ಶ್ರೀಮಂತವಾಗಿದೆ. ಕಡಲಲ್ಲಿರುವ ನೇತ್ರಾಣಿ ದ್ವೀಪದಿಂದ ಈ ಬಂದರಿಗೆ ಭೌಗೋಳಿಕವಾದ

ರಕ್ಷಣೆ ಹಾಗೂ ವ್ಯಾಪಾರಿ ಸರಕುಗಳ ಸಂಗ್ರಹಣೆಗೆ ಅನುಕೂಲ ಉಂಟಾಗಿದೆ. ಬಂದರಿನಲ್ಲಿ ಸರಕು ಸಂಗ್ರಹಣೆಗೆ ಸಾಕಷ್ಟು ಸ್ಥಳವಕಾಶವಿದ್ದು, ದೊಡ್ಡ ದೊಡ್ಡ ನೌಕೆಗಳು ಲಂಗರು ಮಾಡಲು ಅನುಕೂಲತೆಗಳಿವೆ. ಹಿಪ್ಪಲಸ್ ಮಾರುತದ ಸಹಾಯದಿಂದ ಅರಬ್ಬಿ ವರ್ತಕರು ನೇರವಾಗಿ ಭಟ್ಕಳಕ್ಕೆ ಬಂದು ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ಇಲ್ಲಿಂದ ಅಕ್ಕಿ, ಮಸಾಲೆ ದಿನಿಸುಗಳು ಐರೋಪ್ಯ ಹಾಗೂ ಅರಬ್ ರಾಷ್ಟ್ರಗಳಿಗೆ ಹೋದಂತೆ, ಗ್ರೀಕ್-ರೋಮ್‌ಗಳ ಮೂಲಕ ಬೆಲೆಬಾಳುವ ಉತ್ತಮ ದರ್ಜೆಯ ಮದ್ಯ, ಅರಬ್ಬಿ ಕುದುರೆಗಳು ಆಮದಾಗುತ್ತಿದ್ದವು.

ಭಟ್ಕಳ ಬಂದರು ಕರ್ನಾಟಕದ ಕರಾವಳಿಯ ಮಧ್ಯಭಾಗದಲ್ಲಿದೆ. ಒಂದು ಅರ್ಥದಲ್ಲಿ ಭಟ್ಕಳ ಬಂದರು ಮುಕ್ತ ವ್ಯಾಪಾರದ ಕೇಂದ್ರದಂತಿತ್ತು. ಬಹುಕಾಲ ತುಳುನಾಡನ್ನಾಳಿದ ಆಳುಪರ ಉತ್ತರದಗಡಿಯಾಗಿಯೂ, ಕದಂಬ-ಚಾಲುಕ್ಯ ಹಾಗೂ ಉತ್ತರಕನ್ನಡ ಆಳಿದ ಸಾಮಂತ, ಮಂಡಲೇಶ್ವರ ಹಾಗೂ ಅಧೀನ ಅರಸರ ರಾಜ್ಯದ ದಕ್ಷಿಣ ತುದಿಯಾಗಿದ್ದರಿಂದ ಭಟ್ಕಳ ರಾಜಕೀಯ ಭೂಗೋಳದಲ್ಲಿ ಮಹತ್ವದ ಸ್ಥಾನದಲ್ಲಿತ್ತು. ಮುಂದೆ ಗೇರಸೋಪ್ಪಾ-ಹಾಡುವಳ್ಳಿಯ ಸಾಳ್ವರಸರ ಕಾಲದಲ್ಲಿ ಇದು ಇನ್ನೂ ಗಟ್ಟಿಯಾಗಿ ಬೆಳೆದು ವಿಜಯ ನಗರದ ಕಾಲದಲ್ಲಿ ಉತ್ತುಂಗಕ್ಕೇರಿತು.

ಭಟ್ಕಳ ತಾಲೂಕು ಉತ್ತರ ಕನ್ನಡ ಜಿಲ್ಲೆಯ ದಕ್ಷಿಣ ದತುದಿಯಲ್ಲಿದೆ. ಭಟ್ಕಳವು ಪ್ರಾಚೀನ ಕಾಲದಿಂದಲೂ ಪ್ರಮುಖ ವ್ಯಾಪಾರಿ ಕೇಂದ್ರವಾಗಿದೆ. ಭಟ್ಕಳದ ಬಂದರು ಕಡಲೋತ್ತರ ವ್ಯಾಪಾರದಲ್ಲಿ ಪ್ರಸಿದ್ಧವಾಗಲು ಅದರ ಭೌತಿಕ ಸ್ಥಿತಿ ಕಾರಣವಾಗಿದೆ. ಭಟ್ಕಳ ನದಿಯು ಕಡಲು ಸೇರುವ ಪ್ರದೇಶದಲ್ಲಿ ಬಂದರು ನಿರ್ಮಾಣವಾಗಿದ್ದು, ಇದರಲ್ಲಿ ಇಂದಿಗೂ ೫ ರಿಂದ ೬ ಕಿ.ಮೀ. ಪೂರ್ವದತ್ತ ನೌಕೆಗಳನ್ನುಸಲೀಸಾಗಿ ಸಾಗಿಸಬಹುದಾಗಿದೆ. ಸಯ್ಯಾದ್ರಿಯಲ್ಲಿ ಜನಿಸುವ ಭಟ್ಕಳ ನದಿಯು ಸುಮಾರು ೨೦ ಕಿ.ಮೀ. ದಕ್ಷಿಣದತ್ತ ಹರಿದುಬಂದು ಕಡಲನ್ನು ಸೇರುತ್ತದೆ.

ಭಟ್ಕಳ ಬಂದರಿನ ಬಳಿ ವಿಶಾಲ ಭೂ ಭಾಗವಿದ್ದು, ಚಿಕ್ಕ-ಚಿಕ್ಕ ಗುಡ್ಡಗಳಿಂದ ಕೂಡಿದೆ. ಇದರೊಂದಿಗೆ ಬಂದರಿನಿಂದ ಸುಮಾರು ೫ ಕಿ.ಮೀ. ದೂರದಲ್ಲಿರುವ ನೇತ್ರಾಣಿ ದ್ವೀಪ (ಪೀಜನ್ ಐಲ್ಯೆಂಡ)ವು ಕಡಲೋತ್ತರ ವ್ಯಾಪಾರಕ್ಕೆ ಸಹಾಯಕವಾಗಿದೆ. ಇಲ್ಲಿ ದೊರೆಯುವ ಸಿಹಿನೀರು ಕಡಲೋತ್ತರ ವ್ಯಾಪಾರಿಗಳಿಗೆ ಉಪಯುಕ್ತವಾಗಿತ್ತು. ಸರಕುಗಳನ್ನು ಇಳಿಸಲು ಮತ್ತು ತುಂಬಲು ಹಾಗೂ ಸಂತೆಯ ಮೂಲಕ ವ್ಯಾಪಾರ ನಡೆಸಲು ಅನುಕೂಲಕರವಾಗಿತ್ತು. ಭಟ್ಕಳ ಬಂದರಿನ ಸಂಪರ್ಕ ಹೊಂದಿರುವ ಹಿನ್ನಾಡು ವಿಸ್ತಾರವಾಗಿದ್ದು, ಪಶ್ಚಿಮಘಟ್ಟಗಳ ಕೊರಕಲ್ಲಿನ ಮೂಲಕ ಸಂಪರ್ಕ ಪಡೆಯುತ್ತವೆ.

ನದಿಗಳು

ಭಟ್ಕಳದಿಂದ ವಾಯುವ್ಯದಲ್ಲಿರುವ ಸಯ್ಯಾದ್ರಿಯ ಮಡಿಲಲ್ಲಿರುವ ಹಳ್ಳಿ ಕಂತಿಯಲ್ಲಿ ಜನಿಸುವ ವೆಂಕಟಾಪುರ ನದಿಯು ಸುಮಾರು ೫೦ ಕಿ.ಮೀ ದಕ್ಷಿಣದತ್ತ ಹರಿದು ಬಂದು ಅರಬ್ಬಿ ಸಮುದ್ರ ಸೇರುತ್ತದೆ. ಶಿರಾಲಿಯ ಬಳಿಯ ವೆಂಕಟಾಪುರವನ್ನು ಬಳಸಿ ಹರಿಯುವ ಈ ನದಿಗೆ ವೆಂಕಟಾಪುರನದಿಯೆಂದೇ ಹೆಸರು ಬಂದಿದೆ. ಒಂದುವರೆ ಮೀಟರ ಆಳದವರೆಗೆ ನೀರು ಹೊಂದಿರುವ ಈ ನದಿಯಲ್ಲಿ ಮುಖಜ ಪ್ರದೇಶದಿಂದ ಮೇಲಕ್ಕೆ ೬-೭ಕಿ.ಮೀ ವರೆಗೆ ೬ ಟನ್ ಭಾರದ ಸಾಮಗ್ರಿಗಳನ್ನು ನೌಕಾಯಾನದಲ್ಲಿ ಸಾಗಿಸಬಹುದಾಗಿದೆ. ಈ ನದಿಗೆ ಎರಡುತೊರೆಗಳು ಬಂದು ಕೂಡುತ್ತವೆ. ಇದು ಮುಂದೆ ಅಳಿವೆಕೋಡಿಯಲ್ಲಿ ಕಡಲನ್ನು ಸೇರುತ್ತದೆ.

ಕೆಂಪುಮಣ್ಣಿನ ಭೂಭಾಗ ಹೊಂದಿರುವುದು ಮತ್ತು ಶಿರಾಲಿ-ಮಾವಳ್ಳಿ ಪ್ರದೇಶ ಕೃಷಿಗೆ ಹೇಳಿಮಾಡಿಸಿದಂಥಹ ಫಲವತ್ತೆಯಿಂದ ಕೂಡಿರುವುದು, ಭಟ್ಕಳವನ್ನು ಅಂತರ್‌ರಾಷ್ಟ್ರೀಯ ವ್ಯಾಪಾರಿ ಕೇಂದ್ರವನ್ನಾಗಿಮಾಡಿತ್ತು. ಭಟ್ಕಳದ ಪೂರ್ವದಲ್ಲಿ ಹಬ್ಬಿರುವ ಪಶ್ಚಿಮಘಟ್ಟಗಳ ಸಾಲು ನಿತ್ಯಹರಿದ್ವರ್ಣಮರಗಳಿಂದ ಕೂಡಿದೆ. ಇಲ್ಲಿ ದೊರೆಯುವ ವನೋತ್ಪನ್ನಗಳಿಗೆ ಭಾರಿ ಬೇಡಿಕೆ ಇದೆ.

ಭಟ್ಕಳ ಬಂದರು ಪ್ರದೇಶಕ್ಕೆ ಒಂದೇ ಮಾರ್ಗವಿದೆ. ಅಲ್ಲದೇ ಈ ಬಂದರು ಹೂಳಿನ ಸಮಸ್ಯೆಯನ್ನು ಅನುಭವಿಸುತ್ತಿದೆ. ಇಳಿತದ ಸಮಯದಲ್ಲಿ ದೊಡ್ಡ ಹಡಗುಗಳನ್ನು ಲಂಗರು ಮಾಡಲು ನೀರಿನ ಕೊರತೆ ಉಂಟಾಗುತ್ತದೆ.

ಭಟ್ಕಳ ಬಂದರಿನ ಬೆಳವಣಿಗೆ

ಕರ್ನಾಟಕದ ಬಂದರುಗಳಲ್ಲಿ ಭೌತಿಕವಾಗಿ ಮಧ್ಯಭಾಗವೆನ್ನಬಹುದಾದ ಸ್ಥಾನವನ್ನು ಭಟ್ಕಳ ಬಂದರು ಹೊಂದಿದೆ. ಅರಬ್ ರಾಷ್ಟ್ರಗಳಾದ ಅರೇಬಿಯಾ, ಪರ್ಶಿಯಾ, ಬಸ್ರಾ, ಮೆಕ್ಕಾ, ಪಿಟ್ರ ಬಗ್ದಾದ, ಓಮನ್, ದುಬಾಯ್, ಅಡೆನ್[೬೧] ಮುಂತಾದವುಗಳು ಭಟ್ಕಳದ ಎದುರುಬದಿಯಲ್ಲಿ ಅರೇಬಿಯನ್ ಕಡಲ ತಡಿಯಲ್ಲಿರುವ ಸ್ಥಳಗಳು. ಮಾನ್ಸೂನ್ ಮಾರುತದೊಂದಿಗೆ ಬರುವ ವ್ಯಾಪಾರಿ ಹಡಗುಗಳ ತಂಡ ಸಹಜವಾಗಿ ಭಟ್ಕಳದ ತೀರದೆಡೆ ಬಂದು ತಲುಪುತ್ತಿದ್ದು, ಕಡಲಲ್ಲಿರುವ ನೇತ್ರಾಣಿ ದ್ವೀಪವು ಈ ಯಾನಕ್ಕೆ ಅಪೂರ್ವವಾದ ಸಹಾಯ ನೀಡುತ್ತಿತ್ತು. ಜೊತೆಯಲ್ಲಿ ವೆಂಕಟಾಪುರ ನದಿಯಿಂದ ರಚನೆಗೊಂಡಿರುವ ಬಂದರು ಪ್ರದೇಶವೂ ಇದಕ್ಕೆ ಸಹಾಯಕವಾಗಿತ್ತು.

ಪ್ಲಿನಿಯು ಅರೇಬಿಯಾದ ಸ್ಯೆಯಾಗ್ರಿಸ್ ಎಂಬ ಭೂಶಿರದಿಂದ ಇಂಡಿಯಾಕ್ಕೆ ಸಾವಿರದ ಮುನ್ನೂರ ಮೂವತ್ತೈದು ಮೈಲಿ ದೂರದ ಪ್ರಯಾಣವನ್ನು ಹಿಪ್ಪಾಲಸ್ ಎಂದು ಕರೆಯಲ್ಪಡುವ ಮಾರುತದ ಸಹಾಯದಿಂದ ಮಾಡಬಹುದೆಂದು ಈಚೆಗೆ ಖಚಿತವಾಗಿ ಗೊತ್ತಾಗಿದೆ[೬೨] ಎಂದು

ಹೇಳುತ್ತಾನೆ. ಈ ಹಿಪ್ಪಾಲಸ್ ಎನ್ನುವದು ಮಾನ್ಸೂನ್ ಮಾರುತ. ಹೀಗೇ ಹಿಪ್ಪಾಲಸ್ ಸಹಾಯದಿಂದ ಬರುವ ಹಡಗುಗಳು, ಗುಜರಾತ್ ಬಂದರಿನಿಂದ ಮಂಗಳೂರು ಬಂದರಿನವರೆಗೆ ಸುರಕ್ಷಿತವಾಗಿ ಸಾಗುತ್ತಿದ್ದವು ಎಂದು ತಿಳಿಸಿದ್ದಾರೆ. ಹೀಗೆ ಹೋಗುವಾಗ ಭಟ್ಕಳ ಬಂದರಿನಲ್ಲಿಯೂ ನಿಂತು ಬೇಕಾದ ವ್ಯಾಪಾರ- ವ್ಯವಹಾರ ನಡೆಸಿ ಮುಂದೆ ಹೋಗುತ್ತಿದ್ದವು.

ಎರಿತ್ರಿಯನ್ ಸಮುದ್ರ ಮಾರ್ಗದರ್ಶಕ[೬೪]ನು ವಿವರಿಸುವ ಹಲವು ಸ್ಥಳಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗದಿದ್ದರೂ ಬಿಳಿ ದ್ವೀಪವು ನೇತ್ರಾಣಿ ದ್ವೀಪ ಎಂದು ಗುರುತಿಸಬಹುದು. ಇಲ್ಲಿ ಸಿಗುವ ವಸ್ತುಗಳನ್ನು ನೋಡಿದರೆ ಎರಿತ್ರಿಯನ್-ಸಿ ಲೇಖಕ ಹೇಳುವ ದ್ವೀಪವು ನೇತ್ರಾಣಿ ಎಂದೇ ತಿಳಿಯುತ್ತದೆ. ಹಾಗೆ ಇದರ ಕುರಿತು ಪ್ಲಿನಿ ನಿತ್ರಿಯಾಸ ಎಂದೂ ಟಾಲೆಮಿ ನಿತ್ರಾ[೬೫] ಎಂದೂ ಕರೆದಿದ್ದಾನೆ. ಇದರಿಂದ ಭಟ್ಕಳ ಬಂದರಿನ ಸಮೀಪದ ನೇತ್ರಾಣಿ ದ್ವೀಪವು ಪ್ರಾಚೀನ ಕಾಲದಿಂದಲೂ ಕಡಲೋತ್ತರ ವ್ಯಾಪಾರಿಗಳಿಗೆ ಸಹಾಯಕವಾಗಿತ್ತೆಂದು ತಿಳಿಯುತ್ತದೆ.

ನಿತ್ರಾದ ಬಗ್ಗೆ ಕೆಲವರಲ್ಲಿ ಭಿನ್ನಾಭಿಪ್ರಾಯವಿದ್ದರೂ, ಮೇಲಿನ ವಿವರಗಳನ್ನು ನೋಡಿದಾಗ ನಿತ್ರಾವು ನೇತ್ರಾಣಿ ಎಂದೇ ತಿಳಿಯಬಹುದು. ಅಲ್ಲದೆ ಇಲ್ಲಿ ಸಂತೆ ನಡೆಯುತ್ತಿತ್ತು. ವಿವಿಧ ಬಗೆಯವಸ್ತುಗಳ ಮಾರಾಟವಾಗುತ್ತಿತ್ತು. ಕಡಲ್ಗಳ್ಳರಭಯ ಹಾಗೂ ಭಟ್ಕಳ ಬಂದರಿನ ಸಿಹಿ ನೀರಿನ ಕೊರತೆ ಹಾಗೂ ಹೂಳಿನ ಸಮಸ್ಯೆಯಿಂದ ನೇತ್ರಾಣಿಯಲ್ಲೇ ವ್ಯಾಪಾರ ನಡೆಯುತ್ತಿತ್ತು ಎಂದು ಊಹಿಸಬಹುದಾಗಿದೆ. ನಿತ್ರಾವನ್ನು ಹಲವರು ನೇತ್ರಾವತಿ ನದಿ ದಂಡೆಯ ಮಂಗಳೂರು ಎಂದು ಗುರುತಿಸಿದ್ದಾರೆ. ಆದರೆ ಪ್ರವಾಸಿ ಕಥನಗಳ ವಿವರಗಳನ್ನು ನೋಡಿದಾಗ ನಿತ್ರಾವು ನೇತ್ರಾಣಿ ದ್ವೀಪ ಎನ್ನುವುದು ಸ್ಪಷ್ಟವಾಗುವುದು.

ನೇತ್ರಾಣಿ ಹಾಗೂ ಭಟ್ಕಳ ಬಂದರುಗಳು ಪ್ರಾಚೀನ ಕಾಲದ ಕಡಲೋತ್ತರ ವ್ಯಾಪಾರಿಗಳಿಗೆ ಬಹು ಆಕರ್ಷಣೀಯ ಸ್ಥಳವಾಗಿತ್ತು. ಇಲ್ಲಿಂದ ಘಟ್ಟಕ್ಕೂ ಹಾಗೂ ಘಟ್ಟದಿಂದ ಬಂದರಿಗೂ ಸಲೀಸಾದ ಮಾರ್ಗವಿತ್ತು. ತಮಿಳುನಾಡು, ಮೈಸೂರು ಹಾಗೂ ರಾಜ್ಯದ ಪ್ರಮುಖ ಕೇಂದ್ರಗಳಿಗೆ ಸಂಪರ್ಕ ಹೊಂದಲು ಸುಲಭವಾಗಿತ್ತು. ಇದರ ಹಿನ್ನಾಡು ವಿಸ್ತಾರವಾಗಿತ್ತಲ್ಲದೆ ವಿದೇಶಗಳಲ್ಲಿ ಬಹು ಬೇಡಿಕೆಯ ಬೆಲೆಬಾಳುವ ಮರಗಳು, ಅಕ್ಕಿ, ನವಿಲು ಮುಂತಾದುವುಗಳು ಇಲ್ಲಿಂದ ಸಾಗಾಟವಾಗುತ್ತಿದ್ದವು. ಉತ್ತರ ಕನ್ನಡದ ದಕ್ಷಿಣ ತುದಿಯ ಭಟ್ಕಳದಿಂದ ಆಚೆಗಿರುವ ಶಿರೂರು ಪ್ರದೇಶದಿಂದ ಸತೀಯ ಪುತ್ರರ ಆಡಳಿತ ನಡೆಯುತ್ತಿತ್ತು. ಹೀಗಾಗಿ ಉತ್ತರ ಕನ್ನಡದ ಈ ತುದಿಯಬಂದರು, ಉತ್ತರ ಕನ್ನಡ ಆಳಿದ, ಎಲ್ಲಾ ರಾಜ ಮನೆತನಗಳ ಆಡಳಿತಾವಧಿಯಲ್ಲಿ ಪ್ರಮುಖ ಗಡಿ ಬಂದರಾಗಿತ್ತು. ಭಟ್ಕಳ ಬಂದರಿನ ಮೂಲಕ ಹಿನ್ನಾಡಿಗೆ ಹೋಗಲು ಸುಲಭದ ಮಾರ್ಗಗಳಿದ್ದವು. ಭಟ್ಕಳ ಹಾಡುವಳ್ಳಿ, ಕೋಗಾರ ಮಾರ್ಗವಾಗಿ ಇನ್ನೊಂದು ಭಟ್ಕಳ-

ವೆಂಕಟಾಪುರ–ಶಿರಾಲಿ–ಚಿತ್ರಾಪುರ ಮಾರ್ಗವಾಗಿ ಮತ್ತು ಭಟ್ಕಳ ಶಿರೂರು ಮಾರ್ಗಗಳು ಮುಖ್ಯವಾಗಿದ್ದವು. ಈ ಮಾರ್ಗಗಳಲ್ಲಿ ಘಟ್ಟ ಏರಿದರೆ ಹಿನ್ನಾಡನು ಪ್ರವೇಶಿಸಬಹುದಾಗಿತ್ತು. ಭಟ್ಕಳ ಬಂದರಿಗೆ ಹಿನ್ನಾಡಾಗಿ ಬೆಂಗಳೂರು ತಮಿಳುನಾಡಿನ ಬಂದರು ಪ್ರದೇಶಗಳು ಹಾಗೂ ಆಂಧ್ರ ಪ್ರದೇಶದ ಬಂದರು ಪ್ರದೇಶಗಳು ಒಳಗೊಂಡಿದ್ದವು.

೨.೬ ಬೈಂದೂರು ಬಂದರು

ಬೈಂದೂರು ಆಳುಪರ ರಾಜ್ಯದ ಉತ್ತರದ ಗಡಿಯ ಪ್ರಮುಖ ಬಂದರಾಗಿದ್ದು ಉತ್ತರ ಕನ್ನಡ ದಕ್ಷಿಣ ತುದಿಯಾಗಿ ಬಹುಪ್ರಮುಖ ಬಂದರಾಗಿ ಇದು ಖ್ಯಾತವಾಗಿತು. ಬೈಂದೂರು ಬಂದರಿನ ನೈಸರ್ಗಿಕ ಲಕ್ಷಣವು ಇದನ್ನೊಂದು ಉತ್ತಮ ಬಂದರಾಗಿ ರೂಪಿಸಿದೆ. ಒತ್ತಿನೆಣೆ ಪ್ರದೇಶದಲ್ಲಿ ಬೃಹತ್ ಪರ್ವತ ಕಡಲಿಗೆ ಚಾಚಿರುವುದು ಬಂದರಾಗಿ ರೂಪುಗೊಳ್ಳಲು ಅನುಕೂಲವಾಗಿತ್ತು.

ಕರಾವಳಿಯ ಬಂದರುಗಳಲ್ಲಿ ಬೈಂದೂರು ಕೃಷಿ ಬಂದರು. ಕಾಲಕಾಲಕ್ಕೆ ಬದಲಾದ ಭೂಸಂಬಂಧಗಳೊಂದಿಗೆ ಈ ಬಂದರು ರೂಪುಗೊಳ್ಳುತ್ತಾಬಂದಿತ್ತು. ಕರಾವಳಿಗೆ ಮಧ್ಯದ ಬಂದರಾಗಿರುವಂತೆ, ಸುತ್ತಲಿನ ಮತ್ತು ಹಿನ್ನಾಡಿನ ಕೃಷಿ ಚಟುವಟಿಕೆ, ಫಲವತ್ತಾದ ಉತ್ತಮ ತಳಿಯ ಭತ್ತ, ತೆಂಗು ಹಾಗೂ ಬಾಳೆ ಮತ್ತು ವೀಳ್ಯದ ಎಲೆ ಮುಂತಾದವುಗಳ ವ್ಯಾಪಾರಕ್ಕೆ ಇದು ಸಾಗಾಟದ ಬಂದರಾಗಿತ್ತು.

ಬೈಂದೂರಿನಲ್ಲಿ ಕಂಡುಬರುವ ಸೇನೇಶ್ವರ ದೇವಾಲಯದಿಂದ ಇದು ಸೇನರೊಂದಿಗೆ ಸಂಬಂಧವನ್ನು ಹೊಂದುತ್ತದೆ. ಬಂಗಾಳವನ್ನಾಳಿದ ಸೇನರಿಗೂ ಇಲ್ಲಿಯ ಸೇನರಿಗೂ ಸಂಬಂಧವನ್ನು ಕಲ್ಪಿಸುವ ಕೆಲವು ವಿದ್ವಾಂಸರು, ಸೇನರು ಈ ಬಂದರಿನ ಮೂಲಕ ವ್ಯಾಪಾರ ವಹಿವಾಟು ನಡೆಸುತ್ತಿದ್ದರೆನ್ನುತ್ತಾರೆ.[೬೬] ಇಲ್ಲಿಯೇ ಕರ್ನಾಟಕದಲ್ಲಿಯ ಆಡಳಿತದ ಕೊನೆಯ ದಿನಗಳನ್ನು ಕಳೆದ ಸೇನರು ಮತ್ತೂ ಉತ್ತಮವಾದ ಬಂದರುಗಳನ್ನು ಅರಸುತ್ತಾ ಬಂಗಾಳಕ್ಕೆ ಹೋದರೆನ್ನುತ್ತಾರೆ. ಅದೇನೇ ಇದ್ದರು, ಸೇನರು ಬೈಂದೂರಿನ ಬಂದರಿನೊಂದಿಗೆ ಸಂಪರ್ಕ ಪಡೆದಿದ್ದರೆನ್ನುವುದು ಸತ್ಯ. ಭಟ್ಕಳ ಹಾಗೂ ಕುಂದಾಪುರ ಬಂದರುಗಳ ನಡುವೆ ಇದ್ದು, ಆ ಎರಡು ದೊಡ್ಡ ಬಂದರುಗಳ ವ್ಯಾಪಾರಿ ಒತ್ತಡ ಕಡಿಮೆ ಮಾಡಿ ತಾನೂ ಬೆಳೆದ ಬಂದರು ಇದು.

ಪರ್ವತಗಳು

ಬೈಂದೂರು ನಿಸರ್ಗದತ್ತವಾಗಿ ರಚಿತವಾದ ಬಂದರು. ಇದಕ್ಕೆ ನಿಸರ್ಗ ಅದ್ಭುತವಾದ ಸೌಲಭ್ಯ ನೀಡಿದೆ. ದೊಡ್ಡದೊಡ್ಡ ಹಡಗುಗಳನ್ನು ನಿಲ್ಲಿಸಲು ಬೇಕಾದ ಸೌಲಭ್ಯಗಳು ಇಲ್ಲಿವೆ. ಪಶ್ಚಿಮಘಟ್ಟದಸಾಲು ಶಿರೂರಿನಲ್ಲಿ ಪೂರ್ವದತ್ತ ಇದ್ದರೆ, ಬೈಂದೂರಿನಲ್ಲಿ ಒತ್ತಿನೆಣೆ ಬಳಿಯಲ್ಲಿ

ಪೂರ್ವ ಪಶ್ಚಿಮವಾಗಿ ಬಂದು ಕಡಲಿಗೇ ಚಾಚಿಕೊಂಡಿದೆ. ಅಲ್ಲದೇ ಕಡಲಿಗೆ ಚಾಚಿರುವ ಎತ್ತರದ ಪಶ್ಚಿಮಘಟ್ಟದಸಾಲು ಅರ್ಧಚಂದ್ರಾಕೃತಿಯಲ್ಲಿ ಹಬ್ಬಿದೆ. ಇದು ಕೂಡಾ ಸರಕು ತುಂಬಿದ ದೊಡ್ಡ ಹಡಗುಗಳಿಗೆ ಲಂಗರು ಹಾಕಿದಾಗ ನೈಸರ್ಗಿಕವಾಗಿ ರಕ್ಷಣೆ ನೀಡುತ್ತಿತ್ತು. ಕಡಲ ಮಾರ್ಗವಾಗಿ ಬೀಸಿಬರುವ ದೊಡ್ಡ ಮಾರುತಗಳನ್ನು ಇದು ಶಾಂತಗೊಳಿಸುತ್ತದೆ. ಹೀಗಾಗಿ ಇಲ್ಲಿ ಬೃಹತ್ ಹಡಗುಗಳು ಯಾವುದೇ ಭಯವಿಲ್ಲದೆ ಲಂಗರು ಹಾಕಬಹುದು. ಕಡಲೇ ಒಳನುಗ್ಗಿರುವುದರಿಂದ ಉಂಟಾಗಿರುವ ಈ ಬಂದರಿನಲ್ಲಿ ಸಾಮಾನ್ಯವಾಗಿ ನೀರಿನಲ್ಲಿ ಕೊರತೆ ಕಂಡುಬರುವುದಿಲ್ಲ. ಸದಾ ಇಲ್ಲಿ ೬ ರಿಂದ ೮ ಮೀಟರ್ ನೀರು ನಿಂತಿರುತ್ತಿತ್ತು. ಅಲ್ಲದೇ ಹೂಳಿನ ಸಮಸ್ಯೆಯೂ ಇರಲಿಲ್ಲ. ಒತ್ತಿನೆಣೆಯಲ್ಲಿ ಸಮುದ್ರದ ಮಟ್ಟದಿಂದ ಕನಿಷ್ಠ ೧೦೦೦ ಅಡಿ ಎತ್ತರದ ವರೆಗೆ ಪಶ್ಚಿಮಘಟ್ಟಗಳು ಎದ್ದುನಿಂತಿರುವುದರಿಂದ ಬಹುದೂರದಿಂದಲೇ ಕಡಲಲ್ಲಿರುವ ಹಡಗುಗಳು ಭೂಮಿಯನ್ನು ಗುರುತಿಸಲು ಸಾಧ್ಯವಾಗುತ್ತಿತ್ತು.

ಶಿರೂರು, ಭಟ್ಕಳ ಹಾಗೂ ಬೈಂದೂರಿನ ನಡುವೆ ಒಂದು ಚಿಕ್ಕ ನೈಸರ್ಗಿಕ ಬಂದರಾಗಿತ್ತು. ಹೊರನಾಡಿನಿಂದ ಬಂದ ವಸ್ತುಗಳನ್ನು ಒಳನಾಡಿಗೆ ಕಳಿಸಲು ಅನುಕೂಲಕರವಾಗಿತ್ತು. ದೂರದ ಪ್ರದೇಶಗಳಿಗೆ ಕಡಲಮಾರ್ಗವಾಗಿ ಹೋಗುವವರಿಗೆ ಮಧ್ಯಾಂತರ ತಂಗುದಾಣದಂತೆ ಇದು ಕಾರ್ಯನಿರ್ವಹಿಸುತ್ತಿತ್ತು.

ಈ ಬಂದರುಗಳು ಅರಬ್ಬ ದೇಶಗಳೊಂದಿಗೆ ವ್ಯಾಪಾರಿ ಸಂಬಂಧ ಹೊಂದಿದ್ದನ್ನು ನೆನಪಿಸುವ ನವಾಯತ[೬೭] ಎಂಬ ವ್ಯಾಪಾರಿ ಜನಾಂಗ ಶಿರೂರು ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಾರೆ. ಈ ಪ್ರದೇಶವು ಭೌಗೋಳಿಕವಾಗಿ ಕಡಲ ವ್ಯಾಪಾರಿಗಳಿಗೆ ತುಂಬಾ ಸಹಾಯಕವಾಗಿದೆ. ಶಿರೂರು ನದಿಯು ಕಡಲನ್ನು ಸೇರುವಲ್ಲಿ ಈ ಬಂದರು ನಿರ್ಮಾಣವಾಗಿದೆ. ವಿಸ್ತಾರವಾದ ಕಿನಾರೆ ಮತ್ತು ಬಂದರಿನಿಂದ ಹೊರಬರಲು ಹಾಗೂ ಒಳಪ್ರವೇಶಿಸಲು ಮಾರ್ಗಗಳು ಉತ್ತಮವಾಗಿವೆ. ಭಟ್ಕಳ-ಕುಂದಾಪುರದ ಮಧ್ಯದಲ್ಲಿ ಬೈಂದೂರು ಹಾಗೂ ಶಿರೂರು ಬಂದರುಗಳು ವ್ಯಾಪಾರ-ವಹಿವಾಟಿಗೆ ಸಹಾಯಕವಾಗಿದ್ದವು. ಕಡಲಮಾರ್ಗವಾಗಿ ದೊಡ್ಡಬಂದರುಗಳ ಮೂಲಕ ವಸ್ತುಗಳನ್ನು ತಂದು ಒಳನಾಡಿಗೆ ಸಾಗಿಸಲು ಇದು ಅನುಕೂಲವಾಗಿತ್ತು.

ಬಂದರಿನ ಬೆಳವಣಿಗೆ

ಅಶೋಕನ ಶಾಸನದಲ್ಲಿ[೬೮] ಉಲ್ಲೇಖಿತ 'ಸತಿಯಪುತೋ" ಎಂಬ ಉಲ್ಲೇಖವು - ಸತಿಯಪುತ್ರ ಎಂಬುದರ ರೂಪ ಎಂದು ಭಾವಿಸಲಾಗಿದೆ. ಇದು ಮೌರ್ಯ ಅಶೋಕನ ಬೃಹತ್ ಸಾಮ್ರಾಜ್ಯದಿಂದ ಹೊರಗಿದ್ದ ಕೆಲವೇ ರಾಜ್ಯಗಳಲ್ಲಿ ಒಂದು. ಇದನ್ನು ಅಶೋಕನ ದಕ್ಷಿಣದ ಗಡಿ ರಾಜ್ಯವೆಂದು ಇತಿಹಾಸಕಾರರು ಅರ್ಥೈಸಿದ್ದಾರೆ. ಈ ಕುರಿತು ಹಲವು ಚರ್ಚೆಗಳಿದ್ದರೂ[೬೯],

ಶಾಸನದಲ್ಲಿ ಉಲ್ಲೇಖಿತ ಉಳಿದ ರಾಜ್ಯಗಳು ಗುರುತಿಸಲು ಸಾಧ್ಯವಾಗಿರುವುರಿಂದ, ಈ ರಾಜ್ಯ ಸತಿಯಪುತ್ರವನ್ನು ಅವಿಭಜಿತ ದಕ್ಷಿಣ ಕನ್ನಡ ಎಂದು ಅಭಿಪ್ರಾಯಪಡಲಾಗಿದೆ. ಈ ಪ್ರದೇಶವು ಪ್ರಾಚೀನ ಕಾಲದಿಂದಲೂ ಕರ್ನಾಟಕದೊಂದಿಗೆ ಭೌಗೋಳಿಕ-ಸಾಂಸ್ಕೃತಿಕ ಸಂಪರ್ಕ ಹೊಂದಿದೆ[೨೦].

ಶಿರೂರು ಹೆಸರನ್ನು ಎರಡು ರೀತಿಯಲ್ಲಿ ಅರ್ಥೈಸಬಹುದಾಗಿದೆ. ಒಂದು ತುದಿಯ(ಶಿರದ)ಊರು ಎಂದೂ, ಇನ್ನೊಂದು ಶ್ರೀ ಎಂಬ ಅರ್ಥದಲ್ಲಿ, ದೇವತೆಯ ನೆಲೆನಾಡು, ಶುಭದ ಊರು ಎಂದೂ ಅರ್ಥೈಸ ಬಹುದಾಗಿದೆ[೨೧].

ಕೃಷಿಯಲ್ಲಿ ಸಮೃದ್ಧವಾದ ಉತ್ತಮ ವಿಶಾಲ ಭೂಭಾಗವನ್ನು ಹೊಂದಿರುವುದರಿಂದ ಇಲ್ಲಿಯ ಕೃಷಿ ಉತ್ಪನ್ನಗಳು ವ್ಯಾಪಾರಕ್ಕೆ ಸಹಾಯಕವಾಗಿದ್ದವು. ಶಿರೂರಿನಿಂದ ರಸ್ತೆಮಾರ್ಗವಾಗಿ ಭಟ್ಕಳ ಅಥವಾ ಬೈಂದೂರಿಗೆ ತಲುಪಿದರೆ ಘಟ್ಟಕ್ಕೆ ಸುಲಭವಾಗಿ ಪ್ರಯಾಣ ಮಾಡಬಹುದು. ಚಕ್ಕಡಿ ಹಾಗೂ ಹೇರುಗಳ ಮೂಲಕ ಘಟ್ಟಕ್ಕೆ ತಲುಪುವ ಅನೇಕ ಮಾರ್ಗಗಳು ಇಂದಿಗೂ ನೋಡಸಿಗುತ್ತವೆ.

ಕರ್ನಾಟಕ ಕರಾವಳಿಯ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶ ತುಳುನಾಡು ಎಂದು ಕರೆಯಲ್ಪಟ್ಟಿದೆ. ಈ ತುಳುನಾಡಿನ ವ್ಯಾಪ್ತಿ, ವಿಸ್ತಾರದ ಬಗ್ಗೆ ಹಲವು ಭಿನ್ನ ಅಭಿಪ್ರಾಯಗಳಿವೆ. ಪ್ರಸ್ತುತ ಕರ್ನಾಟಕದ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯನ್ನು ತುಳುನಾಡೆಂದು ಗುರುತಿಸುವುದು ಸಾಮಾನ್ಯವಾದ ಅಭಿಪ್ರಾಯ. ತುಳುನಾಡು, ತುಳುದೇಶ, ತುಳುವಿಷಯವೆಂದು ಕರೆಯಲ್ಪಡುವ ಈ ಪ್ರದೇಶವು ಕರ್ನಾಟಕ ರಾಜ್ಯದ ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯೆಂದು ಸ್ಥೂಲವಾಗಿ ಹೇಳಬಹುದು. ಇತಿಹಾಸದ ಆರಂಭ ಕಾಲದಿಂದ ಮೊದಲ್ಗೊಂಡು ಟಿಪ್ಪುಸುಲ್ತಾನನ ಕಾಲದವರೆಗೆ ಇದು ಉತ್ತರಕನ್ನಡ ಜಿಲ್ಲೆಯ ಕೆಲವು ಭಾಗಗಳನ್ನು ಘಟ್ಟದ ಮೇಲಿನ ಕೆಲವು ಪ್ರದೇಶಗಳನ್ನು ಒಳಗೊಂಡಿತ್ತು[೨೨]. ಬೈಂದೂರು-ಶಿರೂರು ಪ್ರದೇಶವು ಕ್ರಿ.ಶ ೨ನೇ ಶತಮಾನದ ಪೂರ್ವದಿಂದ ೪ನೇ ಶತಮಾನದವರೆಗೆ ಶಾತವಾಹನರಿಂದಲೂ ೪ನೇ ಶತಮಾನದ ಮಧ್ಯದಿಂದ ಕದಂಬರ ಜೊತೆಯಲ್ಲೇ ಆಳುಪರಿಂದ ಸುಮಾರು ೧೪ನೆಯ ಶತಮಾನದವರೆಗೆ ಆಳಲ್ಪಟ್ಟಿತು. ಆಳೂಪ ಪಶುಪತಿಯು ಕದಂಬ ಕಾಕುಸ್ಥಾವರ್ಮನ ಸಾಮಂತನಾಗಿದ್ದನು. ಕ್ರಿ.ಶ ೬ನೆಯ ಶತಮಾನಲ್ಲಿ ವಾತಾಪಿಯ ಚಾಲುಕ್ಯರು ಕದಂಬರನ್ನು ಬದಿಗೊತ್ತಿ, ಕರ್ನಾಟಕದ ಸಾಮ್ರಾಟರಾದಾಗ ಆಳುಪರು ಅವರ ಅಧಿನರಾಗಿದ್ದರು.[೨೩] ಹೊನ್ನಾವರದ ಹೈಗುಂದ ಕೇಂದ್ರವಾಗಿ ಆಳಿದ ಪಲ್ಲವಅಣ್ಣೇಯರಸನ ಕಾಲದಲ್ಲಿ ಕುಮಟಾದಿಂದ ಉಡುಪಿ ಬಳಿಯ ಶಿವಳ್ಳಿಯವರೆಗೆ ಆತನು ತನ್ನ ಸಾಮ್ರಾಜ್ಯ ವಿಸ್ತರಿಸಿದ್ದನು.[೨೪] ರಾಷ್ಟ್ರಕೂಟರ ಎರಡನೆಯಕೃಷ್ಣನ ಕಾಲದಲ್ಲಿ ತುಳುನಾಡು ರಾಷ್ಟ್ರಕೂಟರ ವಶವಾದಾಗ ಬೈಂದೂರು, ಶಿರೂರುಗಳೂ ಅವರ ಅಧೀನಕ್ಕೊಳಗಾದವು. ಇದು ಕ್ರಿ.ಶ ೯೦೦ ರಿಂದ

೯೫೦ರ ವರೆಗೆ ಮುಂದುವರಿಯಿತು. ಅವರು ಇಂದಪ್ಪಯ್ಯ ಎಂಬ ಆಡಳಿತಗಾರನ ಮೂಲಕ ಈ ಪ್ರದೇಶದ ಆಡಳಿತ ನೋಡಿಕೊಂಡಿದ್ದರು[೭೫]. ಹೊಯ್ಸಳರು ಕರ್ನಾಟಕದ ಉತ್ತರ ಕರಾವಳಿಯ ಕೆಲವು ಭಾಗಗಳಲ್ಲಿ ತಮ್ಮ ಅಧಿಕಾರ ಸ್ಥಾಪಿಸಿಕೊಂಡರು. ವಿಷ್ಣುವರ್ಧನ (೧೧೪೦-೪೧)ನು ಬನವಾಸಿ ೧೨,೦೦೦ರ ವನ್ನು ಗೆದ್ದುಕೊಂಡಿದ್ದನು. ಚಂದಾವರದ ಕಾದಂಬರು ಆಳುಪರ ಸಾಮಂತರಾಗಿದ್ದು ದಕ್ಷಿಣ ಕನ್ನಡದ ಕೆಲವು ಭಾಗಗಳ ಮೇಲೆ ತಮ್ಮ ಅಧಿಪತ್ಯ ಹೊಂದಿದ್ದರು. ಹೊಯ್ಸಳ ಯುವರಾಜನು ಆಳುಪ ರಾಜಕುಮಾರಿಯನ್ನು ವಿವಾಹವಾದನು. ಇದು ಕ್ರಿ.ಶ. ೧೩೧೮-೧೯ರಲ್ಲಿ ಹೊಯ್ಸಳರು ಉತ್ತರಕನ್ನಡದ ಹೊನ್ನಾವರದ ವರೆಗಿನ ಪ್ರದೇಶದ ಅರಸರಾದರು[೭೬]. ಚಿಕ್ಕಾಯಿತಾಯಿ ಹೊಯ್ಸಳ ರಾಣಿಯಾಗಿ ಈ ಪ್ರದೇಶದಲ್ಲಿ ಆಳಿದಳು.

ನಗಿರೆಯನ್ನು ಕೇಂದ್ರವಾಗಿ ಆಳಿದ್ದ ಸಾಳುವ ಮನೆತನದ ಆರಂಭದ ಅರಸರು ಆಳುವಾಗ ಭಟ್ಕಳದವರೆಗಿನ ಬಂದರು ಇವರ ವಶವಾಗಿತ್ತು. ಮುಂದೆ ಇವರ ಹೈವರಸ(೧೩೭೭-೯೨)ನು ಮಹಾಮಂಡಳೇಶ್ವರನಾಗಿ ಬೈಂದೂರು, ಶಿರೂರು, ಗಂಗೊಳ್ಳಿಯ ವರೆಗಿನ ಪ್ರದೇಶದವರೆಗೂ ತನ್ನ ರಾಜ್ಯ ವಿಸ್ತರಿಸಿದ್ದನು. ನಗಿರೆ, ಹಾಡುವಳ್ಳಿಯ ಅರಸರ-ರಾಣಿಯರ ಕಾಲದಲ್ಲಿ ಬೈಂದೂರು-ಶಿರೂರುಗಳು ಭಟ್ಕಳದೆಷ್ಟೆ ಪ್ರಮುಖವಾದ ಬಂದರಾಗಿದ್ದವು.

ಮುಂದೆ ಆಳಿದ (ಕ್ರಿ.ಶ ೧೩೩೬-೩೭) ವಿಜಯನಗರದ ಅರಸರು ಆರಂಭದಲ್ಲಿ ಕೆಲವು ಅಡೆತಡೆಗಳನ್ನು ಎದುರಿಸಬೇಕಾಗಿ ಬಂದರೂ ಮುಂದೆ ದಕ್ಷಿಣ ಕನ್ನಡದ ಬಂದರುಗಳ ಒಡೆಯರಾದರು.

ವಿಜಯನಗರದ ಕಾಲದಲ್ಲಿ ಬಸ್ರೂರು-ಕುಂದಾಪುರ, ಬಾರ್ಕೂರು, ಮಂಗಳೂರು ಬಂದರುಗಳಲ್ಲಿ ಹೆಚ್ಚಿನ ವ್ಯಾಪಾರಗಳು ನಡೆದರೂ, ಬೈಂದೂರು, ಶಿರೂರುಗಳು ಒಳನಾಡಿನ ವ್ಯಾಪಾರಕ್ಕೆ ಬೇಕಿದ್ದ ಸಾಮಗ್ರಿಗಳನ್ನು ತರಿಸಲು ಹಾಗೂ ಆಹಾರ ಧಾನ್ಯಗಳ ಸಾಗಾಟಕ್ಕೆ ಮಧ್ಯವರ್ತಿ ಬಂದರಾಗಿದ್ದವು. ಸೇನರೆಂಬ ಒಂದು ರಾಜವಂಶ ಕರ್ನಾಟಕದ ಚಿಕ್ಕಮಗಳೂರು ಹಾಗೂ ಕೊಪ್ಪ ಪ್ರದೇಶಗಳಲ್ಲಿ ಕ್ರಿ.ಶ. ೭ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಆಳಿದ್ದರು[೭೭]. ೧೦೫೮ ರ ತರುವಾಯ ಇವರ ಶಾಸನಗಳಾವವು ರಾಜ್ಯದಲ್ಲಿ ದೊರೆಯುತ್ತಿಲ್ಲ. ಇವರ ಕ್ರಿ.ಶ ೧೦೫೮ರ ಐದು ಶಾಸನಗಳು ದೊರೆತಿವೆ[೭೮]. ಇವರು ಬಂಗಾಲಕ್ಕೆ ಹೋಗಿ ಅಲ್ಲಿ ೩೦೦ ವರ್ಷಗಳ ಕಾಲ ವಿಜ್ರಂಭಣೆಯಿಂದ ಆಡಳಿದರೆಂದು ತಿಳಿಯುತ್ತದೆ. ಆದರೆ ಅಲ್ಲಿದ್ದ ಸೇನರೆ ಇವರೆಂಬ ಬಗ್ಗೆ ಸ್ಪಷ್ಟತೆ ಇಲ್ಲ. ಸೇನರ ಕಾಲದ ಸೇನೇಶ್ವರ ಎಂಬ ಶಿವಾಲಯ ಒಂದು ಬೈಂದೂರಿನಲ್ಲಿದೆ. ಈ ದೇವಾಲಯದ ಸಹಾಯದಿಂದ ವಿವೇಚಿಸಿದರೆ ಸೇನರು ಬೈಂದೂರು-ಕಡಲ ಮಾರ್ಗವಾಗಿಯೇ

ಬಂಗಾಲಕ್ಕೆ ಹೋದರೆಂದು ಹೇಳಬಹುದು. ಆ ರೀತಿಯಲ್ಲಿ ಸುರಕ್ಷಿತವೂ, ಉತ್ತಮವೂ ಆದ ಬಂದರು ಇದಾಗಿತ್ತು.

೨.೭ ಕುಂದಾಪುರ ಬಂದರು

ಕುಂದಾಪುರದ ಬಂದರೆಂದರೆ ಕುಂದಾಪುರ-ಕೋಡಿ, ಗಂಗೋಳ್ಳಿ ಹಾಗೂ ಬಸರೂರು ಬಂದರುಗಳಾಗಿವೆ. ಬಸರೂರು ವಾರಾಹಿನದಿಯ ದಂಡೆಯ ಮೇಲಿದ್ದರೆ, ಗಂಗೋಳ್ಳಿ ಪಂಚಗಂಗಾವಳಿ ಕಡಲು ಸೇರುವಲ್ಲಿದೆ. ಇದರ ದಕ್ಷಿಣದಲ್ಲಿ ಕುಂದಾಪುರ ನಗರವಿದೆ. ಈ ಮೂರು ವ್ಯಾಪಾರಿ ಸ್ಥಳಗಳು ಕುಂದಾಪುರ ಬಂದರೆಂದು ಕರೆಯಲ್ಪಡುತ್ತವೆ.

ಬಸರೂರು ಸಂಪೂರ್ಣ ವ್ಯಾಪಾರಕ್ಕೆಂದೇ ನಿರ್ಮಿಸಿಕೊಂಡಿರುವ ಪಟ್ಟಣ. ವರ್ತಕಸಂಘಗಳ ಪ್ರಮುಖರು ತಮ್ಮ ಕಡಲೋತ್ತರ ವ್ಯಾಪಾರಕ್ಕಾಗಿ ಇದನ್ನು ಪ್ರಭುತ್ವದ ಸಹಯೋಗದೊಂದಿಗೆ ಸಿದ್ಧಗೊಳಿಸಿಕೊಂಡಿದ್ದರು. ಬಹು ವ್ಯವಸ್ಥಿತವಾಗಿ ನದಿಯ ದಂಡೆಯ ಮೇಲೆ, ರಕ್ಷಣಾವ್ಯವಸ್ಥೆಯೊಂದಿಗೆ ರಚಿಸಿಕೊಂಡು, ಆಂತರಿಕ ವ್ಯವಸ್ಥೆಗಾಗಿ ಏಳು ಕೇರಿಗಳನ್ನು ಮಾಡಿಕೊಂಡಿದ್ದರು. ಕೈಗಾರಿಕೆ, ಕೃಷಿ ಉತ್ಪನ್ನಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸಿಟ್ಟುಕೊಳ್ಳುವುದು, ವಿದೇಶಿ ಸರಕುಗಳನ್ನು ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಹಾಗೂ ಒಳನಾಡುಗಳಿಗೆ ನಗರ ಪಟ್ಟಣಗಳಿಗೆ ಸಾಗಿಸಲು ಸಂಪರ್ಕವ್ಯವಸ್ಥೆ ರೂಪಿಸಿಕೊಂಡಿದ್ದರು.

ಅವಳಿನಗರವಾಗಿ ರೂಪುಗೊಂಡಿರುವ ಈ ಪಟ್ಟಣವು ಕ್ರಿ.ಶ ೧೧-೧೨ನೆಯ ಶತಮಾನದಲ್ಲಿ ಹೊಸ ಪಟ್ಟಣವಾಗಿ ವ್ಯವಸ್ಥಿತವಾಗಿ ಪುನರ್ ರೂಪಿಸಲ್ಪಟಿತು. ವ್ಯಾಪಾರಿಗಳ ಹೆಸರಿನಲ್ಲಿಯೇ ಇಲ್ಲಿ ನಖರೇಶ್ವರ ಹಾಗೂ ತುಳುನಾಡನ್ನು ಪ್ರತಿನಿಧಿಸುವ ತುಳುವೇಶ್ವರದಂಥಹ ಅಪರೂಪದ ದೇವಾಲಯಗಳು ನಿರ್ಮಾಣಗೊಂಡವು. ಚೀನಾದ ಪ್ರಾಣಿಗಳನ್ನು ಹೋಲುವ ಪ್ರಾಣಿಗಳಮೂರ್ತಿಗಳು, ಏಳುಕೆರೆಗಳು, ಏಳುಕೇರಿಗಳು ಇಲ್ಲಿ ನೋಡಸಿಗುತ್ತವೆ. ವ್ಯಾಪಾರಿ ಸಂಘಗಳು ಈ ನಗರವನ್ನು ವಿವಿಧ ವೃತ್ತಿಯವರಿಗೆ ಮೀಸಲಿರಿಸಿದ್ದರು. ವ್ಯಾಪಾರವೇ ಜೀವಾಳವಾಗಿದ್ದ ಈ ಬಂದರು ಪ್ರದೇಶವು ಅಕ್ಕಿ, ತೆಂಗು, ಬಟ್ಟೆ ಹಾಗೂ ವನೋತ್ಪನ್ನಗಳ ದೊಡ್ಡ ಮಾರಾಟ ಕೇಂದ್ರವಾಗಿತ್ತು.

ಆಳುಪರು, ಚೋಳರು, ಹೊಯ್ಸಳರು ಹಾಗೂ ವಿಜಯನಗರದ ಅರಸರು ಈ ವ್ಯಾಪಾರಿ ಪಟ್ಟಣವನ್ನು ತಮ್ಮ ಸಾಮ್ರಾಜ್ಯದ ಆರ್ಥಿಕ ಬೆಳವಣಿಗೆಗೆ ಚೆನ್ನಾಗಿ ಬಳಸಿಕೊಂಡಿದ್ದಾರೆ. ಕಡಲೋತ್ತರ ವ್ಯಾಪಾರ ಹಾಗೂ ಒಳನಾಡಿಗೆ ಸುಗಮ ಸಂಪರ್ಕ ಹೊಂದಿರುವ ಈ ಪಟ್ಟಣವು ಸುಮಾರು ಒಂದು ಸಾವಿರ ವರ್ಷಗಳ ಕಾಲ ಉತ್ತಮ ವ್ಯಾಪಾರಿ ಕೇಂದ್ರವಾಗಿ ಮೆರೆದಿತ್ತು.

ಬಂದರಿನ ನೈಸರ್ಗಿಕ ಲಕ್ಷಣ, ನದಿಗಳು ಹಾಗೂ ಬಂದರಿನ ಉಪಯುಕ್ತತೆ

ಕರ್ನಾಟಕದ ಪ್ರಖ್ಯಾತ ವ್ಯಾಪಾರಿ ಕೇಂದ್ರಗಳಲ್ಲಿ ಕುಂದಾಪುರ ಬಂದರು ಬಹು ಪ್ರಮುಖವಾದದ್ದು. ಕುಂದಾಪುರ ಬಂದರಿಗೆ ಬಹುವಿಧದ ಪ್ರಾಕೃತಿಕ ಸೌಲಭ್ಯಗಳು ಪ್ರಾಪ್ತವಾಗಿದೆ. ಕುಂದಾಪುರ ಪಟ್ಟಣದ ಉತ್ತರದಲ್ಲಿ ಗಂಗೊಳ್ಳಿಊರು ಇದೆ. ಇದು ನದಿ ಕಡಲುಸೇರುವಲ್ಲಿದೆ. ಚಕ್ರಾನದಿ ಹರಿದು ಬರುವದಾರಿಯಲ್ಲಿ ಕುಂದಾಪುರದಿಂದ ಪೂರ್ವದಲ್ಲಿ ಸುಮಾರು ೮ ಕಿ.ಮಿ ದೂರದಲ್ಲಿ ಬಸರೂರು ಇದೆ. ಚಕ್ರಾನದಿಯು ಇಲ್ಲಿ ಕವಲಾಗಿ ಬಸ್ರೂರನ್ನು ಸುತ್ತುವರಿದಿದೆ. ಈ ದ್ವೀಪವು ಉತ್ತಮ ವ್ಯಾಪಾರಿ ಸೌಲಭ್ಯ ಹೊಂದಿದೆ. ಸರಕು ತುಂಬಿದ ಹಡಗುಗಳಿಗೆ ಸುರಕ್ಷಿತವಾಗಿ ಇಲ್ಲಿ ಲಂಗರು ಮಾಡಲು ಅನುಕೂಲತೆಗಳಿವೆ. ಕುಂದಾಪುರ ಬಂದರಿನ ಒಂದುಬದಿ ಗಂಗೊಳ್ಳಿಯಾದರೆ ಇನ್ನೊಂದುಬದಿ ಕೋಡಿ ಕುಂದಾಪುರ ಇದೆ.

ಕುಂದಾಪುರಕ್ಕೆ ಅತ್ಯುತ್ತಮ ಬಂದರಾಗುವ ಎಲ್ಲ ಲಕ್ಷಣಗಳನ್ನು ನಿಸರ್ಗವೆ ನೀಡಿದೆ. ಕೋಡಿಯ ಬಳಿಯಲ್ಲಿ ವಿಶಾಲವಾದ ಸಮತಟ್ಟಾದ ಭೂಭಾಗವಿದ್ದು ಇಲ್ಲಿ ವ್ಯಾಪಾರಕ್ಕೆ ಬಳಸುವ ಸರಕುಗಳನ್ನು ಸಂಗ್ರಹಿಸಲು ಅನುಕೂಲತೆಗಳಿದ್ದವು. ಗಂಗಾವಳಿ ನದಿಯು ವಿಶಾಲವಾದ ಪಾತ್ರದೊಂದಿಗೆ ಕಡಲನ್ನು ಸೇರುವಲ್ಲಿ ಶಾಂತವಾಗಿದೆ. ಇದರಿಂದ ನದಿಯ ಮೂಲಕ ದೊಡ್ಡದೊಡ್ಡ ನೌಕೆಗಳನ್ನು ಬಂದರಿಗೆ ತರಲು ಸಾಧ್ಯವಾಗಿತ್ತು. ಅಲ್ಲದೇ ಗಂಗಾವಳಿ ನದಿಯು ಹಿನ್ನಾಡಿಗೆ ಸಂಪರ್ಕ ಕಲ್ಪಿಸುವ ಅತ್ಯುತಮ ಜಲಮಾರ್ಗವಾಗಿತ್ತು. ಕುಂದಾಪುರದಿಂದ ಹೊಸಂಗಡಿಯವರೆಗೂ ಸುಮಾರು ೪೦ ಕಿ.ಮೀ ದೂರದವರೆಗೆ ಅನೇಕ ಅತ್ಯುತ್ತಮ ವ್ಯಾಪಾರಿ ಕೇಂದ್ರಗಳು ನಿರ್ಮಾಣ ಗೊಂಡಿದ್ದವು. ಹಿನ್ನಾಡಿನಿಂದ ಸರಾಗವಾಗಿ ವಿದೇಶದಲ್ಲಿ ಬೇಡಿಕೆ ಇರುವ ಸರಕುಗಳನ್ನು ತರಿಸಲು ನದಿ ಮಾರ್ಗ ಸಹಾಯಕವಾಗಿತ್ತು.

ಕುಂದಾಪುರದಿಂದ ಹಿನ್ನಾಡಿಗೆ ಹೋಗಲು ಅನೇಕ ಉತ್ತಮ ರಸ್ತೆ ಮಾರ್ಗಗಳಿವೆ. ಕುಂದಾಪುರ, ಬಸರೂರು, ಶಂಕರನಾರಾಯಣ ಸಿದ್ದಾಪುರ, ಹೊಸಂಗಡಿ ಮುಂದೆ ಶಿವಮೊಗ್ಗಾ. ಕುಂದಾಪುರ, ಬೈಂದೂರು, ಕೊಲ್ಲೂರು. ಹಾಗೇ ಕುಂದಾಪುರ, ಬಾರ್ಕೂರು, ಹೆಬ್ರೆ, ಚಿಕ್ಕಮಗಳೂರು. ಹೀಗೆ ವಿವಿಧ ಮಾರ್ಗಗಳು ಸಲೀಸಾಗಿ ಹಿನ್ನಾಡನ್ನು ತಲುಪಲು ಸಹಾಯಕವಾಗಿದ್ದವು.

ಗಂಗೊಳ್ಳಿ

ಗಂಗೊಳ್ಳಿ–ಕುಂದಾಪುರದ ಉತ್ತರದಲ್ಲಿದೆ. (ಪಂಚ) ಗಂಗಾವಳಿ ನದಿ ಇಲ್ಲಿ ಕಡಲನ್ನು ಸೇರುತ್ತದೆ. ಕಡಲನ್ನು ಸೇರುವಲ್ಲಿ ನದಿ ತನ್ನ ಪಾತ್ರವನ್ನು ವಿಸ್ತರಿಸಿಕೊಂಡು ತನ್ನ ವೇಗವನ್ನು ಕಡಿಮೆ ಮಾಡಿಕೊಂಡು ಪ್ರಶಾಂತವಾಗಿ ಕಡಲನ್ನು ಸೇರುತ್ತದೆ. ಇಲ್ಲಿ ದಕ್ಷಿಣದತ್ತ ಕೋಡಿ–

ಕುಂದಾಪುರಗಳು ಸಮತಟ್ಟಾದ ಭೂಪ್ರದೇಶದಿಂದ ಕೂಡಿದ್ದರೆ, ಗಂಗೊಳ್ಳಿ ಸಣ್ಣ ಸಣ್ಣ ಗುಡ್ಡಗಾಡುಗಳಿಂದಲೂ, ಗಟ್ಟಿಯಾದ ಲೆಟರೈಟ್ ಮಣ್ಣಿನಿಂದಲೂ ಕೂಡಿದೆ. ಸಮತಟ್ಟಾದ ವಿಶಾಲಭೂಮಿಯನ್ನು ಹೊಂದಿದೆ. ಇದರಿಂದ ಲಂಗರು ಹಾಕಿದ ಹಡಗುಗಳ ಸಾಮಗ್ರಿಗಳನ್ನು ಸಂಗ್ರಹಿಸಲು ಹಾಗೂ ವ್ಯಾಪಾರಕ್ಕೆ ಬೇರೆಡೆಯಿಂದ ತರಿಸಿದ ಸಾಮಗ್ರಿಗಳನ್ನು ಸಂಗ್ರಹಿಸಿಡಲು ಅನುಕೂಲವಾಗಿತ್ತು.

ಕಡಲನೀರು ತೀರಪ್ರದೇಶದಲ್ಲಿ ಎರಡರಿಂದ ಮೂರು ಮೀಟರ್ ನಿಂತಿರುವುದರಿಂದ ಹಲವು ಹಡಗುಗಳನ್ನು ಲಂಗರು ಮಾಡಲು ಅನುಕೂಲವಿತ್ತು. ಹಡಗುಗಳು ಗಂಗೊಳ್ಳಿಯಿಂದ ಮರವಂತೆಯವರೆಗೂ ಲಂಗರು ಹಾಕಲು ಅನುಕೂಲತೆಗಳಿದ್ದವು.

ನದಿಯ ಮೂಲಕ ಬಸರೂರು ಮಾರ್ಗವಾಗಿ ಪಶ್ಚಿಮ ಘಟ್ಟವನ್ನು ಸೇರುವ ಸುರಕ್ಷಿತವಾದ ನದಿ ಮಾರ್ಗವು ಇಲ್ಲಿದೆ. ಅದರ ಪಕ್ಕದಲ್ಲೇ ರಸ್ತೆ ಮಾರ್ಗವೂ ಇದೆ. ಗಂಗೊಳ್ಳಿಯಿಂದ ಹೊರಟ ರಸ್ತೆ ಮಾರ್ಗವು ತ್ರಾಸಿ ಅಥವಾ ನಾಯಕವಾಡಿಯಿಂದ ಮುಳ್ಳಿಕಟ್ಟೆಗೆ–ಅಲ್ಲಿಂದ ಮುಂದೆ ಘಟ್ಟ ಪ್ರದೇಶಗಳಿಗೆ ತಲುಪುತ್ತಿತ್ತು. ಇದು ಹೇರು, ಚಕ್ಕಡಿ, ಕುದುರೆಗಾಡಿ ಮಾರ್ಗವಾಗಿತ್ತು. ಅದು ಮುಂದೆ ಕುಂದಾಪುರ ಬಂದರಿಗೆ ಹೊರನಾಡಾಗಿದ್ದ ಶಿವಮೊಗ್ಗಾ, ಮೈಸುರು, ಸೇಲಂ, ಕೋಲಾರ ಹಾಗೂ ಅನಂತಪುರ ಜಿಲ್ಲೆಗಳವರೆಗೂ ಸಂಪರ್ಕ ಕಲ್ಪಿಸುತ್ತಿತ್ತು.

ನೈಸರ್ಗಿಕ ಲಕ್ಷಣ ಹಾಗೂ ನದಿಗಳು

ಗಂಗೋಳ್ಳಿಗೆ ನಿರ್ಸಗವೇ ಉತ್ತಮವಾದಕೊಡುಗೆಗಳನ್ನು ನೀಡಿದೆ. ಗಂಗೋಳ್ಳಿಯಲ್ಲಿ ಪಂಚಗಂಗಾವಳಿ ನದಿಯು ವಿಶಾಲವಾದ ಪಾತ್ರದೊಂದಿಗೆ ಕಡಲನ್ನು ಸೇರುತ್ತದೆ. ಇಲ್ಲಿ ನದಿಯು ಗಂಗೋಳ್ಳಿಯನ್ನು ಸುತ್ತುವರೆದಿರುವುದರಿಂದ ನೌಕೆಗಳನ್ನು ಯಾವುದೇ ಸ್ಥಳದಲ್ಲಿ ಲಂಗರು ಮಾಡಬಹುದಾಗಿತ್ತು. ಮರವಂತೆಯಿಂದ ಗಂಗೋಳ್ಳಿಯವರೆಗೂ ಕಡಲಲ್ಲಿ ನೌಕೆಗಳನ್ನು ನಿಲ್ಲಿಸಲು ಅನುಕೂಲತೆಗಳಿದ್ದವು. ಹಟ್ಟಿಅಂಗಡಿಯಂಥಹ ವ್ಯಾಪಾರಿ ಪಟ್ಟಣವು ಗಂಗೋಳ್ಳಿಯ ಪಕ್ಕದಲ್ಲಿ ಇದ್ದುದರಿಂದ ಹಿನ್ನಾಡಿನಿಂದ ಸರಕು ತರಿಸುವುದು ಹಾಗೂ ಹಿನ್ನಾಡಿನ ಪೇಟೆ ಪಟ್ಟಣಗಳಿಗೆ ಸರಕುಗಳನ್ನು ಕಳಿಸುವುದು ಸುಲಭವಾಗಿತ್ತು. ಗಂಗಾವಳಿ ನದಿಯು ಶಂಕರ ನಾರಾಯಣದವರೆಗೂ ನೌಕಾಯಾನಕ್ಕೆ ಅನುಕೂಲಕರವಾಗಿತ್ತು.

ಕುಂದಾಪುರ

ಕರಾವಳಿಯ ಪ್ರಮುಖ ವ್ಯಾಪಾರಿ ಕೇಂದ್ರ ಕುಂದಾಪುರ. ಪರಶುರಾಮ ಸೃಷ್ಟಿಯ ಪ್ರದೇಶಗಳಲ್ಲಿ ಇದೂ ಸೇರುತ್ತದೆ. ಕುಂದಾಪುರವೂ 'ತುಳುನಾಡು'ಆಗಿತ್ತು. ತುಳುನಾಡಿನ ವ್ಯಾಪ್ತಿಯ ಕುರಿತು ಹಲವು ಚರ್ಚೆಗಳಿವೆಯಾದರೂ ಯಂ.ಗಣಪತಿರಾವ್ ಐಗಳ್‌ರವರ ತುಳುದೇಶವು

ಉತ್ತರದಲ್ಲಿ ಗೋಕರ್ಣದಿಂದ ಪಾಯಸ್ವಿನಿಯವರಗೂ ವಿಸ್ತರಿಸಿಕೊಂಡಿತ್ತು ಎಂದು ತಿಳಿಸಿದ್ದಾರೆ. ತುಳು ಜೈನ ಅರಸರಾದ ಸಂಗೀತಪುರದರಸರು ತುಳು ಅರಸರೆಂದೇ ಆಳುತ್ತಿದ್ದರು[೭೯] ಎಂದಿದ್ದಾರೆ. **'ತುಳು'** ಎಂಬುದು ದೇಶವಾಚವೂ ಅಲ್ಲ, ಭಾಷಾವಾಚಕವೂ ಅಲ್ಲ. ಅದು 'ತುರು' ಎಂಬುದರ ಪರ್ಯಾಯ. ಹೀಗಾಗಿ ತುಳುವರೆಂದರೆ ತುರುವಾರು(ತುಳುನಾಡು) ಗೋಪರು. ಅವರ ನಾಡು ಗೋಪರಾಷ್ಟ್ರ, ಗೋರಾಷ್ಟ್ರ, ತುರುನಾಡು(ತುಳುನಾಡು).[೮೦] ದ.ಕ. ಜಿಲ್ಲೆಯ ಉಡುಪಿಯಿಂದ ಇಚೆಯ ಮತ್ತು ಕುಂದಾಪುರ ತಾಲೂಕಿನ ಉತ್ತರ ಭಾಗವನ್ನೊಳಗೊಂಡು, ಉತ್ತರಕನ್ನಡ ಜಿಲ್ಲೆಯ ಭಟ್ಕಳ, ಹೊನ್ನಾವರ, ನಗಿರೆ, ಹಾಡುವಳ್ಳಿ ಈ ಪ್ರದೇಶಗಳನ್ನು ಸುತ್ತುವರಿದಿರುವ ಭೂಪ್ರದೇಶವು ತುಳುನಾಡಾಗಿತ್ತೆಂದು ಹೇಳಲು ನಮಗೆ ಸಾಕಷ್ಟು ಆಧಾರಗಳು ದೊರಕುತ್ತವೆ[೮೧]. ಇದರಿಂದ ಉಡುಪಿಯಿಂದ ಹೊನ್ನಾವರದ ಗೇರುಸೊಪ್ಪಾ ಪ್ರದೇಶವು ತುಳುನಾಡಾಗಿತ್ತೆಂದು ತೀರ್ಮಾನಿಸಬಹುದು. ಇವುಗಳೆಲ್ಲದರಿಂದ ಕುಂದಾಪುರ ಇದುವರೆಗಿನ ನಂಬಿಕೆಯಂತೆ ತುಳುನಾಡಿನ ಪ್ರದೇಶ.

ಕುಂದಾಪುರವು ಪಶ್ಚಿಮ ಕರಾವಳಿಯ ಅರಬ್ಬಿ ಸಮುದ್ರದ ತೀರದಲ್ಲಿರುವ ತಾಲ್ಲೂಕು ಕೇಂದ್ರ, ಹೊಸಂಗಡಿ, ಕೊಲ್ಲೂರು, ಶಿರೂರು, ಬ್ರಹ್ಮಾವರವನ್ನು ಗಡಿಯಾಗಿಹೊಂದಿರುವ ಈ ತಾಲೂಕಿನ ಪೂರ್ವದಲ್ಲಿ ಪಶ್ಚಿಮ ಘಟ್ಟದ ಸಾಲು ದಕ್ಷಿಣೋತ್ತರವಾಗಿ ಹಬ್ಬಿದೆ.

ವಾರಾಹಿ ನದಿ

ಶಿವಮೊಗ್ಗಾದ ತೀರ್ಥಹಳ್ಳಿ ತಾಲೂಕಿನ ಆಗುಂಬೆಯ ಬಳಿ ಜನಿಸುವ ವಾರಾಹಿ ೭೫ ಕಿ.ಮೀ ಪಶ್ಚಿಮಕ್ಕೆ ಹರಿದು ಕುಂದಾಪುರದ ಬಳಿ ಅರಬ್ಬಿ ಸಮುದ್ರ ಸೇರುತ್ತದೆ. ಈ ೭೫ ಕಿ.ಮೀ ಉದ್ದಕ್ಕೂ ಪ್ರಖ್ಯಾತ ವ್ಯಾಪಾರಿ ಕೇಂದ್ರಗಳು, ರಾಜಧಾನಿಗಳು, ಧಾರ್ಮಿಕ-ಸಾಂಸ್ಕೃತಿಕ ಕೇಂದ್ರಗಳಿವೆ. ವಾರಾಹಿನದಿಯು ಅರಬ್ಬಿ ಸಮುದ್ರವನ್ನು ಕುಂದಾಪುರದ ಗಂಗೊಳ್ಳಿಯಲ್ಲಿ ಸೇರುತ್ತದೆ. ಇನ್ನೊಂದು ಬದಿಯಲ್ಲಿ ಕುಂದಾಪುರ ಹಾಗೂ ಕೋಡಿಗಳಿವೆ. ವಾರಾಹಿನದಿಯು-ವಾರಾಹಿ, ಚಕ್ರಾ, ಕೊಲ್ಲೂರು, ಜಂಬೂ ಮತ್ತು ಸೂಕ್ತಮತಿ ಎಂಬ ಐದು ನದಿಗಳು ಒಟ್ಟಿಗೆ ಸೇರಿಸಿಕೊಂಡು "ಪಂಚ ಗಂಗಾವಳಿ" ಎಂಬ ಹೆಸರನ್ನು ಪಡೆದು ಗಂಗೊಳ್ಳಿ ಬಳಿ ಸಮುದ್ರವನ್ನು ಸೇರುತ್ತದೆ.

ಈ ನದಿಗಳಲ್ಲಿ ಸಂಗಮಸ್ಥಳದಿಂದ ಪೂರ್ವದಿಕ್ಕಿನಲ್ಲಿ ೨೫ ರಿಂದ ೩೦ ಕಿ.ಮಿ ವರೆಗೆ ನೌಕಾಯಾನ ಕೈಗೊಳ್ಳಬಹುದು. ಈ ನದಿಗಳು ಹರಿಯುವ ಇಕ್ಕೆಲಗಳಲ್ಲಿರುವ ಬಸ್ರೂರು, ಕೋಣಿ, ಆನಗಳ್ಳಿ, ಹಟ್ಟಿಕುದ್ರು, ಉಪ್ಪಿನಕುದ್ರು, ಬಳ್ಕೂರು, ಹೆಮ್ಮಾಡಿ, ತಲ್ಲೂರು, ಕನ್ನಡ ಕುದುರು, ಬೆಲ್ತುರು, ಹಕ್ಲಾಡಿ, ಆಲೂರು ಮುಂತಾದ ಊರುಗಳಿಗೆ ಈ ನದಿ ಜೀವದಾಯಿಯಾಗಿದೆ. ಸ್ವಲ್ಪ ಮೇಲೆ ಪಶ್ಚಿಮ ಘಟ್ಟಗಳು ಗೋಡೆಗಳೋಪಾದಿಯಲ್ಲಿ ಎದ್ದು ನಿಂತಿವೆ. ಸುಮಾರು ೩೫೦೦ ರಿಂದ

೫೦೦೦ ಅಡಿ ಎತ್ತರವಾಗಿರುವ ಪೂರ್ವದ ಸಾಲುಗಳನ್ನು ದಾಟಿ ಹೋಗುವುದು ದುಸ್ತರ. ಘಟ್ಟದ ಊರುಗಳನ್ನು ಸಂಪರ್ಕಿಸಲು ಇಲ್ಲಿ ಎರಡು ಮಾರ್ಗಗಳಿವೆ. ಒಂದು ಆಗುಂಬೆ ಮೂಲಕ ಶಿವಮೊಗ್ಗಾ ತಲುಪುವುದು, ಇನ್ನೊಂದು ಬಾಳೆಬರೆಯ ಮೂಲಕ ಸಾಗುವುದು. ಆಗುಂಬೆಯ ಮಾರ್ಗ ಕಿರಿದಾಗಿದ್ದು, ಚಕ್ಕಡಿ ಹೇರು ಮಾರ್ಗವಾಗಿದೆ. ಆದರೆ ಬಾಳೆಬರೆ ಮಾರ್ಗವು ದೊಡ್ಡ ವಾಹನಗಳಿಗೆ ಹಾಗೂ ಏಕಕಾಲದಲ್ಲಿ ಎರಡು ಚಕ್ಕಡಿಗಳು, ಹೇರುಗಳು ತಲುಪುವಹಾಗೆ ವಿಸ್ತಾರವಾಗಿದೆ. ಆದರೆ ಮಾರ್ಗದ ಬದಿಗಳು ತೀರ ಆಳವಾದ ಕೊರಕಲುಗಳಿಂದ ಕೂಡಿವೆ. ಬಹು ಎಚ್ಚರಿಕೆಯಿಂದ ಈ ಮಾರ್ಗದಲ್ಲಿ ಚಲಿಸಬೇಕು.

ಬಾಳೆಬರೆಘಾಟಿಯ ಆರಂಭವು ಹುಲಿಕಲ್ ಊರಿನಲ್ಲಿದೆ. ಈ ಊರು ಘಟ್ಟದ ಮೇಲಿನ ಪ್ರದೇಶಗಳಿಗೂ ಹಾಗೂ ಕರಾವಳಿಗೂ ಸಂಪರ್ಕ ಜೋಡಿಸುವ ಕೊಂಡಿಯಾಗಿದೆ. ಇದೊಂದು ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು ಎನ್ನುವುದಕ್ಕೆ ಸಾಕ್ಷಿಯಾಗಿ ಇಲ್ಲಿರುವ ಪುರಾತನ ಚಂಡಿಕಾವನವಿದೆ. ಸಾಮಾನ್ಯವಾಗಿ ವ್ಯಾಪಾರಿಗಳು ಮಾರ್ಗ ಮಧ್ಯದಲ್ಲಿ ದೇವಿ ಆರಾಧನೆಗೆ ಸ್ಥಳ ನಿರ್ಮಿಸಿಕೊಳ್ಳುತ್ತಿದ್ದರು. ಚಂಡಿಕಾವನ ಅಂಥಹ ಮಾರ್ಗ ಮಧ್ಯದ ಆರಾಧನಾಸ್ಥಳ.

ಈ ಮಾರ್ಗದಿಂದ ಕೆಳಗಿಳಿಯುತ್ತಿದ್ದಂತೆ ಸಿಗುವುದು ಹೊಸಂಗಡಿ. ಹೊಸಂಗಡಿಯನ್ನು ಮುಂದೆ ಹೊನ್ನಕಂಬಳಿಯರಸರು ತಮ್ಮ ರಾಜಧಾನಿಯಾಗಿ ಮಾಡಿಕೊಂಡುಆಳಿದರು. ಈ ಹೊಸಂಗಡಿಯಲ್ಲಿ ವಿಶಾಲವಾದ ಭೂಪ್ರದೇಶವಿದೆ. ಕುಂದಾಪುರದಿಂದ ಹೊಸಂಗಡಿಯವರೆಗೆ ಬರಲು ರಸ್ತೆಮಾರ್ಗ ಉತ್ತಮವಾಗಿದೆ. ಹೊಸಂಗಡಿಯಲ್ಲಿ ಘಟ್ಟಕ್ಕೆ ಕಳಿಸುವ ಸಾಮಗ್ರಿಗಳನ್ನು ಸಂಗ್ರಹಿಸಿಡಲು ಬಹು ಅನುಕೂಲತೆಗಳಿವೆ. ಹೊಸಂಗಡಿಯಿಂದ ತಕ್ಷಣವೇ ಪಶ್ಚಿಮ ಘಟ್ಟಗಳು ಮೇಲೆದ್ದು ನಿಂತಿರುವುದರಿಂದ, ಈ ಮಾರ್ಗವಾಗಿ ಘಟ್ಟಕ್ಕೆ ಪ್ರಯಾಣಿಸುವವರು ಬಾಳೆಬರೆ ಘಾಟಿಯನ್ನು ಬಳಸಬೇಕು. ಇಲ್ಲಿಂದ ಕೆಳಗೆ ಕಂಡ್ಲೂರು, ಶಂಕರನಾರಾಯಣ ಪ್ರದೇಶಗಳಿಂದ ನದಿಯಲ್ಲಿ ಯಾನ ಕೈಗೊಳ್ಳಬಹುದು. ಅಲ್ಲಿಂದ ಮುಂದಿರುವ ಬಸ್ರೂರು ಬಹು ಸುರಕ್ಷಿತವಾದ, ನದಿಗಳಿಂದ ಸುತ್ತುವರಿದಿರುವ ವ್ಯಾಪಾರಿ ಕೇಂದ್ರವಾಗಿತ್ತು.

ಬಸ್ರೂರು

ವಾರಾಹಿನದಿಯ ದಂಡೆಯ ಮೇಲಿರುವ ಬಸ್ರೂರು ಪ್ರಾಚೀನ ಕಾಲದಿಂದಲೂ ವ್ಯಾಪಾರದಲ್ಲಿ ತೊಡಗಿದ್ದ ಊರು[೮೨]. ವಾರಾಹಿನದಿಯು ಇಲ್ಲಿ ಟಿಸಿಲಾಗಿ ಬಸ್ರೂರನ್ನು ದ್ವೀಪವಾಗಿಸಿದೆ. ಇದರಿಂದ ಇದೊಂದು ನೈಸರ್ಗಿಕ, ಸುರಕ್ಷೀತ ಬಂದರಾಗಿದೆ. ಘಟ್ಟದ ಮೇಲಿನ ಮಸಾಲೆ ದಿನಿಸುಗಳನ್ನು, ಉತ್ತಮ ದರ್ಜೆಯ ಅಕ್ಕಿಯನ್ನು ಮತ್ತು ಮರಮಟ್ಟನ್ನು ನದಿಮಾರ್ಗವಾಗಿ

ತಂದು ಇಲ್ಲಿ ಸಂಗ್ರಹಿಸಬಹುದಾಗಿತ್ತು. ಮತ್ತು ವ್ಯಾಪಾರಕ್ಕೆ ಬಳಸಬಹುದಿತ್ತು. ಇದರ ಪಕ್ಕದಲ್ಲಿ ಇದ್ದ ಹಟ್ಟಿಅಂಗಡಿಯು ಇನ್ನೊಂದು ಉತ್ತಮ ವ್ಯಾಪಾರಿ ಕೇಂದ್ರವಾಗಿತ್ತು.

ಈ ಊರಿನ ವೈಶಿಷ್ಟ್ಯವೆಂದರೆ ಒಂದೇ ಹೆಸರಿನ ಎರಡು ಕೇರಿಗಳಿರುವುದು. ಇದು ಅಂದು ಈ ಊರು ಹೊಂದಿದ್ದಸಮೃದ್ದತೆ ಹಾಗೂ ವ್ಯಾಪಾರದಲ್ಲಿಪಡೆದಿದ್ದ ಪ್ರಾಮುಖ್ಯತೆಯನ್ನು ತೋರಿಸುತ್ತದೆ[೬೩]. ಅವಳಿನಗರವಾಗಿ ರೂಪುಗೊಂಡಿರುವ ಈ ಪಟ್ಟಣವು ಕ್ರಿ.ಶ ೧೧-೧೨ನೆಯ ಶತಮಾನದಲ್ಲಿ ಹೊಸಪಟ್ಟಣವಾಗಿ ವ್ಯವಸ್ಥಿತವಾಗಿ ಪುನರ್‌ರೂಪಿಸಲ್ಪಟ್ಟಿತ್ತು. ವ್ಯಾಪಾರಿಗಳ ಹೆಸರಿನಲ್ಲಿಯೇ ಇಲ್ಲಿ ನಖರೇಶ್ವರ ಹಾಗೂ ತುಳುನಾಡನ್ನು ಪ್ರತಿನಿಧಿಸುವ ತುಳುವೇಶ್ವರದಂಥಹ ಅಪರೂಪದ ದೇವಾಲಯಗಳು ನಿರ್ಮಾಣಗೊಂಡವು. ಚೀನಾದ ಪ್ರಾಣಿಗಳನ್ನು ಹೋಲುವ ಪ್ರಾಣಿಗಳಮೂರ್ತಿಗಳು, ಏಳು ಕೆರಗಳು, ಏಳು ಕೇರಿಗಳು ಇಲ್ಲಿ ನೋಡಸಿಗುತ್ತವೆ. ಮುಂದೆ ಸಿಗುವ ಕೋಟೇಶ್ವರ ಹಾಗೂ ಕುಂಬಾಸಿಗಳು ಐತಿಹಾಸಿಕವಾಗಿ ಗಣ್ಯಸ್ಥಾನ ಪಡೆದಿದ್ದ ಊರುಗಳು.

ಬಸ್ರೂರು ಬಂದರು ಪ್ರದೇಶದಲ್ಲಿ ಹಡಗುಗಳನ್ನು ಲಂಗರು ಮಾಡಲು ಹಾಗೂ ಸುರಕ್ಷಿತವಾಗಿ ಸಂರಕ್ಷಿಸಲು ವ್ಯವಸ್ಥೆ ಮಾಡಿಕೊಂಡಿದ್ದರು. ಎತ್ತರವಾದ ದ್ವಾರಗಳನ್ನು ನದಿ ಮುಖಜದಲ್ಲಿ ಮಾಡಿಕೊಂಡಿದ್ದರು. ರಾತ್ರಿಯ ಸಮಯದಲ್ಲಿ ಯಾರು ಒಳಬರದಂತೆ ಹಾಗೂ ಹೊರ ಹೋಗದಂತೆ ಬಾಗಿಲನ್ನು ಮುಚ್ಚುತ್ತಿದ್ದರು. ನಿರ್ಧಿಷ್ಟ ಪಡಿಸಿದ್ದ ಸಮಯದಲ್ಲಿ ಈ ಮಾರ್ಗದಮೂಲಕ ವ್ಯಾಪಾರ-ವಹಿವಾಟು ನಡೆಯುತ್ತಿತ್ತು. ಸುಂಕವನ್ನು ಪಡೆದು ವ್ಯಾಪಾರಿ ಸಂಘಗಳು ಇಲ್ಲಿಯ ಚಿಕ್ಕ ಚಿಕ್ಕ ವ್ಯಾಪಾರಿಗಳಿಂದ, ಕರಕುಶಲಕರ್ಮಿಗಳಿಂದ ಸರಕುಗಳನ್ನು, ವಸ್ತುಗಳನ್ನು ಪಡೆದು ಮಾರಾಟ ಮಾಡುತ್ತಿದ್ದರು. ಇದರಲ್ಲಿ ಒಂದು ಪಾಲನ್ನು ನಾಡಿನ ಅರಸನ ಬೊಕ್ಕಸಕ್ಕೆ ತುಂಬುತ್ತಿದ್ದರು.

ಪಂಚಗಂಗಾವಳಿಯ ಸೌಪರ್ಣಿಕಾ ನದಿಯ ದಂಡೆಯಲ್ಲಿರುವ ಕೊಲ್ಲೂರು ಒಂದು ಶಕ್ತಿ ಕೇಂದ್ರ. ಅಲ್ಲದೆ ಇದು ಒಂದು ವ್ಯಾಪಾರಿ ಕೇಂದ್ರವೂ ಆಗಿತ್ತು. ವ್ಯಾಪಾರಿ ಮಾರ್ಗಗಳ ಮಧ್ಯ ಅಲ್ಲಲ್ಲಿ ಕಂಡು ಬರುವ ಶಕ್ತಿ ಆರಾಧನಾ ಕೇಂದ್ರಗಳಂತೆ ಇದೂ ಒಂದಾಗಿತ್ತು. ಹಟ್ಟಿಯಂಗಡಿಯ ಗಣಪತಿ ದೇವಾಲಯ ಹಾಗೂ ಅಲ್ಲಿ ದೊರೆತಿರುವ ನಾಥಪಂಥದ ಅವಶೇಷಗಳು ಮತ್ತು ಜೈನ ಶಿಲ್ಪಗಳು, ಬೌದ್ಧಾವಶೇಷಗಳು ಈ ಊರು ಇತಿಹಾಸ ಕಾಲದಿಂಲೂ ಪ್ರಮುಖ ಕೇಂದ್ರವಾಗಿದ್ದುದ್ದನ್ನು ಸೂಚಿಸುತ್ತದೆ. ಹಟ್ಟಿಅಂಗಡಿ ಹೆಸರೆ ಸೂಚಿಸುವಂತೆ ವ್ಯಾಪಾರಿ ಕೇಂದ್ರವಾಗಿದೆ. ಗಂಗೋಳ್ಳಿಯಿಂದ ತಂದ ಸರಕುಗಳು ಹಾಗೂ ಹಿನ್ನಾಡಿನ ಸರಕುಗಳು ಇಲ್ಲಿ ಮಾರಲ್ಪಡುತ್ತಿದ್ದವು. ವಾರಾಹಿ ನದಿಯು ಗಂಗಾವಳಿಯಾಗಿ ಪರಿವರ್ತನೆಯಾಗುವವರೆಗೂ ದಂಡೆಯ ಗುಂಟ ಅನೇಕ ನಾಗಾರಾಧನಾ ಕೇಂದ್ರಗಳಿವೆ. ಕಂದಾವರ, ಕಾಳಾವರ, ಗುಡ್ಡೆಮಾಡಿ

ಇತ್ಯಾದಿಗಳು ಪ್ರಮುಖವಾಗಿವೆ. ಶಂಕರನಾರಾಯಣವು ವಿಶಿಷ್ಟಆರಾಧನಾಕ್ಷೇತ್ರ. ಇಲ್ಲಿ 'ಶಂಕರನಾರಾಯಣ'ದ ಅಕ್ಕಪಕ್ಕದಲ್ಲಿ ನಾಲ್ಕು ಶಂಕರನಾರಾಯಣ ದೇವಾಲಯಗಳಿವೆ. ಇವುಗಳು ತುಳು ಅರಸರ ಕಾಲದಲ್ಲಿ ದಾನದತ್ತಿಗಳನ್ನು ಪಡೆದು ವಿಜ್ರಂಭಿಸಿದ್ದವು. ಇಂಥಹ ಆರಾಧನಾ ಕೇಂದ್ರಗಳು ವ್ಯಾಪಾರಿ ಕೇಂದ್ರಗಳೂ ಆಗಿದ್ದವು. ಶೈವ ವೈಷ್ಣವ ಅನುಯಾಯಿ ವರ್ತಕರು ಒಂದಾಗಿದ್ದುದರ ಪ್ರತೀಕ ಇದು. ಶಂಕರನಾರಾಯಣದ ಪಕ್ಕದಲ್ಲಿರುವ ಊರು ಹಾಲಾಡಿ. ವಾರಾಹಿನದಿಯು ಇಲ್ಲಿಂದ ಮುಂದೆ ಹಾಲಾಡಿ ಹೊಳೆ ಎಂದು ಕರೆದುಕೊಳ್ಳುತ್ತದೆ.

ಹಿನ್ನಾಡಿಗೆ ಮಾರ್ಗ

ಘಟ್ಟಕ್ಕೆ ಹೊಗಲು ಅನೇಕ ಮಾರ್ಗಗಳಿದ್ದವು. ಇವುಗಳಲ್ಲಿ ಆಗುಂಬೆ ಮಾರ್ಗವು ಒಂದು. ಇದು ಕುಂದಾಪುರದಿಂದ ಹೊಸಅಂಗಡಿ ಮಾರ್ಗವಾಗಿ ಆಗುಂಬೆಗೆ ಹೋಗುತ್ತಿತ್ತು. ಕುಂದಾಪುರ ಬಂದರಿನಿಂದ ಬರಲು ಬಹುಮುಖ್ಯವಾಗಿ ಗಂಗೊಳ್ಳಿ–ನಾಯಕವಾಡಿ–ಮುಳ್ಳಿಕಟ್ಟೆ–ಆಲೂರು ಅಥವಾ ಹಕ್ಲಾಡಿ ಮಾರ್ಗಗಳು ಸಂಪರ್ಕ ಕಲ್ಪಿಸುತ್ತಿದ್ದವು. ಇನ್ನೊಂದು ಉಪ್ಪಿನಕುದ್ರು–ಕೋಲ್ಲೂರು, ಹಟ್ಟಿಯಂಗಡಿ–ಕೊಲ್ಲೂರು ಮಾರ್ಗ ಹಾಗೂ ಹೆಮ್ಮಾಡಿ–ಕೊಲ್ಲೂರು ಮಾರ್ಗಗಳಾಗಿದ್ದವು. ಇವುಗಳೆಲ್ಲಾ ನದಿಯ ಮೂಲಕ ಸಾಮಗ್ರಿಗಳನ್ನು ಸುಮಾರು ೨೫–೩೦ ಕಿ.ಮಿ ವರೆಗೆ ಸಾಗಿಸಿ ಮುಂದೆ ರಸ್ತೆ ಮಾರ್ಗದ ಮೂಲಕ ಸಾಗಲು ಅನುಕೂಲವಾಗಿದ್ದವು. ಬೈಂದೂರು ಕೊಲ್ಲೂರು ಮಾರ್ಗವಿದ್ದು, ಇದು ಪೂರ್ಣ ಕಣಿವೆ ಮಾರ್ಗವಾಗಿತ್ತು.

ಕುಂದಾಪುರ ಬಂದರಿನಿಂದ–ಬಸ್ರೂರು ಮುರುಕೈ, ಬಸ್ರೂರು–ಸಿದ್ದಾಪುರ–ಹೊಸಂಗಡಿ ಮಾರ್ಗವು ಅನುಕೂಲವಾಗಿತ್ತು. ಹೊಸಂಗಡಿ ಒಂದು ಸುಂಕದ ಕಟ್ಟೆಯಾಗಿತ್ತು.

ಕುಂದಾಪುರ–ಗಂಗೊಳ್ಳಿ–ಬಸ್ರೂರು ಬಂದರುಗಳ ಬೆಳವಣಿಗೆ

ಆಳುಪ ಅರಸರು ಕ್ರಿ.ಶ ೫೬೭ ರಿಂದ ಕ್ರಿ.ಶ ೧೩೨೫ ರ ವರೆಗೆ ಬೇರೆ ಬೇರೆ ಕಡೆಗಳಲ್ಲಿ ಎಂದರೆ ಉತ್ತರಕನ್ನಡದಿಂದ ಪಯಸ್ವಿನಿ ನದಿಯವರೆಗಿನ[೮೪] ತುಳು ರಾಜ್ಯವನ್ನು ಆಳುತ್ತಿದ್ದರೆಂದು ತಿಳಿಯಬಹುದು. ಹಿಂದಿನ ದ.ಕ ಜಿಲ್ಲೆಯನ್ನು ಸಮಗ್ರವಾಗಿ ಆಳುಪರು ಆಳಿದ್ದರು.[೮೫] ಕುಂದಾಪುರ ಇವರ ವಶವಾಗಿತ್ತು. ಕರ್ನಾಟಕದಲ್ಲಿ ದೊರೆತಿರುವ ಅಶೋಕನ ಶಾಸನಗಳು ಉಲ್ಲೇಖಿಸುವ ಸತಿಯಪುತ್ರ ಎಂಬುವವರು ಇದೇ ದಕ್ಷಿಣ ಕನ್ನಡದ ಪ್ರದೇಶ ಆಳುತ್ತಿದ್ದವರು[೮೬] ಎಂದು ಅಭಿಪ್ರಾಯಪಡಲಾಗಿದೆ. ಪಿ.ಗುರುರಾಜ್ ಭಟ್ಟರವರು ತಮ್ಮ ತುಳುನಾಡು ಕೃತಿಯಲ್ಲಿ, ಮೌರ್ಯ ಸಿಂಹಾಸನವು ಬಿದ್ದುಹೋದ ಬಳಿಕ ದಕ್ಷಿಣಾಪಥದಲ್ಲಿ ಶಾತವಾಹನರು ಪ್ರಬಲರಾಗಿ ಶಾಲಿವಾಹನ ಶಕೆಯನ್ನು ಸ್ಥಾಪಿಸಿ ಆಳಿದರು ಎನ್ನುತ್ತಾರೆ. ಶಾತವಾಹನರೂ ನಾಗವಂಶದವರಾಗಿದ್ದರು. ಶಾತವಾಹನರ ಉಪರಾಜರಾಗಿ ಬನವಾಸಿಯಲ್ಲಿ ಆಳುತ್ತಿದ್ದ ಅವರ ಕಿರಿಯ ಶಾಖೆಯಾದ ಚಟುಕುಲದ ಅರಸರನ್ನು

ಕದಂಬರ ಮೊದಲಿನ ಅರಸನಾದ ಮಯೂರವರ್ಮನು ಜಯಿಸಿ, ಬನವಾಸಿಯ ರಾಜ್ಯವನ್ನು ತನ್ನ ಕೈವಶಮಾಡಿಕೊಂಡ ಬಳಿಕ, ಚಟುಕುಲದವರು ತುಳುವಕ್ಕೆ ಬಂದು ಸೇರಿಕೊಂಡು ಅಲ್ಲಿ ಚಿಕ್ಕ ಸಂಸ್ಥಾನ ಒಂದನ್ನು ನಿರ್ಮಿಸಿಕೊಂಡು ಆಳತೊಡಗಿದ್ದರು. ಆಳುಪರೆಂಬ (ಅಲೂಪ) ಹೆಸರು ಅವರಿಗೆ ತುಳುವದಲ್ಲಿ ಬಂದಿರಬೇಕು[೮೭]. ಹೀಗೆ ಶಾತವಾಹನ ವಂಶದವರ ಆಡಳಿತಕ್ಕೆ ಒಳಪಟ್ಟ ಈ ಪ್ರದೇಶವು ಕರಾವಳಿಯ ದಕ್ಷಿಣ ತುದಿಯಲ್ಲಿ ಕೇಂದ್ರ ಹೊಂದಿತ್ತು. ಮುಂದೆ ಕದಂಬರು ಪ್ರಬಲರಾದಂತೆ ಅವರ ಅಧೀನರಾಗಿ ಕೆಲಕಾಲ ಆಳಿದರು. ಒಟ್ಟಿನಲ್ಲಿ ಆಳುಕ, ಆಳುಪ, ಆಲೂಪ ಮುಂತಾದ ಹೆಸರುಗಳಿಂದ ಆಳುತ್ತಿದ್ದ ಇವರ ಪ್ರದೇಶವು ಆಳ್ವಖೇಡ ಎಂದು ಗುರುತಿಸಲ್ಪಡುತ್ತಿತ್ತು. ಟಾಲೇಮಿಯು ಹೇಳುವ ಒಲೆಖೊಯ್ರವು ಇದೆ ಪ್ರದೇಶವಾಗಿತ್ತೆಂದು[೮೮] ಹೇಳಲಾಗಿದೆ. ಕ್ರಿ.ಶ ೨ನೇ ಶತಮಾನದ ಗ್ರೀಕ್ ಪ್ರಹಸನವು ಮಲ್ಪೆ ಪ್ರದೇಶದ ವಿವರ ನೀಡುತ್ತದೆ. ಇತಿಹಾಸ ಕಾಲದಿಂದಲೂ ಈ ಪ್ರದೇಶವು ವಿದೇಶದೊಂದಿಗೆ ವ್ಯಾಪಾರಿ ಸಂಪರ್ಕ ಹೊಂದಿರುವುದು ತಿಳಿಯುತ್ತದೆ. ದಕ್ಷಿಣ ಕನ್ನಡದ ಎಲ್ಲಾ ಬಂದರುಗಳು ವಿದೇಶಿ ವ್ಯಾಪಾರದೊಂದಿಗೆ ಚಟುವಟಿಕೆಯಿಂದಕೂಡಿದ್ದವು. ಟಾಲೆಮಿಯು ಬರೇಸ್ ಎಂದು ಉಲ್ಲೇಖಿಸುವುದು ಬಸರೂರು ಪ್ರದೇಶವಾಗಿದೆ.[೮೯]

ಬಸರೂರು ಪ್ರಾಚೀನ ಕಾಲದಿಂದಲೂ ಜನವಸತಿ ಹೊಂದಿತ್ತೆಂದು ತಿಳಿಸುವ ಪುರಾವೆಗಳು ದೊರೆತಿವೆ. ಬಸರೂರಿನ ಬಂಗ್ಲೆಗುಡ್ಡೆ ಎಂದು ಕರೆಯಲಾಗುವ ಸ್ಥಳದಲ್ಲಿ ಬಂಡೆಗಲ್ಲುಗಳ ಮೇಲೆ ಕಂಡುಬಂದ ಚೆನ್ನೆಮಣೆಯತರದ ರಚನೆಗಳು ಪ್ರಾಗೇತಿಹಾಸಕಾಲದ ರಚನೆಗಳು.[೯೦] ಕ್ರಿಸ್ತಶಕದ ಆದಿಯಿಂದಲೇ ಪಾಶ್ಚಾತ್ಯರಿಗೆ ವ್ಯಾಪಾರಕೇಂದ್ರವಾಗಿ ಪರಿಚಿತವಾಗಿದ್ದ ಬಸರೂರು ಮುಂದಿನ ಕೆಲವು ಶತಮಾನಗಳಲ್ಲಿ ರಾಜಕೀಯ ಮಹತ್ವವನ್ನುಗಳಿಸಿತ್ತು. ಸಾಂಸ್ಕೃತಿಕ ಪ್ರಗತಿಯನ್ನು ಕಂಡಿತು.

ಆಳುಪರು ಈ ಪ್ರದೇಶವನ್ನು-ಕುಂದಾಪುರವನ್ನು ವಿದೇಶ ವ್ಯಾಪಾರಕ್ಕಾಗಿ ಬಳಸಿಕೊಂಡರು. ಬಸರೂರು ನೈಸರ್ಗಿಕವಾಗಿ ರಕ್ಷಣೆ ಪಡೆದ ಊರಾಗಿತ್ತು. ಇದನ್ನು ವಾರಾಹಿ ನದಿಯು ಎರಡು ಭಾಗವಾಗಿ ವಿಂಗಡಿಸುತ್ತದೆ. ಇದರಿಂದ ಊರಿನ ರಕ್ಷಣೆ ಹಾಗೂ ನದಿಮಾರ್ಗವಾಗಿ ಬರುವ ಹಡಗುಗಳಿಗೆ ಲಂಗರು ಹಾಕಲು ಅನುಕೂಲವಾಗಿತ್ತು. ಸುತ್ತಲೂ ಇರುವ ಪ್ರದೇಶವು ಸಾಮಾಗ್ರಿಗಳ ಸಂಗ್ರಹಕ್ಕೆ ಹಾಗೂ ವ್ಯಾಪಾರಿಗಳ ವಾಸಕ್ಕೆ ಸಹಾಯಕವಾಗಿತ್ತು.

ಬಸರೂರು ಪ್ರದೇಶವು ಆಳುಪರ ಆಡಳಿತಕ್ಕೆ ಆರಂಭದಿಂದಲೂ ಒಳಪಟ್ಟಿದ್ದರೂ, ಅವರಿಗೆ ಸಂಬಂಧಿಸಿದ ಶಾಸನ ದೊರೆತಿರುವುದು ಕ್ರಿ.ಶ ೧೧೫೪ರ ಅರಸು ಕವಿಆಳುಪೇಂದ್ರನ ಕಾಲದ್ದು.[೯೧] ಇದು ನಕರೇಶ್ವರ ದೇವರ ನೈವೇದ್ಯಕ್ಕೆ ಚಿನ್ನದ ನಾಣ್ಯ (ಪಾಂಡ್ಯಗದ್ಯಾಣ) ದಾನ ನೀಡಿದ್ದನ್ನು ತಿಳಿಸುತ್ತದೆ. ನಖರೇಶ್ವರವು ವ್ಯಾಪಾರಿಗಳು ಆರಾಧಿಸುವ ದೇವರಾಗಿದ್ದು, ಈ ದೇವಾಲಯ ಈ ಶಾಸನಕ್ಕಿಂತಲೂ

ಹಿಂದೇ ನಿರ್ಮಾಣವಾಗಿದ್ದು ಎಂದು ಊಹಿಸಬಹುದು. ಅಂದರೆ ೧೧ನೇ ಶತಮಾನಕ್ಕಾಗಲೇ ಬಸರೂರು ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು.

ಆಳುಪರು ಶಿವಮೊಗ್ಗಾದ ಪೊಂಬುಚ್ಚ (ಇಂದಿನ ಹುಂಚ) ವನ್ನೂ ಇನ್ನೊಂದು ರಾಜಧಾನಿಯಾಗಿ ಹೊಂದಿದ್ದರು.[೨] ಆದ್ದರಿಂದ ಬಸರೂರು ಮಾರ್ಗವಾಗಿ ಬಾಳೆಬರೆಘಟ್ಟದ ಮೂಲಕ ಪೊಂಬುಚ್ಚಕ್ಕೂ ಹಾಗೂ ಬನವಾಸಿಗೂ ಸಂಪರ್ಕ ಪಡೆದಿದ್ದರು. ಬನವಾಸಿ ೧೨೦೦೦ ವು ಇವರ ಆಳ್ವಿಕೆಯಲ್ಲಿ ಪ್ರಮುಖ ಕೇಂದ್ರವಾಗಿತ್ತು. ಚಾಲುಕ್ಯ ಚಕ್ರವರ್ತಿ ವಿಕ್ರಮಾದಿತ್ಯನು ಆಳುಪ ೧ನೆಯ ಆಳುವರಸನ ಸಮಕಾಲೀನವನು. ಪಲ್ಲವರ ಆಕ್ರಮಣದ ಸಂದರ್ಭದಲ್ಲಿ ಕ್ರಿ.ಶ ೬೫೪-೫೫ರಲ್ಲಿ ಈತನು ಚಾಲುಕ್ಯರಿಗೆ ಸಹಾಯ ಮಾಡಿದ್ದನು. ಪುನಃ ಅಧಿಕಾರಕ್ಕೆ ಬಂದ ಚಾಲುಕ್ಯ ಅರಸನು ಬನವಾಸಿ ೧೨,೦೦೦ವನ್ನೂ ಕದಂಬ ಮಂಡಲದ ಅಧಿಪತಿಯಾಗಿ ಆಳುವರಸನಿಗೆ ನೇಮಿಸಿರಬಹುದು.[೩] ಈ ಅವಧಿಯಲ್ಲಿ ಚಾಲುಕ್ಯರೂ ಕಡಲೋತ್ತರ ವ್ಯಾಪಾರ ವ್ಯವಹಾರಗಳಿಗೆ ಮಹತ್ವ ನೀಡಿದ್ದರು. ಚಾಲುಕ್ಯರು ನೌಕಾಪಡೆಯನ್ನು ಸ್ಥಾಪಿಸಿದ್ದರು. ೧ನೇ ಚಿತ್ರವಾಹನನ ಆಳ್ವಿಕೆಯು ಕ್ರಿ.ಶ.ದ ೬೮೦-೭೩೦. ಈ ಕಾಲಾವಧಿ ಪ್ರಾಚೀನ ಆಳುಪರ ಸಂಮೃದ್ಧಿಯ ಕಾಲ ಎಂದು ಕರೆಯಬಹುದು. ತಂದೆಯಕಾಲದಲ್ಲಿ ಪೊಂಬುಚ್ಚದ ಆಡಳಿತಾಧಿಕಾರಿಯಾಗಿ ಅನುಭವಪಡೆದಿದ್ದ ಈತ ತುಳುನಾಡು, ಪೊಂಬುಚ್ಚ, ಕದಂಬಮಂಡಲಗಳಿಗೆ ಅಧಿಪತಿಯಾಗಿದ್ದನು. ಬಸರೂರಿನಲ್ಲಿ ವಿಜಯನಗರದ ಆಡಳಿತದ ಆರಂಭಕಾಲದ ಐದು ಶಾಸನಗಳು ದೊರೆತಿವೆ. ಈ ಶಾಸನಗಳು ಆಳುಪರಸರಿಗೆ ಸೇರಿದ್ದು. ನಖರೇಶ್ವರ ದೇವರಿಗೆ ದಾನ ನಿಡಿದ ಕವಿಆಳುಪೆಂದ್ರನ ೧೧೫೪ರ ಶಾಸನದ ನಂತರ, ಮಹಾಲಿಂಗೇಶ್ವರ ದೇವಸ್ಥಾನದ ಹೊರ ಪ್ರಕಾರದಲ್ಲಿರುವ ಕ್ರಿ.ಶ ೧೧೭೬ ಜನವರಿ ೧೨ರ ಶಾಸನವು ಆಳುಪವೀರಕುಲಶೇಖರನ ಕಾಲಕ್ಕೆ ಸೇರಿದ್ದು. ರಾಜಪ್ಪಶೆಟ್ಟಿಯ ಮಗಳು ಚಂಡಬ್ಬೆ ನಕರೇಶ್ವರದೇವರಿಗೆ ನೀಡಿದ ದಾನವನ್ನು ತಿಳಿಸುತ್ತದೆ. ಮಹಾಲಿಂಗೇಶ್ವರ ದೇವಾಲಯದ ಹೊರ ಪ್ರಾಕಾರದ ೧೨೯೨ ಫೆಬ್ರುವರಿ ೧೪ರ ಶಾಸನ, ಆಳುಪ ನಾಗದೇವರಸ ಬಾರ್ಕೂರಿನಿಂದ ಆಡಳಿತ ಮಾಡುತ್ತಿದ್ದ ಸಮಯದಲ್ಲಿ ಬಸರೂರಿನ ನಖರೇಶ್ವರ ದೇವಾಲಯಕ್ಕೆ ಹೂವಿನ ತೋಟವನ್ನು ದಾನ ಮಾಡಿದ್ದು ಹೇಳುತ್ತದೆ. ಅದೇ ಕಾಲದ ದೇವಾಲಯದ ಹೊರ ಪ್ರಾಕಾರದಲ್ಲಿರುವ ಕ್ರಿ.ಶ ೧೨೯೮[೪] ರ ಶಾಸನವು ನಖರೇಶ್ವರನಿಗೆ ನೀಡಿದ ದಾನವನ್ನು ಹೇಳುತ್ತದೆ. ಇನ್ನೊಂದು ಕ್ರಿ.ಶ ೧೪೦೦[೫]ಕ್ಕೆ ಸೇರಿದ ವಿಜಯನಗರದ ಇಮ್ಮಡಿಹರಿಹರ ಅರಸನಿಗೆ ಸೇರಿದ್ದು. ಇದು ಬಸರೂರು ಸೆಟ್ಟಿಕಾರ ಮಾದಣ್ಣಸೆಟ್ಟಿಯು ನಂದಿಕೇಶ್ವರ ದೇವರಿಗೆ ನೈವೇದ್ಯಕ್ಕೆ ಭೂಮಿ ದಾನ ಮಾಡಿದ್ದು ತಿಳಿಸುತ್ತದೆ. ಇದರಲ್ಲಿ ಈ ಧರ್ಮಕಾರ್ಯಕ್ಕೆ ಚ್ಯುತಿಯೇನಾದರೂ ಉಂಟಾದಲ್ಲಿ ಅದನ್ನು ಹಲರು, ಶೆಟ್ಟಿಕಾರರು ಪರಿಹರಿಸಿ ಕೊಡುವರು ಎಂದಿದೆ. ಕೊನೆಯಲ್ಲಿ ನಖರೇಶ್ವರ ದೇವರಿಗೆ ಮಾಂದಣ್ಣಸೆಟ್ಟ ನೂಲುಹಬ್ಬಕ್ಕೆ ೧ ಗದ್ಯಾಣ ಹಣ ಕೊಡಬೇಕೆಂದು

ತಿಳಿಸಿದೆ. ಇವೆಲ್ಲದರಿಂದ ಬಸರೂರು ಒಂದು ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದಲ್ಲದೆ ವ್ಯಾಪಾರಿಗಳು ಧಾರ್ಮಿಕ, ಸಾಂಸ್ಕೃತಿಕ ರಂಗದಲ್ಲಿ ಹೊಂದಿದ್ದ ಉನ್ನತಸ್ಥಾನ ತಿಳಿಸುತ್ತದೆ. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ನಂತರ ಕನ್ನಡ ಕರಾವಳಿ ಸಂಪೂರ್ಣ ಅವರ ಆಡಳಿತದ ಭಾಗವಾಯಿತು. ಆದರೆ ಈ ನಡುವೆ ಕ್ರಿ.ಶ ೧೩೪೫ ರಿಂದ ೧೩೪೮ ರ ವರೆಗೆ ತುಳುನಾಡು ಪರಸ್ಪರ ಸಂಬಂಧವಿಲ್ಲದ ಮೂರು ಮನೆತನಗಳ ಅಧಿಪತ್ಯಕೊಳಗಾಗಿತ್ತು. ಈ ಅವಧಿಯಲ್ಲಿ ಆಳುಪರ ಪರವಾಗಿ ೨ನೆಯ ಕುಲಶೇಖರನೂ ಅವನ ನಂತರ ೨ನೆಯ ಬಂಕಿದೇವನೂ, ಹೊಯ್ಸಳರ ಪರವಾಗಿ ಚಿಕ್ಕಾಯಿತಾಯಿಯೂ, ವಿಜಯನಗರದ ಸಾಮ್ರಾಟರ ಪರವಾಗಿ ರಾಜ್ಯಪಾಲ ಮಹಾಪ್ರಧಾನ ತಿಮ್ಮನಾಯಕ ದಂಡನಾಯಕನೂ, ರಾಜ್ಯಪಾಲನೂಆಗಿ ಹಾಗೂ ನಾಗರಸ, ಮಲ್ಲಪ್ಪ ಮತ್ತು ಗೋವಿಂದದೇವರು ಅಧಿಕಾರಿಗಳಾಗಿ ಆಡಳಿತ ಚಲಾಯಿಸುತ್ತಿದ್ದರು. ಈ ಕಾಲಾವಧಿ ೧೩೪೬. ಈ ಸಮಯದಿಂದ ವಿಜಯನಗರದವರ ಆಡಳಿತ ಪ್ರಾರಂಭವಾಯಿತು[೬].

ವಿಜಯನಗರದ ಅರಸರು ಕಡಲೋತ್ತರ ವ್ಯಾಪಾರವನ್ನು ಆರಂಭದಿಂದಲೇ ದೊಡ್ಡ ಪ್ರಮಾಣದಲ್ಲಿ ಆರಂಭಿಸಿದರು. ಒಂದನೇಯಬುಕ್ಕನ (೧೩೫೬–೧೩೭೭) ಆಸ್ಥಾನದಲ್ಲಿ ಸಿಲೋನ್ ಮತ್ತಿತರ ದೇಶಗಳ ರಾಜರುಗಳು ಹಾಗೂ ಮಲಬಾರಿನ ಮುಖಂಡರುಗಳು ರಾಯಭಾರಿಗಳನ್ನು ಇಟ್ಟಿದ್ದರಲ್ಲದೇ ಹೇರಳವಾದ ಬಹುಮಾನಗಳನ್ನು, ಕೊಡುಗೆಗಳನ್ನು ಕೊಟ್ಟಿದ್ದರೆಂದು ತಿಳಿಯುತ್ತದೆ. ಚೀನಾದ ಮಿಂಗ್‌ವಂಶದ ರಾಜನ ಆಸ್ಥಾನಕ್ಕೆ ಬುಕ್ಕನು ಕ್ರಿ.ಶ ೧೩೭೪ ರಲ್ಲಿ ರಾಯಭಾರಿಯನ್ನು ಕಳಿಸಿದ್ದನೆಂದು ದಾಖಲೆ ಇದೆ. ಆತನ ನಂತರ ಅಧಿಕಾರಕ್ಕೆ ಬಂದ ೨ನೇ ಹರಿಹರನು ೧೪೦೪ರ ವರೆಗೆ ರಾಜ್ಯವಾಳಿದನು. ಈ ಕಾಲದಲ್ಲೂ ಕಡಲೋತ್ತರ ದೇಶಗಳೊಂದಿಗಿನ ಸಂಬಂಧ ಹೀಗೆ ಸಾಗಿತ್ತು.

೨.೮. ಬಾರ್ಕೂರು, ಮಲ್ಪೆ, ಉದ್ಯಾವರ ಬಂದರು

ಬಾರ್ಕೂರು ಬ್ರಹ್ಮಾವರದಿಂದ ೪ ಕಿ.ಮೀ ದಕ್ಷಿಣದಲ್ಲಿರುವ ಊರು. ಬಸರೂರಿನಿಂದ ಸುಮಾರು ೧೬ ಕಿ.ಮೀ ದಕ್ಷಿಣದಲ್ಲಿದೆ. ಸ್ವರ್ಣಾನದಿಯು ಬಾರ್ಕೂರಿನಿಂದ ಹರಿದುಹೋಗಿ ಹಂಗಾರಕಟ್ಟೆಯಬಳಿಯಲ್ಲಿ ಕಡಲು ಸೇರುತ್ತದೆ. ಇಲ್ಲಿಯೇ ಸೀತಾನದಿಯೂ ಕಡಲನ್ನು ಸೇರುತ್ತದೆ. ಇದು ಸ್ವರ್ಣಾನದಿಯ ಮುಖಜ ಪ್ರದೇಶದಿಂದ ಸುಮಾರು ೪ ರಿಂದ ೫ ಕಿ.ಮಿ ದೂರದಲ್ಲಿದೆ. ಈ ಎರಡು ನದಿಗಳು ಕಡಲನ್ನುಸೇರುವ ಸ್ಥಳವು ಉತ್ತಮ ಬಂದರಾಗಿದೆ.

ಆಳುಪರಸರ ರಾಜಧಾನಿ ಪಟ್ಟಣ ಹಾಗೂ ಬಂದರು ಪಟ್ಟಣವಾಗಿ ಬಾರ್ಕೂರು ಪ್ರಖ್ಯಾತವಾಗಿದೆ. ಕಡಲೋತ್ತರ ವ್ಯಾಪಾರಿ ಮಹತ್ವ ಅರಿತ ಆಳುಪರು ಎಂಟನೇ ಶತಮಾನದಿಂದೀಚೆಗೆ ತಮ್ಮ ರಾಜಧಾನಿಯಾಗಿ ಉದ್ಯಾವರವನ್ನು ಹಾಗೂ ಹನ್ನೊಂದನೇ ಶತಮಾನದಿಂದ ಸುಸಜ್ಜಿತವೂ, ವಿಸ್ತಾರವೂ ಆದ ಬಾರ್ಕೂರನ್ನು ತಮ್ಮ ರಾಜಧಾನಿಗಳಲ್ಲಿ ಒಂದಾಗಿ

ಮಾಡಿಕೊಂಡು ಆಳತೊಡಗಿದರು. ನಾಲ್ಕು ಲಕ್ಷ ಮನೆಗಳನ್ನು ಹೊಂದಿದ್ದ ಈ ನಗರವು 'ಜಯಂತಿಕಾ' ಎಂದು ಕರೆಯಲಾಗುತ್ತಿತ್ತು. ಉದ್ಯಾವರ ಹಾಗೂ ಕಲ್ಯಾಣಪುರ ನದಿಗಳೆರಡರ ನಡುವೆ ಇರುವ ಬಾರ್ಕೂರು ಸಹಜವಾದ ನೈಸರ್ಗಿಕ ರಕ್ಷಣೆ ಪಡೆದಿತ್ತು. ಇದರಿಂದ ಇದೊಂದು ಅಂತರಾಷ್ಟ್ರೀಯ ವಾಣಿಜ್ಯದ ಕೇಂದ್ರವಾಗಿ ಬೆಳೆದಿತ್ತು. ಇಲ್ಲಿ ದೊರೆತಿರುವ ಹೂಜಿಗಳು ಹಾಗೂ ಅನೇಕ ಅವಶೇಷಗಳು ಈ ಪ್ರದೇಶವು ಗ್ರೀಕ್ ಹಾಗೂ ರೋಮನ್ನರೊಂದಿಗೆ ಸಂಪರ್ಕ ಹೊಂದಿತ್ತೆಂದು ತಿಳಿಸುತ್ತದೆ.

ವ್ಯಾಪಾರಿ ವರ್ಗದವರು ಈ ರೇವು ಪಟ್ಟಣವನ್ನು ತಮಗೆ ಬೇಕಾಗಿದಂತೆ ವ್ಯವಸ್ಥಿತವಾಗಿ ಆಳಲು ಸಿದ್ಧಪಡಿಸಿ ಕೊಂಡಿದ್ದರು. ನಗರವನ್ನು ಹತ್ತು ಕೇರಿಯಾಗಿ ವಿಂಗಡಿಸಿ, ಒಂದೊಂದು ಕೇರಿಯನ್ನು ಒಂದೊಂದು ವೃತ್ತಿಗೆ ಮೀಸಲಿರಿಸಿದ್ದರು. ಇಲ್ಲಿ ದೊರೆಯುವ ಶಾಸನಗಳು ವಿವಿಧ ವೃತ್ತಿ ಸಂಘಗಳು ಇಲ್ಲಿ ಹೊಂದಿದ್ದ ಪ್ರಾಮುಖ್ಯತೆಯನ್ನು ತಿಳಿಸುತ್ತವೆ. ಅಂತರಾಷ್ಟ್ರೀಯ ವ್ಯಾಪಾರ ಭರದಿಂದ ನಡೆಯುತ್ತಿದ್ದಾಗ ಇಲ್ಲಿ ವಿವಿಧಬಗೆಯ ವ್ಯಾಪಾರಿ ಸಂಘಗಳು ಸಕ್ರೀಯವಾಗಿದ್ದವು ಕೇವಲ ದೇಶಿಯವಲ್ಲದೇ ವಿದೇಶಿ ವ್ಯಾಪಾರಿಗಳು ಇಲ್ಲಿ ನೆಲೆಸಿದ್ದರು ಎಂದು ತಿಳಿಯುತ್ತದೆ.

ನದಿಗಳು, ಪರ್ವತಗಳು

ಬಾರ್ಕೂರು ಪಟ್ಟಣವನ್ನು ಸೀತಾನದಿಯು ಬಳಸಿ ಹರಿಯುತ್ತದೆ. ಘಟ್ಟದಲ್ಲಿ ಹುಟ್ಟಿ–ಅರಬ್ಬಿ ಸಮುದ್ರ ಸೇರುವ ಈ ನದಿಯು, ಬಾರ್ಕೂರಿನ ವಾಣಿಜ್ಯ ವ್ಯವಹಾರದಲ್ಲಿ ಪ್ರಮುಖ ಪಾತ್ರವಹಿಸಿತ್ತು. ಇದರಲ್ಲಿ ಬಂದರಿನಿಂದ ಒಳಗೆ ಸುಮಾರು ೧೦ ರಿಂದ ೧೨ ಕಿ.ಮೀ ನೌಕಾಯಾನ ನಡೆಸಬಹುದಿತ್ತು. ಸೀತಾನದಿ ಬೆಂಗ್ರೆಬಳಿಯಲ್ಲಿ ಕಡಲನ್ನು ಸೇರುತ್ತದೆ.

ಇನ್ನೊಂದು ದಿಕ್ಕಿನಲ್ಲಿ, ಘಟ್ಟದಲ್ಲೇ ಹುಟ್ಟಿ ಬರುವ ಸ್ವರ್ಣಾನದಿಯು ಕೂಡಾ ಬಾರ್ಕೂರಿನ ಆರ್ಥಿಕ ಚಟುವಟಿಕೆಯಲ್ಲಿ ಪ್ರಮುಖ ಪಾತ್ರವಹಿಸಿತ್ತು. ಈ ನದಿಯೂ ಕೂಡಾ ಬೆಂಗ್ರೆ ಬಳಿಯಲ್ಲಿ ಕಡಲನ್ನು ಸೇರುತ್ತದೆ. ಸ್ವಣಾನದಿಯಲ್ಲಿ ಸುಮಾರು ೧೯ ರಿಂದ ೨೦ಕಿ.ಮಿ. ವರೆಗೆ ನೌಕಾಯಾನ ಕೈಗೊಳ್ಳಬಹುದಿತ್ತು.

ಈ ಎರಡೂ ನದಿಗಳು ಕಡಲನ್ನು ಸೇರುವ ಸ್ಥಳದಲ್ಲಿ ವಿಸ್ತಾರವಾದ ಅಳಿವೆಯನ್ನು ನಿರ್ಮಿಸಿವೆ. ಕಡಲು ತೀರ ಮತ್ತು ಭೂಭಾಗಗಳ ನಡುವೆ ಸೀಳನ್ನು ಉಂಟುಮಾಡಿವೆ. ಇದರಿಂದ ಇದೊಂದು ಸುರಕ್ಷಿತ ಬಂದರಾಗಿ ಮಾರ್ಪಟ್ಟಿದೆ. ಹಡಗುಗಳು ಸುರಕ್ಷಿತವಾಗಿ ಬಂದರನ್ನು ಪ್ರವೇಶಿಸಬಹುದಾಗಿದೆ ಹಾಗೂ ನಿರ್ಗಮಿಸಬಹುದಾಗಿದೆ. ಬಂದರಿನಲ್ಲಿ ಅಲೆಗಳ ಭಯವಿಲ್ಲದೇ ಸರಕು ತುಂಬಿದ ನೌಕೆಗಳನ್ನು ಲಂಗರು ಮಾಡಬಹುದಿತ್ತು.

ಕಡಲು ದಂಡೆಯಿಂದ ೭-೮ ಕಿ.ಮಿ ಪೂರ್ವದಲ್ಲಿ ಬಾರ್ಕೂರು ಇದೆ. ತೀರದಲ್ಲಿ ಸೀತಾನದಿ ಹಾಗೂ ಸ್ವರ್ಣಾ ನದಿಗಳೆರಡೂ ಕಡಲು ಸೇರುವುದರಿಂದ ಇದೊಂದು ಸುರಕ್ಷಿತ ಬಂದರಾಗಿ ಮಾರ್ಪಟ್ಟಿದೆ. ಸೀತಾ ನದಿ ಘಟ್ಟ ಪ್ರದೇಶದಲ್ಲಿ ಹುಟ್ಟಿ ತೆಂಕಹೊಳೆ ಎಂಬ ಹೆಸರಿನಿಂದ ಉತ್ತರದತ್ತ ಹರಿದು ಮುಂದೆ, ದಕ್ಷಿಣದತ್ತ ತನ್ನ ದಿಕ್ಕು ಬದಲಾಯಿಸಿ ಪೆರುಮೊಗರೆ ಬಳಿಯಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತದೆ. ಹಂಗಾರಕಟ್ಟೆಯ ಬಳಿ ವಿಶಾಲವಾಗಿ ಕಡಲನ್ನು ಸೇರುತ್ತದೆ. ಇಲ್ಲಿ ಭೂಮಿ ಕಿರಿದಾದ ಅಳಿವೆ ನಿರ್ಮಿಸಿದೆ. ಕಡಲ ಬಳಿಯಲ್ಲಿ ಭೂಮಿಯ ನಡುವೆ ನೀರು ಒಳಬಂದಿರುವುದರಿಂದ ಕಡಲು ಹಾಗೂ ನದಿಯ ಮಧ್ಯದಲ್ಲಿ ನೀರು ನಿಂತು ವಿಶಾಲವಾದ ಅಳಿವೆ ನಿರ್ಮಾಣವಾಗಿದೆ. ಇನ್ನೊಂದೆಡೆಯಲ್ಲಿ ಸ್ವರ್ಣಾನದಿಯು ಕಡಲನ್ನು ಸೇರುತ್ತದೆ. ನದಿಗಳು ಹರಿದು ಬಂದು ಕಡಲನ್ನು ಸೇರುವುದರಿಂದ ವಿಶಾಲವಾದ ಅಳಿವೆ ಉಂಟಾಗಿರುವಂತೆ, ಎರಡು ನದಿಗಳ ಮುಖಜ ಪ್ರದೇಶದಿಂದ ಒಳಭಾಗದಲ್ಲಿ ಸುರಕ್ಷಿತವಾಗಿ ಹಡಗುಗಳನ್ನು ಲಂಗರು ಮಾಡಬಹುದು. ಎರಡುನದಿಗಳು ಕಡಲನ್ನು ಸೇರುವ ಮುಂಚೆ ವಿಶಾಲವಾದ ಹಾಗೂ ಉದ್ದವಾದ ಭೂಮಿಯಿಂದ ಸುತ್ತುವರಿದುಕೊಂಡು ಸುರಕ್ಷಿತವೂ, ಆಳವೂ ಆದ ನೀರಿನ ನೆಲೆ ನಿರ್ಮಿಸಿರುವುದರಿಂದ ಸರಕು ತುಂಬಿದ್ದ ಹಡಗುಗಳಿಗೆ ಲಂಗರು ಹಾಕಲು ಸಹಾಯಕವಾಗಿದೆ.

ಈ ಎರಡು ನದಿಗಳು ಈ ಕಡಲನ್ನು ಸೇರುವ ಸ್ಥಳದಲ್ಲಿ ವೇಗವನ್ನು ಕಡಿಮೆಗೊಳಸಿ, ಮಂದವಾಗಿರುವುದರಿಂದ ಹೂಳಿನ ಸಮಸ್ಯೆ ದೊಡ್ಡ ಪ್ರಮಾಣದಲ್ಲಿ ಉಂಟಾಗಿಲ್ಲ. ತೀರಪ್ರದೇಶವು ವಿಸ್ತಾರವಾಗಿದೆ. ಇದರಿಂದ ಸರಕುಗಳನ್ನು ಇಳಿಸಲು ಮತ್ತು ಸಂಗ್ರಹಿಸಿಡಲು ಹಾಗೆ ನೌಕೆಗಳಲ್ಲಿ ತುಂಬಲು ಅನುಕೂಲವಾಗಿದೆ. ಎರಡೂನದಿಗಳು ಪಶ್ಚಿಮ ಘಟ್ಟದಲ್ಲಿ ಜನಿಸುವುದರಿಂದ ಮತ್ತು ಈ ನದಿಗಳ ಪಾತ್ರಗಳು (ಇಕ್ಕೆಲಗಳು) ಕೃಷಿ ಪ್ರಧಾನ ಪ್ರದೇಶಗಳಾಗಿರುವುದು ಈ ಬಂದರಿಗೆ ಅನುಕೂಲವಾಗಿತ್ತು. ಇಲ್ಲಿ ಬೆಳೆಯುವ ಭತ್ತ ಹಾಗೂ ಇನ್ನಿತರ ಕೃಷಿ ವಸ್ತುಗಳು, ಅರಣ್ಯಜನ್ಯ ಮರಮಟ್ಟುಗಳು, ಮಸಾಲೆ ಸಾಮಗ್ರಿಗಳು ಈ ಬಂದರಿನ ಮೂಲಕ ನಿರ್ಯಾತ ಮಾಡಲು ಸಹಾಯಕವಾಗಿತ್ತು.

ಬಾರ್ಕೂರು ಬಂದರಿನ ಬೆಳವಣಿಗೆ

ಬಾರ್ಕೂರು ಪ್ರಾಚೀನಕಾಲದಿಂದಲೂ ಜನವಸತಿ ಹೊಂದಿದ ಪ್ರದೇಶ. ಮಹಾಶಿಲಾಯುಗ ಕಾಲದ ನೆಲೆಗಳು[೭] ಇಲ್ಲಿ ಕಂಡುಬಂದಿವೆ. ಈಜಿಪ್ಟ್‌ನ ಟಾಲೆಮಿಯು ಇದನ್ನು ಒಲೊಖೊಯಿರಾ[೮] ಎಂದು ಉಲ್ಲೇಖಿಸಿದ್ದಾನೆ ಇದನ್ನೇ ಆಳ್ವಖೇಡ್[೯] ಎಂದು ಅನೇಕ ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಆಳ್ವಖೇಡವೇ ಆಳುಪರು ಆಳುತ್ತಿದ್ದ ಪ್ರದೇಶ ಎಂದು ಭಾವಿಸಲಾಗಿದೆ.

ಜಯಂತಿಕಾಪಟ್ಟಣ ಎಂದು ಇದು ಖ್ಯಾತಿ ಹೊಂದಿತ್ತು. ನಾಲ್ಕುಲಕ್ಷವಸತಿಯಿದ್ದ ಪ್ರದೇಶವನ್ನು ಕ್ರಿ.ಶ೧ ರಲ್ಲಿ 'ಜಯಂತಿಕಾ"ಎನ್ನುತ್ತಿದ್ದರು.

ಬಾರ್ಕೂರಿನಲ್ಲಿ ದೊರೆತಿರುವ ರೋಮನ್ ಪ್ರೋಕ್ಷಣಾ ಪಾತ್ರೆಗಳು ಹಾಗೂ ಕ್ರಿ.ಶ ೨ನೇ ಶತಮಾನಕ್ಕೆ ಸೇರಿದ್ದ ಮಣ್ಣಿನ ಪಾತ್ರೆಯ ಚೂರುಗಳು ಈ ಪ್ರದೇಶದ ಪ್ರಾಚೀನತೆಯನ್ನು ಹಾಗೂ ಬಾರ್ಕೂರು ವಿದೇಶದೊಂದಿಗೆ ಹೊಂದಿದ್ದ ಸಂಬಂಧವನ್ನು[೧೦೦] ತೋರಿಸುತ್ತದೆ. ಇವುಗಳೆಲ್ಲದರಿಂದ ಬಾರ್ಕೂರು ಕ್ರಿ.ಶ ಒಂದನೆಯ ಶತಮಾನಕ್ಕಾಗಲೇ ಪ್ರಮುಖ ವಾಣಿಜ್ಯ-ರೇವು ಪಟ್ಟಣವಾಗಿತ್ತೆಂದು ತಿಳಿಯುತ್ತದೆ. ಬಾರ್ಕೂರಿನಲ್ಲಿರುವ ಅನುಕೂಲತೆಗಳಿಂದ ಇಲ್ಲಿ ದೇಶೀಯ ಹಾಗೂ ವಿದೇಶೀಯ ವ್ಯಾಪಾರಿಗಳು ಬೀಡು ಬಿಟ್ಟಿದ್ದರು. ಅವರು ಇಲ್ಲಿಂದಲೇ ರಾಜ್ಯದ ಒಳನಾಡಿನ ಹಾಗೂ ಕಡಲೋತ್ತರ ವ್ಯಾಪಾರವನ್ನು ನಡೆಸುತ್ತಿದ್ದರು. ಕ್ರಿ.ಶ ೧ ಹಾಗೂ ೨ನೆಯ ಶತಮಾನ ಕಾಲಾವಧಿಯಲ್ಲಿ ಶಾತವಾಹನರು ಹಾಗೂ ಚುಟುಗಳು ಈ ಪ್ರದೇಶದಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿದ್ದರು. ಶಾತವಾಹನರು ವ್ಯಾಪಾರಕ್ಕೆ ಹೆಚ್ಚಿನ ಮಹತ್ವ ನೀಡಿದ್ದರಿಂದ ಬಾರ್ಕೂರು ರೇವು ಕಡಲೋತ್ತರ ವ್ಯಾಪಾರಕ್ಕೆ ಕ್ರಿ.ಶ ೧ನೇ ಶತಮಾನದಲ್ಲಿ ದೊಡ್ಡ ಪ್ರಮಾಣದಲ್ಲಿ ತೊಡಗಿಕೊಂಡಿತ್ತು. ಇದೇ ಕಾಲಾವಧಿಯಲ್ಲಿ ಆಳುಪರು ರಾಜಕೀಯ ರಂಗದಲ್ಲಿ ಪ್ರಬಲರಾಗ ತೊಡಗಿದ್ದರು.[೧೦೧] ಇಲ್ಲಿಂದ ಮುಂದೆ ಸುಮಾರು ೧೪ನೇ ಶತಮಾನದವರೆಗೂ ಆಳುಪರು ಈ ಪ್ರದೇಶದಲ್ಲಿ ಪ್ರಬಲರಾಗಿ ಆಳಿದರು ಕೆಲವು ಕಾಲ ಕರ್ನಾಟಕ ಆಳಿದ ಪ್ರಬಲ ರಾಜಮನೆತನಗಳ ಸಾಮಂತರಾಗಿದ್ದರೂ ಇವರು ಕರಾವಳಿ ಪ್ರದೇಶಕ್ಕೆ ಅನಭಿಷಕ್ತರಂತಿದ್ದರು. ಆರಂಭದಲ್ಲಿ ಸೋಮವಂಶದವರೆಂದು ಕರೆದುಕೊಂಡ ಇವರು, ೮ನೆಯ ಶತಮಾನದಿಂದ ಪಾಂಡ್ಯರೆಂದು ಕರೆದುಕೊಳ್ಳ ತೊಡಗಿದರು.

ಬಾರ್ಕೂರು ಆಳುಪರ ರಾಜಧಾನಿಯಾಗಿತ್ತು. ಆ ಸಂದರ್ಭದಲ್ಲಿ ಮಂಗಳೂರಿನಿಂದ ಕುಮಟಾವರೆಗಿನ ಬಂದರುಗಳು ಇವರ ಆಡಳಿತ ವ್ಯಾಪ್ತಿಗೆ ಒಳಪಟ್ಟಿದ್ದವು[೧೦೨]. ಆಳುಪರು ಏಳನೇ ಶತಮಾನದ ಆರಂಭದ ದಶಕದವರೆಗೆ ಕದಂಬರ ಸಾಮಂತರಾಗಿದ್ದರು[೧೦೩]. ಮುಂದೆ ಸ್ವತಂತ್ರರಾಗಿ ಆಳತೊಡಗಿದರು. ಚಾಲುಕ್ಯಚಕ್ರವರ್ತಿ ಒಂದನೆಯ ವಿಕ್ರಮಾದಿತ್ಯನು ೧ನೆಯ ಆಳುಪ ಅರಸನ ಆತ್ಮೀಯ ಮಿತ್ರನಾಗಿದ್ದನು. ಇದರಿಂದ ಚಾಲುಕ್ಯರ ನಂತರ ರಾಷ್ಟ್ರಕುಟರು, ಈ ಬಂದರು ಪ್ರದೇಶಗಳನ್ನು ಪಡೆಯಲು ಅನೇಕ ಯುದ್ದಗಳನ್ನು ಮಾಡಿದರು. ಹೊಯ್ಸಳರು ಇಂಥ ಪ್ರಯತ್ನದಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸಿಯಾದರು. ಹೊಯ್ಸಳರಿಗೆ ಕಡಲೋತ್ತರವ್ಯಾಪಾರದಲ್ಲಿ ಆಸಕ್ತಿ ಇತ್ತು. ರಾಷ್ಟ್ರಕುಟರಿಗೂ ಪರ್ಶಿಯಾ ಮುಂತಾದ ದೇಶಗಳೊಂದಿಗೆ ಸಂಬಂಧಗಳಿದ್ದವು. ಕರಾವಳಿಯ ಉತ್ತರದ ಬಂದರುಗಳಲ್ಲಿ ಇವರ ಪ್ರಭುತ್ವಇದ್ದರೂ ಕುಂದಾಪುರದಿಂದ ದಕ್ಷಿಣದ ಬಂದರುಗಳಲ್ಲಿ ಇವರು ಅಧಿಕಾರ ನಡೆಸಲು ಯಶಸ್ವಿಯಾಗಲಿಲ್ಲ.

ಆಳುಪರು ಬಾರ್ಕೂರನ್ನು ಬಹುಕಾಲ ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳಿದ್ದರು. ಈ ರೇವು ಪಟ್ಟಣವು ಒಳನಾಡಿನ ಪ್ರಮುಖ ವಾಣಿಜ್ಯ ಕೇಂದ್ರಗಳಿಗೆ ಸಂಪರ್ಕ ಪಡೆದಿದ್ದಂತೆ, ಐರೋಪ್ಯ ಹಾಗೂ ಏಷ್ಯಾದ ದೇಶಗಳಿಗೆ ಸುಲಭದ ಸಂಪರ್ಕ ಮಾರ್ಗ ಹೊಂದಿತ್ತು. ಇದರಿಂದ ಕಡಲೋತ್ತರ ವ್ಯಾಪಾರವು ಭರದಿಂದ ನಡೆಯುತ್ತಿತ್ತು.

೮ನೆಯ ಶತಮಾನದಲ್ಲಿ ಬಾರ್ಕೂರು ಹಾಗೂ ಮಲ್ಪೆಗಳು ಕಡಲೋತ್ತರ ವ್ಯಾಪಾರದಲ್ಲಿ ಉನ್ನತಸ್ಥಾನ ಪಡೆದಿದ್ದವು. ಈ ಬಂದರಿಗೆ ಇದ್ದ ತಮಿಳುನಾಡಿನವರೆಗಿನ ಹಿನ್ನಾಡು ಒಂದು ಅನುಕೂಲವಾಗಿದ್ದರೆ, ಇನ್ನೊಂದು ಬಾರ್ಕೂರು ರೇವಿನಲ್ಲಿದ್ದ ವ್ಯಾಪಾರಿ ಸಂಘಗಳಾಗಿದ್ದವು. ಈ ವ್ಯಾಪಾರಿಸಂಘಗಳ ಸದಸ್ಯರು ಪ್ರಭಾವಿಗಳಾಗಿದ್ದು, ಸಮಾಜದಲ್ಲಿ ಗೌರವ ಹೊಂದಿದ್ದರು.

ಚೋಳರು ಬಾರ್ಕೂರಿನ ಖ್ಯಾತಿ ತಿಳಿದು, ಪಶ್ಚಿಮ ಕರಾವಳಿಯ ಈ ರೇವು ಪಟ್ಟಣವನ್ನು ಗೆಲ್ಲುವ ಉದ್ದೇಶದಿಂದ ದಾಳಿನಡೆಸಿದ್ದರು[೧೦೪]. ಬಾರ್ಕೂರಿನಲ್ಲಿರುವ ಚೌಡರಕೇರಿ ಎನ್ನುವುದು ಚೋಳರ ಸೈನ್ಯ ಬೀಡು ಬಿಟ್ಟ ಸ್ಥಳವಾಗಿತ್ತು. ಮುಂದೆ ಬಲ್ಲಮಹಾದೇವಿ (ಕ್ರಿ.ಶ ೧೨೭೫) ಪಟ್ಟವೇರಿದಳು. ಇವಳ ಆಳ್ವಿಕೆಯಲ್ಲಿ ಬಂಕಿದೇವನು ದಂಗೆಎದ್ದು, ಮಂಗಳೂರು ಪ್ರದೇಶದಲ್ಲಿ ರಾಜಧಾನಿ ಸ್ಥಾಪಿಸಿಕೊಂಡು ಆಳ ತೊಡಗಿದನು. ಕ್ರಿ.ಶ ೧೨೯೨ರಲ್ಲಿ ಬಲ್ಲಮಹಾದೇವಿಯ ಸಾವಿನ ನಂತರ ಆಕೆಯ ಮಗ ಪಟ್ಟಕ್ಕೆ ಬಂದರೂ, ಅದು ಕೇವಲ ೨ ವರ್ಷದಲ್ಲಿ ಕೊನೆಗೊಂಡಿತು. ಕ್ರಿ.ಶ ೧೩೦೦ ರಲ್ಲಿ ಆಳಿಯನೆ ಸಮಗ್ರ ತುಳುನಾಡಿನ ಅಧಿಪತಿಯಾದನು. ಕ್ರಿ.ಶ ೧೩೧೫ ರ ಹೊಯ್ಸಳರ ದಾಳಿಯ ಸಂದರ್ಭದಲ್ಲಿ ಆಳುಪ ರಾಜಕುಮಾರಿ ಚಿಕ್ಕಾಯಿತಾಯಿಯನ್ನು ೩ನೆಯ ಬಲ್ಲಾಳನು ಮದುವೆಯಾದನು. ಚಿಕ್ಕಾಯಿತಾಯಿ ಬಾರಕೂರಿನಿಂದ ಹೊಯ್ಸಳ-ಆಳುಪರ ಪ್ರತಿನಿಧಿಯಾಗಿ ಆಳಿದಳು[೧೦೫]. ಮುಂದೆ ವಿಜಯನಗರದ ಕಾಲದಲ್ಲಿ ಬಾರಕೂರಿನಲ್ಲಿ ರಾಜ್ಯಪಾಲರನ್ನು ಇಟ್ಟು ರಾಜ್ಯ ಭಾರನಡೆಸಿದರು. ಈ ಎಲ್ಲ ಕಾಲದಲ್ಲಿ ಬಾರ್ಕೂರು ಬಂದರು ಕಡಲೋತ್ತರ ವ್ಯಾಪಾರವನ್ನು ಭರದಿಂದ ನಡೆಸಿತ್ತು.. ಇಲ್ಲಿಯ ನೈಸರ್ಗಿಕ ರಚನೆಯು ಕಡಲೋತ್ತರ ವ್ಯಾಪಾರಕ್ಕೆ ಅನುಕೂಲಕರವಾಗಿತ್ತು. ಇಲ್ಲಿಯ ಸೀತಾ ಹಾಗೂ ಸ್ವರ್ಣ ನದಿಗಳು ಒಳನಾಡಿನೊಂದಿಗೆ ಸಂಪರ್ಕಕ್ಕೆ ಉತ್ತಮ ಮಾರ್ಗಗಳಾಗಿದ್ದವು. ಹೊಂಬುಚ್ಚ, ಶಿವಮೊಗ್ಗಾ, ಬನವಾಸಿ, ಐಹೊಳೆ, ಕೋಲಾರ, ಬೆಂಗಳೂರುಗಳಿಗೆ ಉತ್ತಮ ರಸ್ತೆಮಾರ್ಗಗಳಿದ್ದವು. ಇವುಗಳೆಲ್ಲದ್ದರಿಂದ ಬಾರ್ಕೂರು ವಿಶೇಷ ಮನ್ನಣೆ ಪಡೆದಿತ್ತು. ನಾನಾದೇಸಿಗಳು, ಉಭಯನಾನಾದೇಸಿಗಳು, ಹಂಜಮಾನರು, ನಖರರು, ಸೆಟ್ಟಿಗುತ್ತರು ಇನ್ನೂ ಮುಂತಾದ ವ್ಯಾಪಾರಿ ಸಂಘಗಳು ಈ ರೇವಿನ ಮೂಲಕ ವ್ಯಾಪಾರ ನಡೆಸಿದ್ದರು.

ಬಾರ್ಕೂರಿನಲ್ಲಿ ಒಂದು ಟಂಕ ಶಾಲೆಯನ್ನು ಸ್ಥಾಪಿಸಿಕೊಂಡಿದ್ದರು. ಇದು ಅವರ ವಾಣಿಜ್ಯ-ವ್ಯವಹಾರಕ್ಕೆ ಸಹಾಯಕವಾಗಿತ್ತು. ಮಂಗಳೂರು, ಮುಲ್ಕಿ, ಎಳಂಜೆ, ಬಸರೂರು, ಕುಂದಾಪುರ, ಶಿರೂರು, ಭಟ್ಕಳ ಬಂದರುಗಳು ಬಾರ್ಕೂರು ಬಂದರಿಗೆ ಸಹಾಯಕವಾಗಿದ್ದವು. ವಿಜಯನಗರದ ಅರಸರು ಬಾರ್ಕೂರು ಬಂದರಿನ ಮೂಲಕವೂ ತಮ್ಮ ಸೈನ್ಯಕ್ಕೆ ಬೇಕಿದ್ದ ಯುದ್ಧಾಶ್ವಗಳನ್ನು ಮತ್ತು ಯುದ್ಧಸಲಕರಣೆಗಳನ್ನು ತರಿಸಿ ಕೊಳ್ಳುತ್ತಿದ್ದರು. ವಿವಿಧ ವೃತ್ತಿಗಳವರಿಂದ ಕೂಡಿದ್ದ ಬಾರ್ಕೂರಿನಲ್ಲಿ ಒಟ್ಟು ಹತ್ತು ಕೇರಿಗಳಿದ್ದು, ಇವುಗಳ ಪ್ರತಿನಿಧಿಗಳಾಗಿ ಹಲರು, ಸೆಟ್ಟಿಕಾರರು ಪೌರಾಡಳಿತದಲ್ಲಿ ಭಾಗಿಗಳಾಗುತ್ತಿದ್ದರು. ಹಂಜಮಾನರೂ ಪ್ರಾಮುಖ್ಯತೆಯನ್ನು ಹೊಂದಿದ್ದರು. ಹತ್ತು ಹನ್ನೊಂದನೇ ಶತಮಾನದಲ್ಲಿ ಜೈನರು ಇಲ್ಲಿ ಪ್ರಬಲರಾಗಿದ್ದರು.

ಹಿನ್ನಾಡಿಗೆ ಮಾರ್ಗ

ಬಾರ್ಕೂರು ಕಾರ್ಕಳದ ಮೂಲಕ ಹಿರಿಯ್ಯಡ-ಬಂಡಸಾಲೆಯವರೆಗೆ ನದಿಮಾರ್ಗವಾಗಿ, ಮುಂದೆ ಹೇರು-ಚಕ್ಕಡಿಗಾಡಿ ಇತ್ಯಾದಿಗಳಮೂಲಕ ಘಟ್ಟಕ್ಕೆ ಸಂಪರ್ಕ ಪಡೆಯಬಹುದಿತ್ತು. ಹಾಗೇ ಕಾರ್ಕಳದಿಂದ ವರಾಂಗದ ಮೂಲಕವು ಹಿನ್ನಾಡಿಗೆ ಸಂಪರ್ಕಹೊಂದುತ್ತಿತ್ತು. ಇನ್ನೊಂದು ಮಾರ್ಗವಾಗಿ ಕಾರ್ಕಳ, ಚಿಕ್ಕಮಗಳೂರು, ಶೃಂಗೇರಿ, ಆಗುಂಬೆ-ಭಜಗೋಳಿ ಮಾರ್ಗ ಇತ್ತು. ಹೀಗೆ ಹಿನ್ನಾಡಿನ ಬಹುದೂರದ ಮೈಸೂರು-ಸೇಲಂವರೆಗೂ ಸಂಪರ್ಕ ಸಾಧ್ಯವಾಗಿತ್ತು.

ಬಂದರನ್ನು ಸೇರಿಸುವ ರಸ್ತೆ ಮಾರ್ಗ

ಬಾರ್ಕೂರಿನಿಂದ ಕಾರ್ಕಳ-ಹಿರಿಯಡ್ಕಗಳ ಮೂಲಕ ಬಂಡಸಾಲೆ ಮಾರ್ಗವಾಗಿ ಘಟ್ಟದ ಮೇಲಿನ ಶಿವಮೊಗ್ಗ, ಬೆಂಗಳೂರು, ಕೋಲಾರ, ಮೈಸೂರು ತಲುಪಬಹುದಿತ್ತು. ಈ ಘಟ್ಟದ ಮಾರ್ಗವನ್ನು ಹೊಯ್ಸಳರ ಶಾಸನಗಳು ಬಾರಕನೂರುಘಟ್ಟ ಎಂದು ವರ್ಣಿಸಿದೆ.

ಇನ್ನೊಂದು ಮಾರ್ಗವು ಬಾರ್ಕೂರು-ವರಾಂಗ-ಕಾರ್ಕಳ-ಸುಬ್ರಹ್ಮಣ್ಯ- ಮೈಸೂರುಗಳಿಗೆ, ಬಜಗೋಳಿ-ಕಾರ್ಕಳ-ಚಿಕ್ಕಮಗಳೂರು-ಶೃಂಗೇರಿ-ಆಗುಂಬೆ ಮತ್ತು ಕುದುರೆಮುಖಗಳಿಗೆ ಸಂಪರ್ಕಿಸುತ್ತಿತ್ತು.

ಪರ್ಶಿಯನ್ನರು ಹಿಪ್ಪಾಲಸ್ ಮಾರುತದೊಂದಿಗೆ ಬಾರ್ಕೂರು, ಮಲ್ಪೆ ಹಾಗೂ ಕಲ್ಯಾಣಪುರಗಳನ್ನು ಸುಲಭವಾಗಿ ತಲುಪುತ್ತಿದ್ದರು. ಚೀನಾ ನೌಕೆಗಳು ಪೂರ್ವ ಕರಾವಳಿಯ ಮೂಲಕ ಭೂಮಾರ್ಗ ಮತ್ತು ಶ್ರೀಲಂಕಾ, ಕನ್ಯಾಕುಮಾರಿ ಮಧ್ಯದ ಮಾರ್ಗದ ಮೂಲಕ ಬಾರ್ಕೂರನ್ನು ತಲಪುತ್ತಿದ್ದವು. ರೋಮ್ ಹಾಗೂ ಗ್ರೀಸ್‌ನ ವ್ಯಾಪಾರಿಗಳು ನೇರವಾಗಿ ಅರಬ್ಬೀ ಸಮುದ್ರದ ಮೂಲಕ ಬಂದರನ್ನು ತಲಪುತ್ತಿದ್ದರು.

೨.೯. ಮಂಗಳೂರು ಬಂದರು

ಇಂದಿನ ಕರ್ನಾಟಕದ ದಕ್ಷಿಣ ತುದಿಯ ಬಂದರಾಗಿರುವ ಮಂಗಳೂರು ಕ್ರಿಸ್ತಶಕದ ಆರಂಭದಲ್ಲಿಯೇ ಜಗತ್ತಿನ ಪ್ರಮುಖ ಬಂದರುಗಳೊಂದಿಗೆ ಸಂಪರ್ಕ ಪಡೆದಿತ್ತು. ಟೊಲೆಮಿಯ 'ಭೂಗೋಳ' ದಲ್ಲಿ ಉಲ್ಲೇಖಿತಗೊಂಡಿತ್ತು. ನೇತ್ರಾವತಿ ನದಿ ದಂಡೆಯ ಈ ಬಂದರನ್ನು ಆತ ನಿತ್ರಾಸ್ ಎಂದು ಉಲ್ಲೇಖಿಸಿದ್ದಾನೆ. ಗೋವಿಂದ ಪೈಯವರು ಕ್ರಿ.ಶ ೧ ರಿಂದ ೨ನೇ ಶತಮಾನದ ಪ್ರವಾಸಿ ಕಥನಗಳಲ್ಲಿ ಉಲ್ಲೇಖಿತ 'ಮಂಡೆಗೋರ' ಮತ್ತು 'ಮಂಗರೂತ್' ಗಳು ಮಂಗಳೂರೆಂದೇ ಹೇಳುತ್ತಾರೆ. ಶಂಗಂನ ಅಕನಾನೂರಿನಲ್ಲಿ ಮಂಗಳಾಪುರ ವರ್ಣಿತವಾಗಿದೆ. ಕಡಲ್ಗಳ್ಳರ ಹಾವಳಿಯ ಬಂದರೆಂದೂ ಕೂಡಾ ಇದನ್ನು ಕರೆಯುತ್ತಿದ್ದರು.

ತುಳು, ಕನ್ನಡ, ಕೊಂಕಣಿ ಹಾಗೂ ಮಲಯಾಳಂ ಭಾಷೆಗಳ ಜನಪದದಿಂದ ಕೂಡಿರುವ ಈ ಪಟ್ಟಣವು ಕಡಲೋತ್ತರ ವ್ಯಾಪಾರದ ಬಹುದೊಡ್ಡ ಕೀರ್ತಿ ಕೇಂದ್ರವಾಗಿತ್ತು. ವ್ಯಾಪಾರಿ ಸಂಘಗಳು ಇಲ್ಲಿ ಸಕ್ರೀಯರಾಗಿದ್ದವು. ಮಂಗಳೂರಿನಲ್ಲಿ ನಖರೇಶ್ವರ-ಗಣಪತಿ ದೇವಾಲಯವಿದೆ. ವಿವಿಧ ಹೆಸರುಗಳಿಂದ ಕರೆಸಿಕೊಂಡಿರುವ ಈ ಪಟ್ಟಣವು ಕ್ರಿ.ಶ. ಸುಮಾರು ೮ನೇ ಶತಮಾನದಷ್ಟೊತ್ತಿಗೆ ಮಂಗಳೂರೆಂದಾಗಿರಬೇಕು.

ವೈದಿಕ, ನಾಥ, ಬೌದ್ಧ, ಜೈನ ಆರಾಧನಾ ಪದ್ಧತಿಯೊಂದಿಗೆ ಜನಪದರ ವಿವಿಧ ಆರಾಧನಾ ಪದ್ಧತಿ ಇಲ್ಲಿ ರೂಢಿಯಲ್ಲಿತ್ತು. ಇಂದಿಗೂ ಆ ವೈವಿಧ್ಯವನ್ನು ಕಾಣಬಹುದಾಗಿದೆ. ಶಕ್ತಿದೇವತೆಯ ಆರಾಧನೆ, ಮುಸ್ಲೀಂ, ಕ್ರೈಸ್ತ ಮುಂತಾದ ದೈವಾರಾಧನೆಯನ್ನು ಇಲ್ಲಿ ಕಾಣಬಹುದು.

ಕ್ರಿ.ಶ ೬-೭ನೇ ಶತಮಾನದಲ್ಲಿ 'ಹಂಜಮಾನ' ಎಂಬ ವ್ಯಾಪಾರಿ ಸಂಘ ಇಲ್ಲಿದ್ದಿತ್ತು. ವ್ಯಾಪಾರಕ್ಕಾಗಿ ಬಂದ ಅರಬ್ಬಿಗಳು ಸ್ಥಳೀಯ ಸ್ತ್ರೀಯರನ್ನು ವಿವಾಹವಾಗಿ 'ಬ್ಯಾರಿ' ಗಳೆಂದು ಅವರ ಪೀಳಿಗೆ ಗುರುತಿಸಲ್ಪಟ್ಟಿತ್ತು. ಇವರು ಸ್ಥಳೀಯ-ವಿದೇಶಿ ವ್ಯಾಪಾರದಲ್ಲಿ ದೊಡ್ಡ ಹೆಸರು ಮಾಡಿದಂತೆ, ಮುಂದೆ ಕೆಲವು ಅರಸರುಗಳ ಸೈನಿಕರೂ ಆಗಿದ್ದರು. ಶ್ರೇಷ್ಠಿಗಳು, ನಗರದವರು, ನಾನಾದೇಶಿಗಳು, ಹಲರು ಮುಂತಾದ ವ್ಯಾಪಾರಿ ಸಂಘಗಳು ಇಲ್ಲಿ ಸಕ್ರೀಯವಾಗಿದ್ದು, ಪ್ರಾಕೃತಿಕ ಸೌಲಭ್ಯವನ್ನು ತಮ್ಮ ಆರ್ಥಿಕ ಲಾಭಕ್ಕಾಗಿ ಬಳಸಿಕೊಂಡರು. ಹೀಗೆ ಕ್ರಿಸ್ತಶಕದ ಆರಂಭದಿಂದ ಆರ್ಥಿಕ ಚಟುವಟಿಕೆ ಆರಂಭವಾದ ದಾಖಲೆಗಳು ಲಭ್ಯವಾದಂತೆ, ಶಿಲಾಯುಗದ ಕಾಲದಿಂದ ಈ ಪ್ರದೇಶ ಹೊರನಾಡುಗಳೊಂದಿಗೆ ಸಂಪರ್ಕಹೊಂದಿದ್ದದ್ದು ಪುರಾತತ್ವ ಆಧಾರಗಳಿಂದ ತಿಳಿಯುತ್ತದೆ.

ಮಂಗಳೂರು ಪಟ್ಟಣ

ಕರ್ನಾಟಕದ ಪ್ರಾಚೀನ ಬಂದರು ಪಟ್ಟಣಗಳಲ್ಲಿ ಮಂಗಳೂರು ಒಂದು ಪ್ರಮುಖವಾದ ರೇವು ಪಟ್ಟಣವಾಗಿದೆ. ಗುರುಪುರ-ನೇತ್ರಾವತಿ ನದಿಗಳು ಕಡಲು ಸೇರುವ ಸ್ಥಳದಲ್ಲಿ ವಿಸ್ತಾರವಾದ

ಅಳಿವೆ ನಿರ್ಮಾಣವಾಗಿದ್ದು ದೊಡ್ಡ-ದೊಡ್ಡ ಹಡಗುಗಳನ್ನು ಲಂಗರು ಮಾಡಬಹುದಾಗಿದೆ. ಇದು ಜಯಂತಿಕಾ[೧೦೬] ಪಟ್ಟಣವಾಗಿದ್ದು. ಇದನ್ನು ಟಾಲೆಮಿ, ಕಾಸ್ಮಸ್[೧೦೭] ಮುಂತಾದವರ ಕಥನಗಳಲ್ಲಿ ನೋಡಬಹುದಾಗಿದೆ. ಟಾಲೆಮಿಯ 'ನಿತ್ರಾಸ್' ಎಂದು ಕಾಸ್ಮಾಸನು 'ಮಂಗರೂತ' ಎಂದು ಕರೆದಿರುವ ಪ್ರದೇಶ ಮಂಗಳೂರು ಎಂದು ವಿದ್ವಾಂಸರು ಖಚಿತ ಪಡಿಸಿದ್ದಾರೆ. ಶಂಗಂ ಸಾಹಿತ್ಯದ ಅಕನಾನೂರು ಕೃತಿಯಲ್ಲಿ ಬಿರಿಮೊಗ್ಗುಗಳ ಮಾಧುರ್ಯದಿಂದ ತುಂಬಿದ್ದ ತಟಾಕಗಳ ಬಳಿ 'ಕೇಕಿ' ಗಳೊಂದಿಗೆ ಕೋಗಿಲೆಗಳುಕಳೆತನಗಳಿಸಿಕೊಂಡು ಕುಣಿಯುತ್ತಿದ್ದಮಂಗಳಪುರ[೧೦೮] ಎಂದು ಕಳೆದುಕೊಂಡಿದ್ದ ಈ ರೇವು ಪಟ್ಟಣವು, ಆಳುಪರ ಕಾಲದಲ್ಲಿ ಕ್ರಿ.ಶ ೭ನೇ ಶತಮಾನದಲ್ಲಿ ರಾಜಧಾನಿ ಪಟ್ಟಣವಾಗಿತ್ತು. ಟಾಲೆಮಿಯು ಉಲ್ಲೇಖಿಸುವ ಒಲಖೊರಾವು[೧೦೯] ಆಳುಪರ 'ಆಳುವಖೇಡ' ಎಂದು ಕೆಲವು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ. ಹಿಂದೆ ಈ ರೇವು ಪಟ್ಟಣವನ್ನು ಮಂಗಳೂರು, ಮಂಡೆಗೋರ, ಮಂಜರೂರ್, ಮಂಗಳಪುರ ಮುಂತಾಗಿ ಕರೆಯುತ್ತಿದ್ದ ಬಗ್ಗೆ ತಿಳಿದುಬರುತ್ತದೆ.

ಪಿ.ಗುರುರಾಜ್ ಭಟ್ಟರವರು ತಮ್ಮ ಅಧ್ಯಯನದಿಂದ ಮಂಗಳೂರು ಪ್ರದೇಶ ಋಗ್ವೇದ ಕಾಲದ ಫಣಿಗಳೊಂದಿಗೆ ಸಂಬಂಧ ಹೊಂದಿರುವ ಕುರಿತು ಅನೇಕ ಸ್ಥಳ ನಾಮಗಳನ್ನು ಹಾಗೂ ದ್ರಾವಿಡ-ಆರ್ಯಕ್ಕಿಂತ ಪೂರ್ವದ ಜನ ವಸತಿ ಹೊಂದಿದ್ದರ ಕುರುವಾಗಿ ಕೋಲರ ಹಾಗೂ ಮುಂಡರ ನೆಲೆಗಳನ್ನು ತೋರಿಸುವ ಅನೇಕ ಸ್ಥಳನಾಮಗಳನ್ನು[೧೧೦] ಉದಾಹರಿಸುತ್ತಾರೆ. ಮಂಗಳೂರು ಕೇಂದ್ರವಾಗಿರುವ ಅವಿಭಜಿತ ದಕ್ಷಿಣಕನ್ನಡ-ತುಳುನಾಡಿನ ಪ್ರಾಚೀನತೆಯನ್ನು ಸಾರುವ ಅನೇಕ ಕುರುಹುಗಳು ದೊರೆತಿದ್ದು, ಆದಿಶಿಲಾಯುಗದ ಬೆಣಚುಕಲ್ಲು ನಾರಾವಿಯಲ್ಲಿ ಮಧ್ಯಶಿಲಾಯುಗದ[೧೧೧] ಆಯುಧ, ಸೂಕ್ಷ್ಮಶಿಲಾಯುಗದ ಹತ್ತಾರುನೆಲೆಗಳು[೧೧೨] ಹಾಗೂ ನೂತನ ಶಿಲಾಯುಗದ ಶಿಲಾಯುಧಗಳು[೧೧೩] ದೊರೆತಿದ್ದು, ಈ ಪ್ರದೇಶವು ಪ್ರಚೀನ ಕಾಲದಿಂದ ಜನವಸತಿಯ ನೆಲೆಯಾಗಿತ್ತೆಂದು ತಿಳಿದುಬರುತ್ತದೆ. ಇದೆಲ್ಲದರಿಂದ ತುಳುನಾಡು ಪ್ರದೇಶದ ಮಂಗಳೂರಿನ ಆಸುಪಾಸಿನಲ್ಲಿ ಬೃಹತ್ ಶಿಲಾಯುಗದ ಸಂಸ್ಕೃತಿ ಅಂದರೆ ಕಬ್ಬಿಣದ ಬಳಕೆಯನ್ನು ತಿಳಿದಿದ್ದ ಮಾನವನವಾಸ ಕಾಲವು, ಕ್ರಿ.ಪೂ. ೮೦೦ ರಿಂದ ಕ್ರಿ.ಪೂ. ೧೦೦ ದವರೆಗೆ[೧೧೪] ಎಂದು ನಿರ್ಣಯಕ್ಕೆ ವಿದ್ವಾಂಸರು ಬಂದಿದ್ದಾರೆ. ಕ್ರಿ.ಶ ಏಳನೇ ಶತಮಾನದಲ್ಲಿ ಮಂಗಳಾಪುರ ಸಿಂಹಾಸನದಲ್ಲಿ ಕುಳಿತು ಗುಣಸಾಗರಆಳುಪೇಂದ್ರನು ಆಡಳಿತ ಮಾಡುತ್ತಿದ್ದನು.[೧೧೫] ಈ ಪ್ರಪ್ರಥಮ ಉಲ್ಲೇಖದೊಂದಿಗೆ ಮಂಗಳೂರು ರಾಜಧಾನಿ ಪಟ್ಟಣವಾಗಿ ಬೆಳದದ್ದು ತಿಳಿದು ಬರುತ್ತದೆ. ಮುಂದೆ ಇದು ವಿಜಯನಗರದ ಅರಸರ ಆಡಳಿತಕ್ಕೆ ಒಳಪಡುವವರೆಗೂ ಆಳುಪರ ರಾಜಧಾನಿಯಾಗಿ-ರೇವು ಪಟ್ಟಣವಾಗಿ ಪ್ರಖ್ಯಾತ ವ್ಯಾಪಾರ ಪಟ್ಟಣವಾಗಿತ್ತು.

ಭೌಗೋಳಿಕ ಲಕ್ಷಣ, ನದಿಗಳು

ಕರ್ನಾಟಕದ ಕರಾವಳಿಯ ನೈಸರ್ಗಿಕ ಬಂದರುಗಳಲ್ಲಿ ಮಂಗಳೂರು ಪ್ರಮುಖವಾದದ್ದು. ನೇತ್ರಾವತಿ ಹಾಗೂ ಫಲ್ಗುಣಿ ನದಿಗಳು ಕಡಲನ್ನು ಸೇರುವಲ್ಲಿ ಈ ಮಂಗಳೂರು ಬಂದರು ನಿರ್ಮಾಣವಾಗಿದೆ. ತುಳುವಿನಲ್ಲಿ ಮಂಗಳೂರನ್ನು ಕುಡ್ಲ-ಕುಡಲ ಎಂದು ಕರೆಯುತ್ತಾರೆ. ಇದಕ್ಕೆ ಹಿಂದೆ ಕೊಡಿಯಾಲ ಎಂದೂ ಕರೆಯುತ್ತಿದ್ದರು. ಕುಡಲ ಹಾಗು ಕೊಡಿಯಾಲಗಳ ಅರ್ಥ ಎರಡು ನದಿಗಳ ಸಂಗಮ ಎಂದಾಗುತ್ತದೆ. ನೇತ್ರಾವತಿ ಹಾಗೂ ಫಲ್ಗುಣಿಗಳು ಒಂದಾಗಿ ಕಡಲು ಸೇರುವುದೇ ಸಂಗಮ ಸ್ಥಳ.

ಮಂಗಳೂರು ಬಂದರವು ವಿಶಾಲವಾದ ಮುಖಜ ಭೂಮಿಯಲ್ಲಿ ಉಂಟಾಗಿದೆ. ಅಳಿವೆಯ ಬಳಿಯಲ್ಲಿ ಎಡಗಡೆ ವಿಸ್ತಾರವಾದ ಮರಳುರಾಶಿ, ಬಲಗಡೆ ಹಿಂಬದಿಯಲ್ಲಿ ಇಂದಿನ ಮಂಗಳೂರು ನಗರ ತೋರುತ್ತದೆ. ಇಲ್ಲಿ ಕಡಲು ಸೇರುವ ಮೊದಲು ಫಲ್ಗುಣಿ ನದಿಯು ಕಡಲಿನಿಂದ ಸ್ವಲ್ಪ ಅಂತರದಲ್ಲಿ ಸಮಾನಾಂತರವಾಗಿ ಹರಿಯುತ್ತದೆ. ಇವುಗಳ ನಡುವೆ ಮರಳ ಕಿನಾರೆದಿಬ್ಬ ರಚನೆಯಾಗಿದೆ. ಕಡಲ ಬಳಿಯಲ್ಲಿ ಅರ್ಧ ಕಿ.ಮಿ ದೂರದಿಂದ ಈ ಫಲ್ಗುಣಿಯನ್ನು 'ಗುರುಪುರ"ಎಂದು ಕರೆಯುತ್ತಾರೆ.

ನೇತ್ರಾವತಿ

ಚಿಕ್ಕಮಗಳೂರು ಜಿಲ್ಲೆಯ ಸಯ್ಯಾದ್ರಿಯಲ್ಲಿ ಬಲ್ಲಾಳರಾಯನ ದುರ್ಗವಿದೆ. ಇದು ಸುಮಾರು ೧೫೦೫ ಮೀಟರ್ ಎತ್ತರದಲ್ಲಿದೆ. ಇದರ ಒಂದು ಬದಿಯಿಂದ ನೇತ್ರಾವತಿಯ ಉಗಮವಾಗುತ್ತದೆ. ಚಿಕ್ಕ ಒರತೆಯಾಗಿ ಆರಂಭವಾಗುವ ನೇತ್ರಾವತಿ-ಪಶ್ಚಿಮ ಘಟ್ಟದ ದಟ್ಟ ಕಾನನಗಳ ಮೂಲಕ ಕೆಳಗಿಳಿಯುತ್ತದೆ. ದಿಡುಪೆ ಗ್ರಾಮದ ಆನಡ್ಕದಲ್ಲಿ ನೇತ್ರಾವತಿ ನದಿಯು ೧೫೦ ಅಡಿಗಳಷ್ಟು ಕೆಳಗೆ ಧುಮುಕುತ್ತಾ ಜಲಪಾತವಾಗಿದೆ[೧೧೬].

ಹೀಗೆ ಹರಿದು ಬರುವ ನೇತ್ರಾವತಿಯನ್ನು ಕೊಲ್ಲೂರಿನ ಬಳಿ ಇನ್ನೊಂದು ತೊರೆ ಸೇರಿಕೊಳ್ಳುತ್ತದೆ. ಕಡಿರುದ್ಯಾವರದ ಬಳಿಯಲ್ಲಿ ಭಂಡಾಜೆಹೊಳೆಯು ಸೇರುತ್ತದೆ. ಇಲ್ಲಿ ೨೦೦ ಅಡಿ ಆಳಕ್ಕೆ ಧುಮುಕುವ ನೇತ್ರಾವತಿ ಮುಂದೆ ಚಾರ್ಮಡಿ ಕಣಿವೆ ಮಾರ್ಗವಾಗಿ ಕೆಳಗಿಳಿಯುತ್ತಾಳೆ. ಇಲ್ಲ ಮೃತ್ಯುಂಜಯ ಹಾಗೂ ಸುಮಂಗಲೆ ಎಂಬೆರಡು ಕಿರುನದಿಗಳು ಬಂದು ಸೇರುತ್ತವೆ. ಇಲ್ಲಿಂದ ತನ್ನ ಪಾತ್ರವನ್ನು ಆಳವಾಗಿಯೂ, ವಿಸ್ತಾರವಾಗಿಯೂ ಮಾಡಿಕೊಂಡು ವೇಗವಾಗಿ ಧರ್ಮಸ್ಥಳದತ್ತ ಹರಿಯುತ್ತಾಳೆ. ಇಲ್ಲಿ ನೆರಿಯಾನದಿ ಬಂದು ಸೇರುತ್ತದೆ. ಧರ್ಮಸ್ಥಳವನ್ನು ಮೂರು ದಿಕ್ಕುಗಳಿಂದ ಸುತ್ತುವರಿದು ಉಪ್ಪಿನಂಗಡಿಯ ಬಳಿಯಲ್ಲಿ ಕಪಿಲಾ ನದಿಯನ್ನು ಸೇರುತ್ತದೆ. ಕಪಿಲೆಯನ್ನು ಶಿಶಿಲಾ ಎಂದು ಕರೆಯುತ್ತಾರೆ. ಉಪ್ಪಿನಂಗಡಿ ಬಳಿಯಲ್ಲಿ ಕುಮಾರಪರ್ವತದಲ್ಲಿ ಜನಿಸಿ ಹರಿದು ಬರುವ

ಕುಮಾರಧಾರೆಯು ನೇತ್ರಾವತಿಯನ್ನು ಸೇರುತ್ತದೆ. ಇಲ್ಲಿ ಸಹಸ್ರಲಿಂಗೇಶ್ವರ ಎಂಬ ಕ್ಷೇತ್ರವಿದ್ದು, ಇದು ದಕ್ಷಿಣದ ಗಯಾಕ್ಷೇತ್ರವೆನಿಸಿಕೊಂಡಿದೆ. ಇಲ್ಲಿಂದ ಪಶ್ಚಿಮಾಭಿಮುಖವಾಗಿ ಹರಿಯುವ ನೇತ್ರಾವತಿ ಬಂಟ್ವಾಳದತ್ತ ಪ್ರವೇಶಿಸುತ್ತದೆ. ಬಂಟ್ವಾಳ ನಗರವು ನೇತ್ರಾವತಿಯ ದಂಡೆಯ ಮೇಲಿದೆ. ಬಂಟ್ವಾಳವು ನದಿಯ ಪಶ್ಚಿಮ ಭಾಗದಲ್ಲಿದ್ದರೆ–ದಕ್ಷಿಣದಲ್ಲಿ ಪಾಣಿಮಂಗಳೂರಿದೆ. ಬಂಟ್ವಾಳ ಹಾಗೂ ಪಾಣಿ ಮಂಗಳೂರು ಪ್ರಾಚೀನ ಕಾಲದಿಂದಲೂ ಉತ್ತಮ ವ್ಯಾಪಾರಿ ಸ್ಥಳಗಳಾಗಿವೆ. ಹಡಗಿನ ಮೂಲಕ ಬಂದ ವಸ್ತುಗಳು ಇಲ್ಲಿ ವಿಲೇವಾರಿಯಾಗುತ್ತಿದ್ದವು ಮತ್ತು ಘಟ್ಟಕ್ಕೆ ಹೋಗುವ ಸಾಮಗ್ರಿಗಳು ಇಲ್ಲಂದಲೇ ಸಾಗುತ್ತಿದ್ದವು.

ನೇತ್ರಾವತಿ ಕೊಂಚ ದೂರ ಪಶ್ಚಿಮಾಭಿಮುಖವಾಗಿ ಹರಿದರೆ ಅಲ್ಲಿ ನಂದಾವರ ಎಂಬ ಊರಿದೆ. ಇದು ಬಂಗರಾಜರ ಕಾಲದಲ್ಲಿ ಆಡಳಿತ ಕ್ಷೇತ್ರವಾಗಿತ್ತು[೧೧೭]. ಮುಂದೆ ಫರಂಗಿಪೇಟೆಯನ್ನು ನೇತ್ರಾವತಿಯು ತಲುಪುವುದು. ನೇತ್ರಾವತಿಯ ಈ ಪ್ರದೇಶದಲ್ಲಿ ಸುತ್ತಲು ಹಳ್ಳಿಗಳಿವೆ. ಅಲ್ಲಿಗೆ ಹೋಗಲು ಉತ್ತಮ ನೌಕಾಸಂಪರ್ಕ ಕಲ್ಪಿಸುತ್ತದೆ. ಇಲ್ಲಿಂದ ಪಾವೂರು ಹಾಗೂ ಉಲ್ಲಾಳದ ನಡುವೆ ಹಲವು ಕುದುರುಗಳಿವೆ. ಇಲ್ಲಿ ಜನವಸತಿ ಇದೆ. ಈ ದ್ವೀಪಗಳು ಕಬ್ಬು, ಭತ್ತ, ಬಾಳೆ ಕೃಷಿಗೆ ಹೆಸರುವಾಸಿಯಾಗಿವೆ. ಇಲ್ಲಿಂದ ಗಂಭೀರವಾಗಿ ಹರಿದು ಬರುವ ನೇತ್ರಾವತಿ ಜಪ್ಪಿನಮೊಗರಿನ ಬಳಿಯಲ್ಲಿ ಮಂಗಳೂರಿನ ವ್ಯಾಪ್ತಿಗೆ ಪ್ರವೇಶಿಸುತ್ತದೆ. ಇಲ್ಲಿ ನದಿಯ ದಕ್ಷಿಣ ದಂಡೆಯಲ್ಲಿ ಉಳ್ಳಾಲವಿದೆ. ಹೀಗೆ ಸುಮಾರು ೧೬೦ಕಿ.ಮೀ. ಹರಿದು ಬರುವ ನೇತ್ರಾವತಿ ಗುರುಪುರ (ಫಲ್ಗುಣಿ) ನದಿಯೊಂದಿಗೆ ಸೇರಿ ಕಡಲನ್ನು ಸೇರುತ್ತದೆ. ಫರಂಗಿಪೇಟೆಯು ಪೋರ್ಚಗೀಸರ ನೆಲೆಯನ್ನು ಸೂಚಿಸುತ್ತದೆ. ವ್ಯಾಪಾರಕ್ಕಾಗಿ ಬಂದ ಪೋರ್ಚಗೀಸ್ ವ್ಯಾಪಾರಿಗಳು ಕಡಲಿಗೆ ಸಂಪರ್ಕ ಕಲ್ಪಿಸುವ ಫರಂಗಿಪೇಟೆಯಲ್ಲಿ ನೆಲೆಸಿದ್ದರಿಂದ ಆ ಸ್ಥಳಕ್ಕೆ ಈ ಹೆಸರು ಬಂದಿದೆ.

ಮಂಗಳೂರು – ಹಾಸನ – ಬೆಂಗಳೂರುಗಳಿಗೆ ತಲುಪುವ ಹೆದ್ದಾರಿಯ ನೇತ್ರಾವತಿಯ ಸಮನಾಂತರ ಹಾದುಹೋಗಿದೆ. ಉಳ್ಳಾಲದ ಮೂಲಕ ಹಾದು ಹೋಗುವ ಮಾರ್ಗವು ಕನ್ಯಾಕುಮಾರಿ–ಮುಂಬೈ ಸೇರಿಸಿದರೆ, ಬೆಂಗಳೂರು ಮಾರ್ಗವು ತಮಿಳುನಾಡನ್ನು ಸೇರಿಸುತ್ತದೆ.

ನದಿಯ ಮುಖಜ ಪ್ರದೇಶ ವಿಸ್ತಾರವೂ, ಕಡಲಮೇಲಿಂದ ಬೀಸಿಬರುವ ಮಾರುತಗಳಿಂದ ಸುರಕ್ಷಿತವೂ ಆಗಿದೆ. ಅಲ್ಲದೆ ಸದಾ ೪ ರಿಂದ ೬ಮೀ ನೀರು ನಿಂತಿರುವುದರಿಂದ ದೊಡ್ಡ ಹಡಗುಗಳನ್ನು ಲಂಗರು ಮಾಡಬಹುದಾಗಿದೆ. ಅಲ್ಲದೆ ವಸ್ತುಗಳನ್ನು ಸಂಗ್ರಹಿಸಿಡಲು ಬೇಕಾದ ವಿಶಾಲ ಸ್ಥಳಾವಕಾಶಗಳು ಇರುವುದರಿಂದ ಈ ಬಂದರು ವ್ಯಾಪಾರಿಗಳಿಗೆ ಆಕರ್ಷಣೀಯ ಪ್ರದೇಶವಾಗಿತ್ತು.

ಮಂಗಳೂರು ಬಂದರಿನ ಬೆಳವಣಿಗೆ

ಮಂಗಳೂರು ಬಂದರಿನ ಕುರಿತ ಕ್ರಿಸ್ತಶಕದ ಹಿಂದಿನ ಉಲ್ಲೇಖಗಳು ಸಂಗಮ್ ಸಾಹಿತ್ಯದಲ್ಲಿ ಕಂಡುಬರುತ್ತದೆ. ಇದೇ ಕಾಲದ ವಿದೇಶಿ ಬರಹಗಳು ಮಂಗಳೂರಿನ ಬಗ್ಗೆ ಉಲ್ಲೇಖಿಸಿದ್ದು ನೋಡ ಸಿಗುತ್ತದೆ.

ತುಳುನಾಡು, ತುಳುದೇಶ, ತುಳು ವಿಷಯ ಎಂದೆಲ್ಲಾ ಕರೆಯಲ್ಪಡುವ ಪ್ರದೇಶವು ಮಂಗಳೂರನ್ನೊಳಗೊಂಡಿತ್ತು. ಮಂಗಳೂರಿನ ಬಂದರು ಪಶ್ಚಿಮದ ರಾಷ್ಟ್ರದೊಂದಿಗೆ ಸಂಪರ್ಕ ಹೊಂದಲು ಅನುಕೂಲ ದಿಕ್ಕಿನಲ್ಲಿದ್ದುದ್ದರಿಂದ, ಪಾಶ್ಚಾತ್ಯರು, ಅರಬ್ಬರು, ಪರ್ಶಿಯನ್ನರು ಮಂಗಳೂರು ಬಂದರಿನೊಂದಿಗೆ ವ್ಯಾಪಾರಿ ಸಂಬಂಧ ಹೊಂದಿದ್ದರು.

ಮಂಗಳೂರನ್ನು ಮಂಗಳಾಪುರ ಎಂದು ಕರೆಯುತ್ತಿದ್ದರು. ಇದು ಆಳುಪರ ಆಡಳಿತ ಕೇಂದ್ರವೂ ವಾಣಿಜ್ಯ ಕೇಂದ್ರವೂ ಆಗಿತ್ತು. ಆಳುಪರೇ ಇಲ್ಲಿಯ ಮೊದಲ ಪ್ರಾಚೀನ ಅರಸುಮನೆತನ, ಹಲ್ಮಿಡಿ ಶಾಸನದಲ್ಲಿ ಇವರ ಉಲ್ಲೇಖವಿದೆ, ಇವುಗಳೆಲ್ಲದರಿಂದ ಇವರು ೫ನೆಯ ಶತಮಾನದಲ್ಲೇ ಈ ಪ್ರದೇಶದಲ್ಲಿ ಪ್ರಬಲ ರಾಜ್ಯ ಕಟ್ಟಿದ್ದು ತಿಳಿಯುತ್ತದೆ.

ಕ್ರಿ.ಶ ೭ನೆಯ ಶತಮಾನದಿಂದ ಆಳುವರ ಇತಿಹಾಸವು ನಿರಂತರವಾಗಿ ಬೆಳಕಿಗೆ ಬರುತ್ತದೆ. ಆ ಕಾಲದಿಂದ ಮಂಗಳಾಪುರ ರಾಜಧಾನಿಯಾಗಿ ಒಂದನೇ ಆಳುವ ಅರಸನಾದ ಗುಣಸಾಗರ ಆಳುಪೇಂದ್ರನು[೧೧೮] ಆಳುತಿದ್ದದ್ದು ತಿಳಿಯುತ್ತದೆ. ಇವನ ಕಾಲಕ್ಕೆ ಆಳುಪರ ರಾಜ್ಯದ ವಿಸ್ತಾರವು ಪೊಂಬುಚ್ಚ, ಕದಂಬ ಮಂಡಲವನ್ನು ಒಳಗೊಂಡಿತ್ತು. ಹಾಗಾಗಿ ಮಂಗಳಪುರ, ಪೊಂಬುಚ್ಚಪುರ ಮತ್ತು ಬನವಾಸಿ ಇವು ಮೂರು ಪ್ರಧಾನ ರಾಜಧಾನಿಗಳಾಗಿದ್ದವು. ಒಂದನೇ ಆಳುವರಸನು ಕ್ರಿ.ಶ ೬೫೦ ರಿಂದ ೬೮೦ ತನ್ನ ಸಮಕಾಲೀನ ಚಾಲುಕ್ಯ ಚಕ್ರವರ್ತಿಯಾದ ೧ನೆಯ ವಿಕ್ರಮಾದಿತ್ಯನ ಮಿತ್ರನೂ, ಗಣ್ಯಸಾಮಂತನೂ ಆಗಿದ್ದನು.[೧೧೯] ಪಲ್ಲವರಿಗೂ ಚಾಲುಕ್ಯರಿಗೂ ನಡೆದ ಕಾಳಗದಲ್ಲಿ ಆಳುಪರ ಸಹಾಯ ಪಡೆದ ವಿಕ್ರಮಾದಿತ್ಯನು, ಗೆಲುವಿನ ನಂತರ ಆಳುಪರಿಗೆ ಕದಂಬ ಮಂಡಲ ನೀಡಿದ್ದನು. ಮುಂದೆ ಪಟ್ಟಕ್ಕೆ ಬಂದವನು ೧ನೆಯ ಚಿತ್ರವಾಹನ. ಇವನು ಕ್ರಿ.ಶ ೬೮೦ ರಿಂದ ೭೩೦ರವರೆಗೆ ವೈಭವದಿಂದ ಆಳಿದನು. ಈತನು ಚಾಲುಕ್ಯ ಚಕ್ರವರ್ತಿ ವಿನಯಾದಿತ್ಯ ಸತ್ಯಾಶ್ರಯನ ಅಳಿಯನೂ ವಿಜಯಾದಿತ್ಯನ ಬಾವನೂ ಆಗಿದ್ದನು. ಈತನು ಕದಂಬ ಮಂಡಳದಲ್ಲಿ ಆಳುತ್ತಿದ್ದರೆ ಆತನ ಮಗನಾದ ಬಬ್ರುವಾಹನನು ಮಂಗಳಪುರದಲ್ಲಿಂದ ಆಳುತ್ತಿದ್ದನು. ಕ್ರಿ.ಶ.ಸು ೭೩೦ ರಲ್ಲಿ ೨ನೆಯ ತಳುವರಸನು ಪಟ್ಟಕ್ಕೆ ಬಂದನು. ರಾಷ್ಟ್ರಕೂಟರ ೨ನೆಯ ಕೃಷ್ಣನು ತುಳುನಾಡನ್ನು ವಶಪಡಿಸಿ ಕೊಂಡನು ಇದು ಕ್ರಿ.ಶ ೯೦೦ ರಲ್ಲಿ ನಡೆದ ಘಟನೆ.

೨ನೆಯ ಚಿತ್ರಸೇನನು ಮಂಗಲಪುರದಿಂದ ಆಳುತ್ತಿದ್ದಾಗ ಪಾಂಡ್ಯರಾಜ ಕೋಚ್ಚಡೈಯನ್ ಯುದ್ಧಕ್ಕೆಬರುತ್ತಾನೆ[೧೦]. ಆಳುಪರು ಚಾಳುಕ್ಯರ ಸಾಮಂತರಾಗಿದ್ದರೆನ್ನುವ ಕಾರಣ, ಅವರ ಲಾಭದಾಯಕ ರೇವುಪಟ್ಟಣ ಮಂಗಲಪುರವನ್ನು ಗೆಲ್ಲಬೇಕೆನ್ನುವ ಉದ್ದೇಶವು ಪಾಂಡ್ಯರದಾಗಿತ್ತು. ಕ್ರಿ.ಶ ೭೦೦-೭೩೦ರ ಅವಧಿಯಲ್ಲಿ ಪಾಂಡ್ಯರು ತಮಿಳುನಾಡಿನಲ್ಲಿ ಪ್ರಬಲರೂ ಹಾಗೂ ಪ್ರಮುಖ ರೇವು ಪಟ್ಟಣಗಳ ಒಡೆಯರೂ ಆಗಿದ್ದರು. ಚಾಳುಕ್ಯರ ಸಂಪತ್ ಸಮೃದ್ಧಿಯಲ್ಲಿ ಮಂಗಳಪುರದ ಮಹತ್ವ ತಿಳಿದ ಅವರು ಯುದ್ದಹೂಡಿದ್ದರು. ಆದರೆ ಈ ಯುದ್ಧದಲ್ಲಿ ಅಪಾರ ನಷ್ಟ ಹೊಂದಿದರು.[೧೧]

ಚಿತ್ರಸೇನನು ಸುಮಾರು ೫೦ ವರ್ಷಗಳ ಕಾಲ ರಾಜ್ಯವಾಳಿದ್ದನು. ಈತನು ಕ್ರಿ.ಶ. ೬೯೪ರ ತರುವಾಯವೇ ವಿನಯಾದಿತ್ಯನ ಕುವರಿಯಾದ ಕುಂಕುಮದೇವಿಯನ್ನು ವರಿಸಿದ್ದ.[೧೨] ಇದರಿಂದ ಚಾಳುಕ್ಯರು ಹಾಗೂ ಆಳುಪರ ನಡುವೆ ವೈವಹಿಕ ಸಂಬಂಧ ಏರ್ಪಟ್ಟು ಇವರ ಮೈತ್ರಿ ಇನ್ನಷ್ಟು ಗಟ್ಟಿಯಾಯಿತು. ಚಿತ್ರವಾಹನನ ನಂತರ ಅಧಿಕಾರಕ್ಕೆ ಬಂದವನು ೨ನೆಯ ಆಳುವರಸ: (ಕ್ರಿ.ಶ. ೭೩೦-೬೦). ಈತನ ಕಾಲದಲ್ಲಿ ಆಳುಪರ ಅಧಿಕಾರ ವ್ಯಾಪ್ತಿ, ವೈಭವದಲ್ಲಿ ಇಳಿಕೆಯಾಯಿತು[೧೩]. ಇದಕ್ಕೆ ಮುಖ್ಯ ಕಾರಣ ತಮಿಳುನಾಡಿನಲ್ಲಿ ಪಟ್ಟಾಧಿಕತ್ವಕ್ಕಾಗಿ ಪಲ್ಲವರೂ ಹಾಗೂ ಪಾಂಡ್ಯರು ಸೇಣುಸುತ್ತಿದ್ದರು. ರಾಷ್ಟ್ರಕೂಟರು ಆಂತರಿಕ ಗೊಂದಲಗಳಿಂದ ಹೊರಬಂದು[೧೪] ಚಾಳುಕ್ಯರನ್ನು ಸದೆಬಡೆಯುವ ಯೋಜನೆ ರೂಪಿಸುತ್ತಿದ್ದರು. ಇದಕ್ಕೆ ಸಹಾಯಕರಾಗಿ ಪಲ್ಲವರನ್ನ ಜೊತೆಗಾರರಾಗಿ ಪಡೆಯುವ ಯೋಜನಯೊಂದಿಗೆ ಸ್ನೇಹ ಬೆಳಸಿದ್ದರು. ಆದರೆ ಇದೇ ಸಮಯದಲ್ಲಿ ಪಲ್ಲವ ೨ನೆಯ ನಂದಿವರ್ಮನು ತುಳುನಾಡನ್ನು ಆಕ್ರಮಿಸುವ ಪ್ರಯತ್ನ ನಡೆಸಿದ್ದ.[೧೫] ಮಂಗಲಪುರ-ಮಂಗಳೂರಿನ ಬಂದರಿನಿಂದ ಬರುತ್ತಿದ್ದ ಸಂಪತ್ತು ಇವರೆಲ್ಲರ ದಾಳಿಗೆ ಕಾರಣವಾಗಿತ್ತು. ಇದನ್ನು ತಿಳಿದ ೨ನೆಯ ಆಳುವರಸನು ಪಲ್ಲವರ ಸಾಮಂತನಾದನು.[೧೬] ತಮಿಳುನಾಡಿನ ಕಲಹದಲ್ಲಿ ಪಲ್ಲವರಿಗೆ ಸಹಕರಿಸಿದನು. ಪಲ್ಲವರ ವಿಜಯದೊಂದಿಗೆ ಆಳುಪರಿಗೆ ತುಳುನಾಡು ಯಾವುದೇ ತೊಂದರೆಯಿಲ್ಲದೆ ರಾಜ್ಯಪಾಲನೆಗೆ ಅನುಕೂಲ ಉಂಟುಮಾಡಿತು. ೨ನೇ ಆಳುವರಸನು (ಕ್ರಿ.ಶ. ೭೩೦-೭೯೦) ಕಾಲವಾದ ಮೇಲೆ ೨ನೆಯ ಚಿತ್ರವಾಹನ ಹಾಗೂ ರಣಸಾಗರ ಪಟ್ಟಕ್ಕೆ ಬಂದರು. ಈಗ ಏಕಕಾಲದಲ್ಲಿ ಸಮಾನ ಆಸಕ್ತ ಇಬ್ಬರು ಆಳುವರಸರಿಗೆ ನೆಲೆ ದೊರೆಯುವುದು ದುಸ್ತರವಾಯಿತು. ೨ನೇ ಚಿತ್ರವಾಹನ (ಕ್ರಿ.ಶ. ೭೬೦-೮೦೦) ಪೊಂಬುಚ್ಚಪುರಕ್ಕೆ ಹೋದರೆ, ಉದ್ಯಾವರ ರಣಸಾಗರನ ವಶದಲ್ಲಿ ಉಳಿಯಿತು. ತುಳುನಾಡು ಸಂಪೂರ್ಣ ರಣಸಾಗರನ ವಶದಲ್ಲಿತ್ತು[೧೭]. ಕ್ರಿ.ಶ. ೭೯೨-೯೩ ರಲ್ಲಿ ಉಂಟಾದ ರಾಷ್ಟ್ರಕೂಟರ ಆಂತರಿಕ ಹೋರಾಟದ ಪರಿಣಾಮವಾಗಿ ೨ನೇ ಚಿತ್ರವಾಹನ ಸಮಾಂತನಾಗಿ ರಾಷ್ಟ್ರಕೂಟ ಧ್ರುವನ ಹಿರಿಯಣ್ಣ

ಮಹಾಕಂಬನ ಪಕ್ಷವಹಿಸಿದನು. ಆದರೆ ಈ ಘರ್ಷಣೆಯಲ್ಲಿ ೨ನೇ ಗೋವಿಂದನು ಗೆದ್ದುದ್ದರ ಪರಿಣಾಮ ಚಿತ್ರವಾಹನ ಪೊಂಬುಚ್ಚ (ಪೆರ್ಮುಂಜೆ) ಬಿಟ್ಟು ಉದ್ಯಾವರಕ್ಕೆ ಬಂದನು.

ಉದ್ಯಾವರದ ಅರಸ ರಣಸಾಗರನನ್ನು, ಚಿತ್ರವಾಹನನು ಸ್ವಾಗತಿಸಲಿಲ್ಲ. ಈಗ ಉಂಟಾದ ಕಾಳಗ ಸರಿ ಸುಮಾರು ೨೦-೨೫ ವರ್ಷಗಳ ಕಾಲ ನಡೆಯಿತು.[೧೨೮] ಸಂಪೂರ್ಣ ಅಶಾಂತಿ ನೆಲೆಸಿತು. ಸಾವು-ನೋವುಗಳು ಹೆಚ್ಚಾದವು. ತುಳುನಾಡಿನಾದ್ಯಂತ ಅರಾಜಕತೆಸ್ಥಿತಿ ಉಂಟಾಯಿತು. ಈ ಕಾಲವನ್ನು ಇತಿಹಾಸಕಾರರು ೮ನೇ ಶತಮಾನದ ಅಂತ್ಯದ ೯ನೇ ಶತನಮಾನದ ಆರಂಭಿಕ ದಶಕವೆಂದು ಶಾಸನಗಳ ಲಿಪಿ ಆಧಾರದಿಂದ ತೀರ್ಮಾನಿಸಿದ್ದಾರೆ.[೧೨೯] ಇಲ್ಲಿಂದ ಕಾಲುಕಿತ್ತ ರಣಸಾಗರನು ಮಂಗಳೂರಿಗೆ ಹೋದನು. ಆಗಲೂ ಪರಸ್ಪರ ಯುದ್ಧಗಳು ಮುಂದುವರಿದವು, ಸುಮಾರು ಕ್ರಿ.ಶ ೮೦೦ ರಲ್ಲಿ ಚಿತ್ರವಾಹನ ಮಡಿದನು.[೧೩೦] ಚಿತ್ರವಾಹನನ ತರುವಾಯ ಆತನ ಮಗನಾಗಿರ ಬಹುದಾದ ಶ್ವೇತವಾಹನನು ರಣಸಾಗರನ ಮೇಲೆ ಸೇಡು ತೀರಿಸಿಕೊಳ್ಳಲು ಪ್ರಯತ್ನಿಸಿದನು. ಇಂಥಹ ಒಂದು ಯುದ್ಧದಲ್ಲಿ ರಣಸಾಗರನ ಮರಣ ರಣದಂಗದಲ್ಲೇ ಆಯಿತು. ಬಹುಶ ಕ್ರಿ.ಶ ೮೦೫ ರಲ್ಲಿ ಈ ಯುದ್ದ ನಡೆದಿರಬಹುದು. ಆ ತರುವಾಯ ಶ್ವೇತವಾಹನ (ಕ್ರಿ.ಶ ೮೦೫-೧೦) ಹಾಗೂ ಪ್ರಥ್ವಿಸಾಗರ (ಕ್ರಿ.ಶ ೮೧೦-೪೦) ರಾಜ್ಯವಾಳಿದರು. ಇಲ್ಲಿಗೆ ಪ್ರಾಚೀನ ಆಳುಪರ ಚರಿತ್ರೆ ಅಂತ್ಯಗೊಳ್ಳುತ್ತದೆ. ಇವರು ಉದ್ಯಾವರವನ್ನೆ ರಾಜ್ಯಧಾನಿಯಾಗಿ ಆಳಿದರು. ಆದರೆ ಮಂಗಳೂರು ಒಂದು ಉತ್ತಮ ರೇವು ಪಟ್ಟಣವಾಗಿ ಮುಂದುವರಿಯಿತು. ಉದ್ಯಾವರದ ಬಳಿಯ ಬಾರ್ಕೂರು ಹೆಚ್ಚಿನ ಚಟುವಟಿಕೆಯ ಕೇಂದ್ರವಾಯಿತು. ನಂತರ ಬಂದ ವಿಜಯಾದಿತ್ಯಮಾರಮ್ಮ (ಕ್ರಿ.ಶ ೮೪೦-೭೦) ಉದ್ಯಾವರದಿಂದಲೆ ಆಳಿದನು. ಆತನ ನಂತರ ಆಡಳಿತಕ್ಕೆ ಬಂದ ವಿಮಳಾದಿತ್ಯ (ಕ್ರ.ಶ ೮೭೦-೯೦೦)ನು ರಾಷ್ಟ್ರಕೂಟರೊಂದಿಗೆ ಸೆಣಸುತ್ತಾ ರಣಭೂಮಿಯಲ್ಲಿ ಅಸುನೀಗಿದನು. ಆಳುಪರು ರಾಷ್ಟ್ರಕೂಟರ ವಿರೊದಿಗಳಾಗಿದ್ದ ಗಂಗರೊಂದಿಗೆ ಮೈತ್ರಿ ಸಾಧಿಸುತ್ತಿದ್ದುದ್ದನ್ನು ತಿಳಿದ ರಾಷ್ಟ್ರಕೂಟರ ೨ನೇ ಕೃಷ್ಣನು (ಕ್ರಿ.ಶ ೮೮೦-೯೧೫) ೯ನೇ ಶತಮಾನದ ಕೊನೆಯ ವೇಳೆಗೆ ಆಳುಪರು ರಾಷ್ಟ್ರಕೂಟ ವಿಮಳಾದಿತ್ಯನ ಮಗನಾಗಿರಬಹುದಾದ ರಣಂಜಯ (ಕ್ರಿ.ಶ ೯೦೦-೩೦)ನ್ನು ಸಿಂಹಾಸನದ ಉತ್ತರಾಧಿಕಾರಿಯಾಗಿ ಮಾಡಿ ಇಂದಪ್ಪಯ್ಯ ಎಂಬ ಆಡಳಿತಗಾರನನ್ನು ನೇಮಿಸಿದರು. ಆತನ ನಂತರ ೧ನೆಯ ದತ್ತಾಳುಪ (ಕ್ರಿ.ಶ ೯೩೦-೫೦) ಕುಂದವರ್ಮ (ಕ್ರಿ.ಶ ೯೩೦-೬೦) ಜಯಸಿಂಹ (ಕ್ರಿ.ಶ ೯೮೦-೧೦೧೦) ನ ಕಾಲದ ಕೊನೆಯಲ್ಲಿ ಚೋಳರು ತುಳುನಾಡಿನ ಮೇಲೆ ದಾಳಿಮಾಡಿದರು.[೧೩೧] ಚೋಳರ ಪರಾಕ್ರಮಿ ರಾಜನಾದ ರಾಜರಾಜಚೋಳ (ಕ್ರಿ.ಶ ೯೮೫-೧೦೧೬) ಹಾಗೂ ಆತನ ಮಗ ರಾಜೇಂದ್ರ (ಕ್ರಿ.ಶ ೧೦೧೬-೪೪) ತುಳುನಾಡನ್ನು ಜಯಿಸಿದರು. ಇಲ್ಲಿಂದ ಮುಂದೆ ಸುಮಾರು ಹತ್ತು ವರ್ಷಗಳಕಾಲ ಚೋಳರ ಪ್ರಭುತ್ವನಡೆಯಿತು[೧೩೨]. ಈ ಸಮಯದಲ್ಲಿ ತುಳುನಾಡಿನ ಎರಡೂ ಪ್ರಮುಖ ರೇವು

ಪಟ್ಟಣವಾದ ಮಂಗಳೂರು ಹಾಗೂ ಬಾರ್ಕೂರುಗಳು ಚೋಳರ ಅಧೀನವಾದವು. ಪೂರ್ವ ಕರಾವಳಿಯಲ್ಲಿ ತಮ್ಮ ನೌಕಾ ಸೈನ್ಯ ಹಾಗೂ ಕಡಲೋತ್ತರ ವ್ಯಾಪಾರದಿಂದ ಖ್ಯಾತರಾದ ಚೋಳರು ಪಶ್ಚಿಮ ಕರಾವಳಿಯ ರೇವಿನಲ್ಲಿ ತಮ್ಮ ವ್ಯಾಪಾರ ವ್ಯವಹಾರ ನಡೆಸಿದರು.

ಚೋಳರನ್ನು ೧ನೆಯ ಬಂಕಿದೇವ (ಕ್ರಿ.ಶ ೧೦೨೦-೫೦) ನು ಕ್ರಿ.ಶ: ೧೦೧೦ ರಲ್ಲಿ ಹಿಮ್ಮೆಟ್ಟಿಸಿದ್ದನು[೧೩೩.] ಆತನ ಈ ಪ್ರಯತ್ನಕ್ಕೆ ಶಾಂತರ ಮನೆತನದವರೂ ಸಹಯ ಮಾಡಿದರು.[೧೩೪] ನಂತರ ಪಟ್ಟಿಪಂಬುಚ್ಚದ ಕವಿಆಳುಪ, ಪಟ್ಟಿಯೊಡೆಯ ಕುಲಶೇಖರ-ಕುಂಡಣರು ಕ್ರಿ.ಶ ೧೦೫೦ ರಿಂದ ೧೨೩೦ ರವರೆಗೆ ಆಳಿದರು.[೧೩೫]

ಈ ಕಾಲದಲ್ಲಿ ಮಂಗಳೂರು ಬಂದರಿಗಿಂತ ಹೆಚ್ಚಾಗಿ ಬಾರ್ಕೂರು, ಮಲ್ಪೆ ಮತ್ತು ಬಸರೂರು ಬಂದರುಗಳು ವಿದೇಶಿ ವ್ಯಾಪಾರಕ್ಕೆ ದೊಡ್ಡ ಪ್ರಮಾಣದಲ್ಲಿ ತೆರೆದುಕೊಂಡವು. ಚೋಳರ ಆಧಿಪತ್ಯದ ಸಮಯದಲ್ಲಿ ಮಂಗಳೂರು ಮತ್ತು ಅದರ ಸಮೀಪದ ಬಂದರುಗಳು ಆಳುಪರಸರಿಂದ ನಿರ್ಲಕ್ಷಕ್ಕೊಳಗಾದವು. ಅವರು ಹೆಚ್ಚಾಗಿ ಉತ್ತರದ ಬಂದರುಗಳತ್ತ ತಮ್ಮ ಗಮನ ಹರಿಸತೊಡಗಿದರು. ವಲ್ಲಭದೇವದತ್ತಾಳೂಪ (ಕ್ರಿ.ಶ ೧೨೩೦-೫೦) ವೀರಪಾಂಡ್ಯದೇವ ಆಳುಪೇಂದ್ರದೇವ (ಕ್ರಿ.ಶ ೧೨೫೦-೭೫) ಬಲ್ಲಮಹಾದೇವಿಯ (ಕ್ರಿ.ಶ ೧೨೭೫-೯೨) ಅಳಿಯ ೨ನೇ ಬಂಕಿದೇವ (ಕ್ರಿ.ಶ ೧೨೮೫-೧೩೧೫) ನಾಗದೇವ (ಕ್ರಿ.ಶ ೧೨೯೨-೧೩೦೦), ಸೋಮದೇವ ಆಳುಪೇಂದ್ರ (ಕ್ರಿ.ಶ ೧೩೧೫-೩೫) ೨ನೇ ಕುಲಶೇಖರ (ಕ್ರಿ.ಶ ೧೩೩೫-೪೬) ರು ಆಳಿದರು. ಸೋಯಿದೇವನು ಚಂದಾವರ ಕೇಂದ್ರವಾಗಿ ಆಳುತ್ತಿದ್ದ ಚಂದಾವರ ಕಾದಂಬರ ಮೇಲೆ ದಂಡೆತ್ತು ಹೋದನು[೧೩೬]. ಇದು ಆಳುಪರು ಉತ್ತರದತ್ತ ಹೆಚ್ಚಿನ ಆಸಕ್ತಿ ವಹಿಸಿದ್ದನ್ನು ತೋರಿಸುತ್ತದೆ. ಭಟ್ಕಳ, ಹೊನ್ನಾವರ, ಕುಮಟಾ ಬಂದರುಗಳು ಪ್ರಖ್ಯಾತ ರೇವುಪಟ್ಟಣಗಳಾಗಿ ಕಡಲೊತ್ತರ ವ್ಯಾಪಾರಕ್ಕೆ ಬಳಸಿಕೊಂಡಿದ್ದರು.

ಕ್ರಿ.ಶ ೧೩೩೫-೪೬ ರವರೆಗೆ ಆಳಿದ ೨ನೇ ಕುಲಶೇಖರನ ಆಡಳಿತದ ಕಾಲದಲ್ಲಿ ಹೊಯ್ಸಳರು ತಮ್ಮ ಮಹಾಮಂಡಳೇಶ್ವರನಾದ ಶಾಂತರ ಮನೆತನದ ಲೋಕನಾಥದೇವರಸನ ಅಧಿಕಾರಕ್ಕೆ ಕಾರ್ಕಳದ ಸುತ್ತಮುತ್ತಲ ಪ್ರದೇಶ ವಹಿಸಿಕೊಟ್ಟರು.[೧೩೭] ಇಲ್ಲಿಂದ ಮುಂದೆ ಹೊಯ್ಸಳರ ರಾಣಿ ೩ನೇ ಬಲ್ಲಾಳನ ಪಿರಿಯರಸಿ ಚಿಕ್ಕಾಯಿತಾಯಿಯ ಆಡಳಿತಕ್ಕೆ ಸೇರುತ್ತದೆ. ಅವಳು ಬಾರ್ಕೂರಿನಲ್ಲಿ ನೆಲೆಸಿ ರಾಜ್ಯ ಪಾಲಿಸುತ್ತಿದ್ದಳು. ಈಕೆಯ ಒಂದು ಶಾಸನ ಹೊನ್ನಾವರದ ಇಡಗುಂಜಿಯಲ್ಲಿ ದೊರೆತಿದೆ[೧೩೮].

ಮಂಗಳೂರು ರೇವು ಪಟ್ಟಣವನ್ನು ಇವರು ತೊರೆಯಲಿಲ್ಲ. ಆದರೆ ಉತ್ತರದತ್ತ ತಮ್ಮ ಗಮನ ಹರಿಸಿದ್ದರು. ಮುಂದೆ ೧೩೩೬ ರಲ್ಲಿ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ತುಳುನಾಡಿನ ಅರಸರು ಸ್ವಮನಸ್ಸಿನಿಂದ ವಿಜಯನಗರದ ಅಧಿಪತ್ಯ ಒಪ್ಪಿಕೊಂಡರು[೧೩೯]. ಆದರೆ ಕ್ರಿ.ಶ. ೧೩೪೫ ರಿಂದ ೧೩೪೮ರ ವರೆಗೆ ವಿಜಯನಗರ, ಹೊಯ್ಸಳ ಹಾಗೂ ಆಳೂಪರು ತುಳುನಾಡನ್ನು ಏಕಕಾಲದಲ್ಲಿ

ಆಳುತ್ತಿದ್ದರು.[೧೪೦] ೨ನೆಯ ಬಂಕಿದೇವ (ಕ್ರಿ.ಶ. ೧೩೪೬-೫೫) ೨ನೆಯ ಕುಲಶೇಖರ (ಕ್ರಿ.ಶ. ೧೩೫೫-೯೦) ೨ನೆಯ ವೀರಪಾಂಡ್ಯದೇವ (ಕ್ರಿ.ಶ. ೧೩೩೦-೧೩೯೯) ಮೂಡುಬಿದಿರೆಯಿಂದ ಆಳಿದ್ದರೆ,[೧೪೧] ಬಾರ್ಕೂರು ಹಾಗೂ ಮಂಗಳೂರುಗಳೆಂದು ವಿಂಗಡಿಸಿ, ಆ ಕೇಂದ್ರಗಳಿಂದ ವಿಜಯನಗರ ಅರಸರ ರಾಜನಿಷ್ಠರೂ, ಆಡಳಿತ ಕ್ಷೇತ್ರದಲ್ಲಿ ನುರಿತವರೂ ಆದ ಅಧಿಕಾರಿಗಳನ್ನು ರಾಜ್ಯಪಾಲರಾಗಿ ನೇಮಿಸಿ ಆಡಳಿತ ನಡೆಸಿದರು[೧೪೨]. ಹೀಗೆ ೧೪ನೇ ಶತಮಾನದವರೆಗೆ ಆಳಿದ ರಾಜ್ಯಪಾಲರ ಸಂಖ್ಯೆ ಹೀಗಿದೆ. ಬಾರ್ಕೂರಿನಿಂದ ೧೬ ಜನ ರಾಜ್ಯಪಾಲರೂ, ಮಂಗಳೂರಿನಿಂದ ೧೭ ಜನ ರಾಜಪಾಲರು ರಾಜ್ಯವಾಳಿದರು[೧೪೩]. ಹೀಗೆ ಮಂಗಳೂರು ಬಂದರು ವಿವಿಧ ಕಾಲದಲ್ಲಿ ವಿವಿಧ ಬಗೆಯಲ್ಲಿ ರಾಜಾಶ್ರಯ ಪಡೆದು ಬೆಳೆಯಿತು.

೨.೧೦ ಕರಾವಳಿಯ ಬಂದರುಗಳ ಸಾಮಾನ್ಯ ಲಕ್ಷಣ

ಕರ್ನಾಟಕದ ತೀರ ಪ್ರದೇಶ-ಕರಾವಳಿಯು ಸಾಂಬಾರ ದಿನಿಸುಗಳ ಮಾರ್ಗ ಎಂದೇ ಪ್ರಖ್ಯಾತವಾಗಿವೆ. ಜಗತ್ತಿನ ಪ್ರಮುಖ ದೇಶಗಳಿಗೆ ಮುಕ್ತ ವ್ಯಾಪಾರಿ ಮಾರ್ಗವಾಗಿದೆ. ಕಾರವಾರದಿಂದ ಮಂಗಳೂರಿನವರೆಗಿರುವ ಬಂದರುಗಳು ನೈಸರ್ಗಿಕ ವರಮಾಲೆ ಧರಿಸಿರುವಂತೆ ಕಂಡು ಬರುತ್ತವೆ. ಜಗತ್ತಿನ ಪ್ರಖ್ಯಾತ ಬಂದರುಗಳೊಂದಿಗೆ ನಿಟ ಸ್ಪರ್ಧೆಯೊಡ್ಡುತ್ತಿರುವ ಈ ಬಂದರುಗಳು ತೇಲಿಬರುವ ಹಡುಗಳಿಗೆ ಸುರಕ್ಷಿತ ತಂಗುದಾಣವಾಗಿವೆ.

ಈ ಎಲ್ಲಾ ಬಂದರುಗಳಿಗೆ ಪಶ್ಚಿಮ ಘಟ್ಟಗಳು ರಕ್ಷಾ ಕವಚದಂತಿವೆ. ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ, ಭಟ್ಕಳ, ಬೈಂದೂರು, ಕುಂದಾಪುರ, ಮಲ್ಪೆ, ಮಂಗಳೂರು ಮತ್ತು ಇವುಗಳ ನಡುವಿರುವ ಇನ್ನನೇಕ ಬಂದರುಗಳಿಗೆ ಪಶ್ಚಿಮ ಘಟ್ಟಗಳು ಬಹು ವಿದಥ ಸಹಾಯ ನೀಡಿವೆ. ಈ ಪಶ್ಚಿಮ ಘಟ್ಟಗಳು ಹಲವೆಡೆ ಕಡಲಿಗೆ ಚಾಚಿ ನಿಂತಿವೆ. ಹೀಗೆ ಕಡಲಿಗಿಳಿದಿರುವ ಪರ್ವತಗಳು ಅರ್ಧಚಂದ್ರಾಕೃತಿಯಲ್ಲಿ ಬಾಗಿಕೊಂಡಿವೆ. ಇದರಿಂದ ಕಡಲ ನೀರು ಒಳನುಗ್ಗಿ ಬಂದರುಗಳು ಕೊಲ್ಲಿಯಾಕಾರವಾಗಿವೆ. ಇವು ಕಡಲೆಡೆಯಿಂದ ಬೀಸಿ ಬರುವ ಮಾರುತಗಳನ್ನು ಶಾಂತಗೊಳಿಸುತ್ತವೆ. ಹಾಗೇ ಇದು ಗಟ್ಟಿ ಲೆಟರೈಟ್ ಮಣ್ಣಿನಿಂದ ನಿರ್ಮಿತವಾದ ತಳದಿಂದ ಕೂಡಿರುವುದರಿಂದ ಬಂದರಿನಲ್ಲಿ ನೀರಿನ ಮಟ್ಟ ಏರು-ಪೇರಾಗದೇ ಶಾಶ್ವತವಾಗಿ ಒಂದೇ ಮಟ್ಟದಲ್ಲಿ ಇರುತ್ತದೆ.

ಕಡಲಲ್ಲಿ ನಿಂತಿರುವ ದ್ವೀಪಗಳು ಬಂದರಿಗೆ ಬಹುವಿಧದ ಸಹಾಯ ನೀಡುತ್ತಿವೆ. ಮುಖ್ಯವಾಗಿ ಕಡಲೆಡೆಯಿಂದ ಬೀಸಿ ಬರುವ ಮಾರುತಗಳಿಗೆ ತಡೆಯೊಡ್ಡುತ್ತವೆ. ತೆರೆಗಳು ಹೂಳಿನೊಂದಿಗೆ ಕಡಲೆಡೆ ಬರದಂತೆ ತಡೆಯುತ್ತವೆ. ವ್ಯಾಪಾರಿ ಹಡಗುಗಳಿಗೆ ತಾತ್ಕಾಲಿಕ ತಂಗುದಾಣದಂತೆ ಈ ದ್ವೀಪಗಳು ಕಾರ್ಯ ನಿರ್ವಹಿಸುತ್ತವೆ. ಇಲ್ಲಿ ದೊರೆಯುವ ಸಿಹಿ ನೀರು

ವ್ಯಾಪಾರಿ ಹಡಗುಗಳಿಗೆ ತುಂಬಾ ಉಪಕಾರಿಯಾಗಿತ್ತು. ಹಾಗೆ ಹಲವು ಸಂದರ್ಭದಲ್ಲಿ ಸರಕು ಸಂಗ್ರಹಕ್ಕೆ ಇವು ಸಹಾಯ ಮಾಡುತ್ತಿದ್ದವು.

ತೀರದ ಬಳಿಯಲ್ಲಿ ಕಡಲಿಗೆ ಚಾಚಿರುವ ಎತ್ತರ ಶಿಖರಗಳು ದಾರಿ ದೀಪದಂತಿದ್ದವು. ಹಲವು ಸಂದರ್ಭಗಳಲ್ಲಿ ಅವುಗಳ ತುದಿಯಲ್ಲಿ ದೀಪಗಳನ್ನು ಬೆಳಗಿಸಿ ಕಡಲಲ್ಲಿರುವ ಹಡಗುಗಳಿಗೆ ಮಾರ್ಗದರ್ಶನ ಮಾಡುತ್ತಿದ್ದರು.

ಕರಾವಳಿಯ ತೀರದ ಉದ್ದಕ್ಕೂ ಇರುವ ಬಂದರುಗಳಿಗೆ ಇನ್ನೊಂದು ಬಹುಮುಖ್ಯ ಕೊಡುಗೆಗಳೆಂದರೆ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಕಡಲನ್ನು ಸೇರುವ ನದಿಗಳು. ಈ ನದಿಗಳು ಮುಖಜ ಪ್ರದೇಶದಲ್ಲಿ ಶಾಂತವೂ, ವಿಸ್ತಾರವೂ ಆಗಿ ಕಡಲು ಸೇರುತ್ತವೆ. ಇಲ್ಲಿ ಹಲವು ದೊಡ್ಡ ಹಡಗುಗಳನ್ನು ಏಕ ಕಾಲದಲ್ಲಿ ಲಂಗರು ಮಾಡಬಹುದಾಗಿತ್ತು.

ಪಶ್ಚಿಮ ಘಟ್ಟಗಳಲ್ಲಿ ನೈಸರ್ಗಿಕವಾಗಿ ಬೆಳೆಯುತ್ತಿದ್ದ ಮಸಾಲೆ ದಿನಿಸು, ಮರಮಟ್ಟು ಹಾಗೂ ಪ್ರಾಣಿ, ಪಕ್ಷಿಗಳನ್ನು ಈ ನದಿಗಳ ಮೂಲಕ ದೊಡ್ಡ ದೊಡ್ಡ ದೋಣಿಗಳಲ್ಲಿ ಬಂದರಿಗೆ ಸಾಗಿಸಲು ಅನುಕೂಲವಾಗಿತ್ತು. ಹಾಗೇ ಹೊರನಾಡಿನಿಂದ ಬಂದ ಸರಕನ್ನು ಹಿನ್ನಾಡಿಗೆ ಸಾಗಿಸಲು ಈ ನದಿ ತೊರೆಗಳು ಸಹಾಯಕವಾಗಿದ್ದವು.

ಈ ಬಂದರು ಪಟ್ಟಣಗಳು ರಾಜಧಾನಿ ಪಟ್ಟಣ, ವ್ಯಾಪಾರಿ ಪಟ್ಟಣ, ಧಾರ್ಮಿಕ ಕೇಂದ್ರ, ಆಡಳಿತ ಕೇಂದ್ರಗಳಾಗಿದ್ದವು. ಈ ಎಲ್ಲ ಬಗೆಯ ಬಂದರು ಪಟ್ಟಣಗಳಲ್ಲಿ ವರ್ತಕರಿಗೆ ಅನುಕೂಲ ನೀಡುವ ಏಕಕಾಲದಲ್ಲಿ ಹಲವು ಹಡಗುಗಳನ್ನು ಲಂಗರು ಮಾಡಲು ಸ್ಥಳ, ಸರಕು-ಸಂಗ್ರಹಕ್ಕೆ ವಿಶಾಲವಾದ ಸ್ಥಳಗಳು, ಬಂದರಿನ ಹೊರ ವಲಯದಲ್ಲಿ ಕೈಗಾರಿಕೆಗಳು ಮತ್ತು ಕೃಷಿ ಮಾಡುವ ವಿಶಾಲ ಗದ್ದೆಗಳಿದ್ದವು. ಈ ಎಲ್ಲ ಬಂದರುಗಳಲ್ಲಿ ಒಂದೇ ಸಮಯದಲ್ಲಿ ಹಡಗುಗಳು ಒಳ ಬರಲು ಹಾಗೂ ಹೊರ ಹೋಗಲು ಪ್ರತ್ಯೇಕ ಮಾರ್ಗಗಳಿದ್ದವು.

ಹೀಗೆ ಕರಾವಳಿಯ ಬಂದರು ಪಟ್ಟಣಗಳು ನೈಸರ್ಗಿಕವಾದ ವಿಶಿಷ್ಟವಾದ ಸಾಮಾನ್ಯ ಲಕ್ಷಣಗಳನ್ನು ಹೊಂದಿದ್ದವು.

ಕೊನೆ ಟಿಪ್ಪಣಿಗಳು

೧. ಕರ್ನಾಟಕ ರಾಜ್ಯ ಗೈಜೆಟಿಯರ್ ಉತ್ತರ ಕನ್ನಡ ಜಿಲ್ಲಾ ಗೈಜೆಟಿಯರ್ (ಸಂ), ಸೂರ್ಯನಾಥ ಕಾಮತ್ ಯು, ಪುಟ೨

೨. ಅದೇ, ಪುಟ ೬.

೩. ಕಲ್ಲೂರ್ ಕೃಷ್ಣಕುಮಾರ್, ಕಸ್ತೂರಿ, ಪುಸ್ತಕ ವಿಭಾಗ ಮೇ ೧೯೮೭ ಪುಟ ೧೧೧.

೪. ಉತ್ತರ ಕನ್ನಡ ಜಿಲ್ಲಾ ಗೈಜೆಟಿಯರ್ (ಸಂ), ಸೂರ್ಯನಾಥ ಕಾಮತ್ ಯು. ಪುಟ ೧೧.

೫. ಅದೇ, ಪುಟ ೧೦೧.

೬. ಶೆಟ್ಟರ್ ಷ., ಶಂಗಂ ತಮಿಳಗಂ ಹಾಗೂ ಕನ್ನಡ ನಾಡುನುಡಿ, ಪುಟ ೪೮.

೭. ಅದೇ, ಪುಟ ೬೯.

೮. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ. ೧, ಪುಟ ೨೧.

೯. ಜಯಪ್ಪಗೌಡ ಡಿ.ಎಸ್., ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಪುಟ ೧೭

೧೦. ಕಸ್ತೂರಿ, ಪುಸ್ತಕ ವಿಭಾಗ, ಮೇ ೧೯೮೭ ಪುಟ ೧೧೪.

೧೧. ಅದೇ, ಪುಟ ೧೧೪.

೧೨. ಅದೇ, ಪುಟ ೧೧೫.

೧೩. ಅದೇ, ಪುಟ ೧೧೬.

೧೪. ಅದೇ, ಪುಟ ೧೧೬.

೧೫. ಕರ್ನಾಟಕ ರಾಜ್ಯ ಗೈಜೆಟಿಯರ್ ಉತ್ತರ ಕನ್ನಡ ಜಿಲ್ಲಾ ಗೈಜೆಟಿಯರ್ (ಸಂ), ಸೂರ್ಯನಾಥ ಕಾಮತ್ ಯು, ಪುಟ ೧೧

೧೬. ಕಸ್ತೂರಿ, ಮೇ ೧೯೮೭ ಪುಟ ೧೧೭.

೧೭. ಕಸ್ತೂರಿ, ಮೇ ೧೯೮೭ ಪುಟ ೧೧೭.

೧೮. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ. ೧, ಪುಟ ೨೮.

೧೯. ಜಯಪ್ಪಗೌಡ ಡಿ.ಎಸ್., ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಪುಟ ೧೯.

೨೦. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ. ೧, ಪುಟ ೧೨.

೨೧. ಅದೇ, ಪುಟ ೧೩.

೨೨. ಅದೇ, ಪುಟ ೬೪.

೨೩. ಅದೇ, ಪುಟ ೭೪–೭೫.

೨೪. ಅದೇ, ಪುಟ ೬೦.

೨೫. ಅದೇ, ಪುಟ ೩೬.

೨೬. ಶೆಟ್ಟರ್ ಷ., ಶಂಗಂ ತಮಿಳಗಂ ಹಾಗೂ ಕನ್ನಡ ನಾಡುನುಡಿ, ಪುಟ ೮೬

೨೭. ಅದೇ, ಪುಟ ೮೯

೨೮. ಅದೇ, ಪುಟ ೮೯

೨೯. ಈ ಕುರಿತು ಐತಿಹ್ಯ ಒಂದು ಈ ರೀತಿ ಪ್ರಚಲಿತದಲ್ಲಿದೆ. ಅಂಕೋಲಾ ಎಂಬ ಹಗುರವು, ಗಟ್ಟಿಯೂ ಆದ ಮರದಿಂದ ಹಡಗುಗಳನ್ನು ನಿರ್ಮಿಸಿಕೊಂಡು ಹೋದವರೆ ಅಂಕೊರ್‌ವಾಟ್ ನಿರ್ಮಿಸಿದ್ದರು.

೩೦. ಜೋಷಿ ವಿ.ಎ., ಅಂಕೋಲಾ ತಾಲೂಕಾ ದರ್ಶನ, ಪುಟ ೩.

೩೧. ಹೆಗಡೆ ಗೋಪಾಲಕೃಷ್ಣ, ಅಘನಾಶಿನಿ, ಪುಟ ೧೩

೩೨. ಇತ್ತಿಚೆಗೆ (೨೦೧೩) ರೈಲ್ವೆ ಬಜೇಟ್ ಸಂದರ್ಭದಲ್ಲಿ ರಾಜ್ಯದ ಹಲವು ಗಣ್ಯರು ಅಂಕೋಲಾ–ಹುಬ್ಬಳ್ಳಿಯ ಮಧ್ಯ ರೈಲು ಸಂಚಾರಕ್ಕೆ ಹಳಿ ಜೋಡಿಸುವಂತೆ ಒತ್ತಾಯಿಸಿದ್ದರು. ಇವರು ಹುಬ್ಬಳ್ಳಿ ಅಂಕೋಲಾ ಮಧ್ಯದಲ್ಲಿ ನಿಸರ್ಗವೆ ಪಶ್ಚಿಮ ಘಟ್ಟಗಳಲ್ಲಿ ಪ್ರಯಾಣಕ್ಕೆ ಸುಲಭವಾದ ಕಣಿವೆ ಮಾರ್ಗ ನಿರ್ಮಿಸಿರುವುದನ್ನು ಉದಾಹರಣೆಯಾಗಿ ನೀಡಿದ್ದಾರೆ. ಸಂಯುಕ್ತ ಕರ್ನಾಟಕ ಪುಟ ೨ ದಿನಾಂಕ ೬–೩–೨೦೧೩.

೩೩. ನಾಯಕ ಸದಾನಂದ, ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ, 'ಹೈವೆಯ ಐತಿಹ್ಯ' ಸಂ ಪುಟ–೬೦

೩೪. ಪ್ರವಾಸಿ ಕಂಡ ಇಂಡಿಯಾ, ಸಂ. ೧, ಪುಟ ೬೨

೩೫. ಹೆಗಡೆ ಗೋಪಾಲ ಕೃಷ್ಣ, ಅಘನಾಶಿನಿ, ಪುಟ ೧

೩೬. ಅದೇ, ಪುಟ ೭

೩೭. ಅದೇ, ಪುಟ ೧೪

೩೮. ಭಟ್ಟ ಗುರುರಾಜ ಪಿ., ತುಳುನಾಡು ಪುಟ ೧೬

೩೯. ಭಟ್ಟ ಜಿ.ಎಸ್., ಕುಮಟಾ ತಾಲೂಕು ದರ್ಶನ, ಪುಟ ೧೩

೪೦. ಅದೇ, ಪುಟ ೧೯

೪೧. ಗುರುವ ಎನ್.ಆರ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೬

೪೨. ಉತ್ತರ ಕನ್ನಡ ಜಿಲ್ಲಾ ಗ್ಯೆಜೆಟಿಯರ್ (ಸಂ), ಸೂರ್ಯನಾಥ ಕಾಮತ್, ಪುಟ ೬೬

೪೩. ಅದೇ, ಪುಟ ೬೮

೪೪. ವಸಂತ ಮಾಧವ ಕೆ.ಜಿ., ಚೀನಾ ಹಾಗೂ ಕರ್ನಾಟಕದ ಕರಾವಳಿ, ಥರ್ಡ್‌ವರ್ಡ್ ಪುಟ ೨೭

೪೫. ಉತ್ತರ ಕನ್ನಡ ಜಿಲ್ಲಾ ಗ್ಯೆಜೆಟಿಯರ್ (ಸಂ), ಸೂರ್ಯನಾಥ ಕಾಮತ್, ಪುಟ ೪೮

೪೬. ಗುರುವ ಎನ್.ಆರ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೨೮

೪೭. ಗೋಕರ್ಣದ ತಾಮ್ರ ಶಾಸನಗಳು, (ಸಂ) ಗುಂಡಾ ವೆಂಕಟೇಶ ಜ್ಯೋಯಿಶ್ ಪುಟ ೩೬

೪೮. ಭಟ್ಟ ಸೂರಿ ಕೆ.ಜಿ., ಗೇರಸೊಪ್ಪೆಯ ಜೈನವಾಸ್ತು ಮತ್ತು ಮೂರ್ತಿಗಳು, ಪುಟ

೪೯. ಅದೇ, ಪುಟ ೩೦

೫೦. ಅದೇ, ಪುಟ ೩೩

೫೧. ಶೆಟ್ಟರ್ ಷ., ಶಂಗಂ ತಮಿಳಗಂ ಹಾಗೂ ಕನ್ನಡ ನಾಡುನುಡಿ, ಪುಟ ೪೭

೫೨. ಗುರುವ ಎನ್.ಆರ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೧೭.

೫೩. ಉತ್ತರ ಕನ್ನಡ ಜಿಲ್ಲಾ ಗೈಜೆಟಿಯರ್ (ಸಂ), ಸೂರ್ಯನಾಥ ಕಾಮತ್(ಸಂ) ಪುಟ೩೭

೫೪. ಗುರುವ ಎನ್.ಆರ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೧೯

೫೫. ಹೊನ್ನಾವರ ಒಂದು ಚಾರಿತ್ರಿಕ ನೋಟ ಸುರೇಶ ತಾಂಡೇಲ ಕರ್ನಾಟಕಾಸ್ ಓವರ್ಸಿಸ್ ಕಾಂಟೆಕ್ಟ್ಸ್ ಆಂಡ್ ಟ್ರೇಡ್ ಥ್ರೋದ ಏಜಸ್ಸ್ (ಸಂ), ಸುಬ್ರಮ್ಮಣ್ಯ ಭಟ್ಟ ೨೦೧೨ ಪುಟ ೧೧೭

೫೬. ಸುರೇಶ ತಾಂಡೇಲ, ಸಂಯುಕ್ತ ಕರ್ನಾಟಕ, ಹೈಗುಂದ ಒಂದು ಐತಿಹಾಸಿಕ ದ್ವೀಪ, ೧೭-೭-೧೯೯೧ ಪುಟ ೬

೫೭. ಸುರೇಶ ತಾಂಡೇಲ, ಹೊನ್ನಾವರ ಒಂದು ಚಾರಿತ್ರಿಕ ನೋಟ, ಕರ್ನಾಟಕಾಸ್ ಓವರ್ಸಿಸ್ ಕಾಂಟೆಕ್ಟ್ಸ್ ಆಂಡ್ ಟ್ರೇಡ್ ಥ್ರೋ ದ ಏಜಸ್ಸ್ (ಸಂ) ಸುಬ್ರಮ್ಮಣ್ಯ ಭಟ್ಟ ೨೦೧೨ ಪುಟ ೧೧೮.

೫೮. ಕಮಲಾ ಹಂಪಾನಾ, ಮಹಾಮಂಡಲೇಶ್ವರಿ ರಾಣಿ ಚೆನ್ನಬೈರಾದೇವಿ, ಪುಟ ೧೭

೫೯. ವೆಂಕಟಸ್ವಾಮಿ ಎಮ್., ಕೋಲಾರದ ಚಿನ್ನದ ಗಣಿಗಳು, ಪುಟ ೧೫

೬೦. ಶೆಟ್ಟರ್ ಷ., ಶಂಗಂ ತಮಿಳಗಂ ಹಾಗೂ ಕನ್ನಡ ನಾಡುನುಡಿ, ಪುಟ ೭೪

೬೧. ಅದೇ, ಪುಟ ೭೫

೬೨. ಪ್ರವಾಸಿ ಕಂಡ ಇಂಡಿಯಾ, ಸಂ., ೧ ಪುಟ ೬೨

೬೩. ಅದೇ, ಪುಟ ೮೯

೬೪. ಅದೇ, ಪುಟ ೯೦

೬೫. ಅದೇ, ಪುಟ ೧೦೬-೦೧೭

೬೬. ಚಕ್ರವರ್ತಿ ಡಿ, ಹಿಮಾಲಯವನ್ನು ಆಳಿದ ಕರ್ನಾಟಕ ಸೇನರು ಮೂಲ (ಅನು) ಸದಾನಂದ ಕನವಳ್ಳಿ ಪುಟ ೧೦

೬೭. ಜಮೀರುಲ್ಲಾ ಷರಿಫ್, ನವಾಯತರು, ಪುಟ ೨೬

೬೮. ರೈ ಮೋಹನ್‌ಕೃಷ್ಣ ಕೆ., ಪುಟ ೫೧

೬೯. ಭಟ್ಟ ಗುರುರಾಜ ಪಿ., ತುಳುನಾಡು, ಪುಟ ೨೭

೭೦. ಶೆಟ್ಟಿ ಎಸ್.ಡಿ., ತುಳುನಾಡಿನಲ್ಲಿ ಜೈನಧರ್ಮ, ಪುಟ ೩೯

೭೧. ರಘುಪತಿ ಭಟ್ಟ ಕೆಮ್ಮೂತ್ತೂರು., ತುಳುನಾಡಿನ ಸ್ಥಳನಾಮಗಳು, ಪುಟ ೧೪

೭೨. ಐಗಳ ಗಣಪತಿ ರಾವ್, ಪ್ರಾಚೀನ ತುಳುನಾಡು, ಪುಟ ೨೭

೭೩. ಗುರುರಾಜ್ ಭಟ್ಟ ಪಾರೂರು, ತುಳುನಾಡು, ಪುಟ ೬.

೭೪. ಅದೇ, ಪುಟ ೭

೭೫. ಶೆಟ್ಟಿ ಎಸ್.ಡಿ., ತುಳುನಾಡಿನಲ್ಲಿ ಜೈನಧರ್ಮ, ಪುಟ ೩೫

೭೬. ಅದೇ, ಪುಟ ೪೩

೭೭. ಚಕ್ರವರ್ತಿ ಡಿ.ಬಿ (ಅನು), ಸದಾನಂದ ಕನವಳ್ಳಿ, ಹಿಮಾಲಯವನ್ನು ಆಳಿದ ಕರ್ನಾಟಕ ಸೇನರು. ಪುಟ ೧೭.

೭೮. ಅದೇ ಪುಟ ೨೦.

೭೯. ಶೆಟ್ಟಿ ಎಸ್.ಡಿ., ತುಳುನಾಡಿನಲ್ಲಿ ಜೈನಧರ್ಮ, ಪುಟ ೩೫.

೮೦. ಪುಂಡಿಕ್ಕೈ ಗಣಪಯ್ಯ ಭಟ್ಟ, ತುಳುನಾಡಿನ ಪ್ರಾಗೇತಿಹಾಸ ದಕ್ಷಿಣ ಕನ್ನಡ ಜಿಲ್ಲಾ ಇತಿಹಾಸ ಮತ್ತು ಪುರಾತತ್ವ, ಪುಟ ೧೬.

೮೧. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಅರಸು ಮನೆತನಗಳು, ಪುಟ ೫೨.

೮೨. ವಸಂತ ಶೆಟ್ಟಿ ಬಿ., ಬಸರೂರು ಒಂದು ಅಧ್ಯಯನ, ಕುಂದಪ್ರಭ ೧೯೯೭ ಪುಟ ೨೧.

೮೩. ಅದೇ, ಪುಟ ೨೨.

೮೪. ಗುರುರಾಜ್ ಭಟ್ಟ ಪಾದೂರು, ತುಳುನಾಡು, ಪುಟ ೨೭.

೮೫. ಅದೇ, ಪುಟ ೧೭.

೮೬. ರಮೇಶ ಕೆ.ವಿ., ಹಾಗೂ ಶರ್ಮಾ ಎಮ್.ಜಿ., ತುಳುನಾಡಿನ ಇತಿಹಾಸ, ಪುಟ ೧೭.

೮೭. ಅದೇ, ಪುಟ ೧೮.

೮೮. ಪ್ರವಾಸಿ ಕಂಡ ಇಂಡಿಯಾ, ಸಂ ೧ ಪುಟ ೪೭.

೮೯. ಅದೇ, ಪುಟ ೪೨.

೯೦. ಗಣಪಯ್ಯ ಭಟ್ಟ ಪುಂಡಿಕ್ಕೈ, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಗೇತಿಹಾಸ ಕಾಲ, ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (ಸಂ), ಆರ್. ಗೋಪಾಲ ಪುಟ ೧೭

೯೧. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಅರಸು ಮನೆತನಗಳು, ಪುಟ ೮೭.

೯೨. ಅದೇ, ಪುಟ ೮೮.

೯೩. ಅದೇ, ಪುಟ ೮೯.

೯೪. ರಮೇಶ ಕೆ.ವಿ., (ಸಂ), ತುಳುನಾಡಿನ ಶಾಸನಗಳು, ಪುಟ ೪೬.

೯೫. ಅದೇ, ಪುಟ ೪೭.

೯೬. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಅರಸು ಮನೆತನಗಳು, ಪುಟ ೮೮
ಗಣಪಯ್ಯ ಭಟ್ಟ ಪುಂಡಿಕೈ, ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಗೇತಿಹಾಸ ಕಾಲ, ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ (ಸಂ), ಆರ್. ಗೋಪಾಲ ಪುಟ ೨೦.

೯೭. ಪ್ರವಾಸಿ ಕಂಡ ಇಂಡಿಯಾ, ಸಂ ೧ ಪುಟ ೧೮.

೯೮. ಗುರುರಾಜ್ ಭಟ್ಟ ಪಿ., ತುಳುನಾಡು, ಪುಟ ೪೨.

೯೯. ವಸಂತ ಶೆಟ್ಟಿ ಬಿ., ಇತಿಹಾಸದಲ್ಲಿ ಬಾರ್ಕೂರು, ಕುಂದದರ್ಶನ, ೧೯೮೬ ಪುಟ ೨.

೧೦೦. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಅರಸು ಮನೆತನಗಳು, ಪುಟ ೭.

೧೦೧. ಅದೇ, ಪುಟ ೨೫.

೧೦೨. ಅದೇ, ಪುಟ ೧.

೧೦೩. ಅದೇ, ಪುಟ ೧೦.

೧೦೪. ಅದೇ, ಪುಟ ೧೨.

೧೦೫. ಪ್ರವಾಸಿ ಕಂಡ ಇಂಡಿಯಾ, ಭಾಗ ೧ ಪುಟ ೩೨.

೧೦೬. ಅದೇ, ಪುಟ ೩೩.

೧೦೭. ಶೆಟ್ಟರ್ ಷ., ಶಂಗಂ ತಮಿಳಗಂ ಹಾಗೂ ಕನ್ನಡ ನಾಡುನುಡಿ, ಪುಟ ೬೩.

೧೦೮. ಪ್ರವಾಸ ಕಂಡ ಇಂಡಿಯಾ, ಭಾಗ ೧ ಪುಟ ೩೨.

೧೦೯. ಗುರುರಾಜ್ ಭಟ್ಟ ಪಿ., ತುಳುನಾಡು, ಪುಟ ೬೪.

೧೧೦. ಪ್ರವಾಸಿ ಕಂಡ ಇಂಡಿಯಾ, ಭಾಗ ೧ ಪುಟ ೧೭

೧೧೧. ಅದೇ, ಪುಟ ೧೬.

೧೧೨. ಅದೇ, ಪುಟ ೨೦.

೧೧೩. ಐಗಳ ಗಣಪತಿ ರಾವ್, ತುಳುನಾಡಿನ ಪ್ರಾಚೀನ ಇತಿಹಾಸ, ಪುಟ ೧೧೪.

೧೧೪. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಇತಿಹಾಸ, ಪುಟ ೨೭.

೧೧೫. ಬಂಗಾಡಿಯ ಬಂಗ ಅರಸರು ಸಂಕ್ಷಿಪ್ತ ಅವಲೋಕನ, ರವಿರಾಜ ಬಲ್ಲಾಳ ಬಿ., ಕರಾವಳಿ ಕರ್ನಾಟಕದ ಜೈನ ಅರಸು ಮನೆತನಗಳು ಸಾಂಸ್ಕೃತಿಕ ಅಧ್ಯಯನ (ಸಂ), ಚಿನ್ನಸ್ವಾಮಿ ಸೋಸಲೆ ಎನ್., ಪುಟ ೪೪೩.

೧೧೬. ಅದೇ, ಪುಟ ೪೪೭.

೧೧೭. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಅರಸು ಮನೆತನಗಳು, ಪುಟ ೨.

೧೧೮. ಅದೇ, ಪುಟ ೨

೧೧೯. ಅದೇ, ಪುಟ ೩

೧೨೦. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಇತಿಹಾಸ, ಪುಟ ೨೬.

೧೨೧. ಅದೇ, ಪುಟ ೨೦, ೨೧

೧೨೨. ಅದೇ, ಪುಟ ೩೨, ೩೩

೧೨೩. ಅದೇ, ಪುಟ ೩೪

೧೨೪. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಅರಸು ಮನೆತನಗಳು, ಪುಟ ೧೦

೧೨೫. ಅದೇ, ಪುಟ ೩೪.

೧೨೬. ಅದೇ, ಪುಟ ೩೬.

೧೨೭. ಅದೇ, ಪುಟ ೩೭.

೧೨೮. ಅದೇ, ಪುಟ ೩೮.

೧೨೯. ಅದೇ, ಪುಟ ೩೯.

೧೩೦. ಅದೇ, ಪುಟ ೪೦.

೧೩೧. ಅದೇ, ಪುಟ ೫೧

೧೩೨. ಅದೇ, ಪುಟ ೫೨.

೧೩೩. ಅದೇ, ಪುಟ ೫೩.

೧೩೪. ಅದೇ, ಪುಟ ೫೪.

೧೩೫. ಅದೇ, ಪುಟ ೬೩.

೧೩೬. ರಮೇಶ ಕೆ.ವಿ., ಶಾಸನ ಸಂಗ್ರಹ, ಪುಟ ೨೭.

೧೩೭. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಅರಸು ಮನೆತನಗಳು, ಪುಟ ೧೭

೧೩೮. ಅದೇ, ಪುಟ ೬೩.

೧೩೯. ಶೆಟ್ಟಿ ಎಸ್.ಡಿ., ತುಳುನಾಡಿನಲ್ಲಿ ಜೈನ ಧರ್ಮ, ಪುಟ ೩೭

೧೪೦. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಅರಸು ಮನೆತನಗಳು, ಪುಟ ೩೭

೧೪೧. ರಮೇಶ ಕೆ.ವಿ., ಶರ್ಮಾ ಎಮ್.ಜಿ., ತುಳುನಾಡಿನ ಇತಿಹಾಸ ಪುಟ ೩೭

೧೪೨. ಅದೇ, ಪುಟ ೩೭.

೧೪೩. ಅದೇ, ಪುಟ ೩೭

ಅಧ್ಯಾಯ : ಮೂರು

ಕರ್ನಾಟಕ ಕರಾವಳಿಯ ಚಾರಿತ್ರಿಕ ಹಿನ್ನೆಲೆ

ಅಧ್ಯಾಯ : ಮೂರು

ಬಂದರುಗಳ ಚಾರಿತ್ರಿಕ ಹಿನ್ನೆಲೆ

ಪೀಠಿಕೆ

ಕರ್ನಾಟಕದ ಬಂದರುಗಳು ಪಶ್ಚಿಮದತ್ತ ಮುಕ್ತವಾಗಿ ತೆರೆದಿರುವ ಹೆಬ್ಬಾಗಿಲುಗಳು. ಪಶ್ಚಿಮ ಕರಾವಳಿಯ ಬಂದರುಗಳು 'ಸಾಂಬಾರ ದಿನಿಸುಗಳ ಮಾರ್ಗ' ಎಂದೇ ಪ್ರಖ್ಯಾತವಾಗಿವೆ. ಈ ಬಂದರುಗಳ ಮಹತ್ವ ಅರಿತ ದೇಶೀಯ ಹಾಗೂ ಕರ್ನಾಟಕದ ಅರಸು ಮನೆತನಗಳು ಒಂದಲ್ಲ ಒಂದು ರೀತಿಯಲ್ಲಿ ಅವುಗಳನ್ನು ತಮ್ಮದಾಗಿಸಿಕೊಳ್ಳಲು ನಿರಂತರ ಪ್ರಯತ್ನಿಸಿದ್ದಾರೆ.

ಸಿಂಧು ನಾಗರಿಕತೆಯೊಂದಿಗೂ ಕನ್ನಡನಾಡಿನ ಬಂದರುಗಳು ವಾಣಿಜ್ಯ ಸಂಪರ್ಕ ಹೊಂದಿದ್ದವು. ಹಾಗೇ ನಂದರು, ಮೌರ್ಯ ಅಶೋಕ ಮತ್ತು ಶಾತವಾಹನರಾದಿಯಾಗಿ ಚೇರ, ಪಾಂಡ್ಯ, ಕದಂಬರು ಮತ್ತು ನಂತರದ ಹದಿನಾಲ್ಕನೇ ಶತಮಾನದವರೆಗೆ ಆಳಿದ ಎಲ್ಲ ಅರಸು ಮನೆತನಗಳು ಒಂದಲ್ಲ ಒಂದು ರೀತಿಯಲ್ಲಿ ಈ ಬಂದರುಗಳನ್ನು ಆಳಲು ಪ್ರಯತ್ನಿಸಿವೆ. ಮೌರ್ಯ ಅಶೋಕನ ದಕ್ಷಿಣದ ಗಡಿಗಳನ್ನು ನೋಡಿದಾಗ ಹಾಗೂ ಆತ ಕೈಗೊಂಡಿದ್ದ ಏಕೈಕ ಯದ್ದವಾದ ಕಳಿಂಗದ ಮೇಲಿನ ದಿಗ್ವಿಜಯ ಬಂದರುಗಳ ಮಹತ್ವವನ್ನು ಸಾರುತ್ತವೆ. ಮುಂದೆ ಖಾರವೇಲ ಪೂರ್ವದ ಬಂದರುಗಳತ್ತ ದಿಗ್ವಿಜಯ ಸಾಧಿಸಲು ಹೊರಟಿದ್ದು, ಪಶ್ಚಿಮ ತೀರದ ಬಂದರುಗಳೆಡೆ ಶಾತವಾಹನರು ತಮ್ಮ ರಾಜ್ಯವಿಸ್ತರಿಸಿದ್ದು ನೋಡಿದಾಗ ಈ ಬಂದರುಗಳ ಮಹತ್ವ ಅರಿವಾಗುತ್ತದೆ. ಚೇರ, ಪಾಂಡ್ಯ, ಹಾಗೂ ಚೋಳರು ಪೂರ್ವ ಕರಾವಳಿಯಿಂದ ರಾಜ್ಯ ಕಟ್ಟಿ ಬೆಳೆಸಿದ್ದರು. ಬಂದರುಗಳ ಮಹತ್ವ ತಿಳಿಸುವ ಇನ್ನೊಂದು ಉದಾಹರಣೆ ಕಡಲೋತ್ತರ ವ್ಯಾಪಾರ ತರುವ ಲಾಭ ಹಾಗೂ ಅಂತರಾಷ್ಟ್ರೀಯ ಗೌರವ ಇವುಗಳನ್ನು ಗುರುತಿಸಿದ ಈ ರಾಜವಂಶಗಳು ಬಂದರುಗಳ ಮೇಲೆ ಹತೋಟಿ ಸಾಧಿಸಿ ಅಪೂರ್ವ ಲಾಭಗಳಿಸಲು ಶ್ರಮಿಸಿವೆ. ಬಂದರೊಂದಿಗೆ ಕೂಡಿರುವ ರಾಜಕೀಯ ಸಂಬಂಧ, ಸಂಘರ್ಷ-ಯುದ್ಧ ಹಾಗೂ ವಾಣಿಜ್ಯಗಳು ಬಹು ಕುತೂಹಲಕಾರಿಯಾಗಿವೆ.

ಭಾರತದ ಪಶ್ಚಿಮ ಕರಾವಳಿಯು ಪಶ್ಚಿಮ ಘಟ್ಟದ ನೇರದಲ್ಲಿ ೧೪೦೦ ಕಿ.ಮೀ ವರೆಗೆ ಹಾಗೂ ವಿಸ್ತಾರದಲ್ಲಿ ೧೦ ರಿಂದ ೮೦ ಕಿ.ಮೀ. ವರೆಗೆ ಹಬ್ಬಿದೆ. ಸರಿಸುಮಾರು ೬೪,೨೮೪ ಚ್ಚಚೌಕ ಪ್ರದೇಶ ಒಳಗೊಂಡಿದೆ. ಇದು ಮುಖ್ಯವಾಗಿ ಕೊಂಕಣ (ಮಹಾರಾಷ್ಟ್ರ) ಕೆನರಾ (ಕರ್ನಾಟಕ) ಮತ್ತು ಮಲಬಾರ್ (ಕೇರಳ) ತೀರ ಪ್ರದೇಶ ಎಂದು ವಿಭಾಗಿಸಲ್ಪಟ್ಟಿದೆ.

ಕರ್ನಾಟಕ ಕರಾವಳಿ-ಕೆನರಾ ಕರಾವಳಿ ಎಂದು ಹೆಸರು ಪಡೆದಿರುವ ಸರಿಸುಮಾರು ೩೨೦ ಕಿ.ಮೀ ವ್ಯಾಪ್ತಿಯು ನೈಸರ್ಗಿಕವಾಗಿ ಶ್ರೀಮಂತಿಕೆ ಹೊಂದಿರುವ ಪ್ರದೇಶ. ಕೆಲವೆಡೆ ಈ ಪಶ್ಚಿಮ

ಘಟ್ಟಗಳು ಕಡಲಿಂದಲೇ ಮೇಲೆದ್ದು ನಿಂತಿದ್ದರೆ ಇನ್ನೂ ಕೆಲವೆಡೆ ಕಡಲ ತೆರೆಗಳು ಬಂದು ಪಶ್ಚಿಮ ಘಟ್ಟದ ಬುಡವನ್ನು ಸೋಕುತ್ತವೆ. ಇನ್ನೂ ಕೆಲವೆಡೆ ತೀರ ಹಾಗೂ ಘಟ್ಟದ ನಡುವೆ ಅಗಲವಾದ ಮೈದಾನ ಪ್ರದೇಶವಿದೆ. ಹೀಗೆ ವೈವಿಧ್ಯಮಯವಾಗಿರುವ ಕಡಲು ಮತ್ತು ಘಟ್ಟದ ಸಂಬಂಧ ಇಲ್ಲಿ ಹೊಸ ಪರಿಸರ ಅಪರೂಪದ ಜೀವಜಾಲ ನಿರ್ಮಿಸಲು ಸಾಧ್ಯವಾಗಿದೆ. ತೀರ ಪ್ರದೇಶವು ಭೋರ್ಗರೆಯುವ ಆಳೆತ್ತರದ ತೆರೆಗಳೊಂದಿಗೆ ಬೀಸುವ ಕಡಲ ಗಾಳಿಯಿಂದ ಕೂಡಿದ್ದರೆ, ಇನ್ನೂ ಕೆಲವೆಡೆ ತೆರೆಗಳ ಉತ್ಪಾತ ಇಲ್ಲದ ಶಾಂತ-ಮಂದ ಮಾರುತದ ಪ್ರದೇಶಗಳಿಂದ ಕೂಡಿವೆ. ಇಂತಹ ಶಾಂತ ಪ್ರದೇಶಗಳಲ್ಲಿ ನಿರ್ಮಾಣವಾಗಿರುವ ಕೊಲ್ಲಿಯಲ್ಲಿ ವಿಶ್ವಕ್ಕೆಸಂಪರ್ಕ ಬೆಳೆಸಿದ ಬಂದರುಗಳು ನಿರ್ಮಾಣಗೊಂಡಿವೆ. ಈ ಬಂದರುಗಳು ಜಗತ್ತಿನ 'ಮುಕುಟಮಣಿ' ಗಳಂತೆ ಶೋಭಿಸುತ್ತಿವೆ. ತೀರಕ್ಕೆ ಬರುವ ಸರಕು ತುಂಬಿದ ಹಡಗುಗಳನ್ನು ಅಮ್ಮನ ಮಡಿಲು ಸೇರಿರುವ ಮಗುವಿನಂತೆ ಜೋಪಾನ ಮಾಡುತ್ತವೆ. ಇಂತಹ ಬಂದರುಗಳಲ್ಲಿ ತಮ್ಮ ರಾಜ್ಯಕಟ್ಟಿ, ಬಂದರುಗಳ ಮೂಲಕ ಬರುವ ವ್ಯಾಪಾರಿ ಲಾಭದಿಂದಲೇ ಸಾಮ್ರಾಜ್ಯ ನಿರ್ಮಿಸಿ ಆಳಿದ ರಾಜವಂಶಗಳ ಚರಿತ್ರೆ ಇಲ್ಲಿದೆ. ಕರ್ನಾಟಕವನ್ನಾಳಿದ ಎಲ್ಲಾ ಅರಸು ಮನೆತನಗಳು ಬಂದರುಗಳ ಮಹತ್ವ ಅರಿತಿದ್ದರು. ಬಂದರುಗಳ ಮೂಲಕ ನಡೆಯುತ್ತಿದ್ದ ವ್ಯಾಪಾರ ವಹಿವಾಟಿನಿಂದ ಬರುತ್ತಿದ್ದ ಲಾಭ ಮತ್ತು ಅಂತರಾಷ್ಟ್ರೀಯ ಗೌರವಗಳ ಮಹತ್ವ ಅರಿತಿದ್ದರು. ಹೀಗಾಗಿ ಎಲ್ಲಾ ಅರಸು ಮನೆತನಗಳು ಬಂದರುಗಳನ್ನು ನೇರವಾಗಿ ತಮ್ಮ ಸುಪರ್ದಿಗೆ ಒಳಪಡಿಸಿಕೊಳ್ಳಲು ಶ್ರಮಿಸಿದ್ದರು. ಅಥವಾ ಸ್ಥಳೀಯ ಸಾಮಂತರ ಮೂಲಕ ಬಂದರುಗಳ ಮೇಲೆ ಪ್ರಭುತ್ವ ಸಾಧಿಸಲು ಹೆಣಗಿದ್ದರು. ಇಂಥಹ ರಾಜಕೀಯ ಸಂಬಂಧವನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

೩.೧ ಸಾಮ್ರಾಜ್ಯಗಳ ಆಡಳಿತದಲ್ಲಿ ಕರ್ನಾಟಕದ ಬಂದರುಗಳು

ಕರಾವಳಿ ಕರ್ನಾಟಕವು ತೀರದಗುಂಟ ಸುಮಾರು ೩೨೦ ಕಿ.ಮೀ ಹಬ್ಬಿದ್ದು ಪೂರ್ವದತ್ತ ಉತ್ತರ ಕನ್ನಡ ಜಿಲ್ಲೆ, ಧಾರವಾಡ ಜಿಲ್ಲೆಯ ದಕ್ಷಿಣದ ಭಾಗಗಳು ಶಿವಮೊಗ್ಗಾ ಜಿಲ್ಲೆ ಹಾಗೂ ಚಿಕ್ಕಮಗಳೂರು ಜಿಲ್ಲೆ ಮತ್ತು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಒಳಗೊಂಡಿದೆ. ಹಲವು ಸಂದರ್ಭಗಳಲ್ಲಿ ಇದರ ಗಡಿಗಳು ಬದಲಾಗಿದ್ದರೂ ಗೋವಾ, ಇಂದಿನ ಮಹಾರಾಷ್ಟ್ರದ ದಕ್ಷಿಣದ ಭಾಗ ಮತ್ತು ಕೇರಳದ ಕಾಸರಕೋಡಗಳು ಕರಾವಳಿ ಕರ್ನಾಟಕದ ರಾಜಕೀಯ ಚರಿತ್ರೆಯೊಂದಿಗೆ ಬೆಸೆದುಕೊಂಡಿದ್ದವು.

ಕರಾವಳಿ ಕರ್ನಾಟಕದ ದಕ್ಷಿಣ ಪ್ರದೇಶವನ್ನು ತುಳುನಾಡೆಂದೂ[೧], ಉತ್ತರದ ಭಾಗ ಅಂದರೆ ಇಂದಿನ ಉತ್ತರ ಕನ್ನಡದ ಪ್ರದೇಶ-ಗೋವಾ ಒಳಗೊಂಡು ಗೋರಾಷ್ಟ್ರ[೨] ಎಂದು ಕರೆಯುತ್ತಿದ್ದರೆಂದು ಗುರುತಿಸಲಾಗಿದೆ. ಈ ಕರಾವಳಿ ಪ್ರದೇಶದ ಉಲ್ಲೇಖವು ಕೇರಳೋತ್ಪತ್ತಿ ಗ್ರಂಥ.

ಮಾರ್ಕಾಂಡೇಯಪುರಾಣ, ಈಜಿಪ್ಟ್‌ನ ಟಾಲೆಮಿಯ ಬರಹ[೩] ಹಾಗೂ ಅಶೋಕನ ಶಾಸನ[೪]ಗಳಲ್ಲಿ ಕಾಣಬಹುದಾಗಿದೆ. ಸ್ಕಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿ ಪರಶುರಾಮ ಕ್ಷೇತ್ರ ಎಂದು ಕರೆದದ್ದು ಈ ಕರಾವಳಿ ಭಾಗಕ್ಕೆ ಎಂದು ತಿಳಿಯುತ್ತದೆ. ಇದರಿಂದ ಕರಾವಳಿಯ ಪ್ರಾಚೀನತೆ ಪರಶುರಾಮನ ಕಾಲಕ್ಕೆ[೫] ಹೋಗುತ್ತದೆ. ಕ್ಷತ್ರಿಯರ ಸರ್ವನಾಶದ ಪ್ರತಿಜ್ಞೆಗೈದು ತನ್ನ ಪರಶುವನ್ನು ಬೀಸುತ್ತಾ ಹೊರಟ ಪರಶುರಾಮನು, ಇಪ್ಪತ್ತೊಂದು ಬಾರಿ ಕ್ಷತ್ರಿಯರನ್ನು ನಾಶಪಡಿಸಿ ಅವರ ಅಧೀನದಲ್ಲಿದ್ದ ಭೂಮಿಯನ್ನು ವಶಪಡಿಸಿಕೊಂಡು ಬ್ರಾಹ್ಮಣರಿಗೆ ದಾನ ನೀಡುತ್ತಾನೆ. ತಾನು ಗೆದ್ದ ಭೂಮಿಯನ್ನೆಲ್ಲಾ ದಾನ ನೀಡಿದ ಪರಶುರಾಮನಿಗೆ ಉಳಿಯಲು ಭೂಮಿಯೇ ಇಲ್ಲದಂತಾಗುತ್ತದೆ. ಹೀಗೆ ಭೂಹೀನನಾಗಿದ್ದ ಪರಶುರಾಮ ತಾನೊಂದು ನೆಲೆ ಕಂಡುಕೊಳ್ಳಲು ಹಪಹಪಿಸಿ ಅಲೆಯುತ್ತಿದ್ದಾಗ ಕಶ್ಯಪ ಋಷಿಯ ಮಾರ್ಗದರ್ಶನ ಪಡೆಯುತ್ತಾನೆ. ಋಷಿಯ ಸಲಹೆಯಂತೆ ಕಡಲ ಅಧಿಪತಿಯಾದ ವರುಣನಲ್ಲಿ ತನಗಾಗಿ ಕಡಲನ್ನು ಹಿಂದಕ್ಕೆ ಸರಿಸಿ ಭೂಮಿ ನೀಡುವಂತೆ ಬೇಡಿಕೊಳ್ಳುತ್ತಾನೆ. ಆಗ ವರುಣ ನೀಡಿದಸಲಹೆಯಂತೆ ಸಯ್ಯಾದ್ರಿಯನ್ನೇರಿ ತನ್ನ ಪರಶುವನ್ನು ಕಡಲಿನತ್ತ ಎಸೆಯುತ್ತಾನೆ. ಹೀಗೆ ಕೊಡಲಿ ಬಿದ್ದ ಪ್ರದೇಶದಲ್ಲಿ ನೀರು ಹಿಂದೆ ಸರಿದು ಭೂಮಿ ಮೇಲೇಳುತ್ತದೆ. ಈ ಪ್ರದೇಶವೇ ಈಗಿನ ಕರಾವಳಿ ಪ್ರದೇಶ ಎಂದು ಮೇಲೆಹೇಳಿದ ಪುರಾಣವು ತಿಳಿಸುತ್ತದೆ. ಇಂಥಹುದೇ ವಿವರ ನೀಡುವ ಕಥೆಗಳು ಮಹಾಭಾರತದ ವಿವಿಧ ಪರ್ವಗಳಲ್ಲಿ[೬] ಮತ್ತು ವಿಷ್ಣು ಪುರಾಣ[೭] ದಲ್ಲಿ ಬರುತ್ತವೆ. ಅಂತೆಯೇ ಪರಶುರಾಮನೊಂದಿಗೆ ಸಂಬಂಧ ಹೊಂದಿರುವ ಇನ್ನೂ ಕೆಲವು ಕಥೆಗಳು ಪ್ರಚಲಿತದಲ್ಲಿವೆ. ಬ್ರಹ್ಮಾಂಡಪುರಾಣವು ಗಂಗಾ ನದಿಯೊಂದಿಗೆ ಕರಾವಳಿಯ ಸಂಬಂಧ ಕಲ್ಪಿಸುತ್ತದೆ. ಗಂಗಾನದಿ ಉಕ್ಕಿ ಹರಿದಾಗ ಗೋಕರ್ಣದಿಂದ ಕೇರಳದವರೆಗಿನ ಭೂಮಿ ನೀರಿನಿಂದ ಆವರಿಸುತ್ತದೆ. ಆಗ ಅಲ್ಲಿದ್ದ ಸಾಧುಗಳು ಪರಶುರಾಮನ್ನು ಬಿನ್ನವಿಸಿಕೊಂಡಾಗ ತನ್ನ ಪರಶುವನ್ನು ಗೋಕರ್ಣದಿಂದ ದಕ್ಷಿಣಾಭಿಮುಖವಾಗಿ ಬೀಸಿದ್ದರಿಂದ ಭೂಮಿ ಸೃಷ್ಟಿಯಾಯಿತು ಎನ್ನಲಾಗುತ್ತದೆ. ಹೀಗೆ ಪರಶುರಾಮನಿಂದ ಸೃಷ್ಟಿಗೊಂಡ ಭೂಮಿಯನ್ನು ಏಳು ವಿಭಾಗಗಳಾಗಿಮಾಡಿ ಹೆಸರಿಸಲಾಗಿದೆ. ಸಪ್ತಕೊಂಕಣ, ಪರಕೊಂಕಣ, ಕೊಂಕಣ, ಪಶುಕ, ಆಲುಪ, ಮೂಷಿಕ, ಕೇರಳ ಮತ್ತು ಕೂಪಕ[೮] ಎಂಬ ಸಪ್ತ ಕೊಂಕಣಗಳು. ಅಶೋಕನ ಶಾಸನಗಳಲ್ಲಿ ಉಲ್ಲೇಖಿತವಾಗಿರುವ ಸತಿಯಪುತ್ರರು ತುಳುನಾಡಿನವರನ್ನು ಉಲ್ಲೇಖಿಸಲು ಬಳಸಿದ ಶಬ್ಧ ಎನ್ನುವ ಕುರಿತು ಸಾಕಷ್ಟು ಚರ್ಚೆಗಳಿವೆ. ಅಂತೆಯೇ ಗೋವಿಂದಪೈಯವರು ಶಾಂತಿಕಾ ಎಂಬ ಪ್ರದೇಶವನ್ನು ಇದೇ ತುಳುನಾಡೆಂದು ಹೇಳುತ್ತಾರೆ. ಈಜಿಪ್ಟ್‌ನ ಪ್ರವಾಸಿ ಟಾಲೆಮಿಯು ತನ್ನ ಪ್ರವಾಸಿಕಥನದಲ್ಲಿ ಉಲ್ಲೇಖಿಸಿದ ಒಲಖೊಯಿರಾವ್[೯] ಆಳ್ವಖೇಡ ಎಂದು ತಿಳಿಯಲಾಗಿದೆ. ಆಳ್ವಖೇಡವು ಆಳುಪರ ಆಡಳಿತಕ್ಕೆ ಒಳಪಟ್ಟ ಪ್ರದೇಶವನ್ನು ತಿಳಿಸುವುದರಿಂದ ಈಗಿನ ದಕ್ಷಿಣಕನ್ನಡ

ಹಾಗೂ ಉಡುಪಿಜಿಲ್ಲೆಗಳು ಆಳ್ವಖೇಡವಾಗಿತ್ತು ಎನ್ನುವುದು ಸ್ಪಷ್ಟ. ಮಣಿಮೆಖಲೈ ಹಾಗೂ ಶಂಗಂ ಕವಿಗಳು ಹೇಳುವ ಎರೆನಾಡುಗಳು ಕರ್ನಾಟಕದ ಕರಾವಳಿಯನ್ನು ಒಳಗೊಂಡಿತ್ತು[೧೦] ಎಂದು ನಂಬಲಾಗಿದೆ. ತಮಿಳಗಂ ಉತ್ತರಗಡಿಗೆ ಹೊಂದಿಕೊಂಡ ವಿಶೇಷವಾಗಿ ತೆಲಗು ಮತ್ತು ಕನ್ನಡ ಜನಾಂಗಗಳನ್ನು ಇದು ಉಲ್ಲೇಖಿಸುತ್ತದೆ ಎಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. ಈ ಎಲ್ಲಾ ವಿವರಗಳನ್ನು ಪರಿಶೀಲಿಸಿದಾಗ ಕರಾವಳಿಯ ಚಾರಿತ್ರಿಕತೆಗೆ ಒಂದು ಸ್ಪಷ್ಟರೂಪ ದೊರೆಯುವಂತೆ ಅಲ್ಲಿಯ ಪ್ರಾಚೀನ ಜನಜೀವನಕ್ಕೆ ಆಧಾರಗಳು ದೊರೆಯುತ್ತವೆ.

ತುಳುನಾಡು, ಹೈವೆ, ಕೊಂಕಣ ಎಂದು ಸುಮಾರು ಎಂಟನೇ ಶತಮಾನದಿಂದ ಕರಾವಳಿ ಮತ್ತೆ ವಿಭಜಿತವಾಯಿತು. ಮುಂದೆ ಇವುಗಳಲ್ಲಿ ಅನೇಕ ಆಡಳಿತ ಕೇಂದ್ರಗಳು– ವಲಯಗಳು ನಿರ್ಮಾಣವಾದವು. ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯೊಂದಿಗೆ ಎಲ್ಲಾ ಚಿಕ್ಕಪುಟ್ಟ ಆಡಳಿತ ವಿಭಾಗಗಳು ಮತ್ತು ರಾಜ್ಯಾಡಳಿತಗಳು ಅದರಲ್ಲಿ ಲೀನವಾಗುವುದರೊಂದಿಗೆ ಏಕ ಸಾಮ್ರಾಜ್ಯದ ಆಡಳಿತಕ್ಕೆ ಒಳಪಟ್ಟವು.

ಕರಾವಳಿಯ ಚಾರಿತ್ರಿಕತೆಯನ್ನು ಪರಿಶೀಲಿಸುವಾಗ ಕಂಡು ಬರುವ ಪ್ರಮುಖ ಘಟನಾವಳಿ ಎಂದರೆ ಇಲ್ಲಿಯ ಸಾಮ್ರಾಜ್ಯಗಳ ರಚನೆ, ದೇಶೀಯ, ವಿದೇಶಿಯ ವ್ಯಾಪಾರ ವ್ಯವಹಾರ ಹಾಗೂ ಸ್ಥಳೀಯ ಶ್ರಮ ಜೀವಿಗಳ ನಡುವಿನ ಸಂಬಂಧ ರಾಜ್ಯಗಳ ಸ್ಥಾಪನೆಯೊಂದಿಗೆ ಬದಲಾದ ಉತ್ಪಾದನಾ ಸಾಮಾಗ್ರಿಗಳೊಂದಿಗಿನ ಸಂಬಂಧದ ಫಲವಾಗಿ ಸ್ಥಳೀಯರು ಸೈನಿಕರಾಗಿ, ಕೃಷಿಕರಾಗಿ ಹಾಗೂ ವ್ಯಾಪಾರ ವ್ಯವಹಾರಗಳಿಗೆ ಸಹಾಯಕರಾಗಿ, ಅರಣ್ಯೋತ್ಪನ್ನ ತಂದುಕೊಡುವ ಅಥವಾ ಸಂಗ್ರಹಿಸುವ, ದೊಡ್ಡ ದೊಡ್ಡ ಹಡಗುಗಳ ನಿರ್ಮಾಣ ಮಾಡುವ ಕೂಲಿಗಳಾಗಿರಬೇಕಾಯಿತು. ಸಾಮ್ರಾಜ್ಯ ಎಷ್ಟೇ ವೈಭವದಿಂದ ಮೆರೆದರೂ, ವಿದೇಶಗಳೊಂದಿಗೆ ಬೆಲೆಬಾಳುವ ವಸ್ತುಗಳ ವ್ಯಾಪಾರ ನಡೆಸಿದರೂ ಕಾರ್ಮಿಕ ವರ್ಗ ತನ್ನ ಜೀವಿತವನ್ನು ನಿರ್ವಹಿಸುವುದು ಮಾತ್ರ ಸಾಧ್ಯವಾಗಿತ್ತು. ಕಾರ್ಲ್‌ಮಾರ್ಕ್ಸ್ ಹೇಳುವಂತೆ ಕಾರ್ಮಿಕ ವರ್ಗವು ತನ್ನ ಆದಾಯವನ್ನು ತನ್ನ ಜೀವನಾವಶ್ಯಕ ವಸ್ತುಗಳನ್ನು ಕೊಳ್ಳುವುದಕ್ಕೆ ಮಾತ್ರ ಖರ್ಚು ಮಾಡುತ್ತದೆ. ಮತ್ತು ಖರ್ಚು ಮಾಡಬೇಕಾಗುತ್ತದೆ[೧೧] ಎಂಬ ಮಾತು ಇಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ.

ವ್ಯಾಪಾರಿ ಹಾಗೂ ಶ್ರೀಮಂತವರ್ಗದವರು ತಮ್ಮ ಪ್ರತಿಷ್ಠೆ ಹಾಗೂ ಲಾಭಕ್ಕಾಗಿ ತಮ್ಮಗಳಿಕೆಯನ್ನು ವಿನಿಯೋಗಿಸುತ್ತಿದ್ದರು. ಆಳುವ ವರ್ಗವು ಕಾರ್ಮಿಕರಿಂದ ಶ್ರಮಶಕ್ತಿಯನ್ನು ಪಡೆದು ಅವರನ್ನು ಜೀವನಪೂರ್ತಿ ಗುಲಾಮರನ್ನಾಗಿಸಿ[೧೨] ಕೊಳ್ಳುವುದು ಇಲ್ಲಿಯ ನೀತಿಯಾಗಿತ್ತು. ಕರಾವಳಿ ಭಾಗದ ಉತ್ತಮ ಫಸಲಿನ ಭತ್ತ, ತೋಟಗಾರಿಕಾ ಬೆಳೆಕಾಳು ಮತ್ತು ವನೋತ್ಪನ್ನಗಳನ್ನು ತನ್ನ ಒಡೆಯನಿಗೆ ಒದಗಿಸುತ್ತಿದ್ದ ಜನವರ್ಗ ಈ ಕರಿತು ಯಾವುದೇ ಒಪ್ಪಂದಗಳನ್ನು

ಮಾಡಿಕೊಳ್ಳದೇ ಕೇವಲ ನೀತಿಶಾಸ್ತ್ರ ಹಾಗೂ ಅಗೋಚರ ದೈವೀಭಯದಲ್ಲಿ ತನ್ನ ಕರ್ತವ್ಯ ನಿರ್ವಹಿಸುತ್ತಿತ್ತು. ಇದೆಲ್ಲದರೊಂದಿಗೆ ಇಲ್ಲಿ ಇನ್ನೂ ಭೀಕರವಾದ ಜಾತಿವ್ಯವಸ್ಥೆ, ವರ್ಣ ವ್ಯವಸ್ಥೆಗಳಿದ್ದವು. ಪಂಚಮರು ದಲಿತರಾಗಿದ್ದರು. ಇವರನ್ನು ಅನಿಷ್ಟರೆಂದು ಪರಿಗಣಿಸುತ್ತಿದ್ದರು. ವರ್ಣ ವ್ಯವಸ್ಥೆಯ ಮೇಲಿನ ನಾಲ್ಕು ವರ್ಣದವರ ಸೇವೆ ಇವರ ವೃತ್ತಿಯಾಗಿತ್ತು. ಇಂಥಹ ವ್ಯವಸ್ಥೆಯಲ್ಲಿ ಕ್ರೂರ ತಾರತಮ್ಯ ಕ್ರೌರ್ಯ, ಶೋಷಣೆಗಳನ್ನು ಧಿಕ್ಕರಿಸಿ ಎಲ್ಲ ಹಕ್ಕುಗಳನ್ನು ಹೊಂದಿರುವ ವರ್ಗದವರೊಡನೆ ಸಂಘರ್ಷಕ್ಕೆ[೧೩] ಇವರು ಇಳಿದದ್ದು ಕಂಡು ಬರುತ್ತದೆ. ವೃತ್ತಿ ಆಧಾರಿತವಾಗಿದ್ದ ಇಲ್ಲಿಯ ಜಾತಿ ವ್ಯವಸ್ಥೆ ಪ್ರಾಚೀನ ಗ್ರಾಮೀಣ ಸಮುದಾಯವನ್ನು ಸ್ಥಿರವಾಗಿ ಕಾಪಾಡಿಕೊಂಡು ಬಂದಿತ್ತು. ಬೇಡಿಕೆ ಮತ್ತು ಪೂರೈಕೆಗಳು ಸಮತೋಲನದಲ್ಲಿದ್ದವು[೧೪]. ವಿವಿಧ ವೃತ್ತಿಯವರು ತಮ್ಮ ತಮ್ಮ ಪಾರಂಪರಿಕ ಉದ್ಯೋಗ ನಡೆಸಿಕೊಂಡು ಬರುತ್ತಿದ್ದರು. ಈ ವ್ಯವಸ್ಥೆ ಉತ್ಪನ್ನಗಳ ಹಂಚಿಕೆಯಲ್ಲಿ ನ್ಯಾಯ ಸಮ್ಮತಿಯನ್ನು ಹೊಂದಿರಲಿಲ್ಲ, ಸರ್ವಸಮಾನತೆಯಂತೂ ಇರಲೇ ಇಲ್ಲ[೧೫]

ರಾಜ್ಯ ಅಥವಾ ಸಾಮ್ರಾಜ್ಯ ಎಂಬ ವ್ಯವಸ್ಥೆಯನ್ನು ಮಾನವನು ತಾನು ಬದುಕುತ್ತಿರುವ ಸಮಾಜ ಹಾಗೂ ನಾಗರಿಕ ವ್ಯವಸ್ಥೆಯಲ್ಲಿ ರೂಢಿಸಿಕೊಂಡಿರುತ್ತಾನೆ[೧೬]. ಇದರ ಕೆಲವು ರೂಪರೇಷೆಗಳು ಸಾವಿರಾರು ವರ್ಷಗಳಿಂದ ಬಂದಿದ್ದು, ಸುವ್ಯವಸ್ಥಿತ ಆಳ್ವಿಕೆಯ ವ್ಯವಸ್ಥೆಯ ಆಕಾಂಕ್ಷೆ ಇಲ್ಲಿ ಕಾಣುತ್ತದೆ[೧೭].

ಕರಾವಳಿಯ ರಾಜಕೀಯ ಬದಲಾವಣೆ, ಸಾಮ್ರಾಜ್ಯದ ಅಧಿಪತ್ಯಗಳೆಲ್ಲಾ ಬಂದರುಗಳನ್ನು ಅವಲಂಭಿಸಿದ್ದವು, ಬೇರೆಡೆ ಉಂಟಾಗುವ ಆರ್ಥಿಕ ಪತನ, ರಾಜಕೀಯ ಸೋಲುಗಳನ್ನು ಈ ಬಂದರುಗಳ ಮೂಲಕ ಸರಿದೂಗಿಸಿ ಕೊಳ್ಳುವ ಯೋಚನೆ ಆಳುವ ವರ್ಗದ್ದಾಗಿತ್ತು. ಸಲೀಸಾಗಿ ನಡೆಸಬಹುದಾದ, ಬಹು ಲಾಭದಾಯಕವಾದ ವಿದೇಶೀ ವ್ಯಾಪಾರವು ಹೆಚ್ಚು ಖರ್ಚಿಲ್ಲದೇ, ದೊಡ್ಡ ಮೊತ್ತದ ಲಾಭ ಪಡೆಯಲು ಸಹಾಯಕವಾಗಿತ್ತು.

ಸಮಾಜದ ದೊಡ್ಡಭಾಗವಾಗಿದ್ದ ಶೂದ್ರರು ವ್ಯಾಪಾರಿಗಳಾಗುವ ಹಕ್ಕನ್ನು ಪಡೆದು, ಮೇಲ್ವರ್ಗದ ಸೇವೆ ಮಾಡುತ್ತಲೇ ವ್ಯಾಪಾರ ಮಾಡಿ ಬಂದ ಲಾಭದಲ್ಲಿ ಮೇಲಿನ ಮೂರು ವರ್ಗಗಳಿಗೂ, ರಾಜನಿಗೂ ಪಾಲು ನೀಡುತ್ತಿದ್ದರು. ಇವರು ಮುಖ್ಯವಾಗಿ ಬೀದಿ ವ್ಯಾಪಾರಿ[೧೮] ಗಳಾಗಿದ್ದರೆಂದು ಗುರುತಿಸಲಾಗಿದ್ದು, ಇವರ ವ್ಯಾಪಾರವು ಕೈಕಸುಬಿನ ಮತ್ತು ಕೃಷಿ ಉತ್ಪಾದನೆಗಳಿಗೆ ಮೀಸಲಾಗಿತ್ತು. ಶೂದ್ರರ ಶ್ರಮ ಹಾಗೂ ಕೌಶಲ್ಯ ಮತ್ತು ಅದರ ಜೊತೆಗೆ ವೈಶ್ಯರ ಹಾಗೂ ರೈತರ ಆಹಾರ ಉತ್ಪಾದನೆ ಪ್ರಾಚೀನ ಭಾರತೀಯ ಸಮಾಜದ ಬೆಳವಣಿಗೆಗೆ ಭೌತಿಕ ಅಡಿಪಾಯವನ್ನು ಹಾಕಿದವು[೧೯] ಎಂಬ ವಿಚಾರ ತಿಳಿದುಬರುತ್ತದೆ.

ಕರ್ನಾಟಕವನ್ನಾಳಿದ ಎಲ್ಲ ಪ್ರಭುತ್ವಗಳು ಕರಾವಳಿಯನ್ನು ತಮ್ಮ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳುವ ಪೈಪೋಟಿ ನಡೆಸಿದ್ದು ಕಂಡು ಬರುತ್ತದೆ. ಇಲ್ಲಿ ಕರ್ನಾಟಕವನ್ನು ಆಳುತ್ತ ಕರಾವಳಿಯಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿಕೊಂಡಿರುವ ರಾಜರುಗಳ ಸಮೀಕ್ಷೆ ನಡೆಸಲಾಗಿದೆ. ಹೀಗೆ ಕರ್ನಾಟಕದ ಕರಾವಳಿಯ ಚಾರಿತ್ರಿಕತೆ ಭಾರತೀಯ ಚರಿತ್ರೆಯ ಒಂದು ಭಾಗವಾಗಿದ್ದು, ಇಲ್ಲಿಯ ಆರ್ಥಿಕತೆಯ ಬೆಳವಣಿಗೆ, ಬದಲಾವಣೆಗಳೆಲ್ಲಾ ಸಮಗ್ರ ದೇಶದ ಚಟುವಟಿಕೆಯೊಂದಿಗೆ ಮಿಳಿತವಾಗಿತ್ತು.

೩.೧.೧ ನಂದರು, ಮೌರ್ಯರು ಮತ್ತು ಕರ್ನಾಟಕದ ಬಂದರುಗಳು

ಭಾರತದ ಚರಿತ್ರೆಯಲ್ಲಿ ಮೊದಲು ಚಕ್ರಾಧಿಪತ್ಯ ಸ್ಥಾಪಿಸಿದವರು ನಂದರು[೨೦]. ಈ ಕಾಲದಲ್ಲಿ ಕರ್ನಾಟಕವು ಉತ್ತರ ಭಾರತದೊಂದಿಗೆ ನೇರ ಸಂಬಂಧ ಹೊಂದಿತ್ತು. ೧೩ನೇ ಶತಮಾನದ ಶಾಸನವೊಂದು ಕುಂತಲ ಎಂದು ಕರೆಯಲಾಗುತ್ತಿದ್ದ ಪಶ್ಚಿಮ ದಖ್ಖನ್ ಮತ್ತು ಉತ್ತರದ ಮೈಸೂರು ಪ್ರದೇಶಗಳು ನಂದರು ಹಾಗೂ ಮೌರ್ಯರ ಸಾಮ್ರಾಜ್ಯಕ್ಕೆ ಸೇರಿದ್ದವು ಎಂದು ತಿಳಿಸುತ್ತದೆ.[೨೧] ನಂದರ ಆಳ್ವಿಕೆಯೊಂದಿಗೆ ನಂದಶಕೆ ಪ್ರಾರಂಭವಾಗಿದ್ದು, ಕರ್ನಾಟಕದ ಒಂದು ಶಾಸನದಲ್ಲಿ ಇದರ ಉಲ್ಲೇಖ ಬರುತ್ತದೆ.[೨೨] ಚಂದ್ರಗುಪ್ತ ಮೌರ್ಯನು ನಂದರನ್ನು ಸೋಲಿಸಿ ಸಾಮ್ರಾಜ್ಯವನ್ನು ಪಡೆದುದಲ್ಲದೆ ತನ್ನ ಪರಾಕ್ರಮದಿಂದ ಮತ್ತಷ್ಟು ಪ್ರದೇಶಗಳನ್ನು ಗೆದ್ದು ಮೌರ್ಯ ಸಾಮ್ರಾಜ್ಯವನ್ನು ವಿಸ್ತರಿಸಿದನು.[೨೩] ಬಿಂದುಸಾರನ ನಂತರ ಕ್ರಿ.ಪೂ ೨೭೩ ರಲ್ಲಿ ಅಶೋಕನು ಮಗಧ ಸಾಮ್ರಾಜ್ಯದ ಸಿಂಹಾಸನವನ್ನು ಏರಿದನು. ಕರ್ನಾಟಕದಲ್ಲಿ ಅಶೋಕನ ೧೪ ಶಾಸನಗಳು ದೊರೆತಿವೆ. ಸುವರ್ಣಗಿರಿ ಮತ್ತು ಇಸಿಲಗಳಲ್ಲಿ ಮಹಾಮಾತ್ರರೆಂಬ ಆತನ ಆಡಳಿತಗಾರರಿದ್ದರು[೨೪]. ಮೌರ್ಯ ಸಾಮ್ರಾಟರು ಕರ್ನಾಟಕದ ಪ್ರದೇಶಗಳನ್ನು ಗೆದ್ದುಕೊಂಡ ಬಗ್ಗೆ ಯಾವ ಆಧಾರಗಳೂ ದೊರೆತಿಲ್ಲ. ತಮ್ಮ ಹಿಂದಿನವರಾದ ನಂದ ಸಾರ್ವಭೌಮರಿಂದಲೇ ಕರ್ನಾಟಕದಲ್ಲಿಯ ಕೆಲವು ಪ್ರದೇಶಗಳನ್ನು ಪಡೆದಿರಲು ಸಾಕು[೨೫]. 'ಕುಂತಲ' ಎಂಬುದು ಒಮ್ಮೊಮ್ಮೆ ಸಮಗ್ರ ಕರ್ನಾಟಕಕ್ಕೂ ಅನ್ವಯಿಸುವ ಪದವಾಗಿದ್ದರೂ, ವಿಶೇಷವಾಗಿ ಇದು ಉತ್ತರ ಕರ್ನಾಟಕದ ಈಗಿನ ಶಿವಮೊಗ್ಗ, ಕಾರವಾರ, ಧಾರವಾಡ ಜಿಲ್ಲೆಗಳಿಗೆ ಸೀಮಿತವಾದ ಪ್ರದೇಶ. ಇದರಲ್ಲಿ ಪ್ರಮುಖವಾದ ನಗರ ಬನವಾಸಿ. ಸಿಂಹಳದ ಬೌದ್ಧ ಗ್ರಂಥಗಳಾದ ಮಹಾವಂಶ, ದೀಪವಂಶಗಳಲ್ಲಿ ನಮೂದಾಗಿರುವ ಸಂಪ್ರದಾಯದಂತೆ ಅಶೋಕಮೌರ್ಯನು ಧರ್ಮಪ್ರಚಾರಕ್ಕೆಂದು ಕಳುಹಿಸಿದ ಬೌದ್ಧ ಭಿಕ್ಷುಗಳಲ್ಲೊಬ್ಬನಾದ ರಖ್ಖಿತ(ರಕ್ಷಿತ)ನು ವನವಾಸಿಗೆ ಹೋದನೆಂದಿದೆ[೨೬]. ಇವುಗಳಿಂದ ಅಶೋಕನಕಾಲದಲ್ಲಿ ಕರ್ನಾಟಕದ ಕರಾವಳಿಯ ಉತ್ತರ ಭಾಗವು ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತೆಂದು ತಿಳಿಯಬಹುದು. ಅಶೋಕನಕಾಲದಲ್ಲಿ ಕಡಲೋತ್ತರ ವ್ಯಾಪಾರ ಭರದಿಂದ

ಸಾಗಿತ್ತು. ಹಡಗುಗಳ ಮೇಲ್ವಿಚಾರಕನೆಂಬ ಅಧಿಕಾರಿಯನ್ನು ನೇಮಿಸಲಾಗಿತ್ತು[೨೭]. ಚಾಣಾಕ್ಯನು ರಾಷ್ಟ್ರ ಎಂಬ ಹದಿಮೂರು ಆದಾಯಗಳಲ್ಲಿ ವ್ಯಾಪಾರಿಗಳಿಂದ, ನದಿಯ ಪಾಲಕರಿಂದ, ಕಡಲಿನ ತೆರಿಗೆ ಮತ್ತು ನೌಕಾಧ್ಯಕ್ಷನ ಮೂಲಕ ಬರುವ ಆದಾಯಗಳ ಬಗ್ಗೆ ತಿಳಿಸಿದ್ದಾನೆ[೨೮]. ಹಡಗು ಮೇಲ್ವಿಚಾರಕನು ಬಂದರುಗಳಲ್ಲಿ ವ್ಯಾಪಾರ ನೋಡಿಕೊಳ್ಳುತ್ತಿದ್ದನು. ದಕ್ಷಿಣ ಭಾರತದೊಂದಿಗೆ ವಾಣಿಜ್ಯ ಸಂಬಂಧ ಉತ್ತಮವಾಗಿತ್ತು. ಆಂತರಿಕ ಹಾಗೂ ಬಾಹ್ಯ ವ್ಯಾಪಾರ ಸಮೃದ್ಧವಾಗಿತ್ತು ಸರಕಾರವು ಆಂತರಿಕ ವ್ಯಾಪಾರ ಮತ್ತು ವಿದೇಶಿ ವ್ಯಾಪಾರವನ್ನು ಕಟ್ಟುನಿಟ್ಟಾಗಿ ನಡೆಸುತ್ತಿತ್ತು[೨೯]. ಮೌರ್ಯರು ಬಂದರುಗಳ ಮಹತ್ವ ತಿಳಿದಿದ್ದರು. ಕರ್ನಾಟಕದ ಉತ್ತರದ ಬಂದರುಗಳನ್ನು ತಮ್ಮ ವ್ಯಾಪಾರ ವಹಿವಾಟಿಗೆ ಬಳಸಿದ್ದರು. ಕರ್ನಾಟಕದಲ್ಲಿನ ಅವರ ಪ್ರಮುಖ ಪಟ್ಟಣಗಳಾದ ಬನವಾಸಿ, ಇಸಿಲ, ಸುವರ್ಣಗಿರಿ ಮುಂತಾದವುಗಳು ವ್ಯಾಪಾರ ಕೇಂದ್ರಗಳಾಗಿದ್ದವು. ಕರ್ನಾಟಕದಲ್ಲಿ ದೊರೆತಿರುವ ಅಶೋಕನ ಶಾಸನಗಳು ಚಿನ್ನ ಮತ್ತು ಬಹುಲೋಹಗಳು ದೊರಕುವ ಸ್ಥಳದಲ್ಲಿವೆ[೩೦]. ಅಶೋಕನ ಕಾಲದಲ್ಲಿ ಇದೇ ಪ್ರದೇಶ ಮೌರ್ಯರ ದಕ್ಷಿಣದ ಕೇಂದ್ರಗಳಾಗಿದ್ದವು. ಆ ಸಮಯದಲ್ಲಿ ಕರ್ನಾಟಕ ಬಿಟ್ಟರೆ ಬೇರೆ ಸ್ಥಳಗಳಲ್ಲಿ ಚಿನ್ನದ ಗಣಿಗಳಿರಲಿಲ್ಲ.[೩೧] ಮೌರ್ಯರು ಲೋಹಗಳ ವ್ಯಾಪಾರವನ್ನು ನಡೆಸಿದ್ದಲ್ಲದೇ ಕಡಲಮಾರ್ಗದ ಮೂಲಕ ವ್ಯಾಪಾರ ನಡೆಸಿದ್ದರು ಎಂದು ತೀರ್ಮಾನಿಸಬಹುದು. ಸುಮಾರು ಉತ್ತರಕನ್ನಡದ ದಕ್ಷಿಣ ತುದಿಯಿಂದ ಆರಂಭವಾಗಿ ಕೇರಳದ ಕಾಸರಕೋಡಿನವರೆಗೆ ವ್ಯಾಪಿಸಿರುವ ತುಳುನಾಡು ಪ್ರದೇಶವು ಅಶೋಕನ ೨ನೇ ಬಂಡೆಗಲ್ಲು ಶಾಸನದಲ್ಲಿ ಉಲ್ಲೇಖಿತವಾದ ಸತೀಯ ಪುತ್ರರ ನಾಡೆಂದು ವಿದ್ವಾಂಸರ ಅಭಿಪ್ರಾಯ[೩೨]. ಈ ಪ್ರದೇಶವು ಆ ಕಾಲದಲ್ಲೇ ಆಳ್ವಖೇಡ ೬೦೦೦ ಎಂದು ಕರೆದುಕೊಳ್ಳುತ್ತಿತ್ತು[೩೩] ಎಂದು ಗ್ರೀಕ್ ಭೌಗೋಳಜ್ಞನಾದ ತೊಲೆಮಿಯಿಂದ ತಿಳಿಯುತ್ತದೆ. ಆದರೆ ಈ ಪ್ರದೇಶಗಳೂ ಮೌರ್ಯರಿಂದ ನೇರವಾಗಿ ಆಳಲ್ಪಟ್ಟಿರಲಿಲ್ಲ. ಈ ಪ್ರದೇಶವು ಓಲೈಖೋರಾ ಎಂದು ಕರೆದುಕೊಂಡಿತ್ತು. ಆದರೆ ಇಲ್ಲಿಯ ಬಂದರುಗಳ ಮೂಲಕ ಕಡಲೋತ್ತರ ವ್ಯಾಪಾರ ನಡೆಯುತ್ತಿತ್ತು. ಅದು ಸ್ಥಳೀಯವಾಗಿ ಸಹ್ಯಾದ್ರಿ ಮಡಿಲಲ್ಲಿ ದೊರೆಯುತ್ತಿದ್ದ ವನೋತ್ಪತ್ತಿ ಹಾಗೂ ಬೆಲೆಬಾಳುವ ಮಣಿಗಳು, ಲೋಹಗಳಿಂದ ಕೂಡಿತ್ತು[೩೪].

೩.೧.೨ ಶಾತವಾಹನರು, ಚುಟುಗಳು

ಮೌರ್ಯಸಾಮ್ರಾಜ್ಯ ಅವನತಿಯ ಹಾದಿಯನ್ನು ಹಿಡಿದಾಗ ದಖನ್ನಿನಲ್ಲಿ ಅವರಸಾಂಮತರಾಗಿದ್ದ ಶಾತವಾಹನರು ಈ ಪ್ರದೇಶದಲ್ಲಿ ಅವರ ಉತ್ತರಾಧಿಕಾರಿಗಳಾಗಿ, ವಿಸ್ತಾರವಾದ ರಾಜ್ಯವನ್ನು ಸ್ಥಾಪಿಸಿದರು. ಕರ್ನಾಟಕದಲ್ಲಿ ಮೊದಲಬಾರಿಗೆ ಸಾಮ್ರಾಜ್ಯ ಸ್ಥಾಪಿಸಿದವರು ಶಾತವಾಹನರು[೩೫]. ಸಿಮುಖ ಈ ವಂಶದ ಸ್ಥಾಪಕ.[೩೬] ಬನವಾಸಿಯು ನೇರವಾಗಿ

ಶಾತವಾಹನರ ಆಡಳಿತಕ್ಕೆ ಒಳಪಟ್ಟಿತ್ತೆಂದು ಹೇಳಲು ಸಾಧ್ಯವಾಗದಿದ್ದರೂ ಬನವಾಸಿಯ ಮೇಲೆ ನಿಯಂತ್ರಣವಿತ್ತೆಂದು ಊಹಿಸಲು ಅವರದೇ ಶಾಸನಗಳು ಸುಳಿವು ನೀಡುತ್ತವೆ. ಗೌತಮಿಪುತ್ರ ಸಾತಕರ್ಣಿ (ಸು.ಕ್ರಿ.ಶ ೧೦೬-೧೩೦)ಯ ನಾಣ್ಯಗಳು ಬನವಾಸಿಯಲ್ಲಿದೊರಕಿವೆ.[೩೭] ಈತನ ಕಾಲದಲ್ಲಿ ಬನವಾಸಿಯು ನೇರ ಶಾತವಾಹನರ ಆಡಳಿತಕ್ಕೆ ಒಳಪಟ್ಟಿತ್ತು. ಈತನ ಆಡಳಿತದ ೧೮ನೇ ವರ್ಷದ ನಾಸಿಕ ಶಾಸನವು[೩೮] ಬನವಾಸಿಯನ್ನು ವೈಜಯಂತಿ ಎಂದು ಉಲ್ಲೇಖಿಸಿದೆ. ಬನವಾಸಿಯಲ್ಲಿ ದೊರಕಿರುವ ವಾಸಿಷ್ಠೀಪುತ್ರ ಶಿವಶ್ರೀ ಪುಳಮಾವಿಯ ಶಾಸನವು ಬ್ರಾಹ್ಮಿಲಿಪಿ, ಪ್ರಾಕೃತ ಭಾಷೆಯಲ್ಲಿದೆ. ಇವುಗಳು ಈ ಜಿಲ್ಲೆಯ ಪ್ರಾಚೀನ ಶಾಸನಗಳಾಗಿವೆ. ಈತನ ಕಾಲ ಸು.ಕ್ರಿ.ಶ. ೧೫೦ ರಿಂದ ೧೫೬. ಶಾಸನದ ಕಾಲ ಸುಮಾರು ಕ್ರಿ.ಶ. ೧೫೫.[೩೯] ಬನವಾಸಿಯಲ್ಲಿರುವ ಇನ್ನೊಂದು ಪ್ರಾಚೀನ ಶಾಸನ ಶಾತವಾಹನರ ಶಾಖೆಯಾದ ಚುಟುಕ ವಂಶಕ್ಕೆ ಸೇರಿದ್ದು. ಇದು ಚುಟುಕುಲಾನಂದ ಶಾತಕರ್ಣಿ ಅರಸನ ಆಳ್ವಿಕೆಯ ಕಾಲಕ್ಕೆ ಸರಿಹೊಂದುತ್ತದೆ. ಇದು ಮೂರನೇ ಶತಮಾನಕ್ಕೆ ಸೇರಿದ ಶಾಸನ. ಇವರ ನಾಣ್ಯಗಳೂ ಇಲ್ಲಿ ಸಿಕ್ಕಿವೆ[೪೦]. ಇವುಗಳಿಂದ ಕ್ರಿ.ಶ. ೨ ಮತ್ತು ೩ನೇ ಶತಮಾನದಷ್ಟೊತ್ತಿಗೆ ಬನವಾಸಿ ರಾಜಕೀಯವಾಗಿ, ಧಾರ್ಮಿಕವಾಗಿ ಹಾಗೂ ವಾಣಿಜ್ಯಕವಾಗಿ ಪ್ರಮುಖ ಸ್ಥಾನ ಹೊಂದಿತ್ತೆಂದು ತಿಳಿಯುತ್ತದೆ. ಶಾತವಾಹನರ ನಾಣ್ಯಗಳ ಮೇಲೆ ನೌಕೆಗಳ ಚಿತ್ರಗಳಿವೆ.[೪೧] ಇದು ಅವರು ನೌಕಾಯಾನದಲ್ಲಿ, ಕಡಲೋತ್ತರ ವ್ಯಾಪಾರದಲ್ಲಿ ಹೊಂದಿದ್ದ ಆಸಕ್ತಿಯನ್ನು ತಿಳಿಸುತ್ತದೆ. ಉತ್ತರಕನ್ನಡದ ನೈಸರ್ಗಿಕ ಬಂದರುಗಳನ್ನು ಇವರು ತಮ್ಮ ವ್ಯಾಪಾರಗಳಿಗೆ ಬಳಸಿಕೊಂಡಿದ್ದರು. ಶಾತವಾಹನ ಹಾಗೂ ಚುಟುಗಳು ಉತ್ತರದ ಬಂದರುಗಳಿಗೆ ಮಾತ್ರ ಸೀಮಿತವಾಗದೇ ಪ್ರಸ್ತುತ ಗೋವಾ ಹಾಗೂ ದಕ್ಷಿಣದ ಕುಂದಾಪುರ, ಬಾರ್ಕೂರು, ಮಂಗಳೂರು ಬಂದರುಗಳನ್ನು ತಮ್ಮ ವ್ಯಾಪರಕ್ಕೆ ಬಳಸಿಕೊಂಡಿದ್ದರು. ಈ ಬಂದರುಗಳ ಮಧ್ಯದಲ್ಲಿರುವ ಚಿಕ್ಕಪುಟ್ಟ ಬಂದರುಗಳು ಮೇಲಿನ ಬಂದರುಗಳ ವ್ಯಾಪಾರಕ್ಕೆ ಪೂರಕವಾಗಿದ್ದವು.

೩.೧.೩ ಬನವಾಸಿ ಕದಂಬರು

ಚುಟು ಮನೆತನದವರನ್ನು ಕಂಚಿಯ ಪಲ್ಲವರು ಸರಿಸಿ ಕೆಲಕಾಲ ಬನವಾಸಿ ನಾಡನ್ನು ಆಳಿದ ನಂತರ ಕದಂಬರು ಈ ಪ್ರದೇಶದ ಮೇಲೆ ತಮ್ಮ ಸಾಮ್ರಾಜ್ಯವನ್ನು ಸ್ಥಾಪಿಸಿದರು[೪೨]. ಇವರಿಗೆ ಬನವಾಸಿ ಕದಂಬರೆಂದು ಹೆಸರು. ಇವರ ವಂಶಾವಳಿಯನ್ನು ಈ ಕೆಳಗಿನಂತೆ ನೀಡಿದ್ದಾರೆ.[೪೩] ವೀರಶರ್ಮ(ಕ್ರಿ.ಶ ೨೮೫-೩೦೫), ಬಂಧುಕ್ಷೇಣ (ಕ್ರಿ.ಶ.೩೦೫-೩೨೫), ಮಯೂರವರ್ಮ (ಕ್ರಿ.ಶ. ೩೨೫-೩೪೫) ಮುಂದೆ ಕೃಷ್ಣಶರ್ಮ (ಕ್ರಿ.ಶ. ೫೧೬-೫೪೦) ನ ನಂತರ ಅಜ, ರವಿ ಹಾಗೂ

ಬೋಗಿವರ್ಮರೆಂಬ ಮೂರು ಜನ ಅರಸರು ಆಳಿದ್ದು ತಿಳಿಯುತ್ತದೆ. ಸುಮಾರು ಮೂರು ಶತಮಾನಗಳ ಕಾಲ ಕನ್ನಡನಾಡಿನಲ್ಲಿ ತಮ್ಮ ಪ್ರಬಲ ಸಾಮ್ರಾಜ್ಯ ಕಟ್ಟಿ ಇವರು ಆಳಿದರು[೪೪].

ಕದಂಬರು ಬನವಾಸಿ ಕೇಂದ್ರಮಾಡಿ ಒಂದು ಸ್ಥಳದಿಂದ ರಾಜ್ಯಕಟ್ಟಿ ಆಳುವುದಕಿಂತ ಮೊದಲು, ದಕ್ಷಿಣದ ಪ್ರಧಾನ ಅರಸರುಗಳಲ್ಲಿ ಒಬ್ಬರಾಗುವುದಕ್ಕಿಂತ ಸುಮಾರು ಅರ್ಧ ಸಹಸ್ರಮಾನ ಕಾಲ ಮುಂಚೆ ಅರಬ್ಬಿಸಮುದ್ರ ಮತ್ತು ಹಿಂದೂ ಮಹಾಸಾಗರದಲ್ಲಿ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಳ್ಳತೊಡಗಿದ್ದರು ಎಂಬುದನ್ನು ಶಂಗಂ ಸಾಹಿತ್ಯದಿಂದ ತಿಳಿಯುತ್ತದೆ. ಕಡಲನ್ನೇ ತಮ್ಮ ಸಾಮ್ರಾಜ್ಯ ಸ್ಥಾಪನೆಯ ಮೊದಲು ಕೇಂದ್ರವಾಗಿ ಹೊಂದಿದ್ದ ಕದಂಬರು, ಮುಂದೆಯೂ ಕಡಲ ವ್ಯಾಪಾರದಿಂದ ತಮ್ಮ ಸಾಮ್ರಾಜ್ಯದ ಸಂಪತ್ತನ್ನು ವೃದ್ಧಿಸಿಕೊಂಡರು. ಕಡಲೋತ್ತರ ವ್ಯಾಪಾರವನ್ನು ಬಹು ವಿಜೃಂಭಣೆಯಿಂದ ನಡೆಸಿದರು. ಪಶ್ಚಿಮಾಧಿಪತಿಗಳೆಂದು ಬಿರುದು ಹೊಂದಿದ್ದ ಇವರು ಸಂಪೂರ್ಣ ಕರ್ನಾಟಕದ ಬಂದರುಗಳನ್ನು ತಮ್ಮ ಆಡಳಿತ ವ್ಯಾಪ್ತಿಗೆ ಸೇರಿಸಿಕೊಂಡಿದ್ದರು.

ಬನವಾಸಿ ಕದಂಬರ ಕೊನೆಯ ಅರಸ ಕಲಿವರ್ಮನ ಕಾಲದಲ್ಲಿ ಚಾಲುಕ್ಯರು ಅಧಿರಾಜರಾದರು. ಕದಂಬರು ಬದಿಗೆಸರಿದರಾದರೂ ನಾಡಿನ ಚರಿತ್ರೆಯಿಂದ ಕಣ್ಮರೆಯಾಗಲಿಲ್ಲ, ಹಲವಾರು ಶಾಖೆಗಳಾಗಿ ನಾಡಿನವಿವಿಧೆಡೆ ತಮ್ಮ ಆಡಳಿತ ನಡೆಸಿದರು[೪೫]. ಮೊರೆಸ್‌ರವರು ಗೋವಾ ಮತ್ತು ಹಾನಗಲ್ಲು ಶಾಖೆಗಳ ಬಗ್ಗೆ ಹೇಳಿದ್ದಾರೆ. ನಂತರ ದೊರೆತಿರುವ ಸಾಕ್ಷಾಧಾರಗಳಿಂದ ಗೋವಾದಿಂದ ಕರಡಿಕಲ್ಲು ಕದಂಬರವರೆಗೆ ಸರಿಯಾಗಿ ೧೫ ಶಾಖೆಗಳು ಗುರುತಿಸಲಾಗಿದೆ.[೪೬] ಬಹುತೇಕ ಕರ್ನಾಟಕದ ವಿವಿಧ ರಾಜರುಗಳ ಅಧೀನರಾಗಿ ಆಳಿದರೂ, ಈ ವಂಶಗಳು ತಮ್ಮನ್ನು 'ಕಾದಂಬ'ರೆಂದು ಕರೆದುಕೊಂಡರು. ತಮ್ಮ ಶಾಸನಗಳಲ್ಲಿ ದೀರ್ಘ 'ಕಾ' ಕಾರವನ್ನು ಬಳಸಿ ಬಣ್ಣಿಸಿಕೊಂಡಿದ್ದಾರೆ.[೪೭] ಇಲ್ಲಿ ಕಾದಂಬ ಎಂದರೆ ಕದಂಬ ಪುಷ್ಪ ಎಂದು ಅರ್ಥ. ಅಂದರೆ ಕದಂಬ ಎಂಬ ಬೃಹತ್ ವೃಕ್ಷಕ್ಕೆ ಇವರೆಲ್ಲರೂ ಹೂವುಗಳೇ ವಿನಃ ಮೂಲವೃಕ್ಷಕ್ಕೆ ಸರಿ ಸಮಾನರಾದವರಲ್ಲ[೪೮] ಎಂಬ ಅರ್ಥವನ್ನು ಹೊರಸೂಸುತ್ತದೆ. ಈ ಅಧ್ಯಯನದಲ್ಲಿ ಕದಂಬ ಶಾಖೆಗಳನ್ನು 'ಕಾದಂಬ'ರೆಂದೇ ಉಲ್ಲೇಖಿಸಲಾಗಿದೆ.

೩.೧.೪ ಬಾದಾಮಿ ಚಾಲುಕ್ಯರು

ಚಾಲುಕ್ಯ ವಂಶವೂ ತನ್ನ ಪ್ರಭುತ್ವದಸಂದರ್ಭದಲ್ಲಿ ಉತ್ತರಕನ್ನಡದ ಪ್ರದೇಶಗಳಲ್ಲಿ ಆಡಳಿತನಡೆಸಿತ್ತು. ಗೋವಾ ಕಾದಂಬರು ಹಾಗೂ ಹಾನಗಲ್ ಕಾದಂಬರ ಮೂಲಕ ಈ ಪ್ರದೇಶಗಳ ಮೇಲೆ ಸಾಮಂತ ಪ್ರಭುತ್ವ ನಡೆಸಿದ್ದರು. ಇವರ ಬಹುಸಂಖ್ಯೆಯ ಶಾಸನಗಳು ಶಿರಸಿಯಲ್ಲಿವೆ. ಕ್ರಿ.ಶ ೯೯೭-೧೦೦೮ ಇರಿವಬೆಡಂಗ ಸತ್ಯಾಶ್ರಯನ ದೇವಿಮನೆಶಾಸನವು ಮಹಾಮಂಡಳೇಶ್ವರಚಟ್ಟಯ್ಯದೇವನು ಬನವಾಸಿನಾಡನ್ನಾಳುತ್ತಿದ್ದಎನ್ನುತ್ತದೆ[೪೯]. ನಂತರದ ಶಾಸನದಲ್ಲಿ

ಭೂಲೋಕಮಲ್ಲ ಮೂರನೇ ಸೋಮೇಶ್ವರ (ಕ್ರಿ.ಶ.೧೧೨೬-೧೧೩೮)ನ ಶಾಸನ. ಇದು ಬನವಾಸಿಯಲ್ಲಿದೆ[೨೦]. ಇದರಿಂದ ಕಾದಂಬರನ್ನು ಮಾಂಡಲೇಶ್ವರ, ಮಹಾಮಂಡಲೇಶ್ವರರನ್ನಾಗಿ ಮಾಡಿಕೊಂಡು ಕರಾವಳಿಯ ಈ ಭಾಗವನ್ನು ಚಾಲುಕ್ಯರು ಆಳಿದ್ದು ತಿಳಿಯುತ್ತದೆ. ಉತ್ತರ ಕನ್ನಡದ ದಕ್ಷಿಣ ಪ್ರದೇಶದ ಆಳುವರಸರ ನೆರವೂ ಇವರಿಗಿತ್ತು ಎಂದು ತಿಳಿಯುತ್ತದೆ. ಒಂದನೇ ಆಳುವರಸನು ಅವನ ಸಮಕಾಲೀನನಾದ ಚಾಲುಕ್ಯ ಚಕ್ರವರ್ತಿ ಒಂದನೆಯ ವಿಕ್ರಮಾದಿತ್ಯನ ಮಿತ್ರನೂ ಗಣ್ಯಸಾಮಂತನೂ ಆಗಿದ್ದನು. ಪಲ್ಲವರ ಆಕ್ರಮಣದಿಂದ ತಾತ್ಕಾಲಿಕವಾಗಿ ನಶಿಸಿಹೋಗಿದ್ದ ಚಾಲುಕ್ಯ ಅಧಿಪತ್ಯವನ್ನು ಕ್ರಿ.ಶ ೬೫೪-೫೫ರಲ್ಲಿ ಪುನಃ ಸ್ಥಾಪಿಸುವಲ್ಲಿ ವಿಕ್ರಮಾದಿತ್ಯನಿಗೆ ನೆರವು ನೀಡಿದ್ದು ತಿಳಿಯುತ್ತದೆ[೨೧]. ಈ ಆಳುಪರು ಆಗ ಕೇವಲ ಮಂಗಳೂರಲ್ಲದೇ ಪೊಂಬುಚ್ಚ, ಬನವಾಸಿ ೧೨,೦೦೦ಗಳನ್ನೂ ಆಳುತ್ತಿದ್ದರು.

ಈ ಕಾಲಾವಧಿಯಲ್ಲಿ ಚಾಲುಕ್ಯರು ಕಡಲೋತ್ತರ ವ್ಯಾಪಾರದಿಂದ ಬಹುವಿಧ ಲಾಭಗಳಿಸಿದ್ದರು. ಇವರು ಉತ್ತರ ಕನ್ನಡ ಮಾತ್ರವಲ್ಲದೇ ಸಮಗ್ರ ಕರ್ನಾಟಕ ಕರಾವಳಿಯ ಮೇಲೆ ತಮ್ಮ ಪ್ರಭುತ್ವ ಹೊಂದಿದ್ದರು. ಜೊತೆಯಲ್ಲಿ ಪಶ್ಚಿಮಘಟ್ಟದ ಮಡಿಲಲ್ಲಿರುವ ನೈಸರ್ಗಿಕ ಸಂಪನ್ನ ಶಿವಮೊಗ್ಗವೂ ಇವರ ಅಧಿನದಲ್ಲಿತ್ತು. ಇದರಿಂದ ಕಡಲೋತ್ತರ ಹಾಗೂ ದೇಶೀಯ ವ್ಯಾಪಾರಕ್ಕೆ ಬಂದರುಗಳ ಸಹಾಯ ಪಡೆದಿದ್ದರು. ಬಂದರುಗಳಿಗೆ ಬರುತ್ತಿದ್ದ ವಿದೇಶಿಸರಕುಗಳನ್ನು ರಾಜ್ಯದ ಒಳಗೆ ಕಳುಹಿಸಿ ಅಲ್ಲಿ ನಿರ್ಧಿಷ್ಟ ಪಡಿಸಿದ ಮಾರುಕಟ್ಟೆಗಳಲ್ಲಿ ವ್ಯಾಪಾರ ವೈವಾಟು ನಡೆಸಿದ್ದರು. ಇವರ ಕಾಲದ ಪ್ರಖ್ಯಾತ ಐಹೊಳೆಐನ್ನೂರ್ವರ್[೨೨] ಎಂಬ ವ್ಯಾಪಾರ ಸಂಘಟನೆಯು ವ್ಯಾಪಾರ ವ್ಯವಹಾರಗಳನ್ನು ನಡೆಸುತ್ತಿತ್ತು. ಇವರು ಸಮಾಜದಲ್ಲಿ ಪ್ರಮುಖ ಸ್ಥಾನ ಪಡೆದಿದ್ದರು. ಚಾಲುಕ್ಯರು ಕಡಲೋತ್ತರ ವ್ಯಾಪಾರದಲ್ಲಿ ತೊಡಗಿದ್ದರಿಂದಲೇ ರೇವತಿ ದ್ವೀಪವನ್ನು ಪಡೆಯುವ ಆಸೆ ಹೊಂದಿದ್ದರು. ಇವರ ಕಾಲದಲ್ಲಿ ನಡೆದ ಪರ್ಶಿಯಾದ ದೊರೆಯೊಂದಿಗಿನ ರಾಜತಾಂತ್ರಿಕ ಸ್ನೇಹಕ್ಕೆ ಈ ಬಂದರುಗಳೇ ಮಾರ್ಗಗಳಾಗಿದ್ದವು.

೩.೧.೫ ರಾಷ್ಟ್ರಕೂಟರು

ಕ್ರಿ.ಶ. ೭೦೦ ರಿಂದ ೧೦೦೦ದವರೆಗಿನ ಕಾಲಾವಧಿ ಕರ್ನಾಟಕದಲ್ಲಿ ರಾಷ್ಟ್ರಕೂಟರು ಪ್ರಬಲರಾಗಿ ಆಳಿದ ಕಾಲ[೨೩]. ಮಾನ್ಯಖೇಟವನ್ನು ಕೇಂದ್ರ ಮಾಡಿಕೊಂಡು ಕನ್ಯಾಕುಮಾರಿಯಿಂದ ಬರೋಡಾ, ಇಂದೂರುಗಳವರೆಗಿನ ಪ್ರದೇಶದವರೆಗೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿದ್ದರು. ದಕ್ಷಿಣದ ರಾಜರುಗಳಲ್ಲಿ ವಿಂಧ್ಯ ಪರ್ವತದ ಆಚೆಗೂ ಪ್ರಭಾವ ಬೀರಿದ ಪ್ರಮುಖ ರಾಜಮನೆತನ ಇವರದು. ರಾಷ್ಟ್ರಕೂಟರು ದೇಶದಲ್ಲೆ ಪ್ರಖ್ಯಾತವಾದ ಸಾಮ್ರಾಜ್ಯ ಸ್ಥಾಪಿಸಲು ಅವರಿಗೆ ಬಂದರುಗಳು

ತುಂಬಾ ಸಹಾಯ ಮಾಡಿದ್ದವು. ಕಡಲೋತ್ತರ ದೇಶಗಳೊಂದಿಗೆ ವ್ಯಾಪಾರಿ ಸಂಪರ್ಕಕ್ಕೆ ಪಶ್ಚಿಮ ಕರಾವಳಿಯ ಬಂದರುಗಳು ಸಹಾಯಕವಾಗಿದ್ದವು.

ಇವರ ಕಾಲಕ್ಕೆ ಸೇರಿದ ಎರಡು ಶಾಸನಗಳು ಶಿರಸಿಯ ಸೋಮನಹಳ್ಳಿಯಲ್ಲಿ ದೊರೆತಿವೆ. ಇವು ಮೂರನೆಯ ಕೃಷ್ಣನ ತಮ್ಮ ಅಮೋಘವರ್ಷಕೊಟ್ಟಿಗದೇವನ ಕಾಲದ್ದು[೫೪]. ಈತನ ಹೆಸರು ಶಾಸನದಲ್ಲಿ ಪ್ರಸ್ತಾಪಿತವಾಗಿದ್ದು, ಈತನ ಆಡಳಿತ ಕಾಲ ಕ್ರಿ.ಶ. ೯೬೭ ರಿಂದ ಸುಮಾರು ಹತ್ತು ವರ್ಷಗಳ ಕಾಲ ನಡೆದಿರಬೇಕು. ಮುಂದೆ ಆತ ಚಾಲುಕ್ಯ ತೈಲಪನ (ಕ್ರಿ.ಶ. ೯೭೩) ಆಕ್ರಮಣದಿಂದ ರಾಜ್ಯ ಕಳೆದುಕೊಂಡಿರಬೇಕು[೫೫] ಎಂಬ ಊಹೆ ನಿಜ ಎನಿಸುತ್ತದೆ. ಆ ನಂತರ ಅವರ ಯಾವ ದಾಖಲೆಗಳೂ ಈ ಪ್ರದೇಶದಲ್ಲಿ ಇದುವರೆಗೆ ದೊರೆತಿಲ್ಲ. ಪಶ್ಚಿಮ ತೀರದ ಬಂದರುಗಳಂತೆ ಇವರಿಗೆ ಬನವಾಸಿಸಹಿತ ಅನೇಕ ಪ್ರಮುಖ ವಾಣಿಜ್ಯ ಕೇಂದ್ರಗಳು, ಪಟ್ಟಣಗಳು ಆರ್ಥಿಕ ಪ್ರಗತಿಗೆ ಸಹಾಯಕವಾಗಿದ್ದವು.

ಮೂರನೇ ಕೃಷ್ಣನ (೯೩೯–೯೬೬) ಕಾಲಕ್ಕೆ ರಾಷ್ಟ್ರಕೂಟರು ಪ್ರವರ್ಧಮಾನಕ್ಕೆ ಬಂದು ಚೋಳರ ಮೇಲೆ ದಾಳಿ ಮಾಡಿದರು (ಕ್ರಿ.ಶ. ೯೪೯). ಆಗ ಈತನಿಗೆ ಸಹಾಯ ಮಾಡಿದವನು ತಲಕಾಡಿನ ಎರಡನೇ ಬೂತುಗ. ಈ ಚೋಳರ ವಿರುದ್ಧದ ವಿಜಯದಿಂದ ಸಂತೋಷಗೊಂಡು, ಬೂತುಗನಿಗೆ ಬನವಾಸಿಯ ಮಂಡಲಾಧಿಪತಿಯನ್ನಾಗಿ ಮಾಡಿದನು[೫೬]. ಈ ಕಾಲದಲ್ಲಿ ಪಶ್ಚಿಮ ಕರಾವಳಿಯ ಉತ್ತರದ ಭಾಗಗಳನ್ನೊಳಗೊಂಡ ಪ್ರದೇಶವು ರಾಷ್ಟ್ರಕೂಟರ ಅಧೀನದಲ್ಲಿ ಬೂತುಗನ ಆಡಳಿತಕ್ಕೆ ಒಳಪಟ್ಟಿತ್ತು. ರಾಷ್ಟ್ರಕೂಟರು ಆಂತರಿಕ ಹಾಗೂ ವಿದೇಶಿ ವ್ಯಾಪಾರಗಳಿಂದ ಬಹಳ ಲಾಭ ಪಡೆದವರು. ಇವರ ಉಚ್ಛ್ರಾಯ ಕಾಲದಲ್ಲಿ ವಿದೇಶಗಳಿಗೆ ರಾಯಭಾರಿಗಳನ್ನು ಕಳಿಸಿದವರು. ಇದಲ್ಲದೆ ವಿದೇಶಿ ಅರಸರ ರಾಯಭಾರಿಗಳನ್ನು ತಮ್ಮ ದೇಶಕ್ಕೂ ಆಹ್ವಾನಿಸಿಕೊಂಡಿದ್ದರು. ಇವರ ಕಾಲದಲ್ಲಿ ಬಂದರುಗಳು ಪ್ರಮುಖ ಸಂಪರ್ಕ ಕೇಂದ್ರಗಳಾಗಿದ್ದವು. ದಖ್ಖನ್ನಿನ ಭೂಮಾರ್ಗವು ಇವರಿಗೆ ದುರ್ಲಭವಾಗುತ್ತಾ ಬಂದಿದ್ದರಿಂದ ಇವರು ಹೆಚ್ಚಾಗಿ ಪಶ್ಚಿಮ ಕರಾವಳಿಯ ಈ ಬಂದರು ಮಾರ್ಗವನ್ನೇ ತಮ್ಮ ಎಲ್ಲಾ ಸಂಪರ್ಕಗಳಿಗೆ ಬಳಸಿಕೊಂಡರು.

೩.೧.೬ ಹೊಯ್ಸಳರು

ವಿಜಯನಗರಸಾಮ್ರಾಜ್ಯದ ಆರಂಭಕ್ಕಿಂತ ಮೊದಲು ಕರ್ನಾಟಕದಲ್ಲಿ ಪ್ರಬಲರಾಗಿದ್ದವರು ಹೊಯ್ಸಳರು. ಕಲ್ಯಾಣದ ಚಾಲುಕ್ಯರ ಸಾಮಂತರಾಗಿ, ಅವರ ಪತನದ ನಂತರ ಸ್ವಾತಂತ್ರ್ಯ ಘೋಷಿಸಿಕೊಂಡರು. ಇವರ ಸಮಕಾಲೀನರಾದ ಸೇವುಣರು, ಕಾಕತೀಯರು ಮತ್ತು ಪಾಂಡ್ಯರೊಡನೆ ಆಗಾಗ ಕಾದಾಡಬೇಕಾಯಿತು. ಇವರು ಅಲ್ಪಕಾಲದಲ್ಲಿ ಅಂತರಿಕ ಸಂಘರ್ಷ ಮೆಟ್ಟಿನಿಂತು ಬೃಹತ್‌ಸಾಮ್ರಾಜ್ಯ ಕಟ್ಟಿದ್ದರು.

ಹೊಯ್ಸಳ ವಿಷ್ಣುವರ್ಧನ (ಕ್ರಿ.ಶ. ೧೧೦೮-೧೧೫೨)ನು ೧೧೧೯ರಲ್ಲಿ ಹಾನಗಲ್‌ನ್ನು ಆಕ್ರಮಿಸಿದನು. ಇದು ಉತ್ತರ ಕನ್ನಡದಲ್ಲಿ ಹೊಯ್ಸಳರ ಮೊದಲ ಪ್ರವೇಶ. ಮುಂದೆ ಕೇವಲ ಒಂದೆರಡು ವರ್ಷದಲ್ಲೇ ಚಾಲುಕ್ಯ ಆರನೇ ವಿಕ್ರಮಾದಿತ್ಯನು ಅಚ್ಚುಗಿಯನ್ನು ಆತನ ವಿರುದ್ಧ ಕಳಿಸಿದ್ದನು. ಮತ್ತೆ ಕ್ರಿ.ಶ. ೧೧೪೦-೪೧ ರಲ್ಲಿ ವಿಷ್ಣುವರ್ಧನನು ಬನವಾಸಿ ೧೨,೦೦೦[೫೭] ಗೆದ್ದನು. ಮುಂದೆ ಎರಡನೆಯ ಬಲ್ಲಾಳ (೧೧೭೩-೧೨೨೦)ನ ಕಾಲದಲ್ಲಿ ಹಾನಗಲ್, ಬೆಳ್ಳಗಾವೆ ಮತ್ತು ಬನವಾಸಿ ೧೨೦೦೦ಗಳನ್ನು ವಶಪಡಿಸಿಕೊಂಡಿದ್ದನು. ಮೂರನೇ ನರಸಿಂಹನ ಕಾಲದಲ್ಲಿ (೧೨೨೦-೩೫) ಯುವರಾಜ ಮೂರನೇ ಬಲ್ಲಾಳನು ಮಹಾಮಂಡಳೇಶ್ವರನಾಗಿ ಉತ್ತರ ಕನ್ನಡದ ಕರಾವಳಿ ಭಾಗವನ್ನು ಆಳಿದ್ದು ತಿಳಿಯುತ್ತದೆ[೫೮]. ಹೊಯ್ಸಳರು ಕರಾವಳಿಯಲ್ಲಿ ಪ್ರಮುಖ ವಾಣಿಜ್ಯ ಕೇಂದ್ರಗಳನ್ನು ಗೆದ್ದುಕೊಂಡಿದ್ದರು.

ಕ್ರಿ.ಶ. ೧೩೧೮-೧೯ರಲ್ಲಿ ಹೊಯ್ಸಳ ಚಕ್ರವರ್ತಿ ೩ನೆಯ ಬಲ್ಲಾಳನ ಸೇನೆಯು ಚಂದಾವರದಲ್ಲಿ ಆಳುತ್ತಿದ್ದ ಕಾದಂಬರನ್ನು ಮುತ್ತಿತು. ಆಗ ಚಂದಾವರ ಕಾದಂಬರು ಆಳುಪರ ಸಾಮಂತರಾಗಿದ್ದರು[೫೯]. ಹೀಗೆ ಮೇಲೇರಿಬಂದ ಹೊಯ್ಸಳ ದೊರೆಯನ್ನು ರಣರಂಗದಲ್ಲಿ ಎದುರಿಸುವ ಬದಲು ಆಳುಪಸೋಯಿದೇವನು ತಮ್ಮ ಮನೆತನದ ರಾಜಕುಮಾರಿ ಚಿಕ್ಕಾಯಿತಾಯಿಯನ್ನು ಅವನಿಗೆ ಮದುವೆ ಮಾಡಿಕೊಟ್ಟನು[೬೦]. ಇಲ್ಲಿಂದ ಮುಂದೆ ಬಾರ್ಕೂರಿನಿಂದಲೆ ಈ ಎರಡು ಮನೆತನಗಳು ಆಳಿದ್ದು ತಿಳಿಯುತ್ತದೆ. ಇದು ೧೩೩೩ ರಿಂದ ೧೩೪೪ ರವರೆಗೆ ನಡೆಯಿತು[೬೧]. ಕೊನೆಯ ಕಾಲಾವಧಿಯು ಚಿಕ್ಕಾಯಿತಾಯಿಯಿಂದ ಆಳಲ್ಪಟ್ಟಿತು. ಬಲ್ಲಾಳನು ೧೩೪೨ರಲ್ಲಿ ಮರಣಹೊಂದಿದ ನಂತರ ಚಿಕ್ಕಾಯಿತಾಯಿಯು ಗಂಡನ ಬಿರುದುಗಳನ್ನು ಧರಿಸಿಕೊಂಡು ಆಳಿದಳು. ಇಡಗುಂಜಿಯಲ್ಲಿ ಇವರ ಒಂದು ಶಾಸನವಿದೆ.[೬೨]

ಹೊಯ್ಸಳರು ತಾವು ಯುದ್ಧದಲ್ಲಿ ಕಳೆದುಕೊಂಡಿದ್ದನ್ನು ಪಡೆಯುವ ಉದ್ದೇಶದಿಂದಲೇ ಕರಾವಳಿಯತ್ತ ತಿರುಗಿದ್ದರು. ಇವರು ಗೆದ್ದು ಕೊಂಡ ಪ್ರದೇಶಗಳು ಬಂದರುಗಳ ವ್ಯಾಪಾರದಿಂದ ಬೆಳೆದ ವಾಣಿಜ್ಯ ಕೇಂದ್ರಗಳಾಗಿದ್ದವು. ಬನವಾಸಿ, ಹಾನಗಲ್, ಬೆಳ್ಳಗಾವೆ, ಬಾರ್ಕೂರು ಮುಂತಾದವುಗಳು ವ್ಯಾಪಾರಿ ಕೇಂದ್ರಗಳಾಗಿದ್ದವು. ಅಲ್ಲದೆ ಬಾರ್ಕೂರು, ಭಟ್ಕಳ, ಹೊನ್ನಾವರ, ಕುಮಟಾ, ಚಂದಾವರಗಳು ರೇವುಗಳಾಗಿದ್ದು ಕಡಲೋತ್ತರ ವ್ಯಾಪಾರದಲ್ಲಿ ಪ್ರಮುಖ ಸ್ಥಾನ ಪಡೆದಿದ್ದವು. ಹೊಯ್ಸಳರ ಪ್ರಭಾವವೂ ಕಡಿಮೆಯಾಗುತ್ತಿದ್ದಂತೆ ವಿಜಯನಗರ ಸಾಮ್ರಾಜ್ಯವು ಪ್ರಬಲವಾಗುತ್ತಾ ಬರತೊಡಗಿತ್ತು.

೩.೧.೭ ಸೇವುಣರು

ಸೇವುಣರು ಹೊಯ್ಸಳರ ಸಮಕಾಲೀನರಾಗಿದ್ದು ಬನವಾಸಿಯ ಜೈನಮಂದಿರದಲ್ಲಿ ಇವರ ಒಂದು ಶಾಸನ ದೊರೆತಿದೆ. ಪ್ರಾಚೀನ ತ್ರುಟಿತ ಶಾಸನದಿಂದ ಖಚಿತ ಮಾಹಿತಿ ಯಾವುದೂ ದೊರೆಯುವುದಿಲ್ಲ[೬೩]. ಮುಂಡಗೋಡಿನ ಪಾಳಾದಲ್ಲಿ ದೊರೆತಿರುವ ಎರಡು ವೀರಗಲ್ಲುಗಳು ಹಾಗೂ ಸಿದ್ದಾಪುರದ ಬೇಡ್ಕಣಿಯಲ್ಲಿ ದೊರೆತಿರುವ ಎರಡು ಶಾಸನಗಳು ಸೇವುಣರ ಕುರಿತು ತಿಳಿಸುತ್ತವಾದರೂ ಅವರ ಆಡಳಿತದ ಬಗ್ಗೆ ಸ್ಪಷ್ಟವಾದ ಮಾಹಿತಿ ನೀಡಲಾರವು.

ಹೊಯ್ಸಳರು ಮತ್ತು ಅದೇ ಅವಧಿಯ ಸೇವುಣರು ಪ್ರಬಲ ರಾಜ್ಯ ಕಟ್ಟಿ ಕನ್ನಡ ನಾಡನ್ನು ಆಳಿದ್ದರು. ಇವರ ಕಾಲದಲ್ಲಿ ಕರಾವಳಿ ಬಂದರಿನ ಮೂಲಕ ನಡೆದ ವ್ಯಾಪಾರ ವ್ಯವಹಾರಗಳು ಅವರ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರವಹಿಸಿದ್ದವು. ಹೊಯ್ಸಳರು ಪಶ್ಚಿಮ ಕರಾವಳಿಯತ್ತ ತಮ್ಮ ಗಮನ ಹರಿಸಲು ಮುಖ್ಯ ಕಾರಣ ಇಲ್ಲಿಯ ಕಡಲೋತ್ತರ ಸಂಪರ್ಕ ಕಲ್ಪಿಸುವ ಬಂದರುಗಳಾಗಿದ್ದವು.

ಸೇವುಣರು ತಮ್ಮ ರಾಜ್ಯದಲ್ಲಿ ವ್ಯಾಪಾರ ವ್ಯವಹಾರಗಳಿಗೆ ಹೆಚ್ಚಿನ ಮಹತ್ವ ನೀಡಿದ್ದಲ್ಲದೇ ತೆರಿಗೆ ವಿನಾಯತಿ ನೀಡಿದ್ದು ತಿಳಿಯುತ್ತದೆ. ಒಟ್ಟಿನಲ್ಲಿ ಹೊಯ್ಸಳ-ಸೇವುಣರ ಕಾಲಾವಧಿಯಲ್ಲಿ ಕರ್ನಾಟಕದ ಬಂದರುಗಳು ಆರ್ಥಿಕ ಚಟುವಟಿಕೆಗಳಿಂದ ತುಂಬಿದ್ದವು. ಸೇವುಣರು ನೌಕಾಸಾರಿಗೆ ಹಾಗೂ ವ್ಯಾಪಾರ ನಡೆಸುತ್ತಿದ್ದ ಕುರಿತು ಇವರ ಶಾಸನಗಳಲ್ಲಿ ಬರುವ ಜಲಸುಂಕದ[೬೪] ಉಲ್ಲೇಖಗಳು ತಿಳಿಸುತ್ತವೆ. ಸೇವುಣರು ಕಡಲೋತ್ತರ ವ್ಯಾಪಾರಗಳನ್ನು ನಡೆಸಿದ್ದು ಇದರಿಂದ ತಿಳಿಯುತ್ತದೆ.

೩.೧.೮ ವಿಜಯನಗರ ಸಾಮ್ರಾಟರು (೧೩೩೫ ರಿಂದ ೧೪೦೧)

ಕ್ರಿ.ಶ ೧೪ನೆಯ ಶತಮಾನದ ಪೂರ್ವಾರ್ಧದಲ್ಲಿ ಸ್ಥಾಪನೆಗೊಂಡ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ಚರಿತ್ರೆಯಲ್ಲಿ ಮಹತ್ವದ ಸ್ಥಾನ ಪಡೆದಿದೆ. ಶಕ್ತಿಯುತ ರಾಷ್ಟ್ರಗಳ ವಿರುದ್ಧ ನಿರಂತರ ಸೆಣಸುತ್ತಾ ವಿಜಯವನ್ನುಗಳಿಸುತ್ತಾ ಬಂದಿತು[೬೫]. ಈ ವಿಜಯಗಳಿಂದ ಇದಕ್ಕೆ ವಿಜಯನಗರ ಎಂದು ಹೆಸರು ಬಂತು[೫೮]. ವಿಜಯನಗರದ ಸ್ಥಾಪನೆಯ ಮೂರು-ನಾಲ್ಕು ದಶಕಗಳಲ್ಲಿ ಇದು ವಿಶಾಲವಾಗಿ ವ್ಯಾಪಿಸಿತು. ಪ್ರಬಲವಾದ ಸೈನ್ಯ ಹಾಗೂ ವಿಸ್ತಾರ ಸಾಮ್ರಾಜ್ಯ ಸ್ಥಾಪನೆಯ ಉತ್ಸಾಹದ ಮುಂದೆ ರಾಜ್ಯದ ಸಣ್ಣಪುಟ್ಟ ರಾಜಮನೆತನಗಳು, ಸಾಮಂತರು, ತುಂಡರಸುಗಳೆಲ್ಲಾ ಇದರಲ್ಲಿ ಲೀನವಾದರು. ವಿಜಯನಗರದ ಅರಸರು ಕರಾವಳಿಯ ಬಂದರುಗಳನ್ನು ಅದ್ಭುತವಾದ ರೀತಿಯಲ್ಲಿ ತಮ್ಮ ಸಂಪತ್ ಅಭಿವೃದ್ಧಿಗೆ ಹಾಗೂ ರಾಜ್ಯದ ಸೈನ್ಯದ ಬೆಳವಣಿಗೆಗೆ ಬಳಸಿಕೊಂಡರು. ಇವರ ಕಾಲದಲ್ಲಿ ಬಸರೂರು, ಬಾರ್ಕೂರು, ಭಟ್ಕಳ, ಹೊನ್ನಾವರ ಬಂದರುಗಳು ದೊಡ್ಡ ರೀತಿಯಲ್ಲಿ ಕಡಲೋತ್ತರ ವ್ಯಾಪಾರದಲ್ಲಿ ತೊಡಗಿದ್ದವು.

ವಿಜಯನಗರದ ಆರಂಭದ ದಿನಗಳಲ್ಲಿ ಕರ್ನಾಟಕದ ಕರಾವಳಿಯ ದಕ್ಷಿಣ ಭಾಗದಲ್ಲಾಳುತ್ತಿದ್ದ ಆಳುಪರು–ಹೊಯ್ಸಳರು ದುರ್ಬಲರಾಗಿದ್ದರು. ಕರಾವಳಿಯ ಉತ್ತರ ಭಾಗದಲ್ಲಿ ಆಳುತ್ತಿದ್ದ ಕದಂಬ ವಂಶಗಳೂ ಆಂತರಿಕ ಹಾಗೂ ಬಾಹ್ಯ ಸಂಘರ್ಷಗಳಿಂದ ಅಂತ್ಯಗೊಳ್ಳುತ್ತಿದ್ದವು. ಕ್ರಿ.ಶ. ೧೩೩೬ರಲ್ಲಿ ವಿಜಯನಗರ ಸ್ಥಾಪನೆಯೊಂದಿಗೆ ಉತ್ತರ ಕನ್ನಡದ ಕರಾವಳಿಯ ದಕ್ಷಿಣದ ಪ್ರದೇಶಗಳಾದ ಭಟ್ಕಳ, ಹೊನ್ನಾವರ ಹಾಗೂ ಕುಮಟಾ ತಾಲೂಕಿನ ಕೆಲವು ಭೂಪ್ರದೇಶಗಳು ವಿಜಯನಗರಾಡಳಿತಕ್ಕೆ ಒಳಪಟ್ಟವು. ಬಾರ್ಕೂರಿನಲ್ಲಿ ದೊರೆತಿರುವ ಶಾಸನದ ಆಧಾರದಲ್ಲಿ ವಿಜಯನಗರದರಸ ಒಂದನೇ ಹರಿಹರನ ಕಾಲಕ್ಕಾಗಲೇ ಬಾರ್ಕೂರಿನಲ್ಲಿ ಒಂದು ಕೋಟೆ ನಿರ್ಮಿಸಿದ್ದು ತಿಳಿಯುತ್ತದೆ[೬೬].

ಸುಮಾರು ೧೩೪೮ರ ಇಡಗುಂಜಿ[೬೭] ಶಾಸನವು ಮಹಾಪ್ರಧಾನ ಮಲ್ಲೇಯ ದಂಡನಾಯಕನು ಈ ಪ್ರದೇಶದಲ್ಲಿ ಆಡಳಿತ ನಡೆಸುತ್ತಿದ್ದ ಬಗ್ಗೆ ತಿಳಿಸುತ್ತದೆ. ಚಿಕ್ಕಾಯಿ ತಾಯಿ ೧೩೪೬ರ ಸುಮಾರಿಗೆ ಸಂಗಮ ಸೋದರರಿಗೆ ತಾನಾಳುತ್ತಿದ್ದ ಉತ್ತರ ಕನ್ನಡದ ಪ್ರದೇಶವನ್ನು ಸ್ವಸಂತೋಷದಿಂದ ಆಡಳಿತಕ್ಕೆ ಬಿಟ್ಟುಕೊಟ್ಟಿದ್ದಳು. ಅವು ಭಟ್ಕಳ ಹಾಗೂ ಹೊನ್ನಾವರದ ಪ್ರದೇಶಗಳಾಗಿದ್ದವು. ಮಲ್ಲೇಯ ದಂಡನಾಯಕನು (೧೩೪೫–೧೩೬೫) ಬಾರ್ಕೂರು ಕೇಂದ್ರದಿಂದ ಆಡಳಿತ ನೋಡಿಕೊಳ್ಳುತ್ತಿದ್ದನು.

ಚಂದಾವರ ಕಾದಂಬರು ವಿಜಯನಗರ ಅರಸರ ಆಡಳಿತಕ್ಕೆ ಪ್ರತಿರೋಧ ಒಡ್ಡಿದಾಗ, ಹರಿಹರನ ಸಹೋದರ ಮಾರಪ್ಪ ಉತ್ತರ ಕನ್ನಡವನ್ನು ತನ್ನ ಸೈನ್ಯದೊಂದಿಗೆ ಹೊಕ್ಕಿದನು. ಇದು ೧೩೪೭[೬೮] ರಲ್ಲಿ ನಡೆಯಿತು. ಈ ಘಟನೆಯ ನಂತರ ಮಾರಪ್ಪನು ಬನವಾಸಿ ೧೨೦೦೦ವನ್ನು ಚಂದ್ರಗುತ್ತಿಯಿಂದ ಆಳುತ್ತಿದ್ದದ್ದು ತಿಳಿಯುತ್ತದೆ. (ಇ.ಸಿ. ೩೭೫) ನಂತರ ಮೇಲ್ವಿಚಾರಕನಾಗಿದ್ದ ಮಾಧವಮಂತ್ರಿ ಕ್ರಿ.ಶ. ೧೩೭೮ರಲ್ಲಿ ಗೋವಾವನ್ನು ಬಹುಮನಿಗಳಿಂದ ಗೆದ್ದು ಗೋವಾ, ಕಾರವಾರ, ಅಂಕೋಲಾ ಪ್ರದೇಶಗಳನ್ನು ವಿಜಯನಗರ ಸಾಮ್ರಾಜ್ಯಕ್ಕೆ ಸೇರಿಸುತ್ತಾನೆ.

ಮುಂದೆ ವಿಜಯನಗರ ಅರಸರು ಗವರ್ನರುಗಳನ್ನು ನೇಮಿಸಿ ಹೊನ್ನಾವರ ಕೇಂದ್ರದಿಂದ ಈ ಪ್ರದೇಶಗಳ ಆಡಳಿತ ನಡೆಸಿದರು[೬೯]. ತುಳುನಾಡನ್ನು ಕ್ರಿ.ಶ. ೧೩೪೫ರಲ್ಲಿ ವಿಜಯನಗರದರಸರು ಆಕ್ರಮಿಸಿದರು[೭೦]. ಮುಂದೆ ೧ನೇ ಹರಿಹರ ಹಾಗೂ ಬುಕ್ಕರು ವಿಜಯನಗರದ ಕೈಯಿಂದ ತುಳುನಾಡು ತಪ್ಪದಂತೆ ತಮ್ಮ ಆಡಳಿತ ನಡೆಸಿದರು. ಕಾಲಕ್ಕೆ ತಕ್ಕಂತೆ ಸಾಮ, ದಂಡ, ಭೇದಗಳಿಂದ ತುಳುನಾಡು ವಿಜಯನಗರದ ಕೈಯಲ್ಲೇ ಉಳಿಯುವಂತೆ ಮುಂದಿನ ಅರಸರು ನೋಡಿಕೊಂಡರು.

ಹೀಗೆ ವಿಜಯನಗರದ ಆಡಳಿತದ ಸಂದರ್ಭದಲ್ಲಿ ತುಳುನಾಡಿನಲ್ಲಿ ಬಾರ್ಕೂರು ಹಾಗೂ ಮಂಗಳೂರು ಎರಡು ಕೇಂದ್ರಗಳಿದ್ದವು. ಅಲ್ಲಿ ರಾಜನಿಷ್ಠರಾದ, ವಿಶ್ವಾಸಿ ಆಡಳಿತ ತಜ್ಞರನ್ನೂ ರಾಜ್ಯಪಾಲರಾಗಿ ನೇಮಿಸಿ ಆಡಳಿತ ನಡೆಸಿದರು[೨೧].

ವಿಜಯನಗರದ ವೈಭವದ ಹಾಗೂ ಸಮರ್ಥ ಸೈನ್ಯಕ್ಕೆ ಕರ್ನಾಟಕದ ಬಂದರುಗಳ ಕೊಡುಗೆ ಅಪೂರ್ವವಾದದ್ದು. ಕಡಲೋತ್ತರ ವ್ಯಾಪಾರ ನಡೆಸಿದಂತೆ ಪರ್ಶಿಯಾ ಮುಂತಾದೆಡೆಗಳಿಂದ ಸೈನ್ಯಕ್ಕೆ ಬೇಕಾದ ಉತ್ತಮ ತಳಿಯ ಕುದುರೆಗಳನ್ನು ಕಡಲ ಮಾರ್ಗವಾಗಿ ತರಿಸುತ್ತಿದ್ದರು. ರಾಜ್ಯದ ವ್ಯಾಪಾರದಲ್ಲಿ ಅರಬ್ಬವರ್ತಕರು ದೊಡ್ಡ ಸಂಖ್ಯೆಯಲ್ಲಿದ್ದರು. ಬಾರ್ಕೂರು, ಭಟ್ಕಳ, ಹೊನ್ನಾವರ ಬಂದರುಗಳ ಮೂಲಕ ವಿದೇಶದ ಉತ್ತಮ ತಳಿಯ ಕುದುರೆಗಳನ್ನು ತರಿಸಿಕೊಂಡರು. ಇದಲ್ಲದೇ ತಮ್ಮ ರಾಜ್ಯದ ಉತ್ತಮ ಬೆಳೆಗಳಾದ ಹತ್ತಿ, ಭತ್ತ, ಅಡಿಕೆ, ತೆಂಗು ಹಾಗೂ ಮಸಾಲೆ ದಿನಿಸುಗಳನ್ನು ವಿದೇಶಕ್ಕೆ ದೊಡ್ಡ ಪ್ರಮಾಣದಲ್ಲಿ ಮಾರಾಟ ಮಾಡಿದ್ದರು. ಇವರ ಕಾಲದಲ್ಲಿ ಹಡಗು ಕಟ್ಟುವ ಉದ್ಯಮ ಭರದಿಂದ ಬೆಳೆಯಿತು.

೩.೨ ಸಾಮಂತರ ಆಡಳಿತ ಕಾಲದಲ್ಲಿ ಕರ್ನಾಟಕದ ಬಂದರುಗಳು

ಕರಾವಳಿಯನ್ನು ಹಲವು ಸಂದರ್ಭದಲ್ಲಿ ಸಾಮಂತರು ಆಳಿದ್ದು ಕಂಡು ಬರುತ್ತದೆ. ಶಾತವಾಹನರ ಕಾಲದಿಂದ ಆರಂಭಿಸಿ ವಿಜಯನಗರ ಸಾಮ್ರಾಜ್ಯದವರೆಗೆ ಕರಾವಳಿಯನ್ನು ಹಲವು ಸಾಮಂತ ಮನೆತನಗಳು ಆಳಿದವು. ಸಾಮಂತ ಪ್ರಭುತ್ವದ ಆಡಳಿತದ ಕುರಿತು ಭಾರತದಲ್ಲಿ ಹಲವು ರೀತಿಯ ಅಭಿಪ್ರಾಯಗಳು ಪ್ರಚಲಿತದಲ್ಲಿದ್ದರೂ ಆರ್.ಎಸ್. ಶರ್ಮಾರವರು ತಮ್ಮ 'ಭಾರತದಲ್ಲಿ ಸಾಮಂತ ಪ್ರಭುತ್ವ' ದಲ್ಲಿ ವಿಷದವಾಗಿ ವಿವರಿಸಿದ್ದಾರೆ. ಸಾಮಂತಪ್ರಭುಗಳ ಆಡಳಿತವನ್ನು ಯೂರೋಪಿನ ಊಳಿಗಮಾನ್ಯ ಪದ್ಧತಿಗೆ ಹೋಲಿಸುವುದಿದೆ. ಒಟ್ಟಿನಲ್ಲಿ ಪಾಶ್ಚಾತ್ಯ ಸಾಮಂತವಾದಕ್ಕೂ ಭಾರತೀಯ ಸಾಮಂತವಾದಕ್ಕೂ ಹಲವು ವಿದಧ ಸಾಮ್ಯ ಹಾಗೂ ವ್ಯತ್ಯಾಸಗಳಿವೆ. ತನ್ನ ಆದಾಯದ ಒಂದು ಭಾಗವನ್ನು ರಾಜನಿಗೆ ಕೊಡುವುದು, ಸ್ವತಃ ಸೈನ್ಯ ಸಂಘಟಿಸುವುದು, ಅಗತ್ಯವಿದ್ದಾಗ ಸಾಮ್ರಾಟನಿಗೆ ಸೈನ್ಯದಸಹಾಯ ನೀಡುವುದು, ವಾರ್ಷಿಕ ಕಪ್ಪ ನೀಡುವುದು ಇವರ ಕರ್ತವ್ಯವಾಗಿತ್ತು. ಸಾಮಂತನು ದತ್ತಿ ದಾನ ನೀಡಬಲ್ಲವನಾಗಿದ್ದನು, ಹಲವು ಸಾರೆ ಸಾಮ್ರಾಟರು ದುರ್ಬಲರಾಗಿದ್ದಾಗ ಸ್ವಾತಂತ್ರ್ಯ ಘೋಷಿಸಿಕೊಂಡ ಸಾಮಂತರು ಕಾಣುತ್ತಾರೆ. ಹಲವರು ಪಕ್ಷಾಂತರ ಮಾಡಿ ಬೇರೆ ರಾಜನ ಸಾಮಂತರಾದದ್ದುಇದೆ. ಈ ಸಾಮಂತರು ಪ್ರಜೆಗಳೊಂದಿಗೆ ನೇರ ಸಂಪರ್ಕದಲ್ಲಿದ್ದವರಾದ್ದರಿಂದ ಪ್ರಜೆಗಳು ಇವರಿಗೆ ನಿಷ್ಠರಾಗಿರುತ್ತಿದ್ದರು. ಸಾಮ್ರಾಟರ ವಂಶಗಳೊಂದಿಗೆ ವೈವಾಹಿಕ ಸಂಬಂಧ ಹೊಂದುವುದರ ಮೂಲಕ ಸಾಮ್ರಾಟರಿಗೆ ಹತ್ತಿರದವರು ಆಗಿದ್ದನ್ನು ಕಾಣಬಹುದು. ಕರಾವಳಿಯಲ್ಲಿ ಪ್ರಬಲ ಸಾಮಂತ ಅರಸರು ಆಳಿದ್ದು

ಕಂಡುಬರುತ್ತದೆ. ಚಾಲುಕ್ಯರೊಂದಿಗೆ, ಹೊಯ್ಸಳರೊಂದಿಗೆ ವೈವಾಹಿಕ ಸಂಬಂಧ ಹೊಂದಿದ್ದ ಸಾಮಂತರು, ರಾಷ್ಟ್ರಕೂಟ, ಯಾದವರು ಮುಂತಾದ ರಾಜರೊಂದಿಗೆ ಸೌಹಾರ್ದ ಸಂಬಂಧ ಹೊಂದಿದ್ದ ಸಾಮಂತರು ಇಲ್ಲಿ ಆಳಿದ್ದಾರೆ. ಸಾಮ್ರಾಟರ ಕೇಂದ್ರ ಸ್ಥಳದಿಂದ ದೂರದಲ್ಲಿದ್ದರಿಂದ ಇವರು ಒಂದರ್ಥದಲ್ಲಿ ಸ್ವತಂತ್ರ ಅರಸರಂತೆ ಇದ್ದರು.

೩.೨.೧ ಆಳುಪರು

ಪಶ್ಚಿಮ ಕರಾವಳಿಯ ಮಂಗಳೂರು ಹಾಗೂ ಬಾರ್ಕೂರು ಕೇಂದ್ರಗಳಾಗಿ ಬಹುದೀರ್ಘಕಾಲ ಆಳಿದವರು ಆಳುಪರು. ಅವರನಾಡಿಗೆ ಆಳ್ವಖೇಡ ೬೦೦೦ ಎಂಬ ಹೆಸರಿತ್ತು. ಇವರು ಮಂಗಳೂರು, ಉದ್ಯಾವರ ಹಾಗೂ ಬಾರ್ಕೂರುಗಳನ್ನು ಕೇಂದ್ರ, ರಾಜಧಾನಿಯಾಗಿ ಮಾಡಿಕೊಂಡು ಆಳಿದಿದೆ. ಗ್ರೀಕರ ಭೂಗೋಳ ತಜ್ಞನಾದ ತೊಲೆಮಿ ಓಲ್ಯೆಖೋರಾ ಎಂದು ಈ ಪ್ರದೇಶವನ್ನು ಕರೆದಿದ್ದಾನೆ. ಕ್ರಿ.ಶ. ೭ನೇ ಶತಮಾನದಿಂದ ೧೧ ನೇ ಶತಮಾನದವರೆಗೆ ಪೊಂಬುಚ್ಚವು ಇವರ ರಾಜಧಾನಿಯಾಗಿತ್ತು. ಇವರು ಕೇರಳದ ನಿಲೇಶ್ವರದಿಂದ ಉತ್ತರ ಕನ್ನಡದ ಗೋಕರ್ಣದವರೆಗೂ ತಮ್ಮ ರಾಜ್ಯವನ್ನು ವಿಸ್ತರಿಸಿದ್ದರು. ಚಾಲುಕ್ಯರು, ಕದಂಬರು, ಹೊಯ್ಸಳರು ಮುಂತಾದವರ ಸಾಮಂತರಾಗಿ ಆಳ್ವಿಕೆ ನಡೆಸಿದವರು ಆಳುಪರು.

೩.೨.೨ ಭೋಜರು

ಅಂಕೋಲಾ ಕಾರವಾರದ ಮಧ್ಯದಲ್ಲಿ ಅರ್ಗಾ ಪ್ರದೇಶ ಕೇಂದ್ರ ಮಾಡಿಕೊಂಡು ಭೋಜರೆಂಬ ಅರಸು ಮನೆತನ ಆಳಿದ್ದು ತಿಳಿದು ಬರುತ್ತದೆ. ಇವರು ದಖ್ಖನ್ ಆಳಿದ ಭೋಜರ ಒಂದು ಶಾಖೆಯಾಗಿರುವ ಸಾಧ್ಯತೆಗಳಿವೆ. ಇವರ ಕುರಿತು ಕೆಲವು ಶಾಸನಗಳು ದೊರತಿವೆ. ಮುಖ್ಯವಾಗಿ ಅರ್ಗಾದಲ್ಲಿ ದೊರತಿರುವ ತಾಮ್ರ ಪಟಗಳು. ಇವರು ಕ್ರಿ.ಶ. ೭ನೇ ಶತಮಾನದಲ್ಲಿದವರಾದ್ದರಿಂದ ಇವರು ಚಾಲುಕ್ಯರ ಸಮಕಾಲಿನರಾಗಿದ್ದರು.

೩.೨.೩. ಕೇಕೆಯ ಪಲ್ಲವರು

ಕೇಕೆಯರನ್ನು ಕೈಕೇಯರು ಎಂದೂ ಕರೆಯುತ್ತಾರೆ. ಉತ್ತರಕನ್ನಡದ ಕೆಲವು ಪ್ರದೇಶಗಳನ್ನು ಆಳಿದ ಈ ಮನೆತನವು ಆರಂಭದಲ್ಲಿ ಪಂಜಾಬದ ಬಿಯಾಸ ಮತ್ತು ಸತಲಜ್ ನದಿಗಳ ನಡುವಿನ ಪ್ರದೇಶದಲ್ಲಿ ಆಳುತ್ತಿತ್ತು. ಕಾಲಾಂತರದಲ್ಲಿ ದಕ್ಷಿಣಕ್ಕೆ ಬಂದು, ಸ್ಥಳೀಯ ರಾಜವಂಶದವರೊಂದಿಗೆ ವೈವಾಹಿಕ ಸಂಬಂಧ ಪಡೆದು ತಮ್ಮ ಶಕ್ತಿ ಹೆಚ್ಚಿಸಿಕೊಂಡರು[೭೨]. ಕನ್ನಡದ ಪ್ರಥಮ ಶಾಸನ ಎಂಬ ಹೆಗ್ಗಳಿಕೆಗೆ ಒಳಗಾಗಿರುವ ಹಲ್ಮಿಡಿ ಶಾಸನದಲ್ಲಿ ಪಲ್ಲವ ಮತ್ತು ಕೇಕಯರಿಗೂ, ಕದಂಬ-ಸೇಂದ್ರಕ-ಬಾಣರಿಗೂ ನಡೆದ ಕದನದ ಉಲ್ಲೇಖವಿದೆ[೭೩]. ಹೀಗೆ ಪ್ರಾಚೀನ ಕಾಲದಿಂದಲೂ ಪ್ರಮುಖ ಸ್ಥಾನ ಪಡೆದಿದ್ದ ಈ ಅರಸು ಮನೆತನಗಳು ಮುಂದೆ ಕದಂಬರೊಂದಿಗೆ ವೈವಾಹಿಕ ಸಂಬಂಧ

ಬೆಳೆಸಿಕೊಂಡರು[೭೪]. ಹೊನ್ನಾವರದ ಕೈಕೇಯ ಚಿತ್ರಸೇನನ ತಾಮ್ರಪತ್ರವು ಉಲ್ಲೇಖಿಸಿರುವ ರವಿ ಅರಸನು ಬನವಾಸಿಯ ಅರಸ ರವಿವರ್ಮನಾಗಿರಬೇಕೆಂದೂ ಚಿತ್ರಸೇನನು ಆತನ ಅಧೀನನಾಗಿರಬೇಕೆಂದು ಗುರವರವರು ಹೇಳುತ್ತಾರೆ[೭೫]. ಈ ವಿವರಗಳನ್ನು ಮತ್ತು ಶಾಸನ ದೊರೆತ ಸ್ಥಳವನ್ನು ನೋಡಿದರೆ ಇಂದಿನ ಹೈಗುಂದದಲ್ಲಿ ಚಿತ್ರಸೇನನು ಆಡಳಿತ ನಡೆಸುತ್ತಿದ್ದನೆನ್ನಬಹುದು. ಹೈಗುಂದವು ಶರಾವತಿ ನದಿಯ ಮಧ್ಯದಲ್ಲಿರುವ ದ್ವೀಪವಾಗಿದ್ದು, ಪ್ರಮುಖ ಆಡಳಿತ ಕೇಂದ್ರವು ಆಗಿತ್ತು. ಇದೊಂದು ವ್ಯಾಪಾರಿ ಕೇಂದ್ರವೂ ಆಗಿತ್ತೆಂದು ತಿಳಿದು ಬರುತ್ತದೆ.

ಕೇಕೆಯರಂತೆ ಪಲ್ಲವರ ರಾಜವಂಶ ಒಂದು ಈ ಪ್ರದೇಶದಲ್ಲಿ ಆಳುತ್ತಿದ್ದ ಬಗ್ಗೆ ತಿಳಿಯುತ್ತದೆ, ಶಾತವಾಹನರ ನಂತರ ಕರ್ನಾಟಕದ ಕೆಲವು ಭಾಗವನ್ನು ಪಲ್ಲವರು ಆಳುತ್ತಿದ್ದು, ಕದಂಬರು ಇವರನ್ನು ಪದಚ್ಯುತಗೊಳಿಸಿದರೆಂದು ತಿಳಿಯುತ್ತದೆ[೭೬]. ಹೀಗೆ ಸೋತು ಹೋದ ಪಲ್ಲವರ ಒಂದು ಶಾಖೆ ಉತ್ತರ ಕನ್ನಡದ ಕರಾವಳಿಯ ಬಳಿ ತಮ್ಮ ಪ್ರಭುತ್ವ ಸ್ಥಾಪಿಸಿ ಆಳಿತು. ಹೊನ್ನಾವರ ತಾಲೂಕಿನ ಕೆಕ್ಕಾರ ಮತ್ತು ಹಳದೀಪುರದಲ್ಲಿ ದೊರೆತ ಶಾಸನಗಳು ಈ ವಿಚಾರವನ್ನು ತಿಳಿಸುತ್ತವೆ. ಹೊನ್ನಾವರದ ಹಳದೀಪುರ ಶಾಸನವು ಪಲ್ಲವರಾಜಗೋಪಾಲ ದೇವನ ಕುರಿತಿದೆ.[೭೭] ಇದರಲ್ಲಿ 'ಕೈಕೇಯ ವಂಶೋದ್ಭವ' ಎಂದೂ 'ಪರಮೇಶ್ವರ' ಎಂದೂ ಕರೆದು ವಿಕ್ರಮಾದಿತ್ಯ ಸತ್ಯಾಶ್ರಯ ಶ್ರೀ ಪೃಥ್ವೀವಲ್ಲಭ ಪಲ್ಲವರಾಜ ಎಂದು ಕರೆದಿರುವುದರಿಂದ ಇತನು ಕೈಕೇಯ ವಂಶದ ತಾಯಿಯಲ್ಲಿ ಹುಟ್ಟಿರಬೇಕು ಹಾಗೇ ಚಾಲುಕ್ಯ ೨ನೇ ವಿಕ್ರಮಾದಿತ್ಯನ (೭೩೩–೭೪೫) ಆಶ್ರಯದಲ್ಲಿದ್ದರಿಂದ ಆತನ ಹೆಸರು ಇಟ್ಟುಕೊಂಡು ಆತನ ಅಧೀನತೆಯಲ್ಲಿ ರಾಜ್ಯಪಾಲಿಸುತ್ತಿದ್ದನೆಂದು ಊಹಿಸಬಹುದಾಗಿದೆ. ಕೆಕ್ಕಾರ ಶಾಸನವೂ ಕೈಕೇಯವಂಶೋದ್ಭವ–ಪಯ್ವುಗುಂದ ಪರಮೇಶ್ವರ ಅಣ್ಣೇಯರಸನ ಕುರಿತು ಆತನು ಕಡತೋಕೆಯಿಂದ ಉಡುಪಿ ಬಳಿಯ ಶಿವಳ್ಳಿಯವರೆಗೆ ತನ್ನ ರಾಜ್ಯ ಹೊಂದಿದ್ದನು ಎಂದು ತಿಳಿಸುತ್ತದೆ[೭೮].

ವಿಕ್ರಮಾದಿತ್ಯನು ಮಹಾರಾಷ್ಟ್ರದ ಬಳಿಯ 'ರಿಡಿ' ಮತ್ತು 'ರೇವತಿ' ದ್ವೀಪವನ್ನು ಜಯಿಸುವುದಕ್ಕೂ ಹಾಗೂ ಅಣ್ಣೇಯರಸನು ಕಡತೋಕೆಯಿಂದ (ಕುಮಟಾದಿಂದ) ಉಡುಪಿಯವರೆಗೆ ರಾಜ್ಯ ಸ್ಥಾಪಿಸಿ, ಕಡಲೋತ್ತರ ವ್ಯಾಪಾರ ನಡೆಸಲು ಈ ಬಂದರುಗಳು ಬಳಕೆಯಾದವು. ಚಾಲುಕ್ಯರಿಗೆ ಮಹಾರಾಷ್ಟ್ರದ ರಿಡಿ ಮತ್ತು ರೇವತಿ ದ್ವೀಪ ಪಡೆಯುವ ಮೂಲಕ ಪಶ್ಚಿಮ ಕರಾವಳಿಯ ಮೂಲಕ ನಡೆದ ಕಡಲೋತ್ತರ ವ್ಯಾಪಾರವನ್ನು ಸಂಪೂರ್ಣವಾಗಿ ಕೈವಶ ಪಡಸಿಕೊಳ್ಳುವ ವಿಚಾರವಿತ್ತು. ಕರ್ನಾಟಕದ ಬಂದರುಗಳು ಅವರಿಗೆ ಸಹಾಯಕವಾಗಿದ್ದವು.[೭೯]

೩.೨.೪ ಗೋವಾ, ಹಾನಗಲ್ ಹಾಗೂ ಚಂದಾವರ ಕಾದಂಬರು

ಗೋವಾ ಕಾದಂಬರು ಕ್ರಿಶ. ೯೬೬ ರಿಂದ ೧೩೪೦ರ ವರೆಗೆ ಗೋಪಕ ಪಟ್ಟಣ ಕೇಂದ್ರವಾಗಿ ಆಳಿದ ಗೋವಾ ಕಾದಂಬರು ಅತ್ಯಂತ ಪ್ರಖ್ಯಾತರು. ಇವರಲ್ಲಿ ಸುಮಾರು ಹದಿನಾರು ಅರಸರು ಆಳಿದ್ದು ಬಹುಕಾಲ ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದರು[೮೦]. ಇವರ ಕಾಲದಲ್ಲಿ ಗೋವಾದಿಂದ ಹೊನ್ನಾವರದವರೆಗಿನ ಬಂದರುಗಳು ಕಡಲೋತ್ತರ ವ್ಯಾಪಾರದಲ್ಲಿ ತೊಡಗಿದ್ದವು. ಹೊನ್ನಾವರದ ಬಂದರಿನ ಬಳಿಯಲ್ಲಿ ಇವರು ಒಂದು ಕೋಟೆಯನ್ನು ನಿರ್ಮಿಸಿಕೊಂಡಿದ್ದರು.

ಹಾನಗಲ್‌ಕಾದಂಬರು ಇವರನ್ನು ಬನವಾಸಿ-ಹಾನಗಲ್ ಕಾದಂಬರೆಂದು ಕರೆಯುವುದಿದೆ. ಚಟ್ಟಯ್ಯ ದೇವನಿಂದ (ಕ್ರಿ.ಶ. ೯೬೯) ಆರಂಭವಾದ ಈ ಶಾಖೆಯು[೮೧] ರಾಷ್ಟ್ರಕುಟರ ಅಧೀನವಾಗಿದ್ದು, ಮುಂದೆ ಚಾಲುಕ್ಯ ತೈಲಪನ ಮಾಂಡಲಿಕರಾಗಿ ಚಾಲುಕ್ಯರ ಪತನದ ನಂತರ ಮಲ್ಲಿದೇವ (೧೨೧೭-೫೨)ನ ಕಾಲದಲ್ಲಿ ಸೇವುಣರ ಅಧಿನಾಯಕತ್ವ ಒಪ್ಪಿಕೊಳ್ಳುವಂತಾಯಿತು. ಕ್ರಿ.ಶ. ೧೨೭೯ರ ಬೇಡ್ಕಣಿ ಶಾಸನದ ನಂತರ ಕಂಡುಬರುವ ತೇದಿ ಇಲ್ಲದ ಬುಡ್ಡಿಮನೆ (ಯಲ್ಲಾಪುರ) ಶಾಸನದ ನಂತರ ಯಾವುದೇ ಶಾಸನಗಳುಗಳು ಸಿಗುತ್ತಿಲ್ಲ.[೮೨] ಸೇವುಣರಿಂದಲೇ ಇವರು ಸೋತರೆಂದು ತಿಳಿಯಲಾಗಿದೆ[೮೩]. ಹಾನಗಲ್ ಕಾದಂಬರು ಬನವಾಸಿ ಕದಂಬರಂತೆ ಪ್ರಬಲರಾಗಿ ಇಲ್ಲಿ ಆಳಿದ್ದು ತಿಳಿಯುತ್ತದೆ. ಕರ್ನಾಟಕದ ಅಧಿನಾಯಕರಾಗಿದ್ದ ರಾಷ್ಟ್ರಕೂಟ-ಚಾಳುಕ್ಯ-ಸೇವುಣರ ಪ್ರಭುತ್ವ ಒಪ್ಪಿಕೊಂಡಿದ್ದರಿಂದ ಇವರ ಅವಧಿಯಲ್ಲಿ ಕರ್ನಾಟಕದ ಬಂದರುಗಳು ಉತ್ತಮ ರೀತಿಯಲ್ಲಿ ದೇಶೀಯ ಹಾಗೂ ವಿದೇಶಿಯ ವ್ಯಾಪಾರದಲ್ಲಿ ತೊಡಗಿದ್ದವು. ರಾಷ್ಟ್ರಕೂಟರು ತಾವು ಪಡೆದ ಕಡಲೋತ್ತರ ದೇಶಗಳೊಂದಿಗಿನ ರಾಜತಾಂತ್ರಿಕ ಸಂಪರ್ಕಕ್ಕೆ ಈ ಬಂದರುಗಳೇ ಮಾರ್ಗಗಳಾಗಿದ್ದವು. ಚಾಲುಕ್ಯರು ಸ್ಥಳೀಯ ಸಾಮಂತ ಅರಸರಿಂದ ಈ ಬಂದರುಗಳ ಮೂಲಕ ರಾಜ್ಯವಿಸ್ತಾರಣೆ ಮಾಡಿದ್ದರು.

ಚಂದಾವರ ಕಾದಂಬರು ಸುಮಾರು ೧೧-೧೩ ಶತಮಾನಗಳಲ್ಲಿ ಹೊನ್ನಾವರ ತಾಲೂಕಿನಲ್ಲಿರುವ ಚಂದಾವರವನ್ನು ರಾಜಧಾನಿಯಾಗಿ ಮಾಡಿಕೊಂಡು, ಹೊನ್ನಾವರ ಕುಮಟಾ ತಾಲೂಕುಗಳಲ್ಲಿ ಆಳುತ್ತಿದ್ದ[೮೪] ಕಾದಂಬರನ್ನು ಚಂದಾವರ ಕಾದಂಬರೆಂದು ಕರೆಯಲಾಗಿದೆ. ಈ ಕಾದಂಬರು ತುಳುನಾಡು, ಕೊಂಕಣ ಮತ್ತು ಘಟ್ಟಪ್ರದೇಶದ ಸಾಂತಳಿಗೆಗಳನ್ನು ಆಳುತ್ತಿದ್ದ ಬಗ್ಗೆ ತಿಳಿಯುತ್ತದೆ. ವೀರದೇವನು (ಕ್ರಿ.ಶ. ೧೧೮೩-೧೨೩೪) ಈ ವಂಶದ ಮೊದಲದೊರೆ.[೮೫] ಮೂರನೇ ಶಿವಚಿತ್ತಕಾಮದೇವ (೧೩೮೫-೧೪೧೦) ನವರೆಗೆ ಇವರ ಆಡಳಿತ ನಡೆಯಿತು. ಚಂದಾವರ ಕಾದಂಬರು ಪಟ್ಟಕ್ಕೆ ಬಂದಾಗ ಕರ್ನಾಟಕದ ಚರಿತ್ರೆಯಲ್ಲಿ ಹಲವು ಮಹತ್ವಪೂರ್ಣವಾದ ಬೆಳವಣಿಗೆಗಳಾದವು. ವೈಭವದಿಂದ ಆಳಿದ ಕಲ್ಯಾಣದ ಚಾಲುಕ್ಯರು ಪತನಗೊಳ್ಳುತ್ತಿದ್ದರು.

ಶಿಲಾಹಾರರು, ಹೊಯ್ಸಳರು ಸ್ವತಂತ್ರರಾಗುತ್ತಿದ್ದರು. ಕಲಚೂರಿಗಳು ಅಧಿಕಾರಕ್ಕೆ ಬಂದು ಮತ್ತೆ ಪತನವಾಗಿದ್ದರು. ಚಾಲುಕ್ಯರ ಅಧೀನರಾಗಿ ಕಾದಂಬರು ಪಟ್ಟಕ್ಕೆ ಬಂದರು. ಹೊಯ್ಸಳರು ಬಹು ಪ್ರಬಲವಾದ ಸಾಮ್ರಾಜ್ಯ ಕಟ್ಟಿ ದೇಶ ವಿದೇಶಗಳೊಂದಿಗೆ ವ್ಯಾಪಾರ ನಡೆಸಿದ್ದಲ್ಲದೇ ನೌಕಾದಳವನ್ನು ಸಂಘಟಿಸಿದ್ದರು.[೮೬] ಹೊಯ್ಸಳರ ನೌಕಾಬಲ ದಕ್ಷಿಣ ಭಾರತದಲ್ಲಿ ಪ್ರಖ್ಯಾತವಾಗಿತ್ತು. ಇವರು ವಿದೇಶಿ ಸರಕುಗಳನ್ನು ದೊಡ್ಡ ಪ್ರಮಾಣದಲ್ಲಿ ವ್ಯಾಪಾರಕ್ಕೆ ಬಳಸಿಕೊಂಡರು.

ಕ್ರಿ.ಶ ೧೧-೧೩ನೇ ಶತಮಾನದಲ್ಲಿ ಕರ್ನಾಟಕದ ಬಂದರುಗಳು ದೊಡ್ಡ ರೀತಿಯ ವ್ಯಾಪಾರ-ವ್ಯವಹಾರಗಳಲ್ಲಿ ತೊಡಗಿದ್ದವು. ಚಾಲುಕ್ಯರು ಹೊಯ್ಸಳರು ಹೊನ್ನಾವರ, ಭಟ್ಕಳ ಬಂದರನ್ನು ಬಹುವಿಧದಲ್ಲಿ ಬಳಸಿಕೊಂಡರು. ಚಂದಾವರದ ಹತ್ತಿರದ ಕುಮಟಾ, ತದಡಿ ಬಂದರುಗಳು ಈ ಕಾಲದಲ್ಲಿ ದೊಡ್ಡ ರೀತಿಯಲ್ಲಿ ವಿದೇಶಿ ವ್ಯಾಪಾರಕ್ಕೆ ತೆರೆದುಕೊಂಡಿತು.

೩.೨.೫ ನಗಿರೆ-ಹಾಡುವಳ್ಳಿ ಅರಸರು

ಹೊನ್ನಾವರದ ಗೇರುಸೊಪ್ಪಾವನ್ನು ಕೇಂದ್ರವಾಗಿ ಮಾಡಿಕೊಂಡು ಸಾಳುವ ಮನೆತನ ಒಂದು ರಾಜ್ಯ ಆಳಿತ್ತು. ಇವರ ಮೂಲ ಪುರುಷನನ್ನು ಹೊನ್ನನೆಂದು ಗುರುತಿಸುತ್ತಾರೆ. ಈತನು ಹೊನ್ನಾವರ, ಚಂದಾವರ, ನಗಿರೆ, ಹಾಡುವಳ್ಳಿ, ಗೋಕರ್ಣ, ಬನವಾಸಿಯನ್ನೊಳಗೊಂಡ ಪ್ರದೇಶ ಆಳುತ್ತಿದ್ದನು[೮೭]. ಹೊನ್ನನರೇಂದ್ರ (೧೩೩೪-೪೭) ನು ನಗಿರೆ ನಾಡಿಗೆ ಖಚಿತ ಸ್ಥಾನ ಗೌರವ ತಂದು ಕೊಟ್ಟನು[೮೮]. ಹೈವ (೧೩೭೭-೯೨ ರಲ್ಲಿ) ಮಹಾಮಂಡಳೇಶ್ವರನಾಗಿ ರಾಜ್ಯಪಾಲಿಸಿದನು.

ಈ ರಾಜ್ಯದ ರಾಣಿ ಚೆನ್ನಾಭೈರಾದೇವಿ (೧೫೩೩-೧೫೯೮)ವಿದೇಶಿಯರಿಂದ "ಕಾಳುಮೆಣಸಿನ ರಾಣಿ" ಎಂದು ಬಿರುದಾಂಕಿತಳಾಗಿದ್ದಳು. ಸುಮಾರು ೧೭೫ ವರ್ಷಗಳ ಕಾಲ ವೈಭವದಿಂದ ಮೆರೆದ ಈ ರಾಜ್ಯವು ವಿದೇಶೀಯರಿಗೆ ಬೇಕಿದ್ದ ಮಸಾಲೆ ಸಾಮಗ್ರಿಗಳ ದೊಡ್ಡ ಉತ್ಪಾದನಾ ಹಾಗೂ ರಪ್ತುಕೇಂದ್ರವಾಗಿತ್ತು. ನೇರವಾಗಿ ವಿದೇಶಿ ವ್ಯಾಪಾರಿಗಳಿಗೆ ಹಡಗುಗಟ್ಟಲೆ ಮಸಾಲೆ ಸಾಮಗ್ರಿ ಕರಿಮೆಣಸಿನ ಕಾಳು ಒದಗಿಸುತ್ತಿತ್ತು. ಆರಂಭದಲ್ಲಿ ನಗಿರೆಸಾಳ್ವರು ವಿಜಯನಗರದ ಅರಸರನ್ನು ಸಾಮ್ರಾಟರಾಗಿ ಒಪ್ಪಿಕೊಳ್ಳಲಿಲ್ಲ. ವಿಜಯನಗರದ ಮಂಗಪ್ಪದಂಡನಾಯಕ ೧೫೬೮ರಲ್ಲಿ ಹೈವನ ವಿರುದ್ಧ ಯುದ್ದಕ್ಕೆ ಬಂದನು. ಹೈವನ ನಂತರ ಆತನ ಅಳಿಯ ೧೧ನೇ ಮಂಗರಸನು ಅಧಿಕಾರಕ್ಕೆ ಬಂದನು. ಈತನು ೧೪೦೧ರಲ್ಲಿ ತೀರಿಕೊಂಡನು[೮೯].

ಇಷ್ವರಲ್ಲಿ ಸಾಳ್ವ ವಂಶದ ರಾಜರು ದಕ್ಷಿಣದಲ್ಲಿ ಗಂಗಾವಳಿ ನದಿಯ ಉತ್ತರದ ಭೂಭಾಗವನ್ನು ವಶಪಡಿಸಿಕೊಂಡಿದ್ದರು. ದಕ್ಷಿಣದಲ್ಲಿ ಚಂದಾವರ ಕಾದಂಬರನ್ನು ಸಾಮಂತರಾಗಿ ಮಾಡಿಕೊಂಡಿದ್ದರು. ಗಂಗೊಳ್ಳಿ, ಬೈಂದೂರು, ಭಟ್ಕಳ, ಶಿರಾಲಿ, ಹೊನ್ನಾವರ, ಕುಮಟಾದಂತಹ ಪ್ರಮುಖ ಬಂದರುಗಳು ಇವರ ವಶದಲ್ಲಿದ್ದವು.

ಜೈನರಾಗಿದ್ದ ಇವರು ಅಳಿಯಸಂತಾನದ ಆಚರಣೆ ನಡೆಸುತ್ತಿದ್ದುದು ತಿಳಿಯುತ್ತದೆ. ಇವರ ರಾಜಧಾನಿ ನಗಿರೆ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತು. ನಗಿರೆ ಸುತ್ತಲೂ ಶರಾವತಿಯಿಂದ ಸುತ್ತುವರೆದಿದ್ದು ನೈಸರ್ಗಿಕ ಸಂಪತ್ತಿನಿಂದ ತುಂಬಿತ್ತು. ಸಾಳ್ವರಸ ತಮ್ಮ ಅಧೀನದಲ್ಲಿದ್ದ ಬಂದರುಗಳ ಮೂಲಕ ಕಡಲೋತ್ತರ ವ್ಯಾಪಾರ ದೊಡ್ಡ ಪ್ರಮಾಣದಲ್ಲಿ ನಡೆಸಿದ್ದರು.

ಹಾಡುವಳ್ಳಿ ಅರಸರು ಗೇರುಸೊಪ್ಪಾ-ನಗಿರೆಯ ಅರಸುಮನೆತನದ ಇನ್ನೊಂದು ಶಾಖೆಯಾಗಿ ಭಟ್ಕಳದ ಸಂಗೀತಪುರ ಅಥವಾ ಹಾಡುವಳ್ಳಿ ಆಳಿದ ಅರಸುಮನೆತನ. ಇವರು ಭಟ್ಕಳ, ಹಾಡುವಳ್ಳಿ, ವೇಣುಪುರ (ಈಗಿನ ಬಿದನೂರು) ಮೊದಲಾದ ಪ್ರದೇಶಗಳನ್ನೊಳಗೊಂಡು, ಕರಾವಳಿಯ ಬಹುಭಾಗ ಹಾಗೂ ಘಟ್ಟದ ಮೇಲಿನ ಶಿವಮೊಗ್ಗಾ ಜಿಲ್ಲೆಯ ಸಾಗರದ ಪ್ರದೇಶದ ಭಾಗವನ್ನು ಒಳಗೊಂಡು ಪ್ರಮುಖ ರಾಜಕೀಯ ಶಕ್ತಿಯಾಗಿ ಮೆರೆದಿದ್ದರು[೧೦]. ಹಾಡುವಳ್ಳಿಯು ಪಶ್ಚಿಮ ಘಟ್ಟದ ನಡುವಿರುವ ನಗರವಾಗಿತ್ತು. ಇದರ ಸುತ್ತಲೂ ದಟ್ಟವಾದ ಬೆಟ್ಟ-ಅರಣ್ಯ ಹಾಗೂ ಕಂದಕಗಳಿದ್ದು, ನೈಸರ್ಗಿಕವಾದ ಸಂಪನ್ಮೂಲಗಳಿಂದ ಆವರಿಸಿತ್ತು. ಇಲ್ಲಿಂದ ಭಟ್ಕಳಕ್ಕೆ ನೇರ ಸಂಪರ್ಕವಿತ್ತು. ಪಕ್ಕದ ನಗರೆ ರಾಜ್ಯದೊಂದಿಗೆ ಒಳನಾಡಿನ ಅರಣ್ಯದ ಸಂಪರ್ಕ ಮಾರ್ಗ ಹೊಂದಿತ್ತು. ಸಹ್ಯಾದ್ರಿಯ ಕಣಿವೆಯ ಮೂಲಕ ಘಟ್ಟ ಪ್ರದೇಶದ ಪ್ರಮುಖ ವಾಣಿಜ್ಯ ಕೇಂದ್ರಗಳೊಂದಿಗೆ ಸಂಪರ್ಕ ಹೊಂದಿತ್ತು. ಕುಂದಾಪುರ, ಶಿರೂರು, ಬೈಂದೂರು, ಭಟ್ಕಳ ಬಂದರುಗಳು ಇವರ ವ್ಯಾಪಾರಕ್ಕೆ ಅನುಕೂಲಕರವಾಗಿದ್ದವು. ಬಂದರುಗಳಿಗೆ ಸಂಪರ್ಕ ಕಲ್ಪಿಸಲು ವೆಂಕಟಾಪುರ ನದಿ ಹಾಗೂ ಬೈಂದೂರಿನ ನದಿಗಳು ಸಹಾಯಕವಾಗಿದ್ದವು.

ಸಿಂಗಿರಾಯ ಈ ವಂಶದ ಮೊದಲ ಅರಸ. ಈತನು ನಗಿರೆ ಅರಸ ಹೈವರಸನ ಮಗ. ಈತನು ತನ್ನ ಕುಟುಂಬದೊಂದಿಗೆ ಭಿನ್ನಮತ ಹೊಂದಿದ್ದನು. ಇವನು ತನ್ನ ಭಾವನ ನಗಿರೆ ರಾಜ್ಯದ ದಕ್ಷಿಣಕ್ಕಿದ್ದ ಹಾಡುವಳ್ಳಿಯಲ್ಲಿ ರಾಜ್ಯ ಸ್ಥಾಪಿಸಿದನು. ಈತನ ರಾಜ್ಯದ ಕೇಂದ್ರ ಹಾಡುವಳ್ಳಿ ಆಗಿದ್ದರೆ, ರಾಜ್ಯ ವೆಂಕಟಾಪುರನದಿಯ ದಕ್ಷಿಣದಿಂದ ಉಪ್ಪುಂದ ನದಿಯವರೆಗೆ ಹಬ್ಬಿತ್ತು. ಪೂರ್ವದಲ್ಲಿ ಶಿವಮೊಗ್ಗಾದ ಸಾಗರ ಹಾಗೂ ನಗರ ತಾಲೂಕನ್ನು ಆವರಿಸಿತ್ತು[೧೧]. ನಗಿರೆ ರಾಜ್ಯದಂತೆ ಇದೂ ವ್ಯಾಪಾರಕ್ಕೆ ಹೆಸರುವಾಸಿಯಾಗಿತ್ತು. ಭಟ್ಕಳ ಬಂದರು ಇವರ ಕಾಲದಲ್ಲಿ ಖ್ಯಾತಿಗಳಿಸಿತ್ತು. ಕಡಲೋತ್ತರ ವ್ಯಾಪಾರಕ್ಕೆ ಇವರು ಹೆಸರು ವಾಸಿಯಾಗಿದ್ದರು. ಅಂತೆಯೇ ಉಪ್ಪುಂದದಿಂದ ವೆಂಕಟಾಪುರದವರೆಗಿನ ಕಡಲ ತೀರವನ್ನು ಇವರು ತಮ್ಮ ವ್ಯಾಪಾರಕ್ಕಾಗಿ ಬಳಸಿದರು. ಇಲ್ಲಿರುವ ಉಪ್ಪುಂದ, ನಾವುಂದ, ಬೈಲೂರು, ಶಿರೂರು, ಬೈಂದೂರು, ಭಟ್ಕಳಗಳನ್ನು ಕಡಲೋತ್ತರ ವ್ಯಾಪಾರಕ್ಕೆ ಬಳಸಿಕೊಂಡರು. ನಗರೆಯ ಸಾಳ್ವರಂತೆ ಇವರೂ ಮಸಾಲೆ ದಿನಿಸುಗಳ ವ್ಯಾಪಾರಿಗಳಾಗಿದ್ದರು.

೩.೨.೬ ಶಿಶುಗಲಿ ಪಾಂಡ್ಯರು

ಶಿಶುಗಲಿಯ ಪಾಂಡ್ಯರು ಕ್ರಿಸ್ತಶಕ ಹತ್ತನೇ ಶತಮಾನದಿಂದ ೧೨ನೇ ಶತಮಾನದವರೆಗೆ ಉತ್ತರಕನ್ನಡ ಜಿಲ್ಲೆಯ ಹಲವು ಭಾಗಗಳ ಮೇಲೆ ತಮ್ಮ ಅಧಿಕಾರವನ್ನು ಸ್ಥಾಪಿಸಿಕೊಂಡಿದ್ದರು[೯೨]. ಇದುವರೆಗೆ ಇವರ ಸುಮಾರು ಹದಿನೈದು ಶಾಸನಗಳು ದೊರೆತಿದ್ದು, ಅವುಗಳ ಮೇಲೆ ಈ ವಂಶದ ಚರಿತ್ರೆಯನ್ನು ನಿರೂಪಿಸಲಾಗಿದೆ. ಶಾಸನಗಳ ಆಧಾರದಲ್ಲಿ ಈ ವಂಶದ ಮೊದಲ ದೊರೆ ಚಂದ್ರ (೯೯೫-೧೦೨೦) ಈತನು ಆಳುವಾಗ ಹಾನಗಲ್ ಕಾದಂಬರು ರಾಷ್ಟ್ರಕೂಟರ ಸಾಮಂತರಾಗಿ ಉತ್ತರಕನ್ನಡದ ಪ್ರದೇಶವನ್ನು ಆಳುತ್ತಿದ್ದರು. ಮುಂದೆ ಕಲ್ಯಾಣಿ ಚಾಲುಕ್ಯರ ಸಾಮಂತರಾದರು. ಇವರು ವೈವಾಹಿಕ ಸಂಬಂಧವನ್ನು ಪಾಂಡ್ಯರೊಂದಿಗೆ ಬೆಳೆಸಿಕೊಂಡರು ಹಾನಗಲ್ಲು ಕಾದಂಬ ದೊರೆ ಎರಡನೇ ಶಾಂತಿವರ್ಮ ಪಾಂಡ್ಯ ರಾಜಕುಮಾರಿ ಸಿರಿಯಾಲದೇವಿಯನ್ನು ವಿವಾಹವಾದನು[೯೩].

ಹೀಗೆ ಆರಂಭದಲ್ಲಿ ಸಣ್ಣ ರಾಜಮನೆತನವಾಗಿ ಉತ್ತರಕನ್ನಡದ ಸಿದ್ಧಾಪುರದ ಶಿಶುಗಲಿಯಿಂದ ರಾಜ್ಯವಾಳತೊಡಗಿದ್ದರು. ಇಂದಿನ ಕುಮಟಾ, ಗೋಕರ್ಣ, ಹೊನ್ನಾವರ, ಸಿದ್ಧಾಪುರ, ಶಿರ್ಶಿಯ ಕೆಲವು ಭಾಗಗಳನ್ನು ಒಳಗೊಂಡ ರಾಜ್ಯಕ್ಕೆ ಇವರು ಅಧಿಪತಿಗಳಾಗಿದ್ದರು. ಕ್ರಿ.ಶ. ೧೦೭೦-೧೧೩೦ ರವರೆಗೆ ಆಳಿದ ಇಮ್ಮಡಿ ಕಾಮದೇವನು ಈ ವಂಶದ ಪ್ರಖ್ಯಾತ ದೊರೆ. ಈತನು ಪ್ರಭಾವಿ ದೊರೆಯಾಗಿದ್ದು, ಗೋವಾ ಕಾದಂಬರ ಕೈಯಲ್ಲಿದ್ದ ಹೈವೆ ಭಾಗದ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ನಿರಂತರ ಹೋರಾಟ ನಡೆಸಿದ್ದನು[೮೪]. ಈತನನ್ನು ಶಿಕಾರಿಪುರದ ಶಾಸನವು ಪಾಂಡ್ಯವಂಶ ಚೂಡಾಮಣಿ ಎಂದಿದೆ. ಕೆಕ್ಕಾರ ಮತ್ತು ಹಳದೀಪುರ ಶಾಸನಗಳು ಪೊನ್ನಾವೂರ ಪುರವರಾಧೀಶ್ವರ ಎಂದಿದೆ. ಚಾಲುಕ್ಯ ೬ನೆಯ ವಿಕ್ರಮಾದಿತ್ಯನ ಮಾಂಡಳೀಕನಾಗಿದ್ದು, ಗೋಕರ್ಣವನ್ನು ಎರಡನೇ ರಾಜ್ಯಧಾನಿಯನ್ನಾಗಿಸಿಕೊಂಡಿದ್ದನು[೯೫].

ಹೀಗೆ ಪ್ರಬಲರಾಜ್ಯ ಒಂದನ್ನು ಕಟ್ಟಿ ಸುಮಾರು ಎರಡು ಶತಮಾನಗಳ ಕಾಲ ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಹಾಗೂ ಘಟ್ಟದ ಪ್ರದೇಶದಲ್ಲಿ ತಮ್ಮ ಆಡಳಿತ ನಡೆಸಿದ್ದರು. ಇವರ ಕಾಲದಲ್ಲಿ ಕರ್ನಾಟಕದ ಅಧಿರಾಜರಾಗಿದ್ದ ಕಲ್ಯಾಣಿ ಚಾಲುಕ್ಯರು ಕರ್ನಾಟಕದ ಬಂದರುಗಳನ್ನು ತಮ್ಮ ರಾಜ್ಯ ವಿಸ್ತರಣೆಗೆ ಹಾಗೂ ರಾಜ್ಯದ ಸಂಪತ್ತಿನ ಹೆಚ್ಚಳಕ್ಕೆ ಬಳಸಿಕೊಂಡಿದ್ದರು. ದೂರದ ಕಲ್ಯಾಣದಿಂದ ತಮ್ಮ ಆಡಳಿತ ನೇರವಾಗಿ ನಡೆಸಲು ಸಾಧ್ಯವಿಲ್ಲದ್ದರಿಂದ ಈ ಪ್ರದೇಶದಲ್ಲಿ ಶಿಶುಗಲಿ ಪಾಂಡ್ಯರನ್ನು ಸಾಮಂತರಾಗಿರಿಸಿ ಅವರಮೂಲಕ ಬಂದರುಗಳನ್ನು ಹತೋಟಿಗೆ ಒಳಪಡಿಸಿಕೊಂಡಿದ್ದರು. ಈ ಕಾಲಾವಧಿಯಲ್ಲಿ ಉತ್ತರ ಕನ್ನಡದ ಬಂದರುಗಳು ಕಡಲೋತ್ತರ ವ್ಯಾಪಾರದಲ್ಲಿ ಅಪೂರ್ವವಾದಂಥಹ ವ್ಯವಹಾರ ನಡೆಸಿದ್ದವು. ಪಶ್ಚಿಮಘಟ್ಟದಲ್ಲಿ ಸಿಗುತ್ತಿದ್ದ

ಬೆಲೆಬಾಳುವ ಮಸಾಲೆದಿನಿಸುಗಳು ಹಾಗೂ ಅಪೂರ್ವ ಪ್ರಾಣಿ, ಪಕ್ಷಿಗಳು, ಹತ್ತಿ, ಭತ್ತ ಇತ್ಯಾದಿಗಳು ವಾಣಿಜ್ಯ ಸರಕುಗಳಾಗಿದ್ದವು ಚಾಲುಕ್ಯರ ರಾಜ್ಯದ ಉತ್ತರದ ಪ್ರದೇಶಗಳನ್ನು ಹಿನ್ನಾಡಾಗಿ ಹೊಂದಿದ್ದರು. ಅಲ್ಲಿ ದೊರೆಯುತ್ತಿದ್ದ ಲೋಹಗಳು ಹಾಗೂ ಹತ್ತಿಯೂ ವಿದೇಶಗಳಿಗೆ ಹೋಗುತ್ತಿತ್ತು.

೩.೨.೭ ಮುಲ್ಕಿಯ ಸಾವಂತರು

ಮುಲ್ಕಿಯ ಸಾವಂತರೆಂದು ಕರೆದುಕೊಳ್ಳುವ ಈ ವಂಶಜರು ಆರಂಭದಲ್ಲಿ ಮುಲ್ಕಿ ಬಳಿಯ ಏಳಿಂಜೆ ನಂತರ ಸೀಮಂತೂರುಗಳ ಮೂಲಕ ಆಳಿದರು[೬೬]. ಇವರು ಮುಂದೆ ತಮ್ಮ ರಾಜ್ಯಧಾನಿಯನ್ನು ಹಲವು ಬಾರಿ ಬದಲಿಸಿದರು. ಇವರ ರಾಜ್ಯವು ದಕ್ಷಿಣದಲ್ಲಿ ಪಾವಂಜೆ ನದಿಯಿಂದ ಉತ್ತರದಲ್ಲಿ ಶಾಂಭವಿ ನದಿಯವರೆಗೆ ಹಬ್ಬಿತ್ತು[೬೭]. ಈ ವಂಶದ ಮೊದಲ ಅರಸ ದುಗ್ಗಣ್ಣ ಸಾಮಂತನೆಂದೂ ಇವನು ಕ್ರಿ.ಶ. ೧೩೭೮ರಲ್ಲಿ ಇದ್ದನೆಂದೂ ಶಾಸನದ ಆಧಾರದಿಂದ ಗೋವಿಂದ ಪೈಯವರು ನೀಡಿರುವ ಅಭಿಪ್ರಾಯವನ್ನೇ ವಿದ್ವಾಂಸರು ಒಪ್ಪಿದ್ದಾರೆ[೬೮]. ಈ ಅರಸು ಮನೆತನದ ಬಗ್ಗೆ ಖಚಿತವಾದ ಹೆಚ್ಚಿನ ಆಧಾರಗಳು ದೊರೆಯದಿದ್ದರೂ ಮುಲ್ಕಿ ಅರಮನೆಯ ಸಮೀಪದಲ್ಲಿರುವ ಬಾಕಿ ಎಂಬ ಗದ್ದೆಯಲ್ಲಿ ಹಿಂದೆ ಆಗಿ ಹೋದ ಸುಮಾರು ೨೭ ಅರಸರ ಸಮಾಧಿಗಳಿವೆ. ಇವುಗಳ ಆಧಾರದಲ್ಲಿ ಎಸ್.ಡಿ. ಶೆಟ್ಟಿಯವರು ಈ ಅರಸು ಮನೆತನಕ್ಕೆ ೫೦೦ ವರ್ಷದ ಚರಿತ್ರೆ ಇದೆ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಈ ವಂಶದ ಚಿಕ್ಕರಾಯಅರಸ ಕ್ರಿ.ಶ. ೧೬೩೦-೧೬೭೦ರವರೆಗೆ ಆಳಿದನೆಂದು ತಿಳಿಯಲಾಗಿದೆ. ಹೀಗೆ ದೀರ್ಘಕಾಲ ಅಸ್ತಿತ್ವದಲ್ಲಿದ್ದ ಈ ಅರಸು ಮನೆತನದ ಅರಸರು ತಮ್ಮ ರಾಜ್ಯಧಾನಿಯನ್ನು ಕಡಲ ತೀರದ ಸಮೀಪದಲ್ಲೇ ನಿರ್ಮಿಸಿಕೊಂಡಿದ್ದರು. ಸಾವಂತರು ತಮ್ಮ ರಾಜ್ಯದಲ್ಲಿರುವ ಬಂದರುಗಳ ಮೂಲಕ ವಿದೇಶಿಯರೊಡನೆ ವ್ಯಾಪಾರ ವ್ಯವಹಾರ ನಡೆಸುತ್ತಿದ್ದರು. ಬಹುಮುಖ್ಯವಾಗಿ ಕಾರ್ನಾಡ ಬಂದರಿನ ಮೂಲಕ ಅಕ್ಕಿ, ಮೆಣಸು ಮತ್ತು. ಕಬ್ಬುಗಳನ್ನು ತೆಗೆದುಕೊಂಡು ಎಡನ್, ಬಿರ್ಮಜ್, ಬಸ್ರಾಗಳಲ್ಲಿ ಮಾರುತ್ತಿದ್ದರು[೬೯]. ಕಾರ್ನಾಡ ಬಹುಮುಖ್ಯ ರೇವು ಆಗಿತ್ತು. 'ಮೂಲಿಕೆ' ಅಥವಾ ಮುಲ್ಕಿಯು ಮೂಲತಃ ವ್ಯಾಪಾರಿ ಕೇಂದ್ರವಾಗಿದ್ದು, ಜಲಸುಂಕದ ವಸೂಲಿ ಕೇಂದ್ರವಾಗಿತ್ತು. ಇಲ್ಲಿ ಸುಂಕನೀಡಿ ಮುಂದೆ ಒಳನಾಡಿಗೆ ಸರಕು ಸಾಗಿಸುತ್ತಿದ್ದರು.

ಮುಲ್ಕಿ- ಏಳಂಜೆಗಳು ಪಾವಂಜೆ ಹಾಗೂ ಶಾಂಭವಿ ನದಿಗಳ ತೀರದಲ್ಲಿವೆ. ಈ ನದಿಗಳು ಈ ಊರುಗಳನ್ನು ಸುತ್ತುವರೆದಿವೆ. ಸೀಮಂತೂರಿಗೆ ಈ ಪ್ರದೇಶದ ಮೂಲಕವೇ ನೌಕಾ ಸಂಪರ್ಕ ಪಡೆಯುವುದು ಸುಲಭವಾಗಿತ್ತು. ಸೀಮಂತೂರು ಮುಂದೆ ಸಾವಂತರ ರಾಜಧಾನಿಯಾಯಿತು.

ಕಾರ್ನಾಡು, ಹೊಸಂಗಡಿ (ಈಗ ಇದು ಹಳೆಯಂಗಡಿ) ಮೂಲಿಕೆ ಎಂಬ ಪಟ್ಟಣಗಳು ಉದಯವಾದವು. ನಖರ, ಎಳಮೆಹಲರು, ಸಮಸ್ತಹಲರೆಂಬ ವ್ಯಾಪಾರಿ ಸಂಸ್ಥೆಯವರು ಒಳವ್ಯಾಪಾರದಲ್ಲಿ ನಿರತರಾಗಿದ್ದರೆ, ಹಂಜಮಾನರೆಂಬ ಮುಸ್ಲಿಂ ವ್ಯಾಪಾರ ಸಂಸ್ಥೆಯು ಸಾಗರೋತ್ತರ ವ್ಯಾಪಾರದಲ್ಲಿ ನಿರತವಾಗಿದ್ದಿತು[೧೦೦]. ಸಾವಂತರ ರಾಜ್ಯ ವಿಜಯನಗರದ ಪತನದ ನಂತರವೂ ೧೮ನೇ ಶತಮಾನದ ಅಂತ್ಯದವರೆಗೂ[೧೦೧] ಇವರು ಆಡಳಿತ ನಡೆಸಿದ್ದರು. ಇವರ ಪ್ರಮುಖ ತೆರಿಗೆ ಸಂಗ್ರಹ ಹಾಗೂ ವ್ಯಾಪಾರಿ ಸರಕುಗಳು ಕಡಲೋತ್ತರ ವ್ಯಾಪಾರವನ್ನೇ ಅವಲಂಭಿಸಿತ್ತು. ಇವರ ಆಡಳಿತ ಕಾಲದಲ್ಲಿ ತಮ್ಮ ರಾಜಧಾನಿಯನ್ನು ಕಡಲತೀರದ ಪ್ರದೇಶದಲ್ಲಿ ನಿರ್ಮಿಸಿಕೊಂಡಿದ್ದರು. ಇವರ ಕಾಲದಲ್ಲಿ ಕಾರ್ನಾಡ, ಮುಲ್ಕಿ, ಏಳಂಜೆ, ಹಳೆ ಅಂಗಡಿಗಳು ಪ್ರಮುಖ ರೇವು ಪಟ್ಟಣಗಳಾಗಿದ್ದಂತೆ, ಘಟ್ಟದ ಮೇಲಿನ ಅನೇಕ ವ್ಯಾಪಾರಿ ಕೇಂದ್ರಗಳು ಇವರ ರೇವು ಪಟ್ಟಣದೊಂದಿಗೆ ನೇರಮಾರ್ಗಹೊಂದಿದ್ದವು. ಇವರು ಘಟ್ಟದಪ್ರದೇಶ ಹಾಗೂ ಕಡಲೋತ್ತರ ದೇಶಗಳೊಂದಿಗೆ ನಡೆಯುವ ವ್ಯಾಪಾರದ ಮಧ್ಯವರ್ತಿಗಳಂತೆ ನಡೆದುಕೊಳ್ಳುತ್ತಿದ್ದರು. ಇವರ ಕಾಲದಲ್ಲಿ ನಾನಾದೇಸಿಗಳು, ನಖರರು, ಹಲರು, ಹಂಜಮಾನರು ಸಕ್ರೀಯರಾಗಿದ್ದು, ವ್ಯಾಪಾರ ವಾಣಿಜ್ಯದಲ್ಲಿ ತೊಡಗಿದ್ದರು.

೩.೨.೮ ಕಳಸ-ಕಾರ್ಕಳದ ಬೈರರಸು ಒಡೆಯರು

ಪ್ರಾಚೀನ ಆಳುಪರ ವಶದಲ್ಲಿದ್ದ ಪೊಂಬುಚ್ಚ ಪ್ರದೇಶವು ಕ್ರಿ.ಶ. ೮ನೆಯ ಶತಮಾನದಲ್ಲಿ ಸಾಂತಳಿಗೆ ೧೦೦೦ ಎಂಬ ಹೆಸರನ್ನು ಪಡೆದು ಶಾಂತರ ಮನೆತನದ ಅರಸುಗಳ ಆಡಳಿತಕ್ಕೆ ಒಳಗಾಗಿತ್ತು. ಆಳುಪರಿಗೂ ಶಾಂತರರಿಗೂ ವೈವಾಹಿಕ ಸಂಬಂಧವಿತ್ತು[೧೦೨]. ೧೨ನೇ ಶತಮಾನದವರೆಗೂ ಪ್ರಬಲರಾಗಿಯೇ ರಾಜ್ಯವಾಳಿದ ಶಾಂತರು ೧೩ನೆಯ ಶತಮಾನದ ಮಧ್ಯದಲ್ಲಿ ದುರ್ಬಲರಾದರು[೧೦೩]. ಇವರು ಚಿಕ್ಕಮಗಳೂರು ಜಿಲ್ಲೆಯ ಕಳಸ ಪ್ರದೇಶಕ್ಕೆ ಮಾತ್ರ ಒಡೆಯರಾಗಿ ಉಳಿದರು. ಕ್ರಿ.ಶ. ೧೩೩೪-೩೮ರಲ್ಲಿ ಈ ಮನೆತನದವರು ಕಾರ್ಕಳ ಪ್ರಾಂತ್ಯಕ್ಕೂ ತಮ್ಮ ಅಧಿಪತ್ಯ ವಿಸ್ತರಿಸಿಕೊಂಡರು. ಈ ವಂಶದ ಲೋಕನಾಥ ದೇವರಸನೆಂಬುವನು ಈ ಕಾಲಾವಧಿಯಲ್ಲಿ ಆಳುತ್ತಿದ್ದನು. ಇವರು ಹೊಯ್ಸಳ ಚಕ್ರವರ್ತಿ ೩ನೆಯ ಬಲ್ಲಾಳನ ಸಾಮಂತನಾಗಿದ್ದನು[೧೦೪]. ಈತನು ತುಂಬಾ ಪ್ರಭಾವಿಯಾಗಿದ್ದನು.[೧೦೫]

ಬೈರರಸರು ಸ್ವತಂತ್ರ ಅರಸರಂತೆ ಪ್ರಬಲರಾಗಿ ಆಳಿದರು. ಪ್ರಭಾವಿಗಳೂ ಆಗಿದ್ದ ಇವರು ಹೊಯ್ಸಳ ಮೂರನೇ ಬಲ್ಲಾಳನ ಸಾಮಂತರಾಗಿದ್ದರು. ಈ ವಂಶದಲ್ಲಿ ಜಾಕಲ ಮಹಾದೇವಿ (ಕ್ರಿ.ಶ. ೧೨೪೬-೧೨೭೦) ಮತ್ತು ಕಾಳಲ ಮಹಾದೇವಿ (ಕ್ರಿ.ಶ. ೧೨೭೦-೧೨೮೧) ರಾಣಿಯರು ಆಳಿದ್ದರು. ಕಾಳಲದೇವಿಯ ಮಗ ವೀರಪಾಂಡ್ಯನು (ಕ್ರಿ.ಶ. ೧೨೯೭) ಸ್ವತಂತ್ರ ಅರಸನಾಗಿದ್ದಂತೆ

ಕಾಣುತ್ತದೆಂದು ವಿದ್ವಾಂಸರು ತರ್ಕಿಸಿದ್ದಾರೆ[೧೦೬]. ಮುಂದೆ ಈ ವಂಶದವರು ಕ್ರಿ.ಶ. ೧೬೬೦ ರವರೆಗೂ ಆಳಿದ್ದು ತಿಳಿಯುತ್ತದೆ.

ಈ ಅರಸು ಮನೆತನದವರು ಕಡಲೋತ್ತರ ಹಾಗೂ ಆಂತರಿಕ ವ್ಯಾಪಾರದಲ್ಲಿ ಪ್ರಮುಖ ಸ್ಥಾನ ಪಡೆದಿದ್ದರೆನ್ನುವುದು ವಿಧಿತವಾಗುತ್ತದೆ. ಇವರ ಕಾಲದಲ್ಲಿ ಚಲಾವಣೆಗೆ ಬಂದಿದ್ದ ನಾಣ್ಯಗಳು ಇದನ್ನು ಸಾಬೀತುಪಡಿಸುತ್ತವೆ. ಇವರು ಎರಡು ಟಂಕಶಾಲೆಗಳನ್ನು ನಡೆಸುತ್ತಿದ್ದರು. ಮಂಗಳೂರು, ಮಲ್ಪೆ, ಬಾರ್ಕೂರು ಬಂದರುಗಳು ಕಡಲೋತ್ತರ ವ್ಯಾಪಾರದಲ್ಲಿ ತೊಡಗಿದ್ದರೆ ಕರಾವಳಿ ಸಹಿತ ಪ್ರಸ್ತುತದ ಚಿಕ್ಕಮಗಳೂರು ಜಿಲ್ಲೆಯ ನೈಸರ್ಗಿಕ ಹಾಗೂ ಕೃಷಿಉತ್ಪನ್ನಗಳು ವ್ಯಾಪಾರಿ ಸರಕುಗಳಾಗಿದ್ದವು.

ಪಶ್ಚಿಮ ಕರಾವಳಿಯ ದಕ್ಷಿಣದ ಪ್ರದೇಶಗಳನ್ನು ಆಳಿದ ಈ ರಾಜಮನೆತನದ ಅರಸರು ತಮ್ಮ ರಾಜ್ಯದಲ್ಲಿ ಕೃಷಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದರು[೧೦೭]. ಪ್ರಮುಖ ಬಂದರುಗಳಾಗಿದ್ದ ಮಂಗಳೂರು, ಮಲ್ಪೆ, ಬಾರ್ಕೂರುಗಳ ಮೂಲಕ ವಿದೇಶದೊಂದಿಗೆ ನಡೆಯುತ್ತಿದ್ದ ವ್ಯಾಪಾರದಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದರು.

ಇಲ್ಲಿಯ ವ್ಯಾಪಾರಿಗಳು ಹಾಗೂ ಅರಸರು ಜೈನಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು. ಬೈರರಸರು ಜೈನಮತಾವಲಂಭಿಗಳಾಗಿದ್ದು, ಇವರ ಕಾಲದಲ್ಲಿ ಕಾರ್ಕಳದ ಗೊಮ್ಮಟ ಮೂರ್ತಿಯ ಸ್ಥಾಪನೆ, ಹಿರಿಯಂಗಡಿಯ ಮಾನಸ್ತಂಭ, ಚತುರ್ಮುಖ ಬಸದಿಯ ಸ್ಥಾಪನೆಗಳು[೧೦೮] ಕಂಡುಬರುತ್ತವೆ. ಶಿಕ್ಷಣಕ್ಕೆ ಇವರು ನೀಡಿದ ಪ್ರೋತ್ಸಾಹವು ಉತ್ತಮವಾಗಿತ್ತು[೧೦೯].

ಇವರು ಬಾರ್ಕೂರು, ಮಂಗಳೂರುಗಳ ಟಂಕಸಾಲೆಗಳಲ್ಲಿ ಸಿದ್ಧಪಡಿಸಿದ ನಾಣ್ಯಗಳಾದ ಗದ್ಯಾಣ, ಸಣ್ಣ ಗದ್ಯಾಣ, ಸಣ್ಣಪ್ರತಾಪಗದ್ಯಾಣ, ಹೊನ್ನು, ವರಹಘಟ್ಟ, ವರಹ, ದೊಡ್ಡವರಾಹ, ಗದ್ಯಾಣಹಣ ಚಲಾವಣೆ ಮಾಡಿದ್ದು ತಿಳಿಯುತ್ತದೆ. ಒಟ್ಟಿನಲ್ಲಿ ದಕ್ಷಿಣ ಕನ್ನಡದ ದಕ್ಷಿಣದ ಬಂದರುಗಳ ಮೂಲಕ ಇವರು ಕಡಲೋತ್ತರ ವ್ಯಾಪಾರದಲ್ಲಿ ತೊಡಗಿದ್ದರೆಂಬುದು ಖಚಿತಗೊಳ್ಳುತ್ತದೆ.

೩.೨.೯ ಬಂಗವಾಡಿಯ ಬಂಗರು

ತುಳುನಾಡಿನ ಸ್ವತಂತ್ರ ತುಂಡರಸರಲ್ಲಿ ಪ್ರಬಲರಾದವರು ಬಂಗವಾಡಿಯ ಬಂಗ ಅರಸರು[೧೧೦] ಬೆಳ್ತಂಗಡಿಯನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡು ಪುತ್ತೂರು ಪ್ರಾಂತದಲ್ಲಿ ರಾಜ್ಯವಾಳುತ್ತಿದ್ದರು[೧೧೧]. ಉಪ್ಪಿನಂಗಡಿ, ನಂದಾವರ, ಮಂಗಳೂರುಗಳಲ್ಲಿ ಇವರು ಅರಮನೆ ಕೋಟೆಗಳನ್ನು ನಿರ್ಮಿಸಿಕೊಂಡಿದ್ದರು.

ದಕ್ಷಿಣ ಕನ್ನಡದ ಇತಿಹಾಸದ ಕುರಿತು ಬರೆದಿರುವ ಇತಿಹಾಸಜ್ಞರು ಬಂಗರ ಕುರಿತು ವಿವಿಧ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಇವರ ಮೂಲ ಅರಸರು ಕ್ರಿ.ಶ. ೧೧೫೭ ರ ಬೀರನರಸಿಂಹಬಂಗರಾಜ (ಕ್ರಿ.ಶ. ೧೧೫೭–೧೨೦೮) ನಿಂದ ಪ್ರಾರಂಭ ಎಂದರೆ, ಕೆಲವರು ಕ್ರಿ.ಶ. ೧೧೧೮ ರಿಂದ ಇವರ ಪ್ರಾರಂಭವನ್ನೂ ಹೇಳುತ್ತಾರೆ[೧೧೨]. ಒಟ್ಟಿನಲ್ಲಿ ಸ್ಪಷ್ಟವಾಗಿ ಆಧಾರದೊಂದಿಗೆ ದೊರೆಯುವ ಕ್ರಿ.ಶ. ೧೩೨೫–೧೩೫೦ರ ಶಂಕರದೇವಿಯಿಂದ ಆರಂಭವನ್ನೂ ಕರ್ನಾಟಕ ಪರಂಪರೆಯಲ್ಲಿ ಗುರುತಿಸಿದ್ದಾರೆ[೧೧೩]. ಮುಂದೆ ಕ್ರಿ.ಶ. ೧೭೦೯ರ ವರೆಗೂ ಇವರ ಆಡಳಿತ ನಡೆದುಬಂದ ಬಗ್ಗೆ ಅಲ್ಲಲ್ಲಿ ದಾಖಲೆಗಳು ವಿರಳವಾಗಿ ಸಿಗುತ್ತವೆ. ಇವರು ೧೫ನೇ ಶತಮಾನದಲ್ಲಿ ಪ್ರಬಲರಾಗಿದ್ದುದು ಕಂಡುಬರುತ್ತದೆ. ಕಳಸ–ಕಾರಕಳ ಅರಸರೊಂದಿಗೆ ಒಪ್ಪಂದ[೧೧೪], ಚೌಟರನ್ನೂ ಮಣಿಸಿ ಒಪ್ಪಂದ ಮಾಡಿಕೊಂಡಿದ್ದು[೧೧೫]. ವಿಜಯನಗರ (ಕ್ರಿ.ಶ. ೧೫೦೦) ಅರಸರೊಂದಿಗಿನ ಮೈತ್ರಿಗಳು ಇವರ ಶಕ್ತಿಯನ್ನು ತೋರಿಸುತ್ತದೆ.

ಈ ವಂಶದ ಚಂದ್ರಶೇಖರ ಬಂಗರಾಜ (ಕ್ರಿ.ಶ ೧೨೦೮–೧೨೨೪) ನ ಕಾಲದಲ್ಲಿ ಬಂಗರು ವಿದೇಶಗಳೊಂದಿಗೆ ಮುಖ್ಯವಾಗಿ ಚೀನಾದೊಂದಿಗೆ ವ್ಯಾಪಾರದಲ್ಲಿ ತೊಡಗಿದ್ದ ಬಗ್ಗೆ ಹಲವು ಐತಿಹ್ಯಗಳು ತಿಳಿಸುತ್ತವೆ.

ಚಂದ್ರಶೇಖರ ಬಂಗರಸನು, ಆಳುಪ ಅರಸ ಕುಲಶೇಖರನು ಹೊಯ್ಸಳರ ಮಹಾಮಂಡಲೇಶ್ವರನಾಗಿ ಆಳುತ್ತಿದ್ದಾಗ ಅವರ ಒಳಅರಸನಾಗಿ ಆಳುತ್ತಿದ್ದನು[೧೧೬]. ಈತನು ಒಮ್ಮೆ ತನ್ನ ರಾಜ್ಯದಲ್ಲಿ ತಿರುಗಾಡುತ್ತಿದ್ದ ಸಮಯದಲ್ಲಿ ಕಡಲಲ್ಲಿ ತೇಲುತ್ತಿದ್ದ ಬೃಹತ್ ವ್ಯಾಪಾರಿಹಡಗುಗಳನ್ನು ಕಂಡು ಆಸೆಪಟ್ಟನೆಂದೂ ಅದು ತನಗೆ ದೊರೆಯುವಂತಾಗಲೆಂದು ಶರವುಗಣಪತಿಯಲ್ಲಿ ಬೇಡಿಕೊಂಡನೆಂದೂ ಪ್ರಚಲಿತವಿರುವ ಕೆಲವು ಕತೆಗಳು[೧೧೭]. ಆತನ ಆಸೆಯಂತೆಯೇ ನಡೆದಿದ್ದರಿಂದ ದೇವಾಲಯಕ್ಕೆ ಉಂಬಳಿ ಬಿಟ್ಟುಕೊಟ್ಟ ಬಗ್ಗೂ ಕತೆಗಳು ಪ್ರಚಲಿತದಲ್ಲಿವೆ. ಭಾರತಕ್ಕೆ ಭೇಟಿ ನೀಡಿದ ಪ್ರವಾಸಿ ಮಾರ್ಕೋಪೋಲೋನ ಕಥನಗಳು ಆ ಕಾಲದಲ್ಲಿ ಚೀನಾದೊಂದಿಗೆ ನಡೆಯುತ್ತಿದ್ದ ವಿದೇಶಿ ವ್ಯಾಪಾರದ ಬಗ್ಗೆ ಹೇಳುತ್ತವೆ[೧೧೮]. ಇವೆಲ್ಲವೂ ಅಂದು ನಡೆಯುತ್ತಿದ್ದ ಕಡಲೋತ್ತರ ವ್ಯಾಪಾರವನ್ನು ಸಮರ್ಥಿಸುತ್ತವೆ. ಕ್ರಿ.ಶ. ೧೨೨೨ ರಲ್ಲಿ ಬಂಗರಸರು ಮಂಗಳೂರು ಅಳಿವೆಯಲ್ಲಿಯೇ ಕೋಟೆ ನಿರ್ಮಿಸಿಕೊಂಡು ಸೈನ್ಯವನ್ನು ಇಟ್ಟುಕೊಂಡು ಆಳುತ್ತಿದ್ದರು. ಇದು ಅಂದು ನಡೆಯುತ್ತಿದ್ದ ಕಡಲೋತ್ತರ ವ್ಯಾಪಾರವನ್ನು ಅದರ ಮಹತ್ವವನ್ನು ತೋರಿಸುತ್ತದೆ.

ಬಂಗರಸರ ಕುರಿತು ಶಾಸನೋಕ್ತ ಉಲ್ಲೇಖ ಸಿಗುವುದು ಕ್ರಿ.ಶ. ೧೪೧೦ರ ಹೊತ್ತಿಗೆ[೧೧೯]. ಮಂಗಳೂರು ಬಂದರಿನ ಮುಖಾಂತರ ವಿದೇಶಿ ವ್ಯಾಪಾರ ವಹಿವಾಟು ನಡೆಸುತ್ತಿದ್ದರು[೧೨೦].

ಅಂದಿನ ಕಾಲದಲ್ಲಿ ನೇತ್ರಾವತಿ ನದಿಯು ದೋಣಿಯ ಮುಖಾಂತರ ಸಾಮಾನುಸರಂಜಾಮುಗಳನ್ನು ಸಾಗಿಸಲು ಬಹಳ ಅನುಕೂಲಕರವಾಗಿತ್ತು[೧೨೧]. ಬಂಗರಸರು ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತಂದಿದ್ದರು[೧೨೨]. ಮಂಗಳೂರು ಬಂದರು ಪ್ರಖ್ಯಾತ ರೇವು ಪಟ್ಟಣವಾಗಿತ್ತಲ್ಲದೇ ವಿವಿಧ ಬಗೆಯ ಮಸಾಲೆದಿನಿಸು ಹಾಗೂ ಬೆಲೆಬಾಳುವ ಮರಗಳು, ಮತ್ತಿತರ ವಸ್ತುಗಳ ವ್ಯಾಪಾರಕ್ಕೆ ಹೆಸರುವಾಸಿಯಾಗಿತ್ತು. ಈ ಕಡಲೋತ್ತರ ವ್ಯಾಪಾರಕ್ಕೆ ಬಂಗರಸರು ನೇತೃತ್ವ ನೀಡಿದ್ದರು.

೩.೨.೧೦ ಸೂರಾಲಿನ ತೋಳಹರು

ಉಡುಪಿ ತಾಲೂಕಿನ ಸುರಾಲಿನಲ್ಲಿನ ತೋಳಹರರು ಅರಸರಾಗಿ ಉಡುಪಿ-ಕುಂದಾಪುರ ತಾಲೂಕುಗಳಲ್ಲಿ ಪ್ರಬಲರಾಗಿ ಸುರಾಲು, ಶಿರಿಯಾರ, ನಾಲ್ವತ್ತನಾಡು, ಕೆಲನಾಡು, ಶಂಕರನಾರಾಯಣ, ಬಸರೂರು, ಹಳ್ಳಿಗೇರಿ, ಬೈಂದೂರು ಈ ಸೀಮೆಯನ್ನೊಳಗೊಂಡ ರಾಜ್ಯಆಳಿದ್ದರು[೧೨೩]. ತುಳು ರಾಜ್ಯದ ರಾಜಧಾನಿಯಾದ ಬಾರ್ಕೂರಿನಿಂದ ಪೂರ್ವಕ್ಕೆ ೬ ಮೈಲಿ ದೂರದ ಸೂರಾಲು ಇವರ ರಾಜಧಾನಿ[೧೨೪].

ಈ ವಂಶದ ಮೂಲದ ಬಗ್ಗೆ ಇತಿಹಾಸಕಾರರಲ್ಲಿ ಏಕಾಭಿಪ್ರಾಯವಿಲ್ಲ. ಇದರಿಂದಾಗಿ ಇವರನ್ನು ಚೌಟರೆಂದೂ, ಕೆಲವರು ಸಾಂತಳಿಗೆಯವರಿರಬೇಕೆಂದು ಊಹಿಸುತ್ತಾರೆ. ಇದೆಲ್ಲದರ ನಡುವೆ ೧೩೯೭ರ ಶಿರಿಯಾರಿನ ಶಾಸನ ಮತ್ತು ಕ್ರಿ.ಶ. ೧೩೯೯ರ ಬಾರ್ಕೂರು ಶಾಸನಗಳಲ್ಲಿ ಸಾಂತಲಿಗೆ ತೋಳಹರ ಎಂಬ ಉಲ್ಲೇಖ ಇರುವುದರಿಂದ ಇವರನ್ನು ಸಾಂತಳಿಗೆಯಿಂದ ಬಂದವರೆಂದು ತಿಳಿಯಲಾಗಿದೆ[೧೨೫]. ತೋಳಹರನ್ನು ಉಲ್ಲೇಖಿಸುವ ಪ್ರಾಚೀನ ದಾಖಲೆಯೆಂದರೆ ಕ್ರಿ.ಶ. ೧೦೪೨[೧೨೬]ರ ಸಾಗರ ಶಾಸನವಾಗಿದ್ದು, ಇದರ ನಂತರ ನಗರದ ಶಾಸನ ತೋಳಹರ ಬಗ್ಗೆ ಉಲ್ಲೇಖಿಸುತ್ತದೆ. ಕ್ರಿ.ಶ. ೧೧೩೯ರ ಬಾರಕೂರಿನ ಪಂಚಲಿಂಗೇಶ್ವರ ದೇವಸ್ಥಾನದ ಶಾಸನದಲ್ಲಿ ಇಪ್ಪತ್ತು ಹೊನ್ನು ಪಾಂಡ್ಯಗದ್ಯಾಣವನ್ನು ಸೂರಾಲದ ತೋಳಹರ ವಶದಲ್ಲಿ ಕೊಟ್ಟು ಶಿವಾನಂದ ಯೋಗಿ ನೈವೇದ್ಯ ಶಾಲೆಯ ನಿರ್ವಹಣೆ ನಡೆಸಲು ತಿಳಿಸಿರುವುದು ತಿಳಿಯುತ್ತದೆ. ಇದೇ ಸುರಾಲದ ತೋಳಹರ ಬಗ್ಗೆ ಸಿಗುವ ಮೊದಲ ಆಧಾರವಾಗಿದೆ. ಆದರೆ ಈ ಶಾಸನ ಕ್ರಿ.ಶ. ೧೨ನೆಯ ಶತಮಾನದಲ್ಲಿ ತೋಳಹರು ತಮ್ಮ ಪ್ರಾಬಲ್ಯ ಸ್ಥಾಪಿಸಿದ್ದಕ್ಕೆ ಉತ್ತಮ ಉದಾಹರಣೆಯಾಗಿದೆ.

ವಿಜಯನಗರ ಅರಸರ ಕಾಲದಲ್ಲಿ ಸೂರಾಲಿನ ತೋಳಹರು ವೈಭವದಿಂದ ರಾಜ್ಯವಾಳಿದರು[೧೨೭]. ಮುಂದೆ ಕೆಳದಿಯ ದಾಳಿನಡೆಯುವವರೆಗೂ ಇವರು ಪ್ರಬಲರಾಗಿದ್ದರು. ನಂತರ ಕಣ್ಮರೆಯಾದರು. ಕ್ರಿ.ಶ. ೧೧೩೯ ರಿಂದ ಕ್ರಿ.ಶ. ಸುಮಾರು ೧೬೯೦ರ ವರೆಗೆ ಇವರ ಅಸ್ತಿತ್ವವನ್ನು ಗುರುತಿಸಲಾಗಿದೆ[೧೨೮].

ಬಸರೂರಿನ ಸಹಿತ ಇತರ ಬೈಂದೂರಿನಿಂದ ಉಡುಪಿವರೆಗಿನ ಬಂದರುಗಳನ್ನು ಬಹು ಚೆನ್ನಾಗಿ ಬಳಸಿಕೊಂಡವರು ತೋಳಹರು. ಮುಂದೆ ಪೋರ್ಚುಗೀಸರೊಂದಿಗೆ ಬಸರೂರು ಬಂದರಿಗಾಗಿಯೇ ಯುದ್ಧ (ಕ್ರಿ.ಶ. ೧೫೫೯–೧೫೭೧) ನಡೆಸಿದ್ದರು. ಒಟ್ಟಿನಲ್ಲಿ ವಿಜಯನಗರದರಸರಿಗೆ ಬಂದರುಗಳ ಬಳಕೆಯಲ್ಲಿ ಬಹುವಿಧದ ಸಹಾಯ ನೀಡಿದ್ದಲ್ಲದೇ ತಮ್ಮ ರಾಜಕೀಯ ವೈಭವಕ್ಕೂ ಬಂದರುಗಳನ್ನು ಬಳಸಿದವರು ಇವರು.

೩.೨.೧೧ ವೇಣೂರಿನ ಅಜಿಲರು

ಬೆಳ್ತಂಗಡಿ ತಾಲೂಕಿನ ವೇಣೂರಿನಿಂದ ಮತ್ತು ನಂತರ ಆಳದಂಗಡಿಯಿಂದ ಅಜಿಲರು ಆಡಳಿತ ನಡೆಸಿದರು[೧೨೯]. ಇವರ ರಾಜ್ಯಕ್ಕೆ ಪೂಂಜಳಿಕೆ, ಆರುವ ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಕ್ರಿ.ಶ. ೧೧೧೮ರ ವೇಣೂರಿನಲ್ಲಿರುವ ಶಾಸನವೊಂದರಲ್ಲಿ ಉಕ್ತನಾದ ಸೇವ್ಯಗೆಲ್ಲರಸನೇ ಈ ವಂಶದ ಮೊದಲ ದೊರೆ ಎಂದು ಹೇಳಬಹುದಾಗಿದೆ[೧೩೦]. ಮುಂದೆ ಅನೇಕ ಅರಸರು ಆಳಿದ್ದರು. ಪೋರ್ಚುಗೀಸರ ದಾಖಲೆಗಳ ಆಧಾರದಲ್ಲಿ ಕ್ರಿ.ಶ. ೧೬೭೯ರ ಸುಮಾರಿನಲ್ಲಿ ಇವರು ಕೆಳದಿಯರಸರ ವಿರುದ್ಧ ಕಾದಾಡಿ ಕಣ್ಮರೆಯಾದದ್ದು ತಿಳಿಯುತ್ತದೆ. ಈ ವಂಶದವರು ಕ್ರಿ.ಶ. ೧೬೦೩–೦೪ರಲ್ಲಿ ವೇಣೂರಿನಲ್ಲಿ ಗುಮ್ಮಟನವಿಗ್ರಹ ಸ್ಥಾಪಿಸಿದ್ದರು[೧೩೧]. ಗಣಪತಿರಾವ್ ಐಗಳ್‌ರವರು ಒಂದನೇ ತಿಮ್ಮಣ್ಣ ಅಜಿಲ (ಕ್ರಿ.ಶ. ೧೧೫೪–೧೧೮೦) ನಿಂದ ಆರಂಭಿಸಿ ಪಾಂಡ್ಯ ಅಜಿಲ (ಕ್ರಿ.ಶ. ೧೭೬೫–೧೭೮೬)ನ ತನಕ ಒಟ್ಟೂ ೧೭ ಅರಸರನ್ನು ಗುರುತಿಸಿದ್ದಾರೆ[೧೩೨]. ಇವರ ಪಾರಂಪರಿಕ ಇತಿಹಾಸ ೧೨ನೇ ಶತಮಾನದಿಂದ ಆರಂಭವಾಗುತ್ತದೆ[೧೩೩].

ಈ ವಂಶದವರು ಕರಾವಳಿಯ ಪ್ರದೇಶದಲ್ಲಿ ವ್ಯಾಪಾರ ವ್ಯವಹಾರಕ್ಕೆ ಹೆಚ್ಚಿನ ಮಹತ್ವನೀಡಿದ್ದರು. ಇವರು ಘಟ್ಟ ಪ್ರದೇಶ ಹಾಗೂ ಕರಾವಳಿ ಪ್ರದೇಶ ಸೇರುವ ಮಧ್ಯದಲ್ಲಿ ತಮ್ಮ ಆಡಳಿತ ಕೇಂದ್ರ ಹೊಂದಿದ್ದರು. ಬಹುಮುಖ್ಯವಾಗಿ ಇವರ ಒಂದು ರಾಜಧಾನಿ ಆಳದಂಗಡಿಯಾಗಿತ್ತು. ಇದು ಹೆಸರೇ ಸೂಚಿಸುವಂತೆ ವ್ಯಾಪಾರಿ ಕೇಂದ್ರವಾಗಿತ್ತು. ಇವರು ಬಂದರುಗಳನ್ನು ವ್ಯಾಪಾರ–ವ್ಯವಹಾರಗಳಿಗೆ ಚೆನ್ನಾಗಿ ಬಳಸಿಕೊಂಡಿದ್ದು ತಿಳಿಯುತ್ತದೆ.

೩.೨.೧೨ ಚೌಟರು

ಮೆಕೆಂಜಿಯ ಕೈಪಿಯತ್ತಿನಲ್ಲಿ ಈ ವಂಶದ ೨೩ ಅರಸರು ಕ್ರಿ.ಶ. ೧೮೦೫ರ ತನಕ ಆಡಳಿತ ಮಾಡಿದ ವಿವರ ದೊರೆಯುತ್ತದೆ. ಇವರ ಮೊದಲ ರಾಜಧಾನಿ ಸೋಮೇಶ್ವರ. ಮುಂದೆ ಪುತ್ತಿಗೆಗೆ ಬದಲಾಯಿಸಿದರು. ಇವರನ್ನು 'ಶಾಲಿಕೆನಾಡು ಚೌಟ'ರೆಂದೂ ಶಾಸನಗಳಲ್ಲಿ ಕರೆದಿದ್ದಾರೆ. ಪುತ್ತಿಗೆಗೆ ಶಾಲಿಕೆನಾಡು ಎಂಬ ಹೆಸರಿದ್ದಿರಬೇಕು[೧೩೪]. ವಿಜಯನಗರ ಕಾಲದಲ್ಲಿ ಇವರು ಮೂಡಬಿದಿರೆಯಿಂದ ಆಳಿದರೂ ಮುಂದೆ ಪುತ್ತಿಗೆ, ಉಳ್ಳಾಲಗಳಿಂದಲೂ ರಾಜ್ಯ ಆಳಿದರು[೧೩೫].

ಇವರು ವಿಜಯನಗರ ಅರಸರೊಂದಿಗೆ ಸೌಹಾರ್ದದಿಂದಲೂ ನೆರೆಹೊರೆಯ ಅರಸರೊಂದಿಗೆ ಅನೇಕ ಯುದ್ಧಸಂಬಂಧಿ ಒಪ್ಪಂದಗಳಿಂದ ಮೈತ್ರಿಯನ್ನು ಸಾಧಿಸಿಕೊಂಡಿದ್ದರು. ನಗಿರೆಯ ಅರಸರ ಸಾಮಂತರಾಗಿಯೂ ಇವರು ರಾಜ್ಯ ಆಳಿದ್ದರು[೧೩೬]. ಈ ವಂಶದ ರಾಣಿಯರು ಅಪ್ರತಿಮರಾಗಿದ್ದು, ವಿದೇಶಿಯರೊಂದಿಗೆ ಒಪ್ಪಂದ, ಯುದ್ಧಗಳ ಮೂಲಕ ತಮ್ಮ ಹಿರಿಮೆಯನ್ನು ಕಾಪಾಡಿಕೊಂಡು ಮೆರೆದಿದ್ದರು. ಮುಂದೆ ಪೋರ್ಚುಗೀಸರೊಂದಿಗೆ ನಡೆದ ವ್ಯಾಪಾರಿ ಒಪ್ಪಂದಗಳಿಂದ ಮತ್ತು ಪೋರ್ಚುಗೀಸರ ಒಪ್ಪಂದ ವಿರೋಧಿನಡೆಗಳಿಂದ ಕೆರಳಿದ ಅಬ್ಬಕ್ಕದೇವಿಯು ಕ್ರಿ.ಶ ೧೬೧೮ರ ಯುದ್ಧದಲ್ಲಿ ಅವರನ್ನು ಸೋಲಿಸಿದ್ದಳು. ಇದು ಆಕೆಯಆಡಳಿತದ ಬಗ್ಗೆ ವಿದೇಶಿ ಪ್ರವಾಸಿಗಳಬರಹದಿಂದ ತಿಳಿಯುತ್ತದೆ[೧೩೭].

ಚೌಟರು ಕರ್ನಾಟಕ ಕರಾವಳಿಯ ದಕ್ಷಿಣದ ಬಂದರುಗಳನ್ನು ತಮ್ಮ ಕಡಲೋತ್ತರ ವ್ಯಾಪಾರಕ್ಕೆ ಬಹುದೊಡ್ಡ ರೀತಿಯಲ್ಲಿ ಉಪಯೋಗಿಸಿಕೊಂಡವರು ವಿಜಯನಗರದ ಅರಸರು. ಆರಂಭದಿಂದಲೂ ಕರಾವಳಿಯ ಬಂದರುಗಳ ಮೂಲಕ ಕಡಲೋತ್ತರ ವ್ಯಾಪಾರ ನಡೆಸಿದ್ದರು. ಅವರಿಗೆ ಚೌಟರಸರ ಬೆಂಬಲ ದೊರೆತಿತ್ತು.

೩.೩ ರಾಜಕೀಯ ಸಂಘರ್ಷ ಹಾಗೂ ಒಪ್ಪಂದಗಳು

ಬಂದರಿನ ಮೂಲಕ ನಿರ್ಮಿತಗೊಂಡ ರಾಜಕೀಯ ಮತ್ತು ಆರ್ಥಿಕತೆ ವಿಪ್ಲವಕಾರಿಯಾದ ಸಂಘರ್ಷವನ್ನು ಹುಟ್ಟು ಹಾಕಿತ್ತು. ಕೇವಲ ೩೨೦ ಕಿ.ಮೀ ವ್ಯಾಪ್ತಿಯ ಕರಾವಳಿ ತೀರವನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಳ್ಳುವ ನಿರಂತರ ಏಕಮುಖ ಪ್ರಯತ್ನ ರಾಜ್ಯಾಡಳಿತಗಾರರದ್ದು ಆಗಿತ್ತು. ಈ ಪ್ರಯತ್ನದಲ್ಲಿ ಅನೇಕ ಯುದ್ಧಗಳು ಹಾಗೂ ಒಪ್ಪಂದಗಳು ನಡೆಯುತ್ತಿದ್ದವು. ಸಾಮ-ದಾನ-ದಂಡ-ಭೇದಗಳೆಂಬ ನೀತಿಗೆ ಪರಸ್ಪರರು ಶರಣಾಗಿದ್ದು ಕಂಡು ಬರುತ್ತದೆ. ಕೆಲವು ಶಾಸನಗಳು ನಂದರ ಕುರಿತು ತಿಳಿಸುವುದರಿಂದ, ಅವರ ಶಕವರ್ಷದ ತೇದಿಯನ್ನು ಹೇಳುವುದರಿಂದ ಕರ್ನಾಟಕ ನಂದರ ಅಧೀನಕ್ಕೆ ಒಳಗಾಗಿತ್ತೆಂದು ಹೇಳಬಹುದು.[೧೩೮] ನಂದರು ಸಮಗ್ರ ಭಾರತಕ್ಕೆ ಅಧಿಪತಿಗಳಾಗುವ ಸಿದ್ಧತೆಯಲ್ಲಿದ್ದರು. ದಕ್ಷಿಣಾಪಥ, ಮುಖ್ಯವಾಗಿ ಪಶ್ಚಿಮ ಕರಾವಳಿಯ ಮಹತ್ವ ಅರಿತಿದ್ದರು. ಆದರೆ ಅವರ ಆಡಳಿತದ ಬಗ್ಗೆ ಸ್ಪಷ್ಟವಾದವಿವರ ದೊರೆಯುತ್ತಿಲ್ಲ ಮೌರ್ಯರು ಅವರನ್ನು ಗೆದ್ದಮೇಲೆ ಸಹಜವಾಗಿ ಕರ್ನಾಟಕದ ಭಾಗಗಳು ಅವರ ಪಾಲಾದವು. ಮೌರ್ಯಅಶೋಕನು ಬಂದರುಗಳ ಮಹತ್ವ ಅರಿತಿದ್ದ. ಆತ ಕೈಗೊಂಡ ಏಕೈಕ ಯುದ್ಧವಾದ ಕಳಿಂಗದ ಮೇಲಿನ ಯುದ್ಧವು ಬಂದರುಗಳ ಬಗ್ಗೆ ಅವನು ಹೊಂದಿದ್ದ ಭಾವನೆ ವ್ಯಕ್ತಪಡಿಸುತ್ತವೆ. ಅಶೋಕನ ಶಾಸನಗಳು ತಿಳಿಸುವ ದಕ್ಷಿಣದ ಗಡಿಗಳ ಪಶ್ಚಿಮ ಕರಾವಳಿಯ ಬಂದರು ಪ್ರದೇಶ ಆಳುತ್ತಿದ್ದ ರಾಜವಂಶವನ್ನು

ಹೆಸರಿಸುತ್ತವೆ. ಇದೆಲ್ಲದರಿಂದ ಪಶ್ಚಿಮ ಕರಾವಳಿಯ ಉತ್ತರದ ಬಂದರುಗಳು ಅಶೋಕನ ಅಧೀನಕ್ಕೆ ಒಳಪಟ್ಟಿರಬಹುದು.

ಪ್ರಾಚೀನ ಕದಂಬರು ಕಡಲನ್ನು ಆಶ್ರಯಿಸಿದ[೧೩೯]ವರೆನ್ನುವುದು ವಿಧಿತ. ಈ ಕದಂಬರಿಗೂ ಚೇರರಿಗೂ ನಿರಂತರ ಸೆಣಸಾಟ ನಡೆಯುತ್ತಿತ್ತು[೧೪೦]. ಕದಂಬರು ಬನವಾಸಿ ಕೇಂದ್ರ ಮಾಡಿಕೊಂಡು ರಾಜ್ಯ ಸ್ಥಾಪಿಸಿದ ಮೇಲೆ ಇದು ನಿಂತಿತು. ಕದಂಬರು ತಮ್ಮ ರಾಜ್ಯ ವಿಸ್ತರಣೆಗೆ ವ್ಯಾಪಾರಿ ಸಂಪರ್ಕಗಳ ಉದ್ದೀಪನೆಗೆ ಹಾಗೂ ಸೌಹಾರ್ದತೆಗಾಗಿ ಸೈನ್ಯವನ್ನು ಬಳಸಿದಂತೆ, ವಿವಿಧ ರಾಜಪ್ರಭುತ್ವದೊಂದಿಗೆ ವೈವಾಹಿಕ ಸಂಬಂಧ ಏರ್ಪಡಿಸಿ ಕೊಂಡಿದ್ದರು.

ಮಯೂರ ವರ್ಮ ಕದಂಬ ರಾಜ್ಯದ ವಿಸ್ತಾರ ಹೆಚ್ಚಿಸಲು ಅಭೀರ, ತ್ರೈಕೂಟ, ಶಕಸ್ಥಾನ, ಪುನ್ನಾಟ ಮೊದಲಾದ ರಾಜ್ಯಗಳನ್ನು ಗೆದ್ದನು[೧೪೧]. ಕಂಗವರ್ಮ (ಕ್ರಿ.ಶ.ಸು. ೩೭೦–೩೭೫)ನು ಮಧ್ಯ ಭಾರತದ ವಾಕಾಟಕರೊಂದಿಗೆ ಯದ್ದಮಾಡಿದ್ದನು. ಆದರೆ ಭಗೀರಥ (ಕ್ರಿ.ಶ.ಸು. ೩೯೫–೪೨೦)ನು ತನ್ನ ಕುವರಿಯೋರ್ವಳನ್ನು ಗುಪ್ತವಂಶದ ರಾಜಕುಮಾರನಿಗೆ ನೀಡಿ ಮದುವೆ ಮಾಡಿದ್ದು[೧೪೨] ತಿಳಿಯುತ್ತದೆ. ಹಾಗೇ ಕಾಕುಸ್ಥವರ್ಮನು ತನ್ನ ಮಗಳೊಬ್ಬಳನ್ನು ವಾಕಾಟಕ ಅರಸ ನರೇಂದ್ರಸೇನನಿಗೂ ಹಾಗೂ ಇನ್ನೊಬ್ಬಳನ್ನು ಗುಪ್ತ ರಾಜಕುಮಾರ ಸ್ಕಂದಗುಪ್ತನಿಗೂ ಕೊಟ್ಟು ಮದುವೆ ಮಾಡಿಸಿದ್ದನು[೧೪೩]. ಮುಂದೆ ಬಂದ ಶಾಂತಿವರ್ಮನು ತನ್ನ ರಾಜ್ಯಕ್ಕಾಗಿ ನೆರೆಹೊರೆಯ ಚಿಕ್ಕ ಮೂರು ಅರಸರೊಂದಿಗೆ ಕಾದಿದ್ದು ಹಾಗೂ ರವಿವರ್ಮ (ಕ್ರಿ.ಶ.ಸು. ೪೯೬–೫೩೦), ಹರಿವರ್ಮ (ಕ್ರಿ.ಶ.ಸು. ೫೩೭–೫೪೭) ಎರಡನೇ ಕೃಷ್ಣವರ್ಮ (೫೬೫)ರ ವರೆಗೆ ಹೆಚ್ಚಿನ ಯಾವುದೇ ಕದನಗಳಾಗಲೀ, ರಾಜತಾಂತ್ರಿಕ ಕಾರಣಗಳಿಗೆ ವಿವಾಹ ಸಂಬಂಧಗಳೇರ್ಪಟ್ಟಿದ್ದು ಕಂಡುಬರದು. ಆದರೆ ಮೃಗೇಶವರ್ಮ (ಕ್ರಿ.ಶ.ಸು ೪೭೫–೭೯೦) ನು ಕೈಕೇಯ ವಂಶದ ರಾಜಕುವರಿಯಾದ ಪ್ರಭಾವತಿಯನ್ನು ವಿವಾಹವಾಗಿದ್ದು ತಿಳಿಯುತ್ತದೆ[೧೪೪]. ಕೈಕೇಯರು ಉತ್ತರಕನ್ನಡದ ಹೊನ್ನಾವರವನ್ನೊಳಗೊಂಡ ಕರಾವಳಿ ತೀರದಲ್ಲಿ ಆಳಿದ ಒಂದು ರಾಜವಂಶವಾಗಿತ್ತು. ಈ ಕೈಕೇಯರು, ತುಳು, ಕೊಂಕಣ, ಹೈವೆಯಿಂದ ಅಧಿಪತಿಗಳಾಗಿ ಆಳಿದ್ದರು. ಇವರಕಾಲಕ್ಕೆ ಬಂದರು ಪ್ರದೇಶಗಳಲ್ಲಿ ಕಡಲೋತ್ತರ ವ್ಯಾಪಾರ ಭರದಿಂದ ಸಾಗಿತ್ತು. ಕೈಕೇಯರೊಂದಿಗಿನ ವೈವಾಹಿ ಸಂಬಂಧವು ತೀರಪ್ರದೇಶದ ರಾಜವಂಶ ಒಂದನ್ನು ಅಧೀನ ಗೊಳಿಸಿ ಕೊಳ್ಳುವಲ್ಲಿ ಸಹಾಯ ಮಾಡಿತ್ತು.

ಕೃಷ್ಣವರ್ಮನ ಕಾಲಕ್ಕೆ ಕದಂಬ ವಂಶದ ಆಡಳಿತ ಎರಡಾಯಿತು. ದುರ್ಬಲರಾದ ಕದಂಬರನ್ನು ಜಯಿಸಲು ಬಾದಾಮಿ ಚಾಲುಕ್ಯರು ದಾಳಿ ನಡೆಸಿದರು. ಇಮ್ಮಡಿ ಪುಲಕೇಶಿಯ ಕಾಲದಲ್ಲಿ ಬನವಾಸಿ ಇವರ ವಶವಾಯಿತು[೧೪೫]. ಓೀಗೆ ಕದಂಬ ರಾಜ್ಯ ವಶಪಡಿಸಿಕೊಂಡ ಇಮ್ಮಡಿ

ಪುಲಕೇಶಿಯು ಕರಾವಳಿ ಪ್ರದೇಶದ ಕೆಕೇಯರನ್ನೂ ಅಧೀನಗೊಳಿಸಿ ಕೊಂಡನು. ಈ ಸಂಪರ್ಕ ಮುಂದೆ ರಿಡಿ ಹಾಗೂ ರೇವತಿ ದ್ವೀಪಗಳನ್ನು ಕಡಲಮಾರ್ಗವಾಗಿ ಹೋಗಿ ಜಯಿಸಲು ಸಹಾಯ ಮಾಡಿತು. ಮತ್ತು ಕರಾವಳಿ ಪ್ರದೇಶದ ಪ್ರಮುಖ ಬಂದರುಗಳ ಮೂಲಕ ಕಡಲೋತ್ತರ ವ್ಯಾಪಾರಕ್ಕೆ ಸಹಾಯ ಮಾಡಿತ್ತು.

ಚಾಲುಕ್ಯರು ಕದಂಬರನ್ನು ಜಯಿಸಿದಾಗ ಸಹಜವಾಗಿ ಕದಂಬರ ಅಧೀನರಾಗಿದ್ದ ಆಳೂಪರು ಶರಣಾದರು. ಪಲ್ಲವರನ್ನು ಹಿಂದಕ್ಕೆ ಸರಿಸುವಲ್ಲಿ ಚಾಲಕ್ಯ ವಿಕ್ರಮಾದಿತ್ಯನಿಗೆ ಸಹಾಯ ಮಾಡಿದ್ದಕ್ಕೆ ಆಳುವರಸನು ಕದಂಬ ಮಂಡಲದ ಒಡೆತನ ಸಂಪಾದಿಸಿದನು. ಜೊತೆಗೆ ಚಾಲುಕ್ಯ ವಿಜಯಾದಿತ್ಯನ ತಂಗಿ, ವಿಕ್ರಮಾದಿತ್ಯನ ಮೊಮ್ಮಗಳಾದ (ವಿನಯಾದಿತ್ಯನಮಗಳು) ಕುಂಕುಮ ಮಹಾದೇವಿಯನ್ನು ಚಿತ್ರವಾಹನನು ಮದುವೆಯಾದನು. ಇದರೊಂದಿಗೆ ವಿಕ್ರಮಾದಿತ್ಯನ ಪರಮಸ್ನೇಹಿತನಾಗಿದ್ದ ಚಿತ್ರವಾಹನನು ಕದಂಬ ಮಂಡಲದ ಅಧಿಪತಿಯಾಗಿ ಮುಂದುವರಿದನು[೧೪೬]. ಬನವಾಸಿ ಮಂಡಲವೆಂದೂ ಕರೆದುಕೊಂಡ ಈ ಕದಂಬ ಮಂಡಲದ ಅಧಿಪತಿಯಾದ ಆಲೂಪರಿಂದ ಚಾಲುಕ್ಯರಿಗೆ ಕಡಲೋತ್ತರ ವ್ಯಾಪಾರ ಸುಲಭವಾಯಿತು.

ಮುಂದೆ ರಾಷ್ಟ್ರಕೂಟರಿಗೂ ಕರ್ನಾಟಕದ ಬಂದರುಗಳನ್ನು ವಶಪಡಿಸಿಕೊಳ್ಳುವ ಇರಾದೆ ಉಂಟಾದಾಗ, ರಾಷ್ಟ್ರಕೂಟರ ಧ್ರುವನ ಸಾಮಂತನಾದ ಮಾರಕ್ಕರಸನು ಬನವಾಸಿ ೧೨೦೦೦ ದಿಂದ ರಾಜ್ಯ ವಾಳತೊಡಗಿದನು. ಇದು ಧ್ರುವನ ಮಗನಾದ ಪ್ರಭೂತವರ್ಷ ಗೋವಿಂದನ ಕಾಲದಲ್ಲೂ ಮುಂದುರಿಯಿತು[೧೪೭]. ರಾಷ್ಟ್ರಕೂಟರು ಸರಿ ಸುಮಾರು ೮ನೆಯ ಶತಮಾನದವರೆಗೂ ಬನವಾಸಿಯ ಮೂಲಕ ಕರಾವಳಿಯನ್ನು ತಮ್ಮ ಸಾಮಂತರು, ಅಧಿಕಾರಿಗಳ ಮೂಲಕ ಆಳಿದರು. ರಾಷ್ಟ್ರಕೂಟರ ಮೂರನೇ ಗೋವಿಂದ (ಕ್ರಿ.ಶ. ೭೯೩–೮೧೪)ನು ಸಿಂಹಳದ ರಾಜನನ್ನು ತನ್ನ ಸಾಮಂತನನ್ನಾಗಿಸಿ– ಕೊಂಡಿದ್ದನು[೧೪೮]. ಈ ಎಲ್ಲ ರಾಜಕೀಯ ವ್ಯವಹಾರಗಳಿಗೆ ಉತ್ತರ ಕನ್ನಡದ ಬಂದರುಗಳನ್ನೇ ಆಶ್ರಯಿಸಿದ್ದನು. ರಾಷ್ಟ್ರಕೂಟರ ಮೂರನೆ ಕೃಷ್ಣ (ಕ್ರಿ.ಶ. ೯೩೯–೯೬೭)ನು ತನ್ನ ಭಾವನ ಸಹಾಯದಿಂದ ಚೋಳರನ್ನು ಸೋಲಿಸಿ ನಂತರ, ಬೂತುಗನನ್ನು ಬನವಾಸಿಮಂಡಲಾಧಿಪತಿಯಾಗಿ ನೇಮಿಸಿದನು[೧೪೯]. ಇದೆಲ್ಲದರಿಂದ ಕೃಷ್ಣನಿಗೆ ದಕ್ಷಿಣದ ಚೇರರನ್ನು ಪಾಂಡ್ಯರನ್ನು ಗೆಲ್ಲಲು ಸಹಾಯವಾಯಿತು. ದಕ್ಷಿಣದ ಇನ್ನೊಂದು ವಂಶವಾದ ಚೋಳರು ಸಂಪೂರ್ಣ ಶರಣಾದರು.

ಮುಂದೆ ಬಂದ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಉತ್ತರ ಕೊಂಕಣದ ಶಿಲಾಹಾರರು ಇವರ ಸಾರ್ವಭೌಮತೆಯನ್ನು ಒಪ್ಪಿಕೊಂಡರು[೧೫೦]. ಚಾಲುಕ್ಯರ ಆಂತರಿಕ ಸಂಘರ್ಷಗಳ ನಂತರ ಆರನೆಯ ವಿಕ್ರಮಾದಿತ್ಯ (ಕ್ರಿ.ಶ. ೧೦೭೬–೧೧೨೬) ಅಧಿಕಾರಕ್ಕೆ ಬಂದನು. ಗೋವಾ ಕಾದಂಬರು

ಈತನ ಸಾಮಂತರಾಗಿದ್ದರು. ಮಹಾಮಂಡಳೇಶ್ವರ ಜಯಕೇಶಿಯ ಮಗಳನ್ನು ಮದುವೆಯಾಗಿ[೧೫೧] ದಕ್ಷಿಣದತ್ತ ಪಶ್ಚಿಮ ಕರಾವಳಿಯಲ್ಲಿ ತನ್ನ ಸಂಬಂಧ ಬೆಳೆಸಿದನು. ಅಣ್ಣ ಸೋಮೇಶ್ವರನನ್ನು ಬದಿಗೆ ಸರಿಸಿ ಪಟ್ಟವೇರಲು ಬನವಾಸಿ ಮಂಡಲದ ಕೀರ್ತಿವರ್ಮ ಹಾಗೂ ಚಟ್ಟಯ್ಯದೇವನ ಸಹಾಯ ಪಡೆದಿದ್ದನು. ಈ ಬನವಾಸಿ ಮಾಂಡಲಿಕರ ಬೆಂಬಲವು ಈತನಿಗೆ ತುಂಬಾ ಸಹಾಯಕವಾಗಿತ್ತು[೧೫೨]. ಬನವಾಸಿಯನ್ನು ತನ್ನ ಉಪರಾಜ್ಯಧಾನಿಯನ್ನಾಗಿ ಮಾಡಿಕೊಂಡಿದ್ದನು.

ಹಾನಗಲ್ಲಿನಿಂದ ಇನ್ನೊಂದು ಕದಂಬ ವಂಶವು ಆಳಿತು. ಈ ವಂಶದ ಮೂಲ ಪುರುಷ ಚಟ್ಟುಗ ಅಥವಾ ಚಟ್ಟಯ್ಯ. ಚಾಲುಕ್ಯ ಇಮ್ಮಡಿ ಜಯಸಿಂಹನ ಸಾಮಂತನಾಗಿದ್ದನು. ಬಂಕಾಪುರದ ಕಾದಂಬರ ಅರಿಕೇಸರಿಯ ಮಗ ಮಯೂರ ವರ್ಮನು ಚಾಲುಕ್ಯ ಅರಸ ಜಯಸಿಂಹನ ಸೋದರಿ ಅಕ್ಕಾದೇವಿಯನ್ನು ಮದುವೆಯಾಗಿದ್ದನು[೧೫೩]. ಮುಂದೆ ಬನವಾಸಿ ಪನ್ನಿರ್ಚ್ಛಾಸಿರವನ್ನು ಹಾನಗಲ್ ಶಾಖೆಯ ಕೀರ್ತಿವರ್ಮ ಆಳಲು ಪ್ರಾರಂಭಿಸಿದನು[೧೫೪]. ಈತನು ವಿಕ್ರಮಾದಿತ್ಯನನ್ನು ಬೆಂಬಲಿಸಿದ್ದನು. ನಂತರ ಶಾಂತಿವರ್ಮ, ಬಳಿಕ ಆತನ ಮಗ ಇಮ್ಮಡಿ ತೈಲನು ಬನವಾಸಿ ಮಂಡಳಾಧೀಶ್ವರರಾದರು[೧೫೫].

ಹೊಯ್ಸಳರಿಗಿಂತ ಹಿಂದಿನ ಕಲಚೂರಿಗಳೂ ಬನವಾಸಿ ಗೆಲ್ಲುವ ಪ್ರಯತ್ನ ಮಾಡಿದ್ದರೂ ಎಲ್ಲೆಡೆಸೋತ ಅಹವಮಲ್ಲನು ಬನವಾಸಿ ಬೆಳ್ವಲಗಳಿಂದ ಆಳಿದ. ನಂತರಬಂದ ಸಿಂಘಣನು ಕ್ರಿ.ಶ. ೧೧೮೪ ರಲ್ಲಿ ಬಿಜ್ಜಳನ ಮಗ ಸೋಮೇಶ್ವರನಿಗೆ ಬನವಾಸಿ ಬಿಟ್ಟುಕೊಟ್ಟು ಆತನು ಸಾಮಂತನಾದನು[೧೫೬].

ಮುಂದೆ ಬಂದ ಹೊಯ್ಸಳರು ಕದಂಬರ ನೆರವಿನಿಂದ ಚಾಲುಕ್ಯರನ್ನು ಎದುರಿಸಲು ಸಹಾಯ ಯಾಚಿಸಿದರು. ಒಪ್ಪಂದ ಫಲಪ್ರದವಾಗಲಿಲ್ಲ. ಮುಂದೆ ಹೊಯ್ಸಳರು ಬನವಾಸಿ ಮುತ್ತಿದರು. ಕರಾವಳಿಯ ಕುರಿತು ಹೊಯ್ಸಳರಿಗಿದ್ದ ಅಭಿಲಾಷೆಯ ಜ್ಯೋತಕವಾಗಿ ಮೂರನೇ ಬಲ್ಲಾಳನು ಆಳುಪ ರಾಜಕುವರಿ ಚಿಕ್ಕಾಯಿತಾಯಿಯನ್ನು ಮದುವೆಯಾದನು. ಸಂಘರ್ಷದ ಬದಲು, ಸಂಬಂಧ ಬೆಳೆಸಿ ರಾಜ್ಯ ವಿಸ್ತರಿಸಿ ಬಂದರುಗಳ ಮೂಲಕ ವ್ಯಾಪಾರ ವ್ಯವಹಾರ ನಡೆಸಿದರು. ಹೊಯ್ಸಳರಿಗೆ ಇತರೆಡೆಗಳಲ್ಲಿ ಯುದ್ಧದಿಂದ ಕಳೆದು ಕೊಂಡದ್ದು ಪಶ್ಚಿಮ ಕರಾವಳಿಯಲ್ಲಿ ದೊರೆಯಿತು. ಚೋಳರು ಕನ್ನಡ ಕರಾವಳಿಯಲ್ಲಿ ತಮ್ಮ ಪ್ರಭುತ್ವಸಾಧಿಸಲುಸೆಣಸಿದ್ದರು. ಬಾರ್ಕೂರಿ ನವರೆಗೂ ತಮ್ಮ ದಂಡನ್ನು ತಂದು ನಿಲ್ಲಿಸಿದ್ದರು. ಆದರೆ ಇದು ಬಹುಕಾಲ ನಡೆಯಲಿಲ್ಲ. ಮಂಗಳೂರು ಕೂಡಾ ಇವರ ಅಧೀನವಾಗಲಿಲ್ಲ

ಹೊಯ್ಸಳರ ಸಮಕಾಲೀನರಾಗಿದ್ದ ಸೇವುಣರು–ಹೊಯ್ಸಳರೊಂದಿಗೆ ನಿರಂತರ ಕಾದಾಡಬೇಕಾಯಿತು. ಕರ್ನಾಟಕದ ಪಶ್ಚಿಮ ಕರಾವಳಿ ಪಡೆಯುವ ಇವರ ಆಸೆ ಕೆಲ ಮಟ್ಟಿಗೆ

ಯಶಸ್ಸುಗಳಿಸಿತ್ತು. ಸಿಂಘಣನು ಸಮಾರು ಕ್ರಿ.ಶ ೧೨೧೧ ರ ಕಾಲಕ್ಕೆ ಗೋವಾ ಕಾದಂಬರನ್ನು ಅಧೀನರಾಗಿಸಿಕೊಳ್ಳುವಲ್ಲಿ ಸಫಲರಾಗಿದ್ದನು[೧೫೭]. ಇದರಿಂದ ಅವನಿಗೆ ಶಿಲಾಹಾರರ ರಾಜಧಾನಿಯಾಗಿದ್ದ ಪುರಿಯನ್ನು ಗೆಲ್ಲಲು ಸಹಾಯವಾಯಿತು. ಸಣ್ಣ ನೌಕಾ ಪಡೆ ಹೊಂದಿದ್ದ ಇವರು ಕಡಲಮಾರ್ಗವಾಗಿ ಸಾಗಿ ಪೂರಿಯನ್ನು ಗೆದ್ದಿದ್ದರು[೧೫೮].

ವಿಜಯನಗರದ ಆಡಳಿತ ಕಾಲದಲ್ಲಿ ಬಂದರುಗಳ ಪ್ರದೇಶದಲ್ಲಿ ಆಡಳಿತ ನಡೆಸುತ್ತಿದ್ದ ಆಳುಪರು, ಗೇರುಸೊಪ್ಪೆಯ ಸಾಳ್ವರು ಹಾಗೂ ಚಂದಾವರದ ಕಾದಂಬರು ಆಂತರಿಕ ಹಾಗೂ ಬಾಹ್ಯ ದಾಳಿಗಳಿಂದ ದುರ್ಬಲರಾಗುತ್ತಿದ್ದರು[೧೫೯]. ಚಿಕ್ಕಾಯಿತಾಯಿ ರಾಜ್ಯದ ಆಡಳಿತಕ್ಕೆ ವಿಜಯನಗರದ ರಾಜ್ಯಪಾಲರ ಸಹಯೋಗ ಪಡೆದರೆ[೧೬೦] ಆರಂಭದಲ್ಲಿ ನಗರೆಯ ಸಾಳ್ವರು ವಿರೋಧಿಸಿದರು. ಬಿಜಾಪುರದ ಸುಲ್ತಾನರ ಬೆಂಬಲಕ್ಕೆ ನಿಂತರು. ಆದರೆ ಮುಂದೆ ಗೋವಾದ ಪತನದೊಂದಿಗೆ ಸಾಳ್ವರೂ ವಿಜಯನಗರದ ಮಹಾಮಂಡಳೇಶ್ವರರಾದರು. ಉಳಿದ ಕಾದಂಬವಂಶಗಳು ವಿಜಯನಗರದ ಅಧಿನವಾದವು.

ಟಿಪ್ಪಣಿಗಳು

೧. ಭಟ್ ಗುರುರಾಜ ಪಿ., ಹಿಸ್ಟ್ರಿ ಎಂಡ್ ಕಲ್ಚರ್ ಆಫ್ ಸೌಥ್ ಇಂಡಿಯಾ, ಪುಟ ೩

೨. ಭಟ್ ಗುರುರಾಜ ಪಿ., ತುಳುನಾಡು, ಪುಟ ೬೭

೩. ನಾಗೇಗೌಡ ಎಚ್. ಎಲ್., ಪ್ರವಾಸಿಕಂಡ ಇಂಡಿಯಾ, ಸಂ.೨. ಪುಟ ೩೨

೪. ಶೇಷಾದ್ರಿ ಆರ್., ಕರ್ನಾಟಕದ ಶಾಸನಗಳು, ಪುಟ ೧೭

೫. ಭಟ್ ಗುರುರಾಜ ಪಿ., ತುಳುನಾಡು, ಪುಟ ೧೭

೬. ಶ್ರೀಮನ್ ಮಹಾಭಾರತ, ಸಂ. ೪ ಪುಟ ೯೬೮

೭. ಅದೇ, ಸಂ., ೨ ಪುಟ ೪೦೬

೮. ಮೋಹನ ಕೃಷ್ಣ ರೈ ಕೆ., ತುಳುನಾಡು ಕನ್ನಡನುಡಿ, ಪುಟ ೬

೯. ಭಟ್ಟ ಗುರುರಾಜ್ ಪಿ., ತುಳುನಾಡು, ಪುಟ ೨೪

೧೦. ಕಾರ್ಲ್‌ಮಾರ್ಕ್ಸ್, ಮೌಲ್ಯ, ಬೆಲೆ ಮತ್ತು ಲಾಭ, ಪುಟ ೪೮

೧೧. ಅದೇ, ಪುಟ ೭೬

೧೨. ಶೆಟ್ಟರ್ ಷ., ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಪುಟ ೧೫೫

೧೩. ಅದೇ, ಪುಟ ೧೫೬

೧೪. ಸೋಸಲೆ ಚಿನ್ನಸ್ವಾಮಿ ಎಸ್., ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರು ಮತ್ತು ಮತಾಂತರ, ಪುಟ ೭೫

೧೫. ಸರ್ದೇಸಾಯಿ ಎಸ್. ಜಿ., ಭಾರತೀಯ ಇತಿಹಾಸದ ವೈಲಕ್ಷಣ್ಯಗಳು, (ಅನು) ಗೋಪಾಲಕೃಷ್ಣಯ್ಯ ಕೆ. ಎಲ್., ಪುಟ ೫೫

೧೬. ಅದೇ, ಪುಟ ೫೭

೧೭. ಅದೇ, ಪುಟ ೫೮

೧೮. ಅದೇ, ಪುಟ ೫೮

೧೯. ಅದೇ, ಪುಟ ೫೯

೨೦. ಭಾರತ ಗ್ಯಾಸೆಟಿಯರ್, ಕರ್ನಾಟಕ, ಪುಟ ೧೦೭

೨೧. ಶ್ರೀನಿವಾಸಮೂರ್ತಿ ಎಚ್.ವಿ., ರಾಮಕೃಷ್ಣ ಆರ್., ಸಮಗ್ರ ಕರ್ನಾಟಕ ಚರಿತ್ರೆ, ಪುಟ ೨೫

೨೨. ಮುಜುಂದಾರ್ ಆರ್.ಕೆ., ಭಾರದ್ವಾಜ್ ಆರ್.ಸಿ., ಚೌಧರಿ ಪಿ.ಅರ್., ದಕ್ಷಿಣ ಭಾರತದ ಇತಿಹಾಸ, ಪುಟ ೧೮

೨೩. ಶ್ರೀನಿವಾಸಮೂರ್ತಿ ಎಚ್.ವಿ., ರಾಮಕೃಷ್ಣ ಆರ್., ಸಮಗ್ರ ಕರ್ನಾಟಕ ಚರಿತ್ರೆ, ಪುಟ ೨೬

೨೪. ಅದೇ, ಪುಟ ೨೬

೨೫. ಶಾಸ್ತ್ರಿ ಎ.ಕೆ., ಬನವಾಸಿ ಸಮಗ್ರ ಪರಿಚಯ, ಬನವಾಸಿ ಐತಿಹಾಸಿಕ ಹಿನ್ನೆಲೆ, ಪುಟ ೫

೨೬. ಗೋಪಾಲ ಬಾ.ರಾ., ಬನವಾಸಿ ಕದಂಬರು, ಪುಟ ೬

೨೭. ಕೌಟಿಲ್ಯನ ಅರ್ಥಶಾಸ್ತ್ರ,(ಅನು). ಭಟ್ಟ ಕೃಷ್ಣ ಕೆ., ಪುಟ ೯೧

೨೮. ಅಯ್ಯರ್ ಸತ್ಯನಾಥ, (ಅನು). ಅನವಟ್ಟಿ ಎಂ. ಆರ್., ಪ್ರಾಚೀನ ಭಾರತ, ಪುಟ ೨೦೬

೨೯. ಅದೇ, ಪುಟ ೨೦೬

೩೦. ವೆಂಕಟಸ್ವಾಮಿ ಎಂ., ಕೋಲಾರದ ಚಿನ್ನದಗಣಿಗಳು, ಪುಟ ೧೫

೩೧. ಅದೇ, ಪುಟ ೧೬

೩೨. ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಪುಟ ೩೪

೩೩. ಭಟ್ಟ ಗುರುರಾಜ್ ಪಿ., ತುಳುನಾಡು, ಪುಟ ೪೮

೩೪. ಶ್ರೀನಿವಾಸಮೂರ್ತಿ ಎಚ್.ವಿ., ರಾಮಕೃಷ್ಣ ಆರ್., ಸಮಗ್ರ ಕರ್ನಾಟಕ ಚರಿತ್ರೆ, ಪುಟ ೨೯

೩೫. ಅದೇ, ಪುಟ ೨೯

೩೬. ಭಟ್ ರಘುನಾಥ ಎಚ್.ಆರ್., ಕರ್ನಾಟಕ ಶಾಸನ, ಕಲೆ, ಪುಟ ೨೫

೩೭. ಶಾಸ್ತ್ರಿ ಎ.ಕೆ., ಬನವಾಸಿ ಸಮಗ್ರ ಪರಿಚಯ, ಪುಟ ೬

೩೮. ಕರ್ನಾಟಕ ಪರಂಪರೆ, ಭಾಗ೨, ಪುಟ ೩೪

೩೯. ಭಾರತ ಗೈಜೆಟಿಯರ್, ಸಂ. ೨, ಪುಟ ೭೫

೪೦. ಭಟ್ ರಘುಪತಿ ಎಚ್.ಆರ್., ಸ್ಟಡೀಸ್ ಇನ್ ದಿ ಅರ್ಲಿ ಕೊಯಿನ್ಸ ಆಫ್ ಕರ್ನಾಟಕ, ಪುಟ ೭೧

೪೧. ಗುರುವ ಆರ್. ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೭ – ೮

೪೨. ಅದೇ, ಪುಟ ೨೫

೪೩. ಗೋಪಾಲ ಬಾ.ರಾ., ಬನವಾಸಿ ಕದಂಬರು, ಪುಟ ೮

೪೪. ಶಾಸ್ತ್ರಿ ಎ.ಕೆ., ಬನವಾಸಿ ಸಮಗ್ರ ಪರಿಚಯ, ಪುಟ ೬

೪೫. ಅದೇ, ಪುಟ ೭

೪೬. ಮೊರೇಸ್ ಜಿ.ಎಂ., ಕದಂಬಕುಲ, ಪುಟ ೬

೪೭. ಗೌಡ ಗಣಪತಿ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೬

೪೮. ಅದೇ, ಪುಟ ೭೮

೪೯. ಭಾರತ ಗೈಜೆಟಿಯರ್, ಸಂ.೨, ಪುಟ ೭೫

೫೦. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೭–೮

೫೧. ಅದೇ, ಪುಟ ೨೫

೫೨. ಹಿರೇಮಠ ಬಿ.ಆರ್., ಶಾಸನಗಳಲ್ಲಿ ವರ್ತಕರು, ಪುಟ ೨೭

೫೩. ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಪುಟ ೩೬

೫೪. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೩೩

೫೫. ಅದೇ, ಪುಟ ೩೩

೫೬. ಅದೇ, ಪುಟ ೩೩

೫೭. ಕಾಮತ್ ಸೂರ್ಯನಾಥ ಯು., (ಸಂ) ಉತ್ತರ ಕನ್ನಡ ಜಿಲ್ಲೆಯ ಗೈಜೆಟಿಯರ್, ಪುಟ ೧೧೭

೫೮. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೧೬

೫೯. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸುಮನೆತನಗಳು, ಪುಟ ೨೬

೬೦. ಅದೇ, ಪುಟ ೨೬

೬೧. ಅದೇ, ಪುಟ ೨೭

೬೨. ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಪುಟ ೬೨

೬೩. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೪೨

೬೪. ನರಸಿಂಹಮೂರ್ತಿ ಎ.ವಿ., ಸೇವುಣರು, ಪುಟ ೬೦

೬೫. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸುಮನೆತನಗಳು, ಪುಟ ೩೨

೬೬. ಅದೇ ಪುಟ ೩೩

೬೭. ಅದೇ ಪುಟ ೩೬

೬೮. ಕಾಮತ್ ಸೂರ್ಯನಾಥ ಯು., ಉತ್ತರಕನ್ನಡ ಜಿಲ್ಲೆಯ ಗೈಜೆಟಿಯರ್, ಪುಟ ೧೨೪

೬೯. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸುಮನೆತನಗಳು, ಪುಟ ೩೭

೭೦. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸುಮನೆತನಗಳು,ಪುಟ ೩೪

೭೧. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸುಮನೆತನಗಳು, ಪುಟ ೩೮ ಮತ್ತು ೩೯

೭೨. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೨೦-೨೧

೭೩. ಕದಂಬ ಅಧ್ಯಯನ, ಕದಂಬೋತ್ಸವ ಸ್ಮರಣ ಸಂಚಿಕೆ, ೧೯೯೬, ಪುಟ ೪

೭೪. ಅದೇ, ಪುಟ ೭೨

೭೫. ಅದೇ, ಪುಟ ೭೨

೭೬. ಅದೇ, ಪುಟ ೭೩

೭೭. ಅದೇ, ಪುಟ ೨೫

೭೮. ಅದೇ, ಪುಟ ೨೫

೭೯. ಕರ್ನಾಟಕ ಪರಂಪರೆ, ಭಾಗ೨, ಪುಟ ೪೬

೮೦. ಮೊರೇಸ್ ಜಿ.ಎಂ., ಕದಂಬಕುಲ, ಪುಟ ೬

೮೧. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೧೬

೮೨. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೨೯

೮೩. ಅದೇ, ಪುಟ ೨೭

೮೪. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೧೮

೮೫. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೨೫

೮೬. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸುಮನೆತನಗಳು, ಪುಟ ೬೮

೮೭. ಭಟ್ ಸೂರಿ ಜಿ.ಕೆ., ಗೇರಸೊಪ್ಪೆ (ನಗರಬಸ್ತಿಕೇರಿ)ಯ ಜೈನ ಬಸ್ತಿ ಮತ್ತು ಮೂರ್ತಿ ಶಿಲ್ಪ, ಪುಟ ೧೭

೮೮. ಕಮಲಾ ಹಂಪಾನಾ, ಮಹಾಮಂಡಳೇಶ್ವರಿ ಚನ್ನಭೈರಾದೇವಿ, ಪುಟ ೬

೮೯. ಕಾಮತ್ ಸೂರ್ಯನಾಥ್, (ಸಂ) ಉತ್ತರ ಕನ್ನಡ ಜಿಲ್ಲೆಯ ಗೈಜೆಟಿಯರ್.

ಪುಟ ೧೩೦-೧೩೧

೯೦. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ಪುಟ ೩೨

೯೧. ಕಾಮತ್ ಸೂರ್ಯನಾಥ, ಉತ್ತರ ಕನ್ನಡ ಜಿಲ್ಲೆಯ ಗ್ಯೆಜೆಟಿಯರ್, ಪುಟ ೧೩೩

೯೨. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು,ಪುಟ ೧೫

೯೩. ಅದೇ, ಪುಟ ೧೯

೯೪. ಅದೇ, ಪುಟ ೨೩

೯೫. ಅದೇ, ಪುಟ ೨೭

೯೬. ಅದೇ, ಪುಟ ೨೨-೨೩

೯೭. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ಪುಟ ೮೦

೯೮. ಅದೇ, ಪುಟ ೮೧

೯೯. ಅದೇ, ಪುಟ ೮೧

೧೦೦. ಅದೇ, ಪುಟ ೮೧

೧೦೧. ಅದೇ, ಪುಟ ೮೨

೧೦೨. ಭಟ್ ವಿಷ್ಣು ಪಾದೇಕಲ್ಲು, ಕಾರ್ಕಳದ ಬೈರ ಅರಸರು ಸಂಕ್ಷಿಪ್ತ ಅವಲೋಕನ, ಕರಾವಳಿ ಕರ್ನಾಟಕದ ಜೈನ ಅರಸು ಮನೆತನಗಳ ಸಾಂಸ್ಕೃತಿಕ ಅಧ್ಯಯನ, (ಸಂ) ಸೋಸಲೆ ಚಿನ್ನಸ್ವಾಮಿ ಎನ್., ಪುಟ ೩೩೯

೧೦೩. ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಪುಟ ೩೮

೧೦೪. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸು ಮನೆತನಗಳು, ಪುಟ ೬೭-೬೮

೧೦೫. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ ಪುಟ ೭೪

೧೦೬. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸು ಮನೆತನಗಳು, ಪುಟ ೭೨

೧೦೭. ಅದೇ, ಪುಟ ೪೧

೧೦೮. ಅದೇ, ಪುಟ ೬೦

೧೦೯. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ಪುಟ ೮೪

೧೧೦. ರಮೇಶ ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸು ಮನೆತನಗಳು, ಪುಟ ೮೬

೧೧೧. ಐಗಳ್ ಗಣಪತಿರಾವ್, ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ, ಪುಟ ೧೭೫-೧೮೮

೧೧೨. ಭಟ್ ಗುರುರಾಜ್ ಪಿ., ತುಳುನಾಡು, ಪುಟ ೬೨-೬೩

೧೧೩. ಕರ್ನಾಟಕ ಪರಂಪರೆ, ಭಾಗ ೨, ಪುಟ ೪೮೦

೧೧೪. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ಪುಟ ೮೪

೧೧೫. ಅದೇ, ಪುಟ ೮೬

೧೧೬. ಐಗಳ್ ಗಣಪತಿರಾವ್, ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ, ಪುಟ ೧೭೮

೧೧೭. ಅದೇ, ಪುಟ ೧೭೮

೧೧೮. ನಾಗೇಗೌಡ ಎಚ್.ಎಲ್., ಪ್ರವಾಸಿಕಂಡ ಇಂಡಿಯಾ, ಸಂ.೧, ಪುಟ ೬೭

೧೧೯. ಐಗಳ್ ಗಣಪತಿರಾವ್, ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ, ಪುಟ ೧೭೯

೧೨೦. ಶೆಣೈ ಉಮನಾಥ ವೈ., ಬಂಗವಾಡಿಯ ಬಂಗರು, ತುಳು ಕರ್ನಾಟಕದ ಅರಸು ಮನೆತನಗಳು, ಪುಟ ೮೧

೧೨೧. ಅದೇ, ಪುಟ ೮೨

೧೨೨. ಅದೇ, ಪುಟ ೮೨

೧೨೩. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ಪುಟ ೮೮

೧೨೪. ಐಗಳ್ ಗಣಪತಿರಾವ್, ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ, ಪುಟ ೨೨೮

೧೨೫. ಶೆಟ್ಟಿ ಜಗದೀಶ ಬಿ., ತುಳು ಕರ್ನಾಟಕದ ಅರಸು ಮನೆತನಗಳು, ಸುರಾಲಿನ ತೋಳಹರು, ಪುಟ ೧೦

೧೨೬. ಕುಂದದರ್ಶನ, ಬಂಡಾರ್‌ಕಾರ್ಸ್ ಕಾಲೇಜ್, ಕುಂದಾಪುರ ಸ್ಮರಣ ಸಂಚಿಕೆ ೧೯೮೩, ಪುಟ ೩೭

೧೨೭. ಶೆಟ್ಟಿ ಜಗದೀಶ ಬಿ., ತುಳು ಕರ್ನಾಟಕದ ಅರಸು ಮನೆತನಗಳು, ಸುರಾಲಿನ ತೋಳಹರು, ಪುಟ ೧೨

೧೨೮. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ಪುಟ ೮೮

೧೨೯. ಅದೇ, ಪುಟ ೮೮

೧೩೦. ಅದೇ, ಪುಟ ೯೦

೧೩೧. ರಮೇಶ.ಕೆ.ವಿ., ಶರ್ಮ ಎಂ.ಜೆ., ತುಳುನಾಡಿನ ಅರಸು ಮನೆತನಗಳು, ಪುಟ ೬೪

೧೩೨. ಐಗಳ್ ಗಣಪತಿರಾವ್, ದಕ್ಷಿಣ ಕನ್ನಡದ ಪ್ರಾಚೀನ ಇತಿಹಾಸ, ಪುಟ ೧೧

೧೩೩. ಪೂಜಾರಿ ತುಕಾರಾಮ, ವೇಣೂರಿನ ಅಜಿಲರು, ತುಳು ಕರ್ನಾಟಕದ ಅರಸು ಮನೆತನಗಳು, ಪುಟ ೨೨೭

೧೩೪. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ಪುಟ ೭೮

೧೩೫. ಅದೇ, ಪುಟ ೮೦

೧೩೬. ಅದೇ, ಪುಟ ೮೦

೧೩೭. ನಾಗೇಗೌಡ ಎಚ್.ಎಲ್., ಪ್ರವಾಸಿಕಂಡ ಇಂಡಿಯಾ, ಭಾಗ ೨, ಪುಟ ೬೩

೧೩೮. ರಾಮಕೃಷ್ಣ ಆರ್., ಶ್ರೀನಿವಾಸಮೂರ್ತಿ ಎಚ್.ವಿ., ಸಮಗ್ರ ಕರ್ನಾಟಕದ ಚರಿತ್ರೆ, ಪುಟ ೨೫

೧೩೯. ಶೆಟ್ಟರ್ ಎಸ್., ಶಂಗಂ ತಮಿಳುಗಂ ಹಾಗೂ ಕನ್ನಡ ನಾಡು ನುಡಿ, ಪುಟ ೬೯

೧೪೦. ಅದೇ, ಪುಟ ೭೦

೧೪೧. ನಂಜುಂಡ ಸ್ವಾಮಿ ಎ.ಎಸ್., ಕದಂಬ ಗಂಗರ ಇತಿಹಾಸ, ಪುಟ ೧೭

೧೪೨. ಅದೇ, ಪುಟ ೧೮

೧೪೩. ಅದೇ, ಪುಟ ೧೯

೧೪೪. ಅದೇ, ಪುಟ ೨೦

೧೪೫. ಗೋಪಾಲ ಬಾ.ರಾ., ಬನವಾಸಿ, ಪುಟ ೩೬

೧೪೬. ಅದೇ, ಪುಟ ೩೭

೧೪೭. ಅದೇ, ಪುಟ ೩೯

೧೪೮. ಅದೇ, ಪುಟ ೪೦

೧೪೯. ಅದೇ, ಪುಟ ೯೫

೧೫೦. ಅದೇ, ಪುಟ ೧೦೩

೧೫೧. ಗೋಪಾಲ ಬಾ.ರಾ., ಬನವಾಸಿ, ಪುಟ ೪೦

೧೫೨. ಅದೇ, ಪುಟ ೪೧

೧೫೩. ಅದೇ, ಪುಟ ೪೧

೧೫೪. ಅದೇ, ಪುಟ ೪೨

೧೫೫. ಅದೇ, ಪುಟ ೪೨

೧೫೬. ಅದೇ, ಪುಟ ೪೩

೧೫೭. ಅದೇ, ಪುಟ ೪೭

೧೫೮. ಅದೇ, ಪುಟ ೧೨೦

೧೫೯. ಗಣಪತಿಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೨೭

೧೬೦. ರಮೇಶ ಕೆ.ವಿ., ತುಳುನಾಡಿನ ಅರಸು ಮನೆತನಗಳು, ಪುಟ ೪೨

ಅಧ್ಯಾಯ: ನಾಲ್ಕು

ಬಂದರುಗಳ ಆಡಳಿತ

ಅಧ್ಯಾಯ : ನಾಲ್ಕು

ಬಂದರುಗಳ ಆಡಳಿತ

ಪೀಠಿಕೆ

ಕರಾವಳಿಯ ಬಂದರುಗಳು ದೊಡ್ಡ ವ್ಯಾಪಾರಿ ಕೇಂದ್ರಗಳಾಗಿದ್ದವು. ಕಾರವಾರದಿಂದ ಮಂಗಳೂರಿನವರೆಗಿರುವ ಒಂಬತ್ತು ಪ್ರಮುಖ ಬಂದರುಗಳು ಅರಸರ ಆಡಳಿತ ಕೇಂದ್ರವೂ, ರಾಜ್ಯಧಾನಿ ಪಟ್ಟಣವೂ ಆಗಿದ್ದವು. ಹಲವು ಸಂದರ್ಭಗಳಲ್ಲಿ ಈ ಬಂದರು ಪಟ್ಟಣಗಳು ಧಾರ್ಮಿಕ ಹಾಗೂ ಆಡಳಿತ ಕೇಂದ್ರವಾಗಿದ್ದದ್ದೂ ಇದೆ. ರಾಜ್ಯಧಾನಿ ಕೇಂದ್ರ ಹಾಗೂ ಧಾರ್ಮಿಕ ಕೇಂದ್ರವಾಗಿರದೆ ಕೇವಲ ವ್ಯಾಪಾರಿ ಪಟ್ಟಣ ಮಾತ್ರವಾಗಿದ್ದ ಬಂದರುಗಳೂ ಇದ್ದವು.

ಈ ಬಂದರು ಪಟ್ಟಣಗಳು ಕಡಲು ತೀರದಲ್ಲಿ ಅಥವಾ ನದಿಗಳು ಬಂದರು ಸೇರುವ ಅಳಿವೆಯ ಬಳಿಯಲ್ಲಿ ನಿರ್ಮಾಣಗೊಂಡಿದ್ದವು. ವಿಶಾಲವಾದ ಸಮತಟ್ಟಾದ ಭೂ ಪ್ರದೇಶ ಹಾಗೂ ಸುತ್ತಲಿನ ಊರುಗಳಿಗೆ ಸಂಪರ್ಕ ಕಲ್ಪಿಸುವ ಮಾರ್ಗಗಳಿದ್ದಲ್ಲಿ ಪಟ್ಟಣಗಳ ನಿರ್ಮಾಣವಾಗಿತ್ತು. ಹಿನ್ನಾಡಿಗೆ ತಲುಪಲು ವಿವಿಧ ಮಾರ್ಗಗಳು ಹಿನ್ನಾಡಿನಿಂದ ಬಂದರು ಪ್ರದೇಶಕ್ಕೆ ಬರಲು ಸುರಕ್ಷಿತ ಮಾರ್ಗಗಳ ಸಂಪರ್ಕ ಇರುವಲ್ಲಿ ಪಟ್ಟಣಗಳ ರಚನೆ ಆಗಿತ್ತು. ಅಲ್ಲದೇ ಈ ಸ್ಥಳಗಳಿಂದ ಸುತ್ತಲಿನ ಊರುಗಳಿಗೆ ಸಂಪರ್ಕ ಮಾರ್ಗಗಳಿದ್ದವು.

ಬಂದರು ಪಟ್ಟಣಗಳ ರಚನೆಯಲ್ಲಿ ಬಹು ಮುಖ್ಯವಾಗಿ ಬೇಕಾಗಿದ್ದ ಒಂದು ಅಂಶವೆಂದರೆ, ಕಡಲ ಮಾರ್ಗವಾಗಿ ಬರುವ ಹಡಗುಗಳನ್ನು ಸುರಕ್ಷಿತವಾಗಿ ಲಂಗರು ಮಾಡುವುದು, ಅಲ್ಲದೇ ಆ ಹಡಗುಗಳು ತೆರೆಯ ಹಾಗೂ ಗಾಳಿಯ ಯಾವ ತೊಂದರೆಗೂ ಒಳಗಾಗದೆ ಸುರಕ್ಷಿತವಾಗಿನಿಂತು, ಸಾಮಗ್ರಿಗಳನ್ನು ಇಳಿಸುವುದು ಅಗತ್ಯವಾಗಿತ್ತು. ಹಾಗೆ ಇಳಿಸಿದ ಸರಕುಗಳನ್ನು ಒಂದೆಡೆ ಸಂಗ್ರಹಿಸಲು ವಿಶಾಲವಾದ ಸ್ಥಳ ಇರಬೇಕಿತ್ತು. ಅಂತೆಯೇ ಹೊರನಾಡಿಗೆ ಹೋಗುವ ಸರಕುಗಳನ್ನು ಬಂದರು ಪ್ರದೇಶದಲ್ಲಿ ಸಂಗ್ರಹಿಸಿಟ್ಟು ನಂತರ ಹಡಗುಗಳಿಗೆ ತುಂಬುತ್ತಿದ್ದರು. ಬಂದ ಸರಕುಗಳನ್ನು ಹಾಗೂ ಹೊರನಾಡಿಗೆ ಸಾಗಿಸಬೇಕಿದ್ದ ಸರಕುಗಳನ್ನು ಸಂಗ್ರಹಿಸಲು ಸುರಕ್ಷಿತ ಸ್ಥಳದ ಅಗತ್ಯವಿತ್ತು. ಇಂಥಹ ಅನುಕೂಲತೆಯಿದ್ದ ಪ್ರದೇಶ ಬಂದರು ರೇವುಪಟ್ಟಣವಾಗಿರುತ್ತಿತ್ತು. ನದಿ ಮುಖಜದಿಂದ ಬಂದರು ಸೇರುವ ನೌಕೆಗಳು ಸುರಕ್ಷಿತವಾಗಿ ಒಳಬಂದು ಲಂಗುರು ಹಾಕಿ ನಂತರ ಸಾಮಗ್ರಿ ಇಳಿಸುತ್ತಿದ್ದರಿಂದ ನದಿಯಲ್ಲಿ ಹೂಳು ತುಂಬಿರುವುದಾಗಲೀ, ನೀರು ಕಡಿಮೆ ಆಗುವುದಾಗಲೀ ಉಂಟಾದರೆ ನೌಕೆಗಳಿಗೆ, ಸರಕುಗಳಿಗೆ ತೊಂದರೆ ಉಂಟಾಗುತ್ತಿತ್ತು. ಅಲ್ಲದೆ ಕಡಲ ಮಾರ್ಗವಾಗಿ ಬಂದ ನೌಕೆಗಳು ಕಡಲ ತೀರದಲ್ಲಿ ಲಂಗರು ಮಾಡುವುದಿದ್ದರೆ ಅಲ್ಲಿಯೂ ಕೂಡಾ ಹಲವು ಟನ್

ಭಾರದ ಸರಕು ಹೊತ್ತ ನೌಕೆಗಳು ತೆರೆಗಳ ಹಾಗೂ ಕಡಲೆಡೆಯಿಂದ ಬೀಸುವ ಗಾಳಿಯಿಂದ ರಕ್ಷಣೆ ಪಡೆಯುವಂತಿರಬೇಕಿತ್ತು. ಇಂಥಹ ಸ್ಥಳಗಳು ಮಾತ್ರ ಬಂದರುಗಳಾಗುತ್ತಿದ್ದವು.

ಇಂಥಹ ಸುರಕ್ಷಿತ ಸ್ಥಳಗಳು ಕರ್ನಾಟಕ ಕರಾವಳಿಯ ತೀರದ ಗುಂಟ ತುಂಬಾ ಇದ್ದವು. ಕೆಲವು ತಾತ್ಕಾಲಿಕವಾಗಿ ಸರಕನ್ನು ಇಳಿಸಲು ತುಂಬಲು ಬಳಕೆಯಾದರೆ, ಇನ್ನೂ ಕೆಲವು ಸ್ಥಳಗಳು ಶಾಶ್ವತವಾದ ಬಂದರು ಪಟ್ಟಣಗಳಾಗಿದ್ದವು. ಇಂಥಹ ಸ್ಥಳಗಳಲ್ಲಿ ವ್ಯಾಪಾರ ವಹಿವಾಟು ಭರದಿಂದ ಸಾಗಿದ್ದಾಗ ಸಹಸ್ರಾರು ಜನರು ತುಂಬಿರುತ್ತಿದ್ದರು. ವಿದೇಶಿ ನೌಕೆಗಳು, ದೇಶೀಯ ನೌಕೆಗಳು ಅದರಲ್ಲಿರುವ ವರ್ತಕರು, ಕಾರ್ಮಿಕರು ಮತ್ತು ಅವರ ಅಡಿಗೆಯವರು, ಸೈನಿಕರು ಮುಂತಾಗಿ ದೊಡ್ಡ ಜಾತ್ರೆಯಂತಾಗುತ್ತಿತ್ತು. ಇಂಥಹ ಜನಸಂದಣಿಯ ನಗರದ ಆಡಳಿತ ಒಂದು ದೊಡ್ಡ ಜವಾಬ್ದಾರಿಯ ವಿಷಯವಾಗಿತ್ತು. ಇಂಥಹ ಬಂದರು ಪಟ್ಟಣಗಳ ಆಡಳಿತವನ್ನು ನಡೆಸಲು ರಾಜಪ್ರಭುತ್ವವು ತನ್ನದೇ ಆದ ರೀತಿ ನೀತಿ ಹೊಂದಿತ್ತು. ಕೇಂದ್ರದ ರಾಜಾಶಾಹಿ ಒಂದೆಡೆಯಾದರೆ, ಇಂತಹ ಬಂದರು ಪಟ್ಟಣದ ಆಡಳಿತ ನಿಭಾಯಿಸಲು ಅಧಿಕಾರಿಗಳು, ಮಂತ್ರಿಗಳು ಹಾಗೂ ಪ್ರಮುಖ ವರ್ತಕಸಂಘಗಳು ರಾಜನ ನಿರ್ದೇಶನದಲ್ಲಿ ತೊಡಗಿರುತ್ತಿದ್ದವು. ಕರಾವಳಿಯ ನಗರಗಳನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡ ರಾಜರು, ಅದರ ಆಡಳಿತವನ್ನು ವ್ಯವಸ್ಥಿತಗೊಳಿಸಲು ಅವುಗಳನ್ನು ವಿವಿಧ ಭಾಗಗಳಲ್ಲಿ ವಿಭಾಗಿಸಿಕೊಂಡಿದ್ದರು. ಕ್ರಿಸ್ತಶಕೆಯ ಆರಂಭ ಕಾಲದಿಂದಲೂ ಈ ಬಂದರು ಪಟ್ಟಣಗಳಲ್ಲಿ ಅವರದೇ ಆದ ಆಡಳಿತ ವ್ಯವಸ್ಥೆ ಇದ್ದಿರುವ ಸಾಧ್ಯತೆಗಳಿವೆ. ಮುಂದುವರಿದಂತೆ ಸ್ಥಳೀಯವಾಗಿ ಪ್ರಭುತ್ವಗಳು ರೂಪುಗೊಳ್ಳುತ್ತಿದ್ದಂತೆ ಬಂದರು ಪಟ್ಟಣಗಳ ಆಡಳಿತಕ್ಕೆ ಒಂದು ಸ್ಪಷ್ಟ ರೂಪ ಸಿಗತೊಡಗಿತು. ಬಂದರುನಗರಗಳು, ಪಟ್ಟಣಗಳು ಹೊಸ ಸುರಕ್ಷಿತ ಸ್ಥಳದಲ್ಲಿ ರೂಪಗೊಳ್ಳ ತೊಡಗಿದವು. ವ್ಯಾಪಾರದ ಒತ್ತಡವನ್ನು ಕಡಿಮೆ ಮಾಡಲು ಹಾಗೂ ಬಹುವಿಧದ ವ್ಯಾಪಾರಕ್ಕೆ ಅನುಕೂಲ ಮಾಡಿಕೊಳ್ಳಲೋಸುಗ ಪ್ರಭುತ್ವವೇ ಸುರಕ್ಷಿತ ಸ್ಥಳಗಳಲ್ಲಿ ಬಂದರುಗಳನ್ನು ನಿರ್ಮಿಸಿತು. ಏಕಕಾಲದಲ್ಲಿ ಹಲವು ನೌಕೆಗಳು ಒಳಬರುವಂತಹ ಹಾಗೂ ಏಕಕಾಲದಲ್ಲಿ ಬೇರೆ ಮಾರ್ಗದಲ್ಲಿ ಹೊರಹೋಗುವಂಥಹ ವ್ಯವಸ್ಥೆ ರೂಪಿಸಿದ್ದರು. ಪ್ರಭುತ್ವವು ಬಲಗೋಳ್ಳುತ್ತಿದ್ದಂತೆ ಸಾಮಾಜಿಕ, ಧಾರ್ಮಿಕ ಹಾಗೂ ಸೈನಿಕ ಅನುಕೂಲತೆಗಳೊಂದಿಗೆ ಈ ಪಟ್ಟಣಗಳ ನಿರ್ಮಾಣ ನಡೆಯಿತು. ಭೌಗೋಳಿಕ ಸೌಲಭ್ಯಗಳು ಪೂರಕವಾಗಿದ್ದ ಸ್ಥಳಗಳನ್ನೇ ಬಂದರುಪಟ್ಟಣಗಳಿಗಾಗಿ ಆಯ್ಕೆ ಮಾಡಿಕೊಂಡಿದ್ದರು.

೪.೧ ಬಂದರು ಪಟ್ಟಣಗಳ ನಿರ್ಮಾಣ ಹಾಗೂ ಅಲ್ಲಿಯ ಉದ್ದಿಮೆಗಳು

ಭಾರತದ ಪ್ರಾಚೀನ ಜನವಸತಿಯ ಕೇಂದ್ರಗಳಲ್ಲಿ ಕರ್ನಾಟಕವೂ ಒಂದು[೧]. ಹಲವಾರು ಕಾರಣಗಳಿಂದ ಇಲ್ಲಿಗೆ ಜನರು ವಲಸೆ ಬಂದರು. ನವಶಿಲಾಯುಗದ ಕೊನೆಯ ಘಟ್ಟವಾದ,

ಕಬ್ಬಿಣಯುಗದ ಜನವಸತಿಯ ತಾಣಗಳು ಕರ್ನಾಟಕದ ಹಲವೆಡೆ ಕಂಡುಬರುತ್ತವೆ. ಆ ಕಾಲದ ಬೃಹತ್ ಶಿಲಾ ಗೋರಿಗಳು ಕರ್ನಾಟಕದ ತುಂಬಾ ಸಿಕ್ಕುತ್ತವೆ. ಕರಾವಳಿ ಪ್ರದೇಶದಲ್ಲೂ ಇವು ಕಂಡುಬರುತ್ತವೆ[೨]. ಒಂದೆಡೆ ನೆಲೆ ನಿಂತು ಬದುಕು ನಡೆಸಿದ ಈ ಜನರು, ಚರಿತ್ರೆಯ ಮುಸುಕು ಮುಂಜಾವಿನಲ್ಲಿ ಕರಾವಳಿಯ ಬಂದರುಗಳ ಆಶ್ರಯದಿಂದ ಕಡಲೋತ್ತರ ವ್ಯಾಪಾರ-ವಹಿವಾಟು ನಡೆಸಲಾರಂಭಿಸಿದರು. ಒಂದೆಡೆ ನೆಲೆನಿಂತು ಸ್ವತಂತ್ರಬದುಕು ರೂಪಿಸಿಕೊಂಡು ಬಂದವರಿಗೆ ಮಗಧ ಸಾಮ್ರಾಜ್ಯಕಾಲದಲ್ಲಿ ಶಾಸನಾಡಳಿತದ ಸಂಕೋಲೆ ಬಿಗಿಯಿತು. ಅಶೋಕನ ಶಾಸನಗಳು ದಕ್ಷಿಣದ ಗಡಿಗಳನ್ನೂ ಹೆಸರಿಸುವಾಗ ಬರುವ ಸತೀಯಪುತ್ರ ಎಂಬ ಆಡಳಿತ ವಿಭಾಗವನ್ನು ಹೆಸರಿಸುತ್ತದೆ[೩]. ಅದರ ಉತ್ತರಕ್ಕಿರುವ ತುಳುನಾಡು, ಮಂಗಳೂರಿಂದೀಚೆಯ ಬಂದರು ಪಟ್ಟಣಗಳು ಅಶೋಕ ಮೌರ್ಯನ ಆಡಳಿತಕ್ಕೆ ಒಳಪಟ್ಟಿತ್ತು ಎಂದು ತಿಳಿಯಬಹುದು.

ಶಾತವಾಹನರು ಹಾಗೂ ಅವರ ವಂಶದ ಕಿರಿಯ ಶಾಖೆಗಳಾದ ಆನಂದ ಮತ್ತು ಚುಟುಗಳು ಕರಾವಳಿಯ ಭಾಗದಲ್ಲಿ ತಮ್ಮ ಪ್ರಭುತ್ವ[೪] ಸ್ಥಾಪಿಸಿದ್ದರು. ಸ್ವತಃ ವ್ಯಾಪಾರಿಗಳೆಂದು ಗುರುತಿಸಲ್ಪಟ್ಟ ಶಾತವಾಹನರು ತೀರಪ್ರದೇಶದ ಬಂದರುಗಳ ಮಹತ್ವ ಅರಿತಿದ್ದರು. ಪೂರ್ವತೀರದ ಬಂದರುಗಳಂತೆ ಪಶ್ಚಿಮ ತೀರದ ಬಂದರುಗಳಲ್ಲೂ ಅದರಲ್ಲೂ ಗುಜರಾತ್, ಮಹಾರಾಷ್ಟ್ರ ಮತ್ತು ಕರ್ನಾಟಕದ ಬಂದರುಗಳಲ್ಲಿ ತಮ್ಮ ರಾಜ್ಯ ವಿಸ್ತರಿಸಿದ್ದರು. ಶಾತವಾಹನರ ತರುವಾಯ ಕರ್ನಾಟಕದ ಪ್ರಥಮ ಸ್ಥಳೀಯ ರಾಜ ಮನೆತನ ಎಂದು ಕರೆದುಕೊಂಡ ಕದಂಬರು ಬನವಾಸಿಯನ್ನು ಕೇಂದ್ರವಾಗಿ ಆಳಲುಪಕ್ರಮಿಸಿದರು. ಕದಂಬರು ತಮ್ಮ ಉಚ್ಛ್ರಾಯಕಾಲದಲ್ಲಿ ಉತ್ತರ ಕನ್ನಡದ ಸಂಪೂರ್ಣ ತೀರಪ್ರದೇಶಕ್ಕೆ ಅಧಿಪತ್ಯಹೊಂದಿದ್ದರು. ಇದೇ ಸಂದರ್ಭದಲ್ಲಿ ದಕ್ಷಿಣ ಕನ್ನಡದ ಪ್ರದೇಶವನ್ನು ಆಳುಪರು ಆಳುತ್ತಿದ್ದರು. ಮಂಗಳೂರು ಇವರ ಕೇಂದ್ರವಾಗಿತ್ತು. ಕದಂಬ ಕಾಕುಸ್ಥವರ್ಮನ ಕಿರಿಯ (ಮೂರನೇ) ಮಗಳನ್ನು ಆಳುಪ ಪಶುಪತಿಯು ಮದುವೆಯಾಗಿದ್ದನು. ಈ ಆಳುಪ ವಂಶವು ಸುಮಾರು ೧೪೦೦ ವರ್ಷಗಳ ಕಾಲ ಮಂಗಳೂರು, ಬಾರ್ಕೂರುಗಳನ್ನು ಕೇಂದ್ರವಾಗಿ ಆಳಿತ್ತು.

ಉತ್ತರ ಕನ್ನಡದಲ್ಲಿ ಬನವಾಸಿ ಕದಂಬರು ಆಂತರಿಕ ಹಾಗೂ ಬಾಹ್ಯ ಸಂಘರ್ಷಗಳಿಂದ ದುರ್ಬಲರಾಗುತ್ತಾ ಸಾಗಿದಂತೆ, ಬಾದಾಮಿ ಚಾಲುಕ್ಯರ ಸಾಮಂತರಾಗಬೇಕಾಯಿತು. ಚಾಲುಕ್ಯರು ಬಹುವಿಸ್ತಾರವೂ ಪ್ರಬಲವೂ ಆದ ಸಾಮ್ರಾಜ್ಯದ ಅಧಿಪತಿಗಳಾಗಿದ್ದರು. ಆ ಸಂದರ್ಭದಲ್ಲಿ ಉತ್ತರ ಕನ್ನಡದ ತೀರ ಪ್ರದೇಶ ಹಾಗೂ ಕೆಲವು ದಕ್ಷಿಣ ಕನ್ನಡದ ಬಂದರುಗಳು ಇವರ ಅಧೀನವಾದವು. ಚಾಲುಕ್ಯರೊಂದಿಗೆ ಸೌಹಾರ್ಧತೆ ಹೊಂದಿದ್ದ ಆಳುಪರು ವೈವಾಹಿಕ ಸಂಬಂಧ ಏರ್ಪಡಿಸಿ ಕೊಂಡಿದ್ದರು[೫]. ರಾಷ್ಟ್ರಕೂಟರು, ಸೇವುಣರು ಹಾಗೂ ಯಾದವರು ಕರಾವಳಿಯ ಬಂದರುಗಳನ್ನು

ಕೆಲಸಮಯಕ್ಕಾದರೂ ಆಳಿದ್ದಿದೆ. ಚೋಳರು ಮಂಗಳೂರು ಹಾಗೂ ಬಾರ್ಕೂರುಗಳನ್ನು ಗೆಲ್ಲುವ ಪ್ರಯತ್ನ ಕೂಡಾ ನಡೆಸಿದ್ದರು. ಹೊಯ್ಸಳರು ದಕ್ಷಿಣದ ಬಂದರುಗಳನ್ನು ವಶಪಡಿಸಿಕೊಳ್ಳುವ ಪ್ರಯತ್ನ ನಿರಂತರವಾಗಿರಿಸಿಕೊಂಡಿದ್ದರು. ಮೂರನೇ ಬಲ್ಲಾಳನು ಚಿಕ್ಕಾಯಿತಾಯಿ ಎನ್ನುವ ಆಳುಪ ರಾಜಕುವರಿಯನ್ನು ವಿವಾಹವಾಗುವ ಮೂಲಕ ಕರಾವಳಿಯಲ್ಲಿ ಆಡಳಿತ ನಡೆಸಬೇಕೆಂಬ ತಮ್ಮ ಆಸೆ ಇಡೇರಿಸಿ ಕೊಂಡಿದ್ದರು. ಚಿಕ್ಕಾಯಿತಾಯಿ ಬಾರ್ಕೂರಿನಿಂದ ಆಳುತ್ತಾ ಹೊನ್ನಾವರದವರೆಗೂ ತನ್ನ ಸಾಮ್ರಾಜ್ಯ ವಿಸ್ತರಿಸಿದ್ದಳು.

ವಿಜಯನಗರ ಸಾಮ್ರಾಜ್ಯ ಸ್ಥಾಪನೆಯೊಂದಿಗೆ ಮಂಗಳೂರು, ಬಾರ್ಕೂರು, ಹೊನ್ನಾವರಗಳು ರಾಜ್ಯಪಾಲರ, ಆಡಳಿತಾಧಿಕಾರಿಗಳ ಶಾಸನದಲ್ಲಿ ಆಳಲ್ಪಟ್ಟವು. ಇದರೊಂದಿಗೆ ಸ್ಥಳೀಯವಾಗಿದ್ದ ಅನೇಕ ರಾಜಮನೆತನಗಳು ಹಲವು ಬಂದರು ಪಟ್ಟಣಗಳನ್ನೇ ಕೇಂದ್ರ ಮಾಡಿಕೊಂಡು ತೀರಪ್ರದೇಶದಲ್ಲಿ ಆಡಳಿತ ನಡೆಸಿದ್ದಿದೆ. ಇವರಲ್ಲಿ ಹೆಚ್ಚಿನವರು ಅಂದಿನ ಕರ್ನಾಟಕದ ಅಧಿರಾಜರಾಗಿದ್ದರು. ಅಥವಾ ಕರಾವಳಿಯನ್ನು ಸ್ವತಂತ್ರರಾಜರೋ, ಸಾಮಂತರೋ ಅಥವಾ ಮಹಾ ಮಂಡಳೇಶ್ವರ, ಮಂಡಳೇಶ್ವರರಾಗಿಯೋ ಆಡಳಿತವನ್ನು ನಡೆಸಿದ್ದು ಇದೆ.

೪.೨ ಕರಾವಳಿಯ ಆಡಳಿತ ವಿಭಾಗಗಳು ಹಾಗೂ ಅಧಿಕಾರಿಗಳು

ಉತ್ತರ ಕನ್ನಡದ ಕರಾವಳಿಯಲ್ಲಿ ಕೇಕೇಯ ಪಲ್ಲವರೆಂಬ ಮನೆತನ ಒಂದು ಆಳಿದ್ದು, ಇವರು ತೀರಪ್ರದೇಶದಲ್ಲಿಯೇ ತಮ್ಮ ಪ್ರಭುತ್ವದ ಕೇಂದ್ರ ಹೊಂದಿದ್ದರು. ಹೊನ್ನಾವರ ಹೈಗುಂದ ಇವರ ಕೇಂದ್ರವಾಗಿದ್ದವು. ಪ್ರಮುಖ ಬಂದರಾಗಿದ್ದ ಹೈಗುಂದ ಹಾಗೂ ಹೊನ್ನಾವರವನ್ನು ಕೇಂದ್ರವಾಗಿಸಿಕೊಂಡು ಆಳಿದ ಇನ್ನೊಂದು ವಂಶ ಶಿಶುಗಲಿ ಪಾಂಡ್ಯರಮನೆತನ[೬]. ಇವರ ರಾಜ್ಯ ಹೈವೆ-೫೦೦ ಎಂದು ಕರೆಯಲಾಗುತ್ತಿತ್ತು. ಇವರು ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದರು[೭]. ಚಂದಾವರ ಕೇಂದ್ರವಾಗಿ ಮಾಡಿಕೊಂಡು ಆಳಿದ್ದ ಕದಂಬರ ಒಂದು ಮನೆತನವು ಸುಮಾರು ೨೦೦ ವರ್ಷಗಳಕಾಲ ಗೋಕರ್ಣದಿಂದ ಶಿರೂರಿನವರೆಗೆ ರಾಜ್ಯಭಾರ ನಡೆಸಿತ್ತು. ಇವರ ಕೆಲವು ಅರಸರು ಸೇವುಣರ ಅಧೀನರಾಗಿದ್ದರೆಂದು[೮] ತಿಳಿಯುತ್ತದೆ.

ಗೋವಾ ಕಾದಂಬರು ಕೆಲಕಾಲ ಈ ಪ್ರದೇಶ ಆಳಿದ್ದು, ಗೋವಾದಿಂದ ಶಿರೂರಿನವರೆಗೂ ಇವರು ರಾಜ್ಯನಡೆಸಿದ್ದರು. ಹೊನ್ನಾವರ ಬಂದರಿಗೆ ಹೊಂದಿಕೊಂಡಂತೆ ಕೋಟೆಯೊಂದನ್ನು ಇವರು ನಿರ್ಮಿಸಿ ಕೊಂಡಿದ್ದರು. ಹಾನಗಲ್ ಕಾದಂಬರು, ನಗಿರೆ-ಹಾಡುವಳ್ಳಿಯ ಸಾಳ್ವರು, ಮುಲ್ಕಿಯ ಸಾವಂತರು, ಕಳಸ-ಕಾರ್ಕಳದ ಬೈರರಸರು, ಬಂಗವಾಡಿಯ ಬಂಗರು, ಸೂರಾಲಿನ ತೋಳಹರು, ವೇಣೂರಿನ ಅಜಿಲರು, ಪುತ್ತಿಗೆಯ ಚೌಟರು, ಮುಂತಾದವರು ವಿವಿಧ

ಬಂದರುಗಳನ್ನು ಕೇಂದ್ರವನ್ನಾಗಿಯೋ ಅಥವಾ ಬೇರೆ ರಾಜ್ಯಧಾನಿ ಕೇಂದ್ರಗಳಿಂದ ಬಂದರು ಪಟ್ಟಣಗಳನ್ನು ಆಳಿದ್ದರು.

ಬಂದರುಗಳಲ್ಲಿ ನೀರಿನ ಸೌಲಭ್ಯ, ಕಳ್ಳಕಾಕರಿಂದ ರಕ್ಷಣೆ, ಸರಿಯಾದ ವ್ಯಾಪಾರದ ತೂಕ, ಅಳತೆಯ ವ್ಯವಸ್ಥೆ, ತೆರಿಗೆ ವ್ಯವಸ್ಥೆ ಹಾಗೂ ಆಹಾರದ ಪೂರೈಕೆಗಳ ಜವಾಬ್ದಾರಿ ಇವರದಾಗಿತ್ತು. ದೇಶೀಯ ಹಾಗೂ ವಿದೇಶಿ ವರ್ತಕರಲ್ಲಿ ಸಮನ್ವಯ ಸಾದಿಸುವುದು ಮತ್ತು ವ್ಯಾಪಾರದಲ್ಲಿ ಮೋಸ, ವಂಚನೆಗೆ ಆಸ್ಪದವಾಗದಂತೆ ನೋಡಿಕೊಳ್ಳುವುದು ಇವರ ಹೊಣೆಯಾಗಿತ್ತು.

೪.೩ ಬಂದರು ನಗರಗಳ ಆಡಳಿತ ಪದ್ಧತಿ

ನಗರಗಳ ಆಡಳಿತದ ಬಗ್ಗೆ ಪ್ರಾಚೀನ ಸಾಹಿತ್ಯಗಳಲ್ಲಿ ವಿವರಗಳು ದೊರೆಯುತ್ತವೆ. ಮಹಾಭಾರತ, ಐತರೀಯಸಂಹಿತೆ, ಬ್ರಾಹ್ಮಣಕಗಳು, ಚಾಣಾಕ್ಯನ ಅರ್ಥಶಾಸ್ತ್ರ ಇನ್ನೂ ಅನೇಕ ಸಾಹಿತ್ಯಗಳು ಇಂಥಹ ವಿವರವನ್ನು ನೀಡುತ್ತವೆ. ಪ್ರಾಚೀನ ಸಾಹಿತ್ಯದಲ್ಲಿ ಬರುವ ಕೆಲವು ಉದಾಹರಣೆಗಳು ಹೀಗಿವೆ.

ವೇದಗಳಲ್ಲಿ ಸಭಾ, ಸಮಿತಿ ಅಥವಾ ಜನತೆ ಎಂಬ ಶಬ್ಧಗಳಿಗೆ ಲೋಕ ನಿಯುಕ್ತ ಕಾರ್ಯನಿರ್ವಾಹಕ ಮಂಡಳವೆಂದು ಅರ್ಥ. ಗ್ರೀಕರು ಎರಿಯೋ ಪಗಸ್, ರೋಮನ್ ಜನರು ಕೈರಿಯೂ, ಆಂಗ್ಲೋ ಸ್ಯಕ್ಸನ್ ಜನರು ವಿಟನ್‌ಗಮಾಟ್ ಮುಂತಾದ ಸಭೆಗಳ ಮೂಲಕ ತಮ್ಮ ರಾಜಕೀಯ ಪ್ರಶ್ನೆಗಳನ್ನು ನಿರ್ಧರಿಸಿಕೊಳ್ಳುತ್ತಿದ್ದರು[೯]. ಇಂತಹ ವ್ಯವಸ್ಥೆ ಭಾರತದಲ್ಲೂ ವಿವಿಧ ಹೆಸರುಗಳಲ್ಲಿ ಬಳಕೆಯಲ್ಲಿದ್ದ ಸ್ಥಳೀಯ ಆಡಳಿತಕ್ಕೆ ನೆರವಾಗುತ್ತಿತ್ತು. ಸಭೆ, ಸಮಿತಿಯಂತೆ ವಿವಿಧ ಸೇವಾ ಸಮಿತಿ ಮುಂತಾದವುಗಳಿದ್ದವು. ವಿಶಃ ಎಂಬ ಶಬ್ದವು ಪ್ರಜೆಗಳಕೂಟ ಎಂಬ ಅರ್ಥ ನೀಡುತ್ತಿತ್ತು. ಇದರ ಕೆಲಸ ೧. ರಾಜನನ್ನು ಅರಿಸುವುದು. ೨. ಗಣದ ಯಾವತ್ತೂ ರಾಜಕೀಯ ಕೆಲಸಗಳನ್ನು ಜರುಗಿಸುವುದು. ಅಲ್ಲದೇ ೩. ಮಿಕ್ಕ ಇತರ ರಾಷ್ಟ್ರಹಿತದ ಕೆಲಸಗಳನ್ನು ಕೈಗೊಳ್ಳುವುದು[೧೦] ಇವರ ಕರ್ತವ್ಯವಾಗಿತ್ತು. ಈ ಜನಪ್ರತಿನಿಧಿಗಳ ಕೂಟವು ಎಲ್ಲ ಆಗುಹೋಗುಗಳ ಜವಾಬ್ದಾರಿ ಹೊತ್ತುಕೊಂಡಿರುತ್ತಿತ್ತು. ಒಂದರ್ಥದಲ್ಲಿ ಇದು ಗಣರಾಜ್ಯ ಪದ್ದತಿಯಂತಿತ್ತು. ಈ ಪದ್ದತಿಗಳು ಭಾರತದ ಉತ್ತರ, ಪಶ್ಚಿಮ ಹಾಗೂ ದಕ್ಷಿಣದವರೆಗೆ ಅಸ್ಥಿತ್ವದಲ್ಲಿದ್ದು, ದೆಹಲಿಯಿಂದ ಅಲಹಾಬಾದಿನವರೆಗೆ ಅರಸೊತ್ತಿಗೆ ಹಾಗೂ ಪೂರ್ವದಲ್ಲಿ ಮಗಧ[೧೧] ಸಾಮ್ರಾಜ್ಯ ವಿತ್ತು.

ಮೇಲ್ಕಾಣಿಸಿದ ಆರಂಭದ ವೇದ, ಪುರಾಣಕಾಲದ ವ್ಯವಸ್ಥೆಯ ತರುವಾಯ ಪೌರ ಮತ್ತು ಜನಪದಗಳೆಂಬ ಒಂದೇ ವಿಧದ ಜನಾಂಗಗಳು ರಾಜ್ಯಗಳನ್ನು ಸ್ಥಾಪಿಸಿಕೊಂಡಿದ್ದವು. ಭರತ, ಪಾಂಚಾಲ, ವಿದೇಹ, ಐಕ್ಷ್ವಾಕು[೧೨] ಮೊದಲಾದ ಇಂಥಹ ಪೌರ ಮತ್ತು ಜನಪದಗಳನ್ನು ಕಾಣಬಹುದು. ಇದು ಕ್ರಿ.ಶ.ಪೂ ೬೦೦ ರಲ್ಲಿ ಕಂಡುಬಂದ ಸ್ಥಿತಿ. ಇವರಲ್ಲಿ ಒಂದೇ ಜನಾಂಗದ

ಬದಲು ಯಾರುಬೇಕಾದರೂ ಇರಬಹುದಾಗಿತ್ತು. ವಿಶಾಲವಾಗಿ ಬೆಳೆದ ಈ ಆಡಳಿತ ವಿಭಾಗಗಳು ಜನಪದ, ರಾಷ್ಟ್ರ, ದೇಶ, ಪುರ, ನಗರ ಅಥವಾ ದುರ್ಗ, ರಾಜಧಾನಿಗಳಾಗಿ[೧೩] ವಿಭಾಗಿತವಾಗಿದ್ದವು. ಹೀಗೆ ಬೆಳೆದು ಬಂದ ಆಡಳಿತ ವ್ಯವಸ್ಥೆ ಪೌರವಾಯಿತು[೧೪]. ಅಂದರೆ ರಾಜಧಾನಿಯ ರಾಜಕೀಯ ವ್ಯವಸ್ಥೆ ಇಲ್ಲಿ ಕಾಣಬಹುದು. ನಿರ್ದಿಷ್ಟಪಡಿಸಿದ ಅಧಿಕಾರಿಗಣ, ಆಡಳಿತ ನೋಡಿಕೊಳ್ಳುವವರು ಇರುತ್ತಿದ್ದರು. ಈ ಪೌರ ಆಡಳಿತದಲ್ಲಿ ಶೂದ್ರರೂ ಸ್ಥಾನ ಪಡೆದಿದ್ದರು. ಮುಖ್ಯಸ್ಥನು ಶ್ರೇಷ್ಠಿನ್ ಎಂದು ಕರೆಯಲ್ಪಡುತ್ತಿದ್ದ[೧೫]. ಕರ್ನಾಟಕದ ಕರಾವಳಿಯಲ್ಲಿ ವಿವಿಧ ರಾಜಪ್ರಭುತ್ವಗಳು ಆಳಿದ್ದವಷ್ಟೇ. ನಂದರ ನೇರ ಆಡಳಿತದ ಕುರಿತು ತಿಳಿಯದಿದ್ದರೂ, ಮೌರ್ಯರು–ಮಗಧ ಸಾಮ್ರಾಜ್ಯ ವಿಸ್ತರಿಸಿದಾಗ ಕರ್ನಾಟಕದ ತೀರ ಪ್ರದೇಶ ಅವರ ಆಡಳಿತಕ್ಕೆ ಒಳಪಟ್ಟಿತೆಂದು ಹೇಳಬಹುದು. ಇದಕ್ಕೆ ಅಶೋಕನ ಶಾಸನಗಳು ತಿಳಿಸುವ ದಕ್ಷಿಣದ ಗಡಿಗಳೇ ಆಧಾರವಾಗಿವೆ. ಇನ್ನೊಂದು ಬಹುಮುಖ್ಯವಾದ ಸಂಗತಿ ಎಂದರೆ ಕನ್ನಡ ಕರಾವಳಿ ಮೌರ್ಯರ ನಂತರ ಯಾವತ್ತೂ ಏಕ ಚಕ್ರಾಧಿಪತ್ಯಕ್ಕೆ ಒಳಗಾಗಲಿಲ್ಲ. ಶಾತವಾಹನರು ಪ್ರಯತ್ನ ನಡೆಸಿದರಾದರೂ, ಮುಂದೆ ಪೂರ್ವ ಕರಾವಳಿಯಿಂದ ಅವರಿಗೆ ಬರುತ್ತಿದ್ದ ಲಾಭ ಹಾಗೂ ಕೊಂಕಣ ತೀರದಲ್ಲಿದ್ದ ಅವರ ಪ್ರಬಲ ಪ್ರಭುತ್ವದ ದೆಸೆಯಿಂದ, ಕರ್ನಾಟಕದ ದಕ್ಷಿಣದ ತೀರ ಪ್ರದೇಶಗಳನ್ನು ತಮ್ಮ ಅಧೀನ ವಂಶಗಳಿಗೆ ಆಳಲು ಬಿಟ್ಟದ್ದು ತಿಳಿಯುತ್ತದೆ. ಇಲ್ಲಿಂದ ಮುಂದೆ ಕರಾವಳಿಯು ಏಕಕಾಲದಲ್ಲಿ ಹಲವು ರಾಜಮನೆತನಗಳ ಆಡಳಿತವನ್ನು ನೋಡಿತು. ಪರಸ್ಪರ ವೈರತ್ವದ ಅಥವಾ ವೈವಾಹಿಕ ಸಂಬಂಧ ಹೊಂದಿದ್ದ ರಾಜವಂಶಗಳು ಇವಾಗಿದ್ದವು. ಅಥವಾ ತೀರದುದ್ದಕ್ಕೂ ಕರ್ನಾಟಕದ ಅಧಿರಾಜಕತ್ವದ ಅಧೀನರಾಗಿದ್ದ ಸಾಮಂತ ಅರಸುಗಳ ಪ್ರಭುತ್ವ ಕಂಡುಬರುತ್ತಿತ್ತು.

ಬಂದರು ಪಟ್ಟಣಗಳು ಆರ್ಥಿಕ ಮೂಲವಾಗಿದ್ದರಿಂದ ಅವುಗಳ ನಿಯಂತ್ರಣ ಮತ್ತು ನಿರಂತರ ತಮ್ಮದಾಗಿರಿಸಿ ಕೊಳ್ಳುವ ಪ್ರಯತ್ನ ಈ ಎಲ್ಲ ಆಳರಸರದಾಗಿತ್ತು. ಮೌರ್ಯರ ಶಾಸನಗಳು ತಿಳಿಸುವಂತೆ ಅವರು ರಾಜ್ಯವನ್ನು ಪ್ರಾಂತ್ಯಗಳನ್ನಾಗಿ[೧೬] ವಿಭಾಗಿಸಿಕೊಂಡು ಆಳುತ್ತಿದ್ದರು. ಇಂಥಹ ಪ್ರಾಂತಗಳಲ್ಲಿ ಸುವರ್ಣಗಿರಿಯು ದಕ್ಷಿಣದ ಪ್ರಾಂತ್ಯವಾಗಿದ್ದು, ಆ ಪ್ರಾಂತ್ಯದಲ್ಲಿ ಕನ್ನಡ ಕರಾವಳಿ ಸೇರಿದ್ದಿರಬೇಕು. ಮುಂದೆ ಬೌದ್ಧ ಸಾಹಿತ್ಯಗಳು ಬನವಾಸಿ ನಗರವು ಬೌದ್ಧ ಕೇಂದ್ರವಾಗಿದ್ದ ಬಗ್ಗೆ ಹಾಗೂ ಅಲ್ಲಿಂದ ಹೋದ ಬೌದ್ಧ ಬಿಕ್ಕುಗಳು ಸಿಂಹಳಕ್ಕೆ ತಲುಪಿದ[೧೭] ಬಗ್ಗೆ ತಿಳಿಸುತ್ತವೆ. ಮೌರ್ಯರ ಉಪ ಶಾಖೆ ಒಂದು ಕೊಂಕಣ ಪ್ರದೇಶದಲ್ಲಿ ರಾಜ್ಯ ಸ್ಥಾಪಿಸಿ ಕ್ರಿ.ಶ. ೬ನೇ ಶತಮಾನದವರೆಗೂ ಆಳಿತ್ತು[೧೮]. ಇದು ಇಂದಿನ ಕಾರವಾರ ಪ್ರದೇಶದವರೆಗೆ ಇದ್ದಿತ್ತು.

ಶಾತವಾಹನರು ಕರ್ನಾಟಕ ಕರಾವಳಿಯಲ್ಲಿ ಕಡಲೋತ್ತರ ವ್ಯಾಪಾರದ ಬೃಹತ್ ಯೋಜನೆಯೊಂದನ್ನು ಕಾರ್ಯ ರೂಪಕ್ಕೆ ತಂದಿದ್ದರು. ಇವರು ಮೌರ್ಯರಂತೆ ಕನ್ನಡ

ಕರಾವಳಿಯನ್ನು ತಮ್ಮ ಪ್ರಾಂತ್ಯಾಧಿಪತ್ಯಕ್ಕೆ ಒಳಪಡಿಸಿಕೊಂಡಿದ್ದರು. ಬನವಾಸಿ ಇವರ ಕೇಂದ್ರಗಳಲ್ಲಿ ಒಂದಾಗಿತ್ತು. ಅಲ್ಲಿಂದಲೇ ಅಧಿಕಾರಿಗಳ ಮೂಲಕ ಕರಾವಳಿ ಆಳುತ್ತಿದ್ದರು. ಯುವರಾಜ, ಅಮಾತ್ಯರುಗಳ ಮೂಲಕ[೧೯] ಹಾಗೂ ತಮ್ಮ ಕಿರಿಯ ಶಾಖೆಗಳಾದ ಚುಟ, ಆನಂದವಂಶಗಳ ಮೂಲಕ ಕರಾವಳಿಯಲ್ಲಿ ಪ್ರಭುತ್ವ ಸಾಧಿಸಿದ್ದರು. ಪ್ರಾಂತ್ಯಗಳನ್ನು ಅಹರ ಅಥವಾ ರಾಷ್ಟ್ರ[೨೦] ಎಂದು ವಿಭಾಗಿಸಿದ್ದರು. ಇವುಗಳು ಮತ್ತೆ ಹಳ್ಳಿಗಳಾಗಿ ವಿಭಾಗಗೊಂಡಿದ್ದು, ಇವುಗಳ ಆಡಳಿತ ಕೇಂದ್ರಕ್ಕೆ ನಿಗಮ ಎಂದ ಕೆರೆಯುತ್ತಿದ್ದರು. ಗ್ರಾಮಗಳು ಅತೀ ಚಿಕ್ಕ ಅಡಳಿತ ಘಟಕವಾಗಿತ್ತು. ಪಟ್ಟಣಗಳನ್ನು ನಿಗಮ ಎಂದೂ ಕರೆದಿದ್ದಾರೆ. ಅವುಗಳ ಕಾರ್ಯ ನಿರ್ವಹಣೆಗೆ ನಿಗಮಸಭೆ ಎಂಬ ಕಟ್ಟಡದಲ್ಲಿ ಸಭೆ ನಡೆಸುತ್ತಿದ್ದರು.

ಕದಂಬರು ಕನ್ನಡದ ಪ್ರಥಮ ರಾಜವಂಶ ಎಂಬ ಹೆಗ್ಗಳಿಕೆ ಪಡೆದ ಮನೆತನ. ಬನವಾಸಿ ಇವರ ಕೇಂದ್ರವಾಗಿತ್ತು. ಕರಾವಳಿಯ ತೀರ ಇವರ ರಾಜ್ಯದಲ್ಲಿ ಸೇರಿತ್ತು. ರಾಜ್ಯವನ್ನು ಪ್ರಾಂತ್ಯವನ್ನಾಗಿ ವಿಂಗಡಿಸಿದ್ದರು. ಗ್ರಾಮವು ಆಡಳಿತದ ಮೂಲ ಘಟಕವಾಗಿತ್ತು[೨೧]. ಇದರ ಮಧ್ಯದಲ್ಲಿ ರಾಜ್ಯವನ್ನು ಬೇರೆ ವಿಭಾಗಗಳನ್ನಾಗಿ ಮಾಡಿಕೊಂಡಿದ್ದ ಬಗ್ಗೆ ತಿಳಿಯದು. ಮುಂದೆ ಕದಂಬವಂಶ ಒಡೆದು ಹಲವು ವಿಭಾಗಗಳಾಗಿ, ಬೇರೆ ಬೇರೆ ಸ್ಥಳಗಳಿಂದ ಆಳಿತು. ಕದಂಬರಿಗೂ ಚಾಲುಕ್ಯರಿಗೂ ನಡೆದ ಸೆಣಸಾಟದ ಸಂದರ್ಭದಲ್ಲಿ ಆಳುಪರು ಚಾಲುಕ್ಯರಿಗೆ ಸಹಾಯ ಮಾಡಿದ್ದರು. ಬನವಾಸಿ ಆಳುಪರಿಗೆ ದೊರೆಯಿತು[೨೨]. ಈ ಅವಧಿಯಲ್ಲಿ ಬನವಾಸಿ ೧೨೦೦೦ ಚಾಲುಕ್ಯರ ಮುಖ್ಯ ಸ್ಥಳವಾಗಿತ್ತು. ಇಲ್ಲಿ ೧೨೦೦೦ವು ಏನನ್ನು ಸೂಚಿಸುತ್ತದೆ ಎನ್ನುವುದು ಸ್ಪಷ್ಟವಾಗಿಲ್ಲ. ಆದರೂ ಇದು ಹನ್ನೆರಡುಸಾವಿರ ಕಂದಾಯ ಗ್ರಾಮವನ್ನು ಒಳಗೊಂಡಿರುವ ಸಾಧ್ಯತೆಯಿದೆ ಎಂದು ಉಹಿಸಬಹುದು. ಹಾಗಿದ್ದರೆ ಇದು ೧೨ ಸಾವಿರ ಕಂದಾಯ ಗ್ರಾಮಗಳ ಒಕ್ಕೂಟ ಎನ್ನಬಹುದು.

ರಾಷ್ಟಕೂಟರ ಕಾಲದಲ್ಲಿ ಕರಾವಳಿಯು ಪರೋಕ್ಷ ಆಡಳಿತಕ್ಕೆ ಒಳಗಾಗಿತ್ತು. ಕರ್ನಾಟಕದ ಉತ್ತರದ ಕರಾವಳಿಯ ಬಂದರುಗಳ ಮೂಲಕ ಇವರ ಕಡಲೋತ್ತರ ವ್ಯಾಪಾರ ಭರದಿಂದ ನಡೆದಿತ್ತು. ಈ ಪ್ರದೇಶಗಳು ಅವರ ಆಡಳಿತಕ್ಕೆ ಒಳಪಟ್ಟಿದ್ದಿರಬೇಕು. ಇವರು ತಮ್ಮ ರಾಜ್ಯವನ್ನು ರಾಷ್ಟ್ರ ಅಥವಾ ಪ್ರಾಂತಗಳನ್ನಾಗಿ ವಿಂಗಡಿಸಿಕೊಂಡಿದ್ದರು. ರಾಷ್ಟ್ರವನ್ನು ವಿಷಯ ಅಥವಾ ನಾಡುಗಳನ್ನಾಗಿಯೂ, ನಾಡುಗಳನ್ನು ಭುಕ್ತಿ ಅಥವಾ ಜಿಲ್ಲೆಗಳನ್ನಾಗಿ[೨೩] ವಿಭಾಗಿಸಿ ಕೊಂಡಿದ್ದರು.

ಹೊಯ್ಸಳರ ಮೂರನೇ ಬಲ್ಲಾಳನ ಕಾಲದಲ್ಲಿ ಕರಾವಳಿಯ ದಕ್ಷಿಣದ ಭಾಗಗಳು ಅವರ ವಶವಾಗಿದ್ದವು. ಮೂರನೇ ಬಲ್ಲಾಳನು ಆಳುಪ ರಾಜಕುವರಿ ಚಿಕ್ಕಾಯಿತಾಯಿಯನ್ನು ವಿವಾಹವಾದನು. ಮೂರನೆ ಬಲ್ಲಾಳನು ತನ್ನ ಸೈನ್ಯವನ್ನು ಇನ್ನೂ ಉತ್ತರದತ್ತ ನಡೆಸಿ, ಚಂದಾವರ

ಕಾದಂಬರನ್ನು ಜಯಿಸಿದನು. ರಾಣಿಯ ಮೂಲಕ ದಕ್ಷಿಣ ತೀರದ ಹಲವು ಬಂದರುಗಳು ಬಾರ್ಕೂರಿನಿಂದ ಆಳಲ್ಪಟ್ಟವು[೨೪]. ಹೊಯ್ಸಳರು ಸ್ಥಳೀಯ ಆಡಳಿತವನ್ನು ಹಿಂದಿನ ಆಡಳಿತದಂತೆ ನಡೆಸಿದ್ದರು.

ನಂತರ ಬಂದ ವಿಜಯನಗರದ ಅರಸರು ಕರಾವಳಿಯ ಬಾರ್ಕೂರು, ಮಂಗಳೂರು ಹಾಗೂ ಹೊನ್ನಾವರಗಳಲ್ಲಿ ರಾಜ್ಯಪಾಲರನ್ನು ಇಟ್ಟು ಆಡಳಿತವನ್ನು ನಡೆಸಿದರು.

ಕರಾವಳಿಯಲ್ಲಿ ಕರ್ನಾಟಕವನ್ನು ಆಳಿದ ಬಹುತೇಕ ಎಲ್ಲಿ ರಾಜ ವಂಶಗಳ ಆಡಳಿತ ನೋಡಬಹುದಾದರೂ, ಹಲವು ಸಂದರ್ಭದಲ್ಲಿ ರಾಜವಂಶಗಳು ನೇರವಾಗಿ ಇಲ್ಲಿ ಆಳದೇ ತಮ್ಮ ಸಾಮಂತರ ಮೂಲಕ ಆಳಿದ್ದು ಕಾಣುತ್ತದೆ. ಶಾತವಾಹನರಿಂದ ಆರಂಭಿಸಿ ವಿಜಯನಗರದ ಆಡಳಿತದ ಕಾಲದವರೆಗೂ ಸಾಮ್ರಾಜ್ಯ ಹಾಗೂ ಅಧೀನ ರಾಜರ ವಿಶಿಷ್ಟ ಸಾಮರಸ್ಯ ದ್ವೇಷ ಹಾಗೂ ಭೂ ಒಡೆತನಕ್ಕಾಗಿ ಮತ್ತು ಪ್ರಭುತ್ವದ ಮುಂದುವರಿಕೆಗಾಗಿ ನಡೆದ ಗೆಳೆತನ ನೋಡಸಿಗುತ್ತದೆ.

ಸಾಮಂತ ಪ್ರಭುಗಳ ಆಡಳಿತವನ್ನು ಗುರುತಿಸುವ ವಿಚಾರದಲ್ಲಿ ಭಾರತದ ಇತಿಹಾಸಕಾರರಲ್ಲಿ ಭೇದಗಳಿವೆ[೨೫]. ಪೂರ್ವ ಮಧ್ಯಕಾಲೀನ ಭಾರತದ ಸಾಮಂತ ಪ್ರಭುತ್ವಕ್ಕೂ ಪಾಶ್ಚಾತ್ಯರ ಸಾಮಂತವಾದಕ್ಕೂ ಹಲವು ಭೇದಗಳಿರುವುದು ವಿಧಿತ. ಭಾರತೀಯ ಸಾಮಂತ ಶಾಹಿಯ ಉಗಮ-ವಿಕಾಸದ ಕುರಿತು ಹಲವು ವಿದ್ವತ್‌ಪೂರ್ಣ ಕೃತಿಗಳು ಬಂದಿವೆ. ಮುಖ್ಯವಾಗಿ ಶರ್ಮಾ ಆರ್. ಎಸ್. ರವರ ಇಂಡಿಯನ್ ಫ್ಯೂಡಲಿಸಂ ಕೃತಿ. ಇದು ಭಾರತದಲ್ಲಿ ಆರಂಭವಾದ ಸಾಮಂತ ಪ್ರಭುತ್ವದ ಕುರಿತು ತಿಳಿಸುತ್ತದೆ.

ಸಾಮಂತ ಪ್ರಭುಗಳು ಆಳುವ ಸಂದರ್ಭದಲ್ಲಿ ಕೃಷಿ ಸಂಬಂಧಗಳು ಉತ್ಪನ್ನಗಳನ್ನು ಹಂಚುವಲ್ಲಿ ಹಾಗೂ ಸೈನಿಕರ ಜಮಾವಣೆಯಲ್ಲಿ ಬದಲಾವಣೆಗಳು ಕಂಡುಬಂದ[೨೬] ರೀತಿಗಳು ಆಡಳಿತದಲ್ಲಿ ಹಲವು ಬದಲಾವಣೆಗಳನ್ನು ತಂದವು. ಒಂದು ರೀತಿಯಲ್ಲಿ ಇದು ಉಳಿಗಮಾನ್ಯ ವ್ಯವಸ್ಥೆಯ ಉಗಮ ಎನ್ನಬಹುದು. ಇದು ಭಾರತೀಯ ಮಾದರಿಯ ಉಳಿಗಮಾನ್ಯ ವ್ಯವಸ್ಥೆ ಆಗಿತ್ತು.

ಕರಾವಳಿಯಲ್ಲಿ ಕೊಂಕಣದ ಮೌರ್ಯ್ಯರು, ಭೋಜರು, ಕೇಕೆಯರು, ಪಲ್ಲವರ ಒಂದು ಶಾಖೆ, ಕದಂಬರ ಹಲವು ಶಾಖೆಗಳು, ಶಿಶುಗಲಿ ಪಾಂಡ್ಯರು, ಗೇರಸೊಪ್ಪಾದ ಸಾಳ್ವರು, ಪುತ್ತಿಗೆಯ ಕೆಲ್ಲರು, ನಂತರದ ಆಳುಪರು, ಅಜಿಲರು, ಕುಂಬಳೆ ಅರಸರು, ತೊಳಹರರು ಕಾರ್ಕಳದ ಬೈರರು, ಪುತ್ತಿಗೆ-ಮೂಡಬಿದಿರೆಯ ಚೌಟರು, ಹೊನ್ನೆ ಕಂಬಳಿಯರು, ಸಾವಂತರು, ಬಂಗರು, ಕಾರ್ಕಳದ ಬೈರರಸರು ಮುಂತಾದ ಮನೆತನಗಳು ಸಾಮಂತರಾಗಿ ಆಳಿದ್ದು ಕಂಡುಬರುತ್ತದೆ. ಆಳುಪರು

ಆರಂಭದಲ್ಲಿ ಸ್ವತಂತ್ರರಾಗಿದ್ದು ಮುಂದೆ ವಿವಿಧ ಸಾಮ್ರಾಜ್ಯಗಳ ಸಾಮಂತರಾದರು. ಕದಂಬರು ಮುಂದೆ ಹಲವು ಶಾಖೆಗಳಾಗಿ ಒಡೆದು ಸಾಮಂತರಸರಾಗಿ ಕರಾವಳಿಯಲ್ಲಿ ಆಳಿದರು.

ಸಾಮಂತರಸರಿಗೆ ಕೇಂದ್ರದ ಸಾಮ್ರಾಟರ ಅಧಿನತೆಗೆ ಒಳಪಟ್ಟು ಆಳುವುದು ಒಂದು ಬಂದನದಂತಿದ್ದರೂ ಹಲವು ರೀತಿಯ ಸ್ವಾತಂತ್ರ್ಯಗಳು ದೊರೆತಿದ್ದವು. ಬಹುಮುಖ್ಯವಾಗಿ ಇವರು ಸೈನ್ಯ ಸಂಘಟಿಸುವ ಹಕ್ಕು ಹೊಂದಿದ್ದರು. ಚಿಕ್ಕ ಸಾಮಂತರೂ ತಮ್ಮ ಆಸ್ತಿಯ ಆಡಳಿತದಲ್ಲಿ ಯಾವುದೇ ಬದಲಾವಣೆಗೆ ರಾಜನ ಅನುಮತಿ ಪಡೆಯಬೇಕಿತ್ತು. ಮತ್ತು ನಿಷ್ಠೆಗೆ ಪ್ರತಿಫಲವಾಗಿ ಸಾಮಂತರಿಗೆ ಬಿರುದು ಮತ್ತು ಸಿಂಹಾಸನ ಮುಂತಾದವುಗಳನ್ನು ದಯಪಾಲಿಸಲಾಗುತ್ತಿತ್ತು[೨೭]. ಇಂಥಹ ಸಾಮಂತರು ಕರಾವಳಿಯಲ್ಲಿ ಆಳಿದ್ದಿದೆ. ಚಾಲುಕ್ಯರ ಬಿರುರು, ರಾಷ್ಟಕೂಟರ ಬಿರುದು ಹೊಂದಿದ್ದ ಅನೇಕ ರಾಜರಿದ್ದರು. ಇವರು ಸಂಪೂರ್ಣ ಭೂಮಿಯ ಒಡೆತನ ಹೊಂದಿರಲಿಲ್ಲ. ಭೂಮಿಗೆ ಸಾಮ್ರಾಟ ಒಡೆಯನಾಗಿದ್ದು ಭೂಮಿಯಿಂದ ಬಂದ ಆದಾಯ ಹಾಗೂ ದತ್ತಿಗೆ[೨೮] ಸಾಮಂತ ಮಾಲಿಕನಾಗಿದ್ದನು.

ಕರಾವಳಿಯ ಸಾಮ್ರಾಟರು ಕೇಂದ್ರದಿಂದ ದೂರದಲ್ಲಿದ್ದದ್ದು ಒಂದು ರೀತಿಯಲ್ಲಿ ಅವರಿಗೆ ಸ್ವಾತಂತ್ರ್ಯ ನೀಡಿದ್ದಿತ್ತು. ಕೇಂದ್ರದ ಆಡಳಿತಕ್ಕೆ ಅಧೀನರಾದರೂ ಸ್ಥಳೀಯ ಪದ್ಧತಿ, ಪರಂಪರೆಯಂತೆ ಆಡಳಿತ ನಡೆಸಿದ್ದರು. ಆದರೂ ಹಲವು ಸಂದರ್ಭಗಳಲ್ಲಿ ರಾಜ್ಯದಲ್ಲಿ ವಿವಿಧ ವಿಭಾಗಗಳನ್ನು ಆಡಳಿತಕ್ಕೆ ಅನುಕೂಲವಾಗುವಂತೆ ವಿಭಾಗ ಮಾಡಿಕೊಂಡಿದ್ದರು. ಇಂಥಹ ವಿಭಾಗಗಳು ಶಾಸನಗಳಲ್ಲಿ ಕಂಡುಬರುತ್ತವೆ. ಇಂದಿಗೂ ಕೆಲವು ಚಲಾವಣೆಯಲ್ಲಿವೆ. ಪುರಗಳು, ಊರುಗಳು ಮುಂತಾದ ಹೆಸರುಗಳಲ್ಲಿ ಮುಂದುವರಿದಿವೆ.

ಬಂದರುಗಳೇ ಇವರ ಆರ್ಥಿಕ ಮೂಲದ ಪ್ರಮುಖ ಸ್ಥಳವಾದ್ದರಿಂದ ಬಂದರು ಪಟ್ಟಣಗಳನ್ನು ಕೇಂದ್ರಗಳಾಗಿಸಿ ಸುತ್ತಲಿನ ಹಳ್ಳಿಗಳು ಹಾಗೂ ಸಂಪರ್ಕಕ್ಕೆ ಬರುವ ಊರುಗಳನ್ನು ಸೇರಿಸಿ ಆಡಳಿತ ವಿಭಾಗಳನ್ನು ರಚಿಸಿ ಕೊಂಡಿದ್ದರು. ಮಂಗಳೂರಿನಿಂದ ಕಾರವಾರದವರೆಗಿನ ಬಂದರು ಪಟ್ಟಣಗಳು ವ್ಯಾಪಾರಕ್ಕಾಗಿಯೇ ಮಾಡಿಕೊಂಡ ಬಂದರುಗಳು. ಇದರಲ್ಲಿ ಹೊನ್ನಾವರ, ಬಾರ್ಕೂರು ಹಾಗೂ ಮಂಗಳೂರು ಕೆಲವು ಕಾಲ ರಾಜಧಾನಿ ಕೇಂದ್ರಗಳಾಗಿದ್ದವು. ಹಾಗೆ ರಾಜಧಾನಿಯಾಗುವುದರಲ್ಲೂ ಇವುಗಳೆಲ್ಲ ಮೂಲ ಬಂದರುಗಳಾಗಿದ್ದದ್ದೇ ಕಾರಣ ಆಗಿತ್ತು. ರಾಜಧಾನಿ ಪ್ರದೇಶಗಳನ್ನು ರಾಜನು ನೇರವಾಗಿ ಮಂತ್ರಿಗಳು, ಅಧಿಕಾರಿಗಳು, ವರ್ತಕರ ಸಹಾಯದೊಂದಿಗೆ ಆಳುತ್ತಿದ್ದನು.

ತುಳು ಪ್ರದೇಶದಿಂದ ಆಳಿದ ಆಳುಪರು ಈಗಿನ ದಕ್ಷಿಣ ಕನ್ನಡ, ಹೈವೆನಾಡು ಅಂದರೆ ಇಂದಿನ ಉತ್ತರ ಕನ್ನಡ, ಕೊಂಕಣ ಮತ್ತು ಪಶ್ಚಿಮ ಘಟ್ಟಗಳ ಮೇಲಿನ[೨೯] ಕೆಲವು ಪ್ರದೇಶದಲ್ಲಿ

ಆಡಳಿತ ನಡೆಸಿದ್ದರು. ದಕ್ಷಿಣ ಕನ್ನಡ ಪ್ರದೇಶವು ಆಳ್ವಖೇಡ, ಆಳ್ವಖೇಡ ೬೦೦೦[೩೦], ಹೊನ್ನಾವರದ ಸುತ್ತಲ ಪ್ರದೇಶ, ಹೈವೆ, ಹೈವೆ ೫೦೦, ಅಲ್ಲಿಂದ ಉತ್ತರದತ್ತ ಕೊಂಕಣ, ಕೊಂಕಣ ೬೦೦, ಕೊಂಕಣ ೯೦೦ ಎಂದು ಹೆಸರಾಗಿದ್ದವು. ತುಳುನಾಡನ್ನು ಆಡಳಿತ ಅನುಕೂಲತೆಗೆ ಆ ಕಾಲದಲ್ಲಿ ಊರು, ಪುರ, ಗಡಿ, ನಾಡು, ಮಾಗಣೆ, ಸ್ಥಳ, ಸ್ಥಳನಾಡು, ಸ್ಥಾನ, ಮಂಣು, ನಾಲ್ಕು ಗ್ರಾಮ, ಏಳು ನಾಡು, ನಾಲ್ವತ್ತು ನಾಡು, ದೇಶ, ಸಂಸ್ಥಾನ, ಪಟ್ಟಣ, ನಕರ, ಮಹಾನಕರ, ಮಹಾರಾಜ್ಯ, ಕೇರಿ, ಗುತ್ತು, ಚಾವಡಿ, ವಿಷಯ, ಸೀಮೆ, ಚತುಸ್ಸೀಮೆ, ಬೀಡು, ಆಳ್ವಿಕೆ, ಹರಪುರಿ, ಬಾಳಿಕೆ, ಬೆಂಗರೆ, ಠಾವು, ಗೋವಳ, ಭುವನಾಶ್ರಯ, ಮಂಡಲ, ಕುದುರು[೩೧] ಮುಂತಾಗಿ ವಿಭಾಗಿಸಿಕೊಂಡಿದ್ದರು. ಮುದಿಮೆ[೩೨], ಹಲವು ಮಾಗಣೆಗಳ ರಾಜ್ಯ[೩೩], ರಾಜ್ಯಕಿಂತ ವಿಶಾಲವಾದದ್ದು ಮಂಡಲ[೩೪], ನಾಲ್ಕು ಗ್ರಾಮ, ಐದೂರು, ಎಂಟು ಗ್ರಾಮ[೩೫] ಮುಂತಾದ ವಿಭಜನೆಗಳನ್ನು ಮಾಡಿಕೊಂಡಿದ್ದರು. ಫಲವತ್ತಾದ ಜಮೀನು ಹೊಂದಿರುವ ಜನವಸತಿ ಹತ್ತಿರದಲ್ಲಿರುವ ಪ್ರದೇಶಗಳನ್ನು ವಿವಿಧ ಹೆಸರುಗಳಲ್ಲಿ ವಿಭಾಗಿಸಿ ತೆರಿಗೆ ಪಡೆಯುತ್ತಿದ್ದರು.

ಉತ್ತರ ಕನ್ನಡದ ಕರಾವಳಿಯಲ್ಲಿಯೂ ಆಡಳಿತ ವಿಭಾಗಗಳನ್ನೂ ಆಳುವವರು ಮಾಡಿಕೊಂಡಿದ್ದರು. ಕದಂಬರ ಆಡಳಿತ ಕಾಲದಲ್ಲಿ ಮಾಡಿಕೊಂಡಿದ್ದ ವಿಭಾಗಗಳ ಕುರಿತು ಸಾಮ್ರಾಜ್ಯಗಳ ಆಡಳಿತದ ಸಂದರ್ಭದಲ್ಲಿ ನೋಡಿದ್ದೇವೆ.

ಭೋಜವಂಶದವರು ಕ್ರಿಸ್ತೋತ್ತರ ನಾಲ್ಕನೇ ಶತಮಾನದಿಂದ ಏಳನೇ ಶತಮಾನದವರೆಗೆ[೩೬] ಆಳುವಾಗ ಕೊಂಕಣ ಎಂಬ ಪ್ರದೇಶ ಅಥವಾ ವಿಭಾಗ ಇದ್ದಿತ್ತು. ಇಂದಿನ ಕಾರವಾರ, ಅಂಕೋಲಾದ ಭೂಭಾಗ ಇದರಲ್ಲಿ ಸೇರಿತ್ತು. ಚುಟುಗಳು ಆಳುವಾಗಲೂ ಬನವಾಸಿ ಕೇಂದ್ರವಾಗಿಸಿ ಕರಾವಳಿಯನ್ನು ಆಳಿದ್ದರು. ಆದರೆ ಅವರ ಕಾಲದ ವಿಭಾಗಗಳು ತಿಳಿಯುತ್ತಿಲ್ಲ. ಮುಂದೆ ಕರಾವಳಿ ವಿಭಾಗವನ್ನು ಕರಾವಳಿಯ ಪಲ್ಲವ ಶಾಖೆಯೊಂದು ಆಳಿತು. ಪಲ್ಲವರು ನೀಡಿದ ದಾನ ತಿಳಿಸುವ ಶಾಸನಗಳಲ್ಲಿ ಗ್ರಾಮಗಳ ಉಲ್ಲೇಖವಿದೆ. ಅಂದರೆ ಇವರು ಆಡಳಿತಕ್ಕೆ ಗ್ರಾಮಗಳನ್ನು ಮಾಡಿ ಕೊಂಡಿದ್ದರೆಂದು ತಿಳಿಯುತ್ತದೆ. ಕ್ರಿ.ಶ ಹತ್ತನೇ ಶತಮಾನದಿಂದ ಹದಿಮೂರನೇ ಶತಮಾನದವರೆಗೆ, ಕರಾವಳಿಯನ್ನು ಕೊಂಕಣ ಒಂಬೈನೂರು, ಪಲಸಿಗೆ ಪನ್ನಿರ್ಚ್ಛಾಸಿರ, ಹೈವೆಯ್ಯೈನೂರು, ಬನವಾಸಿ ಪನ್ನಿರ್ಚ್ಛಾಸಿರ ಹಾಗೆ ಪಾನುಗಲ್ಲೈನೂರು ಎಂದು ವಿಭಾಗಿಸಿ[೩೭] ಕೊಂಡು ಆಡಳಿತ ಮಾಡಿದ್ದರು.

ಈ ವಿಭಾಗಗಳಲ್ಲಿ ಕೊಂಕಣ ಒಂಬೈನೂರು ಕಾರವಾರ ತಾಲೂಕಿನ ೬೧ ಹಳ್ಳಿಗಳು, ಗಂಗಾವಳಿಯ ಉತ್ತರಕ್ಕಿರುವ ಅಂಕೋಲಾದ ೪೮ ಹಳ್ಳಿಗಳು, ಸೂಪಾದ ನೈರುತ್ಯದ ೫೦ ಹಳ್ಳಿಗಳಿಂದ ಕೂಡಿತ್ತು. ಪಲಸಿಗೆ ಪನ್ನಿಚ್ಛಾಸಿರವು ಸೂಪಾದ (ಇಂದಿನ ಜೊಯಿಡಾ) ಉಳಿದ ೯೦ ಹಳ್ಳಿಗಳು, ಹಳಿಯಾಳ ತಾಲೂಕಿನ ೧೩೦ ಹಳ್ಳಿಗಳು ಹಾಗೂ ಮುಂಡಗೋಡಿನ ವಾಯುವ್ಯದ ೧೦

ಹಳ್ಳಿಗಳನ್ನು ಅಂದರೆ ಒಟ್ಟು ೨೬೩ ಹಳ್ಳಿಗಳಿಂದೊಡಗೊಡಿತ್ತು. ಹೈವೆ ಐನೂರು ಗಂಗಾವಳಿಯ ದಕ್ಷಿಣಕ್ಕಿರುವ ಅಂಕೋಲಾದ ೪೦ ಹಳ್ಳಿಗಳು, ಕುಮಟಾದ ೧೨೬ ಹಳ್ಳಿಗಳು, ಹೊನ್ನಾವರದ ೬೪ ಹಳ್ಳಿಗಳು, ಭಟ್ಕಳದ ೬೩ ಹಳ್ಳಿಗಳು, ಸಿರಸಿಯ ಪಶ್ಚಿಮ ಭಾಗದ ೨೬, ಸಿದ್ದಾಪುರದ ಪಶ್ಚಿಮ ಭಾಗದ ೩೮ ಹಳ್ಳಿಗಳಿಂದ ಒಟ್ಟು ೨೮೭ ಹಳ್ಳಿಗಳ ವಿಭಾಗವಾಗಿತ್ತು. ಬನವಾಸಿ ಪನ್ನಿರ್ಚ್ಛಾಸಿರವು ಯಲ್ಲಾಪುರ ತಾಲೂಕಿನ ಗಂಗಾವಳಿ ನದಿಯ ದಕ್ಷಿಣ ಭಾಗದ ಸುಮಾರು ೪೩ ಹಳ್ಳಿಗಳು, ಮುಂಡಗೋಡ ತಾಲೂಕಿನ ದಕ್ಷಿಣ ಭಾಗದ ಸುಮಾರು ೩೦, ಶಿರಸಿ ತಾಲೂಕಿನ ಉಳಿದ ೨೦೨, ಸಿದ್ದಾಪುರದ ಉಳಿದ ೧೬೪ ಹಳ್ಳಿಗಳಿಂದ ಕೂಡಿತ್ತು. ಪಾನುಂಗಲ್ಲೈನೂರು, ಮುಂಡಗೋಡ ತಾಲೂಕಿನ ೫೪ ಹಳ್ಳಿಗಳಿಂದ ಒಡಗೂಡಿತ್ತು.

ಈ ಮೇಲಿನ ವಿಭಾಗಗಳಲ್ಲದೇ ಉತ್ತರ ಕನ್ನಡದ ಕರಾವಳಿ ಹಾಗೂ ಘಟ್ಟದ ಪ್ರದೇಶಗಳು ಕೊಂಕಣ ೩೦೦, ಹಲಸಿಗೆ ೧೨೦೦೦ ಹಾಗೂ ಹಾನಗಲ್ ೫೦೦ ಆಡಳಿತ ವಿಭಾಗಗಳಾಗಿ ವಿಭಜಿತಗೊಂಡಿತ್ತು[೩೮]. ಮತ್ತೆ ವಿವಿಧ ರಾಜ ಮನೆತನಗಳ ಆಳ್ವಿಕೆಯಲ್ಲಿ ಬನವಾಸಿ ೧೨೦೦೦ ಹಾಗೂ ಸಾಂತಲಿಗೆ ೧೦೦೦[೩೯] ಗಳೆಂತಲೂ ವಿಭಜಿತವಾಗಿತ್ತು. ಹೀಗೆ ವಿಭಜಿತವಾಗಿದ್ದ ನಾಡು ಉಪವಿಭಾಗಗಳಾಗಿ ಮಹಿವಟ್ಟಡಗಲು, ತೆಂಗೆರೆಮೂವತ್ತು, ಕರ್ಮಿನಾಲಿಗೆ ಎಪ್ಪತ್ತು, ಕೊಂತಕುಳಿಮೂವತ್ತು, ಮಹಳಿಗೆಎಪ್ಪತ್ತು, ಕೊಂಡಳಿಮೂವತ್ತು, ಮೊಗಲೆಎಪ್ಪತ್ತು[೪೦] ಎಂದೂ ವಿಭಾಜಿತವಾಗಿತ್ತು. ಇವುಗಳೊಂದಿಗೆ ಹನ್ನೊಂದು-ಹನ್ನೆರಡನೇ ಶತಮಾನದ ತಲಗೋಡಿನ ಶಾಸನದಲ್ಲಿ ನೂರಂಬಾಡ[೪೧] ಎಂಬ ವಿಭಾಗದ ಉಲ್ಲೇಖ ಬರುತ್ತದೆ. ನೂರಂಬಾಡ ಎಂದರೆ ೧೦೦ ಗ್ರಾಮಗಳ ಗುಂಪು ಎಂದು ಅರ್ಥ. ೧೩ನೇ ಶತಮಾನದಲ್ಲಿ ಗೇರಸೊಪ್ಪೆ ಅಂದರೆ ನಗರೆ ಕೇಂದ್ರ ಮಾಡಿಕೊಂಡು ಸಾಳ್ವವಂಶ ಆಡಳಿತ ನಡೆಸಿತ್ತು. ಶರಾವತಿ ಹಾಗೂ ವೆಂಕಟಾಪುರ ನದಿಗಳನ್ನು ಮೇರೆಯಾಗಿ ಹೊಂದಿದ್ದ ಈ ವಂಶದ ರಾಜ್ಯವು ಮುಂದೆ ಹಾಡೋವಳ್ಳಿಯನ್ನು ಕೇಂದ್ರ ಮಾಡಿಕೊಂಡಿತ್ತು. ಏಕಕಾಲದಲ್ಲಿ ಎರಡು ಕೇಂದ್ರಗಳಿಂದ ಸಾಳ್ವರ ಎರಡು ಶಾಖೆಗಳು ಆಳುತ್ತಿದ್ದವು. ವಿಜಯನಗರ ಕಾಲದಲ್ಲಿ ಮಂಗಳೂರು, ಬಾರ್ಕೂರು ಹಾಗೂ ಹೊನ್ನಾವರಗಳಲ್ಲಿ ರಾಜ್ಯಪಾಲರು ಉಳಿದುಕೊಂಡು ಆಳಿದರು.

ಆಡಳಿತವು ಕೇವಲ ರಾಜನೊಬ್ಬನಿಂದ ನಡೆಸಲ್ಪಡತ್ತಿರಲಿಲ್ಲ. ರಾಜ ಕೇಂದ್ರದ ಪ್ರಮುಖನಾಗಿದ್ದನು. ಆತನ ಆಜ್ಞೆಯೇ ಅಂತಿಮವಾಗಿತ್ತು. ಆದರೆ ಕೇಂದ್ರಪಟ್ಟಣ, ರಾಜಧಾನಿಯು ರಾಜನ ನೇರದಲ್ಲಿ ಆಡಳಿತಕ್ಕೆ ಒಳಪಟ್ಟು, ರಾಜನಿಂದ ನೇಮಿಸಲ್ಪಟ್ಟ ಮಂತ್ರಿಗಳಿಂದ, ಆಡಳಿತಾಧಿಕಾರಿಗಳಿಂದ ಆಳಲ್ಪಡುತ್ತಿತ್ತು. ಇಲ್ಲಿ ಆಳುವುದೆಂದರೆ ಉಳಿದ ಜನಸಮೂಹವನ್ನು ನಿಯಂತ್ರಣದಲ್ಲಿಡುವುದು ಮತ್ತು ಕಾಲಕಾಲಕ್ಕೆ ಪ್ರಭುತ್ವ ವಿಧಿಸಿದ ತೆರಿಗೆಗಳನ್ನು ಸಂಗ್ರಹಿಸುವುದು

ಆಗಿತ್ತು. ವ್ಯಾಪಾರಿ ಪಟ್ಟಣಗಳಲ್ಲಿ ಶಾಂತಿ ಸುವ್ಯವಸ್ಥೆಯ ನಿರ್ಮಾಣವು ತೆರಿಗೆ ವಸೂಲಿಯಷ್ಟೇ ಮುಖ್ಯವಾಗಿತ್ತು. ವ್ಯಾಪಾರಿ ಗುಂಪುಗಳ ನಡುವೆ ಬರುವ ವ್ಯಾಜ್ಯವನ್ನು ತೀರ್ಮಾನಿಸುವುದು, ನಗರವನ್ನು ಭಯ ಮುಕ್ತವಾಗಿಸಿ ವರ್ತಕ ಸಮೂಹಕ್ಕೆ ರಕ್ಷಣೆ ನೀಡುವುದು ಮತ್ತು ಪರರಾಜ್ಯದ ದಾಳಿಯಿಂದ ನಾಡನ್ನು ರಕ್ಷಿಸುವುದು ಆಡಳಿತದ ಮುಖ್ಯ ಕೆಲಸಗಳಾಗಿದ್ದವು. ಕೆರೆ, ಕಾಲುವೆ ನಿರ್ಮಾಣ, ನಗರ ಪಟ್ಟಣದ ಸುವ್ಯವಸ್ಥೆಗಳು ಇದರಲ್ಲಿದ್ದಿತ್ತು. ಹಳ್ಳಿಗಳಲ್ಲಿ ಕೃಷಿಗೆ ವ್ಯವಸ್ಥೆ, ಕೈಗಾರಿಕಾಪಟ್ಟಣಗಳ ವ್ಯವಸ್ಥೆಯು ಒಳಗೊಂಡಿತು.

ಈ ಎಲ್ಲ ಕೆಲಸಗಳು ಸುಲಲಿತವಾಗಿ ನಡೆಸಲು ಪ್ರಭುತ್ವ ಹಲವಾರು ಆಡಳಿತ ಅಧಿಕಾರಿಗಳನ್ನು, ಮಂತ್ರಿಗಳನ್ನು ನೇಮಿಸಿ ಕೊಂಡಿತ್ತು. ಸೈನ್ಯದ ದಂಡಾಧಿಕಾರಿ, ಸಂಧಿ ವಿಗ್ರಹಿ, ಹಾಗೂ ವಿವಿಧ ವರ್ತಕ ಶ್ರೇಣಿಯ ಮುಖಂಡರುಗಳ ಸಹಾಯವನ್ನು ರಾಜನು ಈ ಕೆಲಸದಲ್ಲಿ ಪಡೆಯುತ್ತಿದ್ದನು. ಆಡಳಿತಾನುಕೂಲತೆಗಾಗಿ ಕರಾವಳಿಯಲ್ಲಿ ಅನೇಕ ಅಧಿಕಾರಿಗಳನ್ನು ನೇಮಿಸಿಕೊಂಡಿರುವುದು ಶಾಸನಗಳಲ್ಲಿ ಪ್ರಾಚೀನಸಾಹಿತ್ಯಗಳಲ್ಲಿ ಕಂಡುಬರುತ್ತವೆ.

ಮೌರ್ಯರ ಕಾಲದಲ್ಲಿ ಕರಾವಳಿಯಲ್ಲಿ ರಾಜ್ಯಾಧಿಕಾರವು ಕೇಂದ್ರಿಕೃತ ಆಡಳಿತವಾಗಿತ್ತು. ಸಮಗ್ರ ಭಾರತಕ್ಕೆ ಏಕಚಕ್ರಾಧಿಪತ್ಯ ಕಲ್ಪಿಸಿದ ಕೀರ್ತಿ ಮೌರ್ಯರದು. ದಕ್ಷಿಣದ ಪ್ರಾಂತವಾಗಿದ್ದಿರಬಹುದಾದ ಕರ್ನಾಟಕದ ಭೂ ಭಾಗಗಳನ್ನು ಪಾಲಿಸಲು ಅಧಿಕಾರಿಗಳನ್ನು ನೆಮಿಸಿಕೊಂಡಿದ್ದರು. ಇಸಿಲ ಪಟ್ಟಣವು ದಕ್ಷಿಣದ ಕೇಂದ್ರವಾಗಿದ್ದಿರಬೇಕೆಂದು[೪೨] ಚರಿತ್ರೆಕಾರರು ಊಹಿಸಿದ್ದಾರೆ. ಗ್ರಾಮಾಂತರ ಮತ್ತು ಜಿಲ್ಲೆಗಳ ಕಲ್ಯಾಣಕ್ಕಾಗಿ ರಾಜುಕರು ಮತ್ತು ಪ್ರಾದೇಶಕರು, ನಗರಾಡಳಿತಕ್ಕಾಗಿ ಮಹಾಮಾತ್ರರು, ಗುಮಾಸ್ತರು (ಯುಕ್ತರು), ಲಿಪಿಕಾರರು, ವರದಿಯನ್ನೊಪ್ಪಿಸುವ ಪಥಿವೇದಕರು ಮುಂತಾದವರು ಆಡಳಿತ ವ್ಯವಸ್ಥೆಯ ಅಧಿಕಾರಿಗಳಾಗಿದ್ದರು[೪೩]. ರಾಜಧಾನಿ ಕೇಂದ್ರ ದೂರದಲ್ಲಿದ್ದರೂ ಇಂಥಹ ವ್ಯವಸ್ಥೆಯ ಮೂಲಕ ಅಶೋಕನು ಅನೇಕ ಅಧಿಕಾರಿಗಳನ್ನು ನೇಮಿಸಿಕೊಂಡು[೪೪] ರಾಜ್ಯಭಾರ ನಡೆಸಿದ್ದನು.

ಶಾತವಾಹನರ ಕಾಲದಲ್ಲಿ ಭಂಡಾಗಾರಿಕ, ಹೇರಣಿಕ, ಲೇಖಕ, ನಿಬಂಧಕ, ಮಹಾರಥಿ, ಮಹಾಭೋಜ ಎಂಬ ಮಾಂಡಲಿಕರು. ಅಮಾತ್ಯ, ಪ್ರತಿಹಾರ, ಮಹಾಸೇನಾಪತಿ ಮುಂತಾದವರು ಹಾಗೂ ಶಾಸನಗಳ ರಕ್ಷಣೆಗೆ ಪಟ್ಟಕಪಾಲ, ಶಾಸನಗಳನ್ನು ಜಾರಿಗೊಳಿಸುವ ನಿಯೋಗಿ ಹಾಗೆಯೆ ಗ್ರಾಮಗಳನ್ನು ಆಳುವ ಗ್ರಾಮಣಿ ಮುಂತಾದ ಆಡಳಿತಾಧಿಕಾರಿಗಳಿದ್ದರು.

ಕದಂಬರು ಸ್ಥಳೀಯರಾಗಿದ್ದು, ಆರಂಭಿಕ ಸಾಮ್ರಾಟರಾಗಿದ್ದರಿಂದ ಇವರ ಆಡಳಿತಾಧಿಕಾರಿಗಳ ಪದವಿ ಹಾಗೂ ಆಡಳಿತ ಕಾರ್ಯಬಾಹುಳ್ಯ ಸರಳವಾಗಿತ್ತು. ಆಡಳಿತಾನುಕೂಲತೆಗೆ ಪಾರಂಪರಿಕ ಪದ್ಧತಿ ಅವಲಂಭಿಸಿದ್ದರು. ಇವರ ಕಾಲದಲ್ಲಿ

ಮಂತ್ರಿಮಂಡಲವಿರುತ್ತಿತ್ತು. ಐದು ಜನರ ಮಂತ್ರಿಮಂಡಲವಿದ್ದು. ಪಾರುಪತ್ಯಗಾರ, ತಂತ್ರಪಾಲ, ಪ್ರಧಾನ, ತಾಂಬೂಲ ಪಾರುಪತ್ಯಗಾರ ಕಾರ್ಯದರ್ಶಿ[೪೫] ಗಳಾಗಿ ವಿಭಾಗಿತರಾಗಿದ್ದರು. ರಜ್ಜುಕ[೪೬], ಭೋಜಕ[೪೭], ಸೇನಾಪತಿ[೪೮], ಆಯುಕ್ತಕ[೪೯], ರಹಸ್ಯಾದಿಕೃತ[೫೦], ನಾಡಿನ ಶಾಂತಿ ಪಾಲನೆ-ರಕ್ಷಣೆಗೆ ದಂಡನಾಯಕ ಹಾಗೂ ಹಳ್ಳಿಗಳ ಆಡಳಿತ ಗ್ರಾಮಿಕ, ಜಿಲ್ಲೆಯ ಆಡಳಿತವನ್ನು ಮನ್ನೆಯರು ನೋಡಿಕೊಳ್ಳುತ್ತಿದ್ದರು. ಇನ್ನೂ ನ್ಯಾಯದಾನದಲ್ಲಿ ರಾಜನಿಗೆ ಸಹಾಯನೀಡಲು ಧರ್ಮಾಧ್ಯಕ್ಷನೆಂಬ ನ್ಯಾಯಾಧೀಶನಿರುತ್ತಿದ್ದ.

ಚಾಲುಕ್ಯರ ಆಡಳಿತದಲ್ಲಿ ಸಣ್ಣ ಬದಲಾವಣೆಗಳಾಗಿದ್ದು, ಅವರು ತಮ್ಮ ರಾಜ್ಯದ ಭಾಗಗಳನ್ನು ವಿಷಯ ಹಾಗೂ ನಾಡುಗಳಾಗಿ ವಿಭಾಗಿಸಿಕೊಂಡು ವಿಷಯಾಧಿಪತಿ ಹಾಗೂ ವಿಷಯಾಧಿಕರಣ ಎಂಬ ಅಧಿಕಾರಿಗಳನ್ನು[೫೧] ನೇಮಿಸಿಕೊಂಡಿದ್ದರು. ಇವರು ಮಂಡಲಾಧಿಪತಿ ಹಾಗೂ ಪ್ರಾಂತ್ಯಾಧಿಪತಿ ಎಂಬ ಅಧಿಕಾರಿಗಳನ್ನು ಹೊಂದಿದ್ದು ತಿಳಿಯುತ್ತದೆ. ಗ್ರಾಮಗಳ ಆಡಳಿತಕ್ಕೆ ವಿಶಿಷ್ಟವಾದ ರೀತಿಯನ್ನು ಅಳವಡಿಸಿದ್ದರು. ಕುಟುಂಬಗಳ ಪ್ರಮುಖರೆಲ್ಲರೂ ಸೇರಿ ಆಡಳಿತ ಮಂಡಳಿ ರೀತಿಯ ವ್ಯವಸ್ಥೆ ರೂಪಿಸಿಕೊಂಡಿದ್ದರು. ಕುಟುಂಬದ ಮುಖ್ಯಸ್ಥರ ಈ ಸಮಿತಿಗೆ ಒಬ್ಬ ಮುಖ್ಯಸ್ಥನಿದ್ದು, ಆತನಿಗೆ ಗಾವುಂಡ ಎಂದೂ, ಕುಟುಂಬಗಳ ಮುಖ್ಯಸ್ಥರ ಸಮಿತಿಗೆ ಮಹಾಜನ[೫೨] ಎಂದು ಕರೆಯುತ್ತಿದ್ದರು. ಇವರೆಲ್ಲರ ಸಹಯೋಗದಲ್ಲಿ ಗ್ರಾಮಾಡಳಿತವು ನಡೆಯುತ್ತಿತ್ತು. ಇವರ ಸಹಾಯಕ್ಕೆ ಗ್ರಾಮ ಭೋಗಿಕ ಅಥವಾ ಕರಣ ಎಂಬ ಅಧಿಕಾರಿಗಳಿದ್ದರು[೫೩].

ರಾಷ್ಟ್ರಕೂಟರ ಕಾಲದಲ್ಲಿ ಆಡಳಿತದಲ್ಲಿ ಹೆಚ್ಚಿನ ಬದಲಾವಣೆಗಳು ಉಂಟಾಗಲಿಲ್ಲ. ಆದರೆ ಅವರು ರಾಜ್ಯವನ್ನು ರಾಷ್ಟ್ರವೆಂದು ವಿಭಾಗಿಸಿದ್ದು ಹಿಂದಿದ್ದ ಪ್ರಾಂತ್ಯಾಧಿಕಾರಿಯ ಕೆಲಸವನ್ನು ರಾಷ್ಟ್ರಪತಿ ಮಾಡುತ್ತಿದ್ದ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಸಂಧಿವಿಗ್ರಹಿ ಎಂಬ ರಾಜಕೀಯ ತಂತ್ರಜ್ಞ ಹಾಗೂ ಮನೆವೆರ್ಗ್ಗಡೆ, ಇಬ್ಬರು ತಂತ್ರಪಾಲರು, ಒಬ್ಬ ಸೇನಬೋವ, ಪ್ರಧಾನ ಸಂಧಿವಿಗ್ರಹಿ, ಬಾಣಸವೆರ್ಗಡೆ, ಅಂತಾಪುರದ[೫೪] ಎಂಬ ಅಧಿಕಾರಿಗಳೂ ಕಂಡುಬರುತ್ತಾರೆ. ಮಹಾಜನರಿಂದ ಕೂಡಿದ ಗ್ರಾಮಾಡಳಿತ ಗ್ರಾಮಸಭೆ ಇವರಕಾಲದಲ್ಲಿ ಕಂಡುಬಂದಿತು. ಮಹಾಜನರು ಬ್ರಾಹ್ಮಣರಾಗಿದ್ದರು[೫೫].

ಹೊಯ್ಸಳರ ಕಾಲದಲ್ಲಿ ರಾಜ್ಯಾಡಳಿತಕ್ಕೆ ಶ್ರೀಕರ್ಣಾಧಿಕಾರಿ ಮತ್ತು ಮಹಾಪಸಯತ[೫೬] ಎಂಬ ಎರಡು ವಿಶಿಷ್ಟ ಅಧಿಕಾರಿಗಳನ್ನು ಕಾಣಬಹುದು. ಇವರ ರಾಜ್ಯದ ವಿಭಾಗಗಳಾದ ವಿವಿಧ ನಾಡುಗಳಿಗೆ ಹೆಗ್ಗಡೆ, ನಾಡ ಹೆಗ್ಗಡೆ, ರಾಜ್ಯಾಧ್ಯಕ್ಷ, ಕರಣಿ ಎಂಬ ಅಧಿಕಾರಿಗಳಿದ್ದರು. ವಿಜಯನಗರ ಕಾಲದಲ್ಲಿ ಆರಂಭದಲ್ಲಿ ರಾಜ ಕುಟುಂಬದವರೇ ಕರಾವಳಿಯ ಕೆಲವು ಪ್ರಮುಖ ಕೇಂದ್ರಗಳಲ್ಲಿ ನೆಲೆನಿಂತು ಆಳಿದರು. ಮುಂದೆ ರಾಜ್ಯಪಾಲರು ಎಂಬ ಅಧಿಕಾರಿ ವರ್ಗ ಆಳಿತು.

ಸಾಮಂತರ ಕಾಲದಲ್ಲಿ ಅಧಿಕಾರಗಳು ಕರಾವಳಿಯ ಪ್ರದೇಶಗಳು ಸಾಮಂತರ ಅಧೀನದಲ್ಲಿದ್ದರಿಂದ ಇಲ್ಲಿ ಆಳಿದ ಸಾಮಂತರುಗಳೆ ಆಡಳಿತದ ಮುಖ್ಯಸ್ಥರಾಗಿದ್ದರು. ಇವರು ಸ್ಥಳೀಯ ಆಡಳಿತ ನೋಡಿಕೊಳ್ಳಲು ಅನೇಕ ಅಧಿಕಾರಿಗಳನ್ನು ನೇಮಿಸಿಕೊಂಡಿದ್ದರು. ಅವರಲ್ಲಿ ಮುಖ್ಯವಾಗಿ, ಮಹಾಮಂಡಲೇಶ್ವರ, ಮಂಡಲೇಶ್ವರ, ಮಹಾಪ್ರಧಾನ, ಪ್ರಧಾನದಂಡನಾಯಕ, ಮಹಾದಂಡನಾಯಕ, ಮಾಂಡಳಿಕ, ಸಾಮಂತ, ದೇಶಾಧಿಪತಿ, ಸ್ಥಾನದ ಕರ್ತ (ಸ್ಥಾನಿಕ), ಅರಸ, ಅಧಿಕಾರಿ, ಭೂಷಣ ಅಧಿಕಾರಿ, ಮಧ್ಯಸ್ಥ, ಹೆಗ್ಗಡೆ, (ಪೆರ್ಗಡೆ) ಅಧಿವಾಸಿ, ಅಧ್ಯಕ್ಷ, ಸೇನಭೋವ, ಸೇನಪ (ನಾಡಸೇನ ಭೋವ) ಕರಣಿಕ (ಧರ್ಮಕರಣಿಕ), ಮಹಾಪ್ರಭು, ಸೇನಾಪತಿ, ತಂತ್ರಾಳ, ತಂತ್ರಿ, ನಾಯಕ, ಪಟ್ಟಣಸೆಟ್ಟಿ, ಅಡಪ (ಹಡಪ), ಗ್ರಾಮಣಿ, ಪುರೋಹಿತ, ಭಂಡಾರಿ, ಅಠವಣಿಯ, ಅಯ್ಯ, ಜಂನಿ(ಜನನಿ), ಊರಾಳ, ಅಸ್ರಂಣ, ಗುರಿಕಾರ, ಕೊಟ್ವಾರಿ, ಬಲ್ಲಾಳ, ಬಂಟ, ಕಲ್ಲುಕುಟಿಕ (ಕಲ್ಕುಡ), ಬುದ್ಧಿವಂತ, ದೇವರದೇವ, ಪರಿಚಾರಕ, ಪುರಾಣಿಕ, ಗೌಡ, ಜಾತಿಕಾರ, ರಾಜಗುರು, ಬ್ರಹ್ಮರು, ದಳವಾಯಿ, ತೋಳಾರ (ತೊಳಹ), ಸೆಟ್ಟಿಕಾರ, ಹೊಣೆಗಾರ, ಪೂಜಾರಿ, ಅಡಿಗಳು, ಮಂಡಲದ, ಧಿದೇವ ಸುಂಕದೊಡೆಯ, ಭಟ್ಟಾರಕ ಮುಂತಾದ ಆಡಳಿತಾಧಿಕಾರಿಗಳ್ನು ಶಾಸನಗಳಲ್ಲಿ, ಸಾಹಿತ್ಯದಲ್ಲಿ ನೋಡಬಹುದಾಗಿದೆ.

ಇನ್ನೂ ಕೆಲವು ಆಡಳಿತಗಾರ ಅಧಿಕಾರಿಗಳಿದ್ದು, ನಾಡುಗಳನ್ನಾಳುತ್ತಿದ್ದ ಅಧಿಕಾರಿಗಳು 'ನಾಟ್ಟು ಮುದಿಮೆ ಉಳ್' ಹಾಗೂ ಉಪವಿಭಾಗ ಆಳುತ್ತಿದ್ದ 'ಮುದಿಮೆ' 'ಮುದೆಮೆಕೆಯ' ಎಂಬ ಅಧಿಕಾರಿಗಳಿದ್ದರು[೫೭]. ನಾಯಕ ಅಥವಾ ನಾಯ್ಗರು, ಪಾಂಡ್ಯ ನಾಯ್ಗರು, ಪೆರ್ಗಡೆ, ಅಧಿಕಾರಿ, ಒಡೆಯ, ಕಟ್ಟಳೆಯವರು, ಬಲ್ಲಾಳರು, ಸೇನಭೋವ, ಊರಾಳುವ, ಶ್ರೀಕರಣ, ಸಾಹಣಿ ದಂಡಸಾಣಿ, ಸಮಸ್ತ ಪ್ರಧಾನರು, ಪುರೋಹಿತರು[೫೮] ಮುಂತಾದವರು ಕಂಡು ಬರುತ್ತಾರೆ. ಅಂತೆಯೇ ಕೆಲವು ಊರುಗಳಿಗೆ ಆಡಳಿತಗಾರರಾಗಿದ್ದವರ ಸಂಖ್ಯೆಯೂ ದೊರೆಯುತ್ತದೆ. ಊರುಆರುವರು, ಪಿಜಿಮೊಗರುಊರುಎಂಟು, ಕಾಸಿನಊರು, ಹತ್ತುಪ್ರಜೆ, ನೀರುವಾರ ಹದಿನಾರು, ಚಕ್ಕರೆಊರು ಮೂವತ್ತು, ಗಿಳಿಯಾರದಊರು ನಾಲ್ವರು, ಊರು ಐವತ್ತೆರಡು ಒಕ್ಕಲು, ಶಿವಪುರ ಗ್ರಾಮದ ನೂರ್ವರು, ಸ್ಥಾನಿಕ ಗ್ರಾಮ ಮುನ್ನೂರು, ಕಿದಿಯೂರು ಮುನ್ನೂರು, ಹಂದಾಡಿಯ ಗ್ರಾಮ ಸಾಸಿರ್ವರು ಮತ್ತು ಕೋಟದ ಸಾಸಿರ್ವರು[೫೯] ಮುಂತಾದ ಹೆಸರುಗಳಲ್ಲಿ ಗ್ರಾಮಗಳನ್ನಾಳಲು ಸದಸ್ಯರನ್ನು ಅಧಿಕಾರಸ್ಥರನ್ನು ನೇಮಿಸಿಕೊಂಡಿದ್ದರು. ತಳರ ಅಥವಾ ತಳವಾರ[೬೦] ಎಂಬ ಅಧಿಕಾರಿ ಗ್ರಾಮಾಡಳಿತದಲ್ಲಿ ಭಾಗಿಯಾಗಿರುತ್ತಿದ್ದರು.

ಇವರೆಲ್ಲರೊಂದಿಗೆ, ಕರಾವಳಿಯಲ್ಲಿ ಪ್ರಬಲ ವ್ಯಾಪಾರಿಗಳಾಗಿದ್ದ ನಖರರು, ಶೆಟ್ಟಿ, ಹಂಜಮಾನರು, ಸೆಟ್ಟಿಕಾರರು, ಹಲರು, ನಾನಾದೇಸಿಗಳು, ಉಭಯನಾನಾ ದೇಸಿಗಳು,

ಹೊರಹಿನವರು, ಎಳಮೆಗೋಳಗಾದವರು, ಸಮಸ್ತಹಲರು ಮುಂತಾದ ವ್ಯಾಪಾರಿ ಶ್ರೇಣಿಗಳ ಮುಖ್ಯಸ್ಥರು ಅಥವಾ ಗುಂಪು ಆಡಳಿತದಲ್ಲಿ ಭಾಗಿಗಳಾಗಿದ್ದು ಅನೇಕ ಶಾಸನಗಳಿಂದ ತಿಳಿಯುತ್ತದೆ.

ಇನ್ನೂ ಕೆಲವು ಅಳುಪರ ಕಾಲದ ಆಡಳಿತಾಧಿಕಾರಿಗಳು ಇಂತಿದ್ದರು. ಬಾಹತ್ತರನಿಯೋಗಿಗಳು ಎಂಬ ಪ್ರಸ್ತಾಪ ಶಾಸನಗಳಲ್ಲಿ ಬರುತ್ತದೆ. ಇದು ಎಪ್ಪತ್ತೆರಡು ಇಲಾಖೆಗಳನ್ನು ಅದರ ಆಡಳಿತಗಾರರನ್ನೂ ಸೂಚಿಸುತ್ತದೆ. ಸಹಣಿ ಸಾಧನಿಕ, ದಂಡಪಾಣಿ, ಬೇಹಾರಿ[೬೧]ಗಳು ಮತ್ತು ರಾಜನ ರಾಣಿಯರು, ಮಕ್ಕಳೂ, ಅಳಿಯಂದಿರೂ ಆಡಳಿತಗಾರರಾಗಿಯೂ, ಸಲಹೆಗಾರರಾಗಿಯೂ ಇದ್ದುದ್ದು ತಿಳಿಯುತ್ತದೆ.

ಆಡಳಿತ ಎಂಬ ವಿಚಾರ ಬಂದಾಗ, ಇಲ್ಲಿ ಒಂದು ಕೇಂದ್ರ ಹಾಗೂ ಇತರ ಎಂಬ ವಿಭಾಗಗಳು ಕಂಡು ಬರುತ್ತವೆ. ಕರ್ನಾಟಕದಲ್ಲಿ ಸಾಮ್ರಾಜ್ಯಗಳ-ರಾಜ್ಯಗಳ ಹಾಗೂ ವಿಭಾಗ-ಗ್ರಾಮಗಳ ಆಡಳಿತವನ್ನು ನೋಡುವ ಮೊದಲು ಸಾಮ್ರಾಜ್ಯ ಒಂದರ ಆಡಳಿತ ಕರ್ನಾಟಕವನ್ನು ಪ್ರವೇಶಿಸಿದ ಕಾಲಾವಧಿಯನ್ನು ನೋಡಬೇಕು. ಬಹುತೇಕವಾಗಿ ಮೌರ್ಯರ ಕಾಲದಲ್ಲಿ ಕರ್ನಾಟಕಕ್ಕೆ ಅಧಿರಾಜಕತ್ವ ಪ್ರವೇಶಿಸಿತು. ಮೌರ್ಯರ ಆಡಳಿತದ ಕುರಿತು ಚಾಣಾಕ್ಯನ ಅರ್ಥಶಾಸ್ತ್ರ ವಿವರಿಸುತ್ತದೆ. ಅಶೋಕನ ಕಾಲದ ಆಡಳಿತಕ್ಕೂ ಪೂರ್ವದ ಮೌರ್ಯರ ಆಡಳಿತಕ್ಕೂ ಅನೇಕ ವ್ಯತ್ಯಾಸಗಳು ಕಂಡು ಬರುತ್ತವೆ. ಮೌರ್ಯರ ಕಾಲದಲ್ಲಿ ಮಂತ್ರಿಪರಿಷದ್ ಆಡಳಿತ ವ್ಯವಸ್ಥೆ ನೋಡಿಕೊಳ್ಳುತ್ತಿತ್ತು[೬೧]. ಇಲ್ಲಿ ರಾಜನು ಮುಖ್ಯಸ್ಥನಾಗಿದ್ದು, ಮಂತ್ರಿಗಳ ಮೂಲಕ ರಾಜ್ಯಾಡಳಿತ ನಡೆಸುತ್ತಿದ್ದನು. ಅಶೋಕನ ಕಾಲದ ಆಡಳಿತ ಪ್ರಜಾಸತ್ತಾತ್ಮಕ ಚರ್ಚೆಗಳೊಂದಿಗೆ ನಡೆದಿತ್ತೆನ್ನಬಹುದು. ಮಂತ್ರಿಗಳು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುತ್ತಿದ್ದರು. ಮುಂದೆ ಬಂದ ಸಭಾ ಎಂಬ ಆಡಳಿತ ವಿಭಾಗವು ಗ್ರಾಮ ಪ್ರದೇಶದ ಪ್ರತಿನಿಧಿಗಳಿಂದ ಕೂಡಿತ್ತು[೬೨]. ಕರ್ನಾಟಕದ ಸುವರ್ಣಗಿರಿಯಲ್ಲಿ ಇವರ ಒಂದು ಕೇಂದ್ರವಿದ್ದು[೬೩], ಇದನ್ನು ದಖ್ಖನ್‌ದ ರಾಜಧಾನಿಯನ್ನಾಗಿ ಮಾಡಿಕೊಂಡು, ಆರ್ಯಪುತ್ರ (ಆಡಳಿತಗಾರನನ್ನು) ನೇಮಿಸಿ, ಅವನ ಸಹಾಯಕ್ಕೆ ಮಹಾಮಾತ್ರರನ್ನಿಟ್ಟು ಆಡಳಿತ ನಡೆಸಿದ್ದನು. ಇಂಥಹ ಆಡಳಿತದಲ್ಲಿ ಇಸಿಲ, ಸನ್ನತಿ ಮುಂತಾದವುಗಳು ಮಹಾಮಾತ್ರರ ಅಧೀನದಲ್ಲಿದ್ದಿರಬೇಕು. ಈ ಅಧಿಕಾರಿಗಳು ತೆರಿಗೆಯನ್ನು ಸಂಗ್ರಹಿಸಿ ಕೇಂದ್ರಕ್ಕೆ ಕಳಿಸುತ್ತಿದ್ದರು. ಮೌರ್ಯಕಾಲದಲ್ಲಿಯ ಸ್ಥಳೀಯ ಆಡಳಿತ, ತೆರಿಗೆ ಸಂಗ್ರಹದ ಕುರಿತು ಅನೇಕ ಅಧ್ಯಯನಗಳು ನಡೆದಿವೆ. ಮೌರ್ಯರ ಸಮಕಾಲೀನರಲ್ಲಿ ಪೂರ್ವ ದಕ್ಷಿಣ ಭಾರತಕ್ಕೆ ಸೇರಿದ ರಾಜರು ಯಾರೂ ಇಲ್ಲ, ರಾಜ್ಯಗಳೂ ಇಲ್ಲ. ವಿವಿಧ ಹಂತಗಳ ಪ್ರಗತಿಯನ್ನು ಕಂಡಿದ್ದ ಸಮುದಾಯಗಳು ಮಾತ್ರವೇ ಇದ್ದದ್ದು[೬೪] ಎಂದು ಗುರುತಿಸಿದ್ದಾರೆ. ಇಂಥಹ ಸ್ಥಿತಿಯಲ್ಲಿ ಜನರಿಗೆ ಸ್ವತಂತ್ರರಾಗಿ ಬದುಕು ನಡೆಸುವುದು, ಬೇಕಾದ ಎಲ್ಲ ಬಗೆಯ ಉತ್ಪಾದನೆಗಳನ್ನು ಒಂದೇ ಸ್ಥಳದಲ್ಲಿ

ಪಡೆಯುವುದು ಸಾಧ್ಯವಿರಲಿಲ್ಲ. ಮೌರ್ಯರ ಕಾಲವು ಪ್ರಾಚೀನ ಭಾರತದ ತೆರಿಗೆ ಪದ್ಧತಿಯ ಪ್ರಮುಖ ಘಟ್ಟ[೬೫]. ಇವರಕಾಲದಲ್ಲಿ ವಿವಿಧ ಬಗೆಯ ತೆರಿಗೆಗಳನ್ನು ಅಧಿಕಾರಿಗಳು ವಸೂಲುಮಾಡುತ್ತಿದ್ದರು. ಅಧಿಕಾರಿಗಳಿಗೆ ಧಾರಾಳವಾಗಿ ಸಂಬಳ ನೀಡಲಾಗುತ್ತಿತ್ತು. ಗೂಢಾಚಾರ ವಿಭಾಗ ಅತ್ಯಂತ ಪ್ರಬಲವಾಗಿತ್ತು[೬೬]. ಶಾತವಾಹನರ ಕಾಲದಲ್ಲಿ ಅನೇಕ ಅಧಿಕಾರದ ಹಂತಗಳು ನಿರ್ಮಾಣಗೊಂಡವು. ಶಾತವಾಹನರು ಕರ್ನಾಟಕದ ಕರಾವಳಿಯಲ್ಲಿ ನೇರ, ಪರೋಕ್ಷ ಆಡಳಿತ ನಡೆಸಿದ್ದರಿಂದ, ಇವರ ಅಧಿಕಾರಿ ವರ್ಗಗಳ ಪರಿಚಯ ದೊರೆಯುತ್ತದೆ. ಮಹಾರಾಷ್ಟ್ರ, ಮಹಾಭೋಜ ಎಂಬ ಸಾಮಂತರುಗಳಿದ್ದರೆಂದು ಗುರುತಿಸಲಾಗಿದ್ದು, ಬನವಾಸಿಯ ಶಾಸನದಲ್ಲಿ ಉಲ್ಲೇಖಿತರಾಗಿರುವ ರಾಜನ ಮಗಳೊಬ್ಬಳು ಮಹಾಭೋಜಿ ಆಗಿದ್ದಳೆನ್ನಲಾಗಿದೆ[೬೭]. ಅಂತೆಯೇ ಅವರ ಕಾಲದ ಅಮೋಚ್ ಎಂಬ ಪದವಿಯ ಅಧಿಕಾರಿ, ಮಹಾರಥಿ ಹಾಗೂ ಮಹಾ ಸೇನಾಪತಿಗಳು ಇತರ ಅಧಿಕಾರಿ ವರ್ಗಗಳಾಗಿದ್ದರು. ಮಹಾಸೇನಾಪತಿ ಎಂಬುವನು ಆಹರ (ಜಿಲ್ಲೆಗೆ)ದ ಅಧಿಪತಿಯಾಗಿದ್ದನು[೬೮]. ಶಾತವಾಹನರ ಕಾಲದಲ್ಲಿ ಗ್ರಾಮಗಳು ಕೃಷಿ ಉತ್ಪಾದನಾ ಸ್ಥಳಗಳಾಗಿಯೂ ನಗರಗಳು ವ್ಯಾಪಾರಿ ಕೇಂದ್ರಗಳಾಗಿ ಬೆಳೆದು ಬಂದವು. ಇವರ ಕಾಲದಲ್ಲಿ ವಿವಿಧ ಶ್ರೇಣಿಗಳು ರಚನೆಗೊಂಡು ತಮ್ಮ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಕೊಂಡಿದ್ದವು. ಕಡಲೋತ್ತರ ವ್ಯಾಪಾರಕ್ಕೆ ತೆರೆದುಕೊಂಡ ಪಟ್ಟಣಗಳು ಪಶ್ಚಿಮ ತೀರದಲ್ಲಿ ಕಂಡುಬರಲಾರಂಭಿಸಿದವು. ವರ್ತಕರ ಶ್ರೇಣಿ, ಸಂಘಟನೆಗಳು, ರಾಜ್ಯದ ಅಧಿಕಾರಿಗಳೊಡಗೂಡಿ ನಗರಗಳ, ಬಂದರುಪಟ್ಟಣಗಳ ಆಡಳಿತದಲ್ಲಿ–ಆರ್ಥಿಕ ಚಟುವಟಿಕೆಗಳಲ್ಲಿ ಅಂದರೆ ಮುಖ್ಯವಾಗಿ ಬೌದ್ಧ, ಜೈನ ಮತ್ತು ಇತರ ಧಾರ್ಮಿಕ ಸಂಸ್ಥೆಗಳಿಗೆ ಸಾರ್ವಜನಿಕರು ದತ್ತಿಯಾಗಿ ಕೊಟ್ಟ ನಿಧಿಯನ್ನು ಅಧಿಕ ಕಾಲಾವಧಿಯ ಠೇವಣಿಯ ರೂಪದಲ್ಲಿ ಈ ಸಂಘಗಳು ಪಡೆದು, ಬಡ್ಡಿಯ ಹಣವನ್ನು ಆಯಾ ಸಂಸ್ಥೆಗಳಿಗೆ ದತ್ತಿಯಗಿ ಉದ್ದೇಶಿಸಿದ ಖರ್ಚುಗಳಿಗೆಂದು ಕೊಡುತ್ತಿದ್ದರು[೬೯]. ಹೀಗೆ ವ್ಯಾಪಾರಿಗಳು ಆರ್ಥಿಕ ಚಟುವಟಿಕೆಗಳ ಮೂಲಕ ಆಡಳಿತದಲ್ಲಿ ಸಹಭಾಗಿಗಳಾಗುವ ಪದ್ಧತಿ ಬೆಳೆದು ಬಂದಿತು. ಬನವಾಸಿ, ಶಾತವಾಹನರ ಕೇಂದ್ರವಾಗಿದ್ದಂತೆ ಕಾರವಾರದಿಂದ ಮಂಗಳೂರಿನವರೆಗಿನ ಬಂದರುಗಳಲ್ಲಿ ಶಾತವಾಹನ ಅಥವಾ ಅವರ ಸಾಮಂತರ ಪ್ರಭುತ್ವ ನಡೆದಿತ್ತು.

ಕದಂಬರು ಕಡಲನ್ನೇ ಆಶ್ರಯಿಸಿ ತಮ್ಮ ಬದುಕನ್ನು ಕಂಡುಕೊಂಡವರು. ಬನವಾಸಿ ಕೇಂದ್ರವಾಗಿಸಿಕೊಂಡು ತಮ್ಮ ಅಧಿಪತ್ಯ ಸ್ಥಾಪಿಸಿ ಸರಿಸುಮಾರು ಎರಡೂಕಾಲು ಶತಮಾನಗಳ ಕಾಲ ಸ್ವತಂತ್ರ ಸಾಮ್ರಾಜ್ಯ ನಡೆಸಿದವರು. ಕರಾವಳಿಯ ಬಂದರುಗಳು ಇವರ ಸುಪರ್ದಿನಲ್ಲಿದ್ದರೂ, ರೇವು ಪಟ್ಟಣಕ್ಕೆ ಪ್ರತ್ಯೇಕ ಆಡಳಿತವನ್ನು ಮಾಡಿಕೊಂಡಿರಲಿಲ್ಲ. ಶಾತವಾಹನರ ಆಡಳಿತ ಪದ್ಧತಿಯ ವಿಕಸಿತ ರೂಪ ಇವರ ಆಡಳಿತ. ಗ್ರಾಮಿಕ ಅಥವಾ ಗ್ರಾಮದ ಮುಖ್ಯಸ್ಥ ಇಂಥಹ ಕೇಂದ್ರಗಳ ಆಡಳಿತ

ನೋಡಿಕೊಳ್ಳುತ್ತಿದ್ದನು[೨೦]. ಉಪ್ಪಿನ ಮೇಲೆ ವೀಳ್ಯದ ಮೇಲೆ, ಎಣ್ಣೆ ಉತ್ಪಾದನಾ ಕೇಂದ್ರಗಳ ಮೇಲೆ ತೆರಿಗೆ ವಿಧಿಸುತ್ತಿದ್ದರು[೨೧]. ವಿದೇಶಿ ವ್ಯಾಪಾರವು ಕಡಲೋತ್ತರ ಮಾರ್ಗವಾಗಿ ನಡೆಯುತ್ತಿದ್ದರಿಂದ ಬಂದರುಪಟ್ಟಣದಲ್ಲಿ ಆಯಾತ-ನಿರ್ಯಾತದ ಮೇಲೆ ನಿರ್ದಿಷ್ಟ ತೆರಿಗೆ ವಿಧಿಸಿ ವಸೂಲು ಮಡುತ್ತಿದ್ದರು.

ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು ಹಾಗೂ ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಬಂದರು ಪಟ್ಟಣಗಳು ನೇರವಾಗಿಯೋ ಅಥವಾ ಸಾಮಂತರ ಮೂಲಕವೋ ಆಳಲ್ಪಟ್ಟವು. ಕಲ್ಯಾಣಿ ಚಾಲುಕ್ಯರು ಹಾಗೂ ರಾಷ್ಟ್ರಕೂಟರು ಕರಾವಳಿಯ ಬಂದರುಗಳನ್ನು ತಮ್ಮ ವ್ಯಾಪಾರ ಹಾಗೂ ರಾಜತಾಂತ್ರಿಕ ಕೆಲಸಗಳಿಗಾಗಿ ಅವಲಂಭಿಸಿದ್ದರಿಂದ ಈ ರೇವು ಪಟ್ಟಣದ ರಕ್ಷಣೆ, ಆಡಳಿತಗಳ ಬಗ್ಗೆ ಹೆಚ್ಚು ನಿಗಾಯಿರಿಸಿದ್ದರು. ವಿವಿಧ ಅಧಿಕಾರಿಗಳನ್ನು ಇರಿಸಿ ಆಡಳಿತ ಮೇಲ್ವಿಚಾರಣೆ ಮಾಡುತ್ತಿದ್ದರು. ವಿದೇಶಿ ಯಾತ್ರಿಗಳ ಬರವಣಿಗೆಗಳು ಕಡಲೋತ್ತರ ವ್ಯಾಪಾರದಲ್ಲಿ ದಖ್ಖನ್ ಬಂದರುಗಳು ವಹಿಸಿದ್ಧ ಪಾತ್ರವನ್ನು ವಿವರಿಸುತ್ತವೆ. ಹೊಯ್ಸಳರು ಉತ್ತರದತ್ತ ಕಳೆದುಕೊಂಡದ್ದನ್ನು ಪಶ್ಚಿಮದಲ್ಲಿ ಪಡೆಯಲು ಬಂದರು ಪಟ್ಟಣಗಳತ್ತ ತಿರುಗಿದ್ದರು. ಆಳುಪರು ಹಾಗೂ ಚಂದಾವರ ಕಾದಂಬರ ಮೂಲಕ ಬಂದರುಗಳ ವ್ಯಾಪಾರಕ್ಕೆ ನಿಂತರು. ಆಡಳಿತದಲ್ಲಿ ಹೆಚ್ಚು ಕಡಿಮೆ ತಮ್ಮ ಹಿಂದಿನವರನ್ನೇ ಅನುಸರಿಸಿದರೂ, ಇವರ ಅಧೀನ ಸಾಮಂತರು ತಮಗೆ ಬೇಕಾಗಿದ್ದಂತೆ ಪ್ರದೇಶಗಳನ್ನು ವಿಭಾಗಿಸಿ ಕೊಂಡು, ಅಧಿಕಾರಿಗಳನ್ನು ನೇಮಿಸಿ ಕೊಂಡು ಆಳಿದರು. ವಿಜಯನಗರದ ಅರಸರು ಆರಂಭದಿಂದಲೇ ಬಂದರುಗಳನ್ನು ಮುತುವರ್ಜಿಯಿಂದ ಆಳಿದರು. ಇವರ ಕಾಲದಲ್ಲಿ ವಿದೇಶಿ ಕುದುರೆಗಳು, ಯುದ್ಧಾಸ್ತ್ರಗಳು ಬಂದರು ಮೂಲಕವೇ ಬರುತ್ತಿದ್ದವು. ಮಂಗಳೂರು, ಬಾರ್ಕೂರು ಹಾಗೂ ಹೊನ್ನಾವರ ರೇವುಪಟ್ಟಣಗಳಲ್ಲಿ ಇವರ ರಾಜ್ಯಪಾಲರು ವಾಸವಾಗಿದ್ದರು.

ಸಾಮಂತರುಗಳು ಬಂದರು ಪಟ್ಟಣಗಳ ಸಾಮ್ರಾಟರಾಗಿದ್ದರು. ಕದಂಬರ ಹಾಗೂ ಆಳುಪರ ಕಾಲದಿಂದಲೂ ಬಂದರುಗಳು ಸಾಮಂತರ ಅಧೀನವಾಗಿದ್ದವು. ಕೇಂದ್ರದಲ್ಲಾಳಿದ ಶಾತವಾಹನ, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳರ ಕಾಲಾವಧಿ ಹಾಗೂ ವಿಜಯನಗರದ ಕಾಲದಲ್ಲಿ ಈ ಬಂದರುಗಳು ಸಾಮಂತ ಪ್ರಭುಗಳ ನೇರ ಆಡಳಿತಕ್ಕೆ ಒಳಪಟ್ಟಿದ್ದವು. ಸಾಮ್ರಾಟರಿಗೆ ಕೇವಲ ಅಧೀನರೆಂಬ ವಿಧೇಯತೆಯ ಮುದ್ರೆಮಾತ್ರ ಇವರ ಮೇಲಿತ್ತು. ಉಳಿದಂತೆ ಸ್ಥಳೀಯ ಆಡಳಿತದ ಎಲ್ಲ ಜವಾಬ್ದಾರಿಗಳನ್ನು ಇವರೇ ನಿಭಾಯಿಸುತ್ತಿದ್ದರು.

ಕರಾವಳಿಯಲ್ಲಿ ಆಳಿದ ಪ್ರಾಚೀನ ರಾಜಮನೆತನವಾದ ಶಾತವಾಹನರು, ಕರಾವಳಿಯ ಪಟ್ಟಣಗಳಲ್ಲಿ ತಮ್ಮ ಸಾಮಂತರನ್ನೇ ನಂಬಿಕೊಂಡಿದ್ದರು. ಆ ತರುವಾಯದ ಕದಂಬರು ತಮ್ಮ ಎರಡೂವರೆ ಶತಮಾನದ ಆಡಳಿತದಲ್ಲಿ ಉತ್ತರದ ಕರಾವಳಿ ಬಂದರುಗಳನ್ನು ನೇರವಾಗಿ

ಆಳಿದರೂ, ದಕ್ಷಿಣದ ಬಂದರುಗಳನ್ನು ಆಳೂಪರ ಮೂಲಕ ಆಳಿದರು. ಆಳುಪರು ಕದಂಬರ ಸಾಮಂತರಾಗಿದ್ದರು. ಮುಂದೆ ಚಾಲುಕ್ಯರ ಕಾಲದಲ್ಲಿ ದಕ್ಷಿಣದ ಬಂದರುಗಳು ಆಳುಪರ ಕೈಯಲ್ಲಿದ್ದರೆ, ಉತ್ತರದ ಬಂದರುಗಳು ಗೋವಾ, ಚಂದಾವರ ಹಾಗೂ ಹಾನಗಲ್ ಕಾದಂಬರ ವಶದಲ್ಲಿದ್ದವು. ಇದಕ್ಕೂ ಪೂರ್ವದಲ್ಲಿ ಉತ್ತರ ಕರಾವಳಿಯಲ್ಲಿ ಭೋಜರು, ಕೇಕೆಯರು, ಶಿಶುಗಲಿ ಪಾಂಡ್ಯರು ಆಳಿದ್ದರೆ, ನಂತರದ ಕಾಲದಲ್ಲಿ ದಕ್ಷಿಣದ ಬಂದರುಗಳಲ್ಲಿ ಕಾರ್ಕಳದ ಬೈರರಸರು, ಪುತ್ತಿಗೆ, ಮೂಡುಬಿದಿರೆಯ ಚೌಟರು, ಮುಲ್ಕಿಯ ಸಾವಂತರು, ಬಂಗವಾಡಿಯ ಬಂಗರು, ಸುರಾಲಿನ ತೋಳಹರು, ವೇಣೂರಿನ ಅಜಿಲರು ಆಳಿದ್ದರು. ಉತ್ತರದ ಹಾಗೂ ದಕ್ಷಿಣಕನ್ನಡಗಳೆರಡರ ಕೆಲವು ಬಂದರುಗಳಲ್ಲಿ ಗೇರಸೊಪ್ಪೆ ಹಾಗೂ ಹಾಡುವಳ್ಳಿಯ ಅರಸರು ಕೆಲಕಾಲ ಆಳಿದ್ದರು.

ಈ ಎಲ್ಲ ಸಾಮಂತರ ಕಾಲದಲ್ಲಿ ಕಾರವಾರ, ಅಂಕೋಲಾ, ಕುಮಟಾ ಹೊನ್ನಾವರ, ಭಟ್ಕಳ, ಬೈಂದೂರು, ಕುಂದಾಪುರ-ಬಸರೂರು, ಬಾರ್ಕೂರು ಮತ್ತು ಮಂಗಳೂರು ಬಂದರುಗಳು ಪಟ್ಟಣಗಳಾಗಿ, ಕಡಲೋತ್ತರ ವ್ಯಾಪಾರದಲ್ಲಿ ದೊಡ್ಡ ರೀತಿಯಲ್ಲಿ ತೆರೆದು ಕೊಂಡವು. ಈ ಪಟ್ಟಣಗಳು ಒಂದರ್ಥದಲ್ಲಿ ಸಮಗ್ರ ರಾಜ್ಯದ ಪೋಷಕ ಕೇಂದ್ರಗಳಾಗಿದ್ದವು. ಒಂದೆರಡು ಪಟ್ಟಣಗಳು ಕೆಲಕಾಲ ರಾಜಧಾನಿ ಪಟ್ಟಣ-ಕೇಂದ್ರಗಳಾಗಿದ್ದರೂ, ಇವುಗಳೆಲ್ಲಾ ಬಹುತೇಕ ವ್ಯಾಪಾರಿ ಕೇಂದ್ರಗಳೇ ಆಗಿದ್ದವು.

ಮೇಲೆ ಉಲ್ಲೇಖಿಸಿದ ಒಂಬತ್ತು ಬಂದರು ಪಟ್ಟಣಗಳು ಪ್ರಾಚೀನ ಕಾಲದಿಂದ ಪಾಶ್ಚಾತ್ಯರ ವಸಾಹತುವಾಗುವವರೆಗೂ ರಾಜ್ಯದ ಆರ್ಥಿಕತೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾ ಬಂದಿವೆ. ಇಂಥಹ ನಗರಗಳ ಆಡಳಿತವು ಬಹು ಜವಾಬ್ದಾರಿಯ ಕಾರ್ಯವಾಗಿತ್ತು. ಬಂದರುಗಳಲ್ಲಿ ಒಂದು ಸುಸಂಬದ್ಧ ಆಡಳಿತ ಇಲ್ಲದಿದ್ದರೆ ಅದು ಕಡಲುಗಳ್ಳರ ಅಥವಾ ದರೋಡೆಕೋರರ ವಾಸಸ್ಥಾನವಾಗಿ ಬಿಡುತ್ತದೆ. ವ್ಯಾಪಾರಕ್ಕೆ ಸರಕು ತುಂಬಿಕೊಂಡು ಬಂದ ಹಡಗುಗಳು, ದಾರಿತಪ್ಪಿ ಬಂದ ಹಡಗುಗಳು ದೋಚಲ್ಪಡುತ್ತವೆ. ನೀರಿನ ವ್ಯವಸ್ಥೆ, ನ್ಯಾಯ ತೀರ್ಮಾನಮಗಳಿಲ್ಲದೇ ಗೊಂದಲದ ಗೂಡಾಗುತ್ತವೆ.

ಬಂದರು ಪಟ್ಟಣಗಳು ಪ್ರಮುಖ ಆರ್ಥಿಕ ಚಟುವಟಿಕೆಯ ಕೇಂದ್ರಗಳಾಗಿರುವುದರಿಂದ ಅಲ್ಲಿ ಅನೇಕ ವಿಧದ ವರ್ತಕ ಸಂಘಗಳು ಸಕ್ರೀಯವಾಗಿರುತ್ತವೆ. ವ್ಯಾಪಾರಕ್ಕಾಗಿ ಬಂದವರು, ವಿದೇಶಿ ವರ್ತಕರು, ಕಾರ್ಮಿಕರು, ದಲ್ಲಾಳಿಗಳಿಂದ ಈ ಪಟ್ಟಣಗಳು ಗಿಜಿಗುಡುತ್ತಿರುತ್ತವೆ. ಇಂಥಹ ನಗರದ ರಕ್ಷಣೆ ವರ್ತಕರ ಸರಕುಗಳ ರಕ್ಷಣೆ ಮತ್ತು ನೈರ್ಮಲ್ಯ ಬಹು ಮುಖ್ಯವಾಗಿರುತ್ತದೆ.

ಬಂದರು ಪಟ್ಟಣಗಳಲ್ಲಿ ಮೊದಲ ಆಡಳಿತ ಕಂಡು ಬರುವುದು ಆಳುಪರಿಂದ ಮಂಗಳೂರು, ಬಾರ್ಕೂರು ನಗರಗಳು ಇವರ ರೇವುಗಳಾಗಿದ್ದವು. ಬನವಾಸಿ, ಹೊನ್ನಾವರ,

ಬಾರ್ಕೂರು ಮತ್ತು ಮಂಗಳೂರುಗಳು 'ಜಯಂತಿಕಾ' ಪಟ್ಟಣಗಳಾಗಿದ್ದವು[೨೨]. ಟೋಲೆಮಿಯ ಭೂಗೋಳವು ಕ್ರಿ.ಶ ೨೩–೩೯ ರ ಕಾಲ ಎಂದು[೨೩] ಗುರುತಿಸಲಾಗಿದೆ. ಇದರಲ್ಲಿ ನಿತ್ರಾಸ್ ಎಂದು ಹೇಳಿರುವುದು ಮಂಗಳೂರಿಗೆ ಎಂದು ಕೆಲವರ ಅಭಿಮತವಾಗಿದೆ. ನಂತರದ ಶಂಗಂ ಸಾಹಿತ್ಯವು ಮಂಗಳಾಪುರವನ್ನು ಉಲ್ಲೇಖಿಸುತ್ತದೆ. ಅಂತೆಯೇ ಬಾರ್ಕೂರು ಬಂದರು ಜಯಂತಿಕಾ ಪಟ್ಟಣವಾಗಿತ್ತು. ಎರಡು ಲಕ್ಷ ಜನವಸತಿಯ ಪ್ರದೇಶವನ್ನು ಜಯಂತಿಕಾ ಎನ್ನುತ್ತಿದ್ದರಿಂದ ಈ ಪ್ರದೇಶಗಳು ಜನವಸತಿಯ ತಾಣಗಳಾಗಿದ್ದವೆನ್ನಬಹುದು. ಆ ಸಂಖ್ಯೆಗೆ ಅನುಗುಣವಾಗಿ ನಾಡು, ಮಹಾನಾಡು, ನಗರ, ಗ್ರಾಮಗಳೆಂದು ರಾಜ್ಯವನ್ನು ವಿಭಾಗಿಸಿ ಕೊಂಡಿದ್ದರು. ಅಧಿಕಾರಿ, ನಾಯಕ, ಸೈನ್ಯಾಧಿಕಾರಿ, ಗ್ರಾಮಿಣಿ ಅಥವಾ ಪೆರ್ಗಡೆ ಎಂಬ ಅಧಿಕಾರಿಗಳು ಆ ಆ ಭಾಗದಲ್ಲಿ ಮುಖ್ಯಸ್ಥರಾಗಿದ್ದರು.

ಬಾರ್ಕೂರು ತುಳುನಾಡಿನ ರಾಜಧಾನಿಯೂ ಆಗಿತ್ತು. ಬಾರ್ಕೂರಿನ ಭೌಗೋಳಿಕ ಲಕ್ಷಣಗಳು, ಇದೊಂದು ವ್ಯಾಪಾರಕ್ಕಾಗಿಯೇ ನಿರ್ಮಿಸಿ ಕೊಂಡ ಪಟ್ಟಣ ಎನ್ನುವುದನ್ನು ಸಾಬೀತು ಪಡಿಸುತ್ತದೆ. ಪ್ರಾಚೀನ ಆಳುಪರ ಅರಸರಾದ ಒಂದನೇ ಆಳುವರಸ ಹಾಗೂ ಒಂದನೇ ಚಿತ್ರವಾಹನರ ಕಾಲದಲ್ಲಿ ಮಂಗಳೂರು ರಾಜಧಾನಿಯಾಗಿದ್ದು, ೨ನೆಯ ಆಳುಪರಸನ ಕಾಲದಲ್ಲಿ ಉದ್ಯಾವರ ಇವರ ರಾಜಧಾನಿಯಾಯಿತು[೨೪]. ಮಧ್ಯಯುಗದಲ್ಲಿ ಮಂಗಳೂರು, ಬಾರ್ಕೂರುಗಳು ಇವರ ರಾಜ್ಯಧಾನಿಗಳಾದವು[೨೫].

ನಾಡುಗಳು ಪ್ರಮುಖ ಆಡಳಿತ ವಿಭಾಗಗಳಾಗಿದ್ದವು. ನಾಡುಗಳ ಅಧಿಕಾರಿಗಳನ್ನು ನಾಟ್ಟು ಮುದಿಮೆ ಗೆಯ್ಯುತ್ತಿದ್ದ[೨೬]ರೆಂದು ಶಾಸನಗಳು ಹೇಳುತ್ತವೆ. ಜನಸಂಖ್ಯೆಗೆ ಅನುಗುಣವಾಗಿ ಕ್ರಮವಾಗಿ ಮಹಾನಗರ, ನಗರ, ನಕರ, ಪುರ[೨೭] ಎಂದು ವಿಭಾಗಿಸಿ ಕೊಂಡು ಅದಕ್ಕೆ ನಾಯಕ ಎಂಬ ಅಧಿಕಾರಿಯನು ನೇಮಿಸಿಕೊಂಡು ಆಡಳಿತ ನಡೆಸಿದ್ದರು. ಮಂಗಳೂರು ನಗರ ರಾಜಧಾನಿಯಾಗಿತ್ತು. ಇದರ ಇತರ ವಿಭಾಗಗಳ ಆಡಳಿತ ಕುರಿತು ಶಾಸನಗಳಲ್ಲಿ ವಿವರಗಳು ದೊರೆಯುವುದಿಲ್ಲ. ಮಧ್ಯಯುಗದಲ್ಲಿ ಆಳುಪರು ಮಂಗಳಾಪುರ ಹಾಗೂ ಬಾರಹಕನ್ಯಾಪುರಗಳನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡು[೨೮] ಆಳಿದ್ದರು. ಇವರ ಆಡಳಿತದ ಕೇಂದ್ರ ಕಚೇರಿ ಅಥವಾ ಪಿರಿಯರಮನೆ ಎಂದು ಕರೆಯಲಾಗಿದೆ. ಮಂಗಳೂರಿನ ಪಿರಿಯರ ಮನೆ ಭುವನಾಶ್ರಯ ಎಂದು ಕರೆಯಲಾಗಿದೆ. ಇಲ್ಲಿ ರಾಜ ತನ್ನ ಮಂತ್ರಿಗಳು ನಾಯಕ, ದಂಡನಾಯಕ ಹಾಗೂ ಪ್ರಮುಖ ವ್ಯಾಪಾರಿ ಶ್ರೇಣಿಗಳ ಮುಖಂಡರೊಂದಿಗೆ ಸಮಾಲೋಚಿಸುತ್ತಿದ್ದಿರಬೇಕು. ಪೊಟ್ಟೆ ಪೊಂಬುಚ್ಚ ಹಾಗೂ ಬನವಾಸಿ ೧೨೦೦೦ವು ಇವರ ಇತರ ಕೇಂದ್ರಗಳಾಗಿದ್ದವು. ಆದರೆ ಕಾಲಕ್ರಮೇಣ ಇವುಗಳ ಮೇಲಿನ ಅಧಿಕಾರತ್ವ ಹೋಗಿತ್ತು. ಈ ಕಾಲದ ಆಡಳಿತದ ಸೂಕ್ಷ್ಮ ವಿಚಾರ

ತಿಳಿಯುವುದಿಲ್ಲ. ಯಾವಯಾವ ಅಧಿಕಾರಿಗಳು ಯಾವ ಕಾರ್ಯಭಾರ ನಿಭಾಯಿಸುತ್ತಿದ್ದರೆಂದು ಹೇಳುವ ವಿವರಗಳು ಇಲ್ಲ. ೧ನೆಯ ಆಳುವರಸನ ಕಾಲದಲ್ಲಿ ಉಂಟಾದ ಚಾಲುಕ್ಯ ವಿಕ್ರಮಾದಿತ್ಯನೊಂದಿಗಿನ ಸ್ನೇಹವು ಮತ್ತೆ ಆಳುಪರಿಗೆ ಬನವಾಸಿ, ಪೊಂಬುಚ್ಚ ಹಾಗೂ ಹೊಸದಾಗಿ ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ ಕಲ್ಲೂರು ಪ್ರದೇಶವನ್ನು ನೀಡಿತ್ತು[೭೯]. ಮುಂದೆ ಚಿತ್ರವಾಹನನ ಕಾಲದಲ್ಲಿ ಬನವಾಸಿ, ಮಂಗಳೂರುಗಳು ರಾಜಧಾನಿ ಕೇಂದ್ರಗಳಾಗಿ ಮುಂದುವರಿದವು. ಜೊತೆಯಲ್ಲಿ ಪೊಂಬುಚ್ಚಪುರವು ಇನ್ನೊಂದು ರಾಜಧಾನಿಯಾಗಿತ್ತು[೮೦]. ಕದಂಬ ಮಂಡಲ ಕಳೆದುಕೊಂಡ ಎರಡನೇ ಆಳುವರಸನು ಉದಯಪುರ ಅಥವಾ ಉದ್ಯಾವರವನ್ನು ಪ್ರಧಾನ ರಾಜಧಾನಿಯನ್ನಾಗಿ ಮಾಡಿಕೊಂಡನು[೮೧]. ಈ ಕಾಲದಲ್ಲಿ ಶಿವಳ್ಳಿ ಎಂಬ ಪ್ರಾಂತ್ಯವನ್ನು ರಚಿಸಿ ಕೊಂಡಿದ್ದರು. ಇದು ಇಂದಿನ ಉಡುಪಿಯ ಬಳಿಯಲ್ಲಿದೆ. ೨ನೇ ಆಳುವರಸನ ಕಾಲದಲ್ಲಿ ಆಡಳಿತಕ್ಕಾಗಿ, ಸಮಾಲೋಚನೆಗಾಗಿ 'ಮಹಾನಾಡು'[೮೨] ಎಂಬ ಸಭೆ ಸೇರುತ್ತಿದ್ದರು. ಇಂಥಹ ಒಂದು ಸಭೆಯ ಕುರಿತು ಕನ್ನಡದ ಪ್ರಾಚೀನ ತಾಮ್ರ ಪತ್ರಗಳಲ್ಲಿ ಒಂದಾಗಿರುವ ೨ನೆಯ ಆಳುವರಸನ ಬೆಳ್ಮಣ್ಣಿನ ತಾಮ್ರ ಶಾಸನವು "ಸೂರ್ಯ ಗ್ರಹಣದಂದು ಸೇರಿದ ಮಹಾಸಭೆಯಲ್ಲಿ ಶಿವಳ್ಳಿಯ ಸಭೆಗೆ ಅನ್ವಯಿಸುವ ರೀತಿ ನೀತಿಗಳನ್ನು ಬೆಳ್ಮಣ್ಣಿಗೂ ಅನ್ವಯಿಸುವಂತೆ" ಆಜ್ಞಾಪಿಸಿದ್ದು ತಿಳಿಯುತ್ತದೆ. ಇದರಿಂದ ಆಡಳಿತಕ್ಕೆ ಬೇಕಿದ್ದ ವಿವಿಧ ಕಟ್ಟು–ಕಟ್ಟಳೆಗಳನ್ನು ರಚಿಸಿಕೊಂಡಿದ್ದರೆಂದು ತಿಳಿಯುತ್ತದೆ. 'ಮಹಾನಾಡು' ಸರ್ವಸದಸ್ಯರು ಉಪಸ್ಥಿತರಿರುವ ಸಭೆಯಾಗಿತ್ತು. ಇಲ್ಲಿ ತೆಗೆದುಕೊಳ್ಳುವ ತೀರ್ಮಾನ ಜಾರಿಗೊಳಿಸುವುದು ಕಡ್ಡಾಯವಾಗಿತ್ತು. ೨ನೆಯ ಚಿತ್ರವಾಹನನು ತುಳುನಾಡಿನಲ್ಲಿ ವಾಸವಾಗದೆ ಶಿವಮೊಗ್ಗಾ ಬಳಿಯ ಸೆರ್ಗ್ಗುಂಜಿಯಲ್ಲಿ ಉಳಿದು ರಾಜ್ಯವಾಳಿದ್ದನು[೮೩]. ಆದರೆ ತುಳುನಾಡಿನಲ್ಲಿ ಆತನ ತಮ್ಮ ರಣಸಾಗರನಿದ್ದನು. ಆಳುಪರು ಮಂಗಳೂರು, ಉದ್ಯಾವರ, ಬಾರ್ಕೂರು, ಪೊಂಬುಚ್ಚ ಮತ್ತು ಬನವಾಸಿ ಮಂಡಲಗಳನ್ನು ಆಳುವಾಗ ಅವರೇ ಸರ್ವತಂತ್ರ ಸ್ವತಂತ್ರರಂತೆ, ಏಕಚಕ್ರಾಧಿಪತಿಗಳಂತೆ ಆಳಿದ್ದರು. ಇವರು ಧರಿಸಿದ ಬಿರುದುಗಳಾದ ಆಳುಪೇಂದ್ರ, ಉತ್ತಮ ಪಾಂಡ್ಯ, ಪರಮೇಶ್ವರ ಮುಂತಾದವುಗಳು ಆಡಳಿತದಲ್ಲಿ ಇವರೇ ಸಾರ್ವಭೌಮರೆಂದು ತಿಳಿಸುತ್ತವೆ. ಅಧಿಕಾರಿಗಳೇನಿದ್ದರೂ ಕೇವಲ ಆಜ್ಞೆಪಾಲಿಸುವವರಾಗಿದ್ದರು. ಮಂಗಳೂರು ಉದ್ಯಾವರ, ಮಲ್ಪೆ, ಬಾರ್ಕೂರುಗಳು ಬಂದರು ಪಟ್ಟಣಗಳಾಗಿದ್ದರಿಂದ ಇವುಗಳ ಆಡಳಿತ ನೇರವಾಗಿ ಅರಸನ ಅಧೀನವಾಗಿತ್ತು. ನಗರದ ಅಂಚಿನ ಗ್ರಾಮಗಳಿಗೆ ಪೆರ್ಗಡೆ[೮೪] ಎಂಬ ಅಧಿಕಾರಿ ಇರುತ್ತಿದ್ದನು. ರಾಜ್ಯಗಳು ದೊಡ್ಡ ಸಂಖ್ಯೆಯ, ಜನವಸತಿಯ ನಾಡೆಂದು ವಿಭಾಗಿತವಾಗಿದ್ದು, ಅದನ್ನು ನೋಡಿಕೊಳ್ಳಲು ನಾಯಕ ಎಂಬ ಅಧಿಕಾರಿ ಇರುತ್ತಿದ್ದನು. ಯುದ್ಧದ ಸಂದರ್ಭದಲ್ಲಿ ರಾಜನಿಗೆ ಸೇನಾಧಿಪತಿ, ನಾಯಕ ಹಾಗೂ ಸಣ್ಣ

ರಾಜರುಗಳು ಬೆಂಬಲ ನೀಡುತ್ತಿದ್ದರು. ರಣರಂಗದಲ್ಲಿ ರಾಜನೇ ನಾಯಕತ್ವವಹಿಸಿ ಭಾಗವಹಿಸುತ್ತಿದ್ದನು. ಯುದ್ಧ ಬೆಳೆಸುವುದು, ಒಪ್ಪಂದ ಮಾಡಿಕೊಳ್ಳುವುದು ಎಲ್ಲವೂ ಅರಸನನ್ನು ಅವಲಂಭಿಸಿತ್ತು.

ರಾಜ್ಯಧಾನಿಯ ಸಮೀಪದ ಪ್ರದೇಶವು ಅದರಲ್ಲೂ ತೀರಕ್ಕೆ ಸಮೀಪದ ಪ್ರದೇಶವನ್ನು ಆಳಲು ಅಥವಾ ಅದರ ಮೇಲುಸ್ತುವಾರಿ ನೋಡಿಕೊಳ್ಳಲು ಅಧಿಕಾರಿಗಳನ್ನು ನೇಮಿಸಿಕೊಳ್ಳುತ್ತಿದ್ದರು. ಚಿತ್ರವಾಹನನು ಕೂಡಾಲವನ್ನು ಅಧಿಕಾರಿಯೊಬ್ಬನ ಸುಪರ್ದಿಗೆ ನೀಡಿದ್ದು ತಿಳಿಯುತ್ತದೆ[೮೫]. ಆತನಿಗೆ 'ಪಾಂಡ್ಯನಾಯಕನ್' ಎಂಬ ಬಿರುದು ನೀಡಿದ್ದರು. ಭುವನಾಶ್ರಯವು ಅಂದರೆ ಅರಮನೆಯು ಆಡಳಿತದ ಕೇಂದ್ರವಾಗಿತ್ತು. ಎಲ್ಲ ಮಂತ್ರಿಗಳು ಹಾಗೂ ಸೇನಾಪತಿಗಳೂ ಸೇರಿ ಸಮಾಲೋಜನೆ ಮಾಡುತ್ತಿದ್ದರೆಂದು ವೀರಕುಲಶೇಖರ ಆಳುಪೇಂದ್ರನ ಮಂಗಳೂರು ಶಾಸನ[೮೬] ತಿಳಿಸುತ್ತದೆ. ಇದರಲ್ಲಿ ಅರಸನು ತನ್ನ ಅಳಿಯನಿಗೆ ಮುಗುರುನಾಡಿನ ರಾಜ್ಯಭಾರ ಬಿಟ್ಟುಕೊಟ್ಟ ಬಗ್ಗೆ ತಿಳಿಯುತ್ತದೆ. ಅರಸನು ತನಗೆ ಸಹಯಕರಾಗಿ ಅಳಿಯ ಅಥವಾ ಮಗನನ್ನು ನೇಮಿಸುವುದು ಅಂದಿನ ವಾಡಿಕೆಯಾಗಿತ್ತು. ಹೀಗೆ ತಮ್ಮ ವಂಶಜರನ್ನೆ ಪ್ರಮುಖ ಸ್ಥಾನಗಲ್ಲಿಟ್ಟು ರಾಜ್ಯಭಾರ ಮಾಡುತ್ತಿದ್ದರು. ಅಲ್ಲದೇ ನಾಯಕ ಮುಂತಾದ ಅಧಿಕಾರಿ ವರ್ಗದವರನ್ನು ವಂಶಪಾರಂಪರ್ಯವಾಗಿ ನೇಮಿಸುತ್ತಿದ್ದಿರಬೇಕು. ಮಂಗಲಪುರ ಹಾಗೂ ಉದಯಪುರ ನಗರದ ಒಳಾಡಳಿತದಲ್ಲಿ ನಾಯ್ಗರೆಂಬ ಅಧಿಕಾರಿ ಇದ್ದುದು ತಿಳಿದು ಬರುತ್ತದೆ. ಇವರು ನೇರವಾಗಿ ರಾಜನ ಅಧೀನದಲ್ಲಿದ್ದು ನಿರ್ದೇಶನದಂತೆ ಕೆಲಸ ಮಾಡುತ್ತಿದ್ದರು. ರಾಜರು ತಮ್ಮ ಪತ್ನಿಯರನ್ನು ಪ್ರಮುಖ ಗ್ರಾಮಗಳಿಗೆ ಆಡಳಿತಗಾರರಾಗಿ ನೇಮಿಸಿದ್ದು ಇದೆ. ಕವಿ ಆಳುಪೇಂದ್ರನು ತನ್ನ ಪತ್ನಿ ಪಾಂಡ್ಯ ಮಹಾದೇವಿಗೆ ಪನ್ನಿರ್ಪಳ್ಳಿಯೆಂಬ ಗ್ರಾಮ ಆಳಲು ನೀಡಿದ್ದನು[೮೭].

ರಾಜ್ಯಕೇಂದ್ರಿತವಾಗಿದ್ದ ರಾಜಧಾನಿ ಪಟ್ಟಣಗಳಾದ ಮಂಗಳೂರು, ಉದ್ಯಾವರ, ಬಾರ್ಕೂರುಗಳಲ್ಲಿ ರಾಜನೇ ಮುಖ್ಯಸ್ಥನಾಗಿದ್ದನು. ಆದರೆ ತನ್ನ ಆಡಳಿತಕ್ಕೆ ತಾನೇ ನೇಮಿಸಿಕೊಂಡ ಮಂತ್ರಿಗಳಿಂದ, ಅಧಿಕಾರಿಗಳಿಂದ ಸಲಹೆ ಪಡೆಯುತ್ತಿದ್ದನು. ಮಧ್ಯಯುಗೀನ ಆಳುಪರ ಆಡಳಿತ ತಿಳಿಸುವ ಆಧಾರಗಳು ಇವನ್ನು ದೃಢಗಳಿಸುತ್ತವೆ. ಅನೇಕ ಶಾಸನಗಳಲ್ಲಿ ಶ್ರೀಮತು ರಾಜಧಾನಿ ಮಂಗಳಾಪುರ ಅಥವಾ ಬಾರಹ ಕನ್ಯಾಪುರದ ಅರಮನೆಯ ಮೊಗಸಾಲೆಯಲು ರಾಜನು ಸಮಸ್ತ ಪ್ರಧಾನರಂ, ಬಾಹತ್ತರ ನಿಯೋಗಿಗಳುಂ, ದೇಶಪುರಷರುಂ, ಋಷಿಪುರೋಹಿತರುಂ, ರಾಣಿವಾಸದವರೂ, ರಾಜಕುಮಾರರೂ ಇತರ ಅಧಿಕಾರಿಗಳೂ ಇರಲು ಒಡ್ಡೋಲಗಂ ಕೊಟ್ಟಿದ್ದನು ಎಂದು ಬರುತ್ತದೆ. ಇಲ್ಲಿ ಸಾರ್ವಜನಿಕವಾದ ಒಡ್ಡೊಲಗದಲ್ಲಿ ಸಮಸ್ತರು ಭಾಗಿಗಳಾಗುತ್ತಿದ್ದರು.

ಉತ್ತರದ ತೀರದಲ್ಲಿ ಬನವಾಸಿ ಕೇಂದ್ರ ಮಾಡಿಕೊಂಡು ಆಳಿದ ಚುಟುಕುಲಾನಂದ ಅರಸರ ಅಧಿಕಾರಿ ಖದಸಾತಿ ಎಂಬವನು ವಿಹಾರ, ಕೆರೆ ಮತ್ತು ನಾಗವಿಗ್ರಹವನ್ನು ಮಹಾರಾಜನ ಮಗಳಾದ ಶಿವಸ್ಕಂದ ನಾಗಶ್ರೀಯ ಆದೇಶದಂತೆ ಮಾಡಿಸಿದ್ದನು[೮೮]. ಇದು ಬನವಾಸಿ ಪ್ರದೇಶದಲ್ಲಿ ಒಬ್ಬ ಅಧಿಕಾರಿಯನ್ನು ನೇಮಿಸಿ ಆ ಪ್ರದೇಶದ ಮೇಲುಸ್ತುವಾರಿ ನಡೆಸುತ್ತಿದ್ದರೆಂದು ತಿಳಿಯುತ್ತದೆ. ಶಾತವಾಹನರ ಕಿರಿಯ ಶಾಖೆಯಾದ ಚುಟುಕುಲಾನಂದ ವಂಶದವರು ಕರಾವಳಿಯಲ್ಲಿ ತಮ್ಮ ಆಡಳಿತ ನಡೆಸಿದ್ದರು. ಬನವಾಸಿ ಕೇಂದ್ರದಲ್ಲಿ ರಾಜನಿದ್ದು, ಉಳಿದ ಪ್ರದೇಶದಲ್ಲಿ ತಮ್ಮ ಅಧಿಕಾರಿಗಳನ್ನು ನೇಮಿಸಿ ಕೊಂಡಿದ್ದರೆಂದು ಊಹಿಸ ಬಹುದಾಗಿದೆ.

ಕದಂಬರ ಆಡಳಿತವು ಅರಸುಕೇಂದ್ರಿತವಾಗಿದ್ದರೂ, ಇವರು ಆಡಳಿತ ಅನುಕೂಲಕ್ಕೆ ಯುವರಾಜರನ್ನು, ಮಂತ್ರಿಗಳನ್ನು ಅಧಿಕಾರಿಗಳನ್ನು ನೇಮಿಸಿ ಕೊಳ್ಳುತ್ತಿದ್ದರು. ಯುವರಾಜರಿಗೆ ಪ್ರಾಂತ್ಯಗಳನ್ನು ವಹಿಸಿಕೊಡುವ ಪದ್ದತಿಯೇ ಮುಂದೆ ಕದಂಬ ವಂಶದ ವಿಘಟನೆಗೆ ಕಾರಣವಾಯಿತು ಎನ್ನುವವಾದವೂ ಇದೆ[೮೯]. ಕದಂಬರ ಕಾಲದ ಪ್ರಮುಖ ಅಧಿಕಾರಿಗಳಾದ ರುಜ್ಜುಕರು ಅಥವಾ ಕಂದಾಯ ಅಧಿಕಾರಿಗಳು ಆಡಳಿತದಲ್ಲಿ ಸಹಾಯಕರಾಗಿದ್ದರು[೯೦]. ಇಂಥಹ ಅಧಿಕಾರಿಗಳೇ ಬಂದರು ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿದ್ದರು. ಇವರು ಜಿಲ್ಲಾಡಳಿತಗಾರರಾಗಿದ್ದ ಮನ್ನೆಯರ ಕೈಕೆಳಗೆ ಇದ್ದರು. ಅಂತೆಯೇ ಗ್ರಾಮೀಕ ಅಥವಾ ಗ್ರಾಮದ ಮುಖ್ಯಸ್ಥ ಗ್ರಾಮದ ಆಡಳಿತ ನೋಡಿಕೊಳ್ಳುತ್ತಿದ್ದರು. ಬಹು ಮುಖ್ಯ ವಿಚಾರವನ್ನು ತೀರ್ಮಾನಿಸಲು ಗ್ರಾಮದಲ್ಲಿ ಗ್ರಾಮ ಪಂಚಾಯತಿ[೯೧] ಸೇರುತ್ತಿತ್ತು. ಗ್ರಾಮ ಪ್ರದೇಶದಲ್ಲಿ ಸ್ವಯಂ ಆಡಳಿತದ ಪ್ರಥಮ ಚಿತ್ರಣ ಇಲ್ಲಿ ದೊರೆಯುತ್ತದೆ. ಒಟ್ಟಿನಲ್ಲಿ ಗ್ರಾಮೀಣ ಆಡಳಿತದಲ್ಲಿ ಅಸಾಮಾನ್ಯ ಘಟನೆ ನಡೆದಲ್ಲಿ ನ್ಯಾಯ ತೀರ್ಮಾನಕ್ಕೆ ಇಂಥಹ ಕ್ರಮ ಕೈಗೊಳ್ಳುತ್ತಿದ್ದರು ಎಂದು ತಿಳಿಯುತ್ತದೆ. ನೊಂದವರಿಗೆ ವಿವಿಧ ಪರಿಹಾರ ನೀಡುವ ಪದ್ಧತಿಯು ಇತ್ತು. ಇದು ರಾಜನ ಒಪ್ಪಿಗೆಯೊಂದಿಗೆ ನಡೆಯುತ್ತಿತ್ತು.

ಕ್ರಿ.ಶ. ಸುಮಾರು ನಾಲ್ಕನೇ ಶತಮಾನದಿಂದ ಏಳನೇ ಶತಮಾನದವರೆಗೆ ಗೋವಾದ ಕೆಲವು ಭಾಗ ಹಾಗೂ ಕಾರವಾರ ಮತ್ತು ಅಂಕೋಲಾದ ಉತ್ತರದ ಭಾಗ ಆಳಿದ ಭೋಜರು ತಮ್ಮದೇ ಆದ ಆಡಳಿತ ವ್ಯವಸ್ಥೆ ಹೊಂದಿದ್ದರು. ಭೋಜರನ್ನು ಉಲ್ಲೇಖಿಸುವ ಪ್ರಥಮ ಶಾಸನ ಎಂದರೆ ಆರ್ಗಾದ ತಾಮ್ರ ಪತ್ರಗಳು[೯೨]. ಎರಡು ತಾಮ್ರ ಪತ್ರಗಳಿಂದ ಕೂಡಿದ ಭೋಜ ಕಪಾಲಿವರ್ಮನ ಆರ್ಗಾ ಶಾಸನಗಳಿಂದ ಆರನೇ ಶತಮಾನ ಕಾಲದ ಆಡಳಿತದ ಒಂದು ಸುಳುಹು ದೊರೆಯುತ್ತದೆ. ರಾಜ್ಯದಲ್ಲಿ ಶಿವಪುರ ವಿಷಯ ಎಂಬ ಉಲ್ಲೇಖ ಬರುತ್ತದೆ. ಇಲ್ಲಿ ಶಿವಪುರ ಒಂದು ಸ್ಥಳವಾಗಿದ್ದು, ವಿಷಯ ಎನ್ನುವುದು ರಾಜ್ಯದ ವಿಭಾಗವಾಗಿದ್ದಿತ್ತು. ರಾಜನನ್ನು ಮಹಾರಾಜ ಎಂದೂ ಕರೆಯುತ್ತಿದ್ದರು. ಕಾರವಾರ, ಅಂಕೋಲಾ ಹಾಗೂ ಗೋವಾಗಳು ಕಡಲೋತ್ತರ

ವ್ಯಾಪಾರದ ಪ್ರಮುಖ ರೇವುಗಳಾಗಿದ್ದವು. ಭೋಜರ ಈ ಶಾಸನದಲ್ಲಿ ಶ್ರೇಷ್ಠಿಗಳ ಬಗ್ಗೆ ಉಲ್ಲೇಖ ಬರುತ್ತದೆ[೯೩]. ಸುಮಾರು ಒಂದುವರೆ ಶತಮಾನದವರೆಗೆ ಆಳಿರಬಹುದಾದ ಭೋಜರ ಕುರಿತು ಹೆಚ್ಚಿನ ವಿವರ ದೊರೆಯದಿದ್ದರೂ ಇವರು ಮಹಾರಾಜನ ಅಡಿಯಲ್ಲಿ ಅಧಿಕಾರಿಗಳನ್ನು ನೇಮಿಸಿಕೊಂಡು ಬಂದರು ಪಟ್ಟಣಗಳನ್ನು ಆಳಿದ್ದು ತಿಳಿಯುತ್ತದೆ. ಇವರಿಗೆ ಕೈಕೇಯ ವಂಶದ ಕೊಟ್ಟಪೆಗ್ಗಿಲಿಯೆಂಬ ಮಾಂಡಲಿಕನು[೯೪] ಇದ್ದುದು ತಿಳಿಯುತ್ತದೆ. ಕೊಂಕಣ ತೀರ ಪ್ರದೇಶದಲ್ಲಿ ಭೋಜರು ಪ್ರಬಲ ರಾಜರಾಗಿ ಆಳಿದ್ದಿದೆ. ಅದೇ ವಂಶದ ಒಂದು ಶಾಖೆ ಕರ್ನಾಟಕದ ತೀರಪ್ರದೇಶ ಆಳಿದ ಈ ಭೋಜರಾಗಿರಬೇಕು.

ಕೈಕೇಯ ವಂಶದವರು ಸರಿಸುಮಾರು ಆರನೇ ಶತಮಾನದಿಂದ ಎಳನೇ ಶತಮಾನದ ಮಧ್ಯದವರೆಗೆ ಹೊನ್ನಾವರ ಕೇಂದ್ರ ಮಾಡಿಕೊಂಡು ಆಳಿದ್ದರು. ಕಾರವಾರ ತೀರ ಪ್ರದೇಶ ಆಳಿದ ಭೋಜರ ಮಾಂಡಲಿಕರಾಗಿದ್ದ ಇವರು ಹೊನ್ನಾವರ ಕೇಂದ್ರವಾಗಿ ಆಳುವಾಗ ಭೋಜರ ರೀತಿ ನೀತಿಗಳನ್ನೆ ಮುಂದುವರೆಸಿದ್ದರು. ಕೈಕೇಯ ಚಿತ್ರಸೇನನ ಹೊನ್ನಾವರ ಶಾಸನವು[೯೫] ದಾನ ಶಾಸನವಾಗಿದ್ದು, ಇದರಲ್ಲಿ ಸಿಂಹಸೇನಾಪತಿ ಹಾಗೂ ಆತನ ಮಗ ಜಿನನಂದಿಸೇನಾಪತಿಗಳ ಉಲ್ಲೇಖ ಬರುತ್ತದೆ. ಈ ಚಿತ್ರಸೇನಾಪತಿಯು ಕದಂಬ ರವಿವರ್ಮನ ಮಂಡಲಾಧಿಪತಿಯಾಗಿದ್ದನೆಂದು ತಿಳಿಸುತ್ತದೆ[೯೬]. ಇವುಗಳೆಲ್ಲ ಸೇನಾಪತಿ ಎಂಬ ಅಧಿಕಾರಿಯಿರುವುದನ್ನು, ಮಂಡಲಾಧಿಪತಿಗಳೆಂಬ ಅಧೀನ ಆಡಳಿತಗಾರರಿದ್ದುದನ್ನು ತಿಳಿಸುತ್ತದೆ.

ಕರಾವಳಿಯ ಉತ್ತರದ ಭಾಗವನ್ನು ಪಲ್ಲವರ ಕಿರಿಯ ಶಾಖೆಯೊಂದು ಆಳಿದ್ದನ್ನು ಹೊನ್ನಾವರದ ಕೆಕ್ಕಾರ, ಹಳದೀಪುರ ಮುಂತಾದೆಡೆ ದೊರೆತ ಶಾಸನಗಳು[೯೭] ತಿಳಿಸುತ್ತವೆ. ಈ ವಂಶದ ಪಲ್ಲವ ಗೋಪಾಲದೇವನ ಆಡಳಿತ ತಿಳಿಸುವ ಹಳದೀಪುರದ ತಾಮ್ರ ಪತ್ರವು[೯೮] ಇವನು ಚಾಲುಕ್ಯ ವಿಕ್ರಮಾದಿತ್ಯನ ಆಶ್ರಿತನಾಗಿದ್ದನು ಎಂದು ತಿಳಿಸುತ್ತದೆ. ಅಲ್ಲದೆ ಮಂತ್ರಿ, ಪುರೋಹಿತ, ಶ್ರೀಕರಣ, ನಗರ, ಮಹಾಜನ ಸಹಿತ..... ಎಂಬ ವಾಖ್ಯದಿಂದ ಆರಂಭವಾಗುವ ಆತನ ಶಾಸನವು ಈತನು ಮಂತ್ರಿಗಳನ್ನು ಹೊಂದಿರುವುದು, ಕಂದಾಯ ಇತ್ಯಾದಿಗಳು ಲೆಕ್ಕ ನೋಡಿಕೊಳ್ಳಲು ಶ್ರಿಕರಣ-ಕರಣಿಕರನ್ನು ಹಾಗೂ ನಗರ ಅಂದರೆ ವ್ಯಾಪಾರಿ ವರ್ಗದವರನ್ನು ಮತ್ತು ಮಹಾಜನರನ್ನು ಅಂದರೆ ಊರ ಹಿರಿಯರಿಂದ ಕೂಡಿದ ಸಮಿತಿಯನ್ನು ಆಡಳಿತದ ಪ್ರಮುಖ ತೀರ್ಮಾನದ ಸಂದರ್ಭದಲ್ಲಿ ವಿಶ್ವಾಸಕ್ಕೆ ತೆಗೆದು ಕೊಳ್ಳುತ್ತಿದ್ದನೆಂಬುದನ್ನು ಶೃತಪಡಿಸುತ್ತದೆ. ಅಂದರೆ ರಾಜನು ಆಡಳಿತದ ಕೆಲಸ ಕಾರ್ಯಗಳಿಗೆ ಎಲ್ಲ ಸಮೂಹದಿಂದ ಸಹಾಯ ಪಡೆಯುತ್ತಿದ್ದನೆಂದು ತಿಳಿಯಬಹುದು. ಇದೇ ಪಲ್ಲವ ವಂಶದ ಕೆಕ್ಕಾರಿನ ಶಾಸನವು ಪಯ್ವೆಗುಂದ ಪರಮೇಶ್ವರ ಅಣ್ಣೆಯರಸನು, ದಂತಿಗ, ಚುಟ್ಟಿ, ರಾಜ, ಬಂದಿಗ ಮತ್ತು ಕೊಟ್ಟಿಗ ಇವರ ಸಮೇತ

ಕಡತೋಕೆಯಿಂದ ಶಿವಳ್ಳಿಯವರಗಿನ ಪ್ರದೇಶ ಆಳಿದ್ದನೆಂದು ತಿಳಿಸುತ್ತದೆ[೯೯]. ಅಂದರೆ ಹೈಗುಂದ ಕೇಂದ್ರವಾಗಿಸಿಕೊಂಡ ಕುಮಟಾ ಬಳಿಯ ಕಡತೋಕಾದಿಂದ ಉಡುಪಿ ಬಳಿಯ ಶಿವಳ್ಳಿಯವರೆಗೆ ತನ್ನ ಸಹಚರರೊಂದಿಗೆ ಸೇರಿ ಆಡಳಿತ ನಡೆಸುತ್ತಿದ್ದನೆಂದು ತಿಳಿಯುತ್ತದೆ. ಮೇಲೆ ಬಂದಿರುವ ಹೆಸರುಗಳು ಕೆಲವು ಅಧಿಕಾರಿಗಳ ಹೆಸರುಗಳಾಗಿರುವ ಸಾಧ್ಯತೆಯಿದೆ. ಅವರುಗಳು ಮಂತ್ರಿ, ಸೇನಾಪತಿ ಹಾಗೂ ಕರಣಿಕ ಮುಂತಾದ ಪದವಿಗಳಲ್ಲಿ ಕೆಲಸ ನಿರ್ವಹಿಸುವವರಾಗಿದ್ದಿರ ಬಹುದು ಎಂದು ಉಹಿಸಬಹುದು.

ಇನ್ನೂ ಹೊಯ್ಸಳರ ಕಾಲದಲ್ಲಿ ಶಿರಾಲಿ–ಭಟ್ಕಳಗಳಲ್ಲಿ ಅಧಿಕಾರಿಗಳನ್ನಿಟ್ಟು ಆಳಿದ್ದು ತಿಳಿಯುತ್ತದೆ[೧೦೦]. ಕ್ರಿ.ಶ ೧೨೯೨ ರಿಂದ ಮುಮ್ಮಡಿಬಲ್ಲಾಳನ ಕುಮಾರನು ಭಟ್ಕಳ ಕೇಂದ್ರದಿಂದ ಆಳಿದ್ದನೆಂದು ತಿಳಿದುಬರುತ್ತದೆ. ಹೊಯ್ಸಳರು ತಮ್ಮ ಪ್ರದೇಶಗಳನ್ನು ಆಳಲು ಮಾಡಿಕೊಂಡ ವ್ಯವಸ್ಥೆಗಿಂತ ಬಿನ್ನವಾಗಿ ಕರಾವಳಿ ಆಳುತ್ತಿದ್ದ ಆಳೂಪರ ಪದ್ದತಿಯಂತೆ ಇಲ್ಲಿ ಆಳಿರಬೇಕು. ಇಲ್ಲವೇ ಕೇವಲ ಸೈನ್ಯದ ಸಹಾಯದಿಂದ ರಾಜಕುಮಾರ ಬಂದರಿನ ವ್ಯಾಪಾರ–ವ್ಯವಹಾರ ನಿಯಂತ್ರಿಸುತ್ತಿದ್ದಿರ ಬೇಕು. ಹೊಯ್ಸಳರಿಗೆ ಈ ಪ್ರದೇಶದಲ್ಲಿ ಇತರ ಆಡಳಿತಕಿಂತ ಬಂದರಿನ ವ್ಯಾಪಾರ ವ್ಯವಹಾರ ತರುತ್ತಿದ್ದ ಲಾಭ ಮುಖ್ಯವಾಗಿತ್ತು.

ಕದಂಬರ ಇತರ ಶಾಖೆಗಳಾದ ಹಾನಗಲ್ಲ ಕಾದಂಬರು ಪೆರ್ಗಡೆ, ಸಂಧಿ ವಿಗ್ರಹಿ ಮುಂತಾದ ಅಧಿಕಾರಿಗಳನ್ನಿಟ್ಟು ಬನವಾಸಿ ಪನ್ನಿರ್ಚ್ಛಾಸಿರ, ಸಾಂತಳಿಗೆ ನಾಡುಗಳನ್ನು ಆಳಿದ್ದರು[೧೦೧]. ಮಹಾಮಂಡಳೇಶ್ವರ, ಮಂಡಳೇಶ್ವರರೆನ್ನುವ ಸ್ಥಾನಗಳಿದ್ದು ಅವರು ಹೊಂದಿದ್ದ ರಾಜ್ಯವಿಸ್ತಾರದ ಮೇಲೆ ಇದು ತೀರ್ಮಾನವಾಗುತ್ತಿತ್ತು. ಬನವಾಸಿ ಪನ್ನಿರ್ಚ್ಛಾಸಿರ ಕರಾವಳಿಯ ಕಾರವಾರ, ಅಂಕೋಲಾ, ಕುಮಟಾ, ಹೊನ್ನಾವರ ಹಾಗೂ ಭಟ್ಕಳಗಳನ್ನು ಹಲವು ಸಾರೆ ಒಳಗೊಂಡಿತ್ತು. ಕೆಲವು ಬಾರಿ ಈ ಪ್ರದೇಶಗಳು ಪನ್ನಿರ್ಚ್ಛಾಸಿರದ ನೇರ ಆಡಳಿತಕ್ಕೆ ಒಳಪಡದೇ ಮಾಂಡಲಿಕರಿಂದ, ಅಧೀನ ಅರಸರುಗಳಿಂದ ಆಳಲ್ಪಡುತ್ತಿತ್ತು.

ಪಲ್ಲವರ ಒಂದು ಶಾಖೆ ಕರಾವಳಿಯಲ್ಲಿ ಆಳಿತ್ತು. ಕದಂಬರಿಂದ ಸೋತು ಪಲಾಯನ ಮಾಡಿದ್ದರು ಎಂದು ನಂಬಲಾಗಿದ್ದ ಪಲ್ಲವರ ಕುರಿತು ಶಾಸನಗಳು ದೊರೆಯುವ ಮೂಲಕ ಕರಾವಳಿಯಲ್ಲಿ ಅವರ ಕಿರಿಯ ಶಾಖೆಯೊಂದರ ಅಸ್ತಿತ್ವ ತಿಳಿದುಬರುತ್ತದೆ. ಹೊನ್ನಾವರ ತಾಲೂಕಿನ ಕೆಕ್ಕಾರ ಹಾಗೂ ಹಳದೀಪುರಗಳಲ್ಲಿ ಈ ವಂಶದ ಕೆಲವು ಶಾಸನಗಳು[೧೦೨] ದೊರೆತಿದ್ದು, ಪಲ್ಲವವಂಶದ ಗೋಪಾಲದೇವ ಎಂಬುವವನು ಚಾಲುಕ್ಯ ವಿಕ್ರಮಾದಿತ್ಯನ ಬಿರುದು ದರಿಸಿಕೊಂಡು ಆಳಿದ್ದನು. ಈ ಪಲ್ಲವ ಗೋಪಾಲ ದೇವನ ಕಾಲದಲ್ಲಿ ಚಾಲುಕ್ಯ ಪುಲಕೇಶಿಯ ಸಹೋದರ ಚಂದ್ರಾದಿತ್ಯನು ಪಶ್ಚಿಮ ಕರಾವಳಿಯನ್ನು ಆಳುತ್ತಿದ್ದನು[೧೦೩]. ಈ ಕಾಲದಲ್ಲಿಯೇ ಪಲ್ಲವರು ಅವನ

ಆಶ್ರಿತರಾಗಿದ್ದರಲ್ಲದೇ, ಪುಲಕೇಶಿಯ 'ಪುರಿ' ಹಾಗೂ 'ರೇವತಿ' ದ್ವೀಪದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದನು. ಅಲ್ಲದೇ ಈ ಕಾಲಾವಧಿಯಲ್ಲಿ ಪಶ್ಚಿಮ ಕರಾವಳಿಯ ಬಂದರುಗಳ ಮೂಲಕ ಈಜಿಪ್ಟ ಹಾಗೂ ರೋಮ್‌ನೊಂದಿಗೆ ವ್ಯಾಪಾರ ಭರದಿಂದ ಸಾಗಿತ್ತು[೧೦೪]. ಇವರು ಅಧಿಕಾರಿಗಳ ಸಹಾಯದಿಂದ ಹಾಗೂ ಮಾಂಡಲಿಕರ ಸಹಾಯದಿಂದ ತೀರ ಪ್ರದೇಶದಲ್ಲಿ ತೆರಿಗೆ ಸಂಗ್ರಹ ಮತ್ತು ಬಂದರುಗಳ ಮೇಲ್ವಿಚಾರಣೆ ನಡೆಸುತ್ತಿದ್ದರು.

ಗೋವಾ ಹಾಗೂ ಚಂದಾವರ ಕಾದಂಬರು ಹತ್ತನೇ ಶತಮಾನದಿಂದ ಹದಿಮೂರನೇ ಶತಮಾನದವರೆಗೆ ಕರಾವಳಿ ಆಳಿದ್ದರು. ಕಾರವಾರ ದಿಂದ ಭಟ್ಕಳದ ವರೆಗಿನ, ಕೆಲವೊಮ್ಮೆ ಬೈಂದೂರು ಇನ್ನು ಕೆಲಕಾಲ ಉಡುಪಿ ಬಳಿಯ ಶಿವಳ್ಳಿ ಪ್ರದೇಶದವರೆಗೂ ಇವರರಾಜ್ಯ ವಿಸ್ತಾರ ಗೊಂಡಿತ್ತು. ಬನವಾಸಿ ಹಾಗೂ ಶಾಂತಳಿಗೆ ನಾಡುಗಳು ಇವರವಶವಾಗಿದ್ದವು[೧೦೫]. ಇವರಿಗಿಂತ ಸ್ವಲ್ಪ ಮುಂಚಿನಿಂದ ಅಂದರೆ ಹತ್ತನೇ ಶತಮಾನದ ಆರಂಭದ ಕಾಲದಲ್ಲಿ ಶಿಶುಗಲಿ ಪಾಂಡ್ಯರೆಂಬ ಅರಸು ಮನೆತನ ಕರಾವಳಿಯನ್ನು ಆಳಲು ಪ್ರಾರಂಭಿಸಿತ್ತು[೧೦೬]. ಮುಂದೆ ಪಾಂಡ್ಯರ ಉತ್ತರಾಧಿಕಾರಿಗಳಾಗಿ ಚಂದಾವರ ಕಾದಂಬರು ಪಟ್ಟಕೇರಿದ್ದರು[೧೦೭]. ಸುಮಾರು ಕ್ರಿ.ಶ ೧೪೧೦ರ ವರೆಗೆ ಇವರ ಅಧಿಕಾರ ನಡೆದಿತ್ತು. ಇವರಿಗೂ ಪೂರ್ವದಲ್ಲಿ ಗೋವಾ ಕಾದಂಬರು ಕರಾವಳಿಯಲ್ಲಿ ಸಾಮಂತರಾಗಿ ಆಳಿದ್ದರು. ಈ ಎಲ್ಲಾ ಸಾಮಂತ ಪ್ರಭುತ್ವವು ಆಡಳಿತಕ್ಕಾಗಿ ಮಹಾ ಸಾಮಂತರು, ಮಹಾ ಪ್ರಧಾನ, ವೆರ್ಗಡೆ ಅಥವಾ ಪೆರ್ಗಡೆ ಅಥವಾ ಹೆಂಜ್ಜುಂಕ್ಕಾರ, ಸಂಧಿವಿಗ್ರಹಿ, ಸೇನಭೋವ, ತಳರ ಮುಂತಾದ ಅಧಿಕಾರಿಗಳನ್ನು[೧೦೮] ನೇಮಿಸಿಕೊಂಡು ಆಡಳಿತ ನಡೆಸಿದ್ದರು. ತಳರ ಎನ್ನುವವನು ಗ್ರಾಮದ ಅಧಿಕಾರಿ, ಗ್ರಾಮದ ರಕ್ಷಕ, ಯುದ್ದದಲ್ಲಿ ಭಾಗವಹಿಸುವ ಮುಂತಾದ ಜವಾಬ್ದಾರಿ ಹೊಂದಿದ್ದನು. ಸೇನಭೋವರು ಗ್ರಾಮದ ಪ್ರಮುಖ ಆಡಳಿತಗಾರರಾಗಿದ್ದರು. ಗಾವುಂಡ ಅಥವಾ ಗೌಡ, ಸೇನಭೋವ ಅಥವಾ ಕುಲಕರ್ಣೀ ಮತ್ತು ತಳವಾರ[೧೦೯] ಗ್ರಾಮದ ಇನ್ನಿತರ ಅಧಿಕಾರಿಗಳಾಗಿದ್ದರು. ವಂಶಪಾರಂಪರ್ಯವಾದ ಅಧಿಕಾರ ಹೊಂದಿದ್ದರು. ಸೇನಭೋವ ಶಿಕ್ಷಿತ ವ್ಯಕ್ತಿಯಾಗಿದ್ದು ರಾಜನಲ್ಲಿ ನಿಷ್ಠೆ ಹೊಂದಿದ್ದವನೂ ಆಗಿದ್ದನು. ಗ್ರಾಮಗಳಲ್ಲಿ ಸಂಗ್ರಹಿಸಬೇಕಿದ್ದ ಸುಂಕದ ಜವಾಬ್ದಾರಿ ಇವನದಾಗಿತ್ತು. ಅಂತೆಯೇ ಶಿಕ್ಷಿತರಾಗಿದ್ದ ಇವರು ರಾಜಾಜ್ಞೇಯನ್ನು ಶಾಸನ ರೂಪದಲ್ಲಿ ಕಂಡರಿಸಿ ಸಾರ್ವಜನಿಕ ಸ್ಥಳಗಳಲ್ಲಿ ಇಡುವರಾಗಿದ್ದರು. ಹೊನ್ನಾವರ ತಾಲೂಕಿನಲ್ಲಿ ದೊರೆತಿರುವ ವೀರಗಲ್ಲುಗಳು ಹಾಗೂ ಶಾಸನಗಳಲ್ಲಿ ಇಂಥಹ ಸೇನಭೋವರ ಹೆಸರು ಕಾಣಬಹುದಾಗಿದೆ[೧೧೦]. ರಾಜಾಡಳಿತವು ಯುದ್ದಗಳ ಸರಮಾಲೆಯಾಗಿದ್ದ ಆ ದಿನಗಳಲ್ಲಿ ರಾಜನಿಗೆ ಸಹಾಯಕನಾಗಿದ್ದ ಅಧಿಕಾರಿ ಸಂಧಿ, ವಿಗ್ರಹಿ. ಈತ ಪರ ರಾಜರೊಡನೆ ಮಾತುಕತೆ, ಸಂಧಿಗಳನ್ನು ನಡೆಸುವವನಾಗಿದ್ದನು. ಶಿಶುಗಲಿ ಪಾಂಡ್ಯರ ಆಳ್ವಿಕೆಯಲ್ಲಿ ಇಂಥಹ ಅನೇಕ ಸಂಧಿವಿಗ್ರಹಿಗಳ

ಉಲ್ಲೇಖ ಬರುತ್ತದೆ[೧೧೧]. ಗೋವಾ ಹಾನಗಲ್ಲ ಕಾದಂಬರು ಮತ್ತು ಶಿಸುಗಲಿ ಪಾಂಡ್ಯರು ಹಾಗೂ ಚಂದಾವರ ಕಾದಂಬರು ಕರಾವಳಿಯೊಂದಿಗೆ ನಿಕಟ ಸಂಬಂಧ ಹೊಂದಿದ್ದರು. ಈ ಕಾಲಾವಧಿಯಲ್ಲಿಯೇ ಕರ್ನಾಟಕದ ಅಧಿರಾಜರಾಗಿದ್ದ ರಾಷ್ಟ್ರಕೂಟ, ಬಾದಾಮಿ ಹಾಗೂ ಕಲ್ಯಾಣಿ ಚಾಲುಕ್ಯರುಗಳು ವಿರಾಜಮಾರರಾಗಿ ಬೆಳಗಿದ್ದರು. ಅಂದರೆ ಈ ಕಾಲದಲ್ಲಿ ಕಡಲೋತ್ತರ ವ್ಯಾಪಾರ ಭರದಿಂದ ಸಾಗಿತ್ತು. ಕೇಂದ್ರದಲ್ಲಿ ಅಥವಾ ರಾಜಧಾನಿ ಪಟ್ಟಣಗಳಲ್ಲಿ ರಾಜನೆ ಅಧಿಪತಿಯಾಗಿದ್ದು ಸುಂಕವಸೂಲಿ ಹಾಗೂ ಶಾಂತಿ ಸ್ಥಾಪನೆಗೆ ಅಧಿಕಾರಿಗಳನ್ನು, ರಾಜ್ಯ ರಕ್ಷಣೆಗೆ ಸೈನ್ಯವನ್ನು ಇಟ್ಟುಕೊಂಡಿದ್ದರು. ಇವರ ಆಡಳಿತದ ಅಂತ್ಯದಲ್ಲಿ ಅಂದರೆ ೧೩ನೇ ಶತಮಾನದ ಅಂತ್ಯದಿಂದ ವಿಜಯನಗರ ಅರಸರು ರಾಜ್ಯಪಾಲರಿಂದ ಈ ಪ್ರದೇಶ ಆಳಿದ್ದರು.

೪.೪ ಆಡಳಿತದಲ್ಲಿ ವರ್ತಕರು

ಕರಾವಳಿ ಬಂದರು ಪಟ್ಟಣಗಳು ಸಂಪೂರ್ಣ ಸಾಮ್ರಾಜ್ಯದ ಜೀವದಾಯಿಗಳಾಗಿದ್ದವು. ಕಡಲೋತ್ತರ ವ್ಯಾಪಾರವು ದೊಡ್ಡ ಪ್ರಮಾಣದ ಲಾಭವನ್ನು, ರಾಷ್ಟ್ರೀಯ ವ್ಯಾಪಾರದಲ್ಲಿ ಹೊಸ ಚೈತನ್ಯವನ್ನು ಉಂಟುಮಾಡಿತ್ತು. ಈ ಎಲ್ಲಾ ವ್ಯಾಪಾರವನ್ನು ನಿಯಂತ್ರಿಸುತ್ತಿದ್ದ ಮಧ್ಯವರ್ತಿಗಳು ವರ್ತಕರು. ಈ ವರ್ತಕರು ತಮ್ಮ ಸಂಘಗಳ ಮೂಲಕ ಈ ಕಾರ್ಯ ನಿರ್ವಹಿಸುತ್ತಿದ್ದರು. ಕರಾವಳಿ ಬಂದರು ಪಟ್ಟಣಗಳ ಆಡಳಿತದಲ್ಲಿ ಇವರ ಸಕ್ರೀಯ ಮಧ್ಯಪ್ರವೇಶದ ಕುರಿತು ಶಾಸನಗಳು ತಿಳಿಸುತ್ತವೆ. ಕಾರವಾರ, ಅಂಕೋಲಾ ಪ್ರದೇಶ ಆಳಿದ ಭೋಜರ ಶಾಸನ ನಗರ ವರ್ತಕರನ್ನು ಉಲ್ಲೇಖಿಸುತ್ತದೆ ಎಂದು ಮೇಲೆ ತೋರಿಸಲಾಗಿದೆ. ನಂತರ ಬಾರ್ಕೂರು, ಬಸರೂರು, ಮಂಗಳೂರು, ಹೊನ್ನಾವರದ ಶಾಸನಗಳಲ್ಲಿ ವರ್ತಕಸಂಘಗಳ ಉಲ್ಲೇಖವು ಬಹುತ್ತರದಲ್ಲಿ ಕಂಡುಬರುತ್ತದೆ. ವ್ಯಾಪಾರವು ಕಡಲು ಮಾರ್ಗವಾಗಿ ಬಹುದೂರದ ದೇಶಗಳೊಂದಿಗೆ ನಡೆಯುತ್ತಿದ್ದಾಗ ರೇವು ಪಟ್ಟಣಗಳ ಆಡಳಿತವು ಕೇವಲ ವ್ಯಾಪಾರಿ ಆರ್ಥಿಕತೆಯನ್ನು ಅವಲಂಬಿಸ ತೊಡಗಿತು. ಸಿದ್ಧ ವಸ್ತುಗಳನ್ನು ಸಂಗ್ರಹಿಸುವುದು ಒಳನಾಡಿನಿಂದ ಕಚ್ಚಾ ಸರಕುಗಳನ್ನು ತಂದು ಸಂಗ್ರಹಿಸುವುದು ಮತ್ತು ವಿದೇಶಗಳಿಗೆ ಕಳುಹಿಸುವ ವಸ್ತುಗಳ ಸಂಗ್ರಹ ಹಾಗೂ ವಿದೇಶಗಳಿಂದ ಬಂದ ವಸ್ತುಗಳನ್ನು ಸಾಗಿಸುವುದೇ ದೊಡ್ಡ ಉದ್ಯಮವಾಗಿತ್ತು. ಈ ಸಂದರ್ಭದಲ್ಲಿ ರೇವು ಪಟ್ಟಣಗಳು ಬಹು ಜನರಿಂದ ತುಂಬಿರುತ್ತಿದ್ದವು. ಇಲ್ಲಿಯ ಆಡಳಿತ ಒಂದು ಸವಾಲಾಗಿದ್ದಿತ್ತು. ಮಧ್ಯವರ್ತಿಗಳಾಗಿದ್ದ ದೇಶಿಯ ಹಾಗೂ ವಿದೇಶಿಯ ವರ್ತಕರು ಯಾವುದೇ ವಸ್ತುಗಳ ಉತ್ಪಾದನೆಯಲ್ಲಿ ಭಾಗಿಗಳಾಗಿರದಿದ್ದರೂ ಬಂದರಿನ ಮೂಲಕ ನಡೆಯುವ ಎಲ್ಲಾ ವ್ಯಾಪಾರಗಳಿಗೆ ಬಾಧ್ಯಸ್ಥರಾಗಿದ್ದರು. ಇವರು ರಾಜನೊಂದಿಗೆ ನಿಕಟ ಬಾಂಧವ್ಯ ಹೊಂದಿದ್ದರು. ಅರಮನೆಯ ಪಾರುಪತ್ಯ, ದೇವಾಲಯ, ಬಸದಿಗಳ ಮೇಲುಸ್ತುವಾರಿ ಹಾಗೂ ನಗರಾಡಳಿತದಲ್ಲಿ

ಭಾಗಿಗಳಾಗತೊಡಗಿದ್ದರು. ಅರಮನೆಯ ಭಂಡಾರವು ಕರಗದಂತೆ ನೋಡಿಕೊಳ್ಳುವ ಬಹು ಜವಬ್ದಾರಿಯ ಕೆಲಸಗಳಲ್ಲಿ ಭಾಗಿಗಳಾಗಿದ್ದರು.

ಭೋಜರ ಅರ್ಗಾ ತಾಮ್ರ ಪತ್ರವು[೧೧೨] ರಾಜ ಕಾಪಾಲಿ ವರ್ಮನ ಕಾಲದಲ್ಲಿ ಆದಿತ್ಯಶ್ರೇಷ್ಠಿ ಎಂಬ ವ್ಯಾಪಾರಿಯು ದಾನ ಪಾತ್ರನಾಗಿದ್ದನೆಂದು ತಿಳಿಸುತ್ತದೆ. ಈ ಶಾಸನದ ಕಾಲಾವಧಿ ಆರನೇ ಶತಮಾನ. ಬಾರ್ಕೂರು, ಮಂಗಳೂರು, ಬಸರೂರು, ಭಟ್ಕಳ, ಹೊನ್ನಾವರ ಮುಂತಾದ ಬಂದರು ಪ್ರದೇಶಗಳಲ್ಲಿ ರಾಜರು ನೀಡುತ್ತಿದ್ದ ದಾನ, ದತ್ತಿ ಹಾಗೂ ನಗರಕ್ಕೆ ಸಂಬಂಧಿಸಿದ ವಿಶೇಷ ಕೆಲಸ ಕಾರ್ಯಗಳ ಸಂದರ್ಭದಲ್ಲಿ ವರ್ತಕ ಸಂಘಗಳ ಪ್ರತಿನಿಧಿ ಉಪಸ್ಥಿತರಿರುತ್ತಿದ್ದರು. ರಾಜನ ಬೊಕ್ಕಸದ ಸಂವರ್ದನೆ, ರಕ್ಷಣೆ ವರ್ತಕ ಸಂಘಗಳ ಜವಾಬ್ದಾರಿಗಳಲ್ಲಿ ಒಂದು ಎನ್ನುವಂತಾಗಿತ್ತು. ತೆರಿಗೆ ವಸೂಲಿಯಂತಹ ಜವಾಬ್ದಾರಿಯನ್ನು ಅರಸ ಶ್ರೇಣಿಗಳಿಗೆ ವಹಿಸಿಕೊಟ್ಟಿದ್ದನು. ಇದರ ಲಾಭ ಪಡೆದ ವರ್ತಕರು ತಮ್ಮ ತಮ್ಮ ವೃತ್ತಿಗಳ ಹೆಸರುಗಳಲ್ಲಿ ಸಂಘ ರಚಿಸಿಕೊಂಡರು. ಜೊತೆಗೆ ಹೊರಗಿನ ಊರುಗಳಿಂದ, ಹೊರದೇಶಗಳಿಂದ ವ್ಯಾಪಾರಿಗಳು ಬಂದು ತಮ್ಮ ಸಂಘಟನೆ, ಶ್ರೇಣಿ ನಿರ್ಮಿಸಿಕೊಂಡು ಆಡಳಿತದಲ್ಲಿ ಭಾಗಿಗಳಾದರು.

ಬಹುಮುಖ್ಯವಾಗಿ ಕಂಡುಬರುವ ನಖರ ಅಥವಾ ನಕರರೂ ಕ್ರಿ.ಶ ೧೧ನೇ ಶತಮಾನದಿಂದಲೆ ಪ್ರಬಲರಾಗಿದ್ದುದೂ ತಿಳಿಯುತ್ತದೆ. ಇವರುಗಳು ನಗರ ಪ್ರದೇಶದ ವ್ಯಾಪಾರಿಗಳಾಗಿದ್ದರು. ಆದ್ದರಿಂದಲೇ ಇವರಿಗೆ ನಕರ ಅಥವಾ ನಖರ ಎಂದು ಕರೆಯುತ್ತಿದ್ದರು. ಬಸರೂರು ಪಟ್ಟಣದಲ್ಲಿ ಇವರ ಹೆಸರಿನಲ್ಲಿಯೇ ಕ್ರಿ.ಶ ೧೧೫೪ರಲ್ಲಿ ನಖರೇಶ್ವರ ಎಂಬ ಶಿವದೇವಾಲಯ ನಿರ್ಮಿಸಿಕೊಂಡಿದ್ದರು. ಇಂಥಹ ದೇವಾಲಯ ಒಂದು ಕೇರಳದ ತೀರದಲ್ಲೂ ಇತ್ತು. ಮಂಗಳೂರಿನಲ್ಲೂ ಒಂದು ನಖರೇಶ್ವರ ಗಣಪತಿ ದೇವಾಲಯವಿತ್ತು. ಬಸರೂರಿನಲ್ಲಿ ಆಡಳಿತಕ್ಕಾಗಿ ಮಾಡಿಕೊಂಡಿದ್ದ ಏಳು ಕೇರಿಗಳಿದ್ದವು. ಅವುಗಳ ಆಡಳಿತದಲ್ಲಿ ವರ್ತಕ ಸಂಘಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ಬಸರೂರಿನ ಪ್ರಮುಖ ಕೇರಿಯಾಗಿರುವ ಮಂಡಿಕೇರಿಯ ಹೆಸರೇ ಸೂಚಿಸುವಂತೆ ವ್ಯಾಪಾರಿಮಂಡಿಗಳ ಸಂಗ್ರಹಾಗಾರವಾಗಿತ್ತು. ಈ ಮಂಡಿಕೇರಿಯು ವಾರಾಹಿ ನದಿಗೆ ನೇರ ಸಂಪರ್ಕ ಹೊಂದಿತ್ತು. ಬೃಹತ್ ಹಡಗುಗಳಿಗೆ ಸರಕು ಸಾಗಿಸಲು ನೇರವಾದ ಸಂಪರ್ಕವಿತ್ತು. ವಿಲಾಸಿಕೇರಿಯ ಸಮೀಪದಲ್ಲಿ ಹಟ್ಟಿ ಅಂಗಡಿ ಇತ್ತು. ಇದು ಪ್ರಾಚೀನ ಕಾಲದಿಂದಲೂ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು. ಇಲ್ಲಿಯೂ ಕೂಡ ವರ್ತಕ ಸಂಘದವರು ತಮ್ಮ ಪ್ರಭುತ್ವ ಸ್ಥಾಪಿಸಿಕೊಂಡಿದ್ದರು. ಬಸರೂರಿನ ಕ್ರಿ.ಶ ೧೧೫೪ರ ಕವಿ ಆಳುಪೇಂದ್ರನ ಶಾಸನವು ನಖರೇಶ್ವರ ದೇವರ ವಿನಿಯೋಗಕ್ಕೆ ಪಾಂಡ್ಯ ಗದ್ಯಾಣ ದಾನ ಪಡೆದುದ್ದನ್ನು ತಿಳಿಸುತ್ತದೆ[೧೧೩]. ಹಾಗೇ ಅನೇಕ ಶಾಸನಗಳು ನಖರೇಶ್ವರ ದೇವನಿಗೆ ಅನೇಕ ವ್ಯಾಪಾರಿಗಳಿಂದ ದಾನ ದೊರೆತ್ತಿದ್ದನ್ನು ಹೇಳುತ್ತದೆ.

ರಾಜನೆ ನಿಂತು ನಡೆಸಿಕೊಟ್ಟ ಅನೇಕ ದಾನ ದತ್ತಿಗಳಲ್ಲಿ ನಕರರು, ಶೆಟ್ಟಿಕಾರರು, ಹಲರು, ನಖರ ಹಂಜಮಾನರು ಉಪಸ್ಥಿತರಿದ್ದುದು ತಿಳಿಯುತ್ತದೆ. ವರ್ತಕ ಸಂಘಗಳು ರಾಜನೊಂದಿಗೆ ಹೊಂದಿದ್ದ ಸಂಬಂಧ ಹಾಗೂ ಆಡಳಿತದಲ್ಲಿ ಅವರಿಗಿದ್ದ ಪ್ರಭಾವ ಇಲ್ಲಿ ವ್ಯಕ್ತವಾಗುತ್ತದೆ. ಉದ್ಯಾವರ ಕ್ರಿ.ಶ ೯ನೇ ಶತಮಾನದ ಮಾರಮ್ಮನ ಶಾಸನವು[೧೧೪] ಕರಸಿನಾಯ್ಗ ಎನ್ನುವವನನ್ನು ನಕರದ ಆಡಳಿತಗಾರನಾಗಿ ನೇಮಿಸಿದ್ದನ್ನು ತಿಳಿಸುತ್ತದೆ. ಇಲ್ಲಿ ಕರಸಿ ನಾಯ್ಗನು ನಕರದ ಪ್ರತಿನಿಧಿಯಾಗಿದ್ದಿರಬೇಕು. ಇದೇ ಸಭೆಯಲ್ಲಿ ಉದಯಪುರದ(ಉದ್ಯಾವರ) ನಕರರು ಜೊತೆಯಾಗಿದ್ದುದ್ದನ್ನು ಹೇಳಲಾಗಿದೆ. ಎರಡನೇ ಚಿತ್ರವಾಹನನ ಉದ್ಯಾವರ ಶಾಸನವು ಜಕ್ಕನಾಯ್ಗರ ಮಗ ಧರ್ಮಣ್ಣನು ಕಿರಿಯ ನಾಗದತ್ತನಿಗೆ ಮಂಗಲಪುರದಲ್ಲಿ ನಗರದವರೊಡಗೂಡಿ ಪಾಂಡ್ಯನಾಯಕನ್ ಎಂಬ ಬಿರುದು ನೀಡಿದ್ದಾಗಿ ತಿಳಿಸುತ್ತದೆ[೧೧೫]. ಇಲ್ಲಿಯು ನಾಗದತ್ತನು ನಗರದವರ ಪ್ರತಿನಿಧಿಯಾಗಿದ್ದಿರಬೇಕು ಅಥವಾ ನಗರದವರು ಪ್ರಮುಖ ಪಾತ್ರದಾರಿಗಳಾಗಿ ಕುಡಾಲದ ಅಧಿಕಾರ ಚಲಾಯಿಸುವ ಗುಂಪಾಗಿದ್ದಿರ ಬಹುದೆನ್ನೆವುದು ತಿಳಿಸಿಸುತ್ತದೆ. ಪಾಂಡ್ಯನಾಯಕನ್ ಬಿರುದಿನೊಂದಿಗೆ ಆತನಿಗೆ ಮಂಗಲಾಪುರದ ಆಡಳಿತ ಬಿಟ್ಟುಕೊಟ್ಟಿದ್ದು ನೋಡಿದರೆ ಆತನು ನಕರದ ಪ್ರತಿನಿಧಿಯೆ ಆಗಿರಬೇಕು.

ಬಾರ್ಕೂರು ಪ್ರಮುಖ ಬಂದರು ಪಟ್ಟಣವಾಗಿತ್ತು. ಈ ಪಟ್ಟಣದ ಆಡಳಿತದಲ್ಲಿ ವರ್ತಕರು ವಹಿಸಿದ ಪಾತ್ರ ಹಿರಿಯದಾದದ್ದು. ರಾಜನೊಡನೆ ಇದ್ದ ಸುಲಭ ಸಂಪರ್ಕವು ಇವರನ್ನು ಪಟ್ಟಣದ ಆಡಳಿತದಲ್ಲಿ ಭಾಗಿಗಳನ್ನಾಗಿಸಿತ್ತು. ಇಲ್ಲಿಯ ಹತ್ತು ಕೇರಿಗಳು ಆಡಳಿತಕ್ಕೆ ವಿವಿಧ ವರ್ಗಗಳಿಗೆ ನೀಡಲ್ಪಟ್ಟಿತ್ತು. ವರ್ತಕರು ದಾನ ನೀಡುವ ಮಟ್ಟದಲ್ಲಿದ್ದರು, ಅರಸರೊಂದಿಗೆ ಸಭೆಗಳಲ್ಲಿ ಭಾಗವಹಿಸಿ ದಾನ ನೀಡಿ ಶಾಸನ ಹಾಕಿಸುತ್ತಿದ್ದರು. ಬೆಮ್ಮಣ್ಣಶೆಟ್ಟಿ, ಕೇಶವಶೆಟ್ಟಿ, ತಂಗಾಯಿ ಶೆಡ್ತಿ ಮುಂತಾದವರು ಭೂಮಿ, ಬಂಗಾರದ ನಾಣ್ಯದನ್ನು ಹಾಗೂ ದೀಪಕ್ಕೆ ದಾನ ನಿಡಿದ್ದು ತಿಳಿಯುತ್ತದೆ[೧೧೬]. ಅಲ್ಲದೇ ವರ್ತಕ ಸಂಘಗಳು ಈ ಶಾಸನದ ರಕ್ಷಣೆಯ ಜವಾಬ್ದಾರಿಯನ್ನು ಅರಸನ ಆಜ್ಞೆಯಿಂದ ಪಡೆದಿದ್ದರು. ಅಂದರೆ ಶಾಸನವು ಜಾರಿಗೊಳಿಸುವ ಹೊಣೆ ಮತ್ತು ಅದು ಮುಂದುವರಿಸುವ ಜವಾಬ್ದಾರಿ ಇವರದಾಗಿತ್ತು. ಇಂಥಹ ಜವಾಬ್ದಾರಿ ಹೊತ್ತ ವರ್ತಕರ ವಿವರಗಳು ಅನೇಕ ಶಾಸನಗಳಲ್ಲಿ ದೊರೆಯುತ್ತವೆ. ಹಲರು, ಶೆಟ್ಟಿಕಾರರು, ಎಳೆಮೆಗೊಳಗಾದವರು, ನಕರರು, ನಕರಹಂಜಮಾನರು ಇಂಥಹ ಹೊಣೆಗಾರಿಕೆಗೆ ಭಾಜನರಾಗಿದ್ದರು.

ಚಂದಾವರ ಕಾದಂಬರ ಕಾಲದಲ್ಲಿ ನಕರ, ನಾನಾದೇಶಿ, ಮುಮ್ಮರಿದಂಡ ಮುಂತಾದ ವರ್ತಕ ಸಂಘಗಳು ಪ್ರಬಲವಾಗಿದ್ದವು. ಮಂಕಿ ಬಂದರು ಪ್ರದೇಶದಲ್ಲಿ ನಾನಾದೇಶಿಗಳು ಹಾಗೂ ಮುಮ್ಮರಿದಂಡ ವರ್ತಕಪ್ರತಿನಿಧಿಗಳು ಆಡಳಿತದಲ್ಲಿ ಭಾಗಿಗಳಾಗಿದ್ದರು[೧೧೭]. ಇವರು ದಾನ

ನೀಡುವಾಗ ಉಪಸ್ಥಿತರಿರುವುದು ಹಾಗೂ ಅದರ ರಕ್ಷಣೆ ಮಾಡುವ ಹೊಣೆ ಹೊತ್ತಿದ್ದರು. ಹೊಯ್ಸಳರು ಕರಾವಳಿ ಪ್ರವೇಶಿಸಿ ಆಳಲು ತೊಡಗಿದ್ದಾಗ ಆಡಳಿತದಲ್ಲಿ ಹಲವು ಬದಲಾವಣೆಗಳಾದರೂ ವ್ಯಾಪಾರಿಗಳಾದ ನಕರ, ಶೆಟ್ಟಿಕಾರ, ನಕರಹಂಜಮಾನ ಮತ್ತು ಕೊಲಬಳಿಗಳ ಪ್ರಭುತ್ವಕ್ಕೆ[೧೧೮] ಯಾವುದೆ ಧಕ್ಕೆ ಉಂಟಾಗಲಿಲ್ಲ. ಇವರುಗಳು ನಾಡಿನ ಬಂದರುಪ್ರದೇಶದ ಆಡಳಿತದಲ್ಲಿ ತಮ್ಮ ಸ್ಥಾನ ಉಳಿಸಿಕೊಂಡು ಬಂದಿದ್ದರು.

ಶಾಸನಗಳ ವಿವರದಲ್ಲಿ ವರ್ತಕ ಸಂಘಗಳ ಪ್ರಾಬಲ್ಯ ಕಂಡುಬರುತ್ತದೆ. ರಾಜ ಮತ್ತು ಸೈನ್ಯ ಒಂದೆಡೆಯಾದರೆ, ವರ್ತಕ ಸಂಘಗಳು ಸ್ವತಂತ್ರವಾಗಿದ್ದು ತಮ್ಮಲ್ಲಿರುವ ಸಂಪತ್ತಿನಿಂದ ಗೌರವದಸ್ಥಾನ ಪಡೆದು ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಕಂಡುಬರುತ್ತದೆ. ಕೊಲೆಯಂತಹ ಅಪರಾಧ ಮಾಡಿದರೂ ಅವರು ತಪ್ಪಿಸಿಕೊಳ್ಳುತ್ತಿದ್ದರು[೧೧೯]. ಇಂತಹ ಒಂದು ಉದಾಹರಣೆ ಶಾಸನದಲ್ಲಿ ಕಂಡುಬರುತ್ತದೆ. ನಕರರು ತಮ್ಮದೇ ಸಮುದಾಯದವರೊಂದಿಗೆ ಉಂಟಾದ ಭಿನ್ನಾಭಿಪ್ರಾಯದಿಂದ ಎರಡು ವರ್ತಕರನ್ನು ಕೊಲೆಗೈದು, ಈ ಕೊಲೆಗೆ ಪ್ರತಿಯಾಗಿ ದೇವಾಲಯಕ್ಕೆ ದಾನ ನೀಡುವ ಮೂಲಕ ಪ್ರಾಯಶ್ಚಿತ ಮಾಡಿಕೊಂಡಿದ್ದರು. ನಕರರು, ವಣಂಜುಗಳು, ಹಲರು ದೇವಾಲಯದ ಆಡಳಿತದ ಜವಾಬ್ದಾರಿ ಹೊಂದಿದವರಾಗಿ, ದೇವಾಲಯಗಳಿಗೆ ಮತ್ತು ಬಸದಿಗಳಿಗೆ ಬರುವ ದಾನ ದತ್ತಿ, ಬಂಗಾರದ ನಾಣ್ಯಗಳನ್ನು ಬಡ್ಡಿ ವ್ಯವಹಾರಗಳಿಗೂ ಬಳಸಿಕೊಂಡಿದ್ದು ಕಂಡುಬರುತ್ತದೆ. ಬಂದ ಲಾಭದಲ್ಲಿ ದೇವಾಲಯದ ಋಣ ತೀರಿಸುತ್ತಿದ್ದರು. ಹೀಗೆ ವರ್ತಕರು ನಗರ ಪಟ್ಟಣಗಳ ಆಡಳಿತದಲ್ಲಿ ಭಾಗಿಗಳಾಗಿರುತ್ತಿದ್ದರು.

ಕೊನೆ ಟಿಪ್ಪಣಿ

೧. ಕರ್ನಾಟಕ ಪರಂಪರೆ, ಸಂ. ೨. ಪುಟ ೧೬

೨. ಅದೇ, ಪುಟ ೧೭

೩. ಭಟ್ ಗುರುರಾಜ್ ಪಿ., ತುಳುನಾಡು, ಪುಟ ೬೭

೪. ಕರ್ನಾಟಕ ಪರಂಪರೆ, ಸಂ.೨. ಪುಟ ೧೮

೫. ಅದೇ, ಪುಟ ೩೧೯

೬. ಗೋಪಾಲ ಬಾ.ರಾ., ಬನವಾಸಿ ಕದಂಬರು, ಪುಟ ೫ (ಶಿವಸ್ಕಂದ ವರ್ಮನ ಮಳವಳ್ಳಿ ಶಾಸನ)

೭. ಅದೇ, ಪುಟ ೧೮ (ಮೃಗೇಶವರ್ಮನ ದೇವಗಿರಿ ತಾಮ್ರ ಶಾಸನ)

೮. ಅದೇ, ಪುಟ ೭೦ (ವಿಜಯಶಿವ ಮೃಗೇಶವರ್ಮನ ೪ನೇ ವರ್ಷದ ದೇವಗಿರಿ ತಾಮ್ರ ಶಾಸನ)

೯. ಅದೇ, ಪುಟ ೨೭ (ಮೃಗೇಶವರ್ಮನ ೮ನೇ ವರ್ಷದ ಹಲಸಿ ತಾಮ್ರ ಶಾಸನ)

೧೦. ಅದೇ, ಪುಟ ೩ (ಶಿವ ಮಾಂಧಾತ ವರ್ಮನ ಕೂಡುಗೆರೆ ತಾಮ್ರ ಶಾಸನ)

೧೧. ಕರ್ನಾಟಕ ಪರಂಪರೆ, ಸಂ. ೨. ಪುಟ ೨೧

೧೨. ಅದೇ, ಪುಟ ೩೪೬

೧೩. ಅದೇ, ಪುಟ ೩೪೬

೧೪. ಅದೇ, ಪುಟ ೩೪೬

೧೫. ಅದೇ, ಪುಟ ೩೮೩

೧೬. ಅದೇ, ಪುಟ ೩೮೪

೧೭. ಅದೇ, ಪುಟ ೧೭೬

೧೮. ಭಟ್ ಗುರುರಾಜ್ ಪಿ., ತುಳುನಾಡು, ಪುಟ ೨೧೮

೧೯. ವರ್ಮ ಶೈಲಾ ಟಿ., ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೩೫

೨೦. ಅದೇ, ಪುಟ ೧೩೬–೧೪೦

೨೧. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ಪುಟ ೯೮

೨೨. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದ್ರಾವರ ಕಾದಂಬರು, ಪುಟ ೬೬

೨೩. ಗೋಪಾಲ ಬಾ.ರಾ., ತುಳುನಾಡಿನ ಇತಿಹಾಸ, ಪುಟ ೬೬

೨೪. ಅದೇ, ಪುಟ ೬೮

೨೫. ಗುರುರಾಜ್ ಭಟ್ ಪಿ., ತುಳುನಾಡು, ಪುಟ ೯೭

೨೬. ಅದೇ, ಪುಟ ೧೧

೨೭. ಅಯ್ಯರ್ ಸತ್ಯನಾಥ ಆರ್., ಪ್ರಾಚೀನ ಭಾರತ (ಅನು) ಆನವಟ್ಟಿ ಎಂ. ಆರ್., ಪುಟ ೧೯೦

೨೮. ಅದೇ, ಪುಟ ೧೯೨

೨೯. ಭಟ್ ಗುರುರಾಜ್ ಪಿ., ತುಳುನಾಡು, ಪುಟ ೨೦೬

೩೦. ಅದೇ' ಪುಟ ೩೧

೩೧. ಅದೇ, ಪುಟ ೪೭

೩೨. ಅದೇ, ಪುಟ ೪೮

೩೩. ಅದೇ, ಪುಟ ೪೮

೩೪. ಅದೇ, ಪುಟ ೨೧೮

೩೫. ವರ್ಮಾ ಶೈಲಾ ಟಿ., ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೩೪

೩೬. ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ಪುಟ ೯೬

೩೭. ಅದೇ, ಪುಟ ೯೬

೩೮. ಅದೇ, ಪುಟ ೯೬

೩೯. ತಾಂಡೇಲ ಸುರೇಶ, ಹೊನ್ನಾವರ ತಾಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೯೦ ರಲ್ಲಿ ಎಮ್.ಎ., ಪ್ರಥಮ ವರ್ಷದ ಕ್ಷೇತ್ರಕಾರ್ಯಕ್ಕೆ ರಘುನಾಥ ಭಟ್ಟ ಹೆಚ್.ಆರ್., ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ ಪ್ರಬಂಧ, ೧೯೯೦ ಪುಟ ೧೫-೧೬

೪೦. ಅದೇ, ಪುಟ ೧೩

೪೧. ಅದೇ, ಪುಟ ೧೩-೧೪

೪೨. ರೈ ಮೋಹನಕೃಷ್ಣ ಕೆ., ಕೆನರಾ ವಿಭಜನೆ, ಪುಟ ೩೫

೪೩. ಅದೇ, ಪುಟ ೩೮

೪೪. ತಾಂಡೇಲ ಸುರೇಶ, ಹೊನ್ನಾವರ ತಾಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಅಪ್ರಕಟಿತ ಪ್ರಬಂಧ ೧೯೯೦ ಪುಟ ೧೪

೪೫. ಅಂತೋನೊವಾ ಕೆ., ಬೊಂಗಾದ್ರ ಲೆವಿನ್ ಜೆ., ಭಾರತದ ಇತಿಹಾಸ, ಪುಟ ೯೨

೪೬. ಅದೇ, ಪುಟ ೯೪

೪೭. ಅಯ್ಯರ್ ಸತ್ಯನಾಥ ಆರ್., ಪ್ರಾಚೀನ ಭಾರತ, ಅನು. ಆನವಟ್ಟಿ ಎಮ್ ಆರ್., ಪುಟ ೧೯೦

೪೮. ಶೆಟ್ಟರ್ ಷ್., ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಪುಟ ೭೭

೪೯. ಬಾಲಗೋಪಾಲ ಕೆ., ಪ್ರಾಚೀನ ಭಾರತದ ಚರಿತ್ರೆ, ಪುಟ ೧೮೬

೫೦. ಶರ್ಮಾ ಆರ್.ಎಸ್., ಪ್ರಾಚೀನ ಭಾರತ, ಪುಟ ೧೪೩

೫೧. ಅದೇ, ಪುಟ ೧೪೦

೫೨. ಕರ್ನಾಟಕ ಪರಂಪರೆ, ಸಂಪುಟ. ೨. ಪುಟ ೧೨೯

೫೩. ಅದೇ, ಪುಟ೧೨೯

೫೪. ಅದೇ, ಪುಟ ೧೪೨

೫೫. ಅಂತೋನೊವಾ ಕೆ., ಬೊಂಗಾದ್ರ ಲೆವಿನ್ ಜೆ., ಭಾರತದ ಇತಿಹಾಸ,ಪುಟ ೪೮

೫೬. ಅದೇ, ಪುಟ ೨೨೧

೫೭. ನಾಗೇಗೌಡ ಎಚ್.ಎಲ್., ಪ್ರವಾಸಿ ಕಂಡ ಇಂಡಿಯಾ, ಸಂ.ಪು ೧. ಪುಟ ೬೪

೫೮. ಅದೇ, ಪುಟ ೩೫

೫೯. ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಪುಟ ೨೬

೬೦. ಅದೇ, ಪುಟ ೨೬

೬೧. ಅದೇ, ಪುಟ ೪೩

೬೨. ಅದೇ, ಪುಟ ೨೬

೬೩. ಅದೇ, ಪುಟ ೨೬

೬೪. ಅದೇ, ಪುಟ ೨೯

೬೫. ರಮೇಶ ಕೆ. ವಿ., ಶರ್ಮಾ ಎಮ್.ಜೆ., ತುಳುನಾಡಿನ ಅರಸು ಮನೆತನಗಳು, ಪುಟ ೬

೬೬. ಅದೇ, ಪುಟ ೬

೬೭. ಎಪಿಗ್ರಾಫಿಕಾ ಕರ್ನಾಟಿಕಾ, ಸಂ. ೮, ತಾಮ್ರ ಪತ್ರ ಸಂಖ್ಯೆ ೧೦

೬೮. ರಮೇಶ ಕೆ. ವಿ., ಶರ್ಮಾ ಎಮ್.ಜೆ., ತುಳುನಾಡಿನ ಅರಸು ಮನೆತನಗಳು, ಪುಟ ೭

೬೯. ಎ.ಆರ್.ಎಸ್.ಐ.ಇ., ೧೯೩೦–೩೧, ಸಂಖ್ಯೆ ೩೫೧, ಇಪಿ. ಇಂಡಿಕಾ ಸಂ. ೨೭, ಪುಟ ೨೪–೨೫

೭೦. ರಮೇಶ ಕೆ. ವಿ., ತುಳುನಾಡಿನ ಶಾಸನಗಳು, ಎರಡನೇ ಚಿತ್ರವಾಹನನ ಉದ್ಯಾವರ ಶಾಸನ, ಪುಟ ೧೭

೭೧. ಅದೇ, ಪುಟ ೧೭

೭೨. ಅದೇ, ಪುಟ ೬೬

೭೩. ಅದೇ, ಪುಟ ೬೬

೭೪. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೯–೧೦

೭೫. ರಮೇಶ ಕೆ. ವಿ., ಶರ್ಮಾ ಎಮ್.ಜೆ., ತುಳುನಾಡಿನ ಅರಸು ಮನೆತನಗಳು, ಪುಟ ೧೫

೭೬. ಅದೇ, ಪುಟ ೫೭

೭೭. ಪ್ರೊಗ್ರೆಸ್ ಆಫ್ ಕನ್ನಡ ರಿಸರ್ಚ ಇನ್ ಬೊಂಬೈ ಸ್ಟೇಟ್ ೧೯೪೭–೫೭ ಪಂಚಮುಖಿ, ಆರ್.ಎಸ್, ಪುಟ ೧೬ ಕೆ.ಆರ್.ಐ ಧಾರವಾಡ ೧೯೫೩

೭೮. ಅದೇ, ಪುಟ ೧೭

೭೯. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೨೩

೮೦. ಅದೇ, ಪುಟ ೨೬

೮೧. ಅದೇ, ಪುಟ ೨೭

೮೨. ಸಮರೀಸ್ ಆಫ್ ಇನ್ಸ್ಕ್ರೆಪ್ಶನ್ಸ್ ೧೯೪೩–೪೪ ರಿಂದ ೧೯೪೯–೫೦ (ಸಂ) ದೇಸಾಯಿ ಪಿ.ಬಿ., ಪುಟ ೯–೩೪

೮೩. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ೨೮–೨೯

೮೪. ಅದೇ, ಪುಟ ೩೦

೮೫. ಅದೇ, ಪುಟ ೪೨

೮೬. ಅದೇ, ಪುಟ ೪೩

೮೭. ಪ್ರೊಗ್ರೆಸ್ ಆಫ್ ಕನ್ನಡ ರಿಸರ್ಚ ಇನ್ ಬೊಂಬೈ ಸ್ಟೇಟ್ ೧೯೪೭-೫೭ ಪಂಚಮುಖಿ, ಆರ್.ಎಸ್., ಪುಟ ೧೬ ಕೆ.ಆರ್.ಐ ಧಾರವಾಡ ೧೯೫೩

೮೮. ಕರ್ನಾಟಕ ಪರಂಪರೆ, ಸಂ.೨ ಪುಟ ೪೦೧

೮೯. ಅದೇ, ಪುಟ ೪೦೧

೯೦. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೫೨

೯೧. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೧೮

೯೨. ಅದೇ, ಪುಟ ೮೮

೯೩. ಅದೇ, ಪುಟ ೬೩-೬೬

೯೪. ಅದೇ, ಪುಟ ೬೫

೯೫. ಸಮರೀಸ್ ಆಫ್ ಇನ್ಸ್ಕ್ರಿಪ್ಶನ್ಸ್ ೧೯೪೩-೪೪ ರಿಂದ ೧೯೪೯-೫೦ (ಸಂ) ದೇಸಾಯಿ ಪಿ.ಬಿ., ಪುಟ ೯-೩೪

೯೬. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೬೪

೯೭. ಪ್ರೊಗ್ರೆಸ್ ಆಫ್ ಕನ್ನಡ ರಿಸರ್ಚ ಇನ್ ಬೊಂಬೈ ಸ್ಟೇಟ್ ೧೯೪೭-೫೭ ಪಂಚಮುಖಿ, ಆರ್.ಎಸ್, ಕೆ.ಆರ್.ಐ ಧಾರವಾಡ ೧೯೫೩ ಪುಟ ೧೬

೯೮. ರಮೇಶ ಕೆ. ವಿ., ಶರ್ಮಾ ಎಮ್.ಜೆ., ತುಳುನಾಡಿನ ಅರಸು ಮನೆತನಗಳು, ಪುಟ ೩೦

೯೯. ನರಸಿಂಹಮೂರ್ತಿ ಪಿ. ಎನ್., (ಸಂಗ್ರಹ) ಬಸ್ರೂರು ಒಂದು ಅಧ್ಯಯನ, ಬಸರೂರಿನ ಶಾಸನಗಳು, ಪುಟ ೨೨೩.

೧೦೦. ರಮೇಶ ಕೆ. ವಿ. ತುಳುನಾಡಿನ ಶಾಸನಗಳು, ಪುಟ ೪೧

೧೦೧. ಅದೇ, ಪುಟ ೧೭

೧೦೨. ಅದೇ, ಪುಟ ೧೧೭-೧೧೯-೧೨೧

೧೦೩. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೭೬

೧೦೪. ರಮೇಶ ಕೆ.ವಿ., ಶರ್ಮಾ ಎಂ.ಜೆ., ತುಳುನಾಡಿನ ಇತಿಹಾಸ, ಪುಟ ೭೧

೧೦೫. ವರ್ಮಾ ಶೈಲಾ ಟಿ., ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೪೨.

೧೦೬. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೭೩

೧೦೭. ಅದೇ, ಪುಟ ೭೮

೧೦೮. ಅದೇ, ಪುಟ ೧೧೦

೧೦೯. ಅದೇ, ಪುಟ ೧೧೧

೧೧೦. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೫೩

೧೧೧. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೧೧೩

೧೧೨. ಪ್ರೊಗ್ರೆಸ್ ಆಪ್ ಕನ್ನಡ ರಿಸರ್ಚ ಇನ್ ಬೊಂಬೈ ಸ್ಟೇಟ್ ೧೯೪೭-೫೭ ಪಂಚಮುಖಿ ಆರ್.ಎಸ್., ಕೆ.ಆರ್.ಐ., ಧಾರವಾಡ, ೧೯೫೩ ಪುಟ ೧೬

೧೧೩. ರಮೇಶ ಕೆ. ವಿ., ತುಳುನಾಡಿನ ಶಾಸನಗಳು, ಪುಟ ೪೧

೧೧೪. ಅದೇ, ಪುಟ ೪೪

೧೧೫. ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಪುಟ ೭೨

೧೧೬. ಅದೇ; ಪುಟ ೮೦

೧೧೭. ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೧೧೪.

೧೧೮. ರಮೇಶ ಕೆ. ವಿ., ತುಳುನಾಡಿನ ಶಾಸನಗಳು, ಪುಟ ೪೭

೧೧೯. ಅದೇ, ಪುಟ ೬೧

ಅಧ್ಯಾಯ: ಐದು

ಬಂದರುಗಳ ಸಾಂಸ್ಕೃತಿಕ ಇತಿಹಾಸ

ಅಧ್ಯಾಯ : ಐದು

ಬಂದರುಗಳು ಸಾಂಸ್ಕೃತಿಕ ಇತಿಹಾಸ

೫.೧. ಬಂದರುಗಳ ಧಾರ್ಮಿಕ ಜೀವನ

ಪೀಠಿಕೆ

ಪಶ್ಚಿಮ ಘಟ್ಟಗಳಗುಂಟ ಕರ್ನಾಟಕದಲ್ಲಿ ಹಬ್ಬಿರುವ ಅರಬ್ಬೀ ಸಮುದ್ರವನ್ನು ಹಾಗೂ ಅದರ ತೀರ ಪ್ರದೇಶವನ್ನು ಕರಾವಳಿ ಎಂದು ಕರೆಯುತ್ತಾರೆ. ಈ ಕರಾವಳಿ ಭೂಭಾಗವು ಅಗಲ ಕಿರಿದಾಗಿ ವೈವಿಧ್ಯಮಯವಾಗಿ ಹಬ್ಬಿದೆ. ಈ ಭೂಭಾಗ ಕೇವಲ ೧೩೦ ರಿಂದ ೧೪೦ ಕಿ.ಮೀ ಉದ್ದವಾಗಿದೆ. ಆದರೆ ಕಡಲು ಪರ್ವತ ಶ್ರೇಣಿಯ ನಡುವಿನ ಈ ಜನವಸತಿಯ ಭೂಭಾಗ ವೈವಿಧ್ಯಮಯವಾದ ಜೀವನ ಪದ್ಧತಿಯನ್ನು ಸಂಸ್ಕೃತಿಯನ್ನು ರೂಪಿಸಿಕೊಂಡಿದೆ. ಭಾರತದ ಪರ್ಯಾಯದ್ವೀಪದಲ್ಲಿ ಕರ್ನಾಟಕವು ಅತ್ಯಂತ ಆಯಕಟ್ಟಿನಸ್ಥಳದಲ್ಲಿದೆ. ಉತ್ತರ ಹಾಗೂ ದಕ್ಷಿಣ ಭಾಗಗಳಿಗೆ ಕೊಂಡಿಯಂತಿದ್ದು, ದಖ್ಖನ್ ಅಥವಾ ದಕ್ಷಿಣಾಪಥಕ್ಕೆ ಮಹಾದ್ವಾರದಂತಿದೆ[೧]. ಇಂಥಹ ಕರ್ನಾಟಕದ ಪಶ್ಚಿಮ ತೀರವು ಎಲ್ಲರನ್ನು ಸ್ವಾಗತಿಸುವ ಮಹಾದ್ವಾರವಾಗಿದೆ. ಕೇವಲ ವ್ಯಾಪಾರಿಗಳಿಗಷ್ಟೇ ಅಲ್ಲದೇ ಯಾವ ಯಾವುದೋ ಕಾರಣಗಳಿಗಾಗಿ ಜನಾಂಗಗಳೇ ಇಲ್ಲಿ ಬಂದು ವಾಸವಾಗಿವೆ. ಇಲ್ಲಿಯ ಸ್ಥಳೀಯರೊಂದಿಗೆ ಬೆರೆತು ಹೋಗಿವೆ. ದುರ್ಗಮವಾದ ಸಾಲುಸಾಲು ಪರ್ವತ ಶ್ರೇಣಿ ಒಂದಡೆಯಾದರೆ, ಇನ್ನೊಂದೆಡೆ ಭೋರ್ಗರೆವ ಕಡಲು ನಡುಮಧ್ಯದಲ್ಲಿ ಅಗಲ ಕಿರಿದಾದ ಚಿಕ್ಕ ತೀರಪ್ರದೇಶ ಹೊಂದಿದ ಭೂಭಾಗ. ಈ ಭೂಭಾಗವೇ ಸಹಸ್ರಾರು ವರ್ಷಗಳಿಂದ ಜನರಿಗೆ ಬದುಕು ಕಟ್ಟಿಕೊಳ್ಳಲು ಸಹಾಯ ಮಾಡಿದ ಪ್ರದೇಶ. ಇಲ್ಲಿ ಹರಿಯುತ್ತಿದ್ದ ಜೀವಜಲ-ನದಿಕೊಳ್ಳಗಳು ಸಾಹಸಿಯಾದ ಮಾನವನಿಗೆ ಕೈಬೀಸಿ ಕರೆಯಿತು. ಇಲ್ಲಿಯ ಸಮಸ್ಯೆಗಳನ್ನೆಲ್ಲಾ ಎದುರಿಸಿ ಮೀನುಗಾರಿಕೆ, ಬೇಟೆ ಪಶುಪಾಲನೆ, ಕೃಷಿ ವ್ಯಾಪಾರ ಮುಂತಾದವನ್ನು ಮಾಡಿ ಬದುಕು ರೂಪಿಸಿ ಕೊಂಡ ಮಾನವನು, ತನ್ನದೇ ಆದ ಜೀವನ ಪದ್ಧತಿ, ರೀತಿ, ನೀತಿ ಬೆಳೆಸಿಕೊಂಡ. ಈ ಎಲ್ಲ ಬೆಳವಣಿಗಳು ಸಮಗ್ರ ಭಾರತದ ಪರಿವರ್ತನೆಯ, ಜೀವನ ಪದ್ಧತಿಯ ಸ್ಥಳೀಯ ರೂಪವಾಗಿತ್ತು. ಉತ್ಪಾದನಾ ಸಂಬಂಧಗಳು, ಉತ್ಪಾದನಾಸಲಕರಣೆಗಳು ಬದಲಾದಂತೆಲ್ಲಾ ಇಲ್ಲಿಯೂ ಹಂತಹಂತವಾಗಿ ಜನಜೀವನದಲ್ಲಿ ಪರಿವರ್ತನೆಗಳು ಕಂಡುಬಂದವು. ಆದರೂ ಪಂಜರದಂತಿರುವ ಈ ಭೌಗೋಳಿಕ ಲಕ್ಷಣದಲ್ಲಿ ಭಿನ್ನವಾದ ಜನ ಜೀವನ, ಸಂಸ್ಕೃತಿ ಮೂಡಿ ಬಂದಿತು.

'ಮಾನವ ತನ್ನನ್ನು ತಾನೇ ತರಬೇತಿಗೊಳಿಸಿಕೊಂಡ ಏಕೈಕ ಪ್ರಾಣಿ'[೨] ಎಂದು ಗುರುತಿಸಲಾಗಿದೆ. ಭಾಷೆ, ಮತ್ತು ಕೆಲವು ವರ್ತನೆಗಳು ಮಾನವ ಜೀವಿಗೆ ಮಾತ್ರ ಮೀಸಲಿದೆ. ಸಾಮಾಜಿಕ ಗುಂಪಿನ ಸದಸ್ಯರ ಸಂಬಂಧಗಳು, ಪರಿಸರ ಹಾಗೂ ವಿಜ್ಞಾನ ಜನರ ವೈಯಕ್ತಿಕ ಚಟುವಟಿಕೆಗಳನ್ನು ಮಾರ್ಪಡಿಸುವಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಕಾಲಾನುಕ್ರಮದಲ್ಲಿ ಮನುಷ್ಯನ ವರ್ತನೆಯಲ್ಲಾದ, ಚಿಂತನೆಯಲ್ಲಾದ ವೈಚಾರಿಕ ಪರಿವರ್ತನೆ ಆತನನ್ನು ನಾಗರಿಕನನ್ನಾಗಿ ಮಾಡುವಲ್ಲಿ ಪ್ರಮುಖವಾಗಿತ್ತು. ಭೂಮಿಯ ಮೇಲೆ ಬೀಡು ಬಿಟ್ಟಿರುವ ಇತರ ಜೀವಿಗಳಿಂದ ಭಿನ್ನವಾದ ವರ್ತನೆ ಜೀವನ ಪದ್ಧತಿ, ಸಾಮಾಜಿಕ ಜವಾಬ್ದಾರಿ, ಆಹಾರ ಸಂಗ್ರಹ, ಆಹಾರವನ್ನು ಬೆಳೆಯುವುದು ಮತ್ತು ಸೇವಿಸುವುದೆಲ್ಲ ಇಲ್ಲಿ ಪರಿಗಣಿತವಾಗುತ್ತವೆ. ಪ್ರಕೃತಿಯನ್ನು ನಿಯಂತ್ರಿಸಲು ಅದನ್ನು ತನ್ನ ಹಿತಕ್ಕಾಗಿ ಬಳಸಿಕೊಳ್ಳುವ ಸಂದರ್ಭದಲ್ಲಿ ಕಂಡುಕೊಂಡ ಅತೀಂದ್ರಿಯ ಕಲ್ಪನೆ, ದೇವರು ಮುಂತಾದವುಗಳು ಆತನ ಬದುಕಿನ ಹಲವು ಬದಲಾವಣೆಗೆ ಕಾರಣವಾಯಿತು. ಹೀಗೆ ಹಂತಹಂತವಾಗಿ ಬೆಳೆದು ಬಂದ ಧಾರ್ಮಿಕ ಕಲ್ಪನೆ ಮುಂದೆ ಸಿದ್ಧಾಂತ, ತತ್ವಜ್ಞಾನವಾಗಿ ಬೆಳೆಯಿತು.

ಈ ಜಗತ್ತು ಎಂದರೆ ಏನು? ಇದು ಏಕೆ ಮತ್ತು ಹೇಗೆ ಉಂಟಾಯಿತು? ಇದರ ಹಿಂದೆ ಏನಾದರೂ ನಿಯಮ ಮತ್ತು ನಿಯಂತ್ರಣ ಉಂಟೆ? ಇದ್ದರೆ ಅದು ಹೇಗೆ ಕೆಲಸ ಮಾಡುತ್ತದೆ? ನಾನು ಎಂಬುದು ಏನು?.....ಮುಂತಾದ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನದ ಫಲವಾಗಿ ದರ್ಶನ-ತತ್ವಶಾಸ್ತ್ರಗಳು ಹುಟ್ಟಿಕೊಂಡವು[೩]. ಸಮಗ್ರ ಭಾರತಕ್ಕೆ ಒಂದೇ ರೀತಿಯ ಜೀವನ ಪದ್ಧತಿ ಇರಲಿಲ್ಲ. ಅನ್ವಯವಾಗುವ ಯಾವುದೇ ನಿಯಮ ಇರಲಿಲ್ಲ[೪]. ವಿವಿಧ ಜ್ಞಾನ ಶಾಖೆಗಳನ್ನು ಜನರು ಅನುಸರಿಸುತ್ತಿದ್ದರು. ಹೀಗೆ ಸಮಗ್ರ ಭಾರತದಲ್ಲಾದ ಬದಲಾವಣೆ, ಏರಿಳಿತಕ್ಕೆ ಅನುಗುಣವಾಗಿ ಕರಾವಳಿಯ ಸಮಾಜದಲ್ಲಿಯೂ ಧಾರ್ಮಿಕ ಬದಲಾವಣೆಗಳಾದವು. ಈ ಅಧ್ಯಾಯದಲ್ಲಿ ಈ ಕೆಳಗಿನ ಅಂಶಗಳನ್ನು ಪರಿಶೀಸಲಾಗಿದೆ.

೧. ಧಾರ್ಮಿಕ ಪಂಥಗಳು ಅವುಗಳ ವಿವಿಧ ಪಂಗಡಗಳು ೨. ಜನಪದ ಧರ್ಮ

೩. ಸಾಮಾಜಿಕ ಬದುಕಿನ ಮೇಲಾದ ಪರಿಣಾಮ

ತತ್ವ ಶಾಸ್ತ್ರಕ್ಕೆ ಸಾಮಾಜಿಕವಾದ ಬೇರುಗಳಿವೆ. ಅಂದರೆ ಎಲ್ಲಾ ಪ್ರಸಂಗಗಳಲ್ಲಿಯೂ ಅದರ ಉಗಮ ಕೆಲವೊಂದು ಸಾಮಾಜಿಕ ಐತಿಹಾಸಿಕ ಪ್ರಕ್ರಿಯೆಗಳಿಂದ ನಿರ್ಬಂಧಿತವಾಗಿರುತ್ತದೆ. ವರ್ಗಬದ್ಧ ಸಮಾಜದಲ್ಲಿ ಸಾಮಾಜಿಕ ಬೇರುಗಳು ನಿರ್ಧಿಷ್ಟ ವರ್ಗವೊಂದರ ಐಹಿಕ ದೃಷ್ಟಿಯಲ್ಲಿ ಪ್ರತಿಬಿಂಬಿತವಾಗಿರುತ್ತವೆ. ಇಷ್ಟಾಗಿಯೂ ತತ್ವ ಶಾಸ್ತ್ರಜ್ಞನೊಬ್ಬನ ದೃಷ್ಟಿಕೋನಗಳು ಯಾವಾಗಲೂ ಅವನ ವರ್ಗದ ಸದಸ್ಯತ್ವದೊಂದಿಗೆ ನೇರವಾಗಿ ತುಳುಕು ಹಾಕಿಕೊಂಡಿರುತ್ತದೆ ಎಂದು ಸುಲಭವಾಗಿ

ನಂಬಿಕೊಂಡು ಬಿಡಬಾರದು. ವಾಸ್ತವವಾಗಿ ಈ ಕೊಂಡಿಗಳು ಅದರ ಸ್ವರೂಪದಲ್ಲಿಯೇ ವ್ಯವಸ್ಥಿತವಾಗಿರುತ್ತವೆ[೫].

ಕರಾವಳಿಯ ಜನಜೀವನ ಒಂದುಸಾಂಘಿಕ ಜೀವನವಾಗಿ ರೂಪುಗೊಳ್ಳುವುದರೊಂದಿಗೆ, ಸಂಕೀರ್ಣವಾದ ರೀತಿ–ನೀತಿಗಳನ್ನು ಬೆಳೆಸಿಕೊಂಡು ಬಂದಿತು. ಮಾನವನ ಆಧ್ಯಾತ್ಮಿಕ ಉದಾತ್ತೀಕರಣವನ್ನು ಗಮನದಲ್ಲಿರಿಸಿಕೊಂಡು ಉಗಮವಾದ ಧಾರ್ಮಿಕತೆ ವಿವಿಧ ಹಂತಗಳಲ್ಲಿ ಬದಲಾವಣೆಯೊಂದಿಗೆ ಅನೇಕ ರೂಪವನ್ನು ಪಡೆದಿದೆ. ಕರಾವಳಿಯ ಧರ್ಮಗಳು ರಾಜರನ್ನು ಆಶ್ರಯಿಸಿದಂತೆ, ಇನ್ನೊಂದೆಡೆ ವ್ಯಾಪಾರಿ ಶ್ರೀಮಂತ ವರ್ಗವನ್ನು ಆಶ್ರಯಿಸಿಕೊಂಡು ಬಂದಿತು. ಅಂಥಹ ಧರ್ಮಗಳು ವಿವಿಧ ಪ್ರಕಾರಗಳನ್ನು ಹಾಗೂ ಕೈಕಸಬು, ಸಂಚಾರಿ ಸೌಲಭ್ಯ, ವ್ಯಾಪಾರ ವಹಿವಾಟು, ನಗರಗಳರಚನೆ ಮುಂತಾದ ಕ್ರಾಂತಿಕಾರಿ ವ್ಯವಸ್ಥೆಯ ಮಧ್ಯೆ ಅದು ಹೀಗೆ ಆಳುವ ವರ್ಗದ 'ದಂಡ' ವಾಗಿ ಜನಸಾಮಾನ್ಯರ ಮೇಲೆ ಹಿಡಿತ ಸಾಧಿಸಿತ್ತೆನ್ನುವುದನ್ನು ವಿವೇಚಿಸಲಾಗಿದೆ. ಇದೇ ಸಂದರ್ಭದಲ್ಲಿ ಜನಪದರು ತಮ್ಮ ಉಸಿರಿನಷ್ಟೇ ಸಹಜ ಎನಿಸುವ ಆಚರಣೆಗಳನ್ನು ರೂಪಿಸಿಕೊಂಡು, ಆಚರಣೆಗಳನ್ನು ನಡೆಸುತ್ತಾ ಪ್ರಕೃತಿಗೆ ನಿಕಟವಾಗಿ ಬಾಳಿದರೀತಿಯನ್ನು ನಿರೂಪಿಸಲಾಗಿದೆ. ಕರಾವಳಿಯ ಭೌಗೋಳಿಕ ಸ್ಥಿತಿಗತಿಗಳು, ರಾಷ್ಟ್ರೀಯ–ಅಂತಾರಾಷ್ಟ್ರೀಯ ವ್ಯಾಪಾರ–ವಹಿವಾಟುಗಳು ಹೊಸಬಗೆಯ ಸಾಮಾಜಿಕತೆಯನ್ನು ರೂಪಿಸಿದೆ. ಧಿಡೀರನೆ ಬದಲಾದ ಉತ್ಪಾದನಾ ಸಾಧನಗಳೊಂದಿಗಿನ ಸಂಬಂಧದ ಪರಿಣಾಮ ಉಂಟಾದ ಆರ್ಥಿಕ ಪರಿವರ್ತನೆಗಳು ಉಂಟು ಮಾಡಿರುವ ಪರಿಣಾಮಗಳನ್ನು ಇಲ್ಲಿ ನೀಡಲಾಗಿದೆ. ಅವೈಜ್ಞಾನಿಕವಾದ ಅನೇಕ ಪರಿಣಾಮಗಳೂ ಇಲ್ಲಿ ಉಂಟಾಗಿವೆ. ಅಭಿವೃದ್ಧಿಯೊಂದಿಗೆ ಜನರ ಆಹಾರ, ಉಡುಪು, ಬದುಕಿನ ರೀತಿ ನೀತಿಗಳು ಕೊಡುಕೊಳ್ಳುವಿಕೆಯಿಂದ ರೂಪಿತಗೊಂಡಿವೆ. ಅಂತಹ ಬದಲಾವಣೆಗಳನ್ನು ಸಾಕಷ್ಟು ಪುರಾವೆಗಳೊಂದಿಗೆ ನೀಡಲಾಗಿದೆ.

ಕನ್ನಡ ಕರಾವಳಿಯ ಜೀವನಾಡಿ ಬಂದರುಗಳು. ಉಳಿದೆಡೆ ಮಾನವ ತನ್ನ ನಾಗರಿಕ ಬದುಕಿಗೆ ಕೃಷಿ, ಕೈಗಾರಿಕೆಗಳನ್ನವಲಂಭಿಸಿದ್ದರೆ, ಕರಾವಳಿಯ ಜನಜೀವನ ಬಂದರುಗಳನ್ನು ಅವಲಂಭಿಸಿತ್ತು. ಬಂದರುಗಳು ಅವರಿಗೆ ಹಲವು ಬಗೆಯ ಸಹಾಯ ಸಹಕಾರ ನೀಡಿತ್ತು. ಬದುಕಿನ ಪ್ರತಿಹಂತದಲ್ಲೂ ಬಂದರುಗಳು ನೀಡಿದ ಕೊಡುಗೆ ಅಪೂರ್ವ. ಇದು ವಿವಿಧ ಬಗೆಯ ಸಮನ್ವಯ ಬದುಕಿಗೆ ಆಸ್ತಿಭಾರ ಹಾಕಿ ಕೊಟ್ಟಿತು.

ಅಶೋಕಮೌರ್ಯನ ಕಾಲದಲ್ಲಿ ಬೌದ್ಧಧರ್ಮ ಇಲ್ಲಿ ಪ್ರವೇಶ ಪಡೆಯಿತು[೬]. ಬೌದ್ಧಧರ್ಮದ ಭಿಕ್ಷುಗಳು ಬನವಾಸಿ–ಹೊನ್ನಾವರದ ಮೂಲಕ ವಿದೇಶ ಯಾತ್ರೆಕೈಗೊಂಡ ಬಗ್ಗೆ ಉಲ್ಲೇಖಗಳಿವೆ. ಅಂತೆಯೆ ವ್ಯಾಪಾರಿಗಳಿಗೆ ಬೌದ್ಧ ಧರ್ಮ ಅಚ್ಚು ಮೆಚ್ಚಿನ ಧರ್ಮವಾಗಿತ್ತು. ಮುಕ್ತವಾಗಿದ್ದ

ಧರ್ಮವು ತಾನು ಪ್ರವೇಶಿಸಿದ ಪ್ರದೇಶದಲ್ಲಿ ವೈಚಾರಿಕತೆಯ ಬೀಜ ಬಿತ್ತಿತು. ಇದರಿಂದ ಒತ್ತಾಯ ಪೂರ್ವಕವಾಗಿ ಸಂಪ್ರದಾಯಕ್ಕೆ ಶರಣಾಗಿದ್ದ ಜನರ ಬದುಕಿನಲ್ಲಿ ಹೊಸ ಸ್ವಾತಂತ್ರ್ಯದ ಗಾಳಿ ಬೀಸಿತು. ಎಲ್ಲಾ ರೀತಿಯ ನಿರ್ಬಂಧಗಳನ್ನು ಧಿಕ್ಕರಿಸಿ ವ್ಯಾಪಾರಿಗಳು ಧರ್ಮದೊಂದಿಗೆ ವ್ಯಾಪಾರವನ್ನು ಸಮನ್ವಯಗೊಳಿಸಿದರು. ಹಾಗೇ ಜೈನಧರ್ಮವೂ ಕರ್ನಾಟಕವನ್ನು ಬೌದ್ಧಧರ್ಮಕಿಂತ ಸ್ವಲ್ಪ ಮುಂಚೆಯೇ ಪ್ರವೇಶಿಸಿತೆನ್ನುತ್ತಾರೆ[೭]. ಜೈನರೂ ಕೂಡಾ ವ್ಯಾಪಾರದಲ್ಲಿ ಭಾಗಿಗಳಾಗಿದ್ದರಿಂದ ಹಾಗೂ ಇದೂ ವೈದಿಕ ಧರ್ಮಕಿಂತ ಉದಾರಿಯಾಗಿದ್ದರಿಂದ ಕರ್ನಾಟಕದ ಕರಾವಳಿಯ ದಕ್ಷಿಣ ಭಾಗದಲ್ಲಿ ಬಹುಬೇಗ ಪ್ರಚಾರ ಪಡೆಯಿತು. ಉಳಿದಂತೆ ಹಿಂದೂ-ವೈಧಿಕ ಧರ್ಮದ ಅನೇಕ ಶಾಖೆಗಳು ಶೈವ, ಕಾಪಾಲಿಕ, ಶಾಕ್ತ, ಗಾಣಪತ್ಯ, ವೈಷ್ಣವ ಮುಂತಾದವು ಇಲ್ಲಿ ಬೆಳೆದು ಬಂದವು[೮]. ಕ್ರೈಸ್ತ ಹಾಗೂ ಇಸ್ಲಾಂ ಕೂಡಾ ಪ್ರವೇಶಿಸಿತು. ಮೊದಲು ಖಡ್ಗಕ್ಕೆ ಬದಲಾಗಿ ವ್ಯಾಪಾರಿ ಮಾರ್ಗವಾಗಿ ಈ ಎರಡು ಧರ್ಮಗಳು ಕರಾವಳಿಯನ್ನು ಪ್ರವೇಶಿಸಿದ್ದವು[೯].

ಬಹುಮುಖ್ಯವಾಗಿ ಜನಪದರ ಧರ್ಮವನ್ನು ಪರಿಶೀಲಿಸಲಾಗಿದೆ. ಮೇಲ್ಕಾಣಿಸಿದ ಸಂಘಟಿತ ಧರ್ಮಗಳೊಂದಿಗೆ ಸ್ಥಳೀಯರು ಸ್ವತಂತ್ರರಾಗಿ ತಮಗೆ ಕಂಡುಬಂದ ನಿಜವನ್ನು ಅನುಸರಿಸಿದರು. ಅದೇ ಜನಪದಆಚರಣೆಗಳು. ಇವರ ಪೂಜಾ ವಿಧಾನ, ಪ್ರಾರ್ಥನೆ, ಮೂರ್ತಿಗಳೆಲ್ಲದರಲ್ಲೂ ವಿಭಿನ್ನತೆಗಳಿದ್ದವು. ಜನಮಾನಸದ ನಿಜವಾದ ಆರಾಧನಾ ಪದ್ಧತಿಯಾಗಿದ್ದ ಜನಪದ ಧರ್ಮದ ಕುರಿತು ಪರಿಶೀಲಿಸಲಾಗಿದೆ.

೫.೧.೧ ವೈದಿಕ ಧರ್ಮ

ಕ್ರಿ.ಪೂ. ಸು. ೨೦೦೦-೯೦೦ ಕಾಲಾವಧಿಯನ್ನು ವೇದಕಾಲ[೧೦] ಎಂದು ಕರೆಯುತ್ತಾರೆ. ಈ ಅವಧಿಯಲ್ಲಿ ನಾಲ್ಕು ವೇದಗಳಾದ ಋಗ್‌ವೇದ, ಯಜುರ್‌ವೇದ, ಸಾಮವೇದ ಮತ್ತು ಅಥರ್ವಣ ವೇದಗಳು ಜೊತೆಯಲ್ಲಿ ಬ್ರಾಹ್ಮಣಕಗಳು, ಅರಣ್ಯಕಗಳು, ಉಪನಿಷತ್‌ನ ಅನೇಕ ಕೃತಿಗಳು ರಚಿತಗೊಂಡವು.

ವೇದಗಳಲ್ಲಿ ಸಂಹಿತಾಭಾಗವೇ ಪ್ರಾಚೀನವಾದದ್ದು. ಉಪನಿಷತ್ತುಗಳು ಅತ್ಯಂತ ಅರ್ವಾಚೀನ. ಪ್ರತಿಯೊಂದು ವೇದಕ್ಕೂ ನಿಶ್ಚಿತವಾದ ಸಂಹಿತೆ, ಬ್ರಾಹ್ಮಣ, ಅರಣ್ಯಕ ಮತ್ತು ಉಪನಿಷತ್ತುಗಳಿವೆ[೧೧]. ಈ ವೇದಗಳು ಆರ್ಯರು ತಮ್ಮ ಯಜ್ಞಯಾಗ ವಿಧಿಗಳನ್ನು ಆಚರಿಸುವಾಗ ಬಳಸುವ ಮಂತ್ರ, ಆಚರಣೆಗಳನ್ನು ಒಳಗೊಂಡಿವೆ. ಇವುಗಳ ಭಾಷೆ ವೈದಿಕಸಂಸ್ಕೃತ[೧೨]. ಭಾರತೀಯ ದರ್ಶನಗಳಲ್ಲಿ ದೇವರಿದ್ದಾನೋ ಇಲ್ಲವೋ ಎಂಬುದಕ್ಕಿಂತಲೂ ವೇದಪ್ರಾಮಾಣ್ಯ ವಿಚಾರಕ್ಕೆ ಹೆಚ್ಚಿನ ಮಹತ್ವವಿದೆ. ವೇದಗಳನ್ನು ಒಪ್ಪುವ ದರ್ಶನಗಳಿಗೆ, ಆಸ್ತಿಕ ದರ್ಶನಗಳೆಂದು ಹೆಸರು[೧೩]. ಭಾರತದಲ್ಲಿ ಪ್ರಚಲಿತವಿದ್ದ ಕೆಲವು ದರ್ಶನಗಳು ಹಿಗಿವೆ. ಸಾಂಖ್ಯ, ಯೋಗ, ನ್ಯಾಯ,

ವೈಶೇಷಿಕ, ಮೀಮಾಂಸಾ ಮತ್ತು ವೇದಾಂತ. ಈ ಆರು ದರ್ಶನಗಳು ವೇದದ ಪ್ರಾಮಾಣ್ಯ ಒಪ್ಪುತ್ತವೆ[೧೪]. ಚರ್ವಾಕ, ಜೈನ, ಬೌದ್ಧ ಇವುಗಳು ವೇದದ ಪ್ರಾಮಾಣ್ಯವನ್ನು ಒಪ್ಪದಿರುವುದರಿಂದ ನಾಸ್ತಿಕ ಅಥವಾ ಅವೈದಿಕ ಎನಿಸಿದವು[೧೫]. ಆಸ್ತಿಕರೆನಿಸಿಕೊಳ್ಳಲು ವೇದಗಳನ್ನು ಪ್ರಮಾಣವೆಂದು ಒಪ್ಪಿಕೊಂಡರೆ ಆಯಿತು. ಇದರಿಂದ ಆಸ್ತಿಕರು ವೈದಿಕರೆಂದು ಉಳಿದವರು ಅವೈದಿಕರೆಂದು ಗುರುತಿಸಲ್ಪಟ್ಟರು. ಹೀಗೆ ಬೆಳೆದು ಬಂದ ಪ್ರಮಾಣವೇ ಒಂದು ಜನ ವಿಭಾಗವನ್ನು ಗುರುತಿಸುವಂತಾಯಿತು. ಮುಂದೆ ಆರ್ಯರು ದಕ್ಷಿಣದತ್ತ ಸಾಗಿ ಬಂದು ನೆಲೆಸಿದರು[೧೬]. ವೈದಿಕ ಯುಗದ ಅಂತ್ಯಕ್ಕೆ ಒಂದು ನಿರ್ದಿಷ್ಟ ಕಾಲವನ್ನು ಗೊತ್ತು ಮಾಡಿ ಹೇಳುವಂತಿಲ್ಲ[೧೭]. ಆದರೆ ಆರನೆಯ (ಕ್ರಿ.ಶ.ಪೂ.) ಶತಮಾನದಲ್ಲಿ ವೈದಿಕ ಧರ್ಮ ಮತ್ತು ಸಂಸ್ಕೃತಿಗಳ ಪರಮಪ್ರಾಬಲ್ಯವನ್ನು ಅಂತ್ಯಗೊಳಿಸುವಲ್ಲಿ ಬೌದ್ಧಧರ್ಮ, ಜೈನಧರ್ಮ ಮತ್ತು ಇತರ ಕ್ರಾಂತಿಕಾರಕ ಆಂದೋಲನಗಳ ಉದಯವಾಯಿತು[೧೮].

೫.೧.೨ ಶೈವರು

ವೈದಿಕ ಪರಂಪರೆಯಲ್ಲಿ ಕಂಡುಬರುವ ಆಚರಣೆಗಳಲ್ಲಿ ಶೈವವು ಬಹು ಪುರಾತನವಾದ[೧೯] ಮತವಾಗಿದೆ. ಇದರ ಪ್ರಾಚೀನತೆಯ ಕುರಿತು ಹಲವು ಚರ್ಚೆಗಳಿವೆ. ವೇದಗಳಲ್ಲಿ ಶಿವನೆಂಬ ಹೆಸರಿನ ದೇವತೆಇಲ್ಲವಾದರೂ ರುದ್ರನಿದ್ದಾನೆ[೨೦]. ಶಿವನ ಆರಾಧನೆಯು ವೇದ ಕಾಲಕ್ಕಿಂತ ಪ್ರಾಚೀನವೆಂದು ನಂಬಲಾಗಿದೆ. ಸಿಂಧು ನಾಗರಿಕತೆಯ ಕಾಲದ ಪಶುಪತಿಯ ಚಿತ್ರವಿರುವ ಮುದ್ರೆಗಳು, ಲಿಂಗಗಳು[೨೧] ದೊರಕಿವೆ.

ಋಗ್ವೇದದಲ್ಲಿ ರುದ್ರನಿಗೆ ದ್ವಿಮುಖವಾದ ಕಾರ್ಯವಿದೆ. ಒಂದು ಅವನ ಭಕ್ತರಿಗೆ ಅಭಿವೃದ್ಧಿಯನ್ನುಕೊಡುವುದು, ಮತ್ತೊಂದು ಅವರ ಕಷ್ಟಗಳನ್ನು ಪರಿಹಾರ ಮಾಡುವುದು[೨೨]. ಹೀಗೆ ವೇದಗಳಲ್ಲಿ ಕಂಡುಬರುವ ರುದ್ರನು ಶಿವನೆಂದು ಭಾವಿಸಲಾಗಿದೆ. ಮುಂದೆ ಶಿವನನ್ನು ಲಿಂಗದ ರೂಪದಲ್ಲಿ ಆರಾಧಿಸಲು ಪ್ರಾರಂಭಿಸಲಾಯಿತು[೨೩]. ಶೈವ ಸಾಹಿತ್ಯದಲ್ಲಿ ಲಿಂಗವನ್ನು ಬೆಳಕಿನ ಕಂಬವೆಂದು ವರ್ಣಿಸಿದೆ[೨೪]. ಶೈವಧರ್ಮಕ್ಕೆ ಮೂಲಾಧಾರಗಳು ಆಗಮಗಳು[೨೫]. ಈ ಆಗಮಗಳನ್ನು ರಚಿಸಿದವನು ಶಿವನೆಂದು ನಂಬಿಕೆ. ಇವುಗಳಲ್ಲಿ ಶಿವನನ್ನು ಆರಾಧ್ಯದೈವವಾಗಿ ಭಾವಿಸುವ ಆಗಮಗಳು ಶೈವಾಗಮಗಳು[೨೬]. ಇಂತಹ ಶೈವಾಗಮಗಳು ಒಟ್ಟೂ ೨೮ ಎನ್ನುವ ನಂಬಿಕೆಯಿದೆ. ದೇವಸ್ಥಾನಗಳ ನಿರ್ಮಾಣ, ವಿಗ್ರಹಾರಾಧನೆ, ಪೂಜಾ ವಿಧಾನ ಇತ್ಯಾದಿಗಳೆಲ್ಲವೂ ಹಿಂದೂಧರ್ಮವನ್ನು ಸೇರಿರುವುದು ಆಗಮಗಳಿಂದಲೇ[೨೭]. ಈ ಆಗಮಗಳು ಅಹಿಂಸಾಪರ. ಇಲ್ಲಿ ಬಲಿಗೆ ಮಹತ್ವವಿಲ್ಲ. ಕಾಲಾನುಕ್ರಮದಲ್ಲಿ ವೈದಿಕಾಚರಣೆಗಳೂ–ಆಗಮಗಳು ಬೆಸೆದುಕೊಂಡವು.

ಪ್ರಾಚೀನ ಕರ್ನಾಟಕದಲ್ಲಿ ಲಕುಲೀಶ (ಕಾಳಾಮುಖ), ಪಾಶುಪತ, ಮಹಾವ್ರತಿ (ಸೋಮ), ಶೈವ(ಶ್ರೋತ್ರೀಯ) ಹೀಗೆ ನಾಲ್ಕು ಶೈವ ಸಂಪ್ರದಾಯಗಳು ಪ್ರಸಿದ್ಧವಾಗಿದ್ದವು[೨೮]. ಈ ಶೈವ ಸಂಪ್ರದಾಯಗಳವರೇ ಕರ್ನಾಟಕದಲ್ಲಿ ಶೈವ ದೇವಾಲಯಗಳ ಪರಂಪರೆ ಹುಟ್ಟು ಹಾಕಿದವರು. ಸ್ಥಾವರ ಸಂಪ್ರದಾಯದ ಹುಟ್ಟು ಆರಂಭಿಸಿದರು. ಶಿವನಿಗಾಗಿ ವಿವಿಧಬಗೆಯ ದೇವಾಲಯಗಳ ನಿರ್ಮಾಣ ಆರಂಭ[೨೯] ಮಾಡಿದರು. ಶೈವಧರ್ಮವು ಮೂಲತಃ ಅವೈದಿಕವಾಗಿದ್ದರೂ ಕ್ರಮೇಣ ಅದರಲ್ಲಿ ಅನೇಕ ವೈದಿಕಾಚರಣೆಗಳು ಸೇರಿಕೊಂಡವು[೩೦]. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಲಕುಲೀಶ-ಪಾಶುಪತ. ಇವರು ವೈದಿಕರಾಗಿದ್ದರು. ಇವರು ಧಾರ್ಮಿಕ ಆಚರಣೆಯಲ್ಲಿ ಹೆಚ್ಚು ಆಸಕ್ತರಾಗಿದ್ದರು. ಶೈವಧರ್ಮದ ಒಂದು ಶಾಖೆ ಕಾಪಾಲಿಕರದ್ದು. ಇವರ ಮೂಲವನ್ನು ಶ್ರೀಶೈಲದಿಂದ ಗುರುತಿಸುತ್ತಾರೆ. ಇವರ ಅನುಯಾಯಿಗಳು ಕರ್ನಾಟಕದ ಕೆಲವೆಡೆ ಇದ್ದರು.

ಕರ್ನಾಟಕದಲ್ಲಿ ವ್ಯಾಪಕವಾಗಿ ಶಿವನ ಆರಾಧನೆ ಕಂಡುಬರುತ್ತದೆ. ಬಹುಮುಖ್ಯವಾಗಿ ಲಿಂಗ ಹಾಗೂ ಮೂರ್ತಿ ಎರಡೂ ರೂಪಗಳಲ್ಲಿ ಆರಾಧಿಸುವುದು ಕಂಡುಬರುತ್ತದೆ. ಪ್ರತಿ ಗ್ರಾಮದಲ್ಲಿ ಶಿವಾಲಯ ಅಥವಾ ಬೇರೆ ಅನೇಕ ಹೆಸರುಗಳಲ್ಲಿ ಶಿವನ ದೇವಾಲಯ ಕಾಣಬಹುದು. ಇಲ್ಲವೇ ಗ್ರಾಮದೇವತೆ ಇತ್ಯಾದಿ ಹೆಸರುಗಳಲ್ಲಿ ಶಿವನರೂಪ ಕಾಣಬಹುದಾಗಿದೆ.

ಕರ್ನಾಟಕದ ಕರಾವಳಿಯ ಧಾರ್ಮಿಕ ಕ್ಷೇತ್ರವಾಗಿರುವ ಗೋಕರ್ಣವು ಶಿವನ ಆತ್ಮಲಿಂಗದೊಂದಿಗೆ ಸಂಬಂಧ ಹೊಂದಿದೆ. ರಾವಣನು ತನ್ನ ತಾಯಿಗೆ ಆರಾಧನೆಗಾಗಿ ಶಿವನ ಆತ್ಮಲಿಂಗ ಪಡೆದು ತಂದು, ಪಶ್ಚಿಮ ತೀರದ ಗುಂಟ ತನ್ನ ರಾಜ್ಯಕ್ಕೆ ಹೊರಟಾಗ, ಗಣಪತಿಯು ಬಾಲಕನ ವೇಶದಲ್ಲಿ ಬಂದು ರಾವಣನ ಸಂಧ್ಯಾವಂದನೆಯ ಸಮಯದಲ್ಲಿ ಲಿಂಗವನ್ನು ಅವನಿಗೆ ಸಹಾಯ ಮಾಡುವ ನೆಪದಲ್ಲಿ ಹಿಡಿದುಕೊಂಡು, ನಂತರ ಅದನ್ನು ಭೂಮಿಯ ಮೇಲಿರಿಸಿದಎಂದಿದೆ. ಹೀಗೆ ಭೂ ಸ್ಪರ್ಶದಿಂದ ಅಲ್ಲಿಯೇ ಶಿಲೆಯಾಗಿ ಬಿಟ್ಟ ಆತ್ಮಲಿಂಗವು ಗೋಕರ್ಣದಲ್ಲಿಯೇ ಉಳಿಯಿತು. ಈ ಕ್ಷೇತ್ರಕ್ಕೆ ಪುರಾಣ ಕಾಲದಲ್ಲೂ ರಾಜಮಹಾರಾಜರು ಭೇಟಿ ನೀಡಿದ ಬಗ್ಗೆ ಕತೆಗಳಿವೆ. ಗೋಕರ್ಣವನ್ನು ಶೈವರು ದಕ್ಷಿಣದ ಕಾಶಿ ಎನ್ನುತ್ತಾರೆ.

ಆತ್ಮಲಿಂಗವನ್ನು ಬಾಲಕರೂಪಿ ಗಣೇಶನು ಭೂಮಿಯ ಮೇಲಿರಿಸಿದಾಗ ಕೋಪಗೊಂಡ ರಾವಣನು ಬಾಲಕನ ತಲೆಯ ತುದಿಗೆ ಗುದ್ದಿದನೆಂದೂ ಬಾಲಕನು ತನ್ನ ಮೂಲರೂಪವಾದ ಬಾಲಗಣೇಶನಾಗಿ ಶಿಲೆಯಾದನೆಂದು ಕಥೆಗಳಿವೆ. ರಾವಣನು ಕೋಪದಿಂದ ಮತ್ತು ಹತಾಶೆಯಲ್ಲಿ ಆತ್ಮಲಿಂಗವನ್ನು ಕೀಳಲೆತ್ನಿಸಿದಾಗ ಆತನ ಕೈಗೆ ಬಂದ ಚೂರುಗಳನ್ನು ದೂರ-ದೂರ ಎಸೆದನು. ಹಾಗೆ ಎಸೆದ ಆತ್ಮಲಿಂಗದ ಚೂರುಗಳೇ ಸೆಜ್ಜೇಶ್ವರ, ಧಾರೇಶ್ವರ, ಗುಣವಂತೇಶ್ವರ ಮತ್ತು

ಮುರುಡೇಶ್ವರಗಳಲ್ಲಿ ಬಿದ್ದವೆಂದೂ ಅಲ್ಲಿ ಆಗಿರುವ ದೇವಾಲಯಗಳೇ ಆ ಆತ್ಮಲಿಂಗದ ಚೂರುಗಳಿಗೆ ನಿರ್ಮಿಸಿರುವ ದೇವಾಲಯಗಳೆಂಬ ನಂಬಿಕೆ ಪ್ರಚಲಿತವಾಗಿದೆ.

ಉತ್ತರ ಕನ್ನಡ ಹಾಗೂ ಅವಿಭಜಿತ ದಕ್ಷಿಣ ಕನ್ನಡದಲ್ಲಿ ಆಡಳಿತ ನಡೆಸಿದ ಶಾತವಾಹನರು ಶೈವಮತಕ್ಕೆ ಪ್ರೋತ್ಸಾಹ ನೀಡಿದ್ದರೆಂದು ತಿಳಿಯುತ್ತದೆ. ಇವರ ಕಾಲದಲ್ಲಿ ರಚಿತವಾದ ಬೃಹತ್‌ಕಥಾ ಕೃತಿಯಿಂದ ಶಾತವಾಹನರ ಕಾಲದಲ್ಲಿ ಶೈವಮತವು ಸರ್ವ ಪ್ರಧಾನವೂ, ಬಹು ಜನಪ್ರಿಯವೂ ಆಗಿತ್ತೆಂದು[೩೧] ತಿಳಿಯುತ್ತದೆ. ಶಾತವಾಹನರು ವ್ಯಾಪರಕ್ಕೆ ಹೆಚ್ಚಿನ ಮಹತ್ವ ನೀಡಿದ್ದರು. ಬನವಾಸಿಯ ಈ ವಂಶದ ಬಂಧುಗಳೂ, ಮಾಂಡಲೀಕರು ಆದ ಚುಟುಕುಲದವರು ಈ ಪ್ರದೇಶ ಆಳಿದ್ದರು[೩೨]. ಇದು ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿತ್ತು. ರಾಜಧಾನಿಯೂ ಆಗಿತ್ತು. ಬನವಾಸಿಯನ್ನು ಮಹಾಭಾರತದಲ್ಲಿ ವನವಾಸಕ ಮತ್ತು ಸಂಜಯಂತಿ ಎಂದು ಕರೆಯಲಾಗಿದೆ. ಚುಟುಗಳ ಕಾಲದಲ್ಲೂ ಶೈವರಾಜನಿಗೆ ಪ್ರೋತ್ಸಾಹ ದೊರಕಿತ್ತು.

ಸ್ಕಂದ ಪುರಾಣದ ಜಯಂತಿಮಹಾತ್ಮೆಯಲ್ಲಿ ಈ ಭಾಗದ ಮಧು–ಕೈಟಭರೆಂಬ ಮಹಾಶೈವ ದೈತ್ಯರ ಪ್ರಸ್ತಾಪ ಬರುತ್ತದೆ[೩೩]. ಇವರು ಶಿವನ ಭಕ್ತರಾಗಿದ್ದು ಲೋಕ ಕಂಠಕರಾಗಿದ್ದರು. ಮಹಾದೇವನು ಇವರನ್ನು ಸಂಹರಿಸಿದರೂ ಇವರ ಇಷ್ಟಾರ್ಥದಂತೆ ಅವರುಗಳ ಹೆಸರಿನಂತೆ ಬನವಾಸಿಯಲ್ಲಿ ಮಧುಕೇಶ್ವರ ಮತ್ತು ಅನವಟ್ಟಿಯ ಬಳಿ ಕೈಲಾಸೇಶ್ವರ ಶಿವಲಿಂಗ ದೇವಾಲಯ ನಿರ್ಮಿಸಿದನಂತೆ[೩೪]. ಬನವಾಸಿಯ ದೇವಾಲಯವನ್ನು ಸು. ಕ್ರಿ.ಶ. ೧೦–೧೧ನೆಯ ಶತಮಾನದಿಂದ ಮಧುಕೇಶ್ವರ ದೇವಾಲಯ ಎಂದು ಕರೆಯಲಾಗುತ್ತಿದೆ. ಇದೊಂದು ಸಾಂದಾರ ಶೈಲಿಯ ದೇವಾಲಯ. ಲಿಂಗವು ೫.೨೫ ಅಡಿ ಎತ್ತರವಿದೆ. ಇದು ಶಿವನ ಐದು ಮುಖಗಳನ್ನು ಹೊಂದಿರುವ ಪಂಚಾಸ್ಯಲಿಂಗ. ಈ ದೇವಾಲಯದ ಪ್ರಾಕಾರದಲ್ಲಿ ಎರಡು ಶಿವಲಿಂಗಗಳಿದ್ದು, ಇವು ಕ್ರಿ.ಶ೧೧ನೇ ಶತಮಾನಕ್ಕೆ ಸೇರಿದವು[೩೫]. ಈ ಎರಡು ಲಿಂಗಗಳನ್ನು ಅಮೃತೇಶ್ವರ ಮತ್ತು ಆದಿಮಧುಕೇಶ್ವರ ಎಂದು ಕರೆಯಲಾಗಿದೆ. ಇನ್ನೊಂದು ಇದೇ ಕಾಲದ ಆದಿಕದಂಬೇಶ್ವರ ಎಂಬ ಗುಡಿ ಒಂದಿದೆ. ಅಲ್ಲದೇ ಕ್ರಿ.ಶ. ೪ ಅಥವಾ ೫ ನೇ ಶತಮಾನಕ್ಕೆ ಸೇರಿದ[೩೬] ಅಂಡಾಕಾರದ ಶಿವಲಿಂಗವಿದೆ. ೯ನೆಯ ಶತಮಾನಕ್ಕೆ ಸೇರಿದ ದೇವಾಲಯ ಒಂದು ಇಲ್ಲಿದ್ದು[೩೭] ಅಲ್ಲಮಪ್ರಭುದೇವಾಲಯ ಎಂದು ಇದನ್ನು ಕರೆಯುತ್ತಾರೆ. ಶಿಲ್ಪ ಶೈಲಿಯು ಚಾಲುಕ್ಯರ ಪ್ರಾರಂಭದ ಕಾಲವನ್ನೂ ನೆನಪಿಸುತ್ತದೆ.

ಕದಂಬರ ವಂಶದ ಮೂಲ ಪುರುಷನು ತ್ರಿನೇತ್ರ ಅಥವಾ ಮುಕ್ಕಣ್ಣ ಕದಂಬನೆಂದು ಹೇಳುತ್ತಾರೆ[೩೮]. ಅಂದರೆ ಆದಿಕದಂಬರು ಶಿವನೊಂದಿಗೆ ತಮ್ಮ ಸಂಬಂಧ ಗುರುತಿಸುತ್ತಾರೆ. ಇವರು ಶೈವ ಸಂಪ್ರದಾಯಸ್ಥರಾಗಿದ್ದರೆನ್ನಲು ತಾಳಗುಂದದ ಶಾಸನವು ಶಿವನ ಕುರಿತು ಪ್ರಾರ್ಥನೆಯೊಂದಿಗೆ

ಆರಂಭವಾಗುತ್ತವೆ[೫೯]. ಕದಂಬರ ಕಾಲದಲ್ಲಿ ಶೈವಾರಾಧನೆಗೆ ಪ್ರೋತ್ಸಾಹ ದೊರೆತಿತ್ತು. ತಾಳಗುಂದದ ಪ್ರಣವೇಶ್ವರ ದೇವಾಲಯ, ಹಾನಗಲ್ಲಿನ ತಾರಕೇಶ್ವರ ದೇವಾಲಯ ಮುಂತಾದವುಗಳು ನಿರ್ಮಾಣಗೊಂಡವು.

ಕದಂಬರ ತರುವಾಯ ಬನವಾಸಿ ಕೇಂದ್ರದಿಂದ ಆಳಿದವರು ಚಾಲುಕ್ಯರು. ಆಳುಪರು ಇವರ ಮಹಾಮಂಡಳೇಶ್ವರರಾಗಿದರು. ಆಳುಪರು ಶೈವ ಧರ್ಮಾನುಯಾಗಳಾಗಿದ್ದರು[೬೦]. ಚಾಲೂಕ್ಯರೂ ಶೈವರಾಗಿದ್ದರು. ಬನವಾಸಿ ಮಂಡಳದಿಂದ ಮಹಾಮಂಡಳೇಶ್ವರರಾಗಿ ಆಳುಪರು ಆಳುವಾಗ ತಮ್ಮ ರಾಜ್ಯದಲ್ಲಿ ಶೈವ ಮತಾಚರಣೆಗೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದರು.

ಉತ್ತರ ಕನ್ನಡದ ಉತ್ತರದ ಕರಾವಳಿ ಭಾಗವನ್ನು ಕೆಕೇಯರು ಕ್ರಿ.ಶ. ಸು ೬ನೇ ಶತಮಾನದಿಂದ ಆಳಿದ ಬಗ್ಗೆ ತಿಳಿಯುತ್ತದೆ[೬೧]. ಇವರಲ್ಲಿ ಹೊನ್ನಾವರದ ಹೈಗುಂದ ಕೇಂದ್ರವಾಗಿ ಆಳಿದ ಗೋಪಾಲದೇವನು ತನ್ನನ್ನು 'ಪಯ್ವಗುಂದಪರಮೇಶ್ವರ' ಎಂಬ ಬಿರುದಿನಿಂದ ಕರೆದುಕೊಂಡಿದ್ದಾನೆ. ಪರಮೇಶ್ವರ ಸಾಮಾನ್ಯವಾಗಿ ಶಿವನನ್ನು ಸಂಭೋಧಿಸುವಾಗ ಬಳಸುವ ಹೆಸರಾಗಿದೆ. ಶೈವಾರಾಧಕ ಅರಸರಲ್ಲಿ ಈ ಹೆಸರನ್ನು ನೋಡಬಹುದು. ಅಲ್ಲದೇ ಹೈಗುಂದದಲ್ಲಿ ದುಂಡು ಮರಳುಕಲ್ಲಿನ ಎರಡು ಶಿವಲಿಂಗಗಳು ಸಿಕ್ಕಿವೆ[೬೨]. ಇವುಗಳ ಕಾಲಾವಧಿಯು ಈ ಸಮಯಕ್ಕೆ ಸರಿ ಹೊಂದುತ್ತದೆ.

ಪಶ್ಚಿಮ ಚಾಲುಕ್ಯರು ತಮ್ಮ ಸಾಮಂತರ ಮೂಲಕ ಈ ಪ್ರದೇಶಗಳನ್ನೂ ಕ್ರಿ.ಶ.ಸು. ೯೭೩ ರಿಂದ ೧೧೯೫[೬೩] ರವರೆಗೆ ಅಲ್ಲಲ್ಲಿ ಆಳಿದ್ದು ತಿಳಿಯುತ್ತದೆ. ಈ ಕಾಲದಲ್ಲಿ ಶೈವಧರ್ಮಕ್ಕೆ ಪ್ರೋತ್ಸಾಹ ನೀಡಿದ ಕೆಲವು ಉಲ್ಲೇಖಗಳು ಅವರ ಶಾಸನಗಳಿಂದ ತಿಳಿಯುತ್ತದೆ. ಚಿಪಗಿಯ ಕ್ರಿ.ಶ. ೧೦೭೭ ಅಕ್ಟೋಬರ್ ೨೩ ಶನಿವಾರ[೬೪]ದ ಶಾಸನ ಚಕ್ರವರ್ತಿಭುವನೈಕಮಲ್ಲದೇವನು ರಾಜ್ಯವಾಳುತ್ತಿದ್ದಾಗ ನಾಲ್ಕು ಜನ ಗಾವುಂಡರು ಒಟ್ಟುಗೂಡಿ ಚಿಪ್ಪಗೆ ಗ್ರಾಮದಲ್ಲಿ ಜಕ್ಕೇಶ್ವರವೆಂಬ ಶಿವಾಲಯಕಟ್ಟಿಸಿ ಅದಕ್ಕೆ ಭೂಮಿ ದಾನ ನೀಡಿದ ಉಲ್ಲೇಖವಿದೆ. ಸಿದ್ಧಾಪುರದ ಅಗ್ಗೆರೆಯ ಶಾಸನ (ಕ್ರಿ.ಶ. ೧೧೯೫)[೬೫] ಶಿವಾಗ್ರಹ ನಿರ್ಮಿಸಿ ದೇವರಿಗೆ ಗದ್ದೆ, ತೋಟ, ಕಾಡುಭೂಮಿ ದಾನ ನೀಡಿದ್ದ ಬಗ್ಗೆ ಹೇಳುತ್ತದೆ. ನಂದಿಗಟ್ಟದ ಶಾಸನ (ಮುಂಡಗೋಡ ತಾಲೂಕು) ಕ್ರಿ.ಶ. ೧೧೨೫ಕ್ಕೆ ಸೇರಿದ್ದು[೬೬] ಈ ಶಾಸನವು ಬಸವಣ್ಣದೇವರಗುಡಿಯ ಭಾವಣಿ ನಿರ್ಮಾಣಕ್ಕೆ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಈ ಶಾಸನಗಳ ಆಧಾರದಲ್ಲಿ ಪಶ್ಚಿಮ ಚಾಲುಕ್ಯರು ಶೈವಾರಾಧನೆಗೆ ಪ್ರೋತ್ಸಾಹ ನೀಡಿದ್ದು ತಿಳಿಯುತ್ತದೆ.

ಕಲಚೂರಿಗಳ (ಕ್ರಿ.ಶ. ೧೧೭೪)[೪೭] ಒಂದೆ ಶಾಸನ ಸಿಕ್ಕಿದ್ದು ಅದು ಶಿರಸಿಯ ಸಹಸ್ರಹಳ್ಳಿ ಗ್ರಾಮದ ರಾಮೇಶ್ವರ ದೇವಾಲಯದಲ್ಲಿದೆ. ಶಿವಲಿಂಗವನ್ನು ಪ್ರತಿಷ್ಠೆ ಮಾಡಿ ದೇವರ ಪೂಜೆಗಾಗಿ ದತ್ತಿ ಹಾಕಿಸಿದ ಬಗ್ಗೆ ಈ ಶಾಸನ ತಿಳಿಸುತ್ತದೆ.

ಹಾನಗಲ್ಲು ಕಾದಂಬರು ಹತ್ತನೇ ಶತಮಾನದಿಂದ ಹದಿಮೂರನೇ ಶತಮಾನದವರೆಗೆ[೪೮] ಧಾರವಾಡ ಜಿಲ್ಲೆಯ ಹಾನಗಲ್ಲು ಕೇಂದ್ರವಾಗಿ ಆಳಿದ್ದರು. ಇದೇ ಕಾಲಕ್ಕೆ ಗೋವಾದಿಂದಲೂ ಕಾದಂಬರ ಒಂದು ಶಾಖೆ ಆಳುತ್ತಿತ್ತು. ಈ ಎರಡೂ ವಂಶಗಳು ಕಲ್ಯಾಣಿಚಾಲುಕ್ಯರ ಅಧೀನರಾಗಿದ್ದವು ಎರಡೂ ವಂಶಗಳು ಶೈವ ಸಂಪ್ರದಾಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದವು. ಹಾನಗಲ್ಲು ಕಾದಂಬರ ಎರಡನೆಯ ಚಟ್ಟಯ್ಯದೇವನು ಆಳುವಾಗ ಆತನ ತಮ್ಮನಾದ ತೈಲಪ ದೇವನ ಎರಡು ಶಾಸನಗಳು ದೊರೆತಿವೆ[೪೯]. ಅವುಗಳಲ್ಲಿ ಆತನ ಪ್ರಶಸ್ತಿಗಳನ್ನು ಹೇಳುವಾಗ 'ಈಶ್ವರ ಪ್ರಸಾದ' ಎಂದೂ ಹೇಳಿದೆ. ಗೋವಾ ಕದಂಬರು ಕ್ರಿ.ಶ. ೧೧೫೬–೧೨೬೫[೫೦] ರ ವರೆಗೆ ಸ್ವತಂತ್ರರಾಗಿ ಆಳಿದರು. ಇವರ ಬೈಲಂದೂರು, ಕಿರುವತ್ತಿಯ ವೀರಗಲ್ಲುಗಳಲ್ಲಿ ವೀರನು ಮರಣದ ತರುವಾಯ ಶಿವಲೋಕ ಸೇರಿದಂತೆ ಚಿತ್ರಿತವಾಗಿದೆ. ಕಾವಲ ವೀರಗಲ್ಲು ವೀರಕಾಳಿಯಣ್ಣನು ಶಿವಲೋಕ ಪ್ರಾಪ್ತನಾದನೆಂದು ಹೇಳುತ್ತದೆ. ಗೋವಾ ಕಾದಂಬರ ಕಾಲದಲ್ಲಿ ನಿರ್ಮಾಣ ಗೊಂಡಿರುವ ಶಿವಾಲಯ ಹಾಗೂ ಇನ್ನಿತರ ಶಿವಾಲಯಗಳಿಗೆ ನೀಡಿದ ದತ್ತಿಗಳು ಇವರು ಶೈವರಾಗಿದ್ದು ಜೈನ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರೆಂದು ತಿಳಿಯುತ್ತದೆ.

ಉತ್ತರ ಕನ್ನಡದ ಕರಾವಳಿ ಹಾಗೂ ಘಟ್ಟದ ಪ್ರದೇಶಗಳನ್ನು ಆಳಿದ ಚಂದಾವರ ಕಾದಂಬ ಹಾಗೂ ಶಿಶುಗಲಿ ಪಾಂಡ್ಯರು ಶೈವಧರ್ಮಕ್ಕೆ ಪ್ರೋತ್ಸಾಹ ನಿಡಿದ್ದು ಅವರ ಶಾಸನಗಳಿಂದ ತಿಳಿಯುತ್ತದೆ. ಶಿಶುಗಲಿ ಪಾಂಡ್ಯರ ದೊರೆ ಇಮ್ಮಡಿ ಕಾಮದೇವನು (ಕ್ರಿ.ಶ. ೧೩೨೯–೧೩೫೪)[೫೧] ಆಡಳಿತದ ಕಾಲದಲ್ಲಿ ರಚಿತಗೊಂಡ ಶಿಕಾರಿಪುರ, ತುಂಬೊಳ್ಳಿ ಮತ್ತು ಗುಂಡಬಾಳ ಶಾಸನಗಳಲ್ಲಿ ಕಾಮದೇವನು ಶೈವಧರ್ಮಕ್ಕೆ ಆಕರ್ಷಿತನಾದದ್ದು ತಿಳಿಸುತ್ತದೆ. ಈತನು ದಾವಣಗೇರೆಯ ದಕ್ಷಿಣಕೇದಾರೇಶ್ವರ ದೇವಾಲಯಕ್ಕೆ ದತ್ತಿ ನೀಡುವಂತೆ ತನ್ನ ಸಾಮಂತನಿಗೆ ತಿಳಿಸಿ ವ್ಯವಸ್ಥೆ ಮಾಡಿಸುತ್ತಾನೆ[೫೨]. ಗುಂಡಬಾಳ ಹಾಗೂ ತುಂಬೊಳ್ಳಿ ಶಾಸನಗಳು ಈತನ ಶಿವಭಕ್ತಿಯನ್ನು ತಿಳಿಸುತ್ತವೆ.

ಇವರ ಕಾಲದ ಕುಮಟಾದ ಅಡತಾರೆಯ ಎರಡು ಶಾಸನಗಳು ಸ್ಥಳೀಯ ಶಿವಾಲಯಕ್ಕೆ ಒಂದು ಗದ್ಯಾಣವನ್ನು ಗ್ರಾಮದವರು ನೀಡಬೇಕೆಂದು ಹೇಳಿದೆ[೫೩]. ಧಾರೇಶ್ವರದ ಧಾರಾನಾಥದೇವರಿಗೆ ಶಿಶುಗಲಿ ಪಾಂಡ್ಯರ ಸಂಧಿವಿಗ್ರಹಿಯೋರ್ವನ ಮಡದಿಯಾದ ಚಟ್ಟಬ್ಬರಸಿಯು ಶಕ ೧೦೦೫ರಲ್ಲಿ ಧಾರೇಶ್ವರ ದೇವಾಲಯಕ್ಕೆ ದತ್ತಿ ನೀಡಿದ ಬಗ್ಗೆ ಧಾರೇಶ್ವರದ

ಶಾಸನ ಒಂದು ತಿಳಿಸುತ್ತದೆ[೫೪]. ಧಾರೇಶ್ವರವು ಪ್ರಾಚೀನ ಶೈವ ಆರಾಧನಾ ಕೇಂದ್ರವಾಗಿದ್ದು ಇಲ್ಲಿ ಆತ್ಮ ಲಿಂಗದ ಭಾಗ ಇದೆ ಎಂದು ನಂಬಿಕೆ ಪ್ರಚಲಿತವಾಗಿದೆ. ಅಲ್ಲದೇ ಈ ವಂಶದ ಮಲ್ಲಿದೇವ ಮತ್ತು ಆತನ ಉತ್ತರಾಧಿಕಾರಿಗಳು ಗೋಕರ್ಣ ಮಹಾಬಲದೇವರಶ್ರೀಪಾದ ಪದ್ಮಾರಾಧಕ[೫೫] ಎಂದು ಕರೆದುಕೊಂಡಿದ್ದಾರೆ. ಇವರ ಕಾಲದ ಶಾಸನಗಳ ಶಿರೋಭಾಗದ ಶಿಲ್ಪಗಳು ಲಿಂಗಗಳಿಂದ ಅಲಂಕೃತವಾಗಿದ್ದರೆ, ಸ್ಥಳೀಯ ವೈಶಿಷ್ಟ್ಯದ ಕಂಬಶಾಸನಗಳಲ್ಲಿ ಆತ್ಮಲಿಂಗ ಗೋಕರ್ಣದಲ್ಲಿ ಸ್ಥಾಪಿತವಾದ ಕತೆಯ ಭಾಗಗಳು ಉಬ್ಬುಶಿಲ್ಪಗಳಲ್ಲಿ ಚಿತ್ರಿತವಾಗಿವೆ[೫೬]. ಇವುಗಳಲ್ಲಿ ಒಂದು ಅಥವಾ ಎರಡು ಬದಿಗೆ ಶಾಸನಗಳಿದ್ದು- ಉಳಿದ ಭಾಗ ಸುಂದರ, ಸೂಕ್ಷ್ಮ ಶಿಲ್ಪಗಳಿಂದ ಕಂಡರಿಸಲಾಗಿದೆ[೫೭]. ಶಿಶುಗಲಿ ಪಾಂಡ್ಯರ ಕಾಲದ ಸ್ತಂಭವೀರಗಲ್ಲುಗಳು ಮಂಕಿ, ಹಳದೀಪುರ, ಕೆಕ್ಕಾರ, ಹೆಬ್ಬಾನಕೇರಿ ಹಾಗೂ ಗೋಕರ್ಣಗಳಲ್ಲಿದ್ದು ಇವುಗಳು ವಿಶಿಷ್ಟವಾಗಿವೆ. ಒಂದು ಅಡಿ ಚೌಕಾಕಾರ, ೬ ಅಡಿ ಎತ್ತರವಾಗಿವೆ. ಇವುಗಳು ಕ್ರಿ.ಶ. ೧೦೭೮-೧೦೭೯ರಲ್ಲಿ ನಿರ್ಮಾಣವಾದವುಗಳಾಗಿವೆ.

ಚಂದಾವರ ಕೇಂದ್ರವಾಗಿ ಆಳಿದ ಕಾದಂಬರು ಶೈವ ಮತಾವಲಂಭಿಗಳೋ ಎಂಬುದು ಇನ್ನೂ ತೀರ್ಮಾನವಾಗದಿದ್ದರೂ, ಇವರ ಹಲವು ಅರಸರು ಶೈವ ಮತಕ್ಕೆ ಪ್ರೋತ್ಸಾಹ ನೀಡಿದ್ದಾರೆ. ಚಂದಾವರ, ಕಾದಂಬರ ವೀರಗಲ್ಲು ಶಾಸನಗಳಲ್ಲಿ ಶಿರೋಭಾಗದ ಶಿಲ್ಪ ಶಿವಲಿಂಗದಿಂದ ಕೂಡಿದೆ. ಇವರ ಕಾಲದ ಗೋಕರ್ಣದ ತಾಮ್ರ ಶಾಸನದಲ್ಲಿ ಭೂದತ್ತಿಯಲ್ಲಿ ಮಹಾಬಲ ದೇವರ ಸಮ್ಮುಖದಲ್ಲಿ ನೀಡಿದ್ದ ವಿವರ ಹಾಗೂ ಹಲವು ಕಾದಂಬ ಅರಸರು ತಮ್ಮ ಹೆಸರಿನ ಮುಂದೆ ಶಿವಚಿತ್ತ ಎಂಬ ಬಿರುದನ್ನು ಧರಿಸಿರುವುದು[೫೮] ಕಂಡು ಬರುತ್ತದೆ. ಇದರಿಂದ ಇವರಿಗೆ ಶೈವಧರ್ಮದ ಬಗ್ಗೆ ಒಲವಿದ್ದುದು ತಿಳಿಯಬಹುದು.

ಕ್ರಿ.ಶ. ೧೩೩೬ರಲ್ಲಿ ಸ್ಥಾಪಿತವಾದ ವಿಜಯನಗರ ಸಾಮ್ರಾಜ್ಯದ ಅರಸರು ಈ ಪ್ರದೇಶದಲ್ಲಿ ತಮ್ಮ ಪ್ರಭುತ್ವ ಸ್ಥಾಪಿಸಿದಾಗ ಇವರ ಶೈವಧರ್ಮ ಆಚರಣೆಗಳಿಗಾವುದಕ್ಕೂ ತೊಂದರೆ ಉಂಟುಮಾಡಲಿಲ್ಲ. ಇದೇ ಕಾಲಕ್ಕೆ ಪ್ರವರ್ಧಮಾನಕ್ಕೆ ಬಂದ ನಗಿರೆ ಅರಸರು ಜೈನರಾಗಿದ್ದರು. ಪಾರ್ಶ್ವನಾಥ ಹಾಗೂ ವರ್ಧಮಾನ ಬಸದಿಯ ಮಧ್ಯೆ ಒಂದು ಜಂಬಿಟ್ಟಿಗೆ ಕಲ್ಲಿನ ಪಾಳುಬಿದ್ದ ಶಿವಾಲಯ ಹಾಗೂ ೨ ನಂದಿಗಳು ತಮ್ಮ ರಾಜ್ಯದ ಶೈವರಿಗೆ ಹಾಗೂ ಶೈವ ಸೈನಿಕರಿಗೆ ಆರಾಧನೆಗಾಗಿ ನಿರ್ಮಿಸಿರಬಹುದು ಎಂದು ಹೇಳಲಾಗಿದೆ. ಅಲ್ಲದೆ ಜೈನರು ಪ್ರಭಲರಾಗಿದ್ದಾಗ ಅಥವಾ ಶೈವರು ಪ್ರಭಲವಾಗಿದ್ದಾಗ ಸಾಮಾನ್ಯವಾಗಿ ಕಂಡುಬರುವ ಪರಸ್ಪರ ಸಂಘರ್ಷದ ಕುರುವುಗಳಾವವು ಸಿಗದಿದ್ದರೂ ಜೈನ ಶಿಲ್ಪಗಳು ಸುದೃಢವಾಗಿದ್ದು ಶೈವ ಆರಾಧನಾ ಸ್ಥಳಗಳು ರಕ್ಷಣೆಯಿಲ್ಲದೆ ಹೊರಗಿದ್ದು ಕಂಡುಬರುತ್ತದೆ.

೫.೧.೩ ಕಾಳಾಮುಖ

ಶೈವಾರಾಧನೆಯ ಹಲವು ಪಂಥಗಳ ಬಗ್ಗೆ ಆರಂಭದಲ್ಲಿ ಉಲ್ಲೇಖಿಸಲಾಗಿದೆ. ಇವುಗಳಲ್ಲಿ ಲಕುಲೀಶನಿಂದ ಆರಂಭಿಸಲ್ಪಟ್ಟ ಪಾಶುಪತ ಧರ್ಮವೇ ಮೂಲ ಎಂಬ ನಂಬಿಕೆ ಇದೆ. ಈತನು ಶ್ರೀಕೃಷ್ಣನ ಸಮಕಾಲೀನನು ಆಗಿದ್ದ[೫೯]ನೆಂದು ಭಾವಿಸಲಾಗಿದೆ. ಈತನಿಂದ ಆರಂಭಗೊಂಡ ಲಕುಲೀಶ ಪಂಥವು ಕರ್ನಾಟಕದಲ್ಲಿ ಬಹು ಪ್ರಭಾವಶಾಲಿಯೂ, ಜನಪ್ರಿಯವೂ ಆಗಿದ್ದ ಶೈವಮತವಾಗಿದೆ. ಕ್ರಿ.ಶ. ಆರನೇ ಶತಮಾನದಿಂದ ಹದಿನೈದನೇ ಶತಮಾನದವರೆಗೆ ಅನೇಕ ಶಾಸನಗಳು ಈ ಕುರಿತು ತಿಳಿಸುತ್ತವೆ [೬೦]. ಈ ಪಂಥದ ಗುರುಗಳನ್ನು ರಾಜರುಗಳು ತುಂಬಾ ಗೌರವದಿಂದ ನೋಡುತ್ತಿದ್ದರು. ಈ ಪಂಥದ ಕೆಲವರನ್ನು ಕಾಳಾಮುಖ ಆಚಾರ್ಯರೆಂದೂ ಕರೆದಿದ್ದಾರೆ[೬೧]. ಲಾಕುಳ ಅಥವಾ ಪಾಶುಪತರಿಗೆ ಕಾಳಾಮುಖರೆಂಬ ಹೆಸರೂ ಇದೆ[೬೨]. ಕ್ರಿ.ಶ. ೪೫೦ರ ಕಾಲ ಘಟ್ಟದ ಹಲ್ಮಿಡಿ ಶಾಸನದಲ್ಲಿನ ಆಳುಪ 'ಗಣಪಶುಪತಿ' ಎಂಬ ಒಕ್ಕಣೆಯು ಲಕುಲೀಶ ಪಾಶುಪತ ಪಂಥವನ್ನು ಸೂಚಿಸುವುದೆಂದು ಆಳುಪರು ಆ ಪಂತಕ್ಕೆ ಸೇರಿದ್ದ[೬೩]ರೆಂದು ವಿದ್ವಾಂಸರು ತೀರ್ಮಾನಿಸಿದ್ದಾರೆ.

ಕದಂಬ ರವಿವರ್ಮ (ಕ್ರಿ.ಶ. ೫೦೬) ನ ೩೫ನೇ ವರ್ಷದ ಶಾಸನದಲ್ಲಿ ಪಾಶುಪತ[೬೪]ರಿಗೆ ದಾನ ನೀಡಿದ ಬಗ್ಗೆ ಪ್ರಸ್ತಾಪವಿದೆ. ಕರ್ನಾಟಕದ ಪರಂಪರೆಯ ಬಗ್ಗೆ ಇದೊಂದು ಪ್ರಾಚೀನ ಉಲ್ಲೇಖವಾಗಿದೆ. ಪಾಶುಪತರು ಅದಾಗಲೇ ಕರ್ನಾಟಕದಾದ್ಯಂತ ಪಸರಿಸಿದ್ದರಲ್ಲದೇ ರಾಜರುಗಳಿಂದ ದತ್ತಿದಾನ ಪಡೆಯುವಷ್ಟು ಪ್ರಭಾವಿತರಾಗಿದ್ದರು. ಇವರ ಆಚರಣೆ ರಾಜವಂಶದ ಮೇಲೂ ಪ್ರಭಾವ ಬೀರುವಂತಿತ್ತು. ಶಿವಾನಂದವರ್ಮನೆಂಬ ಕದಂಬರ ಸಂಬಂಧಿಯಾದ ರಾಜಕುಮಾರನು (ಸು.ಕ್ರಿ.ಶ. ಐದನೇ ಶತಮಾನ) ಒಂದು ಯುದ್ಧದಲ್ಲಿ ಪರಾಜಯಗೊಂಡು ವಿರಕ್ತನಾಗಿ ದರ್ಭಾಶಯನನಾಗಿ ತೀರಿದನೆಂದೂ, ಅವನು ಪರಮ ಮಹೇಶ್ವರನಾಗಿದ್ದನೆಂದೂ ತಿಳಿಸುವ ಶಾಸನ ಒಂದಿದೆ. "ಪಾಶುಪತ" ಮತ್ತು ಮಹೇಶ್ವರ ಎಂಬ ಪದಗಳು ಶೈವ ಪ್ರಭೇದ[೬೫] ತೋರಿಸುತ್ತದೆ. ಈ ಶಾಸನದಿಂದ ಕದಂಬರ ಕಾಲಕ್ಕೆ ಪಾಶುಪತ ಪಂಥ ಪ್ರಬಲವಾಗಿ ಬೆಳೆದಿದ್ದಿತ್ತು ಎಂಬುವುದಾಗಿ ತಿಳಿಯುತ್ತದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಬನವಾಸಿ ೧೨೦೦೦ ನಾಡಿನ ಮುಖ್ಯಸ್ಥಳವಾಗಿದ್ದ ಬಳ್ಳಿಗಾವೆಯಲ್ಲಿ ಪ್ರಸಿದ್ಧ ಮತ್ತು ಸಂಪತ್‌ಭರಿತವಾಗಿದ್ದ ಕೇದಾರೇಶ್ವರ ದೇವಾಲಯವು ಕಾಳಾಮುಖರ ದೊಡ್ಡ ಕೇಂದ್ರವಾಗಿತ್ತು[೬೬]. ಇಲ್ಲಿಯ ಕಾಳಾಮುಖರ ಮಠಕ್ಕೆ ಮುಖ್ಯಸ್ಥರಾಗಿ ರಾಜಗುರು ವಾಮಶಕ್ತಿಯಂಥ ಕಾಳಾಮುಖ ಆಚಾರ್ಯರು[೬೭] ಇದ್ದರು. ಅದು ೧೧ ಮತ್ತು ೧೨ ನೆಯ ಶತಮಾನದಲ್ಲಿ ಪ್ರಸಿದ್ಧ ಧಾರ್ಮಿಕ ಕೇಂದ್ರವಾಗಿ ದಕ್ಷಿಣದಕೇದಾರವೆಂದೇ ಪ್ರಸಿದ್ಧವಾಗಿತ್ತು[೬೮].

ಹೊಯ್ಸಳರ ಆಡಳಿತ ಕಾಲದಲ್ಲಿ ಬಳ್ಳಿಗಾವೆಯಲ್ಲಿ ಕಾಳಾಮುಖರ ಪ್ರಭಾವ ಮುಂದುವರಿಯಿತು. ಹಾಗೇ ಇದು ವಿಜಯನಗರದ ಕಾಲದವರೆಗೂ ಮುಂದುವರೆಯಿತು.

ಬಸವಣ್ಣನ ಕಾಲದಲ್ಲಿ ವೀರಶೈವಧರ್ಮವು ಒಂದು ಧಾರ್ಮಿಕ, ಸಾಮಾಜಿಕ[೧೯] ಬೆಳಕಾಗಿ ಜನಪ್ರಿಯವಾಯಿತು. ಸಮಾಜದಲ್ಲಿದ್ದ ಅನ್ಯಾಯಗಳ ವಿರುದ್ಧ ಪ್ರತಿಭಟಿಸಿದ ಬಸವಣ್ಣನನ್ನು ಅನೇಕರು ಹಿಂಬಾಲಿಸಿದರು. ಅನೇಕ ರೀತಿಯ ವೃತ್ತಿಯಲ್ಲಿ ತೊಡಗಿದ್ದ ಜನರು ಮೇಲು ಕೀಳೆನ್ನದೆ ಬಸವಣ್ಣನ ಅನುಯಾಯಿಗಳಾದರು. ವೀರಶೈವದ ಪುನರುತ್ಥಾನ ಕಾರ್ಯವು ಬಸವಣ್ಣನ ಕಾಲದಲ್ಲಿ ನಡೆಯಿತು[೨೦]. ವೀರಶೈವರ ಉದಯದೊಡನೇ ಕಾಳಾಮುಖ ಶೈವದ ಅವನತಿಯೂ ಆರಂಭವಾಯಿತು[೨೧]. ಬನವಾಸಿ, ಬಳ್ಳಿಗಾವೆಸೀಮೆಯಲ್ಲಿ ಹುಟ್ಟಿ ಬೆಳೆದ ಅಲ್ಲಮಪ್ರಭು ಮತ್ತು ಅಕ್ಕಮಹಾದೇವಿ[೨೨] ಈ ಸಾಮಾಜಿಕ ಚಳುವಳಿಯಲ್ಲಿ ಪ್ರಮುಖ ಪಾತ್ರವಹಿಸಿದ್ದರು. ಅಲ್ಲಮಪ್ರಭು ಶೂನ್ಯ ಸಿಂಹಾಸನದ ಮುಖ್ಯಸ್ಥರಾಗಿದ್ದರು. ಇಂದಿಗೂ ಬನವಾಸಿಯಲ್ಲಿ ಅಲ್ಲಮಪ್ರಭುಗುಡಿ ಹಾಗೂ ಪ್ರಭುದೇವರಗುಡಿಗಳನ್ನು ನೋಡಬಹುದು. ಅಲ್ಲಮಪ್ರಭುವಿನಂತೆ ಅನೇಕ ಶಿವಶರಣರು[೨೩] ಈ ಭಾಗದಿಂದ ವೀರಶೈವ ಚಳುವಳಿಯನ್ನು ಸೇರಿದ್ದರು. ಅಲ್ಲಮಪ್ರಭುಗಳ ಗುರುಗಳಾಗಿದ್ದ ಅನಿಮಿಷಯ್ಯನವರು ನಾಥಪಂಥೀಯರಾಗಿದ್ದರು[೨೪]. ಈ ಹಿನ್ನಲೆಯಲ್ಲಿ ಈ ಪ್ರದೇಶದಲ್ಲಿ ನಾಥಪಂಥದ ಅನುಯಾಯಿಗಳಿದ್ದರೆನ್ನಬಹುದು. ಮುಂದೆ ವಿಜಯನಗರ ಕಾಲದಲ್ಲೂ ಶೈವ ಪಂಥದ ಆಚರಣೆ ಈ ಪ್ರದೇಶದಲ್ಲಿ ಮುಂದುವರಿಯಿತು. ಈ ಕಾಲಕ್ಕೆ ಸೇರಿದ ೨ ವೀರ ಭದ್ರದೇವರ ಮೂರ್ತಿಗಳು ಬನವಾಸಿಯಲ್ಲಿವೆ. ಒಟ್ಟಿನಲ್ಲಿ ಸೌಮ್ಯ ಮತ್ತು ಉಗ್ರ ಶೈವ ಪಂಥಗಳು ಈ ಪ್ರದೇಶಗಳಲೆಲ್ಲಾ ಪ್ರಚಲಿತದಲ್ಲಿದ್ದುವೆಂದು ತಿಳಿದುಬರುತ್ತದೆ.

೫.೧.೪ ವೈಷ್ಣವ ಧರ್ಮ

ವೈಷ್ಣವರ ಅಧಿದೇವತೆಯಾದ ವಿಷ್ಣುವಿಗೆ ಒಂದು ದೊಡ್ಡ ಹಿನ್ನಲೆಯಿದೆ. ವೈಷ್ಣವರ ಹಾಗೂ ವಿಷ್ಣುವಿನ ಕುರಿತು ವೈದಿಕ ಧರ್ಮದ ಅನೇಕ ಗ್ರಂಥಗಳು ವಿವರ ನೀಡುತ್ತವೆ. ವಿಷ್ಣುವಿನ ಕುರಿತು ವಿಷ್ಣು ಪುರಾಣವೇ ಇದೆ. ಋಗ್ವೇದದಲ್ಲಿ ವಿಷ್ಣು ಒಬ್ಬ ದೇವತೆಯಾಗಿ[೨೫] ಕಾಣಿಸಿಕೊಳ್ಳುತ್ತಾನೆ. ಇಲ್ಲಿ ವಿಷ್ಣು ಸರ್ವೋತ್ತಮ ದೇವನಾಗಿದ್ದಾನೆ. ಮತ್ತು ಆತನು ಧರ್ಮಾಧಾರ ಎಂದು ಕರೆದುಕೊಳ್ಳುತ್ತಾನೆ. ವಿಷ್ಣು ಭಕ್ತಿಯೇ ವೈಷ್ಣವರಿಗೆ ಆಧ್ಯಾತ್ಮಿಕ ಉನ್ನತಿಯನ್ನು ತಂದು ಕೊಡುವುದೆಂಬ ನಂಬಿಕೆಯಿದೆ. ಮುಂದೆ ಮಹಾಕಾವ್ಯ ಹಾಗೂ ಪುರಾಣಗಳ ಕಾಲದಲ್ಲಿ ವಿಷ್ಣುವಿನ ಆರಾಧನೆಯು ಸೂರ್ಯಾರಾಧನೆಯೊಂದಿಗೆ ಬೆರೆತುಕೊಂಡಿದೆ. ಸೂರ್ಯನು ವಿಷ್ಣುವಿನ ಪ್ರತ್ಯಕ್ಷ ಸಂಕೇತವಾಗುತ್ತಾನೆ[೨೬].

ಕರ್ನಾಟಕದಲ್ಲಿ ವೈಷ್ಣವಧರ್ಮ ಯಾವಾಗ ಕಾಲಿರಿಸಿತ್ತೆಂಬ ಬಗ್ಗೆ ಖಚಿತವಾದ ದಾಖಲೆ ದೊರೆತಿಲ್ಲ. ಆದರೆ ದಕ್ಷಿಣ ಭಾರತವನ್ನು ಅದರಲ್ಲೂ ಕರ್ನಾಟಕದ ಪ್ರದೇಶಗಳನ್ನು ಆಳಿದ ಶಾತವಾಹನರು ವೈದಿಕರಾಗಿದ್ದು, ೨ನೇ ಶಾತಕರ್ಣಿಯ ಕಾಲಕ್ಕೆ ಸೇರಿದ ೨ನೇ ಶತಮಾನದ ನಾನಾಘಟ್ಟ ಶಾಸನವು ಇಂದ್ರ ಸಂಕರ್ಷಣ ವಾಸುದೇವನನ್ನು ಹೆಸರಿಸುತ್ತದೆ[೭೭]. ಇದರಿಂದ ವೈಷ್ಣವದ ಆಗಮನವನ್ನು ಶಾತವಾಹನರ ಕಾಲಕ್ಕೆ ಕೊಂಡೊಯ್ಯಲಾಗಿದೆ.

ಕರ್ನಾಟಕದಲ್ಲಿ ವೈಷ್ಣವ ಧರ್ಮದ ಆಗಮನವನ್ನು ಶಾತವಾಹನ ಹಾಗೂ ಅವರ ವಂಶಕ್ಕೆ ಸೇರಿದ ರಾಜಕುಟುಂಬಗಳೊಂದಿಗೆ ಗುರುತಿಸುವ ಪ್ರಯತ್ನ ಮಾಡಲಾಗಿದೆ[೭೮]. ಯಜ್ಞಶಾತಕರ್ಣಿಯ ಹೆಸರಿನೊಂದಿಗಿರುವ ಯಜ್ಞ ಹಾಗೂ ಚುಟು ಆನಂದ ವಂಶದ ಬನವಾಸಿ ಶಾಸನಗಳಲ್ಲಿ ಬರುವ ಆಧಾರಗಳನ್ನು ಬಳಸಿ[೭೯] ಇವರ ಕಾಲವನ್ನು ಕ್ರಿ.ಶ ೨–೩ನೇ ಶತಮಾನಕ್ಕೆ ಕೊಂಡೊಯ್ಯಲಾಗಿದೆ. ಶಾತವಾಹನರ ನಂತರ ಬನವಾಸಿಕೇಂದ್ರವಾಗಿ ಆಳಿದ ಕದಂಬರ ಹಲ್ಮಿಡಿ ಶಾಸನದ ಶಿರೋಭಾಗದಲ್ಲಿ ಸುದರ್ಶನ ಚಕ್ರವಿದ್ದು, ಇದು ವೈಷ್ಣವ ಧರ್ಮವನ್ನು ಪ್ರತಿನಿಧಿಸುತ್ತಿದ್ದಿತ್ತೆಂದು ಹಾಗೂ ಇಲ್ಲಿ ದೊರೆತಿರುವ ಮೂರ್ತಿಯೊಂದು ವಿಷ್ಣುವಿನಂತೆ ತೋರುವುದರಿಂದ ವೈಷ್ಣವ ಧರ್ಮಕ್ಕೆ ಕದಂಬರಿಂದಲೂ ಪ್ರೋತ್ಸಾಹ ದೊರೆತಿರುವುದು ತಿಳಿಯುತ್ತದೆ. ಅಂತೆಯೇ ಈ ವಂಶದ ಅರಸರುಗಳು ಹೊಂದಿದ್ದ ಹೆಸರುಗಳು ವೈಷ್ಣವ ದೇವರ ಹೆಸರುಗಳಾದ ರಘು, ಕೃಷ್ಣ, ವಿಷ್ಣು ಮುಂತಾದವುಗಳಾಗಿವೆ. ಜೊತೆಯಲ್ಲಿ ಶಿವಮಾಂಧಾತೃ, ಶಿವರಥ ಮುಂತಾದ ಶೈವ ಹೆಸರುಗಳೂ ಇವೆ. ಅಂದರೆ ಇವರು ಶೈವ–ವೈಷ್ಣರಲ್ಲಿ ಭೇದ ಕಾಣುತ್ತಿರಲಿಲ್ಲ ಎಂದು ತಿಳಿಯುತ್ತದೆ. ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ (ಸು. ೧೦–೧೧ನೆಯ ಶತಮಾನ) ಆಧಿಮಾಧವನೆಂದು ಕರೆಯುವ ವಿಷ್ಣುವಿನ ಮೂರ್ತಿಯಿದೆ[೮೦]. ಇದೇ ಮೂರ್ತಿ ದೇವಾಲಯದ ಮೂಲಮೂರ್ತಿ ಎಂಬ ನಂಬಿಕೆಯೂ ಇಲ್ಲಿದೆ. ಈ ಮೂರ್ತಿಯಕುರಿತು ಅ.ಸುಂದರವರು[೮೧] ಬಾದಾಮಿ–ಐಹೊಳೆ ಪ್ರದೇಶದ ಮೂರ್ತಿಯನ್ನು ಹೋಲುತ್ತದೆ ಎನ್ನುತ್ತಾರೆ. ಈ ಮೂರ್ತಿಯ ಕಾಲವನ್ನು ಕ್ರಿ.ಶ. ೮–೯ನೇ ಶತಮಾನಕ್ಕೆ ಸರಿಹೊಂದಿಸಿದ್ದಾರೆ. ಈ ಮಾಧವಮೂರ್ತಿಯ ತೋರಣದಲ್ಲಿ ದಶಾವತಾರದ ಮತ್ಸ್ಯ, ಕೂರ್ಮ, ವರಾಹ ಮತ್ತು ನರಸಿಂಹ ಶಿಲ್ಪಿಗಳಿವೆ.

ಪ್ರಾಚೀನ ಮಾಧವವಿಗ್ರಹ ಸುಂಕೇರಿಯಲ್ಲಿಯೂ[೮೨] ಇದೆ. ಚಾಲುಕ್ಯರ ಶೈಲಿ ಹೋಲುವ ಸುಂದರ ಕೃಷ್ಣನ ವಿಗ್ರಹ ಹಾಗೂ ನರಸಿಂಹನ ವಿಗ್ರಹಗಳು ಕುಮಟಾದ ಕಡೆಕೋಡಿಯಲ್ಲಿವೆ. ಹೊನ್ನಾವರದ ಗುಣವಂತೆಯಲ್ಲಿ ಯೋಗಿನರಸಿಂಹ ಶಿಲಾಮೂರ್ತಿಯಿದ್ದು ಇವುಗಳು ಕರಾವಳಿ ಪ್ರದೇಶದಲ್ಲಿ ವೈಷ್ಣವ ಧರ್ಮದ ಪ್ರಭಾವವನ್ನು ಸೂಚಿಸುತ್ತದೆ. ಕುಂದಾಪುರದ ಸಾಲಿಗ್ರಾಮದಲ್ಲಿ ದ್ವಿಬಾಹುನರಸಿಂಹನ ಶಿಲ್ಪಇದೆ. ಅವಿಭಜಿತ ದಕ್ಷಿಣ ಕನ್ನಡದಲ್ಲಿ ಕ್ರಿ. ೧೩ನೇ ಶತಮಾನದಲ್ಲಿ

ವೈಷ್ಣವಧರ್ಮ ಉಚ್ಛ್ರಾಯ ಸ್ಥಿತಿಗೆ ಬಂದಿತ್ತೆಂದು[೮೩] ಹಲವು ವಿದ್ವಾಂಸರ ನಂಬಿಕೆ. ಉಡುಪಿಯ ಕೃಷ್ಣದೇವಾಲಯವು ವೈಷ್ಣವ ಸಮುದಾಯದ ಕೇಂದ್ರವಾಗಿದ್ದು ಇಲ್ಲಿರುವ ತೈಲಕೃಷ್ಣನ ವಿಗ್ರಹದಿಂದ ಇಲ್ಲಿ ಪ್ರಾಚೀನ ಕಾಲದಲ್ಲಿಯೆ ವೈಷ್ಣವ ಆರಾಧನೆ ನಡೆದಿತೆಂದು ತಿಳಿಯುತ್ತದೆ. ವಿಜಯನಗರದ ಆಡಳಿತದ ಅವಧಿಯಲ್ಲಿ ಕರ್ನಾಟಕದ ಕರಾವಳಿಪ್ರದೇಶದಲ್ಲಿ ವೆಂಕಟರಮಣ ದೇವಾಲಯಗಳು ಸ್ಥಾಪಿತವಾದವು. ಮದ್ವಾಚಾರ್ಯರ ಕಾಲದಲ್ಲಿ ತುಳುನಾಡಿನಲ್ಲಿ ವೈಷ್ಣವ ಧರ್ಮವು ಹೊಸರೂಪ ತಳೆಯಿತು ಜೊತೆಗೆ ವ್ಯಾಪಕವು ಆಯಿತು. ವ್ಯಾಸರಾಯ, ಕನಕ, ಪುರಂದರರ ಕಾಲದಲ್ಲಿ ವೈಷ್ಣವ ಭಕ್ತಿ ಜನಸಾಮಾನ್ಯರನ್ನು ಸೆಳೆಯಿತು.

ಚಾಲುಕ್ಯರ ಕಾಲದಲ್ಲಿ ವೈಷ್ಣವಮತ ಕರ್ನಾಟಕದಲ್ಲಿ ಜನಪ್ರಿಯವಾಗಿತ್ತು[೮೪]. ಇವರ ಹೆಸರುಗಳು ಮತ್ತು ಇವರ ಕಾಲದಲ್ಲಿ ಕೆತ್ತಲ್ಪಟ್ಟ ವೈಷ್ಣವ ಶಿಲ್ಪಗಳಿಂದ ಇವರು ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಿದ್ದಾರೆಂದು ತಿಳಿಯಬಹುದು. ಇವರ ಕಾಲದ ದ್ವಿಭುಜ ನರಸಿಂಹನ ವಿಗ್ರಹ (ಬೆಂಗಣಿ) ಕಾರ್ಗಲ್, ಕುಪ್ಪಟೂರು, ಹಲಶಿ[೮೫] ಮುಂತಾದೆಡೆಗಳಲ್ಲಿ ದೊರೆತಿವೆ. ಹೊನ್ನಾವರದ ಎಲೆಮಾಳದಲ್ಲಿ ವರಾಹ ಮೂರ್ತಿ, ಕುಂದಾಪುರದ ಮರವಂತೆಯಲ್ಲಿ ಮತ್ಸ್ಯ, ಕೂರ್ಮ, ವರಾಹ ನರಸಿಂಹ ಶಿಲ್ಪಗಳು ವೈಷ್ಣವಪಂಥದ ದಶಾವತಾರಗಳು ಆರಾಧ್ಯವಾದಬಗ್ಗೆ ತಿಳಿಸುತ್ತವೆ.

ಕರ್ನಾಟಕದಲ್ಲಿ ವಿಷ್ಣುವಿನ ಆರಾಧನೆಯು ಪ್ರಾರಂಭದ ಕಾಲಾವಧಿಯನ್ನು ಶ್ರೀನಿವಾಸ ವಿ. ಪಾಡಿಗಾರ[೮೬]ರವರು ತಮ್ಮ ಅಧ್ಯಯನದಲ್ಲಿ ಪ್ರಸ್ತುತಪಡಿಸಿದ್ದಾರೆ. ಕರಾವಳಿ ಪ್ರದೇಶದಲ್ಲಿ ವಿಷ್ಣುವನ್ನು ಶಿಲ್ಪದಲ್ಲಿ ಕಂಡರಿಸಿದ ಕಾಲಾವಧಿಯು ಕ್ರಿ.ಶ. ಮೂರನೇ ಶತಮಾನದಷ್ಟು ಹಿಂದಕ್ಕೆ ಹೋಗುತ್ತದೆ.

ಹೊನ್ನಾವರದ ಕೊಂತಪಾಲದಲ್ಲಿ ಸಿಕ್ಕಿರುವ ದ್ವಿಭುಜ ವಿಷ್ಣುವಿನ ಶಿಲ್ಪವು[೮೭] ಚುಟುಗಳ ಕಾಲಕ್ಕೆ ಸರಿಹೊಂದಿಸಲಾಗಿದೆ[೮೮]. ಮಥುರಾದ ಆರಂಭ ಕಾಲದ ಶೈಲಿಯ ಶಿಲ್ಪ ಇದಾಗಿದ್ದು, ಕರ್ನಾಟಕದ ಅತ್ಯಂತ ಪ್ರಾಚೀನ ವಿಷ್ಣುವಿನ ವಿಗ್ರಹ ಇದಾಗಿದೆ. ಇದನ್ನು ವಾಸುದೇವ ಎಂದು ಕರೆಯಲಾಗಿದೆ[೮೯]. ಕ್ರಿ.ಶ.೫ನೇ ಶತಮಾನದ ಹರಿಹರ ವಿಗ್ರಹ ಗೋಕರ್ಣದಲ್ಲಿ ದೊರೆತಿದ್ದು ಹರಿ ಮತ್ತು ಹರನನ್ನು ಒಂದೇ ಶಿಲ್ಪದಲ್ಲಿ ಬೇರೆ ರೀತಿಯಾಗಿ ತೋರಿಸುವ ಈ ಶಿಲ್ಪ ಗುಪ್ತರಕಾಲದ ಶಿಲ್ಪದಂತಿದೆ. ದಕ್ಷಿಣ ಕನ್ನಡದ ಮಲಪಳ್ಳಿಯ ಜನಾರ್ಧನ ದೇವಾಲಯದಲ್ಲಿ ಚತುರ್ಭುಜ ವಿಷ್ಣುವಿನಮೂರ್ತಿ ಇದ್ದು, ಇದರ ಕಾಲ ಕ್ರಿ.ಶ. ೭ನೇ[೯೦] ಶತಮಾನ. ಆಲೂಪರು ಚಾಲುಕ್ಯರ ಮಹಾಮಂಡಳೇಶ್ವರರಾಗಿ ಆಳುತ್ತಿದ್ದ ಕಾಲದ ಈ ಶಿಲ್ಪವು ಚಾಲುಕ್ಯರ ಕೊನೆಯ ಶಿಲ್ಪದ ಶೈಲಿ ಹೊಂದಿದೆ. ಕೃಷ್ಣದೇವಾಲಯದ ವೇಣುಗೋಪಾಲಕೃಷ್ಣನಮೂರ್ತಿಯು ಕ್ರಿ.ಶ. ೯–೧೦ನೇ ಶತಮಾನಕ್ಕೆ ಸೇರಿದ್ದು, ಕರ್ನಾಟಕದ ಅತ್ಯಂತ ಪ್ರಾಚೀನ ವೇಣು ಗೋಪಾಲಮೂರ್ತಿ ಇದಾಗಿದೆ[೯೧].

ಹೊಯ್ಸಳರು ಕರಾವಳಿ ಪ್ರದೇಶ ಆಳುವಾಗ ಬೇಲೂರಿನಲ್ಲಿದ್ದರು. ಇವರ ನೇರ ಆಡಳಿತದಕ್ಕಿಂತ ಪರೋಕ್ಷ ಆಡಳಿತ ಇಲ್ಲಿತ್ತು. ಹಾಗಾಗಿ ಇಲ್ಲಿ ಅವರ ಧಾರ್ಮಿಕ ಪ್ರಭಾವ ಬಲವಾಗಿಬೀಳಲಿಲ್ಲ. ಆದರೆ ಚಿಕ್ಕಾಯಿತಾಯಿ-ಕೃಷ್ಣಾಯಿತಾಯಿ ಎಂದೂ ಕರೆಸಿಕೊಂಡಿರುವುದು ಇದು ವೈಷ್ಣವ ಧರ್ಮದ ಪ್ರಭಾವದಂತೆ ಕಾಣುತ್ತದೆ.

ಮುಂದೆ ವಿಜಯನಗರದ ಅರಸರ ಆಡಳಿತಕ್ಕೆ ಒಳಪಟ್ಟಾಗ ಧಾರ್ಮಿಕ ಆಚರಣೆಗಳಲ್ಲಿ ಹೆಚ್ಚಿನ ಬದಲಾವಣೆಗಳಾಗಲಿಲ್ಲ. ಸ್ಥಳೀಯರು ಹಿಂದಿನಿಂದ ನಡೆಸಿಕೊಂಡು ಬಂದ ಪದ್ಧತಿಯನ್ನು ಮುಂದುವರೆಸಿಕೊಂಡು ಹೋಗಲು ಯಾವುದೇ ತೊಂದರೆಗಳಿರಲಿಲ್ಲವಾದರೂ ವೈಷ್ಣವ ಧರ್ಮಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಿತು. ಈ ಕಾಲದಲ್ಲಿ ಪ್ರಮುಖ ಗ್ರಾಮಗಳಲ್ಲಿ, ವ್ಯಾಪಾರಿ ಕೇಂದ್ರಗಳಲ್ಲಿ, ಪಟ್ಟಣಗಳಲ್ಲಿ ವಿಷ್ಣುವಿನ ದೇವಾಲಯಗಳು ಆರಂಭವಾದವು. ಇಂದಿಗೂ ವೈಷ್ಣವ ದೇವಾಲಯಗಳಾದ ವೆಂಕಟರಮಣ, ನಾರಾಯಣ, ಶಂಕರನಾರಾಯಣ, ಸೂರ್ಯನಾರಾಯಣ, ವಿಷ್ಣುಮೂರ್ತಿ ಹೆಸರುಗಳ ದೇವಾಲಯಗಳು ಆರಂಭವಾದದ್ದು ತಿಳಿಯುತ್ತದೆ.

ವಿಜಯನಗರದ ಅರಸರ ಕಾಲದಲ್ಲಿ ಕ್ರಿ.ಶ. ೧೩೫೭ರಲ್ಲಿ ರಾಜ್ಯಪಾಲ ಮಲೆಯ ದಂಡನಾಯಕನ ಮಂತ್ರಿಯಾದ ರಾಮದೇವನೆಂಬಾತ ವಿಷ್ಣುತಿರುಳನೆಂಬಾತನಿಂತ ಭೂಮಿ ಖರೀದಿಸಿ ಕೃಷ್ಣದೇವಾಲಯಕ್ಕೆ ದಾನ ನೀಡಿದ್ದನ್ನು ತಿಳಿಸುತ್ತದೆ[೨]. ೧೩೬೬ರ ಶಾಸನ ಒಂದು ಉಡುಪಿಯ ಕೃಷ್ಣನಿಗೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ[೩]. ಕ್ರಿ.ಶ. ೧೩೭೮ರ ಶಾಸನ ಬಾರಕೂರಿನ ರಾಜ್ಯಪಾಲ ಬೊಮ್ಮರಸನು ಶ್ರೀ ನಾರಾಯಣ ದೇವರು ಮತ್ತು ಶ್ರೀ ದೇವರಿಗೆ ಮಾಡಿದ ಧರ್ಮದ ವಿವರಗಳನ್ನು ತಿಳಿಸುತ್ತದೆ. ಕ್ರಿ.ಶ. ೧೩೮೦, ಕ್ರಿ.ಶ. ೧೩೮೬, ಕ್ರಿ.ಶ. ೧೪೧೦, ಕ್ರಿ.ಶ. ೧೪೫೫ರವಿಜಯನಗರ ಕಾಲದ ಶಾಸನಗಳು ವೈಷ್ಣವ ದೇವಸ್ಥಾನಗಳಿಗೆ ದಾನ, ದತ್ತಿ ನೀಡಿದ್ದು ತಿಳಿಸಿದರೆ ಕ್ರಿ.ಶ. ೧೪೧೦ರ ಶಾಸನ ದಾನ ನೀಡಿದವರಲ್ಲಿ ಇಬ್ಬರ ಹೆಸರನ್ನು ಸೂಚಿಸುತ್ತದೆ. ಆ ಹೆಸರುಗಳು ವೈಷ್ಣವ ಹೆಸರುಗಳಾಗಿವೆ[೪].

೫.೧.೫ ಬೌದ್ಧಧರ್ಮ

ಗೌತಮಬುದ್ಧನು ಬೌದ್ಧಧರ್ಮದ ಸ್ಥಾಪಕನು. ನೇಪಾಳ ಬಳಿಯ ಕಪಿಲ ವಸ್ತುವಿನ ಶಾಕ್ಯ ವಂಶದಲ್ಲಿ ಜನಿಸಿದ್ದನು. ಕಾಲ ಕ್ರಿ.ಶ. ಪೂ ೫೬೩[೫]. ಈತನ ತಂದೆ ಶುದ್ಧೋದನ ಹಾಗೂ ತಾಯಿ ಮಾಯಾದೇವಿ. ಶುದ್ಧೋದನನು ಕಪಿಲವಸ್ತುವಿನ ಚುನಾಯಿತ ರಾಜನಾಗಿ ಶಾಕ್ಯ ಗಣರಾಜ್ಯದ ಮುಖ್ಯಸ್ಥನಾಗಿದ್ದನು[೬]. ಈ ಗಣರಾಜ್ಯದ ಮುಖ್ಯಸ್ಥನ ಸ್ಥಾನ ಸರದಿಯಮೇಲೆ ಆಯ್ಕೆ ಮಾಡುತ್ತಿದ್ದರು[೭]. ಶಾಕ್ಯರು ಕೃಷಿಕರು, ವ್ಯಾಪಾರಿಗಳೂ ಆಗಿದ್ದರು[೮]. ಇಂತಹ ಬುಡಕಟ್ಟು ಮುಖ್ಯಸ್ಥನ ಮನೆಯಲ್ಲಿ ಜನಿಸಿದ ಗೌತಮನು ಕರುನಾಳು ಆಗಿದ್ದನು. ಮಾನವನ ದುಃಖಕ್ಕೆ ಒಂದು

ಪರಿಹಾರ ಹುಡುಕಲು, ರಾಜ್ಯ ತ್ಯಜಿಸಿ ಕಾಡುಸೇರಿದನು. ಅಲೆದಾಡಿದನು. ಹಲವಾರು ಮಹಾತ್ಮರನ್ನೂ ಸಂದರ್ಶಿಸಿದನು. ಜ್ಞಾನ ಪಡೆದನು. ಬುದ್ಧನಾದನು. ಬುದ್ಧನೇ ಬರೆದಿಟ್ಟ ಯಾವುದೇ ತತ್ವಗಳಿಲ್ಲ. ಆದರೆ ಈತನ ಬೋಧನೆಗಳು ಅಲ್ಲಿಯವರೆಗಿನ ತತ್ವಗಳಿಗೆ ತೀವ್ರ ವಿರೋಧವಾಗಿದ್ದವು. ಜನಸಾಮಾನ್ಯರ ಭಾಷೆಯಲ್ಲಿ ಸರಳವಾದ ಆಚರಣೆಗಳ ಬಗ್ಗೆ ಹೇಳಿದನು. ಬಹುಜನರು ಆತನ ಅನುಯಾಯಿಗಳಾದರು. ಬುದ್ಧನ ಸಾವಿನ ನಂತರ ಎರಡುನೂರು ವರ್ಷ ಕಳೆದ ಮೇಲೆ ಮೌರ್ಯಚಕ್ರವರ್ತಿ ಅಶೋಕನು ಬೌದ್ಧಮತವನ್ನು ಸ್ವೀಕರಿಸಿದನು[೯೯].

ಕರ್ನಾಟಕದಲ್ಲಿ ಬೌದ್ಧದ ಆಗಮನವನ್ನು ತಿಳಿಸುವ ಆಧಾರಗಳೆಂದರೆ ಸಿಲೋನಿನ (ಶ್ರೀಲಂಕಾದ) ಗ್ರಂಥಗಳಾದ ಮಹಾವಂಶ ಮತ್ತು ದೀಪವಂಶಗಳು[೧೦೦]. ಇದರಲ್ಲಿ ಕ್ರಿ.ಪೂ. ೩ನೇ ಶತಮಾನದಲ್ಲಿ ಅಶೋಕನು ಮಹೇಂದ್ರನನ್ನು ಸಿಲೋನಿಗೂ, ಭಿಕ್ಷು ಮಹಾದೇವನನ್ನು ಮಹಿಷ ಮಂಡಲ ಮತ್ತು ಬನವಾಸಿಗೆ ಕಳಿಸಿದ[೧೦೧] ಎಂದು ಬರುತ್ತದೆ. ಕರ್ನಾಟಕದಲ್ಲಿ ಅಶೋಕನ ಶಾಸನಗಳು ಒಟ್ಟೂ ೯ ಸ್ಥಳಗಳಲ್ಲಿ ದೊರೆತಿವೆ. ಬ್ರಹ್ಮಗಿರಿ, ಸಿದ್ದಾಪುರ, ಜಟಿಂಗ ರಾಮೇಶ್ವರ, (ಚಿತ್ರದುರ್ಗ ಜಿಲ್ಲೆ), ಮಸ್ಕಿ (ರಾಯಚೂರು), ನಿಟ್ಟೂರು, ಉದಂಗೋಲಂ (ಬಳ್ಳಾರಿ), ಪಾಲಕ್ಕಿಗುಂಡು ಮತ್ತು ಗವಿಮಠ (ಕೊಪ್ಪಳ)ಗಳಲ್ಲಿ ಅಶೋಕನ ಶಾಸನಗಳು ದೊರಕಿವೆ. ಇವುಗಳ ಆಧಾರದಲ್ಲಿ ಅಶೋಕನ ಆಡಳಿತಕ್ಕೆ ಈ ಪ್ರದೇಶಗಳು ಸೇರಿದ್ದವೆಂದು ಹೇಳಬಹುದು. ಇದರೊಂದಿಗೆ ಅಶೋಕನು ಅನುಸರಿಸಿದ ಬೌದ್ಧಧರ್ಮವು ಇಲ್ಲಿ ಪ್ರಚಲಿತವಾಗಿತ್ತೆಂದು ತಿಳಿಯಬಹುದಾಗಿದೆ. ಚಂದ್ರವಳ್ಳಿಯ ಆಂಪ್ಲೆಗುಹೆಗಳಲ್ಲಿ ದೊರೆತಿರುವ ಸಾಕ್ಷಾಧಾರಗಳು, ಸನ್ನತಿಯ ಸುಮಾರು ಮೂವತ್ತಕ್ಕೂ ಮೀರಿದ ಸಣ್ಣ ಶಾಸನಗಳು ಬೌದ್ಧಧರ್ಮ ಕರ್ನಾಟಕದಲ್ಲಿ ಇದ್ದ ಬಗ್ಗೆ ತಿಳಿಸುತ್ತವೆ. ಇವು ಸುಮಾರು ಕ್ರಿ.ಶ. ಪೂ. ಒಂದು ಹಾಗೂ ಕ್ರಿ.ಶ. ಒಂದನೇ ಶತಮಾನದ ಕಾಲಾವದಿಯವುಗಳು.

ಕರ್ನಾಟಕದ ಕರಾವಳಿಯಲ್ಲಿ ಬೌದ್ಧ ಧರ್ಮದ ಚಟುವಟಿಕೆಗಳು ಬಹು ಮುಖ್ಯವಾಗಿವೆ. ಶ್ರೀಲಂಕಾಕ್ಕೆ ಹೋದ ಬೌದ್ಧ ಭಿಕ್ಕುಗಳು ಹೊನ್ನಾವರ ಬಂದರಿನ ಮೂಲಕ ಹೋಗಿರುವ[೧೦೨] ಸಾಧ್ಯತೆಯನ್ನು ಅಲ್ಲಗಳೆಯಲಾಗದು. ಹಾಗೇ ಬನವಾಸಿಯಲ್ಲಿ ದೊರೆತಿರುವ ಶಾತವಾಹನರ ವಂಶಜರಾಗಿದ್ದ ಚುಟುಗಳ ಶಾಸನಗಳು ಹಾಗೂ ಇತರ ಕೆಲವು ಅವಶೇಷಗಳು ಬೌದ್ಧಧರ್ಮದ ಹೆಜ್ಜೆ ಗುರುತುಗಳನ್ನು ಗುರುತಿಸಲು ಸಹಾಯಕವಾಗಿವೆ. ಗೋವಾದಲ್ಲಿ ಕ್ರಿ.ಶ. ಒಂದನೇ ಶತಮಾನದ ಧ್ಯಾನ ಮುದ್ರೆಯ ಬುದ್ಧನ ವಿಗ್ರಹ ಸಿಕ್ಕಿದೆ. ಹಾಗೇ ಕ್ರಿ.ಶ. ೩ನೇ ಶತಮಾನದ ನಾಗಾರ್ಜುನ ಕೊಂಡದ ಶಾಸನ ಒಂದು ಸಿಲೋನಿನ ಸನ್ಯಾಸಿಗಳು ಬನವಾಸಿಯಲ್ಲಿ ಬೌದ್ಧಧರ್ಮದ ಪ್ರಚಾರ ಮಾಡಿದ ಬಗ್ಗೆ ತಿಳಿಸುತ್ತದೆ. ಬನವಾಸಿಯಲ್ಲಿ ದೊರೆತಿರುವ ವಾಸಿಷ್ಠೀಪುತ್ರ

ಶಿವಶ್ರೀ ಪುಳಮಾವಿಯ ಶಾಸನವು ಕ್ರಿ.ಶ. ೧೫೫ರ ಶಾಸನ[೧೦೩]. ಇಲ್ಲಿ ದೊರೆತಿರುವ ಇನ್ನೊಂದು ಶಾಸನವು ಶಾತವಾಹನ ಶಾಖೆಯಾದ ಚುಟುವಂಶದ್ದು. ವಿಷ್ಣುಕುಡ ಚುಟುಕುಲಾನಂದ ಶಾತಕರ್ಣಿಯ ಕಾಲದ ಈ ಶಾಸನವು ಯುವರಾಜನ ತಾಯಿ ಹಾಗೂ ಮಹಾರಾಜನ ಮಗಳು ವಿಹಾರ, ಕೆರೆ ಮತ್ತು ನಾಗವಿಗ್ರಹವನ್ನು ಧರ್ಮಾರ್ಥವಾಗಿ ಕಟ್ಟಿಸಿಕೊಟ್ಟಳು ಎಂದಿದೆ. ಈ ವಿಹಾರವು ಬೌದ್ಧವಿಹಾರವಾಗಿದೆ. ಆದರೆ ಇದರ ಕಾಲವನ್ನು ಕ್ರಿ.ಶ. ೩ನೆಯ ಶತಮಾನ[೧೦೪] ಎಂದು ಗುರುತಿಸುತ್ತಾರೆ.

ನಾಗಾರ್ಜುನಕೊಂಡದ ಶಾಸನ ಒಂದು ಬನವಾಸಿಯ ರಾಣಿಯಾದ ಇಕ್ಷ್ವಾಕು ವಂಶದ ರಾಜಕನ್ಯೆ ಕೂಡಬಲಸಿರಿ ನಾಗಾರ್ಜುನಕೊಂಡದಲ್ಲಿ ವಿಹಾರವನ್ನು ಸ್ಥಾಪಿಸಿದ್ದಾಳೆಂದು ಹೇಳುತ್ತದೆ. ಇದರಿಂದ ಬನವಾಸಿಯ ಅರಸು ಮನೆತನಗಳು ಬೌದ್ಧ ಧರ್ಮಕ್ಕೆ ಪ್ರೋತ್ಸಾಹ ನೀಡಿದ್ದು ತಿಳಿಯುತ್ತದೆ.

ಕ್ರಿ.ಶ. ನಾಲ್ಕನೇ ಶತಮಾನದಿಂದ ಏಳನೇ ಶತಮಾನದವರೆಗೆ ಕಾರವಾರ ಜಿಲ್ಲೆಯ ಕೊಂಕಣ ಭಾಗ ಭೋಜವಂಶದ ಆಡಳಿತಕ್ಕೆ ಒಳಪಟ್ಟಿತ್ತು[೧೦೫]. ಈ ವಂಶದ ಭೋಜರಂಕಿತ ರಾಜನ ತಾಮ್ರಶಾಸನವು ಕುಮಟಾದ ಹಿರೇಗುತ್ತಿಯಲ್ಲಿ ದೊರೆತಿದ್ದು ಈ ಶಾಸನವು ಬುದ್ಧನ ಸ್ತುತಿಯೊಂದಿಗೆ ಆರಂಭವಾಗುತ್ತದೆ. ಬೌದ್ಧ ವಿಹಾರಕ್ಕೆ ದೀಪಕ ವಿಷಯದಲ್ಲಿ ಸುಂದರಿಕಾ ಎಂಬ ಗ್ರಾಮವನ್ನು ದತ್ತಿ ನೀಡಿದ ಬಗ್ಗೆ ತಿಳಿಯುತ್ತದೆ. ಇದು ತೀರ ಪ್ರದೇಶದಲ್ಲಿ ಬೌದ್ಧಧರ್ಮದ ಅಸ್ತಿತ್ವವನ್ನು ಹೇಳುತ್ತದೆ. ಹೊನ್ನಾವರದ ೬ನೆಯ ಶತಮಾನದ ತಾಮ್ರಪತ್ರವು ಭಗವಾನ್ ಬುದ್ಧನ ಸ್ತುತಿಯೊಂದಿಗೆ ಆರಂಭವಾಗುತ್ತದೆ. ಈ ಶಾಸನವು ಆರ್ಯಸಂಘಕ್ಕೆ ಭೂಮಿ, ತೋಟ ದಾನ ನೀಡಿದ ಬಗ್ಗೆ ತಿಳಿಸುತ್ತದೆ[೧೦೬]. ಇದರಲ್ಲಿ ಚಿತ್ರಸೇನನು ಅಂಬುದ್ವೀಪದಿಂದ ಆಳುತ್ತಿದ್ದನೆಂದು ಹೇಳುತ್ತದೆ. ಈ ಅಂಬುದ್ವೀಪವು ಹೈಗುಂದವಾಗಿದ್ದು, ಹೈಗುಂದದಲ್ಲಿ ಕ್ರಿ.ಶ. ೫–೬ನೇ ಶತಮಾನಕ್ಕೆ ಸೇರಿದ ಬುದ್ಧನ ಮರಳುಕಲ್ಲಿನ ದುಂಡುಶಿಲ್ಪಗಳು ಸಿಕ್ಕಿವೆ[೧೦೭]. ಹೈಗುಂದದಲ್ಲಿ ಚದುರಿ ಬಿದ್ದಿರುವ ಸುಟ್ಟ ಇಟ್ಟಿಗೆಯ ರಾಶಿಯಿದ್ದು ಇದು ಹಿಂದೆ ಇಲ್ಲಿ ಇದ್ದಿರಬಹುದಾದ ಬೌದ್ಧ ವಿಹಾರ, ಚೈತ್ಯದ ಅಥವಾ ಸ್ತೂಪದ ಅವಶೇಷಗಳಾಗಿರಬಹುದು. ಇಲ್ಲಿ ಪ್ರಮುಖ ಕಡಲ ವ್ಯಾಪಾರದ ಕೇಂದ್ರವಿದ್ದು, ಅಲ್ಲಿ ಬೌದ್ಧ ಭಿಕ್ಷುಗಳು ವಾಸವಾಗಿದ್ದರೆಂದು ಊಹಿಸಬಹುದು.

ಕಾರ್ಲೆ ಹಾಗೂ ಕನ್ಹೇರಿಗಳು ಬೌದ್ಧ ಧರ್ಮದ ಪ್ರಮುಖ ಸ್ಥಳಗಳಾಗಿದ್ದು, ಕಾರ್ಲೆ ಪ್ರದೇಶದಲ್ಲಿ ೧೦೪ ಗುಹಾಲಯಗಳಿವೆ[೧೦೮]. ಕಾರ್ಲೆ, ಕನ್ಹೇರಿ ಮುಂತಾದ ಕಡೆ ಬೌದ್ಧ ಗುಹೆಗಳ ರಚನೆಗೆ ಬನವಾಸಿಯ ವರ್ತಕರು ಸಾಕಷ್ಟು ದಾನ ನೀಡಿದ ಬಗ್ಗೆ ತಿಳಿಯುತ್ತದೆ. ಬನವಾಸಿಯ

ಬೂತಪಾಲನೆಂಬ ಶ್ರೇಷ್ಠಿಯು ಕಾರ್ಲೆಯಲ್ಲಿ ಇಡೀ ಜಂಭೂದ್ವೀಪದಲ್ಲಿಯೇ ಉತ್ಕೃಷ್ಟವಾದ ಬೌದ್ಧ ಚೈತ್ಯಾಲಯವನ್ನು ಕಟ್ಟಿಸಿದ[೧೦೯]ನೆಂದು ತಿಳಿದುಬರುತ್ತದೆ.

ಚೀನಾದ ಬೌದ್ಧ ಯಾತ್ರಿಕ ಹುಯೆನ್–ತ್ಸಾಂಗ್‌ನು ಬನವಾಸಿಗೆ ಭೇಟಿ ನೀಡಿದ್ದನು. ಇಲ್ಲಿ ಆತನು ನೂರಾರು ಸಂಘಾರಾಮಗಳು, ಹತ್ತು ಸಾವಿರಕ್ಕೂ ಹೆಚ್ಚು ಬೌದ್ಧ ಅನುಯಾಯಿಗಳೂ ಇದ್ದಾರೆ ಎಂದು ಹೇಳಿದ್ದಾನೆ. ರಾಜನ ಅರಮನೆಯ ಬಳಿ ಮುನ್ನೂರು ಭಿಕ್ಷುಗಳಿರುವ ದೊಡ್ಡ ಸಂಘಾರಾಮವಿದೆ. ಈ ವಿಹಾರದಲ್ಲಿ ಎಂಟು ಅಡಿ ಎತ್ತರದ ಸಿದ್ಧಾರ್ಥನ ತಲೆ ಆಕಾರದ ಶಿಲ್ಪ ಇದೆ. ಹತ್ತು ಅಡಿ ಎತ್ತರದ ಮೈತ್ರೇಯನ ವಿಗ್ರಹವಿದೆ[೧೧೦] ಎಂದು ಹೇಳಿದ್ದಾನೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಮಂತ್ರಿ ದಂಡನಾಯಕ ರೂಪಭಟ್ಟಯ್ಯನು ಕ್ರಿ.ಶ. ೧೦೬೫ರಲ್ಲಿ ಬುದ್ಧ ತಾರಾಭಗವತಿ, ಲೋಕೇಶ್ವರ ಮುಂತಾದ ಮೂರ್ತಿ ಪೂಜೆಗೆ ದತ್ತಿ ನೀಡಿದ್ದನು[೧೧೧]. ತಾಳಗುಂದದ ಗುಹಾ ಮಾದರಿಯ ಪ್ರಣವೇಶ್ವರ ದೇಗುಲವು ಬೌದ್ಧವಾಸ್ತುಶಿಲ್ಪದಿಂದ ಪ್ರಭಾವಿತವಾಗಿದೆ[೧೧೨]. ಹಾಗೇ ಅಂದು ಅನೇಕ ಶಿಲ್ಪಗಳ ಮೇಲೆ, ದೇವಾಲಯಗಳ ಮೇಲೆ ಹಾಗೂ ಜನರ ನಡತೆಯ ಮೇಲೆ ಬೌದ್ಧ ಪ್ರಭಾವ ಉಂಟಾಗಿತ್ತು. ಗೋವಾದ ಲಾಮ್‌ಗೋವಾ ಊರಿನ ಹೆಸರು ಹಾಗೂ ಪಾಂಡವರಗುಹೆ ಎಂದು ಇಂದು ಕರೆದುಕೊಳ್ಳುತ್ತಿರುವ ಆರ್ವೆಲೇಮ್‌ನ ಗುಹೆಗಳು[೧೧೩] ಬೌದ್ಧರ ಕರಾವಳಿ ಪ್ರದೇಶದಲ್ಲಿಯ ವಾಸ್ತವ್ಯಕ್ಕೆ ಸಾಕ್ಷಿಯಾಗಿವೆ. ಕುಮಟಾ ಬಳಿಯ ದೀವಗಿ, ಕಾರವಾರ ಬಳಿಯ ಅರ್ಗಾ, ಬನವಾಸಿ, ಬಬ್ರುವಾಡ, ಬಬ್ರಿಗುಂದ, ತೊರ್ಕೆ, ಕುಂದಾಪುರದ ಬುದ್ಧನ ಜಡ್ಡು, ಅಂಕದಕಟ್ಟೆಯ ಚೈತ್ಯಾಲಯ ಹೋಲುವ ಕಲ್ಲಿನ ರಚನೆ ಮುಂತಾದವು ಬುದ್ಧನನ್ನು ನೆನಪಿಸುತ್ತವೆ. ಉಡುಪಿ ಜಿಲ್ಲೆಯ ಸಾಸ್ತನ, ಸಾಸ್ತವಕಲ್ಲು, ಸಾಸ್ತವಗುಡಿ[೧೧೪] ಮುಂತಾದವು ಬುದ್ಧನನ್ನು ನೆನಪಿಸುವ ಸ್ಥಳಗಳೆಂದು ವಿದ್ವಾಂಸರ ಹೇಳಿಕೆ. ಉಡುಪಿಯ ಕಾಪುವಿನ ಬಳಿಯ ಮೂಳಹರು ಎಂಬಲ್ಲಿ ಕ್ರಿ.ಶ. ೧೦ನೆಯ ಶತಮಾನಕ್ಕೆ ಸೇರಿದ ಎರಡು ಅಡಿ ಎತ್ತರದ ಬುದ್ಧನ ಕಪ್ಪು ಕಣಶಿಲೆಯ ಭೂಸ್ಪರ್ಷದ ವಿಗ್ರಹ ಅಪೂರ್ವವಾಗಿದೆ. ಬಾರ್ಕೂರಿನಲ್ಲೂ ಒಂದು (ಕಲ್ಲಿನ) ಬುದ್ಧನ ವಿಗ್ರಹವಿದೆ. ಕ್ರಿ.ಶ. ೧೦ನೇ ಶತಮಾನದಲ್ಲಿ ಕದ್ರಿಯು ಪ್ರಮುಖ ಬೌದ್ಧ ಕೇಂದ್ರವಾಗಿತ್ತು. ಕದ್ರಿ ಮಂಗಳೂರಿನ ಒಂದು ಭಾಗವಾಗಿದ್ದು, ಇದು ಒಂದು ಪ್ರಮುಖ ಬೌದ್ಧ ಕೇಂದ್ರ ಎಂದು ಅನೇಕ ವಿದ್ವಾಂಸರ ಅಭಿಪ್ರಾಯ[೧೧೫]. ಇಲ್ಲಿರುವ ಕಂಚಿನ ಶಿಲ್ಪವು ಲೋಕೇಶ್ವರನ ಶಿಲ್ಪ ಎಂದು ಹಲವುವಿದ್ವಾಂಸರು ಆಧಾರ ಸಹಿತ ಸ್ಪಷ್ಟಪಡಿಸಿದ್ದಾರೆ. ಇದು ವಜ್ರಾಯಾನ ಪಂಥದ ಶಿಲ್ಪದಂತೆ ನಾಲ್ಕು ಮುಖಗಳನ್ನು ಹೊಂದಿದೆ ಎಂದು ತಿಳಿಸುತ್ತದೆ. ಈ ಶಿಲ್ಪ ಆಳುಪ ಕುಂದವರ್ಮ (ಕ್ರಿ.ಶ. ೯೬೮)ನು ಸ್ಥಾಪಿಸಿದ್ದನ್ನು ಪೀಠದ ಶಾಸನ ತಿಳಿಸುತ್ತದೆ. ಮುಂದೆ

ಕ್ರಿ.ಶ. ೧೨ನೆಯ ಶತಮಾನದಲ್ಲಿ ಪಾರಂಪರಿಕ ಧರ್ಮದಿಂದ ನಾಥ ಕೇಂದ್ರವಾಗಿ ಪರಿವರ್ತನೆಯಾಯಿತು.

ಉಡುಪಿ-ಕೊಪ್ಪಲಂಗಡಿಯ ವಾಸುದೇವ ದೇವಾಲಯ, ಪೆರಡೂರು ಅನಂತ ಪದ್ಮನಾಭ ಮುಂತಾದವು ಬೌದ್ಧರ ಕೇಂದ್ರವಾಗಿದ್ದವು.

ಹೀಗೆ ಕರಾವಳಿಯಲ್ಲಿ ಸುಮಾರು ಅಶೋಕ-ಶಾತವಾಹನರ ಕಾಲದಿಂದ ೧೦-೧೧ನೆಯ ಶತಮಾನದವರೆಗೆ ಬೌದ್ಧ ಧರ್ಮ ಜನಸಾಮಾನ್ಯರ ಆಚರಣೆಯ ಧರ್ಮವಾಗಿ, ಹಲವು ಸಾರೆ ಆಳರಸರ ಆಶ್ರಯ, ದತ್ತಿ ಹಾಗೂ ದಾನಗಳನ್ನು ಪಡೆದಿತ್ತು ಎಂದು ತಿಳಿಯುತ್ತದೆ. ಹೈಗುಂದ, ಕೊಪ್ಪಲಂಗಡಿ, ಹಟ್ಟಿಯಂಗಡಿಯಂಥಹ ಸ್ಥಳಗಳು ವ್ಯಾಪಾರಿ ಕೇಂದ್ರಗಳು ಬೌದ್ಧ ಕೇಂದ್ರಗಳಾಗಿಯೂ ಪ್ರಾಚೀನಕಾಲದಲ್ಲಿ ಪ್ರಮುಖ ಪಾತ್ರವಹಿಸಿದ್ದವು.

ಉಡುಪಿ ಕೊಲ್ಲೂರಿನ ದೇವಾಲಯದಲ್ಲಿ ಮೊದಲು ಇದ್ದುದು ಬೌದ್ಧದೇವತೆ ಮಂಜಶ್ರೀ ಮುಂದೆ ಇದೇ ದೈವವನ್ನು ಹಿಂದೂ ಸಂಪ್ರದಾಯದ ಮೂಕಾಂಬಿಕೆಯನ್ನಾಗಿ ಪರಿವರ್ತಿಸಿದರು[೧೧೬]. ಮಂಗಳೂರಿನ ಮಂಗಳಾದೇವಿಯ ದೇವಸ್ಥಾನ ಮೂಲತಃ ತಾರಾಭಗವತಿಯ ದೇವಾಲಯವಾಗಿತ್ತೆಂದು ಊಹೆ ಮಾಡಿದ್ದಾರೆ[೧೧೭].

೫.೧.೬ ಜೈನ ಧರ್ಮ

ಜೈನವಾದವು ವಿವೇಕವಾದ ಮತ್ತು ವಾಸ್ತವವಾದಗಳ ದರ್ಶನ[೧೧೮]. ಇದು ಭಾರತದ ಒಂದು ಸ್ಥಳಕ್ಕೆ ಅಥವಾ ಪ್ರದೇಶಕ್ಕೆ ಸೀಮಿತವಾಗಿರದೇ ವ್ಯಾಪಕವಾಗಿ ಪಸರಿಸಿದ ತತ್ವಜ್ಞಾನ. ಕರ್ನಾಟಕದ ಇತಿಹಾಸವು ಜೈನಪಂಥದ ಪ್ರಸಾರ ಮತ್ತು ಉತ್ಕರ್ಷಗಳೊಂದಿಗೆ ನಿಕಟ ಸಂಬಂಧ ಹೊಂದಿದೆ[೧೧೯].

ಜೈನ ಧರ್ಮವು ಪ್ರಾಚೀನವಾಗಿದ್ದು, ಬೌದ್ಧ ಧರ್ಮಕ್ಕಿಂತ ಹಿಂದಿನದು. ಕ್ರಿ.ಶ. ಪೂರ್ವ ೬ನೆಯ ಶತಮಾನದಲ್ಲಿದ್ದ ವರ್ಧಮಾನ ಮಹಾವೀರನಿಗಿಂತಲೂ ಮುಂಚಿನಿಂದ ಜೈನಧರ್ಮವಿದ್ದು, ಮಹಾವೀರ ಅದಕ್ಕೆ ಹೊಸ ಸ್ಪರ್ಷ ನೀಡಿದನು. ಜೈನಸಿದ್ಧಾಂತದ ಸಂಪಾದನಾ ಕಾರ್ಯ ಕ್ರಿ.ಶ. ೫ನೆಯ ಶತಮಾನದಲ್ಲಿ ಕೊನೆಯ ಭಾಗ ಮತ್ತು ೬ನೆಯ ಶತಮಾನದ ಮೊದಲ ಭಾಗದಲ್ಲಿ ಮುನಿದೇವರ್ಥಿಯ ಅಧ್ಯಕ್ಷತೆಯಲ್ಲಿ ನಡೆಯಿತು. ಇವುಗಳನ್ನು ಅಂಗ ಎನ್ನುತ್ತಾರೆ. ಇದಕ್ಕೆ ಮೊದಲು ಪೂರ್ವಗಳೆಂಬ ಆಗಮಗಳಿದ್ದವು. ಇವುಗಳ ಭಾಷೆ ಅರ್ಧಮಾಗಧಿ[೧೨೦].

ಕರ್ನಾಟಕದ ಸಂಸ್ಕೃತಿಗೆ ಜೈನರ ಕೊಡುಗೆ ಗಣ್ಯವಾದುದು. ಭದ್ರಬಾಹು ಮುನಿ ಮೌರ್ಯಕಾಲದಲ್ಲಿ ಶ್ರವಣಬೆಳಗೊಳಕ್ಕೆ ಬಂದು ವಾಸಮಾಡಿದನು. ಕರ್ನಾಟಕದಲ್ಲಿ ಜೈನರ ಆಗಮನವನ್ನು ಈ ಕಾಲಾವಧಿಯಿಂದ ಗುರುತಿಸಬಹುದು. ಸುಮಾರು ೨ನೆಯ ಶತಮಾನದಿಂದ

೧೩ನೆಯ ಶತಮಾನದವರೆಗೆ ಜೈನಧರ್ಮ ಕರ್ನಾಟಕದಲ್ಲಿ ಪ್ರಮುಖ ಪಾತ್ರವಹಿಸಿತು. ಕರ್ನಾಟಕದ ಪ್ರಾಚೀನ ಅರಸರಾದ ಕದಂಬರು, ಗಂಗರು, ಚಾಲುಕ್ಯ, ರಾಷ್ಟ್ರಕೂಟ, ಹೊಯ್ಸಳ ಮೊದಲಾದ ಸಾಮ್ರಾಟರ ಆಶ್ರಯವನ್ನು ಪಡೆದು ವರ್ಚಸ್ವೀ ಧರ್ಮವಾಯಿತು[೧೨೧].

ಕದಂಬರು ವೈದಿಕ ಮತಾವಲಂಭಿಗಳಾಗಿದ್ದರೂ, ಜೈನಧರ್ಮದ ಬೆಳವಣಿಗೆಗೆ ಸಾಕಷ್ಟು ಪ್ರೋತ್ಸಾಹ ನೀಡಿದ್ದರು. ಕದಂಬ ಮೃಗೇಶವರ್ಮನು (ಕ್ರಿ.ಶ. ೫ನೇ ಶತಮಾನ) ಬನವಾಸಿಯ ಬಳಿಯ ಹಲಸಿಯಲ್ಲಿ ತನ್ನ ತಂದೆಯ ಜ್ಞಾಪಕಾರ್ಥವಾಗಿ ಜೀನಾಲಯ ಒಂದನ್ನು ಕಟ್ಟಿಸಿದ ಬಗ್ಗೆ ತಿಳಿಯುತ್ತದೆ. ಇದು ಅತ್ಯಂತ ಪ್ರಾಚೀನ ಕಟ್ಟಡವಾಗಿದೆ. ಮೃಗೇಶವರ್ಮನು ಯಾಪನೀಯ, ದಿಗಂಬರ, ಕೂರ್ಜಕ ಮುನಿಗಳಿಗೆ ಭೂಮಿಯನ್ನು ನೀಡಿದ್ದನು ಎಂದು ಅದೇ ಶಾಸನದಿಂದ ತಿಳಿಯುತ್ತದೆ. ಇದರಿಂದ ಆ ಕಾಲಕ್ಕಾಗಲೇ ಕರ್ನಾಟಕದಲ್ಲಿ ಕರಾವಳಿಯ ಭಾಗದಲ್ಲಿ ಜೈನರ ವಿವಿಧ ಪಂಗಡಗಳಿದ್ದು ರಾಜಾಶ್ರಯ ಪಡೆದಿದ್ದವೆಂದು ತಿಳಿಯುತ್ತದೆ.

ರವಿವರ್ಮ(ಕ್ರಿ.ಶ. ೪೮೫-೫೧೯)[೧೨೨]ನ ಗುಡ್ಣಾಪೂರ ಶಾಸನವು ಅರಸನು ಅರಮನೆಯ ಸಮೀಪದಲ್ಲಿ ಮನ್ಮಥನಿಗೆ ಕಾಮಜೀನಾಲಯವನ್ನು ಕಟ್ಟಿಸಿದ ಬಗ್ಗೆ ಹಾಗೂ ಪೂಜಾ ಸಂಸ್ಕಾರಾರ್ಥ ಹಲವಾರು ಗ್ರಾಮಗಳನ್ನು ದಾನ ನೀಡಿದ ಬಗ್ಗೆ ಹೇಳುತ್ತದೆ. ಗುಡ್ಣಾಪುರದ ಕಾಮಜೀನಾಲಯ ಮತ್ತು ಕಲ್ಲಿ ಗ್ರಾಮದ ಪದ್ಮಾವತಾಲಯಗಳಿಗೂ ದಾನ ಮಾಡಿದ್ದನು[೧೨೩]. ಇದರಿಂದ ರವಿವರ್ಮನ ಕಾಲಕ್ಕೆ ರಾಜ್ಯಧಾನಿಯ ಸುತ್ತ ಜೀನಾಲಯ ಜೈನಯಕ್ಷಿಯರ ಆಲಯಗಳಿದ್ದು ಅವುಗಳಿಗೆ ಅರಸರು ದತ್ತಿದಾನ ನೀಡಿದ್ದರೆಂದು ತಿಳಿಯುತ್ತದೆ. ಕದಂಬರ ಕಾಕುಸ್ಥನ ಕಾಲದಲ್ಲಿ ಹಲಸಿ, ದೇವಗಿರಿ ಮುಂತಾದವು ಜೈನ ಕೇಂದ್ರಗಳಾಗಿದ್ದವು. ಗಂಗರ ಕಾಲದಲ್ಲಿ ಜೈನಧರ್ಮಕ್ಕೆ ತುಂಬು ಗೌರವ ಹಾಗೂ ಪ್ರೋತ್ಸಾಹ ದೊರೆಯಿತು. ಗಂಗವಂಶದ ಸ್ಥಾಪನೆಗೆ ಜೈನಯತಿ ಸಿಂಹನಂದಿಯ ಆಶೀರ್ವಾದವಿತ್ತು. ಗಂಗರಸರು ಅನೇಕ ರೀತಿಯಲ್ಲಿ ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರು. ಅನೇಕ ಬಸಿದಿಗಳು, ಜೈನ ತೀರ್ಥಂಕರರ ವಿಗ್ರಹಗಳು ಹಾಗೂ ಅನೇಕ ಜೈನಸಾಹಿತ್ಯ ಕೃತಿಗಳು ಇವರ ಕಾಲದಲ್ಲಿ ರಚಿತವಾದವು.

ಶಿಶುಗಲಿಪಾಂಡ್ಯರು (ಕ್ರಿ.ಶ. ಹತ್ತನೇ ಶತಮಾನದಿಂದ ೧೨ನೇ ಶತಮಾನದವರೆಗೆ) ಜೈನಧರ್ಮಕ್ಕೆ ಪ್ರೋತ್ಸಾಹ ನೀಡಿದ್ದರು. ಇವರ ಕಾಲದಲ್ಲಿ ಹೈವೆ ದೊಡ್ಡ ಜೈನ ಕೇಂದ್ರವಾಗಿತ್ತು. ಇವರು ವೈದಿಕರೂ, ಗೋಕರ್ಣ ಮಹಾಭಲೇಶ್ವರನ ಆರಾಧಕರೂ ಆಗಿದ್ದರು. ಇವರ ರಾಣಿಯರಾದ ಇಮ್ಮಡಿ ಕಾಮದೇವನ ಮಗಳು ಮತ್ತು ಹೈವಲದೇವಿಯರು ಜೈನರಾಗಿದ್ದರು[೧೨೪]. ಹೈವಲ ದೇವಿಯ ಆದೇಶದಂತೆ ಮಲ್ಲಿದೇವನು ಹೊನ್ನಾವರದ ಗುಂಡಬಾಳದಲ್ಲಿ ತೀರ್ಥಂಕರ ವಿಗ್ರಹವನ್ನು ಸ್ಥಾಪಿಸಿದನು. ದಂಡನಾಯಕ ಮಾಚರಸನು ಮುಟ್ಟ ಎಂಬಲ್ಲಿ ಪಾರ್ಶ್ವನಾಥ ಬಸದಿ

ನಿರ್ಮಿಸಿ ಅನೇಕ ಗ್ರಾಮಗಳನ್ನು ದತ್ತಿ ನೀಡಿದ್ದನು. ಮಾಚರಸನು ಚಂದಾವರ, ಹೆರವಟ್ಟಾ, ಮುಟ್ಟಾ, ಶಿಶುಗಲಿ ಮುಂತಾದೆಡೆ ಜೈನಾಲಯ ನಿರ್ಮಿಸಿದ್ದನು. ಹೊನ್ನಾವರದ ಮಂಕಿಯ ಶಾಂತಿನಾಥ ಬಸದಿ, ಅಂಕೋಲಾದ ಹಿರೇಗುತ್ತಿಯ ತೀರ್ಥಂಕರ ವಿಗ್ರಹ, ಕುಮಟಾದ ಪೇಟೆಯಲ್ಲಿರುವ ಕ್ರಿ.ಶ. ೧೧–೧೨ನೇ ಶತಮಾನಕ್ಕೆ ಸೇರಿದ ಪಾರ್ಶ್ವನಾಥ ತೀರ್ಥಂಕರ ವಿಗ್ರಹ, ಕುಮಟಾದ ಬಸ್ತಿಕೇರಿ, ಹೊನ್ನಾವರದ ಶೆಟ್ಟಿಕೆರೆ, ಸಿದ್ದಾಪುರ, ಹೊನ್ನಾವರ, ಕುಮಟಾ, ಭಟ್ಕಳದ ಹಳ್ಳಿಗಳಲ್ಲಿ ಹಾಗೂ ಅರಣ್ಯ ಪ್ರದೇಶಗಳಲ್ಲಿ ಅವಶೇಷಗಳಾಗಿ ಬಿದ್ದಿರುವ ಜೈನರ ಶಿಲ್ಪಗಳು ಈ ಪ್ರದೇಶದಲ್ಲಿ ಜೈನರು ಪ್ರಬಲರಾಗಿದ್ದರೆಂದು ತಿಳಿಸುತ್ತವೆ.

ದಕ್ಷಿಣ ಕನ್ನಡ ಜಿಲ್ಲೆ ಆಳಿದ ಆಳುಪ ಅರಸನು ಚಾಲುಕ್ಯ ಚಕ್ರವರ್ತಿ ವಿಜಯಾದಿತ್ಯನ ತಂಗಿಯಾದ ಕುಸುಮ ದೇವಿಯನ್ನು ಮದುವೆಯಾಗಿದ್ದನು. ಈಕೆಯು ಜೈನಳಾಗಿದ್ದಳು. ಆಕೆ ಪುಲಗೇರಿಯಲ್ಲಿ ನಿರ್ಮಿಸಿದ್ದ ಜಿನಭವನಕ್ಕೆ ಚಿತ್ರವಾಹನನು ಕೋರಿಕೆಯ ಮೇರೆಗೆ ಗುಡ್ಡಿಕೇರಿ ಗ್ರಾಮವನ್ನು ದಾನವಾಗಿ ನೀಡುತ್ತಾನೆ. ಮುಂದೆಯೂ ಆಳುಪರು ಜೈನಧರ್ಮಕ್ಕೆ ಅನೇಕ ದತ್ತಿ ದಾನ ನೀಡಿದ್ದರು. ದ.ಕ. ದ ಕಲಾಕ್ಷೇತ್ರದಲ್ಲಿಯ ನೈಪುಣ್ಯ ಹಾಗೂ ಶ್ರೇಷ್ಠತೆ ಜೈನರ ಮೇಲೆ ಅವಲಂಬಿಸಿತ್ತು. ಕ್ರಿ.ಶ ೧೯೧, ಕ್ರಿ.ಶ ೧೦೭೦, ಕ್ರಿ.ಶ ೧೧೪೦, ಕ್ರಿ.ಶ. ೧೨೧೫ ಕ್ರಿ.ಶ ೧೩೦೦[೧೨೫]ರ ಶಾಸನಗಳು ಜೈನಧರ್ಮಕ್ಕೆ ಸಿಕ್ಕ ಪ್ರೋತ್ಸಾಹ ಹಾಗೂ ಜೈನಧರ್ಮದ ಕೀರ್ತಿ ತಿಳಿಸುತ್ತವೆ. ಕ್ರಿ.ಶ. ೧೨೨೦ ರಿಂದ ೧೨೩೦ರ ವರೆಗೆ ತುಳುನಾಡು ಆಳಿದ ಶಾಂತರಮನೆತನದ[೧೨೬] ಗುಂಡಣನು ತುಳುನಾಡಿನಲ್ಲಿ ಜೈನಧರ್ಮವು ಪ್ರಬಲವಾಗುವುದಕ್ಕೆ ಮುಖ್ಯ ಕಾರಣನಾಗಿದ್ದನು. ಆಳುಪರ ೩ನೆಯ ಕುಲಶೇಖರನು ಜೈನಧರ್ಮದಿಂದ ಪ್ರಭಾವಿತನಾಗಿದ್ದನು. ೧೨೮೪ ಮೂಡುಬಿದುರೆ ಶಾಸನದಲ್ಲಿ[೧೨೭] ಅವನೇ ಬಿದಿರೆಯ ಬಸದಿಯ ಪಾರ್ಶ್ವನಾಥನಿಗೆ ದಾನನೀಡಿದ ಬಗ್ಗೆ ಉಲ್ಲೇಖವಿದೆ. ಹೊಯ್ಸಳರು ಆಳುವಾಗ ಕಾರ್ಕಳಪ್ರಾಂತದ ಆಡಳಿತಗಾರನಾಗಿದ್ದ ಮಹಾಮಂಡಳೇಶ್ವರ ಲೋಕನಾಥನು ಜೈನನಾಗಿದ್ದನು.[೧೨೮]

ಹೊನ್ನಾವರದಿಂದ ದಕ್ಷಿಣದತ್ತ ತಮ್ಮ ರಾಜ್ಯ ಹೊಂದಿದ್ದ ಗೇರುಸೊಪ್ಪೆಯ ಸಾಳುವರು ಜೈನಮತಾವಲಂಭಿಗಳೂ, ಅಳಿಯ ಕಟ್ಟಿನವರೂ ಆಗಿದ್ದರು. ಇವರದೇ ವಂಶದ ಹಾಡುವಳ್ಳಿಯ ಸಾಳುವರು ಕೂಡಾ ಜೈನರಾಗಿದ್ದರು. ಗೇರುಸೊಪ್ಪಾದಲ್ಲಿ ಈ ಸಾಳುವರ ಕಾಲದ ಚತುರ್ಮುಖ ಬಸದಿ ಇದೆ. ಕಾರ್ಕಳದ ಬೈರರಸರು ಜೀನನನ್ನು ಮತ್ತು ಶಿವನನ್ನು ಒಂದೇ ರೀತಿಯಲ್ಲಿ ಆರಾಧಿಸುತ್ತಿದ್ದರು. ಮೂಡಬಿದಿರೆಯಿಂದಾಳಿದ ಚೌಟರಸರು ಜೈನ ಮತಾವಲಂಬಿಗಳಾಗಿದ್ದು, ಅಳಿಯ ಸಂತಾನ ಕಟ್ಟಿನವರಾಗಿದ್ದರು[೧೨೯]. ಮುಲ್ಕಿಯ ಸಾವಂತರು ಜೈನ ಮತಾವಲಂಭಿಗಳಾಗಿದ್ದು, ಸೀಮಂತೂರು ಜನಾರ್ಧನನ ಭಕ್ತರೂ ಕೂಡ ಆಗಿದ್ದರು. ಬಂಗವಾಡಿಯಿಂದ ಆಳಿದ ಬಂಗರು

ತುಳುನಾಡಿನ ಇತರ ಜೈನ ಅರಸರಂತೆ ಅಳಿಯ ಕಟ್ಟಿನವರಾಗಿದ್ದರು. ಬೆಳ್ತಂಗಡಿ, ಉಪ್ಪಿನಂಗಡಿ, ನಂದಾವರ, ಮಂಗಳೂರುಗಳು ಇವರ ರಾಜ್ಯಕ್ಕೆ ಸೇರಿದ್ದವು. ಸೂರಾಲಿನ ತೋಳಹರು, ವೇಣೂರಿನ ಅಜಿಲರು ಜೈನ ಧರ್ಮ ಮತಾವಲಂಭಿಗಳಾಗಿದ್ದರು. ಇವರೆಲ್ಲರ ಕಾಲದಲ್ಲಿ ಜೈನ ಧರ್ಮಕ್ಕೆ ಪ್ರೋತ್ಸಾಹ ದೊರಕಿತ್ತು. ಮತ್ತು ಅನೇಕ ವಿಧದ ಜೈನಾಲಯಗಳು ನಿರ್ಮಾಣ ಗೊಂಡಿದ್ದವು

ವಿಜಯನಗರದ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪ್ರದೇಶದಲ್ಲಿ ಆಳುತ್ತಿದ್ದ ತುಂಡರಸರು ದುರ್ಬಲರಾಗಿದ್ದರಿಂದ ವಿಜಯನಗರದ ಅರಸರು ಪ್ರಬಲರಾದರು. ಇವರು ವೈದಿಕ–ಜೈನ ಎಂಬ ಭೇದ ಎಣಿಸದೆ ಧರ್ಮಾಚರಣೆಗೆ ಪ್ರೋತ್ಸಾಹ ನೀಡಿದರು.

೫.೧.೭ ಶಾಕ್ತ ಪಂಥ

ಸ್ತ್ರೀಶಕ್ತಿಯೇ ಸೃಷ್ಟಿಗೆ ಕಾರಣ ಎಂಬ ನಂಬಿಕೆ ಪ್ರಚಲಿತವಾಗಿದೆ. ಪ್ರಾಚೀನ ಜಗತ್ತಿನಲ್ಲಿ ಈಜಿಪ್ಟ್, ಇಸ್ರೇಲ್ ಮತ್ತು ಮೆಡಿಟರೇನಿಯನ್ನಿನ ಸುತ್ತಮುತ್ತಲಿನ ದೇಶಗಳಲ್ಲಿ ಮಹಾಮಾತೆಯ ಆರಾಧನಾ ಪದ್ಧತಿ ಜನಸಾಮಾನ್ಯರ ಪ್ರಬಲವಾದ ಆಚರಣೆಯಾಗಿದ್ದಿತು[೧೩೦]. ಭಾರತದಲ್ಲಿ ವೈದಿಕ ಆಚರಣೆಗಳಲ್ಲಿ ದೇವ–ದೇವಿಯರಿಗೆ ಸಮಸ್ಥಾನ ನೀಡಿರುವುದು ಕಾಣುತ್ತದೆ. ಸ್ತ್ರೀಯನ್ನು–ದೇವಿಯನ್ನು ಶಕ್ತಿಯ ರೂಪದಲ್ಲಿ ಆರಾಧಿಸುತ್ತಾ ಬಂದಿದ್ದಾರೆ. ವೇದಗಳಲ್ಲಿ ದೇವತೆಗಳ ಪ್ರಧಾನ ಲಕ್ಷಣವೆಂದರೆ ಶಕ್ತಿ[೧೩೧]. ಪುರುಷ ದೇವರಿಗೆ ನೀಡುವ ಗೌರವದಂತೆ ಸ್ತ್ರೀ ದೇವತೆಗಳಿಗೂ ಅಷ್ಟೇ ಗೌರವ ನೀಡಿ ಆರಾಧಿಸುವ ಪದ್ಧತಿ ಪ್ರಚಲಿತದಲ್ಲಿದೆ. ಒಂದು ಹಂತದಲ್ಲಿ ಶಿವ ಮತು ಶಕ್ತಿ ಒಂದೆ ಆಗಿದ್ದು, ಮುಂದೆ ಬೇರೆ ಬೇರೆ ಪ್ರತ್ಯೇಕ ದೇವ ದೇವಿಯರಾದರೆಂದು ನಂಬಲಾಗಿದೆ.

ಹೀಗೆ ಸ್ತ್ರೀ ದೇವತೆಯನ್ನು ಮಹಾತಾಯಿ ಎಂದು ತಾಯಿ ರೂಪದಲ್ಲಿ ಆರಾಧಿಸುವುದು ಕರ್ನಾಟಕದ ಕರಾವಳಿಯಲ್ಲೂ ಕಂಡುಬರುತ್ತದೆ. ಶಕ್ತಿ ಕೇಂದ್ರಗಳಾಗಿ ವಿಖ್ಯಾತವಾಗಿರುವ ಚಂದ್ರಗುತ್ತಿ, ಕೊಲ್ಲೂರು, ಶಿರ್ಶಿಗಳು ಕರಾವಳಿಯ ಶ್ರೀ ಆರಾಧನಾ ಕ್ಷೇತ್ರಗಳು. ಪ್ರಾಚೀನ ಕಾಲದ ಶಕ್ತಿಸ್ಥಾನಗಳ ಮೂಲಮೂರ್ತಿ ಲಿಂಗರೂಪದಲ್ಲಿವೆ[೧೩೨]. ಕೊಲ್ಲೂರು ಮೂಕಾಂಬಿಕೆಯು ಪ್ರತಿಮೆಯಲ್ಲದೇ ಆರಾಧನೆಯ ಮೂಲ ಮೂರ್ತಿ ಸ್ಪಟಿಕಲಿಂಗವಾಗಿದೆ. ಪರಂಪರಾಗತ ನಂಬಿಕೆಯಂತೆ ಆ ಲಿಂಗದ ಮಧ್ಯದಲ್ಲಿ ಉದ್ದಕ್ಕೂ ಹಾದುಹೋಗುವ ಸ್ವರ್ಣರೇಖೆಯು ಶಿವ–ಶಕ್ತಿಯರ ಭಿನ್ನ ಸಂಯೋಗವನ್ನು ಗುರುತಿಸುವುದಾಗಿದೆ[೧೩೩]. ಮಾತೃ ಆರಾಧನೆ ಪೂರ್ವವೈದಿಕಯುಗಕ್ಕಿಂತಲೂ ಪ್ರಾಚೀನವೆನ್ನುವುದು[೧೩೪] ಕೆಲವು ವಿದ್ವಾಂಸರ ಅಭಿಮತ. ಸಿಂಧುತೀರ ನಾಗರಿಕತೆಯಲ್ಲಿ ಟೆರ್ರಾಕೊಟ್ಟಾದಲ್ಲಿ ಮಾಡಿದ ಮಾತೃದೇವತೆಯ ಅಸಂಖ್ಯ ಪ್ರತಿಮೆಗಳು ದೊರೆತಿವೆ[೧೩೫]. ಇವುಗಳೆಲ್ಲದರಿಂದ ಪ್ರಾಚೀನ ಕಾಲದಿಂದಲೂ ಭಾರತದಲ್ಲಿ ಮಾತೃಪೂಜೆ ನಡೆಯುತ್ತ ಬಂದಿತ್ತು ಎನ್ನಬಹುದು. ಕರಾವಳಿ ಪ್ರದೇಶದಲ್ಲಿ ಕಂಡುಬರುವ ಮಹಿಷಾಸುರ

ಮರ್ದಿನಿ, ಮಹೀಷಮರ್ದಿನಿ[೧೩೬] ಹಾಗೂ ಕಾಳಿ, ದುರ್ಗಿ ಮತ್ತು ವನದೇವತೆ, ವನದುರ್ಗಿ ಮುಂತಾದ ಹೆಸರುಗಳಲ್ಲಿ ಪೂಜೆಗೊಳ್ಳುವ ಶಕ್ತಿ ದೇವತೆಗಳನ್ನು ಕಾಣಬಹುದು.

ವ್ಯಾಪಾರಿಗಳು ಕೂಡುದಾರಿಗಳಲ್ಲಿ ಶಕ್ತಿ–ಮಾತೃದೇವತೆಗಳನ್ನು ತಮ್ಮ ಒಳಿತಿಗಾಗಿ ಮಾರ್ಗದಲ್ಲಿ ರಕ್ಷಣೆಕೋರಿ ಪ್ರತಿಷ್ಠಾಪಿಸಿಕೊಳ್ಳುತ್ತಿದ್ದರು ಎಂದು ವಿದ್ವಾಂಸರು ಕಂಡುಹಿಡಿದಿದ್ದಾರೆ[೧೩೭]. ಶಕ್ತಿದೇವತೆಯನ್ನು ಒಂಬತ್ತು ರೂಪಗಳಲ್ಲಿ ಗುರುತಿಸುತ್ತಾರೆ. ಆದಿಶಕ್ತಿ, ಮಹಾಮಾಯಾ, ಮೂಲರಕ್ಷತಿ, ಈಶ್ವರಿ, ಗಂದದ್ವಾರಾ, ದುರದರ್ಶ, ನಿತ್ಯಪುಸ್ತ, ಕೃಷ್ಣಿ ಮತ್ತು ಶ್ರೀದೇವಿ[೧೩೮] ಎಂದು ಕರೆಯುತ್ತಾರೆ. ಗೋವಾ ನಿವಾಸಿಗಳಾಗಿದ್ದ ಈಗ ಕರಾವಳಿ ಉದ್ದಕೂ ಅಲ್ಲಲ್ಲಿ ವಾಸವಾಗಿರುವ ಕೊಂಕಣಿ ಭಾಷಿಗರು ದೇವಿ ಆರಾಧಕರಾಗಿದ್ದು ಮಂಗೇಶ, ಮಹಾದೇವ, ಮಹಾಲಕ್ಷ್ಮೀ, ಮಹಾಲಸಾ, ಶಾಂತಾದುರ್ಗಾ, ನಾಗೇಶಿ ಮತ್ತು ಸದ್ರಿಕೋಟೇಶ್ವರ ಎಂಬ ಏಳು ದೇವದೇವತೆಗಳನ್ನು ಕುಲದೇವರಾಗಿ ಹೊಂದಿದ್ದಾರೆ. ಬನವಾಸಿಯ ಮಧುಕೇಶ್ವರ ದೇವಾಲಯದ ಗರ್ಭಗುಡಿಯ ವಿಮಾನದಲ್ಲಿ[೧೩೯] ಈಶ್ವರ ಪಾರ್ವತಿಯರ ಶಿಲ್ಪಗಳಿವೆ. ಅಂತೆಯೇ ದೇವಾಲಯದ ಪ್ರಾಕಾರದಲ್ಲಿ ಹಲವು ದೇವತೆಗಳ ಶಿಲ್ಪಗಳೊಂದಿಗೆ ಪಾರ್ವತಿಯ ಶಿಲ್ಪವೂ ಇದೆ. ಲಕ್ಷ್ಮೀ ನರಸಿಂಹನ ವಿಗ್ರಹವಿದೆ[೧೪೦]. ಬಳ್ಳಿಗಾವೆಯ ಕಾಳಿಕಾ ದೇವಾಲಯವನ್ನು ಕದಂಬರು ೧೧[೧೪೧]ನೇ ಶತಮಾನದಲ್ಲಿ ಶಿಲಾವರಣ ಮಾಡಿದ ಬಗ್ಗೆ ಶಾಸನದಲ್ಲಿ ಬಂದಿದೆ. ಬನವಾಸಿಯಲ್ಲಿ ದೊರೆತಿರುವ ಸ್ತ್ರೀ ಶಿಲ್ಪಗಳಲ್ಲಿ ಭವಾನಿ ಅಥವಾ ಲಜ್ಜಾಗೌರಿಯ ಶಿಲ್ಪವೂ ಒಂದು[೧೪೨].ಬಾದಾಮಿ ಚಾಲುಕ್ಯರ ಕಾಲದಲ್ಲಿ ಶಾಕ್ತಾರಾಧಕರಿಗೆ ತಮ್ಮ ಆರಾಧ್ಯಶಕ್ತಿಯನ್ನು ಶಿಲ್ಪರೂಪದಲ್ಲಿ ನಿರ್ಮಿಸಿಕೊಳ್ಳುವ ವ್ಯಾಪಕವಾದ ಅವಕಾಶ ಒದಗಿತು. ಚಾಲುಕ್ಯರ ಕಾಲದಲ್ಲಿ ರಾಜ್ಯಾದ್ಯಂತ ಈ ಪ್ರಕ್ರಿಯೆ ನಡೆದದ್ದು ಇಂದಿಗೂ ನೋಡಸಿಗುತ್ತದೆ. ಚಾಲುಕ್ಯರ ೨ನೇ ಗುಹಾಲಯದಲ್ಲಿ ಮಹಿಷಾಸುರ ಮರ್ದಿನಿ, ಅರ್ಧನಾರೀಶ್ವರ ಕೆತ್ತನೆಗಳನ್ನು ಕಾಣಬಹುದು[೧೪೩].

ಶಿಶುಗಲಿ ಪಾಂಡ್ಯರು ಕಲ್ಯಾಣದ ಚಾಲುಕ್ಯರ ಸಾಮಂತರಾಗಿದ್ದರು[೧೪೪]. ಇವರ ಕಾಲದಲ್ಲಿ ರಚಿತವಾದ ಶಿಲ್ಪಗಳಲ್ಲಿ ಸ್ತ್ರೀ–ಶಕ್ತಿ ಶಿಲ್ಪಗಳೂ ಕಾಣಬಹುದು. ಧಾರೇಶ್ವರ ದೇವಾಲಯದ ಲಿಂಗದ ಎಡಪಾರ್ಶ್ವದ ದೇವತೆ, ಗುಂಡಬಾಳಾದ ಬಸದಿಯ ಜೈನಸರಸ್ವತಿ, ಉಪ್ಪಿನ ಪಟ್ಟಣದ ಮಹಿಷಾಸುರ ಮರ್ಧಿನಿ[೧೪೫] ಶಿಲ್ಪಗಳು ನೋಡಸಿಗುತ್ತವೆ. ಚಂದಾವರ ಕಾದಂಬರ ಕಾಲದಲ್ಲಿ ಸ್ತ್ರೀಶಕ್ತಿ ದೇವತೆಯ ಪ್ರತ್ಯೇಕ ಆರಾಧನೆ ಕಾಣದಿದ್ದರೂ, ಶಿವನ ದೇವಾಲಯದಲ್ಲಿ ಪಾರ್ವತಿ, ವಿಷ್ಣು ಹಾಗೂ ನರಸಿಂಹ ದೇವಾಲಯಗಳಲ್ಲಿ ಲಕ್ಷ್ಮೀ ಇರುವುದು ಕಾಣಬಹುದು.

ದಕ್ಷಿಣ ಕನ್ನಡದ ಪ್ರದೇಶದಲ್ಲಿ ಆಳುತ್ತಿದ್ದ ಆಳುಪರ ಕಾಲದಲ್ಲಿ ಶಾಕ್ತ ಪಂಥದವರಿಗೆ ತಮ್ಮ ಆರಾಧ್ಯಶಕ್ತಿಯನ್ನು ಸ್ಥಾಪಿಸಿಕೊಳ್ಳಲು, ಆರಾಧಿಸಲು ಅವಕಾಶಗಳಿದ್ದವು. ಹಲವು ಸಾರೆ

ಅರಸ–ಅರಸಿಯರಿಂದ ಇದಕ್ಕೆ ಪ್ರೋತ್ಸಾಹವೂ ದೊರೆತ್ತಿತ್ತು. ಬೆಳ್ಮಣ್ಣು ತಾಮ್ರಪಟದಲ್ಲಿ ಉಕ್ತವಾದ ವಿಂದ್ಯಾವಾಸಿನಿ ಎಂಬ ಉಲ್ಲೇಖವು ದುರ್ಗಾರಾಧನೆಯ ಪ್ರಾಚೀನತೆಯನ್ನು[೧೪೬] ಸೂಚಿಸುತ್ತದೆ. ಅಲೆಊರಿನ ಶಾಸನ ಒಂದು ಪಡು ಅಲೆವೂರಿನ ದೇವತೆಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ[೧೪೭]. ಕೊಲ್ಲೂರು ಕ್ಷೇತ್ರ ಈ ಕಾಲದಲ್ಲಿ ಪ್ರಬಲ ಶಕ್ತಿ ಕೇಂದ್ರವಾಗಿ ಬೆಳೆಯಿತು. ಈ ಸಂದರ್ಭದಲ್ಲಿ ತುಳುನಾಡಿನುದ್ದಕ್ಕೂ ಹಲವು ದುರ್ಗಾದೇವಿಯ ದೇವಸ್ಥಾನಗಳಿದ್ದವು. ಮೂಡಬಿದಿರೆಯ ದುರ್ಗೆಯನ್ನು ದುರ್ಗಾದೇವಿಯೆಂದೂ, ಬಿದಿರೆಯದೇವಿಯೆಂದು ಅಲ್ಲಿಯ ಶಾಸನದಲ್ಲಿ ಉಲ್ಲೇಖಿಸಲಾಗಿದೆ[೧೪೮]. ಕ್ರಿ.ಶ. ೧೨೧೫ರ ಮೂಡಬಿದಿರೆಯ ಶಾಸನ ದುರ್ಗಾದೇವಿಯ ನೈವೇದ್ಯಕ್ಕೆ ಅಕ್ಕಿ ಹಾಗೂ ಗದ್ಯಾಣ ದಾನ ನೀಡಿದ ಬಗ್ಗೆ ತಿಳಿಸುತ್ತದೆ[೧೪೯]. ಮೂಡಬಿದಿರೆಯ ಇನ್ನೆರಡು ಶಾಸನಗಳು ಬಿದಿರೆಯ ದುರ್ಗಾದೇವಿಯ ಪೂಜೆ, ನೈವೇದ್ಯಾದಿಗೆ ನೀಡಲಾದ ದಾನದಾಖಲೆಗಳಾಗಿದ್ದರೆ ಕ್ರಿ.ಶ. ೧೨೮೯ರ ನೀಲಾವರ ಶಾಸನವು ಬಲ್ಲ ಮಹಾದೇವಿಯ ಆಳಿಕೆಯಲ್ಲಿ ದೇವಿಯನ್ನು ನೀರುವಾದ ಭಗವತಿ, ದುರ್ಗಾಭಗವತಿ[೧೫೦] ಎಂದೂ ಕರೆಯುತ್ತವೆ. ಚಿಕ್ಕಾಯಿತಾಯಿಯ ಕ್ರಿ.ಶ೧೩೩೩ರ ಶಾಸನವು ನೀರುವಾರ (ನೀಲಾವರ) ದುರ್ಗಾಭವತಿಗೆ ಭೂದಾನ ನೀಡಿದ ಬಗ್ಗೆ ತಿಳಿಸುತ್ತದೆ. ಕೃಷ್ಣಾಯಿ (ಚಿಕ್ಕಾಯು) ತಾಯಿಯು ಶೃಂಗೇರಿ ಮಠದ ಗುರುಗಳಿಗೆ ಮತ್ತು ಶಿಷ್ಯರಿಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ[೧೫೧]. ಮುಂದೆ ಬಂದ ಎರಡನೆ ವೀರ ಪಾಂಡ್ಯದೇವನು ಮೂಡಬಿದಿರೆ ದುರ್ಗಾದೇವಿಯ ಗುಡಿಗೆ ದಾನ ನೀಡಿದ ಬಗ್ಗೆ ತಿಳಿಸುವ ಕ್ರಿ.ಶ. ೧೪೯೮ರ ಶಾಸನವಿದೆ[೧೫೨].ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದ ಬಸರೂರಿನಲ್ಲಿ ದೇವಿಹಬ್ಬ ನಡೆಯುತ್ತಿದ್ದ ಬಗ್ಗೆ ಉಲ್ಲೇಖಗಳಿದ್ದು[೧೫೩], ನವರಾತ್ರಿ ಸಮಯದಲ್ಲಿ ವಿಜ್ರಂಭಣೆಯಿಂದ ಉತ್ಸವ ನಡೆಯುತ್ತಿತ್ತು. ಆಗ ಭಕ್ತಾದಿಗಳು ವಿವಿಧ ಬಗೆಯ ಕಾಣಿಕೆ ಅರ್ಪಿಸುತ್ತಿದ್ದರು. ವ್ಯಾಪಾರಿ ಸಂಘಗಳು ಈ ಕಾರ್ಯಕ್ರಮದಲ್ಲಿ ಭಾಗಿಗಳಾಗಿರುತ್ತಿದ್ದರು[೧೫೪]. ಕ್ರಿ.ಶ. ಎಂಟನೆಯ ಶತಮಾನದ ಮೊದಲ ಭಾಗದ ಪೊಳಲಿ ಅಮ್ಮುಂಜೆ ಶಾಸನದಲ್ಲಿ ಸಪ್ತಮಾತೃಕೆಯರ ಉಲ್ಲೇಖವಿದೆ. ಚಾಲುಕ್ಯ ಚಕ್ರವರ್ತಿಗಳ ಇಷ್ಟದೇವತೆಯಾದ ಸಪ್ತಮಾತೃಕೆಯರು ಆಳುಪೇಂದ್ರನನ್ನು ರಕ್ಷಿಸಲಿ ಎಂದು ಇದು ಹಾರೈಸುತ್ತದೆ. ವಿಜಯನಗರ ಕಾಲದಲ್ಲಿ ವೈಷ್ಣವ, ಶಿವದೇವಾಲಯಗಳಲ್ಲಿ ಲಕ್ಷ್ಮೀ, ಪಾರ್ವತಿಯರ ಮೂರ್ತಿಗಳನ್ನು ಪೂಜೆಮಾಡುವುದು ಕಂಡುಬರುತ್ತದೆ.

೫.೧.೮ ಕ್ರೈಸ್ತರು

ಏಸು ಕ್ರಿಸ್ತನ ಅನುಯಾಯಿಗಳು ಕ್ರೈಸ್ತರು. ಏಸುವು ಮೌಢ್ಯವನ್ನು ದೂರ ಮಾಡಿ, ದಾಸ್ಯ, ದಾರಿದ್ರ್ಯ, ಅಜ್ಞಾನಗಳಿಂದ ಉದ್ದರಿಸಿ ದೈವಿರಾಜ್ಯ ಸ್ಥಾಪಿಸಬೇಕೆಂದು ತನ್ನ ಜೀವಿತವನ್ನು ದೀನದಲಿತರ ಸೇವೆಗೆ ಮುಡಿಪಾಗಿರಿಸಿದ್ದವನು[೧೫೫]. ಏಸುವಿನ ಶಿಷ್ಯರು ಏಸು ಬೋಧಿಸಿದ

ತತ್ವಗಳನ್ನು ಪ್ರಚಾರ ಮಾಡಿ, ಕ್ರೈಸ್ತ ಮತ ಪ್ರಚಾರ ಮಾಡಿ ಜನರನ್ನು ತಮ್ಮ ಮತಕ್ಕೆ ಸೇರಿಸಿಕೊಂಡರು.

ಏಸುವಿನ ಹನ್ನೆರಡು ಜನ ಪ್ರವರ್ತಕರಲ್ಲಿ ಒಬ್ಬನಾದ ಸಂಥ ಥಾಮಸನು ದಕ್ಷಿಣ ಭಾರತದಲ್ಲಿ ಉಪದೇಶ ನೀಡಿದ್ದ. ಆದರೆ ಆತನ ಕುರಿತು ಅನೇಕ ವಿದ್ವಾಂಸರಲ್ಲಿ ಮತಬೇಧಗಳಿವೆ[೧೫೬]. ಸಂಥ ಥಾಮಸನು ವ್ಯಾಪಾರಿಗಳ ಹಡಗನ್ನೇರಿ ಭಾರತ ತಲುಪಿದ್ದ ಎನ್ನುತ್ತಾರೆ. ವ್ಯಾಪಾರಿ ಸಮುದಾಯವನ್ನು ಸೇರಿಕೊಂಡು ಕ್ರೈಸ್ತ ಧರ್ಮವನ್ನು ಪ್ರಸಾರ ಮಾಡಿದನು ಎನ್ನುತ್ತಾರೆ. ಹಾಗೇ ಸುಮಾರು ಕ್ರಿ.ಶ. ೩೪೫ರಲ್ಲಿ ಎಡೆಸ್ಸಾದ ಧರ್ಮ ಗುರುವಾಗಿದ್ದ ಥಾಮಸನು ಇರಾಣದ ಕೆಲಜನ ಕ್ರಿಶ್ಚಿಯನ್ನರ ಗುಂಪಿನೊಡನೆ ಮಲಬಾರಕ್ಕೆ ಬಂದನೆಂಬ ವಿಚಾರವೂ ಪ್ರಚಲಿತದಲ್ಲಿದೆ[೧೫೭].

ಯುರೋಪಿನ ದೇಶಗಳು ಹಾಗೂ ಭಾರತದ ಪಶ್ಚಿಮ ಕರಾವಳಿಯ ರೇವುಗಳು ವ್ಯಾಪಾರಿ ಸಂಪರ್ಕ ಹೊಂದಿದ್ದವು. ವ್ಯಾಪಾರಕ್ಕಾಗಿ ಐರೋಪಿನಿಂದ ಬಂದವರು ಕ್ರೈಸ್ತರೂ ಆಗಿದ್ದರು. ಆದರೆ ಇವರಲ್ಲಿ ಬಹುಜನರು ಶುದ್ಧ ವ್ಯಾಪಾರಿಗಳಾಗಿದ್ದರೇ ಹೊರತು ಅವರಿಗೆ ಧಾರ್ಮಿಕ ಪ್ರಚಾರದ ಉದ್ದೇಶವಿರಲಿಲ್ಲ. ಆದರೆ ಅವರೊಂದಿಗೆ ಧಾರ್ಮಿಕ ಪ್ರಚಾರಕ್ಕಾಗಿ ಪುರೋಹಿತರು ಬರುತ್ತಿದ್ದರು.

ಕ್ರಿ.ಶ. ೫೫೦ರಲ್ಲಿ ಭಾರತಕ್ಕೆ ಭೇಟ್ಟಿಕೊಟ್ಟ ಕಾಸ್‌ಮಸ್ ಅಲೆಕ್ಸಾಂಡ್ರಿಯಾದ ಒಬ್ಬ ಸನ್ಯಾಸಿ[೧೫೮]. ಈತನು ಬರೆದಿರುವ ಪ್ರವಾಸಿ ಕಥನದಲ್ಲಿ ತಾನು ಸಂದರ್ಶಿಸಿದ ಸ್ಥಳದಲ್ಲಿ ಕ್ರೈಸ್ತರು ನೆಲೆಸಿರುವ ಬಗ್ಗೆ ಹೇಳಿದ್ದಾನೆ. ಪರ್ಷಿಯಾದ ಒಬ್ಬ ಪಾದ್ರಿ ಹಾಗೂ ಕ್ರೈಸ್ತ ವೈದಿಕರಿಂದ ಕೂಡಿದ ಚರ್ಚ ಇದೆ ಎನ್ನುತ್ತಾನೆ. ಇದರಿಂದ ಕಾಸ್‌ಮಸ್‌ನ ಕಾಲದಲ್ಲಿ ಕ್ರಿ.ಶ. ಸುಮಾರು ೫೫೦ರಲ್ಲಿ ಕ್ರೈಸ್ತರು ಸ್ವತಂತ್ರವಾಗಿ ಧಾರ್ಮಿಕ ಕ್ರಿಯೆಗಳನ್ನು ಆಚರಿಸುತ್ತಿದ್ದರೆಂದು ತಿಳಿಯುತ್ತದೆ. ಈ ಪ್ರದೇಶ ಮಲಬಾರ ತೀರ ಹಾಗೂ ಕಲ್ಯಾಣದ ನಡುವಿನ ಪ್ರದೇಶ ಎಂದು ವಿವರಗಳಿಂದ ತಿಳಿಯುತ್ತದೆ[೧೫೯]. ಥಾಮಸ ಶಿಲುಬೆಯೆಂದು ಹೆಸರಾದ ಒಂದು ಬಗೆಯ ಶಿಲುಬೆಯು ಮಲಬಾರನಲ್ಲಿ ಮತ್ತು ಮೈಲಾಪುರದಲ್ಲಿ ಸಿಗುತ್ತದೆ. ಪರ್ಶಿಯನ್ ಭಾಷೆಯಲ್ಲಿರುವ ಬರಹದಿಂದ ಇದು ಎಳನೇ ಶತಮಾನದೆಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. ಮುಂದೆ ಬಂದ ಮಾರ್ಕೋಪೋಲೊ ಹಾಗೂ ಮಾಂಟೆಕೋರ್ವಿನೋ ಇಬ್ಬರು ದಕ್ಷಿಣ ಭಾರತಕ್ಕೆ ಬಂದು ಅಲ್ಲಿಯ ಕ್ರಿಶ್ಚಿಯನ್ನರನ್ನು ಭೇಟಿಯಾಗಿದ್ದರು. ಹೀಗೆ ವ್ಯಾಪಾರಿಗಳೊಡಗೂಡಿ ಬಂದ ಕ್ರೈಸ್ತ ಗುರುಗಳು ಸ್ಥಳೀಯರನ್ನು ಮತಾಂತರಿಸಿರಬೇಕು ಅಥವಾ ಐರೋಪ್ಯದಿಂದ ಬಂದ ದೊಡ್ಡ ವ್ಯಾಪಾರಿ ಪಂಗಡಗಳು ಇಲ್ಲೇ ವಾಸವಾಗಿ ಕ್ರೈಸ್ತ ಪಂಥವನ್ನು ಆಚರಿಸುತ್ತಿದ್ದಿರಬೇಕು. ಪೂರ್ವ ಬಂದರು ಪ್ರದೇಶಗಳಲ್ಲಿ ರೋಮ್‌ನಿಂದ ಬಂದವರು ಅಲ್ಲಿ ತಮ್ಮ ವಸತಿ ನೆಲೆಗಳನ್ನು ಸ್ಥಾಪಿಸಿಕೊಂಡ ಬಗ್ಗೆ ಉಲ್ಲೇಖಗಳಿವೆ.

ಇದರಿಂದ ಹೀಗೆ ಅವರಿಂದ ಪ್ರಭಾವಿತರಾಗಿ ಸ್ಥಳೀಯರು ಮತಾಂತರಗೊಂಡಿರಬಹುದು. ವ್ಯಾಪಾರವು ಭರದಿಂದ ಸಾಗುತಿದಂತೆ ಕ್ರೈಸ್ತ ಧರ್ಮಗುರುಗಳು ಸ್ಥಳೀಯರನ್ನು ತಮ್ಮ ಧರ್ಮಕ್ಕೆ ಸೇರಿಸಿಕೊಂಡರು.

೫.೧.೯ ಇಸ್ಲಾಂ ಧರ್ಮ

ಮಹಮ್ಮದ್‌ಪೈಗಂಬರರ ಅನುಯಾಯಿಗಳನ್ನು ಮುಸಲ್ಮಾನರೆಂದು ಕರೆಯುತ್ತಾರೆ. ದೇವನೊಬ್ಬ, ರೂಪರಹಿತ, ಕರುನಾಳು ಎಂದು ಸಾರಿ ಅರಬ್ಬರಲ್ಲಿದ್ದ ಘರ್ಷಣೆ, ಭಿನ್ನಮತವನ್ನು ತೊಡೆದು ಹಾಕಿ ವಿವಿಧ ಪಂಗಡಗಳಲ್ಲಿ ಏಕತೆ ಮೂಡಿಸಿದ್ದರು. ಖುರಾನ್ ಈ ಧರ್ಮದ ಆಧಾರ ಗ್ರಂಥವಾಗಿದೆ. ಮುಸಲ್ಮಾನರು ದಿನಕ್ಕೆ ಐದುಬಾರಿ ಪ್ರಾರ್ಥನೆ ಮಾಡಬೇಕು. ರಂಜಾನ್ ತಿಂಗಳಲ್ಲಿ ಉಪವಾಸ ಮಾಡಬೇಕು. ಆ ಕಾಲದಲ್ಲಿ ದಾನ ಧರ್ಮ ಮಾಡಬೇಕು. ಪುನರುತ್ಥಾನದಲ್ಲಿ ವಿಶ್ವಾಸವಿರಿಸಬೇಕು. ಇಂತಹ ಸರಳ ತತ್ವಗಳ ಆಚರಣೆಗಳನ್ನು ಪ್ರಚಾರ ಮಾಡಿದರು. ಪರ್ಶಿಯಾ, ಅರೇಬಿಯಾಗಳಲ್ಲಿ ಈ ತತ್ವ ವ್ಯಾಪಕವಾಗಿ ಹಬ್ಬಿತು.

ದಕ್ಷಿಣ ಭಾರತ ಹಾಗೂ ಏಷ್ಯಾದ ಪಶ್ಚಿಮದ ದೇಶಗಳ ನಡುವೆ ಹಿಂದಿನಿಂದಲೂ ವ್ಯಾಪಾರಿ ಸಂಪರ್ಕಗಳಿದ್ದವು. ಸಿಂಧ್‌ನ ಮೇಲೆ ದಾಳಿ ನಡೆದು-ಕೆಲಕಾಲ ಆ ಪ್ರದೇಶದಲ್ಲಿ ಮಹಮ್ಮದ್‌ನ ಆಡಳಿತ ನಡೆದರೂ ಅದು ಕೇವಲ ರಾಜಕೀಯ ಯುದ್ಧವಾಗಿತ್ತು[೧೬೦].

ಭಾರತಕ್ಕೆ ಇಸ್ಲಾಂ ಪ್ರವೇಶವನ್ನು ಅರಬ್ ವ್ಯಾಪಾರಸ್ಥರ[೧೬೧] ಆಗಮನದೊಂದಿಗೆ ನೋಡಬಹುದು. ಅರಬರು ದಕ್ಷಿಣ ಭಾರತದ ಪಶ್ಚಿಮದ ಹಾಗೂ ಪೂರ್ವದ ಕಡಲತೀರದಲ್ಲಿ ಕ್ರಮವಾಗಿ ತಮ್ಮ ವಸಾಹತನ್ನು ಸ್ಥಾಪಿಸಿದರು[೧೬೨]. ಮುಂದೆ ಬಂದ ರಾಜಕೀಯ ಅಧಿಕಾರವನ್ನು ಧರ್ಮಪ್ರಚಾರಕ್ಕೆ ಬಳಸಿಕೊಂಡರು. ಭಾರತದಲ್ಲಿರುವ ಬಹುಸಂಖ್ಯಾತ ಮುಸಲ್ಮಾನರು ಮತಾಂತರ ಹೊಂದಿದವರೆಂಬ ಬಗ್ಗೆ ಯಾವ ಸಂಶಯವೂ ಇಲ್ಲ[೧೬೩].

ಕರ್ನಾಟಕ ಪಶ್ಚಿಮ ಕರಾವಳಿಯಲ್ಲಿ ಇಸ್ಲಾಂ ಧರ್ಮದ ಆಚರಣೆಯಲ್ಲಿ ವೈಶಿಷ್ಟ್ಯ ಕಾಣಬರುತ್ತದೆ. ಬ್ಯಾರಿ, ನವಾಯತ, ದಾಲ್ಜಿ ಮುಂತಾದ ವರ್ಗಗಳಲ್ಲಿರುವ ಮುಸ್ಲಿಮರು ಮುಖ್ಯವಾಗಿ ವ್ಯಾಪಾರಿಗಳಾಗಿದ್ದಾರೆ. ದಾಲ್ಜಿಗಳನ್ನು ನಾಖುದಾ ಎಂದೂ ಕರೆಯುತ್ತಾರೆ. ಅಂದರೆ ನೌಕಾಯಾನ ನಿಪುಣರು ಎಂದು ಅರ್ಥ. ಉತ್ತರ ಕನ್ನಡದ ಭಟ್ಕಳದಲ್ಲಿ ವಿಶೇಷವಾಗಿ ಕಂಡುಬರುವ ನವಾಯತರು ಸುನ್ನಿ ಪಂಗಡದವರು[೧೬೪]. ಹಿಂದೆ ಸೌದಿ ಅರೇಬಿಯಾದಲ್ಲಿ ಖುರೇಷಿ ಪಂಗಡದವರು ಆಳುತ್ತಿದ್ದರು. ಆಗ ಅರೇಬಿಯವನ್ನು ಹಜ್ಜಾಜ ಆಳುತ್ತಿದ್ದನು. ಆತನಿಗೂ ಖುರೇಷಿಗಳಿಗೂ ಆಗುತ್ತಿರಲಿಲ್ಲ. ಆತನು ಅವರಿಗೆ ದೇಶಬಿಟ್ಟು ಹೋಗುವಂತೆ ಆಜ್ಞಾಪಿಸಿದನು. ಆತನ ಆಜ್ಞೆಗೆ ಗೌರವ ನೀಡದೇ ಅಲ್ಲೇ ಉಳಿದ ಖುರೇಷಿಗಳ ಮನೆಗಳ ಮೇಲೆ ದಾಳಿ

ವ ವ ವ ವ ವ ವ

ವ

ವ ವ [೧೬೫].

ಹೀಗೆ ಬಂದವರು ಇಲ್ಲಿಯವರೊಂದಿಗೆ ವೈವಾಹಿಕ ಸಂಬಂದ ಪಡೆದು. ದೇಶಿಯ ವಿದೇಶೀಯ ವ್ಯಾಪಾರದಲ್ಲಿ ತೊಡಗಿದರು. ಇನ್ನೊಂದು ಅಭಿಪ್ರಾಯದಂತೆ ಪರ್ಶಿಯಾ ಮತ್ತು ಯಮನ್‌ಗಳಿಂದ ಬಂದು ನೆಲೆಸಿದ ವ್ಯಾಪಾರಿ ವೃತ್ತಿಯಿಂದ ಬೆಳೆದುಬಂದ ಜನವರ್ಗವನ್ನು ನವಾಯತರು[೧೬೬] ಎಂದು ಕರೆಯುತ್ತಾರೆ. ದಕ್ಷಿಣ ಕನ್ನಡ–ಉಡುಪಿ–ಕಾಸರಕೋಡು ಪ್ರದೇಶದ ಮುಸ್ಲಿಂರಲ್ಲಿ ಹೆಚ್ಚಿನವರು ಬ್ಯಾರಿಗಳು[೧೬೭]. ವ್ಯಾಪಾರಕ್ಕೆ ಬಂದ ಅರಬ್ಬರು ಸ್ಥಳೀಯ ಹೆಣ್ಣುಗಳನ್ನು ಮದುವೆಯಾದರು. ಇಲ್ಲಿಯೆ ವಾಸವಾಗಿ ಸಂಸಾರ ಮಾಡಿದ್ದವರು. ಇವರು ಸ್ಥಳೀಯವಾದ ಭಾಷೆಯೊಂದನ್ನು ರೂಪಿಸಿಕೊಂಡರು. ಮಲಬಾರ ಪ್ರದೇಶದವರನ್ನು ಮಾಪಿಳ್ಳೆಗಳೆಂದು ಕನ್ನಡ ಪ್ರದೇಶದವರನ್ನು ಬ್ಯಾರಿಗಳೆಂದು ಕರೆಯುತ್ತಾರೆ. ಬ್ಯಾರಿ ಎಂಬ ಪದ ತುಳುವಿನ 'ಬ್ಯಾರ' ಅಂದರೆ ವ್ಯಾಪಾರ–ವಿನಿಮಯ ಎಂಬ ಶಬ್ದದಿಂದ ಬೆಳೆದುಬಂದಿದೆ[೧೬೮].

ಹಿರಿಯ ಪ್ಲಿನಿಯು ಕ್ರಿ.ಶ. ೨೩ರಲ್ಲಿ ರೋಮನ್‌ದಲ್ಲಿ ಜನಿಸಿದವನು. ಈತನು ಓದಿದ್ದು ಕೇಳಿದ್ದನ್ನು ಸಂಗ್ರಹಿಸಿ 'ಪ್ರಾಕೃತಿಕ ಚರಿತ್ರೆ' ಎಂಬ ಉದ್ಗ್ರಂಥ ಬರೆದಿದ್ದಾನೆ[೧೬೯]. ಭಾರತದ ಕುರಿತು ಈತನು ಬರೆದಿರುವ ಪುಟಗಳಲ್ಲಿ ನಿರಂತರ ಕಡಲಮಾರ್ಗವಾಗಿ ವ್ಯಾಪಾರ ಪಶ್ಚಿಮ ಕರಾವಳಿಯಲ್ಲಿ ನಡೆಯುತ್ತಿತ್ತು ಎನ್ನುತ್ತಾನೆ. ಅಂತೆಯೇ ಏರಿತ್ರಿಯನ್ ಸಮುದ್ರ ಮಾರ್ಗದರ್ಶಕನು ಪಶ್ಚಿಮ ಕರಾವಳಿಯಲ್ಲಿ ವರ್ತಕರ ವಸಾಹತಿನ ಬಗ್ಗೆ ಹೇಳುತ್ತಾನೆ. ಹೀಗೆ ಅರಬ್ ರಾಷ್ಟ್ರಗಳಿಂದ ಬಂದು ವಸಾಹತು ಸ್ಥಾಪಿಸಿಕೊಂಡು ವ್ಯಾಪಾರ ಮಾಡುತ್ತಿದ್ದ ಜನರಿದ್ದರು. ಮುಂದೆ ಇಸ್ಲಾಂಧರ್ಮ ಸ್ಥಾಪನೆಯಾದಾಗ ಅದರ ಅನುಯಾಯಿಗಳಾದರು. ಇಂಥಹ ವ್ಯಾಪಾರಿಗಳು ಬಹು ಪ್ರಬಲರಾಗಿದ್ದು ಮುಂದೆ ಐರೋಪ್ಯ ವಸಾಹತುಶಾಹಿಗಳು ೧೬ನೇ ಶತಮಾನಕ್ಕೆ ಭಾರತದಲ್ಲಿ ವ್ಯಾಪಾರಿ ಏಕಸ್ವಾಮ್ಯಕ್ಕಾಗಿ ಭೀಕರ ಕದನ ನಡೆಸುವರೆಗೂ ಪ್ರಬಲರಾಗಿದ್ದರು. ಕರ್ನಾಟಕದ ಪಶ್ಚಿಮ ಕರಾವಳಿಯ ಪ್ರಖ್ಯಾತ ರೇವುಪಟ್ಟಣಗಳಲ್ಲಿ ವ್ಯಾಪಾರ – ವ್ಯವಹಾರ ನಡೆಸಿದ ಹಂಜಮಾನರುಗಳು ಮುಸ್ಲಿಂವ್ಯಾಪಾರಿಗಳಾಗಿದ್ದರು. ಮುಂದೆ ರಾಜಾಶ್ರಯ ದೊರೆತಂತೆಲ್ಲಾ ಇಸ್ಲಾಂಧರ್ಮ ಬೆಳೆಯಿತು. ಹಿಂದೂ ಧರ್ಮದಿಂದ ಬೇಸತ್ತ ದಲಿತ ಶೋಷಿತರೇ ಹೆಚ್ಚಿನ ಸಂಖ್ಯೆಯಲ್ಲಿ ಈ ಧರ್ಮಕ್ಕೆ ಸೇರಿಕೊಂಡರು. ಹಲವು ಸಾರೆ ಖಡ್ಗದ ಬಲದಿಂದ ಧರ್ಮ ಪ್ರಸಾರ ಮಾಡಿದರು. ಇಬನ್ ಬತೂತ ಕ್ವಿಲಾಂ (ಕ್ವಿಲಾನ್) ಬಂದರಿನಲ್ಲಿ ಮಹಮ್ಮದೀಯ ವರ್ತಕರಿರುವುದನ್ನು ಹೇಳುತ್ತಾನೆ. ಈತನು ೧೩೦೪ರಲ್ಲಿ ಮೊರಾಕ್ಕೊದ ಟ್ಯಾಂಜಿಯರ್‌ನಲ್ಲಿ ಜನಿಸಿದ್ದನು. ಕ್ರಿ. ಶ. ೧೩೩೩ರಿಂದ

೧೩೪೨ರವರೆಗೆ ಭಾರತದಲ್ಲಿದ್ದನು. ಇವನ ಬರಹಗಳಿಂದ ಹಾಗೂ ಇನ್ನಿತರ ಪ್ರವಾಸಿ ಕಥನಗಳಿಂದ ಪಶ್ಚಿಮ ಕರಾವಳಿಯಲ್ಲಿ ಇಸ್ಲಾಂ ಧರ್ಮ ಇದ್ದದ್ದು ತಿಳಿಯುತ್ತದೆ.

೫.೧.೧೦ ಜನಪದ ಧರ್ಮ

ಕರಾವಳಿ ಕರ್ನಾಟದಲ್ಲಿ ಭಾರತದಲ್ಲಿ ಕಂಡುಬಂದ ಎಲ್ಲ ಬಗೆಯ ಭಾವನಾವಾದವನ್ನು, ಅದರ ಅನುಯಾಯಿಗಳನ್ನು ಹೊಂದಿದ್ದಿತ್ತೆಂದು ಮೇಲಿನ ಧಾರ್ಮಿಕ ಪಂಥಗಳ ವಿವರಗಳಿಂದ ತಿಳಿಯುತ್ತದೆ. ಆದರೆ ಇದರೊಂದಿಗೆ ಸ್ಥಳೀಯರು ಆರ್ಯಆಚರಣೆಯಲ್ಲದ ತಮ್ಮದೇ ಆದ ಆರಾಧನೆ, ಪೂಜಾವಿಧಾನಗಳನ್ನು ಕಂಡುಕೊಂಡಿದ್ದರು.

ಪ್ರಕೃತಿಯು ಹೆಚ್ಚಿನ ಮಟ್ಟದಲ್ಲಿ ಅಧಿನಕ್ಕೆ ಬಂದಾಗ ಮನುಷ್ಯನ ಜೀವನದಲ್ಲಿ ಒಂದು ದೊಡ್ಡ ಪರಿವರ್ತನೆ ಉಂಟಾಯಿತು. ಮನುಷ್ಯ-ಮನುಷ್ಯ ಸಂಬಂಧದಲ್ಲಿ ಸಮಾನತೆಯು ನಶಿಸಿತು. ಸಮಾಜವು ಸ್ಪಷ್ಟವಾಗಿ ಎರಡು ಭಾಗಗಳಾಗಿ ಹಂಚಿಹೋಯಿತು[೧೨೦]. ಈ ವಿಭಜನೆ ಆಳುವವರು ಹಾಗೂ ಆಳಿಸಿಕೊಳ್ಳುವರೆಂಬ ದೊಡ್ಡ ಕಂದಕವನ್ನೇರ್ಪಡಿಸಿತು. ಇಂಥಹ ವಿಭಜಿತ ಮಾನವ ಸಮೂಹದಲ್ಲಿ ಆರಾಧನೆಯಲ್ಲಿಯೂ ವಿಭಾಗವನ್ನೇರ್ಪಡಿಸಿತು. ಉಳ್ಳವರು ಹಾಗೂ ಆಳುವವರ ಶಿಷ್ಟ ದೇವರಿಗೆ ಪರ್ಯಾಯವಾಗಿ ಜನಪದರು ನಿಸರ್ಗದಲ್ಲಿ ದೇವರನ್ನು ಕಂಡುಕೊಂಡರು. ಹಲವು ವಿಧದ ಬೆಳವಣಿಗೆಗಳಾದವು. ಇವರು ತಮ್ಮ ಸೋಲುಗಳಿಗೆ, ವೈಫಲ್ಯಗಳಿಗೆ ಪ್ರಕೃತಿಯಲ್ಲಿ ಬದಲಿ ಮಾರ್ಗಗಳನ್ನು ಕಂಡುಕೊಂಡರು. ಶಿಷ್ಟದೇವರಲ್ಲಿ ನಂಬಿಕೆಯು, ಧರ್ಮ ವಿಶ್ವಾಸವು ಮನುಷ್ಯನಿಗೆ ಸಮಸ್ಯೆಯನ್ನೆದುರಿಸುವುದನ್ನು ಕಲಿಸುವ ಬದಲು ಅದನ್ನು ಸಹಿಸಲು ಕಲಿಸಿಕೊಡುತ್ತದೆ. ಅದಕ್ಕೂ ಮುಂದುವರಿದು ಧರ್ಮಶೋಷಣೆಯನ್ನು ಒತ್ತಾಯ ಪೂರ್ವಕವಾಗಿ ಸಹಿಸಿಕೊಳ್ಳುವಂತೆ ಒತ್ತಡ ಹೇರುತ್ತದೆ.

ಇಂಥಹ ಒತ್ತಡಗಳನ್ನು ಮೀರಿ ಪ್ರಪಂಚವನ್ನು ವೈಜ್ಞಾನಿಕ ದೃಷ್ಟಿಯಲ್ಲಿ ನೋಡಿದ ಭೌತಿಕವಾದವೂ ಇದೆ. ಆದರೆ ಕಾಲಕ್ರಮದಲ್ಲಿ ಭಾವನಾವಾದವು ಸಮಾಜದಲ್ಲಿ ಮೇಲುಗೈ ಪಡೆಯಿತು[೧೨೧]. ಕೆಲವು ಜನರ ಜೀವನದ ಭಾಗವಾಗಿ ಬಿಟ್ಟಿತ್ತು. ಅದರ ವಿರುದ್ಧ ಲೋಕಾಯತ[೧೨೨] ಹಾಗೂ ಬೌದ್ಧ ದರ್ಶನ[೧೨೩]ಗಳು ಕಂಡುಬಂದವು. ಅಲ್ಲಿಯವರೆಗೆ ಯಾವುದೇ ದೊಡ್ಡ ಪ್ರತಿಭಟನೆಯನ್ನು ಶೋಷಿತವರ್ಗವಾದ ಶೂದ್ರ-ಅತೀ ಶೂದ್ರ ಸಮೂಹ ಕೈಗೊಳ್ಳ[೧೨೪]ದಿದ್ದುದರಿಂದ ಬಂಡಾಯಗಳು ಉಂಟಾಗಲಿಲ್ಲ. ಅಲ್ಲದೇ ಇಲ್ಲಿಯ ದುಡಿಯುವ ವರ್ಗಕ್ಕೆ ಅನಿವಾರ್ಯವಾಗಿ ಶರಣಾಗುವ ಸ್ಥಿತಿ ನಿರ್ಮಾಣವಾಗಿತ್ತು. ಆದರೆ, ದುಡಿಯುವ ವರ್ಗ ಆರ್ಯ ಸಂಸ್ಕೃತಿಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳದೆ, ದ್ರಾವಿಡ ಪರಂಪರೆಯಲ್ಲಿ ಮುಂದುವರಿಯಿತು. ಈ ವೈರುದ್ಯ ದಕ್ಷಿಣ ಭಾರತದ ಚಾರಿತ್ರಿಕ ಬೆಳವಣಿಗೆಯ ಪ್ರಧಾನ ಸಂಗತಿಗಳಲ್ಲೊಂದು[೧೨೫]. ದಕ್ಷಿಣ ಭಾರತದ

ನಾಲ್ಕು ದ್ರಾವಿಡ ರಾಜ್ಯಗಳ, ನಾಲ್ಕು ಭಾಷೆಗಳ ಗಡಿಗಳನ್ನು ಮೀರಿ ವೃತ್ತಿ ಕುಲಗಳು ತಮ್ಮ ಅನನ್ಯ ಸಂಸ್ಕೃತಿ ಪರಂಪರೆಯನ್ನು ಮುಂದುವರೆಸಿಕೊಂಡು ಬಂದಿರುವುದು, ದ್ರಾವಿಡ ಜನಕುಲಗಳ ವಿರಾಟ ಸ್ವರೂಪಕ್ಕೆ ಅಡಿಪಾಯದಂತಿದೆ[೧೭೬]. ವೈದಿಕ ಜಾತಿ ಶ್ರೇಣಿಕರಣದಲ್ಲಿ ಯಾವುದು ಅತ್ಯಂತ ಕೀಳಾಗಿದೆಯೋ ಅದು ದ್ರಾವಿಡ ಕುಲ ಪದ್ಧತಿಯಲ್ಲಿ ಅತ್ಯಂತ ಶ್ರೇಷ್ಠವಾಗಿದೆ[೧೭೭]. ಇದನ್ನು ಉಳಿಸಿಕೊಂಡಿರುವುದು ಇಂದಿಗೂ ಕಾಣಬಹುದು. ದ್ರಾವಿಡರ ಆದಿದೈವ, ಮಾತ್ರ ದೈವಗಳ ಆರಾಧನೆ ಹಾಗೂ ಟೋಟೆಂಗಳ ಆರಾಧನೆಯನ್ನು ಇಂದಿಗೂ ಕಾಣಬಹುದು. ವೇದ ಕಾಲದಲ್ಲಿ ಗೌರವದ ಸ್ಥಾನ ಪಡೆದಿದ್ದ ವರುಣ[೧೭೮]ನು ಇಲ್ಲಿ ಕಡಲ ದೇವತೆಯಾಗಿಯೂ, ಗಣಪತಿಯು ವೇದ ಕಾಲದ ಪರಿಸ್ಥಿತಿಗೂ ಮೀರಿದ ರಕ್ಷಕ[೧೭೯]ನಾಗಿಯೂ ಕಂಡು ಬರುತ್ತಾರೆ. ಉಳಿದ ವೈದಿಕ ದೇವದೇವತೆಯರು ಸ್ಥಳೀಯ ಹೆಸರುಗಳಲ್ಲಿ ಪೂಜೆಗೊಳ್ಳುತ್ತಾರೆ.

ಕಾರವಾರದಿಂದ ಮಂಗಳೂರಿನವರೆಗೆ ಜನಮಾನಸದ ಆರಾಧ್ಯರಾಗಿ ಜಟ್ಟಿಗ, ಚೌಂಡಿ, ಮಹಾಸತಿ, ಕೆಂಡದ ಮಹಾಸತಿ, ಹಾದಿಮಾಸ್ತಿ, ವನಮಾಸ್ತಿ, ವನದುರ್ಗಿ, ಯಕ್ಷಿ, ಬಲೀಂದ್ರ, ಬೀರ, ಹೊನ್ನಾ-ರಾಕ, ಕುಂಟಮಾಸ್ತಿ, ಎಲ್ಲಮ್ಮ, ದುರ್ಗಮ್ಮ, ನಗರೇಶ್ವರಿ, ಕೋಟಿ ಚೆನ್ನಯ್ಯ, ಕಾಂತಾಬಾರೆಬೂದಾಬಾರೆ, ಕಲ್ಕುಡ-ಕಲ್ಲುರ್ಟಿ, ನಾಡುದೈವ, ಬೀರಣಾಳ್ವ, ಸಿರಿಗಳೆ, ಮದ್ದಾಳಭೂತ, ಉಳ್ಳಾಳ, ಉಳ್ಳಾಲ್ತಿ, ಬೊಬ್ಬರ್ಯ,ಅಲಿದೈವ, ಮಂಜುಶ್ರಿ, ಮಂಜುನಾಥ, ಅಣ್ಣಪ್ಪ, ಹುಲಗಿ, ನಂದಿ, ನಾಗರ ಕಲ್ಲು, ನಾಗ್ತಿ, ಕೊರೆಗತನಿಯ, ಬಿಲ್ಲರಾಯ-ಬಿಲ್ಲಾರ್ತಿ, ಬಸ್ತಿನಾಯಕ, ನಾಯರ್ ಭೂತ, ಬಿಕ್ರು ಮೇಲಾಂಟ, ಬೀರ್ಣಾಳ್ವ, ಮಾಯಂದಾಳ್, ತನ್ನಿಮಾನಿಗ, ಹನುಮಂತ, ರಕ್ತೇಶ್ವರಿ, ಕ್ಷೇತ್ರಪಾಲ, ಪುರುಷ, ಹೈಗುಳಿ, ಚಿಕ್ಕು, ಹಳೆಯಮ್ಮ, ಮಾಂಕಾಳಿ, ಉಮ್ಮಳ್ತಿ, ಪಿಲಿ ಚಾಮುಂಡಿ, ಪಿಲಿಚಂಡಿ, ಪಿಲಿಭೂತ, ಪಂಜುರ್ಲಿ, ಮತಿಭೂತ, ಮಲೆಕೊಂತಿ, ಕಾಡ್ಯತ್ತಿ, ಕಾನದಗುಳಿಗ, ಕಾನದಪಂಜುರ್ಳಿ. ಕಾನದಜುಮಾದಿ, ಬ್ರಹ್ಮ, ಗಾಮ ಮುಂತಾದ ಹೆಸರುಗಳಲ್ಲಿ ದೈವ, ದೇವತೆ, ದೇವರು, ವೀರರು, ರಕ್ಷಕರು ಎಂದು ಆರಾಧಿಸಲ್ಪಡುತ್ತಾರೆ. ಸತಿ, ಸಹಗಮನದ ಸ್ತ್ರೀಯರು, ಮಹಾಸತಿಯರಾಗುತ್ತಿದ್ದರು. ಕದಂಬರ ಕವಡಿ ಶಾಸನ ರವಿವರ್ಮನ ರಾಣಿಯ ಸಹಗಮನವನ್ನುತಿಳಿಸುತ್ತದೆ[೧೮೦]. ಹಿರಿಯರಿಂದ ಅಂಗೀಕರಿಸಲ್ಪಟ್ಟ ಕುಟುಂಬ ರಾಜ್ಯರಕ್ಷಿಸುವ ಶಕ್ತಿಗಳೆ ದೈವಗಳು. ಕುಂದಾಪುರ ತಾಲೂಕು ಒಂದರಲ್ಲೇ ರಾಜನ ದೈವ, ಮನೆ ದೈವ ಹಾಗೂ ಆಲಡೆ ಶಕ್ತಿ ಮತ್ತು ಪರಿಸರ ದೈವ ಎಂದು ಸುಮಾರು ೬೦ ದೈವಗಳಿವೆ

ಉತ್ತರದ ಕರಾವಳಿಯಲ್ಲಿ ನಾಗಾರಾಧನೆ ಹಾಗೂ ಹನುಮಂತ ಆರಾಧನೆ ಸಾಮಾನ್ಯವಾಗಿ ಕಂಡು ಬರುತ್ತದೆ. ಯಕ್ಷಿ ಎಂಬ ದೇವತೆಯ ಯಕ್ಷಲೋಕದವಳಾಗಿದ್ದು, ಅವಳು ದುಷ್ಟ ಶಕ್ತಿಗಳಿಂದ ರಕ್ಷಿಸುವವಳು, ಬಾವಿ, ನೀರು ಹಾಗೂ ಫಲವತ್ತಾದ ಮರದಲ್ಲಿ ವಾಸವಾಗಿರುವವಳು

ಎಂಬನಂಬಿಕೆಇದೆ. ಚೌಡಿಯು–ಚಂಡಿ ಚಾಮುಂಡಿಯ ರೂಪವಾಗಿದ್ದು, ಇನ್ನು ಬೇರೆಬೇರೆ ಹೆಸರುಗಳಲ್ಲಿ ದುರ್ಗಿ, ದುರ್ಗಾಮಾತೆ, ವನದುರ್ಗಿ, ಲಕ್ಷ್ಮೀ, ಶಾಂತೇರಿ, ಕಾಮಾಕ್ಷಿ ಮುಂತಾಗಿ ಕರೆಯಲ್ಪಡುತ್ತಾರೆ. ರಕ್ತೇಶ್ವರಿ, ನಗರೇಶ್ವರಿ, ಮಹಾಸತಿ, ಮುಂತಾದ ಹೆಸರುಗಳು ಶಕ್ತಿ ದೇವತೆಗಳಿಗಿವೆ. ನವರಾತ್ರಿಯ ಒಂಬತ್ತು ದಿನ ಶಕ್ತಿದೇವತೆಗೆ ಪೂಜೆ ಸಲ್ಲಿಸಲಾಗುತ್ತದೆ. ಇಲ್ಲಿ ಆರಾಧನೆಗೊಳ್ಳುತ್ತಿರುವ ಶಕ್ತಿ ದೇವತೆ ಶಿಷ್ಟ ಪರಂಪರೆಯ ಲಕ್ಷ್ಮೀ, ದುರ್ಗೆ, ಸರಸ್ವತಿಗಿಂತಲೂ ಬೇರೆಯಾಗಿ ಎರಡು ಕೈಗಳು ಮತ್ತು ರುಂಡ ಮಾತ್ರ ಕಾಣುವ ಅಥವಾ ಕೈಗಳ ಬದಲು ಪಕ್ಕದಲ್ಲಿ ತ್ರಿಶೂಲ ಅಥವಾ ಕೈಯಾಕಾರದ ಮರದ ಅಥವಾ ಶಿಲೆಯ ಕೈಗಳ ಆಕಾರದಲ್ಲಿರುತ್ತಾಳೆ. ತುಂಬುಬಳೆಗಳನ್ನು ತೊಟ್ಟಿರುವ ಕೈಯಾಕಾರ, ತ್ರಿಶೂಲದ ಪ್ರತಿಮೆಯಾಗಿರುತ್ತದೆ. ಇದರ ಎದುರಲ್ಲಿ ಕುಂಕುಮದ ರಾಶಿ ಹಾಕಿರುತ್ತಾರೆ. ಹಾಗೂ ತಲೆ–ಹಣೆಗೆ ಕುಂಕುಮವನ್ನು ಥಾಳಾಗಿ ಮೆತ್ತಿರುತ್ತಾರೆ. ಶಿಷ್ಟರ–ಹಲವು ಕೈಗಳಿಂದ ಕೂಡಿದ, ನಿಂತ ಅಥವಾ ಕುಳಿತ ಶೈಲಿಯ ಮೈತುಂಬ ಒಡವೆ ಬಟ್ಟೆ ತೊಟ್ಟ ವಿಗ್ರಹಗಳ ಬದಲು ಈ ರೀತಿಯ ಶಿಲ್ಪಗಳನ್ನು ಜನಪದರು ಬಳಸಿದರು. ಕೆಲವೆಡೆಗಳಲಂತೂ ಶಕ್ತಿ ದೇವತೆ ಕೇವಲ ಆರು–ಎಂಟು ಅಂಗುಲ ಎತ್ತರ, ೬–೮ ಅಂಗುಲ ಅಗಲದ ಚಿಕ್ಕ ಲಿಂಗವಾಗಿರುತ್ತದೆ. ಕೊಲ್ಲೂರು ಮೂಕಾಂಬಿಕೆ ಮೂಲ ರೂಪದಲ್ಲಿ ಲಿಂಗಾಕಾರವಾಗಿದೆ. ಅಂತೆಯೇ ಕವಚದಒಳಗೆ ಲಿಂಗಾಕಾರ ಇರುವ ಅನೇಕ ದೇವಿ ದೇವಾಲಯಗಳು ಕರಾವಳಿಯಲ್ಲಿವೆ. ಪರಶುರಾಮ ಸೃಷ್ಟಿಯೊಂದಿಗೆ ಕತೆಹೊಂದಿರುವ ಕರಾವಳಿಯ ಈ ಪ್ರದೇಶದಲ್ಲಿ, ಪರಶುರಾಮನ ತಾಯಿ ಎಲ್ಲಮ್ಮ–ರೇಣುಕೆಯ ರುಂಡ ಹೋಲುವ ಶಕ್ತಿದೇವತೆ ಎಲ್ಲ ಶ್ರಮಜೀವಿ ಶೂದ್ರ ವರ್ಗದ ಆರಾಧ್ಯ ದೈವವಾಗಿದೆ. ಈ ವಿಗ್ರಹದ ಪೂಜೆಗೆ ಬ್ರಾಹ್ಮಣ ಪುರೋಹಿತರ ಬದಲಾಗಿ ಶೂದ್ರ ವರ್ಗದವರೇ ಆರಾಧಿಸುವ ಪದ್ಧತಿ ಇದೆ. ಭೂದೇವಿಯೆಂದೆ ಗುರುತಿಸಲ್ಪಡುವ ಮೂರ್ತಿಗಳು, ವಿವಿಧ ಆಕಾರಗಳು ಕರಾವಳಿಯಲ್ಲಿ ಕಾಣಬರುತ್ತವೆ. ರೇಣುಕಾ ಹಾಗೂ ಕೊಂಕಣ ಎಂಬುವುದು ಭೂದೇವಿಯನ್ನು ಕರೆಯುವ ಹೆಸರುಗಳಾಗಿವೆ[೧೮೧]. ಶಾಂತೇರಿಯನ್ನು ಹುತ್ತದ ರೂಪದಲ್ಲೇ ಆರಾಧಿಸುತ್ತಾರೆ.

ಕರಾವಳಿಯಲ್ಲಿ ವ್ಯಾಪಕವಾಗಿ ಕಾಣಬರುವ ಇನ್ನೊಂದು ಜನಪದ ಆಚರಣೆ ಎಂದರೆ ಬಲೀಂದ್ರ ಪೂಜೆ ಬಲೀಂದ್ರನನ್ನು ಪ್ರತ್ಯೇಕ ಮೂರ್ತಿ ರೂಪದಲ್ಲಿ ಆರಾಧಿಸದೇ ಆಹಾರೋತ್ಪತ್ತಿ ಹಾಗೂ ಸಂರಕ್ಷಣೆಯಲ್ಲಿ ಬಳಕೆಯಾಗುವ ಉಪಕರಣಗಳ ಗುಚ್ಛದ[೧೮೨] ರೂಪದಲ್ಲಿ ಆರಾಧಿಸುತ್ತಾರೆ. ಬಹುತೇಕ ತಳಸಮುದಾಯದ ಎಲ್ಲ ಕುಟುಂಬಗಳು ಬಲೀಂದ್ರನ ಪೂಜೆ ಮಾಡುತ್ತಾರೆ. ಕೃಷಿ ಸಮಾಜದ ದೊರೆ ಎನಿಸಿದ್ದ ಬಲೀಂದ್ರನು ದೀಪಾವಳಿಯ ದಿನಗಳಲ್ಲಿ ತನ್ನ ನಾಡಿನ ಪ್ರಜೆಗಳ ಯೋಗಕ್ಷೇಮ ವಿಚಾರಿಸಲು ಬರುತ್ತಾನೆ. ಅಂದು ಆತನನ್ನು ಬಹುವಿಜ್ರಂಭಣೆಯಿಂದ ಸ್ವಾಗತಿಸಲು

ಅವನ ಒಕ್ಕಲಾಗಿದ್ದ ಕೃಷಿ ಸಮಾಜದ ಜನರು ಸಾಲು ದೀಪ ಹಚ್ಚಿ, ಬೆಳಕಿನಲ್ಲಿ, ತಮ್ಮ ಕೃಷಿ ಬಳಕೆಯ ಸಾಧನಗಳಾದ ಕತ್ತಿ, ಕೊಡಲಿ, ಕುಡಗೋಲು, ಒನಕೆ, ಮೊರ, ಗೆರಸು, ಸಾರಣಿಗೆ, ಬೀಸುವ ಕಲ್ಲು, ಕೊಳಗ, ತಕ್ಕಡಿ, ಕೋವಿ, ಬರ್ಚಿ, ಈಟಿ, ದೋಣಿ, ಬಲೆ, ಹುಟ್ಟು ಮುಂತಾದವನ್ನು ತೊಳೆದು, ಒರೆಸಿ, ಮನೆಯ ಜಗುಲಿಯಲ್ಲಿ ಒಂದೆಡೆ ಓರಣವಾಗಿ ಕೂಡಿಟ್ಟು[೧೮೩] ಹೂಹಾರಗಳಿಂದ ತಳಿರು ತೋರಣಗಳಿಂದ ಶೃಂಗರಿಸಿ ಪೂಜಿಸುತ್ತಾರೆ. ಹೀಗೆ ಪೂಜಿಸುವವರು ಕೇವಲ ಕೃಷಿಕರಾಗಿರದೇ ಹಸಲರು, ಮುಕ್ರಿಗಳು, ಮರಾಠಿಗರು, ಹರಿಕಂತ್ರ, ಖಾರ್ವಿ, ಅಂಬಿಗ, ಕರಿಒಕ್ಕಲು, ಗಾಮೊಕ್ಕಲು ಮುಂತಾದ ವೃತ್ತಿ– ಜಾತಿ– ಪಂಗಡದವರು ಸೇರಿದ್ದಾರೆ.

ಮೀನುಗಾರರರು ಮೀನುಗಾರಿಕೆಯ ಆರಂಭದ ಮುಂಚೆ ಒಂದು ದಿನ ತಮ್ಮ ವೃತ್ತಿಯನ್ನು ಬದಿಗಿರಿಸಿ, ಕಡಲಮ್ಮನ ಪೂಜೆ ಮಾಡುವ ಪದ್ಧತಿಯಿದೆ. ತಮ್ಮ ಬದುಕಿಗೆ ಸಮ್ಮಧ್ಧಿಯನ್ನು ಹಾಗೂ ಜೀವಕ್ಕೆ ಭದ್ರತೆಯನ್ನು ಬಯಸಿ ಈ ಆರಾಧನೆಯನ್ನು ಮಾಡುತ್ತಾರೆ. ಇಂದಿಗೂ ನದಿ ಹಾಗೂ ಕಡಲು ಅವರ ತಾಯಿ ಎಂಬ ಭಾವನೆ ಈ ಕಡಲ ಮಕ್ಕಳದು. ಗೋಕರ್ಣದಲ್ಲಿ ಸ್ಥಳೀಯ ಮೀನುಗಾರರು ಗಂಗಾವಳಿ ನದಿಯನ್ನು ಪಾರ್ವತಿಯಾಗಿಯೂ, ಕಡಲನ್ನು ಶಿವನೆಂದೂ ತಿಳಿದು, ಅವರಿಬ್ಬರ ಮದುವೆಗೆ–ಹೆಣ್ಣು ನೋಡುವುದು, ಒಪ್ಪಿಗೆ ಪಡೆಯುವುದು ನಂತರ ಮದುವೆ ಮಾಡಿಸುವ ಆಚರಣೆಯನ್ನು ಮಾಡುತ್ತಾರೆ. ತಿಂಗಳು ಗಟ್ಟಲೆ ದಿನ ನಡೆಯುವ ಈ ಆಚರಣೆ, ಭಯ ಭಕ್ತಿ ಹಾಗೂ ಉತ್ಸಾಹದ ಪ್ರತೀಕವಾಗಿದೆ. ಆ ಮದುವೆಯ ನಂತರ ಇಲ್ಲಿಯ ಶಿಷ್ಯ ಪರಂಪರೆಯವರ ವಾರ್ಷಿಕ ಆಚರಣೆಗಳು ಆರಂಭವಾಗುತ್ತವೆ.

ಮೈಲಾರಲಿಂಗದ ನಂಬಿಕೆಯಲ್ಲಿ ಬರುವ "ಕೊಂಕಣಸುತ್ತಿ ಮೈಲಾರಕ್ಕೆ ಹೋಗು" "ಗುಡ್ಡ ಸುತ್ತಿ ಮೈಲಾರಕ್ಕೆ ಹೋಗು" ಎಂಬುವುದು ಕರಾವಳಿಯಲ್ಲಿದ್ದ ಆರಾಧನಾ ಪದ್ದತಿಯನ್ನು ಸೂಚಿಸುತ್ತದೆ. ಮೈಲಾರನು "ಕೊಂಕಣ ಪ್ರದೇಶದ ಗುಡ್ಡ"ದ ತುದಿಯ ದೈವತ[೧೮೪] ಎಂಬುದನ್ನು ತೋರಿಸುತ್ತದೆ. ಕೊಂಕಣ ಪ್ರದೇಶದ ಜನಪದರ ದೈವ ಕಾಲಕ್ರಮೇಣ ಮೈಲಾರಕ್ಕೆ ಹೋಗಿ ಅಲ್ಲಿ ಪ್ರತಿಷ್ಠಾಪಿತವಾಗಿದ್ದುದು ಇಲ್ಲಿ ಸ್ಪಷ್ಟವಾಗುತ್ತದೆ. ನಾಗಾರಾಧನೆ ಕರಾವಳಿಯಲ್ಲಿ ವ್ಯಾಪಕವಾಗಿ ಕಂಡು ಬರುವ ಆರಾಧನೆಯಾಗಿದೆ. ಒಂದೂವರೆ, ಎರಡು ಮೊಳಉದ್ದದ ಶಿಲ್ಪಗಳಲ್ಲಿ, ಉಬ್ಬು ಶಿಲ್ಪದಲ್ಲಿ ನಾಗನನ್ನು ಕೆತ್ತಿ ಇರಿಸಿ ಪೂಜಿಸುವುದು ಕಾಣುತ್ತೇವೆ. ಈ ನಾಗನ ಕಲ್ಲಿನಲ್ಲಿ ಮೂರು, ಐದು, ಏಳು ಹೆಡೆಯ ನಾಗನ ಉಬ್ಬು ಚಿತ್ರವಿರುತ್ತದೆ. ಅಥವಾ ಒಂದೇ ಕಲ್ಲಿನಲ್ಲಿ ಒಂದು ನಾಗನ ಪಕ್ಕದಲ್ಲಿ ಮೊಟ್ಟೆಗಳು, ಒಂದೇ ಕಲ್ಲಿನಲ್ಲಿ ಎರಡು ನಾಗ ಅಥವಾ ಒಂದು ದೊಡ್ಡನಾಗ ಅಕ್ಕಪಕ್ಕದಲ್ಲಿ ಎರಡು ಚಿಕ್ಕನಾಗನ ಪ್ರತಿಮೆಗಳು ಇರುತ್ತವೆ. ಗೇರಸೊಪ್ಪಾ ಪ್ರದೇಶದಲ್ಲಿ ಮೂರು ನಾಗಗಳು ಹಣೆದುಕೊಂಡಿರುವ, ಎರಡು ನಾಗಗಳಮುಖ ಮೇಲೆ, ಒಂದು ನಾಗದ ಮುಖ ಕೆಳಗೆ ಇರುವ

ಕಲ್ಲುಗಳು ಕಾಣುತ್ತವೆ. ಅಂತೆಯೇ ಮಧ್ಯದ ಒಂದು ನಾಗ ಮೇಲ್ಮುಖ ಅಕ್ಕಪಕ್ಕದ ಎರಡು ನಾಗ ಕೆಳ ಮುಖವಾಗಿರುವ ಶಿಲ್ಪಿಗಳು ಕಂಡು ಬರುತ್ತವೆ. ನಾಗನಎಡೆ, ನಾಗನಬನ ಅಥವಾ ಯಾವುದಾದರೂ ಮರದ ಬುಡದಲ್ಲಿ ಇವುಗಳನ್ನು ಕಾಣಬಹುದು. ಕೆಲವೆಡೆ ಇವುಗಳಿಗೆ ದೇವಾಲಯ, ಆರಾಧನಾ ಸ್ಥಳಗಳ ಪಕ್ಕದಲ್ಲಿ ಪ್ರತ್ಯೇಕ ಸ್ಥಳ ನಿಗದಿ ಮಾಡಿ ಚಿಕ್ಕ ಗುಡಿಯ ರೂಪ ಮಾಡಿರುತ್ತಾರೆ. ಬನವಾಸಿ ಚುಟುಕುಲದ ಶಾಸನ ಒಂದರಲ್ಲಿ ನಾಗನನ್ನು ನೋಡಬಹುದು. ಆಳುಪರಶಾಸನ ಶಿಲ್ಪದಲ್ಲೂ ನಾಗ ಇರುತ್ತದೆ.

ವೀರರಿಗೆ, ನಾಡಿಗಾಗಿ ಮಡಿದವರಿಗೆ, ಊರ ಮುಖಂಡರಿಗೆ ಮತ್ತು ಸತಿಯಾದ ಮಹಾತಾಯಿಗೆ, ಯುದ್ಧದಲ್ಲಿ ಸೆಣಸಿ ಆತ್ಮಾರ್ಪಣೆ ಮಾಡಿಕೊಂಡ ಹೆಣ್ಣಿಗೆ ಅತ್ಯಂತ ಗೌರವದ ಸ್ಥಾನ ನೀಡಿ ಅವರನ್ನು ಜಟ್ಟಿಗ-ಬೀರ, ಜಟ್ಗಾ, ಮಹಾಸತಿ, ಕೆಂಡದ ಮಹಾಸತಿ ಮುಂತಾದ ಹೆಸರುಗಳಲ್ಲಿ ಆರಾಧಿಸುವುದು ಕಾಣಬರುತ್ತದೆ. ಜಟ್ಟಿಗ ಕಲ್ಲಿನಲ್ಲಿ ಬಂದೂವರೆ ಅಡಿಯಿಂದ ಒಂಬತ್ತು ಹತ್ತು ಅಡಿಯವರೆಗೂ ಕಂಡುಬರುತ್ತದೆ. ಹಾಗೇ ಮರದಲ್ಲೂ ಇವುಗಳನ್ನು ನಿರ್ಮಿಸಿದ್ದು ಕಂಡುಬರುತ್ತದೆ.

ಇನ್ನು ದಕ್ಷಿಣದ ಬದಿಯಲ್ಲಿ ತಮ್ಮನ್ನು ಸದಾ ರಕ್ಷಿಸುವ ದೈವಗಳೆಂಬ ಉತ್ಕಟ ನಂಬಿಕೆಯೊಂದಿಗೆ ಆರಾಧನೆಗೆ ಒಳಪಡುವ ದೈವಗಳ ದೊಡ್ಡ ಸಂಖ್ಯೆಯಿದೆ. ಮೇಲೆ ಕೊಟ್ಟಿರುವ ಹೆಸರುಗಳಿಗೆ ಇನ್ನು ಕೆಲವು ಸೇರ್ಪಡೆಯಾಗಲೂಬಹುದು. ಒಂದೊಂದು ಕೂಡು ಕುಟುಂಬ, ವೃತ್ತಿ ಗುಂಪುಗಳು ತಮ್ಮದೇ ಆದ ದೈವವನ್ನು ಹೊಂದಿದ್ದಾರೆ. ಅದಕ್ಕೆ ಪ್ರತಿವರ್ಷ ನೇಮ, ವಾರ್ಷಿಕ ಪೂಜೆಗಳನ್ನು ಸಲ್ಲಿಸುತ್ತಾರೆ. ಕಡಲಿಗೂ ಈ ದೈವಕ್ಕೂ, ಕಾಡಿಗೂ ಈ ದೈವಗಳಿಗೂ ನಿಕಟ ಸಂಬಂಧವಿದೆ. ಕೃಷಿ, ಮೀನುಗಾರಿಕೆ, ಅರಣ್ಯ ಉತ್ಪನ್ನಗಳ ಬಳಕೆ, ಕಡಲೋತ್ತರ ವ್ಯಾಪಾರ ಮುಂತಾದವುಗಳೊಂದಿಗೆ ದೈವಗಳ ಸಂಬಂಧಗಳಿವೆ. ಅಣ್ಣ ತಮ್ಮ ದೈವಗಳೆನಿಸಿದ ಮಂಜಿಷ್ಣಾರ್, ಪುಳ್ಳೊಟ್ನಾರ್ ದೈವಗಳು ಪಶ್ಚಿಮ ಸಮುದ್ರದಲ್ಲಿ ನೌಕಾಯಾನ ಮಾಡುತ್ತ ಮಂಜೇಶ್ವರ ಅಳಿವೆ ಮೂಲಕ ಉದ್ಯಾವರಕ್ಕೆ ಬಂದು ನೆಲೆಸಿದುದೆಂದು ಹೇಳಲಾಗಿದೆ[೧೮೫]. ಅಲಿ ಭೂತ ಎಂಬುವುದು ಮುಸ್ಲೀಂ ಭೂತ. ಕಡಲ ಮೂಲಕ ದೈವಗಳ ಸಂಪರ್ಕವೂ ಉಂಟಾಗಿದೆ ಎಂದು ಇದು ತೋರಿಸಿ ಕೊಡುತ್ತದೆ. ಕಡಲನ್ನು ತಮ್ಮ ಬದುಕಿನ ಭಾಗ ಎಂದು ನಂಬಿರುವ ಮೀನುಗಾರರು, ಕಡಲಮ್ಮನಿಗೆ ಹಲವು ವಿಧದ ಪೂಜೆ-ಪುನಸ್ಕಾರ ಅರ್ಪಿಸುವುದಿದೆ. ಸಮೃದ್ಧ ಮತ್ಸ್ಯರಾಶಿ ಸಿಗಲೆಂದು, ಉತ್ಪಾತಗಳು ಉಂಟಾಗದಿರಲೆಂದು ಬೇಡಿ, ವಿವಿಧ ರೀತಿಯ ಸಮರ್ಪಣೆ ನಡೆಸುತ್ತಾರೆ. ಬೊಬ್ಬರ್ಯ ಮೀನುಗಾರರ ದೈವವಾಗಿದೆ[೧೮೬]. ಹೊಸ ದೋಣಿ ಕಡಲಿಗಿಳಿಸುವಾಗ, ರಜೆಯ ನಂತರ ಕಡಲಿಗೆ ಇಳಿಯುವಾಗ ಮತ್ತು ನಿರ್ದಿಷ್ಟ ಪಡಿಸಿದ ಒಂದು ದಿನ ಕಡಲ ಮಕ್ಕಳು,

ಕಡಲಮ್ಮನಿಗೆ ಚಿನ್ನದ ಸರ ಹಾಕಿ ಪೂಜೆ ಸಲ್ಲಿಸುವುದಿದೆ. ತೆಂಗಿನ ಕಾಯಿಗೆ ಚಿನ್ನದ ಸರ ತೊಡಿಸಿ ಕಡಲಿಗೆ ಬಿಡುತ್ತಾರೆ.

ಜನಮಾನಸದಲ್ಲಿ ಹಾಸುಹೊಕ್ಕಾಗಿರುವ ದೈವಗಳು ದೇಶಿಯ-ವಿದೇಶಿಯ ದೈವಗಳೆಂಬ ಭೇದ ಹೊಂದಿದ್ದರೂ, ಆಚರಣೆಯಲ್ಲಿ ಯಾವುದೇ ವ್ಯತ್ಯಾಸಗಳಿಲ್ಲ. ಜನಪದರಿಗೆ ತಮ್ಮದೇ ಆದ ದೇವರ ಅಗತ್ಯ ಕಂಡುಬಂದಾಗ ಈ ರೀತಿಯ ಸೃಷ್ಟಿಮಾಡಿ ಕೊಂಡಿದ್ದಾರೆ. ಬಪ್ಪನಾಡಿನ ದುರ್ಗಾಪರಮೇಶ್ವರಿ, ಕಟಿಲು ದುರ್ಗಾಪರಮೇಶ್ವರಿ, ಪೊಳಲಿ ರಾಜರಾಜೇಶ್ವರಿ ಮುಂತಾದವು ಉಲ್ಲಾಲ್ತಿ ಎಂದು ಸಂಭೋಧಿಸಲ್ಪಡುತ್ತಾರೆ[೧೮೭]. ಇದರಲ್ಲಿ ದೈವಗಳ ಬಗ್ಗೆ ಜನಪದರ ನಂಬಿಕೆ ಬಿಂಬತವಾಗುತ್ತದೆ.

ಹಿಂದೂಯಿಸಂನ ಆಧುನಿಕ ವಿವರಣೆಯು ಬಹುಮಟ್ಟಿಗೆ ಬ್ರಾಹ್ಮಣ್ಯ ಪ್ರಧಾನವಾದ ರೂಪುರೇಷಗಳನ್ನು ಪಡೆದುಕೊಂಡಿದೆ. ಅದು ತನ್ನೊಳಗೆ ಬೌದ್ಧರು, ಜೈನರು, ವೈಷ್ಣವರು. ಶೈವರು, ಶಾಕ್ತರು ಮುಂತಾದ ವಿಭಿನ್ನ ಪಂಗಡಗಳನ್ನು ಒಳಗು ಮಾಡಿಕೊಂಡಿದೆ. ಈ ಒಳಗೊಳ್ಳುವಿಕೆಯಲ್ಲಿ ತಂದೆತನದ ಅಹಂಕಾರ ಮತ್ತು ಮೇಲರಿಮೆಗಳಿವೆ[೧೮೮] ಇದೆಲ್ಲದಕ್ಕೂ ಪ್ರತಿಯಾಗಿ, ಪ್ರತಿಭಟಿಸಿ ಜನಪದರು ಯಾವುದೇ ಒತ್ತಡಗಳಿಗೆ ಒಳಗಾಗದೇ ತಮಗೆ ಬೇಕಾದಂತೆ ದೈವಸೃಷ್ಟಿ ಮಾಡಿಕೊಂಡಿದ್ದರು. ಆಸ್ತಿಕತೆಯು ಅನಿವಾರ್ಯವೇನೂ ಆಗಿರಲಿಲ್ಲ[೧೮೯]. ಆಚರಣೆಗಳು ರೂಢಿಗತವಾಗಿ ಯಾಂತ್ರಿಕವಾಗಿ ನಡೆಯುತ್ತಿತ್ತು. ಒಟ್ಟಿನಲ್ಲಿ ತಮಗೂ ಒಂದು ಆರಾಧನಾ ರೀತಿನೀತಿ ರೂಪಿಸಿಕೊಂಡು, ಸರಳವಾಗಿ ಆಚರಿಸುತ್ತಿದ್ದರು. ಇದಕ್ಕೊಂದು ಉತ್ತಮ ಉದಾಹರಣೆ ಎಂದರೆ ಈ ಎಲ್ಲಾ ದೇವರುಗಳಿಗೆ ನೈವೇದ್ಯವಾಗಿ ತಾವು ಸೇವಿಸುವ ಆಹಾರವನ್ನೇ ಕೊಡುವುದು ಹಾಗೂ ತಾವೇ ಪೂಜಿಸುವುದು ನೋಡಬಹುದು. ಅಲ್ಲದೇ ಈ ಪೂಜೆಯೂ ಕೂಡಾ ಸರಳವೂ, ಆಡಂಭರ ರಹಿತವೂ ಆಗಿರುತ್ತವೆ.

೫.೧.೧೧ ನಾಗ-ಯಕ್ಷ-ದೈವಾರಾಧನೆ

ಕರಾವಳಿಯಲ್ಲಿ ಕಂಡುಬರುವ ಧಾರ್ಮಿಕ ಹಿನ್ನಲೆ ಆರಾಧನೆಗಳ ಕುರಿತು ಮೇಲೆ ವಿವರಿಸಲಾಗಿದೆ. ಇಲ್ಲಿ ಕರಾವಳಿಯಲ್ಲಿ ಕಂಡುಬರುವ ಅಪರೂಪದ ನಾಗ-ಯಕ್ಷ ದೈವಗಳ ಆರಾಧನೆಗಳ ಕುರಿತು, ಅದರ ಹಿನ್ನೆಲೆಯ ಕುರಿತು ಸಂಕ್ಷಿಪ್ತವಾಗಿ ಚರ್ಚಿಸಲಾಗಿದೆ.

ಕರಾವಳಿಯ ಉದ್ದಕ್ಕೂ ಕಂಡುಬರುವ ಆರಾಧನಾ ಸಂಪ್ರದಾಯದಲ್ಲಿ ನಾಗಾರಾಧನೆ ಪ್ರಮುಖವಾದದ್ದು. ಪ್ರಪಂಚದ ವಿವಧೆಡೆ ನಾಗಾರಾಧನೆ ಕಂಡುಬರುತ್ತದೆ. ಅಂತೆಯೇ ಭಾರತದಾದ್ಯಂತ ನಾಗಾರಾಧನೆಯಲ್ಲಿ ವಿವಿಧ ಸಂಪ್ರದಾಯಗಳಿವೆ.

ನಾಗಪಂಚಮಿಯೆಂದು ಕರಾವಳಿಯಲ್ಲಿ ನಾಗನ ವಿಗ್ರಹಗಳಿಗೆ ಹಾಲೆರೆಡು ಪೂಜಿಸುವ ಪದ್ಧತಿ ಇದೆ. ನಾಗ ಸಂತಾನ ಅಭಿವೃದ್ಧಿಯ, ಐಶ್ವರ್ಯ ನೀಡುವ ಹಾಗೂ ಆರೋಗ್ಯ ಪ್ರದಾಯಕ ನೆಂಬ ನಂಬಿಕೆಯಿದ್ದು, ಮನೆಯ ಹಿಂಬಾಗಗಳಲ್ಲಿ ಅಥವಾ ಹಿತ್ತಲ ಆವಾರಣದಲ್ಲಿ ಸಣ್ಣ ಗುಡಿ ನಿರ್ಮಿಸಿ ನಾಗನ ಉಬ್ಬು ಕೆತ್ತನೆಯ ಸಣ್ಣ ಕಲ್ಲನ್ನಿಡುತ್ತಾರೆ. ಹಲವೆಡೆ ಮರಗಳ ಬುಡದಲ್ಲಿ ನಾಗನ ಪ್ರತಿಮೆ ಇಡುವುದೂ ಇದೆ. ಕೆಲವಡೆ ಹುತ್ತಕ್ಕೆ ಪೂಜೆ ಮಾಡುವ ಪದ್ಧತಿ ಇದೆ.

ನಾಗರಾಧನೆಯ ಪ್ರಾಚೀನತೆಯ ಅಧ್ಯಯನ ಆಳವಾಗಿ ನಡೆದಿಲ್ಲ. ನಾಗಾರಾಧನೆಯ ಪ್ರಾಚೀನತೆ ಚರಿತ್ರೆ ಕಾಲಕ್ಕೆ ಹೋದರೂ ಇದು ಮೂಲದಲ್ಲಿ ಯಾರದೆಂಬ ಸ್ಪಷ್ಟತೆ ಇಲ್ಲ. ನಾಗರಾಧನೆಯು ಬ್ರಾಹ್ಮಣೇತ್ತರರಲ್ಲಿ ಹೆಚ್ಚಾಗಿ ಕಂಡುಬಂದರೂ, ಪೂಜೆ ಪುನಸ್ಕಾರಗಳನ್ನು ನಡೆಸುವವರು ಬ್ರಾಹ್ಮಣರಾಗಿದ್ದಾರೆ. ಈ ಬೆಳವಣಿಗೆಯ ಕಾಲಾವಧಿ ವಿಭಾಗಿಸುವುದು ಕಷ್ಟ ಸಾಧ್ಯ. ವೈದಿಕ ಆಚರಣೆಗಳನ್ನು ಹೋಲುವ ಇಲ್ಲಿಯ ರೀತಿ ನೀತಿಗಳು ಬ್ರಾಹ್ಮಣರವೇ ಅಥವಾ ಶೂದ್ರ ಜನಾಂಗದ್ದೇ ಎಂದು ವಿಭಾಗಿಸುವುದು ಸಾಧ್ಯವಾಗಿಲ್ಲ. ಆರಂಭದಲ್ಲಿ ಇದು ವೈದಿಕೇತರ ಆರಾಧನಾ ಪದ್ಧತಿಯಾಗಿದ್ದು, ಎಲ್ಲ ಆರಾಧನೆಗಳು ಆರ್ಯೀಕರಣಗೊಂಡಂತೆ ಇದೂ ಕಾಲಕ್ರಮೇಣ ಮೇಲ್ಜಾತಿಯ–ಮೇಲ್ವರ್ಗದ ಆರಾಧನಾ ಪದ್ಧತಿಯಾಗಿ ರೂಪುಗೊಂಡಿರುವುದಾಗಿ ಊಹಿಸಬಹುದು. ಬಹುಮುಖ್ಯವಾಗಿ ನಾಗಾರಾಧನೆ ಬಳಸುವ ಢಕ್ಕೆ ಚರ್ಮವಾದ್ಯವಾಗಿದ್ದು, ಇದನ್ನು ಬ್ರಾಹ್ಮಣರು ಬಳಸುವುದು ನೋಡಿದಾಗ ಇದರ ಅರಿವಾಗುತ್ತದೆ.

ಗೋಕರ್ಣದ ಬಳಿ ತಗರಪುರ, ನಾಗರಖಂಡ ಎಂದು ಕರೆಯಲ್ಪಡುವ ಸ್ಥಳವಿದೆ. ಅಲ್ಲದೇ ಸಮಗ್ರ ಕರಾವಳಿ ನಾಗರಖಂಡ ಎಂದು ಕರೆಯಲ್ಪಟ್ಟಿತ್ತು. ಹೆಚ್ಚಾಗಿ 'ನಾಗ' ಎಂಬ ಆದಿವಾಸಿಗಳು ಇಲ್ಲಿ ವಾಸವಾಗಿದ್ದು, ನಾಗ ಇವರ ಲಾಂಛನವಾಗಿದ್ದಿತ್ತು.

ಕರಾವಳಿಯ ಉದ್ದಕ್ಕೂ ಹಲವು ನಾಗಕ್ಷೇತ್ರಗಳಿವೆ. ಅಲ್ಲದೇ ವೈದಿಕ ಎಂದು ಗುರುತಿಸಲ್ಪಡುವ ದೇವಾಲಯಗಳ ಪ್ರಾಕರಗಳಲ್ಲಿ ನಾಗನ ಶಿಲ್ಪಗಳು ಸಾಮಾನ್ಯವಾಗಿ ಕಂಡುಬರುತ್ತದೆ. ದಕ್ಷಿಣ ಕನ್ನಡದಲ್ಲಿ ತಂಬಿಲ, ಡೆಕ್ಕೆಬಲಿ, ನಾಗಮಂಡಲ, ಆಶ್ಲೇಷಬಲಿ ಆಚರಣೆ ವೈಭವಾಗಿ ನಡೆಯುತ್ತದೆ. ಇತ್ತೀಚೆಗೆ ಇದು ಆರಾಧನೆಗಿಂತಲೂ ರಾಜಕೀಯ ಶಕ್ತಿಗಳಿಕೆಯ ಕಾರ್ಯದಂತೆ ಬದಲಾಗಿದೆ. ಆದರೆ ಸಾಮಾನ್ಯ ಜನವರ್ಗವಾಗಿರುವ ಮೀನುಗಾರರು, ಉಪ್ಪಾರರು, ಪೂಜಾರರು, ಬಂಟರು, ನಲಿಕೆಯರು, ಪಾಣರಾದಿಯಾಗಿ ಎಲ್ಲರೂ ನಾಗನ ಆರಾಧನೆಯನ್ನು ಮಾಡುವವರಾಗಿದ್ದಾರೆ.

ಸುಬ್ರಹ್ಮಣ್ಯನ ಕ್ಷೇತ್ರಗಳು ಕರಾವಳಿಯ ಉದ್ದಕ್ಕೂ ಇದ್ದು, ಜೈನರೂ ನಾಗನ ಆರಾಧಕರಾಗಿರುವುದು ಕಂಡುಬರುತ್ತದೆ. ನಾಗಬ್ರಹ್ಮ, ಜೈನನಾಗಬ್ರಹ್ಮ ಮುಂತಾದ ಹೆಸರುಗಳಲ್ಲಿ ಇಲ್ಲಿ ಆರಾಧನೆಗಳು ಕಂಡುಬರುತ್ತದೆ. ಕರಾವಳಿಯ ಸಾಮಾಜಿಕ ವ್ಯವಸ್ಥೆಯಲ್ಲಿ ನಾಗರಾಧನೆ ಪ್ರಬಲ

ಸ್ಥಾನ ಪಡೆದಿದ್ದು, ಸ್ಥಳೀಯವಾಗಿ ಬೆಳೆದು ಬಜಂದ ಆರಾಧನಾ ಪದ್ಧತಿ ಎಂದು ಹೇಳಬಹುದು. ಅಲ್ಲದೇ ಈ ಪದ್ಧತಿ ಹೊರದೇಶಗಳ ಯಾವದಾದರೂ ಭಾಗದ ಪ್ರಭಾವದಿಂದ ಬಂದಿದ್ದೇ ಎಂದು ಗುರುತಿಸುವುದು ಕಷ್ಟವಾದರೂ ಜನಪದರ ನಂಬಿಕೆಯಲ್ಲಿರುವ ಕಡಲದೇವತೆ, ನಾಗಕನ್ಯೆ ಮುಂತಾದ ಕಲ್ಪನೆಗಳು ಇದು ಸ್ಥಳೀಯವಾಗಿ ಕಡಲು-ಕಾನು ಹಾಗೂ ನದಿಗಳ ಪ್ರಭಾವದಿಂದ ಹುಟ್ಟಿಬಂದ ಆರಾಧನಾ ಪದ್ಧತಿಯಾಗಿದೆ ಎಂದು ನಂಬಿಕೆ.

ಭೂತಾರಾಧನೆ ತುಳುನಾಡಿನಲ್ಲಿ ವ್ಯಾಪಕವಾಗಿದೆ. ಇದು ತಮ್ಮ ಪೂರ್ವಜರನ್ನೂ ನೆನಪಿಸಿಕೊಳ್ಳುವ ಹಾಗೂ ಗೌರವಿಸುವ ಆರಾಧನೆಯಾಗಿ ಕಂಡುಬಂದರೂ, ಕೆಳಜಾತಿಯವರ ಶೋಷಣೆ ಆಗಿರುವುದು ಕಂಡುಬರುತ್ತದೆ. ವೈದಿಕ ಪದ್ಧತಿಯ ಮೇಲ್ಜಾತಿಯವರು ದೇವರನ್ನು ಆರಾಧಿಸಿದರೆ, ಕೆಳಜಾತಿಯವರು ದೈವಗಳನ್ನು ಆರಾಧಿಸುತ್ತಾರೆ. ಭೂತರಾಧನೆಯ ದೈವ ಕಟ್ಟುವ ದಿನ ಕೆಳಜಾತಿಯವರನ್ನು ಉನ್ನತ ಸ್ಥಾನಕ್ಕೆ ಏರಿಸಿ ಉಳಿದ ದಿನಗಳಲ್ಲಿ ಅವರ ಶೋಷಣೆಗೆ ಮೇಲ್ಜಾತಿಯವರು ಅವಕಾಶ ಕಲ್ಪಿಸಿಕೊಂಡಿದ್ದಾರೆ.

ಭೂತಾರಾಧನೆಯ ಎಲ್ಲಾ ಚಟುವಟಿಕೆಗಳು ಸ್ಪಷ್ಟವಾಗಿ ಕೆಳಜಾತಿಯವರ ಆರಾಧನೆ ಎಂದು ತಿಳಿಸುತ್ತದೆ. ಪಾಡ್ದನಗಳನ್ನು ಹಾಡುವರು ಕೆಳಜಾತಿಯವರಾಗಿರುವಂತೆ, ಭೂತದ ವೇಷಹಾಕುವವರೂ ಕೆಳಜಾತಿಯವರಾಗಿದ್ದಾರೆ. ಇದನ್ನು ವೈಭವಿಕರಿಸುತ್ತಾ ಶ್ರೇಣಿಕೃತ ಸಮಾಜ ವ್ಯವಸ್ಥೆ ಮುಂದುವರಿಸುವಂತೆ ಕಂಡುಬರುತ್ತದೆ. ಮೇಲ್ವರ್ಗದವರು ಪೋಷಿಸಿಕೊಂಡು ಬಂದ ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆಯನ್ನ ಮುಂದುವರಿಸಿಕೊಂಡು ಹೋಗಲಿರುವ ಮಾರ್ಗದಂತೆ ಈ ಆರಾಧನೆ ನಡೆಯುತ್ತಿದೆ.

ಕೇರಳದ ಕಡೆಯಿಂದ ಇದರ ಆಗಮನ ಎಂದು ಗುರುತಿಸಲಾಗಿದೆ. ಆದರೆ ಕೇರಳಕ್ಕೆ ಹೊರದೇಶದ ಸಂಪರ್ಕ ಇದನ್ನು ತಂದಿತ್ತೆಂದು ನಂಬಲಾಗಿದೆ.

ಕರವಳಿಯ ಇನೊಂದು ಪ್ರಮುಖ ಆಚರಣೆ ಎಂದರೆ ಯಕ್ಷಾರಾಧನೆ. ಯಕ್ಷರು ದೇವಲೋಕದವರು ಎಂಬ ಭಾವನೆಯಿದೆ. ಕಿನ್ನರರು, ಕಿಂಪುರುಷರು ಇರುವಂತೆ ಯಕ್ಷರಿದ್ದಾರೆ. ಅವರು ಭೂ ಲೋಕದ ಜನಸಾಮಾನ್ಯರನ್ನು ರಕ್ಷಿಸುತ್ತಾರೆ ಎಂಬ ಭಾವನೆ ಯಿದ್ದು, ಅವರನ್ನು ಆರಾಧಿಸವು ಪದ್ಧತಿ ಬಳಕೆಯಲ್ಲಿದೆ. ಭೂತ, ರಾಕ್ಷಸರ ರೂಪದಲ್ಲೂ ಯಕ್ಷರನ್ನು ಕಾಣಲಾಗುತ್ತದೆ. ಯಕ್ಷ-ಯಕ್ಷಿಯರು ಮರಗಳಲ್ಲಿ, ಕೆರೆಗಳಲ್ಲಿ, ಹರಿಯುವ ನೀರಿನಲ್ಲಿರುತ್ತಾರೆಂದು ನಂಬಿಕೆ ಪ್ರಚಲಿತವಾಗಿದೆ.

ಕರಾವಳಿಯ ಕಲೆಯಾಗಿರುವ ಯಕ್ಷಗಾನಕ್ಕೂ-ಯಕ್ಷರಿಗೂ ಸಂಬಂಧ ಕಲ್ಪಿಸಲಾಗಿದೆ. ಯಕ್ಷಗಾನದ ಹಿಂದಿನ ಪ್ರಸಂಗಗಳು ಪುರಾಣಾಧಾರಿತವಾಗಿದ್ದು, ದೇವಲೋಕದ ಯಕ್ಷರ

ವೇಶಭೂಷಣದಲ್ಲಿ ಅವುಗಳನ್ನು ಆಡಿತೋರಿಸುತ್ತಿದ್ದರು. ಈಗ ಯಕ್ಷಗಾನದಲ್ಲಿ ಸಾಮಾಜಿಕ ಪ್ರಸಂಗಗಳು ಬಂದಿವೆ. ಮೇಲ್ವರ್ಗದ ಸಾಂಪ್ರದಾಯಿಕ ಯಜಮಾನಿಕೆಯನ್ನು ಪ್ರದರ್ಶಿಸುವ ಕಲೆಯಾಗಿ ಯಕ್ಷಗಾನ ಉಳಿದಿದೆ. ವಾಸ್ತವವನ್ನು ಮರೆಮಾಚಿ ಕೇವಲ ಗತದ ವೈಭವವನ್ನು ಹಾಡಿಕುಣಿಯುವ ಕಲೆಯಾಗಿ ಇದು ಕಂಡುಬರುತ್ತದೆ.

೫.೧.೧೨ ಆರಾಧನೆ ಹಾಗೂ ಸಂಪ್ರದಾಯ, ಸಂಮ್ಮಿಶ್ರ ಸಂಸ್ಕೃತಿ

ಕರಾವಳಿಯ ಸೀಮಿತ ಪ್ರದೇಶದಲ್ಲಿ ಉಂಟಾದ ವಿದೇಶಿ ಸಂಪರ್ಕ ಹಾಗೂ ಒಳನಾಡಿನೊಂದಿಗಿನ ಸಂಪರ್ಕದ ಕಾರಣಗಳು ವಿಶಿಷ್ಟವಾದ ಆರಾಧನಾ ಪದ್ಧತಿ ಹಾಗೂ ಸಂಪ್ರದಾಯವನ್ನು ಹುಟ್ಟು ಹಾಕಿತು. ಆದರೆ ನಂತರ ಇಲ್ಲಗೆ ಬಂದ ಎಲ್ಲ ಆರಾಧನಾ ಪದ್ಧತಿ, ಜೀವನಪದ್ಧತಿಯನ್ನು ಬಳಸಿಕೊಂಡು ಸಂಮ್ಮಿಶ್ರ ಸಂಸ್ಕೃತಿಯನ್ನು ರೂಡಿಸಿಕೊಂಡಿತು.

ಇದರಲ್ಲಿ ಪರಕೀಯ ಎಂಬ ಪದ್ಧತಿಗಳನ್ನು ಬೇರೆ ಮಾಡಲು ಸಾಧ್ಯವೇ ಇಲ್ಲ ಎನ್ನುವ ರೀತಿಯಲ್ಲಿ ಒಂದಾಗಿ ಬೆರೆತಿದೆ. ದೈವಗಳೂ–ಶಿಷ್ಟದೇವತೆಗಳು ಒಂದಾಗಿವೆ. ನಾಗಾರಾಧನೆ, ವೃಕ್ಷಾರಾಧನೆಗಳು ಶಿಷ್ಟರೂ ಪೂಜಿಸುವ ದೇವರಾಗಿದ್ದಾರೆ. ಒಟ್ಟಿನಲ್ಲಿ ಇಲ್ಲಿ ಯಾವುದೇ ತಾರತಮ್ಯತೆಗಳಿಲ್ಲದೆ ಒಂದಾದಸ್ಥಿತಿ ನೋಡಬಹುದು.

ರಕ್ಷಕನಾಗಿ ಬಂದ ಬಂಟ ಅಣ್ಣಪ್ಪ ದೇವರಾಗಿರುವುದು, ನಾಥಪಂಥದ–ಮಂಜುನಾಥ ಅಧಿದೈವವಾಗಿರುವುದು, ಕಡಲ ಮಕ್ಕಳ ದೈವ ಉಲ್ಲಾಡ್ತಿ ಹಾಗೂ ಬೊಬ್ಬರ್ಯ ಎಲ್ಲರ ದೈವವಾಗಿರುವುದು ಕಾಣಬರುತ್ತದೆ. ಪಂಜುರ್ಲಿ ಯಾವುದೇ ಭೇದಭಾವಕ್ಕೆ ಒಳಗಾಗದೇ ಎಲ್ಲರಿಂದ ಆರಾಧನೆಗೆ ಒಳಗಾಗಿದೆ. ಶೈವ, ವೈಷ್ಣವ ದೇವತೆಗಳನ್ನು ಎಲ್ಲರೂ ಪೂಜಿಸುತ್ತಾರೆ. ಒಟ್ಟಿನಲ್ಲಿ ಎಲ್ಲ ರೀತಿ–ನೀತಿಗಳು ಆರಾಧನಾ ಪದ್ಧತಿಗಳು ಒಂದಾಗಿ ಬೆಸೆದಿವೆ.

ಜನಪದ ದೈವಗಳಲ್ಲಿ ಸ್ತ್ರೀ ದೈವಗಳದ್ದೇ ಒಂದು ಪ್ರಮುಖ ಸ್ಥಾನ. ಭಾರತದಲ್ಲಷ್ಟೇ ಅಲ್ಲದೇ ಜಗತ್ತಿನ ಅನೇಕ ನಾಗರಿಕತೆಗಳಲ್ಲಿ ಸ್ತ್ರೀ ದೈವದ ಆರಾಧನೆಯು ಇದ್ದ ಬಗ್ಗೆ ವಿದ್ವಾಂಸರು ಗುರುತಿಸಿದ್ದಾರೆ. ಮಾತೃ ಪ್ರಧಾನ ವ್ಯವಸ್ಥೆ ಈ ಎಲ್ಲಾ ನಾಗರಿಕತೆಗಳ ಮೂಲವಾಗಿರುವುದರಿಂದ, ಸ್ತ್ರೀಯನ್ನು ಶಕ್ತಿರೂಪದಲ್ಲಿ ನೋಡಿದ ಇವರೆಲ್ಲಾ ಸ್ತ್ರೀ–ಮಾತೃ ಶಕ್ತಿಯ ಆರಾಧನೆಯಲ್ಲಿ ತಮ್ಮ ಮೂಲವನ್ನು ಗುರುತಿಸಿಕೊಂಡಿದ್ದಾರೆ. ಪ್ರಕೃತಿಯನ್ನು ಸ್ತ್ರೀಯಲ್ಲಿ ಕಂಡುಕೊಂಡಿರುವ[೧೯೦] ಇವರು ಸ್ತ್ರೀಯನ್ನು ಉನ್ನತ ಗೌರವದಿಂದ ನೋಡುತ್ತಿದ್ದರು. ಮುಂದೆ ಈ ರೀತಿಯ ಆಚರಣೆ ಮಾತೃ ಪ್ರಧಾನ ವ್ಯವಸ್ಥೆಗೆ ಕಾರಣವಾಯಿತು. ಯಾವ ಸಮಾಜದಲ್ಲಿ ಒಂದು ಜನಾಂಗ ಹಾಗೂ ಅದರ ಸದಸ್ಯರಿಗೆ ಸಂಬಂಧಿಸಿದ ಹಕ್ಕುಗಳು ತಾಯಿಯ ಸಂಬಂಧದ ಮೂಲಕ ನಿರ್ಧಾರವಾಗುತ್ತದೆಯೋ, ಅದು ಮಾತೃ ಪ್ರಧಾನ ವ್ಯವಸ್ಥೆ ಎನಿಸಿಕೊಳ್ಳುತ್ತದೆ[೧೯೧]. ಪಿತೃ ದೇವತೆಗಿಂತ ಮಾತೃದೇವತೆಯ

ಕಲ್ಪನೆಯೇ ಪ್ರಾಚೀನವಾದುದೆಂಬ ಸತ್ಯ ಪ್ರಾಗೈತಿಹಾಸಿಕ ಉತ್ಖನನಗಳಿಂದ ತಿಳಿದು ಬರುತ್ತದೆ[೯೨]. ಕರಾವಳಿಯ ದಕ್ಷಿಣ ಭಾಗದಲ್ಲಿ ಕಂಡುಬರುವ ಅಳಿಯಕಟ್ಟು ಪದ್ಧತಿಗೂ ಇದಕ್ಕು ಹತ್ತಿರದ ಸಂಬಂಧ ಕಾಣಬಹುದು.

ಜನಪದ ದೈವಗಳನ್ನು ಮನೆದೈವಗಳು, ಕುಲದೈವಗಳು, ಗ್ರಾಮ ದೈವಗಳು. ಪ್ರಾಂತ ದೈವಗಳು ಮತ್ತು ನಾಡದೈವಗಳು ಎಂದು ವರ್ಗೀಕರಿಸಬಹುದು[೯೩]. ಈ ದೇವತೆಗಳಲ್ಲಿ ಉಗ್ರರಾದ ರಕ್ತೇಶ್ವರಿ, ಸೌಮ್ಯರಾದ ಶಾಂತಿಕಾಪರಮೇಶ್ವರಿಯವರೆಗೂ ವಿವಿಧ ಬಗೆಗಳಿವೆ. ಚೌಡೇಶ್ವರಿ, ಯಕ್ಷೇಶ್ವರಿ, ಯಕ್ಷಿ, ನಾಗಯಕ್ಷಿ, ಜೈನಯಕ್ಷಿ, ಕೆರೆಯಕ್ಷಿ, ನೀರಯಕ್ಷಿ, ಮರದಯಕ್ಷಿ, ಮರದಮ್ಮ, ಬೆಸ್ತರಗಂಗಮ್ಮ, ಬಿಸಲಮ್ಮ, ಮೂಕಾಂಬಿಕೆ, ನಗರೇಶ್ವರಿ, ಮಾಂಕಾಳಮ್ಮ ಮುಂತಾದ ಸ್ತ್ರೀ ಶಕ್ತಿ ದೇವತೆಗಳಿವೆ. ಮರದಲ್ಲಿ, ಕಲ್ಲಿನಲ್ಲಿ ಮುಖಮಾತ್ರ ಚಿತ್ರಿಸಿರುವ ಈ ದೇವತೆಗಳಂತೆ, ಪೂರ್ಣದೇಹದ ಸ್ಥಾನಿಕ ಶೈಲಿಯ ಮರದ ದೊಡ್ಡ ಮೂರ್ತಿಗಳು ಇವೆ. ಭಟ್ಕಳದ ಬಳಿಯ ಸೋಡಿಗದ್ದೆಯಲ್ಲಿ, ಶಿರೂರಿನಲ್ಲಿ ಕಂಡು ಬರುವ ಮೂರ್ತಿಗಳೊಂದೆಡೆಯಾದರೆ, ಹೈಗುಂದದಲ್ಲಿ, ಬನವಾಸಿಯಲ್ಲಿ ಸುಡಾವೆ ಮಣ್ಣಿನಿಂದ ತಯಾರಿಸಿದ ಒಂದೆರಡು ಅಂಗುಲದ ಮುಖ ಮುದ್ರಿಕೆ ಮಾತ್ರ ಹೊಂದಿರುವ ಮೂರ್ತಿಗಳನ್ನು, ಬಸರೂರಿನ ಗರೋಡಿಗಳಲ್ಲಿ ಪ್ರಾಣಿ ರೂಪದ ದೈವಗಳನ್ನು ಕಾಣಬಹುದು. ಇದರಲ್ಲಿ ವಿದೇಶಿ ಪ್ರಾಣಿಗಳು ಇವೆ. ಹುಲಿಗಿ ಎಂಬ ಹೆಣ್ಣು ಹುಲಿರೂಪದ ಒಂದು ಅಡಿ ಉದ್ದ ಹತ್ತು ಅಂಗುಲ ಎತ್ತರದ ವಿಗ್ರಹಗಳು ಹೊನ್ನಾವರದ ಸರಳಗಿ, ಮತ್ತಿತರೆಡೆ ಕಾಣಬಹುದು. ಜನಸಾಮಾನ್ಯರ ಬದುಕಿಗೆ ಹತ್ತಿರವಾಗಿರುವ ಈ ಸ್ತ್ರೀ ದೇವತೆಗಳು, ತಮ್ಮನ್ನು ರೋಗಗಳಿಂದ, ಪ್ರಾಕೃತಿಕ ವಿಕೋಪಗಳಿಂದ ರಕ್ಷಿಸುವ, ಸಂತಾನ ವೃದ್ಧಿ ಉಂಟು ಮಾಡುವ, ಕೃಷಿಯಲ್ಲಿ, ಮೀನುಗಾರಿಕೆಯಲ್ಲಿ, ತೋಟಗಾರಿಕೆ ಹಾಗೂ ವ್ಯಾಪಾರದಲ್ಲಿ ಲಾಭವನ್ನು, ಶುಭವನ್ನು ತರುತ್ತವೆಂಬ ನಂಬಿಕೆ ಜನಪದರದು.

ಗಂಡುದೈವಗಳೂ ಸ್ತ್ರೀದೈವಗಳಂತೆ ವಿವಿಧ ಹೆಸರುಗಳಿಂದ ಆರಾಧನೆಗೊಳ್ಳುತ್ತವೆ. ಇದರಲ್ಲಿ ಪಂಜುರ್ಲಿ ಪ್ರಾಣಿದೈವವಾದರೆ, ಅಲಿಭೂತ ಮುಸ್ಲಿಂ ದೈವವಾಗಿದೆ. ವೀರಭದ್ರ, ಜಟ್ಟಿಗ, ಅಣ್ಣಪ್ಪ, ಪುರುಷ, ಮುಂತಾದವರು ರಕ್ಷಿಸುವ ವೀರರು, ಹನುಮಂತನಂತೂ ಕರಾವಳಿಯ ಪ್ರತಿ ಊರಿನಲ್ಲೂ ಕಾಣಬರುತ್ತಾನೆ.

ಬಹುತೇಕ ಈ ಎಲ್ಲಾ ದೈವಗಳು ಮರಗಳ ಬುಡದಲ್ಲಿ, ಗದ್ದೆಗಳ ಬದುಗಳಲ್ಲಿ ಕಲ್ಲಿನಿಂದ ಕಟ್ಟಿದ ಸಣ್ಣ-ಪುಟ್ಟ ಕಟ್ಟೆಗಳ ಮೇಲೆ, ಮನೆಯ ಹಿಂಭಾಗದಲ್ಲಿ ಬಾವಿ ಕೆರೆ-ಕಟ್ಟೆಯ ಬಳಿಯಲ್ಲಿ ಕಂಡು ಬರುತ್ತಾರೆ. ದಾರಿಯ ಪಕ್ಕ, ದಟ್ಟ ಕಾಡಿನಲ್ಲಿ ಇರುವ ಇವರಿಗೆ ಭಾರೀ ಕಟ್ಟಡವಾಗಲಿ

ಇರುವುದಿಲ್ಲ. ಹಲವೆಡೆ ನೆರಳೂ ಇರುವುದಿಲ್ಲ. ಬಯಲಲ್ಲಿ ಆಕಾಶವೆ ಚಪ್ಪರವಾಗಿ, ಮರದ ಬುಡದಲ್ಲಿ ಮರವನ್ನೇ ನೆರಳಾಗಿ ಹೊಂದಿರುವುದು, ಇನ್ನು ಕೆಲವೆಡೆ ಹುತ್ತವೇ ದೇವರಾಗಿರುತ್ತದೆ.

ಆರಾಧನೆಯ ವಿಚಾರದಲ್ಲೂ ಇವರು ಸರಳರು. ಶಿಷ್ಟ ದೇವತೆಗಳಿಗಿರುವ ಪ್ರತಿಷ್ಠೆ ಇವರಿಗಿಲ್ಲ. ದಿನಕ್ಕೆ ಎರಡು ಬಾರಿ ನೀರು, ಹಾಲು, ಸೀಯಾಳ ಹಾಗೂ ಹರಿಶಿಣ, ಚಂದನ, ಗಂಧದ ನೀರಿನ ಅಭಿಷೇಕವನ್ನು ಇವರು ಬಯಸುವುದಿಲ್ಲ. ಯಾವುದೇ ಬಣ್ಣದ ಹೂವಾದರೂ ಸರಿ ಇವರಿಗೆ ಪ್ರಿಯವೆ. ಆದರೆ ವಿಶೇಷ ದಿನಗಳಲ್ಲಿ ಅಡಿಕೆ ಹಿಂಗಾರಿನ ಪೂಜೆ ನಡೆಯುತ್ತದೆ. ಮನೆಯವರೆ ಇವರುಗಳ ಪೂಜಾರಿಗಳು, ಮನೆಯ ಬಾಲಕ, ಬಾಲಕಿಯರು, ಯಜಮಾನರು, ಮಹಿಳೆಯರು ಯಾರಾದರೂ ಸರಿ ಬಿಡುವಿದ್ದಾಗ ಒಂದು ತಂಬಿಗೆ ನೀರು ಹಾಕಿ ಹೂವು ಮುಡಿಸಿ, ಊದುಬತ್ತಿ ಹಾಕಿದರೆ ಕೆಲಸ ಮುಗಿಯಿತು. ಆದರೆ ವರ್ಷಾಚರಣೆಯ ಸಂದರ್ಭದಲ್ಲಿ ಕೋಳಿ ಬಲಿ, ಕೆಲವೆಡೆ ಕುರಿ ಬಲಿಗಳು ನೀಡುತ್ತಾರೆ. ಈ ಜನಪದ ಧರ್ಮದಲ್ಲಿ ಕಂಡು ಬರುವ ದೈವಗಳು ಸರಳಾಲಂಕಾರದಿಂದ ಕೂಡಿರುವಂಥಹವು. ಇವರಿಗೆ ಸಲ್ಲಿಸುವ ಬೇಡಿಕೆ– ಪ್ರಾರ್ಥನೆಗಳು, ಸ್ಥಳೀಯ ಭಾಷೆಯಲ್ಲಿರುತ್ತವೆ. ಶಿಷ್ಟರಲ್ಲಿ ಕಂಡುಬರುವ ಸ್ಪರ್ಶ, ಅಸ್ಪರ್ಶ ಭಾವನೆ ಇಲ್ಲಿಲ್ಲ. ಯಾರೂ ಬೇಕಾದರೂ ಈ ದೈವಗಳಲ್ಲಿ ನಡೆದುಕೊಳ್ಳಬಹುದು. ನಿತ್ಯನೇಮಗಳಿಲ್ಲ. ಮಡಿ–ಮೈಲಿಗೆಗಳಿಲ್ಲ. ನೆನೆದವರ ಮನದಲ್ಲೆಂಬಂತೆ ಬಡವರ ಬೆಳಕಾಗಿ. ಶೋಷಿತರ ಆಸರೆಯಾಗಿ ಈ ದೈವಗಳಿರುವುದನ್ನು ಕಾಣಬಹುದಾಗಿದೆ[೧೪]. ಎಲ್ಲ ಜಾತಿಯ ಭಕ್ತರಿಗೂ ಈ ದೈವಗಳು ದೇವರಾಗಿದ್ದಾರೆ. ಇಂಥಹ ಸಾಮರಸ್ಯದಿಂದ, ಸೌಹಾರ್ಧತೆಯಿಂದ ಇವುಗಳು ವ್ಯಾಪಕವೂ ಜನಪ್ರಿಯವೂ ಆಗಿವೆ.

೫.೨. ಬಂದರುಗಳ ಸಾಮಾಜಿಕ ಪರಿಸರ

ಬಂದರುಗಳ ಸಾಮಾಜಿಕ ವ್ಯವಸ್ಥೆಯಾದ ಜಾತಿ, ಜಾತಿ ವಿಂಗಡಣೆ, ಉಪ ಜಾತಿಗಳು, ಸಾಮಾಜಿಕವಾದ ಮೇಲುಕೀಳೆಂಬ ವಿಂಗಡಣೆ ಮತ್ತು ದುಡಿಯುವ ವರ್ಗ ವಸತಿ ನಿಲಯಗಳು ಇಲ್ಲಿ ಚರ್ಚಿಸಲಾಗಿದೆ. ವ್ಯಾಪಾರಿಗಳು ಮತ್ತು ವಿದೇಶದಿಂದ ಬಂದ ವ್ಯಾಪಾರಿ ಸಂಬಂಧಿತ ಸಮುದಾಯಗಳ ವಸತಿ ನೆಲೆಗಳ ಕುರಿತು ಇಲ್ಲಿ ವಿಶ್ಲೇಷಿಸಲಾಗಿದೆ.

೫.೨.೧ ಜಾತಿಗಳು–ಜಾತಿ ವಿಂಗಡಣೆ

'ಜಾತಿ' ಎಂಬುದು ಭಾರತದ ಒಂದು ವಿಶಿಷ್ಟ ಸಾಮಾಜಿಕ ವ್ಯವಸ್ಥೆ. ಅದು ಬೇರೆ ಎಲ್ಲಿಯೂ ಇಲ್ಲದ ಒಂದು ವ್ಯವಸ್ಥೆ[೧೫]ಯಾಗಿದೆ. ಸಮಾಜವು ವಿವಿಧ ವೃತ್ತಿಗಳಿಗೆ ಮೀಸಲಾದ ಜನವರ್ಗಗಳಾಗಿ ವಿಭಾಗಿಸಿದ್ದು ಭಾರತದ ಸಾಮಾಜಿಕ ಪದ್ಧತಿಯ ಲಕ್ಷಣ. ಋಗ್ವೇದದ ಪುರುಷ ಸೂಕ್ತದಲ್ಲಿ (ಋಗ್ವೇದ, ೯೦, ೧೨) ಮೂಲ ಪುರುಷನ ದೇಹದ ವಿವಿಧ ಅಂಗಗಳಲ್ಲಿ

ಜನಿಸಿದವರು ಬ್ರಾಹ್ಮಣ, ಕ್ಷತ್ರಿಯ ವೈಶ್ಯ, ಶೂದ್ರರೆಂಬ ಜನವರ್ಗ ಎಂದು ಹೇಳುತ್ತದೆ. ಆದರೆ ಈ ಪುರುಷ ಸೂಕ್ತವೇ ಪ್ರಕ್ಷಿಪ್ತವೆಂದೂ, ಮತ್ಯಾವದೋ ಕಾಲದಲ್ಲಿ ಸೇರ್ಪಡೆಯೆಂದೂ ವಿದ್ವಾಂಸರು ಹೇಳುತ್ತಾರೆ. ಜಾತಿಯು ಗುಣ, ಕರ್ಮದೊಂದಿಗೆ ಸಂಬಂಧ ಹೊಂದಿಲ್ಲ. ವರ್ಗವು ಬಡವಾದಾಗ, ಅದು ಜಾತಿಯ ಗುಣಗಳನ್ನು ಆವಾಹಿಸಿಕೊಳ್ಳುತ್ತಾ ಹೋಗುತ್ತದೆ[೯೬]. ಸಂಪತ್ತು, ಬುದ್ಧಿ, ಪದವಿಯ ಆಧಾರಗಳ ಮೇಲೆ ಸಮಾಜದಲ್ಲಿ ಗುಂಪುಗಳಾಗುತ್ತವೆ; ಕ್ರಮೇಣ ಇವೇ ವರ್ಗಗಳಾಗುತ್ತವೆ[೯೭] ಎಂಬ ಸೂತ್ರ ಇಲ್ಲಿ ನಿಜವೆನಿಸುತ್ತದೆ. ಸಾಮಾಜಿಕ ವಿಭಾಗಗಳು ಹುಟ್ಟಿಕೊಳ್ಳುವುದಕ್ಕೆ ಆರ್ಯರು ಸ್ಥಳೀಯ ನಿವಾಸಿಗಳನ್ನು ಪರಾಜಯಗೊಳಿಸಿದುದು ಪ್ರಮುಖವಾದ ಕಾರಣ. ಆರ್ಯರು ತಾವು ಗೆದ್ದ ದಾಸರು ಮತ್ತು ದಸ್ಯುಗಳನ್ನು ಗುಲಾಮರು ಹಾಗೂ ಶೂದ್ರರಂತೆ ನೋಡಿಕೊಳ್ಳತೊಡಗಿದರು. ಗೆದ್ದುಗಳಿಸಿದ ಸಂಪತ್ತಿನಲ್ಲಿ ಸಿಂಹಪಾಲನ್ನು ಬಣಗಳ ರಾಜರೂ ಮತ್ತು ಪುರೋಹಿತರು ವಶಪಡಿಸಿಕೊಂಡ ಕಾರಣ, ಅವರು ಸಾಮಾನ್ಯ ಜನರಿಗಿಂತ ಬಲಿಷ್ಠರಾಗಿ ಬೆಳೆದು ಬಣಗಳ ಒಳಗೆ ಸಾಮಾಜಿಕ ಭೇದಗಳು ಹುಟ್ಟಿಕೊಂಡವು[೯೮]. ಇಂಥಹ ಭೇದ ಭಾವಗಳು ಭಾರತೀಯ ಸಾಮಾಜಿಕ ಪದ್ದತಿಯ ಲಕ್ಷಣ ಎಂಬಂತೆ ರೂಢಿಗೊಂಡಿದೆ. ಭಾರತೀಯ ಸಮಾಜ ಎಂದಾಗ ಅಲ್ಲಿ ಜಾತಿಯತೆ, ಅಸ್ಪೃಶ್ಯತೆ ಹಾಗೂ ಇವುಗಳನ್ನೊಳಗೊಂಡ ಶ್ರಮ ವಿಭಜನೆಯನ್ನು ಸ್ಪಷ್ಟವಾಗಿ ಕಾಣುತ್ತದೆ. ಜಾತಿ ಎಂದರೆ ಆಳುವ ವರ್ಗಗಳು ಶ್ರಮ, ಶೋಷಣೆಗೆ ನಿರ್ಮಿಸಿಕೊಂಡ ಕೆಟ್ಟ ವ್ಯವಸ್ಥೆ[೯೯]. ಪುರೋಹಿತ ಶಾಹಿ ಹಾಗೂ ಆಳುವ ವರ್ಗಗಳು ಈ ಪದ್ದತಿಯನ್ನು ಪೋಷಿಸಿದರು. ಭಾರತದ ಒಳಗಡೆ ಜಾತಿ ವ್ಯವಸ್ಥೆಯನ್ನು ಸರ್ವವ್ಯಾಪಿಗೊಳಿಸುವ ಕಾರ್ಯದಲ್ಲಿ ಬ್ರಾಹ್ಮಣರು ಪ್ರಧಾನ ಪಾತ್ರ ನಿರ್ವಹಿಸಿದ್ದಾರೆ[೧೦೦]. ಹೆಚ್ಚು ಕಡಿಮೆ ಜಡ್ಡುಗಟ್ಟಿದಂತಹ ಶ್ರಮ ವಿಂಗಡನೆಯ ಒಂದು ರೂಪವಾಗಿದ್ದಂತಹ ಜಾತಿ ವ್ಯವಸ್ಥೆಯು ಉತ್ಪಾದನಾ ಸಂಬಂಧಗಳ ಒಂದು ಭಾಗವಾಗಿತ್ತು[೧೦೧]. ಗ್ರಾಮಗಳ ಜನಜೀವನಕ್ಕೆ ಸಹಾಯಕರಾಗಿ ಕಮ್ಮಾರ, ಕುಂಬಾರ, ಬಡಗಿ, ನಾಯಿಂದ, ಅಗಸ ಹಾಗೂ ಕೃಷಿಕ, ಕೂಲಿಗಳಿರುತ್ತಿದ್ದರು. ಊರನ್ನು ನೈರ್ಮಲ್ಯದಿಂದಿರಿಸಲು ಪಂಚಮರನ್ನು (ಮನು) ಬಳಸುತ್ತಿದ್ದರು. ಗ್ರಾಮೀಣ ಬದುಕ್ಕೊಂದು ಒತ್ತಾಯದಿಂದ ನಿರ್ಮಿಸಿದ ಸರಪಳಿಯಂತೆ ನಿರ್ಮಾಣವಾಗಿತ್ತು. ಬಹಿಷ್ಕೃತರು, ಶೂದ್ರರು, ಸವರ್ಣೀಯರು ಮುಂತಾಗಿ ಸಮಾಜವನ್ನು ವಿಭಾಗಿಸಿದ್ದರು. ಇಂಥಹ ಜಾತಿ ವ್ಯವಸ್ಥೆಯನ್ನು ಸೈದ್ಧಾಂತಿಕಗೊಳಿಸಿದವನು, ಕಟ್ಟುನಿಟ್ಟಿನ ಸಂವಿಧಾನವನ್ನು ರೂಪಿಸಿದವನು 'ಮನು'. ಇದನ್ನು ತಪ್ಪದೆ ಜಾರಿಗೆ ತಂದವರು ಬ್ರಾಹ್ಮಣರು ಹಾಗೂ ದಲಿತೇತರ ಪ್ರಬಲ ಸ್ಪರ್ಶ್ಯ ವರ್ಗದವರು[೧೦೨]. ಜಾತಿಯ ಹೆಸರಿನಲ್ಲಿ ಸಮಾಜದ ದೊಡ್ಡ ಭಾಗವನ್ನು ಅನಿಯಮಿತ ಶೋಷಣೆಗೆ ಒಳಪಡಿಸಿ ತಮ್ಮ ವಿಲಾಸಿಬದುಕನ್ನು ಮೇಲ್ವರ್ಗದವರು ನಡೆಸುತ್ತಾ ಬಂದರು. ಇದನ್ನು ಬುದ್ಧ, ಮಹಾವೀರ, ಬಸವಣ್ಣ ಮುಂತಾದವರ

ಚಳುವಳಿಗಳು ದುರ್ಬಲಗೊಳಿಸಿದರೂ ಸಂಪೂರ್ಣ ನಾಶಪಡಿಸಲಾಗಲಿಲ್ಲ. ಮತ್ತೆ ಆಳುವವರ್ಗ
ಸಂಚು ರೂಪಿಸಿ ಜಾತೀಯ ಬೇರುಗಳು ಗಟ್ಟಿಯಾಗುವಂತೆ ನೋಡಿಕೊಂಡಿತು. ಮಧ್ಯಕಾಲೀನ
ಭಾರತದಲ್ಲಿ 'ಭಾರತೀಯ ಉಳಿಗಮಾನ್ಯ ಪದ್ದತಿ' ಬೆಳೆದು ಬಂದಿತು. ಭಾರತೀಯ ಗ್ರಾಮಗಳಲ್ಲಿ–
ಪಟ್ಟಣಗಳಲ್ಲಿ ವಾರಸುದಾರಿಕೆಯ ಜಾತಿ–ಕಸುಬು ಪದ್ದತಿಯು ಪ್ರಾಚೀನ ಭಾರತದಿಂದ ತೊಡಗಿ
೧೮ನೇ ಶತಮಾನದವರೆಗೂ ಮುಂದುವರಿದಿತ್ತೆಂದು ಸಾಕ್ಷಾಧಾರಗಳಿಂದ ವ್ಯಕ್ತವಾಗುತ್ತದೆ[೨೦೩].

ಶ್ರೇಣಿಕರಿಸಿದ ಸಾಮಾಜಿಕ ವ್ಯವಸ್ಥೆಯನ್ನು ಬೌದ್ಧಿಕ ದೈಹಿಕ ಶ್ರಮಗಳೆಂದು ವಿಭಾಗಿಸಿ
ಕೊಂಡು, ಬೌದ್ಧಿಕ ದುಡಿಮೆಗೆ ಉಚ್ಚಸ್ಥಾನ ನೀಡಿ ದೈಹಿಕ ಶ್ರಮಕ್ಕೆ ನೀಚ ಸ್ಥಾನ[೨೦೪] ನೀಡಲಾಗಿತ್ತು.
ಇದೇ ಹಿನ್ನಲೆಯಲ್ಲಿ ವಿವಿಧ ವರ್ಗಗಳು, ಸೌಲಭ್ಯಗಳು ಹಾಗೂ ಉನ್ನತಸ್ಥಾನಗಳಲ್ಲಿ ಮೇಲುಗೈ
ಪಡೆಯುತ್ತಾ ಬಂದವು. ಶಾಸ್ತ್ರಗಳು, ಪುರಾಣಗಳು ಮತ್ತಿತರ ಧಾರ್ಮಿಕ ಗ್ರಂಥಗಳನ್ನುರಚಿಸಿ ದೈಹಿಕ
ಶ್ರಮವನ್ನು ಹಿಂದಿನ ಜನ್ಮದ ಪಾಪಗಳಿಗೆ ಪ್ರಾಯಶ್ಚಿತ್ತದಂತೆ ಮತ್ತು ಬೌದ್ಧಿಕ ದುಡಿಮೆಯನ್ನು
ಪೂರ್ವಜನ್ಮದ ಪುಣ್ಯದಂತೆ ಪರಿಗಣಿಸುವುದರ ಮೂಲಕ ಇಡೀ ಜಾತಿ ವ್ಯವಸ್ಥೆಗೆ ಒಂದು
ಧಾರ್ಮಿಕ ಚೌಕಟ್ಟಿನಲ್ಲಿ ಸಾಂಪ್ರದಾಯಿಕ ಮತ್ತು ಪಾರಂಪರಿಕ ವೇದಿಕೆಯೊಂದನ್ನೋದಗಿಸಿದ್ದು[೨೦೫]
'ಹಿಂದೂ' ಜೀವನ ಪದ್ಧತಿಯ ಕೊಡುಗೆಯಾಗಿದೆ.

ರಾಜನಿಂದ ಸಿಗುವ ದಾನ–ದತ್ತಿ–ಕೊಡುಗೆಗಳು, ದೇವಾಲಯದ ಮೇಲುಸ್ತುವಾರಿ, ಗ್ರಾಮ–
ಪಟ್ಟಣದ ಆಡಳಿತದಲ್ಲಿ ಭಾಗಿಗಳಾಗುವ ಭಾಗ್ಯ ಮತ್ತು ಅಗ್ರಹಾರಗಳಲ್ಲಿ ಅರಮನೆಯ ವಿವಿಧ
ಕೊಡುಗೆಗಳಿಂದ ಕೊಡಲ್ಪಡುತ್ತಿದ್ದ ವಿದ್ಯೆಗಳೆಲ್ಲವೂ ಪುರೋಹಿತವರ್ಗ ಹಾಗೂ ಅರಮನೆಯ
ಆತ್ಮೀಯಪರಿವಾರಕ್ಕೆ ಮಾತ್ರ ಮೀಸಲಾಗಿತ್ತು. ಶಾಸನ ಹಾಗೂ ದಂಡಿನನೆರವಿನಿಂದ ಈ ಎಲ್ಲ
ಸೌಲಭ್ಯಗಳನ್ನು ಪುಷ್ಕಳವಾಗಿ ಅನುಭವಿಸುವ ಜನ್ಮ ಜಾತ ಹಕ್ಕು ಮೇಲ್ಕಾಣಿಸಿದ ಪರಿವಾರಕ್ಕೆ ಇತ್ತು.

ಆರ್.ಎಸ್.ಶರ್ಮಾರವರು 'ಪ್ರಾಚೀನ ಭಾರತದಲ್ಲಿ ಶೂದ್ರರು' ಎಂಬ ಕೃತಿಯಲ್ಲಿ ಶೂದ್ರರ
ಹುಟ್ಟು ಬೆಳವಣಿಗೆ ಹಾಗೂ ಸ್ಥಾನಮಾನಗಳನ್ನು ಸವಿಸ್ತಾರವಾಗಿ ನೀಡಿದ್ದಾರೆ. ಆರ್ಥಿಕ
ವ್ಯವಸ್ಥೆಯಲ್ಲಿ ಶೂದ್ರರ ಸ್ಥಾನವನ್ನು ಅವರ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳೊಂದಿಗೆ
ಹೋಲಿಸಿನೋಡಬಹುದು. ಸುಮಾರು ಕ್ರಿ.ಪೂ ೫೦೦ ರಿಂದ ೨೦೦ ರವರೆಗೆ ಅವರ ಮೇಲೆ
ಹೇರಲಾಗಿದ್ದ ಧಾರ್ಮಿಕ ಕಟ್ಟಳೆಗಳು ಸುಮಾರು ಕ್ರಿ.ಶ ೩೦೦ ರವರೆಗೆ ಮುಂದುವರಿದವು. ಮುಂದೆ
ಸ್ವಲ್ಪಸಡಿಲಗೊಂಡಿತು. ಅದು ಸಾಧ್ಯವಾಗಿದ್ದು ಶೂದ್ರರಲ್ಲಿ ದಾಸರು, ಕುಶಲ ಕರ್ಮಿಗಳು,
ಮನೆಗೆಲಸದವರು ಮತ್ತು ಕೃಷಿ ದುಡಿಮೆಗಾರರು ಇದ್ದವರಿಗೆ ಮಾತ್ರ. ಸ್ಥಳೀಯ ಬುಡಕಟ್ಟುಗಳ
ಕೃಷಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಗೊಂಡು ಶೂದ್ರರ ಸಂಖ್ಯೆ ಬೆಳೆದಾಗ ಹಾಗೂ ಕೃಷಿ
ಉತ್ಪಾದನೆಯಲ್ಲಿ ದಾಸ ಜನರ ಪಾಲು ಸಾಕಷ್ಟು ಕುಗ್ಗಿದಾಗ, ದಾಸ್ಯಕ್ಕೆ ಒಗ್ಗಿ ಹೋಗಿದ್ದ ಕೆಲಸಗಾರರು

ಮೊದಲಿನ ಧೈರ್ಯತೊರಲಿಲ್ಲ. ಆಗ ಧರ್ಮ ಸೂತ್ರಗಳಲ್ಲಿ ಹೇಳಲಾಗಿದ್ದ ಸಾಮಾಜಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳು ಸಡಿಲಗೊಳ್ಳುವುದು ಅನಿವಾರ್ಯವಾಯಿತು. ಆದ್ದರಿಂದ ಅವರನ್ನು ವ್ಯಾಪಕವಾಗಿ ವಿಸ್ತರಿಸಿ, ಉತ್ಪಾದನೆಯಲ್ಲಿ ಅವರ ಸ್ಥಾನಕ್ಕೆ ಸರಿದೂಗುವಂತೆ ಬದಲಾಯಿಸಬೇಕಾಯಿತು. ಎಷ್ಟೋ ಬುಡಕಟ್ಟು ಜನರನ್ನು ಕುಶಲ ಕರ್ಮಿಗಳನ್ನೂ ಅಸ್ಪೃಶ್ಯರ ಬಣಕ್ಕೆ ದೂಡಲಾಯಿತು. ಮೊದಲಿನಂತೆಯೇ ದಾಸ್ಯದಲ್ಲಿ ಉಳಿದಿದ್ದ ಬಣಕ್ಕೆ ಅಧಿಕ ಸಂಖ್ಯೆಯಲ್ಲಿ ಅಸ್ಪೃಶ್ಯರನ್ನು ಸೇರಿಸಿದಾಗ ಅವರನ್ನೆಲ್ಲಾ ಒಟ್ಟಾಗಿ 'ಅಸತ್' ಅಥವಾ ಅಶುದ್ಧ ಶೂದ್ರರೆಂದು ಹೆಸರಿಸಲಾಯಿತು. ಅದರಂತೆ ಅವರ ಧಾರ್ಮಿಕ ನಡವಳಿಕೆಯನ್ನು ನಿಗದಿಗೊಳಿಸಲಾಯಿತು. ಹಾಗಾದರೆ 'ಸತ್' ಅಥವಾ ಶುದ್ಧ ಶೂದ್ರರು ಯಾರು? ಕೃಷಿಕ ಜಾತಿಯವರು ಮತ್ತು ಕುಶಲ ಕರ್ಮಿಗಳಲ್ಲಿ ಕೆಳ ಅಂತಸ್ತಿನ ಕೆಲಸದವರು ಮೊದಲೇ ಹೇಳಿದಂತೆ ಅಸ್ಪೃಶ್ಯರೆನಿಸಿ ಕೊಂಡರು. ಅವರು ಅಶುದ್ಧ ಶೂದ್ರರು ಅಥವಾ ಮಿಶ್ರ ಜಾತಿಯವರು[೨೦೬]. ಹೀಗೆ ಕಾಲನುಕ್ರಮದಲ್ಲಿ ಸಾಮಾಜಿಕ ಜೀವನದಲ್ಲಿ ಶೂದ್ರರು ಹಾಗೂ ಅಸ್ಪೃಶ್ಯರನ್ನು ಸೃಷ್ಟಿಸಿಕೊಂಡು ತಮ್ಮ ಹಿತ ಕಾಪಾಡಿಕೊಂಡವರು ಬ್ರಾಹ್ಮಣರು ಮತ್ತು ರಾಜ ಪ್ರಭುತ್ವದವರು. ಮುಂದೆ ನೂರಾರು ಬುಡಕಟ್ಟುಗಳು ಬ್ರಾಹ್ಮಣಾಧಿಕಾರದ ವ್ಯವಸ್ಥೆಯಲ್ಲಿ ಶೂದ್ರ ಜಾತಿಗೆ ಬದಲಾವಣೆ ಹೊಂದಿದವು[೨೦೭]. ಇದು ಉತ್ತರಭಾರತದಲ್ಲಿ ಉಂಟಾದಂತೆ ದಕ್ಷಿಣ ಭಾರತದಲ್ಲೂ ಉಂಟಾಯಿತು. ಆರ್ಥಿಕ ಉತ್ಪಾದನೆಯಲ್ಲಿ ಕಠೀಣಶ್ರಮ ಜೀವಿಗಳೂ, ಅಸಂಘಟಿತರೂ ಆಗಿದ್ದ ಶೂದ್ರ ಹಾಗೂ ಅಸ್ಪೃಶ್ಯ ಸಮೂಹ ಕೇವಲ ಜೀವಚ್ಚವದಂತೆ ಬದುಕು ನಡೆಸುತ್ತಿದ್ದರು. ಕ್ಷತ್ರಿಯರು–ಆಳುವವರೂ ಅವರ ಪರಿವಾರದವರೂ ಆಗಿದ್ದಂತೆ, ದಂಡಿನ ಸದಸ್ಯರಾಗಿದ್ದರು. ಈ ದಂಡೆ ರಾಜ್ಯದ ಹಾಗೂ ರಾಜನ ರಕ್ಷಕರಾಗಿದ್ದು, ಉನ್ನತವಾದ ಗೌರವ ಹಾಗೂ ಶಕ್ತಿ ಹೊಂದಿದ್ದರು.

ಬ್ರಾಹ್ಮಣರು ಎಲ್ಲ ವಿಧದಲ್ಲೂ ಗೌರವಾನ್ವಿತರೂ 'ಪ್ರಾಯಶ್ಚಿತ್ತ ದಕ್ಷಿಣೆ'[೨೦೮]ಗೆ ಭಾಧ್ಯಸ್ಥರಾಗಿದ್ದರು. ಅಂದರೆ ಉಳಿದ ಜಾತಿಗಳಿಂದ ಉಂಟಾಗುವ ತಪ್ಪುಗಳಿಗೆ ಪ್ರಯಶ್ಚಿತದ "ಶಿಕ್ಷೆ" ನೀಡಿ ಬರುವ "ದಂಡ"ವಾದ ದಕ್ಷಿಣೆ ಪಡೆಯುವ ಹಕ್ಕುಳ್ಳುವರಾಗಿದ್ದರು.

ಹಾಗೇ ಸಮಾಜದ ಇತರ ವೃತ್ತಿ ಜಾತಿಗಳಾದ ಶಿಲ್ಪಿಗಳು, ಅಕ್ಕಸಾಲಿಗರು, ಬಡಗಿ, ಕಂಚುಗಾರ, ಕಮ್ಮಾರ[೨೦೯] ಹಾಗೂ ಅಗಸ, ನೇಕಾರ[೨೧೦], ತೈಲಿಗರು[೨೧೧] ಮುಂತಾದ ಕಸಬು ಮಾಡುವ ಜಾತಿಗಳಿದ್ದವು.

೫.೨.೨. ಜಾತಿಗಳು–ಉಪಜಾತಿಗಳು

ಕರಾವಳಿಯಲ್ಲಿ ಜನವಸತಿಯ ಪ್ರಾಚೀನತೆಯನ್ನು ಆರಂಭದ ಅಧ್ಯಾಯದಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಕರಾವಳಿಗೆ ನೆರೆಹೊರೆಯಿಂದ ವಲಸೆ ಬಂದ ಬಗ್ಗೆ ಹಲವು ವಿದ್ವಾಂಸರು

ಗುರುತಿಸಿದ್ದಾರೆ. ಆದರೆ ಕರಾವಳಿಯ ಪಶ್ಚಿಮದ ಕಡಲ ದಿಕ್ಕು ಕಡಲೋತ್ತರ ದೇಶದ ಜನರನ್ನು ಸ್ವಾಗತಿಸುವಂತೆ ಮುಕ್ತವಾಗಿದೆ. ಹಲವಾರು ಕಾರಣಗಳಿಂದ ಕಡಲ ಮಾರ್ಗವಾಗಿ ಬಂದ ಜನರು ಇಲ್ಲಿ ಉಳಿದು ವಸತಿ ಸ್ಥಾಪಿಸಿಕೊಂಡರು.

ಭಾರತದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಅಥವಾ ಪೂರ್ವದಿಂದ ಪಶ್ಚಿಮಕ್ಕೆ ಪ್ರವಾಸ ಮಾಡುವಾಗ ಗೌರವರ್ಣದ, ತುಲನಾತ್ಮಕವಾಗಿ ಎತ್ತರ ನಿಲುವಿಕೆಯುಳ್ಳ ವ್ಯಕ್ತಿಗಳು ಬೇರೆ ಭಾಗಗಳಿಗಿಂತ ಹೆಚ್ಚಾಗಿ ಉತ್ತರ ಹಾಗೂ ಪಶ್ಚಿಮ ಭಾರತದಲ್ಲಿ ಸಾಮಾನ್ಯವಾಗಿ ಕಂಡುಬರುತ್ತಾರೆ[೨೧೨]. ಮಾನವನನ್ನು ಗುರುತಿಸುವಾಗ ಬಳಸುವ ನಿಲುವಿಕೆ, ತಲೆಯ ಉದ್ದಕ್ಕೆ ಅಗಲದ ಪ್ರಮಾಣ ಮತ್ತು ನಾಸಿಕದ ಎತ್ತರಕ್ಕೆ ಅಗಲದ ಪ್ರಮಾಣ ಮುಂತಾದವುಗಳನ್ನು ಪರಿಗಣಿಸುತ್ತಾರೆ. ಅತೀ ಗಿಡ್ಡ, ಗಿಡ್ಡ, ಮಧ್ಯಮ, ಎತ್ತರ, ಅತೀ ಎತ್ತರ, ಅತೀ ಉದ್ದ ತಲೆ, ಉದ್ದ ತಲೆ, ಅಗಲ ತಲೆ, ಅತೀ ಅಗಲ ತಲೆ ಹಾಗೇ ಮೂಗಿನಲ್ಲೂ ವ್ಯತ್ಯಾಸಗಳು[೨೧೩] ಕಂಡುಬರುತ್ತವೆ.

ಕರಾವಳಿಯ ಮುಕ್ರಿ, ಆಗೇರ, ಹಸಲರು, ಕುಣುಬಿ, ಕೊರಗರು, ಖಾರ್ವಿ, ಅಂಬಿಗ, ನವಾಯತಿ, ಬ್ಯಾರಿ, ಮೊಗವೀರ, ಬಿಲ್ಲವ, ಬಂಟ, ಬ್ರಾಹ್ಮಣ ಮುಂತಾದ ಜನಾಂಗಗಳಲ್ಲಿ ಇಂಥಹ ಗುಣಲಕ್ಷಣಗಳನ್ನು ನೋಡಬಹುದು. ಇವರ ಬಣ್ಣಗಳಲ್ಲೂ ವೈವಿದ್ಯತೆ ಇದೆ.

ಕರಾವಳಿ ಕರ್ನಾಟಕವು ತನ್ನದೇ ಆದ ಭೌಗೋಳಿಕತೆಗೆ ಅನುಕೂಲವಾದ ಉತ್ಪಾದನಾ ವ್ಯವಸ್ಥೆ ರೂಪಿಸಿಕೊಂಡಿತು. ಈ ವ್ಯವಸ್ಥೆಯ ಸೀಮಿತವಾದ ಭೂಪ್ರದೇಶ, ಹುಲ್ಲು ಬೆಳೆಯುವ ಪ್ರದೇಶ. ನಿತ್ಯಹರಿದ್ವರ್ಣ, ಉಷ್ಣವಲಯದ ಕಾಡು ಹಾಗೂ ವಿಸ್ತಾರವಾದ ಭವ್ಯ ಆಳ ಕಡಲನ್ನು ಅವಲಂಭಿಸಿತ್ತು.

ಮಾನವನ ವಿಕಾಸ ಕ್ರಮದಲ್ಲಿ ಪ್ರಥಮ ಹಂತದ್ದು ಬೇಟೆಯ ಸಂಸ್ಕೃತಿ. ದ್ವಿತೀಯ ಹಂತದ್ದು ಪಶುಪಾಲನ ಸಂಸ್ಕೃತಿ. ತೃತೀಯ ಹಂತದಲ್ಲಿ ಕೃಷಿ ಸಂಸ್ಕೃತಿ[೨೧೪]. ಬೇಟೆಗಾರರು ಹಾಗೂ ಪಶುಪಾಲಕರು ತಮ್ಮ ಆಹಾರಕ್ಕಾಗಿ ಅಲೆಯುತ್ತಿದ್ದರು. ಬೇಟೆಸಿಗುವ ಸ್ಥಳಗಳನ್ನು ಹುಡುಕುತ್ತಾ ಎಲ್ಲಿಂದ ಎಲ್ಲಿಗೋ ಹೋಗುತ್ತಿದ್ದ ಗುಂಪು ಗುಂಪಾದ ಜನರಂತೆ ಪಶುಪಾಲಕರೂ ತಮಗೆ ತಮ್ಮ ಸಾಕುಪ್ರಾಣಿಗಳಿಗೆ ಬೇಕಾದ ನೀರು ಆಹಾರ ಫಲವತ್ತಾದ ಭೂಪ್ರದೇಶ ಹುಡುಕುತ್ತಾ ತಿರುಗುತ್ತಿದ್ದರು. ಕೃಷಿಕರಾದರೆ ಶಿಲಿಂದೆ ಸ್ಥಳದಲ್ಲಿ ನೆಲೆನಿಂತು ತಮಗೆ ಬೇಕಿದ್ದ ಫಸಲನ್ನು ಬೆಳೆಯುತ್ತಿದ್ದರು.

ಈ ಪ್ರದೇಶದ ಜನರ ಬದುಕಿಗೆ ಬೇಕಾದ ವೃತ್ತಿಗಳಾದ ಕೃಷಿ, ಮೀನುಗಾರಿಕೆ, ಯೋಧರು, ವ್ಯಾಪಾರಿಗಳು, ಅಕ್ಕಸಾಲಿಗರು, ನೇಯ್ಗೆಯವರು ಮುಂತಾದ ಪಂಗಡಗಳು ಕಾಣಿಸಿಕೊಂಡಿರಬೇಕು. ಭಾರತದಾದ್ಯಂತದಲ್ಲಿ ಕಂಡುಬಂದಂತೆ ವರ್ಣಗಳು, ಜಾತಿ ಪಂಗಡಗಳಾಗಿ ಕಾಲಾನುಕ್ರಮದಲ್ಲಿ ಕಂಡುಬಂದವು. ಜೊತೆಯಲ್ಲಿ ಮೇಲು-ಕೀಳೆಂಬ ಕಲ್ಪನೆಯ ಅಸ್ತಿತ್ವ ಪಡೆಯಿತು. ಜಾತಿ ಪದ್ಧತಿ

ಬೆಳೆದದ್ದು ಕಸಬುಗಳ ಆಧಾರದ ಮೇಲೆ. ಸಮಾಜದ ಬೇಡಿಕೆ ಹೆಚ್ಚಾಗುತ್ತಾ, ಹೆಚ್ಚು ಹೆಚ್ಚು ಕಸಬುಗಳ ಅಗತ್ಯ ಕಂಡಬಂದು ಜಾತಿಗಳ ಸಂಖ್ಯೆ ಕ್ರಮೇಣ ಹೆಚ್ಚಾಗುತ್ತಾ[೨೧೫] ಬಂದಿತು. ಮುಂದೆ ಈ ಜಾತಿಗಳು ಕಸಬುಗಳಿಗೇ ಮೀಸಲಾದವು. ಇಲ್ಲಿ ಆ ಜಾತಿಯಲ್ಲಿ ಹುಟ್ಟಿದವರು ಅದೇ ವೃತ್ತಿಯನ್ನು ಕೈಗೊಳ್ಳುವ ಅನಿವಾರ್ಯತೆ ಉಂಟಾಯಿತು.

ಪ್ರಾಚೀನ ಕಾಲದಿಂದ ಕರಾವಳಿ ಪ್ರದೇಶದದಲ್ಲಿ ವಾಸವಾಗಿದ್ದ ಮೂಲಜನರ ವಾಸಸ್ಥಳಗಳ ಹೆಸರುಗಳಿಂದ ತಿಳಿಯುತ್ತದೆ. ಋಗ್ವೇದದಲ್ಲಿ ಕಂಡುಬರುವ ಪಣಿಗಳ ವಾಸಸ್ಥಳ ತಿಳಿಸುವ ಪಣಿಯಾಡಿ, ಪಣಿಯಾಲ, ಪಣಂಬೂರು, ಪಣಿಯೂರು, ಪಣಪಿಲ[೨೧೬] ಹಾಗೂ ಗೋವಾಳರ ವಾಸಸ್ಥಳ ತಿಳಿಸುವ ತುಳುನಾಡು, ಗೋಪರಾಷ್ಟ್ರ ಗೋವಾ[೨೧೭] ಮುಂತಾದವುಗಳು ನೋಡ ಸಿಗುತ್ತವೆ. ಅಂತೆಯೇ ಬಿಲ್ಲವರ/ಹಳೆಪೈಕರ ವಾಸಸ್ಥಳವಾದ ಊರುಗಳು, ಮೀನುಗಾರರ ವೃತ್ತಿಯನ್ನು ಸೂಚಿಸುವ ಮುಕ್ಕುಟ, ಮೊಗೇರ, ಮರಕಲ ಮುಂತಾದ ಹೆಸರುಗಳ ಜನವರ್ಗ[೨೧೮]ದಿಂದ ಸ್ಪಷ್ಟವಾಗುತ್ತದೆ. ಇಲ್ಲಿ ವಾಸವಾಗಿರುವ ಬ್ರಾಹ್ಮಣರಲ್ಲಿ ಮೊದಲಿಗರಾದ ಸ್ಥಾನಿಕ ಬ್ರಾಹ್ಮಣರು ಕ್ರಿ.ಪೂ. ೨ನೇ ಶತಮಾನಕ್ಕಿಂತಲೂ ಮುಂಚಿತವಾಗಿ ಇಲ್ಲಿಗೆ ಬಂದಂತೆ ಕಂಡುಬರುತ್ತಾರೆ[೨೧೯]. ವಡ್ಡರ್ಸೆಯ ಶಾಸನದಲ್ಲಿ ಬ್ರಾಹ್ಮಣರ ಉಲ್ಲೇಖ ಬರುತ್ತದೆ[೨೨೦]. ದಕ್ಷಿಣ ಕನ್ನಡದ ಪುತ್ತೂರು, ಮೂಡಬಿದ್ರೆ, ಉಪ್ಪಿನಂಗಡಿಗಳಲ್ಲಿ ಕೊಂಗರೆಂಬ ಆದಿವಾಸಿ ಬುಡಕಟ್ಟಿನ ಜನರು ವಾಸ ಮಾಡುತ್ತಿದ್ದರೆನ್ನುವುದು ತಿಳಿಯುತ್ತದೆ[೨೨೧].

ಹಸಲರು, ಬಂಟರು, ಹೈಗರು, ನವಾಯಿತರು ಇತರ ಮುಸ್ಲಿಂ ಹಾಗೂ ಕ್ರಿಸ್ತ ಧರ್ಮದ ಅನುಯಾಯಿಗಳಾದ ಜನವರ್ಗಗಳು ಇಲ್ಲಿ ವಾಸವಾಗಿದ್ದರು. ವಡ್ಡರ್ಸೆಯ ಶಾಸನದಲ್ಲಿ ಹಾಗೂ ಕದಂಬರ (ಗುಡ್ನಾಪುರ) ಶಾಸನದಲ್ಲಿ ಬ್ರಾಹ್ಮಣರ ಉಲ್ಲೇಖ ಬರುವುದರಿಂದ ಆಗಿನಿಂದಲೇ ಈ ಪ್ರದೇಶ ಬ್ರಾಹ್ಮಣರ ಅಸ್ತಿತ್ವ ಮತ್ತು ಸಾಮಾಜಿಕವಾಗಿ ಪ್ರತಿಷ್ಠಿತ ಸ್ಥಾನ ಪಡೆದಿತ್ತು ಎಂದು ತಿಳಿಯುತ್ತದೆ. ಅಲ್ಲದೇ ಅದಾಗಲೇ ಸಮಾಜ ವಿವಿಧ ವರ್ಗಗಳಾಗಿ ವಿಭಜಿತವಾಗಿತ್ತು ಎಂದು ತಿಳಿಯುತ್ತದೆ. ಕದಂಬರ ಶಾಸನದಲ್ಲಿ ಬರುವ ಕೃಷಿ ಸಂಬಂಧಿತ ವಿಚಾರಗಳಿಂದ ಕರಾವಳಿಯ ಜನಜೀವನದಲ್ಲಿ ಕೃಷಿಯ ಉಲ್ಲೇಖ ಮಾಡುವ ಕ್ರಿ.ಶ. ೧೩೦೫ರ ೨ನೆಯ ಬಂಕಿದೇವನ ಶಾಸನವು ಭೂ ವ್ಯವಸಾಯದ ಗೇಣಿ ಪದ್ಧತಿಯನ್ನು ಉಲ್ಲೇಖಿಸುತ್ತದೆ. ಇದು ಅಂದು ಕರಾವಳಿ ಪ್ರದೇಶದ ಕೃಷಿಯಲ್ಲಿ ಪಡೆದ ಸ್ಥಾನ ಹಾಗೂ ಗೇಣಿಯಂಥಹ ಪದ್ಧತಿಯನ್ನು ಜಾರಿಗೊಳಿಸಿಕೊಂಡಿದ್ದು ತಿಳಿಯುತ್ತದೆ.

ಬಂದರುಗಳನ್ನೇ ಆಶ್ರಯಿಸಿ ರಾಜ್ಯಭಾರ ನಡೆಸಿದ ಕರಾವಳಿಯ ರಾಜಮನೆತನಗಳು, ಸಾಮಂತಪ್ರಭುಗಳು ಹಾಗೂ ತುಂಡರಸ–ಮಂಡಳೇಶ್ವರ– ಮಹಾಮಂಡಳೇಶ್ವರರಾದಿಯಾಗಿ ಎಲ್ಲ

ಆಳುವ ವರ್ಗ ಜಾತಿ ವಿಂಗಡನೆಯನ್ನು, ಶ್ರಮ ವಿಂಗಡನೆಯ ಹಿನ್ನಲೆಯಲ್ಲಿ ಬಳಸಿಕೊಂಡು ಬಂದರು. ಇದಕ್ಕೆ ಧರ್ಮದ, ಶಾಸ್ತ್ರದ ಬೆಂಬಲವನ್ನೂ ಪಡೆದಿದ್ದರು. ಇಲ್ಲಿ ಜಾತಿ ವಿಭಜನೆಯು ಆರ್ಥಿಕ ಉತ್ಪಾದನೆ, ಕೃಷಿ, ನಗರ ನೈರ್ಮಲ್ಯ, ರಕ್ಷಣೆ, ವ್ಯಾಪಾರಿ ವರ್ಗ, ಪುರೋಹಿತ ಹಾಗೂ ಆಳುವವರ್ಗದ ರಕ್ಷಣೆಗೆ ಅವಿಚ್ಛಿನ್ನವಾಗಿ ಬಳಕೆಯಾಗಿದೆ. ಕೂಲಿ,ಕೃಷಿಕ, ಕರಕುಶಲಕರ್ಮಿ, ಹಡಗುಗಳ ನಿರ್ಮಾಣ ಹಾಗೂ ವ್ಯಾಪಾರಿಗಳಿಗೆ ಸಹಾಯಕರಾಗಿ ಬ್ರಾಹ್ಮಣೇತರ ಜಾತಿಗಳ ಜನರು ಬಂದರು ಪ್ರದೇಶಗಳಲ್ಲಿ ವಾಸವಾಗಿದ್ದರು. ವೈಶ್ಯರಾದ ವ್ಯಾಪಾರಿ ವರ್ಗವು ಪ್ರಬಲವಾಗಿದ್ದು, ರಾಜಾದಾಯಕ್ಕೆ ಇವರಿಂದ ಭಾರೀ ತೆರಿಗೆ[೨೨೨] ದೊರೆಕುತ್ತಿತ್ತು.

೫.೨.೩. ಬ್ರಾಹ್ಮಣರು

ಕರಾವಳಿಯನ್ನು ಮೌರ್ಯರ ನಂತರ ಆಳಲಾರಂಭಿಸಿದ ಶಾತವಾಹನರು ತಮ್ಮ ಕಾಲದಲ್ಲಿ ಉತ್ತರದ ಬ್ರಾಹ್ಮಣರನ್ನು ಕರೆಸಿಕೊಂಡರು. ಈ ಬ್ರಾಹ್ಮಣರು ಕದಂಬರ ಕಾಲದಲ್ಲಿ ಅತಿ ಹೆಚ್ಚಿನ ರೂಪದಲ್ಲಿ ರಾಜ ಕೃಪೆಯನ್ನು ಪಡೆದರು. ಇವರ ಕಾಲದಲ್ಲಿ ಬ್ರಾಹ್ಮಣರು ದಾನದತ್ತಿ ಪಡೆಯಲಾರಂಭಿಸಿದರು. ಬನವಾಸಿಯಲ್ಲಿ ದೊರೆತ ಗೌತಮಿ ಪುತ್ರ ಶಾತಕರ್ಣಿಯ ಶಾಸನವು ಚಾತುವರ್ಣ್ಯದ ವಿಭಾಗಗಳನ್ನು ಎತ್ತಿ ಹಿಡಿದ ಬಗ್ಗೆ ತಿಳಿಸುತ್ತದೆ. ಮುಂದೆ ಕರಾವಳಿಯಲ್ಲಿ ಆಳಿದ ಕದಂಬರು, ಕಾದಂಬರು, ಆಳುಪರು, ಕೇಕೆಯರು, ಶಿಶುಗಲಿ ಪಾಂಡ್ಯರು, ಚಾಲುಕ್ಯರು, ಹೊಯ್ಸಳರು, ರಾಷ್ಟ್ರಕುಟರು ಮುಂತಾದ ಎಲ್ಲ ಅರಸು ಮನೆತನಗಳ ಆಡಳಿತ ಕಾಲದಲ್ಲಿ ಬ್ರಾಹ್ಮಣರು ದಾನಧತ್ತಿ ಪಡೆಯುವುದು, ದೇವಾಲಯಗಳಿಗೆ, ಸ್ವಂತಕ್ಕೆ ಕೊಡುಗೆ ಪಡೆಯುವುದು, ಅಗ್ರಹಾರಗಳಿಗೆ ವಿಶೇಷ ಕೊಡುಗೆ ಪಡೆದರಲ್ಲದೇ, ಅರಸನ ಆಸ್ಥಾನದಲ್ಲಿ ಪೌರೋಹಿತ್ಯದ ಗೌರವಕ್ಕೂ ಭಾಜನರಾದರು.

ಕದಂಬ ವಂಶದ ಕುರಿತು ಇರುವ ಶಾಸನಗಳು[೨೨೩] ಇವರನ್ನು ಬ್ರಾಹ್ಮಣರೆಂದು ಹೇಳುತ್ತವೆ. ಆದರೆ ಹಾನಗಲ್ಲಿನ ಕಂದಂಬರ ಶಾಸನ[೨೨೪] ಮಯೂರವರ್ಮನ ಮೂಲವನ್ನು ಹಿಮಾಲಯಕ್ಕೂ ಮತ್ತು ಆತನು ಅಹಿಚ್ಛತ್ರದಿಂದ ಹದಿನೆಂಟು ಬ್ರಾಹ್ಮಣರನ್ನು ಕರೆ ತಂದು ಬನವಾಸಿಯ ಬಳಿಯಲ್ಲಿ ನೆಲೆಗೊಳಿಸಿದನೆಂದು ಹೇಳುತ್ತದೆ. ಆದರೆ ಈ ಶಾಸನದ ಕಾಲಾವಧಿ ಹನ್ನೊಂದು-ಹನ್ನೆರಡನೇ ಶತಮಾನವಾಗಿದ್ದು[೨೨೫] ಈ ವಿಚಾರದ ನೈಜತೆಯ ಬಗ್ಗೆ ಹಲವು ವಿದ್ವಾಂಸರು ಸಂಶಯ ವ್ಯಕ್ತಪಡಿಸುತ್ತಾರೆ.

ಆದರೆ ಕಾಕುಸ್ಥವರ್ಮನ ತಾಳಗುಂದದ, ಮೇಲೆ ಉಲ್ಲೇಖಿಸಿದ ಶಾಸನವು ಹೇಳುವ ವಿಚಾರ ನಿಜವಾಗಿದ್ದರೆ ಮಯೂರವರ್ಮನು ಹಿಂದೆ ಬ್ರಾಹ್ಮಣವಟು ಶರ್ಮನೆಂದೂ ಮುಂದೆ ಕ್ಷತ್ರಿಯನಾಗಿ-ಅರಸನಾಗಿ ವರ್ಮನಾದನೆಂದು ನಂಬಬೇಕಾಗುತ್ತದೆ. ಆದರೆ ಕದಂಬರ ಈ

ಶಾಸನದಲ್ಲಿ 'ಬ್ರಾಹ್ಮಣ' ಪದ ಮೊದಲ ಬಾರಿಗೆ ಉಲ್ಲೇಖಿತವಾಗಿ ಅವರ ಪಾವಿತ್ರ್ಯತೆ ಮತ್ತು ಪೂಜ್ಯತೆಯನ್ನು ಹೇಳುತ್ತದೆ. ಯಜ್ಞಯಾಗಾದಿಗಳನ್ನು ಮಾಡುವುದು ಬ್ರಾಹ್ಮಣರ ಶ್ರೇಷ್ಠತೆಯ ಲಕ್ಷಣ ಎಂದು ತಿಳಿಸುತ್ತದೆ, ಭಟರಿಕಾಕುಸ್ಥನ ತಾಳಗುಂದ ಶಾಸನವು[೨೨೬] ಮೂವತ್ತು ಜನ ಬ್ರಾಹ್ಮಣರಿಗೆ ಅಶನಾರ್ಥವಾಗಿ ಧನ ದಾನ ನೀಡಿದ ಬಗ್ಗೆ ಹೇಳುತ್ತದೆ. ಈ ಶಾಸನದ ಕಾಲಕ್ಕಾಗಲೇ ಅರಸರಿಂದ ಪುಷ್ಕಳವಾದ ದಾನ ಪಡೆಯುವ ಗೌರವಕ್ಕೆ ಬ್ರಾಹ್ಮಣರು ಭಾಧ್ಯಸ್ಥರಾಗಿದ್ದರು ಎಂದು ತಿಳಿಯುತ್ತದೆ. ಮೃಗೇಶವರ್ಮನ ಎರಡನೆಯ ವರ್ಷದ ತಾಮ್ರ ಶಾಸನ, ವಿಜಯ ಶಿವಮೃಗೇಶವರ್ಮನ ಆರನೆಯ ವರ್ಷದ ಹೊಸನಗರ ತಾಮ್ರ ಶಾಸನ, ಮೃಗೇಶ ವರ್ಮನ ಹಿರೇಶಕುನದ ತಾಮ್ರಶಾಸನ, ಶಿವಮಾಂಧಾತೃವರ್ಮನ ಕೊಡಗೆರೆಯ ತಾಮ್ರ ಶಾಸನ, ರವಿವರ್ಮನ ನೀಲಂಬೂರ ತಾಮ್ರಪತ್ರ, ರವಿವರ್ಮನ ಕುಂಟಗಣಿ ತಾಮ್ರಶಾಸನ, ರವಿವರ್ಮನ ಮೂವತ್ತೈದನೆಯ ವರ್ಷದ ಶಿರಸಿ ತಾಮ್ರಶಾಸನ, ವಿಷ್ಣುವರ್ಮನ ಬೀರೂರು ತಾಮ್ರಶಾಸನ ಹಾಗೂ ಹೆರ್ಬಟ ತಾಮ್ರಶಾಸನ, ಎರಡನೆ ಕೃಷ್ಣವರ್ಮನ ಬನ್ನಹಳ್ಳಿ ತಾಮ್ರಶಾಸನ, ಇಮ್ಮಡಿ ಕೃಷ್ಣವರ್ಮನ ಶಿರಸಿ ತಾಮ್ರ ಪಟ ಹಾಗೂ ಬೆಣ್ಣೂರು ತಾಮ್ರಪಟ, ಮಾಧಾಂತನ ಶಿವಮೊಗ್ಗಾ ತಾಮ್ರಶಾಸನ, ಭೋಗಿವರ್ಮನ ತಗಳೆ ತಾಮ್ರ ಶಾಸನ ಮಧುವರ್ಮನ ತಡಗಣಿ ಶಿಲಾ ಶಾಸನಗಳೆಲ್ಲಾ ಬ್ರಾಹ್ಮಣರಿಗೆ ವಿವಿಧ ಬಗೆಯ ದಾನ ನೀಡಿದ್ದನ್ನು ತಿಳಿಸುತ್ತದೆ. ಕದಂಬರ ಕಾಲದಲ್ಲಿ ಬ್ರಾಹ್ಮಣರಿಗೆ ಉನ್ನತವಾದ ಸ್ಥಾನ ದೊರೆತ್ತಿತ್ತಲ್ಲದೆ. ರಾಜಾಸ್ಥಾನದಲ್ಲೂ ಇವರಿಗೆ ಪುರೋಹಿತ ಸ್ಥಾನ ದೊರೆತ್ತಿತ್ತು.

ಕದಂಬರು ಉತ್ತರದ ಬ್ರಾಹ್ಮಣರನ್ನು ದಕ್ಷಿಣಕ್ಕೆ ಕರೆತರಲು ವಿಶೇಷ ಪ್ರೂತ್ಸಾಹವನ್ನಿತ್ತರು[೨೨೭]. ಹಾಗೇ ಕರೆತಂದ ಬ್ರಾಹ್ಮಣರಲ್ಲಿ ಹೈವಿಕರು ಪ್ರಮುಖರೆಂದು ತಿಳಿದು ಬರುತ್ತದೆ.

ದಕ್ಷಿಣದಲ್ಲಿ ಕದಂಬರ ಕಾಲದ ಪೂರ್ವದಲ್ಲೇ ಕ್ರಿ.ಪೂ ೨೦೦ ರಲ್ಲಿ ಪ್ರಥಮ ವಲಸೆಯು ಕಂಡುಬಂದಿತು[೨೨೮]. ಮೌರ್ಯರ ಪತನದ ನಂತರ ಸ್ಥಾಪಿತವಾದ ಶತವಾಹನರ ಪ್ರಭುತ್ವ ಕಾಲದಲ್ಲಿ ಪಶ್ಚಿಮ ಕರಾವಳಿಯಲ್ಲಿ ಕೊಂಕಣದಿಂದ ಬಂದಿರಬಹುದಾದ ಬ್ರಾಹ್ಮಣರು ಸ್ಥಾನಿಕರು[೨೨೯]. ಶೈವರಾದ ಸ್ಥಾನಿಕರು ಶೈವಾರಾಧನೆ ಶೈವಗಣದ ಆರಾಧನೆಯನ್ನು ರೂಢಿಗೆ ತಂದರು. ತಮ್ಮ ಸುಪರ್ಧಿಗೆ ಬಂದ ದೇವಾಲಯಗಳಲ್ಲಿ ಪೂಜೆ–ಪುನಸ್ಕಾರ ನಡೆಸತೊಡಗಿದರು. ಇಲ್ಲಿಯ ಬ್ರಾಹ್ಮಣರ ಎರಡನೇ ವಲಸೆಯನ್ನು ಕದಂಬರ ಕಾಲಕ್ಕೆ ಕೊಂಡೊಯ್ಯಲಾಗಿದೆ[೨೩೦]. ಅಂತೆಯೇ ಮೂರನೇ ವಲಸೆಯು ಸಾಧಾರಣ ೧೧ನೇ ಶತಮಾನದಲ್ಲಿನಡೆಯಿತು[೨೩೧] ಎಂದು ವಿದ್ವಾಂಸರು ಗುರುತಿಸಿದ್ದಾರೆ. ಚೋಳರ ದಾಳಿಯ ಪರಿಣಾಮದಿಂದಲೂ ಕದಂಬವಂಶದವರೊಳಗೆ ಹಕ್ಕು ಸಂಬಂಧದ ಕಲಹದ ಪರಿಣಾಮವಾಗಿ ಕ್ರಿ.ಶ ೧೦೭೫ ರ ಸುಮಾರಿಗೆ ಕದಂಬರ ರಾಜ್ಯದಿಂದ ತುಳುವ ರಾಜ್ಯಕ್ಕೆ

ಬ್ರಾಹ್ಮಣರ ವಲಸೆ ಉಂಟಾಯಿತ್ತೆಂದು ಹೇಳಲಾಗಿದೆ[೨೩೨]. ವಡ್ಡರ್ಸೆಯ ಶಾಸನವು ಬ್ರಾಹ್ಮಣರನ್ನು ಉಲ್ಲೇಖಿಸುತ್ತದೆ. ಈ ಕಾಲಕ್ಕಾಗಲೇ ಆಳುಪರು ದಕ್ಷಿಣದ ಕರಾವಳಿಯಲ್ಲಿ ಪ್ರಬಲರಾಗಿದ್ದರು. ಇವರ ಕಾಲದಲ್ಲಿ ಬ್ರಾಹ್ಮಣರು, ಉತ್ತರದ ಕರಾವಳಿಯಲ್ಲಿ ಕದಂಬರ ಆಡಳಿತದಲ್ಲಿ ಪಡೆದ ಸ್ಥಾನ-ಮಾನ-ಗೌರವ ಪಡೆಯ ತೊಡಗಿದರು. ಬಾರ್ಕೂರಿನ ೧೩೭೯-೮೦ ರ ಶಾಸನ[೨೩೩], ೧೩೯೪-೯೫ ರ ಮಣಿಗಾರಕೇರಿ ಶಾಸನ[೨೩೪] ಹಾಗೂ ವಿಜಯನಗರದ ರಾಜ್ಯಪಾಲರ ೧೩೯೫-೯೬ ರ ಶಾಸನಗಳು[೨೩೫] ಬ್ರಾಹ್ಮಣರಿಗೆ ನೀಡಿದ ದಾನದತ್ತಿಯ ಬಗ್ಗೆ ತಿಳಿಸುತ್ತವೆ.

ನಗರಗಳು-ಪೇಟೆ-ಪಟ್ಟಣಗಳು ಬೆಳೆದಂತೆ, ಬಂದರುಗಳ ಮೂಲಕ ವ್ಯಾಪಾರ ವ್ಯವಹಾರ ಭರದಿಂದ ಸಾಗುತ್ತಿದ್ದಂತೆಲ್ಲಾ ವ್ಯಾಪಾರಿಗಳ ಕೊಡುಗೆಗಳಿಂದ ನಡೆಯುತ್ತಿದ್ದ ದೇವಾಲಯಗಳ ಪೌರೋಹಿತ್ಯವನ್ನು ಇವರು ನಡೆಸುತ್ತಿದ್ದರು ಕರಾವಳಿಯ ಬಹುತೇಕ ದೇವಾಲಯಗಳು, ಶೈವ, ಶಾಕ್ತ, ವೈಷ್ಣವ ಮುಂತಾದ ದೇವಾಯಗಳಲ್ಲಿಯ ಪುರೋಹಿತರು ಬ್ರಾಹ್ಮಣರಾಗಿದ್ದರು[೨೩೬]. ಸ್ಥಳೀಯ ನ್ಯಾಯ ತಿರ್ಮಾನ, ಪಾಪ-ಪುಣ್ಯ, ಸ್ವರ್ಗ-ನರಕಗಳ ಬಗ್ಗೆ ಶಾಸ್ತ್ರಗಳಲ್ಲಿ ಹೇಳಿರುವ ರೀತಿ-ನೀತಿಗಳನ್ನು ಜಾರಿಗೊಳಿಸುವ ಜವಾಬ್ದಾರಿಯನ್ನು ಇವರು ಹೊಂದಿದ್ದರು.

ಬ್ರಾಹ್ಮಣರಲ್ಲೂ ವರ್ಣಸಂಕರ ಉಂಟಾದ ಬಗ್ಗೆ ಕೆಲವು ಮಾಹಿತಿಗಳಿವೆ. ಆಂಧ್ರದಿಂದ ಅಬ್ರಾಹ್ಮಣರನ್ನೂ ತಂದು ಇಲ್ಲಿ ಬ್ರಾಹ್ಮಣರಾಗಿಸಿದ್ದ ಬಗ್ಗೆ[೨೩೭] ಮಧ್ವಾಚಾರ್ಯರು ಶೂದ್ರರನ್ನು ಮತಾಂತರಿಸಿ[೨೩೮] ಮೇಲಕ್ಕೇರಿಸಿದ ಬಗ್ಗೆ ತಿಳಿದು ಬರುತ್ತದೆ. ಹೀಗೆ ಅನೇಕ ಬಗೆಯಲ್ಲಿ ಕರಾವಳಿಗೆ ಆಗಮಿಸಿದ ಬ್ರಾಹ್ಮಣರು ಮುಂದೆ ಸಾಂಸ್ಕೃತಿಕ ಪ್ರಭುತ್ವ ಸ್ಥಾಪಿಸಿಕೊಂಡು ಪ್ರಮುಖ ಸ್ಥಾನ ಪಡೆದರು.

೫.೨.೪. ದುಡಿಯುವ ವರ್ಗ ಜನಸಾಮಾನ್ಯರು

ಬಂದರುಗಳಲ್ಲಿ ವ್ಯಾಪಾರ ವಹಿವಾಟು ನಡೆಯುತ್ತಿದ್ದಾಗ ಸಮಾಜದ ಬಹುದೊಡ್ಡ ಸಂಖ್ಯೆಯಲ್ಲಿದ್ದ ಜನಸಾಮಾನ್ಯರು ಕಾರ್ಮಿಕರಾಗಿ ಕೂಲಿಗಳಾಗಿ ಮತ್ತು ತೋಟಗದ್ದೆಗಳಲ್ಲಿ ದುಡಿಯುವ ಕೃಷಿ ಕಾರ್ಮಿಕರಾಗಿ ಜೀವಿಸುತ್ತಿದ್ದರು. ಸರಕು ಸಾಗಾಣಿಕೆಯ ಬಂಡಿಗಳನ್ನು ಅಂದರೆ ಎತ್ತು, ಕತ್ತೆ, ಕುದುರೆಗಳಿಗೆ ಕಟ್ಟುವ ಬಂಡಿಗಳನ್ನು ಮತ್ತು ಬಹುಮುಖ್ಯವಾಗಿ ದೋಣಿ, ನೌಕೆ, ಹಡಗುಗಳ ನಿರ್ಮಾಣ ಮಾಡುವ ಕಾರ್ಮಿಕರಾಗಿ ದುಡಿಯುತ್ತಿದ್ದರು.

ಹಡಗು, ನೌಕೆಗಳಿಗೆ ಬೇಕಿದ್ದ ಹಾಯಿ, ಹುಟ್ಟು ಮತ್ತಿತರ ಸಲಕರಣೆಗಳ ಸಿದ್ಧತೆಯು ದೊಡ್ಡ ಉದ್ಯಮವಾಗಿತ್ತು. ಹಗುರ ಹಾಗೂ ಗಟ್ಟಿಯಾದ ಮರಗಳನ್ನು ಅರಣ್ಯದಿಂದ ತಂದು ಅದನ್ನು ಹಡಗುಗಳ ಆಕಾರದಂತೆ ಕತ್ತರಿಸಿ ಸಿದ್ಧಪಡಿಸುವುದು, ನೀರಿನಲ್ಲಿ ಅವು ಹಾಳಾಗದಂತೆ ವನಸ್ಪತಿ ಇತ್ಯಾದಿಗಳ ತೈಲಗಳನ್ನು ಸಿದ್ಧಪಡಿಸಿ ಅದಕ್ಕೆ ಹಚ್ಚುವುದು, ಕತ್ತದ ನಾರಿನಿಂದ ಅನೇಕ

ರೀತಿಯ ಸಲಕರಣೆ, ಹಗ್ಗ ತಯಾರಿಸುತ್ತಿದ್ದರು. ಈ ಕತ್ತದ ನಾರಿನ ಬಳ್ಳಿ–ಹಗ್ಗ ಮತ್ತು ಇತರ ಸಲಕರಣೆಗಳು ದೋಣಿಯ, ಹಡಗಿನ ಹಲಿಗೆಗಳನ್ನು ಜೋಡಿಸುವಲ್ಲಿ ಸಹಾಯಕವಾಗಿದ್ದವು. ತುಳುಪಾಡ್ದನದಲ್ಲಿ ತಂಡೇಲರ ವಿಚಾರ ಬರತ್ತದೆ. ಇವರು ಹಡಗುಗಳ ಮುಖ್ಯಸ್ಥರಾಗಿದ್ದಿರ ಬೇಕು. ಇವರು ಸ್ವಂತ ಹಡಗು ಹೊಂದಿದ್ದ ಬಗ್ಗೆ ಯಾವುದೇ ದಾಖಲೆಗಳಿಲ್ಲ. ಇವರು ಹಡಗು ನಡೆಸಲು ನುರಿತ ಕಾರಣ ಇವರನ್ನು ಹಡಗುಗಳ ಮಾಲೀಕರು ನೇಮಿಸಿಕೊಂಡಿದ್ದರು. ಮರಕಾಲ, ಮೋಗೆರರು ಮತ್ತು ಖಾರ್ವಿ, ಹರಿಕಂತರು ಸಾಗರಯಾನದ ಪರಿಚಯವನ್ನು ಪಡೆದಿದ್ದುದ್ದರಿಂದ ಇದರ ಸಹಾಯವನ್ನು ಹಡಗು ಮಾಲೀಕರು ಪಡೆಯುತ್ತಿದ್ದರು. ಇವರೊಂದಿಗೆ ಸ್ಥಳೀಯ ಕೃಷಿಕಾರ್ಮಿಕರು ತೋಟಗಳಲ್ಲಿ ವೀಳ್ಯದಎಲೆಗಳನ್ನು ಸಂಗ್ರಹಿಸುವುದು, ತೋಟಗಳಲ್ಲಿ ಮರಗಳಿಗೆ ನೀರು ಹಾಕುವುದು, ಬಾಳೆ–ಹೂವು ಮುಂತಾದವುಗಳನ್ನು ಬೆಳೆಸುವ ಕೃಷಿ ಮಾಡುತ್ತಿದ್ದರು. ಒಕ್ಕಲು, ಕೀಳೊಕ್ಕಲು, ಹೊಲೆಯಾಳು, ಮತ್ತು ಹೆಣ್ಣಾಳು ಎಂಬ ರೈತಾಪಿ ವಿಭಾಗಗಳನ್ನು ವಿದ್ವಾಂಸರು ಅಂದಿನ ಸಮಾಜದಲ್ಲಿ ಗುರುತಿಸಿದ್ದಾರೆ. ಈ ರೀತಿಯ ವಿಭಾಗಗಳಿಂದ ಕೃಷಿ ಕಾರ್ಮಿಕರಲ್ಲೂ ತಾರತಮ್ಯವನ್ನು ಏಣಿಸುತ್ತಿದ್ದರೆಂದು ತಿಳಿಯುತ್ತದೆ. ಅಲ್ಲದೇ ಹೊಲೆಯಾಳು ಎನ್ನುವುದು ಶ್ರಮಿಕರಲ್ಲೂ ಜಾತಿ ವಿಭಜನ ನಡೆದಿತ್ತು ಎಂಬುದನ್ನು ತೋರಿಸುತ್ತದೆ. ತೆರಿಗೆಯಲ್ಲಿ ಬರುವ ಜೀತಗದ್ಯಾಣ ಎಂಬ ಪದವು ಜೀತಗಾರಿಕೆಯನ್ನು ಸಣ್ಣರೀತಿಯಲ್ಲಾದರೂ ಅಂದು ಹೊಂದಿದ್ದು ತಿಳಿಸುತ್ತದೆ.

ಕರಾವಳಿಯ ದುಡಿಯುವ ವರ್ಗಗಳಲ್ಲಿ ಹಲವಾರು ಜಾತಿಗಳನ್ನು ಕಾಣಬಹುದು. ವೃತ್ತಿಯಿಂದ ಮರ ಕಡಿಯುವವರು, ಮೀನುಗಾರರು, ನೌಕೆಗಳನ್ನು ನಿರ್ಮಿಸುವವರು, ಕುಂಬಾರರು, ಕಮ್ಮಾರರು, ಅಗಸರು, ಅಂಬಿಗರು, ಮಲೆ ಕುಡಿಯರು, ಕುರುಬರು, ಬೋವಿಗಳು, ದೇವಾಡಿಗರು, ಈಡಿಗರು, ಕಂಚುಗಾರರು, ಹಳೆಪೈಕರು (ಬಿಲ್ಲವ), ಕೊರಗರು, ಹೊಲೆಯರು ಮುಂತಾದವರಿದ್ದರು. ಸಮಾಜಕ್ಕೆ ಬೇಕಿದ್ದ ವೃತ್ತಿಗಳಲ್ಲಿ ಇವರು ತೊಡಗಿದ್ದರು. ಕೃಷಿಕರೂ, ಕೃಷಿ ಕಾರ್ಮಿಕರೂ, ಅರಣ್ಯ ಉತ್ಪನ್ನ ತರುವವರೂ, ಕರಕುಶಲ ವೃತ್ತಿಯವರು, ನೇಗ್ಗೆಯ ಕಾರ್ಮಿಕರೂ, ಚಕ್ಕಡಿ–ಕುದುರೆ ಗಾಡಿಗಳನ್ನು ನಿರ್ಮಿಸುವವರು, ತೋಟಗಾರಿಕೆ ನಡೆಸುವವರೂ, ಹೈನುಗಾರಿಕೆ ನಡೆಸುವವರೂ, ಶಿಲ್ಪಿಗಳು, ಎಣ್ಣೆ ತೆಗೆಯುವವರೂ ಮುಂತಾಗಿ ಸಮಾಜದ ಸುಖ–ನೆಮ್ಮದಿಗೆ ಬೇಕಿದ್ದ ವೃತ್ತಿಗಳನ್ನು ಮಾಡುತ್ತಿದ್ದರು. ವ್ಯಾಪಾರವೂ ಒಂದು ಪ್ರಮುಖ ಉದ್ಯೋಗವಾಗಿತ್ತು. ಜಾತಿಗಳು ಗಣನೆಗೆ ಸಿಗದಿದ್ದರೂ ಅನೇಕ ವೃತ್ತಿಗಳು ಸಿಗುತ್ತವೆ. ಆದರೆ ಆ ವೃತ್ತಿಯನ್ನೂ ಮಾಡಲು ಪ್ರತ್ಯೇಕ ಜಾತಿಗಳಿದ್ದಂತೆ ಕಾಣದು. ಒಂದೇ ಜಾತಿಯವರು ಬೇರೆ ಬೇರೆ ವೃತ್ತಿಗಳನ್ನವಲಂಭಿಸಿದ್ದರೂ ಒಂದೇ ಜಾತಿಯವರೆಂದು ಕರೆಸಿಕೊಳ್ಳುತ್ತಿದ್ದಿರಬಹುದು. ಆದರೆ ಈ ಎಲ್ಲ ಜಾತಿಗಳು ಹಿಂದೂ, ಜೈನ, ಬೌದ್ಧ

ಅಥವಾ ಬೇರಾವುದೇ ಆಚರಣೆಯವರಾಗಿರುವ ಸಾಧ್ಯತೆಗಳಿದ್ದವು. ಇವರ ಧರ್ಮ ಆಚರಣೆ ಕೇವಲ ಹೆಸರಿಗೆ ಮಾತ್ರವಾಗಿದ್ದರೂ, ಜಾತಿಯ ಭಿನ್ನತೆಯನ್ನು ಆಚರಿಸಲೇ ಬೇಕಿತ್ತು. ಶಾಸ್ತ್ರಗಳು ಹೇಳಿದಂತೆ ನಡೆದುಕೊಳ್ಳಬೇಕಿತ್ತು. ಕ್ರಿ.ಶ ೧೧೨೫[೨೩೯]ರ ಶಾಸನ ಒಂದು ಅಸ್ಪೃಶ್ಯರ ದಿನದ ಬದುಕನ್ನು ತಿಳಿಸುತ್ತದೆ. ಈ ಶಾಸನವು ಊರಿನ ಹೊರಗೆ ವಾಸಿಸುತ್ತಿದ್ದವರು ಸಮ್ಮಗಾರರು. ಊರಿನ ಸತ್ತದನವನ್ನು ತೆಗೆಯುವವರು, ಚರ್ಮದ ವಸ್ತು ನಿರ್ಮಿಸಿ ಕೊಡುವವರು ಎಂದು ಹೇಳುತ್ತದೆ. ಹಾಗೇಯೇ ಅಸ್ಪೃಶ್ಯರು ಹೊಲಗೇರಿಯಲ್ಲಿ ವಾಸಿಸುತ್ತಿದ್ದರೆಂದು ತಿಳಿಸುವ ಶಾಸನವಿದೆ[೨೪೦]. ಇವುಗಳ ಆಧಾರದಲ್ಲಿ ಕರ್ನಾಟಕವು ಅಸ್ಪೃಶ್ಯತೆಯನ್ನು ಕಟುವಾಗಿ ಆಚರಿಸುತ್ತಿತ್ತಲ್ಲದೇ, ಮನು ಶಾಸ್ತ್ರವು ಹೇಳುವಂತೆ ಪಂಚಮರು ಊರಿನ ಹೊರಗೆ ವಾಸಿಸಬೇಕು, ಒಡೆದ ಮಡಿಕೆಯಲ್ಲಿ ಆಹಾರ ತಿನ್ನಬೇಕು, ಊರಿನೋಳಗೆ ಬರುವಾಗ ಹಿಂದೆ ದೊಡ್ಡ ಮುಳ್ಳಿನ ಕಂಟಿಕಟ್ಟಿಕೊಂಡು ಬರಬೇಕು, ಅವರ ಹೆಜ್ಜೆಗಳೂ ಊರಿನಲ್ಲಿ ಮೂಡಬಾರದು, ಅವರು ಕೊರಳಿಗೆ ಮಡಿಕೆ ಕಟ್ಟಿಕೊಂಡು ಊರೋಳಗೆ ಬರಬೇಕು. ತಮ್ಮ ಎಂಜಲು ಊರಿನಲ್ಲಿ ಉಗಿಯದೆ ಮಡಿಕೆಯಲ್ಲಿ ಉಗಿದುಕೊಳ್ಳಬೇಕು, ಸ್ತ್ರೀಯರು ಕಬ್ಬಿಣದ ಆಭರಣ ತೊಡಬೇಕು ಮತ್ತು ಅಸ್ಪ್ರಶ್ಯ ಪುರುಷರು ಸ್ತ್ರೀಯರು ಊರೊಳಗೆ ಬರುವಾಗ ಸೂರ್ಯನೆತ್ತಿಯ ಮೇಲಿರಬೇಕು ಅವರ ನೆರಳು ಪಾದದ ಬುಡದಲ್ಲಿ ಬಿದ್ದಿರಬೇಕು. ಉಳಿದ ಸಮಯದಲ್ಲಿ ಊರೊಳಗೆ ಬರುವಾಗ ಕಟ್ಟಿಗೆಯ ಹಲಿಗೆ ಬಡಿಯುತ್ತ ಬರಬೇಕು. ಮೇಲ್ಜಾತಿಯವರ ದೃಷ್ಟಿ ಅವರ ಮೇಲೆ ಬೀಳಬಾರದು, ಹಾಗೂ ನೆರಳು ಸೋಕಬಾರದು. ಮುಂತಾದ ನೀತಿಗಳು ಜಾರಿಯಲ್ಲಿದ್ದವು ಅಸ್ಪೃಶ್ಯರು ಗುಲಾಮರಂತೆ ಜೀವಿತ ನಡೆಸುತ್ತಿದ್ದರು. ಅವರ ಬದುಕಿಗೆ ಯಾವುದೇ ಬೆಲೆಯಿದ್ದಂತೆ ಕಾಣದು. ಯಾವುದೇ ಶಾಸನ ಅವರ ಜೀವನ ಬದಲಾವಣೆಗೆ ನೀಡಿದ ಕೊಡುಗೆಯಾಗಲೀ, ದಾನವಾಗಲೀ ಹೇಳದು. ಅಲ್ಲದೇ ದೇವಾಲಯದ ಪ್ರಸ್ತಾಪ ಮಾಡುವ ಶಾಸನಗಳಲ್ಲಿ ದಲಿತರ-ಅವರ್ಣೀಯರ ಕುರಿತು ಯಾವುದೇ ಉಲ್ಲೇಖಗಳಿಲ್ಲ. ಬಂದರುಗಳು ಬೆಳೆದಂತೆ ಈ ಅಸ್ಪೃಶ್ಯರು ವನೋತ್ಪನ್ನಗಳನ್ನು ತಂದುಕೊಡುವ, ಹೇರುಗಳಲ್ಲಿ ಸರಕು ಸಾಗಿಸುವ ಮತ್ತು ದುರ್ಗಮ ಕಾಡುದಾರಿಯನ್ನು ಸಮತಟ್ಟು ಮಾಡಿಕೊಟ್ಟು ಚಕ್ಕಡಿ ಇತ್ಯಾದಿ ಗಾಡಿಗಳ ಸಾಗಾಟಕ್ಕೆ ಅನುಕೂಲ ಮಾಡಿಕೊಡುವ ಕೂಲಿಗಳಂತೆ ಬದುಕುತ್ತಿದ್ದಿರಬೇಕು. ಇವರಿಗೆ ನಿರ್ದಿಷ್ಟಪಡಿಸಿದ ಕೂಲಿಯಾಗಲೀ, ಖಾಯಂ ಕೆಲಸವಾಗಲೀ ಸಿಗುತ್ತಿರಲಿಲ್ಲ. ಉಳಿದ ಸಮಯದಲ್ಲಿ ಕಡಲು, ಅರಣ್ಯಗಳೇ ಇವರ ಹಸಿವನ್ನು ಇಂಗಿಸುವ ಮಾಧ್ಯಮಗಳಾಗಿದ್ದವು. ಯಾಕೆಂದರೆ ಪ್ರಾಚೀನ ಕರ್ನಾಟಕದಲ್ಲಿ ದಲಿತರು ಭೂಮಿ ಹೊಂದಿದ್ದ ಬಗ್ಗೆ ಯಾವ ದಾಖಲೆಗಳೂ ಇಲ್ಲ. ಅಲ್ಲದೇ ಇವರನ್ನು ಮೇಲು ಜಾತಿಯ, ಮಟ್ಟಿಸಿ ಕೊಳ್ಳದ ಶೂದ್ರರು-ವೈಶ್ಯರು ತಮ್ಮ ಕೃಷಿ ಭೂಮಿಯಲ್ಲಿ ದುಡಿಸಿಕೊಂಡ ಸಾಧ್ಯತೆ ಬಹುಕಡಿಮೆ.

ಹಿಂದೂ ಧರ್ಮದ ಮೇಲಿನ ಮೂರು ವರ್ಣಗಳ ಸೇವೆಯನ್ನೂ ಮಾಡುವವರೇ ಶೂದ್ರರು. ಈ ಶೂದ್ರರು ಸ್ಪರ್ಶರು. ಇವರು ವಿವಿಧ ವೃತ್ತಿಗಳನ್ನು ಮಾಡುವವರು. ಊರಿನಲ್ಲಿಯೇ ಇವರು ವಾಸಿಸುತ್ತಾರೆ. ಆದರೆ ಇವರಿಗೆ ಅವರದೇ ಆದ ವಾಸಸ್ಥಳ, ಕೇರಿಯ ವ್ಯವಸ್ಥೆ ಇರುತ್ತಿತ್ತು.

ಈ ಶೂದ್ರರು ಯಾರೆಂಬ ಬಗ್ಗೆ ತುಂಬಾ ಜಿಜ್ಞಾಸೆಗಳಿವೆ. ಆರ್ಯರೊಂದಿಗೆ ಬಂದವರೆಂದೂ ಮತ್ತು ಆರ್ಯರು ಬರುವ ಮೊದಲೇ ಭಾರತದಲ್ಲಿದ್ದವರೆಂದೂ ಎರಡು ರೀತಿಯ ವಾದಗಳು ಪ್ರಚಲಿತವಿದೆ. ಆರ್.ಎಸ್. ಶರ್ಮಾರವರು ತಮ್ಮ ಪ್ರಾಚೀನ ಭಾರತದಲ್ಲಿ ಶೂದ್ರರು ಕೃತಿಯಲ್ಲಿ ಶೂದ್ರರ ಕುರಿತು (ಅ) ಬಾಹ್ಯ ಮತ್ತು ಆಂತರಿಕ ಸಂಘರ್ಷದ ಫಲವಾಗಿ ಆರ್ಯ ಮತ್ತು ಆರ್ಯ ಪೂರ್ವರಲ್ಲಿನ ಅನೇಕರು ಮೊದಲು ಆಕಳು, ಮುಂದೆ ನೆಲ, ಹೀಗೆ ತಮ್ಮ ಅಸ್ತಿತ್ವ ಕಳೆದುಕೊಂಡು ಶೂದ್ರ ವರ್ಣದವರಾದರು. ಆರ್ಯ ಪೂರ್ವದವರಿದಲೇ ಶೂದ್ರವರ್ಣ ರಚಿತವಾಯಿತೆಂದು ಹೇಳುವುದು ಆರ್ಯರಿಂದಲೇ ಆ ಗುಂಪು ರಚಿತವಾಯಿತೆಂದು ಹೇಳುವುದರಷ್ಟೇ ಅಸಮಂಜಸವಾದುದು (ಆ) ವರ್ಗ ವ್ಯತ್ಯಾಸಗಳ ಮೂಲದಲ್ಲಿ ಜನಾಂಗೀಯ ಅಸಮಾನತೆ ಒಂದು ಕಾರಣವಾಗಿ ಇರುತ್ತದೆಂಬ ಸಮಾಜ ಶಾಸ್ತ್ರದ ತತ್ವ ಆಂಶಿಕವಾಗಿ ಮಾತ್ರ ಸತ್ಯ. ಆದ್ದರಿಂದ ಮೊದಲು ಬುಡಕಟ್ಟಿನ ಹೆಸರಾದ ದಾಸ, ಶೂದ್ರ ಶಬ್ದಗಳು ಮುಂದೆ ಬಹು ಸಂಖ್ಯೆಯಲ್ಲಿ ಸ್ಪಷ್ಟರಾಗಿ ಆರ್ಯ ಮತ್ತು ಆರ್ಯಪೂರ್ವ ಜನರಿಗೆಲ್ಲ ವರ್ಣಜ್ಯೋತಕವಾಗಿ ಬಂದಿತು (ಇ) ಋಗ್ವೇದದ ಕಾಲದ ಸಮಾಜದಲ್ಲಿ ಶೂದ್ರ ವರ್ಣವೆಂಬುದು ಗಣನೆಗೆ ಬರುವಂತಹ ರೀತಿಯಲ್ಲಿ ಅಸ್ತಿತ್ವಕ್ಕೆ ಬಂದಿರಲಿಲ್ಲ. ಆ ಕಾಲದಲ್ಲಿ ಸ್ವತಃ ದನಗಾಹಿ ಬುಡಕಟ್ಟು ಸಮಾಜವಿದ್ದು ಅಲ್ಲಿನ ಪುರೋಹಿತರು, ಯೋಧರು ಅನೇಕ ಸೇವಕರನ್ನು ಹೊಂದುವಷ್ಟು ಹೆಚ್ಚುವರಿ ಉತ್ಪಾದನೆ ಹೊಂದಿರಲಿಲ್ಲ. ಬೇರೆಯವರಿಂದ ಬಂದ ಕಾಣಿಕೆ, ಯುದ್ಧದಲ್ಲಿ ಹೊಡೆದ ಕೊಳ್ಳೆಯನ್ನು ತಮ್ಮ ಗುಂಪಿನಲ್ಲಿ ಹಂಚಿಕೊಳ್ಳುತ್ತಿದ್ದರು. ನಾಯಕರಿಗಿದ್ದ ಕುದುರೆ, ರಥ, ದಾಸಿಯರು ಅವರ ಹೆಗ್ಗಳಿಕೆಯೇ ಹೊರತು ಸಾಮಾಜಿಕ ವರ್ಗಕ್ಕೆ ಸಂಬಂಧಿಸಿದ್ದಲ್ಲ. (ಈ) ವೇದದ ಕೊನೆಘಟ್ಟದ ಪಠ್ಯದಲ್ಲೂ ಬಣ್ಣದ ಬೂದು ಮಡಿಕೆಗಳಿಂದಲೂ ತಿಳಿಯುವಂತೆ, ವೇದದ ಕೊನೆಯ ಹಂತದಲ್ಲಿ ಪಶುಪಾಲನೆಯಿಂದ ಕೃಷಿ ಜೀವನಕ್ಕೆ ತಿರುಗಿದಾಗ, ಅರೆ ಅಲೆಮಾರಿಗಳು ನೆಲೆಗಳನ್ನೂ ಪಡೆದುಕೊಂಡಾಗ, ಸೇವಕವರ್ಗ ರೂಪುಗೊಳ್ಳಲು ಆರಂಭಿಸಿತು[೨೪೧].

ಹೀಗೆ ಶೂದ್ರ ವರ್ಗ ಕಂಡು ಬಂದು-ಅದು ವಿವಿಧ ವೃತ್ತಿಯಾಧಾರಿತ ಜಾತಿಯಾಗಿ ವಿಭಜನೆಗೊಂಡಿತು. ಹೀಗೆ ವಾರಸುದಾರಿಕೆಯ ಕುಶಲಕರ್ಮಿ ಮತ್ತು ಸೇವಕರು ಗ್ರಾಮದ ಸ್ವಯಂ-ಪೂರ್ಣತೆಯನ್ನು ಆಂತರಿಕ ಸ್ವಾಭಾವಿಕ ಆರ್ಥಿಕತೆಯನ್ನು ಉಳಿಸುವ ಪ್ರಕ್ರಿಯೆಯಲ್ಲಿ ಅತ್ಯಂತ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತಾರೆ. ಇಂತಹ ಸ್ವಯಂ ಪೂರ್ಣತೆಯು ಒಂದು ಗ್ರಾಮವನ್ನು

ಇತರ ಗ್ರಾಮಗಳಿಂದ ಪ್ರತ್ಯೇಕವಿರಿಸಲು ಕಾರಣವಾಯಿತು. ಮಾತ್ರವಲ್ಲ, ತಾನು ಆಮದು ಮಾಡಿಕೊಳ್ಳುವ ವಸ್ತುಗಳಿಗೆ ಪ್ರತಿಯಾಗಿ ತಾನು ರಫ್ತು ಮಾಡುವುದಕಿಂತ ಹೆಚ್ಚು ಮಿಗುತೆಯೇನೂ ಅದಕ್ಕೆ ಬೇಕಾಗುತ್ತಿರಲ್ಲಿಲ್ಲವಾದ್ದರಿಂದ ಆಳುವ ವರ್ಗಗಳಿಗೆ ತನ್ನ ವಿಗುತೆಯ ಹೆಚ್ಚಿನ ಅಂಶವನ್ನು ದಾಸ್ತಾನಿಸಲು ಸಾಧ್ಯವಾಗುತ್ತಿತ್ತು[೨೪೨]. ಹೀಗೆ ಗ್ರಾಮದ ಸ್ವಾವಲಂಭನೆಗೆ ಈ ಶೂದ್ರ ಸಮೂಹದ ದುಡಿಮೆ ಪ್ರಮುಖವಾಗಿತ್ತು

ವೈಶ್ಯರು ಶೂದ್ರರೆಂದು ಮನು ಪರಿಗಣಿಸುತ್ತಾನೆ[೨೪೩]. ಹಾಗೇ ಸ್ವತಂತ್ರ ರೈತರೂ ಇದ್ದರು. ಮೌರ್ಯರ ನಂತರ ವಾಣಿಜ್ಯ ಮತ್ತು ಕರಕುಶಲ ವಸ್ತುಗಳ ತಯಾರಿಕೆ ವೃದ್ಧಿಯಾದವು. ಪ್ರಾಚೀನ ಭಾರತದಲ್ಲಿ ವಿದೇಶಿ ವ್ಯಾಪಾರವು ಉಚ್ಛ್ರಾಯ ಹಂತವನ್ನು ಮುಟ್ಟಿದ್ದು ಈ ಕಾಲದಲ್ಲಿಯೇ[೨೪೪]. ಇಂಥಹ ಸಂದರ್ಭದಲ್ಲಿ ಭಾರತದಿಂದ ಸರಕುಗಳು ವಿದೇಶಗಳಿಗೂ, ಅಲ್ಲಿಂದ ಸರಕುಗಳು ಭಾರತಕ್ಕೂ ಬರಲಾರಂಭಿಸಿದವು. ಈ ಸಂದರ್ಭವು ಶೂದ್ರ ಸಮೂಹದ ಕೈಕಸಬು ಹಾಗೂ ಕೃಷಿ ಉತ್ಪನ್ನದಿಂದ ವ್ಯಾಪಾರದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿತು.

ವ್ಯಾಪಾರಿ ಪಟ್ಟಣಕ್ಕೆ ಕಚ್ಚಾ ಪದಾರ್ಥಗಳನ್ನು ಒದಗಿಸುವುದು, ಸಿದ್ಧ ವಸ್ತುಗಳನ್ನು ಮಾರಾಟಕ್ಕೆ ಸಾಗಿಸುವುದು ಮತ್ತು ವ್ಯಾಪಾರಿ ಪಟ್ಟಣದ ಬಳಿಯಲ್ಲಿ ಕರಕುಶಲ ಕೈಗಾರಿಕೆಗಳಲ್ಲಿ ದುಡಿಯುವುದು ಕಂಡು ಬರುತ್ತದೆ. ಬಾರ್ಕೂರು, ಬಸರೂರು, ಹೊನ್ನಾವರ, ಬನವಾಸಿ ಮುಂತಾದ ಪಟ್ಟಣಗಳಲ್ಲಿ ವಿವಿಧ ಬಗೆಯ ವ್ಯಾಪಾರ ವ್ಯವಹಾರ ನಡೆಯುತ್ತಿದ್ದವು. ಬಾರ್ಕೂರು, ಬಸರೂರು ಪಟ್ಟಣಗಳಲ್ಲಿ ವಿವಿಧ ಕೇರಿಗಳಿದ್ದವು. ಅಲ್ಲಿ ವಿವಿಧ ಕಸಬುಗಳನ್ನು ನಡೆಸುವವರ ಜನವಸತಿಗಳಿದ್ದವು. ಕೃಷಿಯು ವಾಣಿಜ್ಯ ಉದ್ದೇಶದಿಂದ ಉತ್ಪಾದನೆ ಆರಂಭಿಸಿದ್ದರಿಂದ ಕೃಷಿಯ ಪ್ರಧಾನ್ಯತೆ ಹೆಚ್ಚಿತು.

ವ್ಯಾಪಾರಕ್ಕೆ ಬೇಕಿದ್ದ ದೊಡ್ಡ ದೊಡ್ಡ ನೌಕೆಗಳು, ಸಾಗಾಣಿಕೆಗೆ ಬೇಕಿದ್ದ ಚಕ್ಕಡಿಗಾಡಿಗಳು, ಸಣ್ಣ ದೋಣಿಗಳ ರಚನೆ ದೊಡ್ಡ ಉದ್ಯಮವಾಗಿತ್ತು. ಕಡಲೋತ್ತರ ವ್ಯಾಪಾರಕ್ಕೂ ಹಾಗೂ ದೇಶೀಯ ವ್ಯಾಪಾರಕ್ಕೂ ಇದರಿಂದ ಸಹಾಯ ಸಿಗುತ್ತಿತ್ತು. ಅವುಗಳಲ್ಲಿ ಈ ಶೂದ್ರ-ಕ್ಷತ್ರಿಯ ಸಮೂಹ ತೋಡಗಿರುತ್ತಿತ್ತು. ರಾಜನ ಸೈನ್ಯದಲ್ಲಿ ನಗರ ರಕ್ಷಣೆಯ ಕೆಲಸದಲ್ಲಿ ಕ್ಷತ್ರಿಯರಿರುತ್ತಿದ್ದರು. ವ್ಯಾಪಾರಿಗಳು ಪ್ರಮುಖ ಸ್ಥಾನ ಪಡೆದಿದ್ದರು. ಆಡಳಿತದಲ್ಲಿ ವ್ಯಾಪಾರಿಗಳನ್ನೂ ಬಿಟ್ಟು ಉಳಿದ ಶೂದ್ರ ಸಮೂಹ ಯಾವುದೇ ಸ್ಥಾನ ಪಡೆದಿರಲಿಲ್ಲ. ವ್ಯಾಪಾರಿಗಳು ನಗರದ ಪ್ರಮುಖ ಕೇರಿಗಳಲ್ಲಿ ವಾಸಿಸುತ್ತಿದ್ದರು. ಆದರೆ ಉಳಿದ ಶೂದ್ರ ಸಮೂಹಕ್ಕೆ ಆ ಹಕ್ಕುಗಳಿರಲಿಲ್ಲ. ನೌಕೆಗಳು ನಿಲ್ಲುವ ಧಕ್ಕೆ, ದೇವಾಲಯ, ಮೂರ್ತಿಗಳು, ನಗರಗಳ ನಿರ್ಮಾಣದಲ್ಲಿ ಶಿಲ್ಪಿಗಳು ಪ್ರಮುಖ ಪಾತ್ರವಹಿಸಿದ್ದರು.

೫.೨.೫. ಸ್ಥಳೀಯರ ವಸತಿ ನೆಲೆಗಳು

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಹಾಗೂ ಶೂದ್ರ ಅಲ್ಲದೇ ಪಂಚಮರೆಂದು ಸಮಾಜ ವಿಭಜಿತಗೊಂಡು, ಶಾಸ್ತ್ರದ ನೀತಿ-ನಿಯಮದಂತೆ ಮೇಲಿನ ನಾಲ್ಕು ವರ್ಗದವರ ಸೇವೆಯನ್ನು ಮಾಡುವವರಾಗಿದ್ದರು. ಆಳುವ ವರ್ಗಕ್ಕೆ ಇವರ ಸೇವೆ, ರಕ್ಷಣೆ ಅನಿವಾರ್ಯವಾಗಿತ್ತು. ಇದರೊಂದಿಗೆ ಭಾರತದಲ್ಲಿ ಹುಟ್ಟಿ ಬಂದ ಕ್ರಾಂತಿಕಾರಿ ಧರ್ಮಗಳಾದ ಬೌದ್ಧ, ಜೈನ ಧರ್ಮಗಳು ಇಲ್ಲಿದ್ದವು. ಅಶೋಕನ ಕಾಲಕ್ಕಾಗಲೇ ಬೌದ್ಧರು ಬನವಾಸಿ, ಹೊನ್ನಾವರಗಳಲ್ಲಿ ಅಸ್ತಿತ್ವ ಪಡೆದಿದ್ದರು. ಇದಕ್ಕೂ ಮೊದಲು ಜೈನ ಧರ್ಮ ಕರ್ನಾಟಕವನ್ನು ಪ್ರವೇಶಿಸಿದರೂ ಕರಾವಳಿಯನ್ನೂ ಸ್ವಲ್ಪ ತಡವಾಗಿ ತಲುಪಿತು. ಆದರೆ ಶೀಘ್ರವಾಗಿ ತನ್ನ ಅನುಯಾಯಿಗಳ ಸಂಖ್ಯೆಯನ್ನೂ ಹೆಚ್ಚಿಸಿಕೊಂಡಿತ್ತು. ಅವರು ನಗರ-ಪಟ್ಟಣ, ಗ್ರಾಮೀಣ ಭಾಗದಲ್ಲಿ ವಾಸಿಗಳಾಗಿದ್ದರು.

೫.೨.೬. ಸಮುದಾಯಗಳ ವಸತಿ ನೆಲೆಗಳು

ಗ್ರಾಮೀಣ ಬದುಕು ತನ್ನ ಪರಂಪರಾಗತವಾದ ಸಾಂಪ್ರದಾಯಿಕ ಹಿಡಿತದಲ್ಲಿ ನಲುಗಿತ್ತು. ಸಾಮಾನ್ಯರ ಬದುಕು ದುಸ್ತರವಾಗಿತ್ತು. ಕೃಷಿ ಭೂಮಿ ಎಲ್ಲರಿಗೂ ದೊರೆತಿರಲಿಲ್ಲ. ಕೃಷಿ ಕಾರ್ಮಿಕರು, ಕರಕುಶಲ ಕಾರ್ಮಿಕರು ಹಾಗೂ ಶಿಲ್ಪಿಗಳು, ಇತರ ವೃತ್ತಿಯ ಜಾತಿಯ ಜನಗಳು ತಮಗೆ ಮೀಸಲಾಗಿದ್ದ ಸ್ಥಳಗಳಲ್ಲಿ ವಾಸವಾಗಿದ್ದರು. ಸ್ತ್ರೀಯರಿಗೆ ವಿಶೇಷ ಸ್ಥಾನ ಮಾನಗಳಿರಲಿಲ್ಲ. ಅವರ ಖಾಸಗಿ ಕುಟುಂಬವೇ ಅವರ ಸ್ವತ್ತಾಗಿತ್ತು. ಆದರೆ ಬಸರೂರು ಬಂದರು ಪಟ್ಟಣವಾಗಿ ಬೆಳೆದಾಗ ಅಲ್ಲಿ ನಿರ್ಮಾಣಗೊಂಡಿದ್ದ ಕೇರಿಗಳಲ್ಲಿ ವಿಲಾಸಿಕೇರಿಯು ಒಂದಾಗಿತ್ತು. ಇಲ್ಲಿ ಶ್ರೀಮಂತ ವರ್ತಕರ ವಿಲಾಸಿ ಬದುಕು ನಡೆಯುತ್ತಿತ್ತು. ಸ್ತ್ರೀಯರು ಇಲ್ಲಿ ಮೈಮಾರುವ ವೃತ್ತಿ ಮಾಡುತ್ತಿದ್ದಿರುವ ಸಾದ್ಯತೆಗಳಿವೆ. ದೇವಾಲಯಗಳಲ್ಲಿ ನೃತ್ಯ ಇತ್ಯಾದಿಗಳು ನಡೆಯುತ್ತಿದ್ದವು. ಅಲ್ಲಲ್ಲಿ ಕೆಲವು ಅರಸು ಕುಟುಂಬಗಳಲ್ಲಿ ಸ್ತ್ರೀಯರು ಅಧಿಕಾರ ನಡೆಸಿದ್ದರು. ಸ್ತ್ರೀಯರ ಬದುಕು ಶೂದ್ರರ ಬದುಕಿಗಿಂತ ಭಿನ್ನವಾಗಿರಲಿಲ್ಲ. ಕೆಲವು ಸ್ತ್ರೀಯರು ವರ್ತಕರಾಗಿ ಬದುಕುನಡೆಸಿದ್ದೂ ತಿಳಿಯುತ್ತದೆ[೨೪೫]. ರಾಜವಂಶದ ಸ್ತ್ರೀಯರು ಆಡಳಿತದಲ್ಲಿ ಭಾಗಿಗಳಾಗಿದ್ದು ತಿಳಿಯುತ್ತದೆ. ಆಳುಪರ ಚಿಕ್ಕಾಯಿತಾಯಿ ರಾಣಿಯಾಗಿದ್ದಂತೆ, ಗೇರುಸೊಪ್ಪಾದ ಪದುಮಲದೇವಿ, ಚನ್ನಬೈರಾದೇವಿ, ಬೈರಾದೇವಿ ರಾಣಿಯರಾಗಿ ಆಡಳಿತ ನಡೆಸಿದ್ದರು. ಶಾತವಾಹನರ ಕಾಲದ ಅರಸರು ತಾಯಿಯ ಹೆಸರಿನೊಂದಿಗೆ ತಮ್ಮನ್ನು ಗುರುತಿಸಿಕೊಂಡದ್ದು ನೋಡಲು ಸಿಗುತ್ತದೆ. ಕರಾವಳಿಯ ದಕ್ಷಿಣ ತುದಿಯಲ್ಲಿ ಅಳಿಯಕಟ್ಟು ಪದ್ದತಿ ಜಾರಿಗೆ ಬಂದಿದ್ದು ಸ್ತ್ರೀಯರೆ ಕುಟುಂಬದ ಮುಖ್ಯಸ್ಥರಾಗಿದ್ದರು. ಇದು ಆರಂಭದಲ್ಲಿ ಮೊದಲು ಕಂಡು ಬಂದದ್ದು ಗೇರುಸೊಪ್ಪಾದ ಸಾಳ್ವಮನೆತನದಲ್ಲಿ. ಆದರೆ

ಸಾಮಾನ್ಯ ಸ್ತ್ರೀಯರು ಕೇವಲ ಮನೆವಾರ್ತೆ, ಕೃಷಿ ಕೆಲಸ ಹಾಗೂ ಇನ್ನಿತರ ಕೂಲಿ ಕೆಲಸಗಳಲ್ಲಿ ತೊಡಗಿದ್ದರು.

ಬಂದರು ಪಟ್ಟಣಗಳು ಬೆಳದಂತಲ್ಲಾ ಜನಸಾಮಾನ್ಯರು ಅಂತಸ್ಥಿಗೆ ತಕ್ಕಂತೆ ವಾಸ ಸ್ಥಳಗಳನ್ನು ಬದಲಾಯಿಸಿಕೊಂಡರು. ಪ್ರಮುಖ ಪಟ್ಟಣಗಳಲ್ಲಿ ಇಂತಹ ಬದಲಾವಣೆಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಬಾರ್ಕೂರು, ಬಸರೂರುಗಳಲ್ಲಿ ಇಂತಹ ಬದಲಾವಣೆ ಸ್ಪಷ್ಟವಾಗಿ ಕಂಡು ಬರುತ್ತದೆ. ನಗರವನ್ನು ವಿವಿಧ ಕೇರಿಗಳನ್ನಾಗಿ ವಿಂಗಡಿಸಿ ವಿವಿಧ ವೃತ್ತಿ, ಜಾತಿಗಳವರಿಗೆ ಹಂಚಿಕೊಟ್ಟಿದ್ದರು ಪುರೋಹಿತರು ಮೆಲ್ಕೇರಿ, ಅಗ್ರಹಾರಗಳಲ್ಲಿ ವಾಸವಾಗಿದ್ದರು. ವ್ಯಾಪಾರ ಮಳಿಗೆಗಳು ಸ್ವದೇಶಿ ವಸ್ತುಗಳ ಮಾರಾಟ ಮಳಿಗೆ, ವಿದೇಶಿ ವಸ್ತುಗಳ ಮಾರಾಟ ಮಳಿಗೆ ಎಂದು ವಿಭಾಗಿಸಲ್ಪಟ್ಟಿತ್ತು. ವ್ಯಾಪಾರಿ ಮಳಿಗೆಗಳ ಸುತ್ತಲು ವ್ಯಾಪಾರಿಗಳ ಕುಟುಂಬ ಪರಿವಾರ ವಾಸವಾಗುತ್ತಿತ್ತು. ನಗರ ಪ್ರದೇಶದ ಪ್ರಮುಖ ಬೀದಿಗಳಲ್ಲಿ ಸ್ವದೇಶಿ ವ್ಯಾಪಾರಿಗಳಾದ ಶೆಟ್ಟಿ, ನಕರ, ಎಳಮೆ ಮುಂತಾದವರು ಮತ್ತು ವಿದೇಶಿ ವಸ್ತುಗಳ ಮಾರಾಟದಮಳಿಗೆಗಳ ಸುತ್ತ ಹೊರಹಿನವರು, ಹಂಜಮಾನರು, ನಾನಾದೇಶಿಗಳು ವಾಸಮಾಡುತ್ತಿದ್ದರು. ಅರಮನೆ ಮತ್ತು ಕೋಟೆಯ ಒಳಪ್ರದೇಶದಲ್ಲಿ ರಾಜಪರಿವಾರ, ಮಂತ್ರಿಗಳು, ಅಧಿಕಾರಿಗಳು ತಮ್ಮ ಪರಿವಾರದೊಂದಿಗೆ ವಾಸವಾಗಿರುತ್ತಿದ್ದರು. ಕೃಷಿ ಕಾರ್ಮಿಕರು ನಗರದ ಹೊರ ಪ್ರದೇಶದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಮಾಡುತ್ತಿದ್ದರು. ಕುಶಲ ಕರ್ಮಿಗಳಾದ ಕಮ್ಮಾರರು, ಬಡಿಗರು, ಚಮ್ಮಾರರು, ಕುಂಬಾರರು ಮುಂತಾದ ವೃತ್ತಿಯವರು ನಗರಕ್ಕೆ ಹೊಂದಿಕೊಂಡತೆ ಪ್ರತ್ಯೇಕ ವಾಸಸ್ಥಳ ನಿರ್ಮಿಸಿಕೊಂಡಿದ್ದರು. ಅವರುಗಳು ಅಲ್ಲಿಯೇ ತಮ್ಮ ವೃತ್ತಿಗೆ ಸಂಬಂಧಿಸಿದ ಕಾರ್ಯಾಗಾರಗಳನ್ನು ನಿರ್ಮಿಸಿಕೊಂಡಿದ್ದರು ವಿದೇಶಗಳಿಗೆ ರಫ್ತಾಗುತ್ತಿದ್ದ ಹತ್ತಿಬಟ್ಟೆ, ಕತ್ತದ ನಾರಿನ ಬಳ್ಳಿಗಳನ್ನು ಸಿದ್ದಪಡಿಸುವ ಹಾಗೂ ದೊಡ್ಡ ಹಡಗುಗಳನ್ನು ನಿರ್ಮಿಸುವ ಮತ್ತು ರಿಪೇರಿ ಮಾಡುವ ಕಾರ್ಮಿಕರು ಬಂದರು ಪಟ್ಟಣಕ್ಕೆ ಹೊಂದಿಕೊಂಡಿದ್ದ ವಿಸ್ತಾರ ಪ್ರದೇಶಗಳಲ್ಲಿ ನೆಲೆ ಕಂಡುಕೊಂಡಿದ್ದರು ಸಯ್ಯಾದ್ರಿಯಲ್ಲಿ ದೊರೆಯುತ್ತಿದ್ದ ವನೋತ್ಪನ್ನಗಳನ್ನು ತಂದು ಸಂಸ್ಕರಿಸುವ ಹಾಗೂ ಕಡಲ ಉತ್ಪನ್ನಗಳನ್ನು ತಂದು ಸಂಸ್ಕರಿಸಿ ಸಿದ್ದವಸ್ತುಗಳನ್ನಾಗಿಸುವ ದೊಡ್ಡ ಕಾರ್ಮಿಕ ವರ್ಗ ಹೊರ ವಲಯಗಳಲ್ಲಿ ವಾಸವಾಗಿದ್ದವು.

೫.೨.೭. ವಿದೇಶಿಯರ ವಸತಿ ನೆಲೆಗಳು

ಚೀನಾ, ಅರೇಬಿಯಾ ಪರ್ಶಿಯಾ, ರೋಮ್ ಹಾಗೂ ಗ್ರೀಸ್ ದೇಶಗಳಿಂದ ಬಂದ ವ್ಯಾಪಾರಿ ತಂಡಗಳು ಹೀಗೆ ಬಂದರು ಪ್ರದೇಶದಲ್ಲಿ ತಮಗಾಗಿಯೇ ನೀಡಿದ್ದ ಸ್ಥಳಗಳಲ್ಲಿ ವಾಸಮಾಡುತ್ತಿದ್ದರು[೨೪೭]. ಸ್ಥಳೀಯರಿಗೂ ಮತ್ತು ವಿದೇಶದಿಂದ ಬಂದ ವ್ಯಾಪಾರಿಗಳಿಗೂ ಹಲವು

ಬಾರಿ ಸಂಘರ್ಷಗಳು ನಡೆಯುತ್ತಿದ್ದವು[೨೪೭]. ಚೀನಾದ ವ್ಯಾಪಾರಿಗಳಿಗೆ ಹಾಗೂ ಬಸರೂರಿನ ವರ್ತಕರಿಗೂ, ಹಂಜಮಾನರಿಗೂ ಹೊನ್ನಾವರದ ಸ್ಥಳೀಯವರ್ತಕರಿಗೂ ನಡೆದ ಘರ್ಷಣೆಗಳು ಉಲ್ಲೇಖನೀಯ. ಕುಮಟಾದಲ್ಲಿ ಚೀನಿಯರ ವಸತಿ ನೆಲೆಗಳು ಇದ್ದವೆನ್ನುವುದಕ್ಕೆ ಕೇಲವು ಆಧಾರಗಳು ದೊರೆಯುತ್ತವೆ[೨೪೮].

ಟಿಪ್ಪಣಿ

೧. ಚಂದ್ರಶೇಖರ ಬಿ.ಎಂ., ಕರ್ನಾಟಕದ ಸಂಸ್ಕೃತಿ ಪರಂಪರೆ, ಪುಟ ೨

೨. ಬರ್ನಾಲ್ ಜೆ.ಡಿ., ಇತಿಹಾಸದಲ್ಲಿ ವಿಜ್ಞಾನ, ಸಂ.೧, ಪುಟ ೪೫

೩. ಜೋಶಿ ಪ್ರಭಾಕರ್ ಎಂ., ಹೆಗಡೆ ಎಂ.ಎ., ಭಾರತೀಯ ತತ್ರಶಾಸ್ತ್ರ ಪ್ರವೇಶ, ಪುಟ ೧೧

೪. ಅದೇ, ಪುಟ ೧೨

೫. ಬ್ರೋದೋವ್ ವಿ., ಆಧುನಿಕ ಯುಗದಲ್ಲಿ ಭಾರತೀಯ ತತ್ವಶಾಸ್ತ್ರ, ಪುಟ ೧೫

೬. ಜನಾರ್ಥನ ಭಟ್ ಬಿ., (ಸಂ) ಕೊಪ್ಪರಿಗೆ ತುಳುನಾಡಿಗೆ ಆಗಮಿಸಿದ ಮತ ಧರ್ಮಗಳು, ಶೆಟ್ಟಿ ಎಸ್.ಡಿ., ಪುಟ ೧೨೪

೭. ಅದೇ, ಪುಟ ೧೨೭

೮. ಅದೇ, ಪುಟ ೧೨೯-೩೦

೯. ಅದೇ, ಪುಟ ೧೩೨

೧೦. ಅಯ್ಯರ್ ಸತ್ಯನಾಥ ಆರ್., ಪ್ರಾಚೀನ ಭಾರತ, ಅನು: ಅನವಟ್ಟಿಎಂ.ಆರ್., ಪುಟ ೩೪

೧೧. ಅದೇ, ಪುಟ ೨೫೫

೧೨. ಅದೇ, ಪುಟ ೨೫೩

೧೩. ಅದೇ, ಪುಟ ೨೫೬

೧೪. ಅದೇ, ಪುಟ ೨೫೬

೧೫. ಅದೇ, ಪುಟ ೨೬೬

೧೬. ಅದೇ, ಪುಟ ೨೬೭

೧೭. ಮುಜುಮ್‌ದಾರ ಆರ್.ಸಿ., (ಅನು) ನರಸಿಂಹ ಮೂರ್ತಿ ಎ.ವಿ., ವೇದಯುಗ, ಪುಟ ೩೩೪

೧೮. ಅದೇ, ಪುಟ ೩೩೪

೧೯. ಕರ್ನಾಟಕ ಪರಂಪರೆ, ಸಂ ೨, ಪುಟ ೧೭೦

೨೦. ಜೋಶಿ ಪ್ರಭಾಕರ ಎಮ್., (ಸಂ) ಭಾರತಿಯ ತತ್ವ ಶಾಸ್ತ್ರ ಪ್ರವೇಶ, ಪುಟ ೧೮

೨೧. ಮೂರ್ತಿ ಚಿದಾನಂದ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೩೯

೨೨. ಕರ್ನಾಟಕ ಪರಂಪರೆ, ಸಂ ೨, ಪುಟ ೧೭೦-೭೧

೨೩. ಅದೇ, ಪುಟ ೧೭೨

೨೪. ಅದೇ, ಪುಟ ೧೭೨

೨೫. ಮೂರ್ತಿ ಚಿದಾನಂದ ಎಂ., ಕನ್ನಡ.ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೪೦

೨೬. ಅದೇ, ಪುಟ ೧೩೯

೨೭. ಅದೇ, ಪುಟ ೧೪೦

೨೮. ಕಲಬುರ್ಗಿ ಎಂ.ಎಂ., ಮಾರ್ಗ ೪, ಲಾಕುಳ ಇತ್ಯಾದಿ ಶೈವ ದೇವಾಲಯಗಳು, ಪುಟ ೩೨೨

೨೯. ಅದೇ, ಪುಟ ೩೧೪-೩೨೨

೩೦. ಮೂರ್ತಿ ಚಿದಾನಂದ ಎಂ., ಕರ್ನಾಟಕ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೬೦

೩೧. ಗೋಕರ್ಣಕ್ಷೇತ್ರ ಮಹಾತ್ಮೆ ಪ್ರಕಟಣೆ, ಮಹಾಬಲೇಶ್ವರ ದೇಲಾಲಯ, ಗೋಕರ್ಣ, ಪುಟ ೧೪

೩೨. ಅಭಿಶಂಕರ ಕೆ., ಬನವಾಸಿ ಸಮಗ್ರ ಪರಿಚಯ, ಧಾರ್ಮಿಕ ಪರಂಪರೆ, ಪುಟ ೨೧

೩೩. ಅದೇ, ಪುಟ ೬೯

೩೪. ಸೂರ್ಯನಾಥ ಕಾಮತ್ ಯು., (ಸಂ) ಕಾರವಾರ ಜಿಲ್ಲಾ ಗೈಜೆಟಿಯರ್, ಪುಟ ೫೨

೩೫. ಸುಂದರ ಅ., ಬನವಾಸಿ ಸಮಗ್ರ ಪರಿಚಯ, ಬನವಾಸಿ ವಾಸ್ತು ಮತ್ತು ಮೂರ್ತಿಶಿಲ್ಪ, ಬನವಾಸಿ ಅಷ್ಟಬಂಧ ೨೦೦೬, ಪುಟ ೯೯

೩೬. ಭಟ್ ಕೃ.ಗು., ಬನವಾಸಿ ಅಷ್ಟಬಂಧ ೨೦೦೬ ಸಂಚಿಕೆ, ಶ್ರೀ ಮಹಾಮಹಿಮ, ಮಧುಕೇಶ್ವರ, ಪುಟ ೧೧೭

೩೭. ಅದೇ, ಪುಟ ೧೧೮

೩೮. ಸುಂದರ ಅ., ಬನವಾಸಿ ಸಮಗ್ರ ಪರಿಚಯ, ಬನವಾಸಿ ವಾಸ್ತು ಮತ್ತು ಮೂರ್ತಿಶಿಲ್ಪ, ಪುಟ ೧೦೦

೩೯. ಅದೇ, ಪುಟ ೧೦೪

೪೦. ಅದೇ, ಪುಟ ೧೦೫

೪೧. ಗುರುವ ಆರ್.ಎಸ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೪೦

೪೨. ಅದೇ, ಪುಟ ೨೮

೪೩. ಅದೇ, ಪುಟ ೨೯

೪೪. ಸುಂದರ ಅ., ಕರ್ನಾಟಕ ಭಾರತಿ, ಸಂ ೭-೮, ಕರಾವಳಿಯಲ್ಲಿ ಇತ್ತೀಚಿನ ಮೂರ್ತಿಶಿಲ್ಪಗಳ ಶೋಧ ೧೯೭೬, ಪುಟ ೭೨.

೪೫. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ૩೪-೪೦

೪೬. ಅದೇ, ಪುಟ ೪೧

೪೭. ಗೋಪಾಲ ಬಿ.ಆರ್., ತಾರಾನಾಥ ಎನ್.ಎಸ್., (ಸಂ) ಕದಂಬಾಸ್ ಹಿಸ್ಟ್ರಿ ಎಂಡ್ ಆರ್ಟ್ಸ್, ಕದಂಬಾ ಹಿಸ್ಟ್ರೀ ಎನ್‌ಸ್ಯೆಂಟ್, ಮಿಡಿವಲ್, ಗೋಪಾಲ, ಬಿ.ಆರ್. ಪುಟ ೧೦೭

೪೮. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೪೮

೪೯. ಅದೇ, ಪುಟ ೫೭

೫೦. ಅದೇ, ಪುಟ ೫೭

೫೧. ಗೌಡ ಗಣಪತಿ ಎಸ್., ಶಿಸುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೮೭

೫೨. ಅದೇ, ಪುಟ ೮೮

೫೩. ಭಟ್‌ಸೂರಿ ಕೆ.ಜಿ., ಧಾರಾನಾಥ ದೇವಾಲಯ ಧಾರೇಶ್ವರ, ಪುಟ ೪

೫೪. ಗೌಡ ಗಣಪತಿ ಎಸ್., ಶಿಸುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೮೯

೫೫. ಅದೇ, ಪುಟ ೯೦

೫೬. ಶಿಸುಗಲಿ ಪಾಂಡ್ಯರ ಕಾಲದ ಸ್ತಂಭ ಶಾಸನಗಳು ಹೊನ್ನಾವರದ ಮಂಕಿ, ಹಳದೀಪುರ, ಕೆಕ್ಕಾರ ಹಾಗೂ ಹೆಬ್ಬಾನಕೇರಿ ಮತ್ತು ಗೋಕರ್ಣಗಳಲ್ಲಿ ಕಂಡುಬರುತ್ತವೆ. ಇವುಗಳು ಕ್ರಿ.ಶ ೧೦೭೮-೧೦೭೯ ರ ಕಾಲದವು ಎಂದು ಶ್ರೀನಿವಾಸ ಪಾಡಿಗಾರವರು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ.

೫೭. ಗೌಡ ಗಣಪತಿ ಎಸ್., ಶಿಸುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಪುಟ ೮೮

೫೮. ಕರ್ನಾಟಕ ಪರಂಪರೆ, ಭಾಗ ೨, ಪುಟ ೧೮೦-೧೮೧

೫೯. ಅದೇ, ಪುಟ ೧೮೧

೬೦. ಅದೇ, ಪುಟ ೧೮೧

೬೧. ಮೂರ್ತಿ ಚಿದಾನಂದ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೪೨

೬೨. ಗೋಪಾಲ್ ಆರ್., (ಸಂ) ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ದಕ್ಷಿಣ ಕನ್ನಡ ಜಿಲ್ಲೆಯ ಧಾರ್ಮಿಕ ಚರಿತ್ರೆ, ಮಂಜುನಾಥ ಎಂ.ಜಿ., ಪುಟ ೧೧೭

೬೩. ಅದೇ, ಪುಟ ೧೧೭

೬೪. ರಾಘುನಾಥ ಭಟ್ ಎಚ್. ಆರ್., ಬನವಾಸಿ ಸಮಗ್ರ ಪರಿಚಯ, ಧಾರ್ಮಿಕ ಪರಂಪರೆ, ಪುಟ ೭೭

೬೫. ಅದೇ, ಪುಟ ೭೮

೬೬. ಅದೇ, ಪುಟ ೭೯

೬೭. ಅದೇ, ಪುಟ ೮೦

೬೮. ಮೂರ್ತಿ ಚಿದಾನಂದ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೭೩

೬೯. ಅದೇ, ಪುಟ ೧೭೩

೭೦. ಅದೇ, ಪುಟ ೧೭೩

೭೧. ಅದೇ, ಪುಟ ೧೭೩

೭೨. ರಾಘುನಾಥ ಭಟ್ ಎಚ್. ಆರ್., ಬನವಾಸಿ ಸಮಗ್ರ ಪರಿಚಯ, ಧಾರ್ಮಿಕ ಪರಂಪರೆ, ಪುಟ ೮೧

೭೩. ಅದೇ, ಪುಟ ೮೧

೭೪. ಅದೇ, ಪುಟ ೮೧

೭೫. ಕರ್ನಾಟಕ ಪರಂಪರೆ, ಭಾಗ ೨, ಪುಟ ೧೮೫

೭೬. ಅದೇ, ಪುಟ ೧೮೭

೭೭. ಅದೇ, ಪುಟ ೧೮೭

೭೮. ಶ್ರೀನಿವಾಸ ಎ., ಕರ್ನಾಟಕದ ಇತಿಹಾಸ, ಪುಟ ೨೮–೨೯

೭೯. ಶೀನಿವಾಸ ಪಾಡಿಗಾರ, ವಿಷ್ಣುಕಲ್ಪ್, ಚುಟು ಆನಂದ ವಂಶಗಳ ವಿಷ್ಣುಕುಡ, ವಿಷ್ಣು–ರುದ್ರ–ಶಿವಾಲನಂದ ಹೆಸರುಗಳು ವಿಷ್ಣುವನ್ನು ಹೆಸರಿಸುತ್ತವೆ, ಪುಟ ೨೯

೮೦. ಬನವಾಸಿ ಸಮಗ್ರ ಪರಿಚಯ, ಬನವಾಸಿ ವಾಸ್ತು ಮತ್ತು ಮೂರ್ತಿಶಿಲ್ಪ ಸುಂದರ.ಅ., ಪುಟ ೯೯

೮೧. ಅದೇ, ಪುಟ ೧೨೯

೮೨. ಅದೇ, ಪುಟ ೧೨೯

೮೩. ತುಳುನಾಡಿನ ಇತಿಹಾಸ ರಮೇಶ ಕೆ.ವಿ ಪುಟ ೭೬

೮೪. ಕರ್ನಾಟಕ ಪರಂಪರೆ, ಭಾಗ ೨, ಪುಟ ೨೫೮

೮೫. ಸುಂದರ ಅ., ಬನವಾಸಿ ಸಮಗ್ರ ಪರಿಚಯ, ಬನವಾಸಿ ವಾಸ್ತು ಮತ್ತು ಮೂರ್ತಿಶಿಲ್ಪ, ಪುಟ ೧೧೯

೮೬. ಪಾಡಿಗಾರ ಶ್ರೀನಿವಾಸ, ವಿಷ್ಣುಕಲ್ಪ, ಪುಟ ೮೨

೮೭. ಅದೇ, ಪುಟ ೮೨

೮೮. ಅದೇ, ಪುಟ ೧೪೮

೮೯. ಅದೇ, ಪುಟ ೧೪೮

೯೦. ಅದೇ, ಪುಟ ೧೪೮

೯೧. ಅದೇ, ಪುಟ ೧೫೨

೯೨. ರಮೇಶ ಕೆ.ವಿ., ತುಳುನಾಡಿನ ಶಾಸನಗಳು, ಪುಟ ೨೨೭

೯೩. ಅದೇ, ಪುಟ ೨೨೭

೯೪. ಅದೇ, ಪುಟ ೨೨೭

೯೫. ಶರ್ಮಾ ಎಸ್. ಆರ್., ಪ್ರಾಚೀನ ಭಾರತ, ಪುಟ ೯೮

೯೬. ಅದೇ, ಪುಟ ೯೮

೯೭. ಕೋಸಾಂಬಿ ಡಿ.ಡಿ., ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರೀಕತೆ, ಪುಟ ೧೭೫

೯೮. ಅದೇ, ಪುಟ ೧೭೫

೯೯. ಶರ್ಮಾ ಎಸ್. ಆರ್., ಪ್ರಾಚೀನ ಭಾರತ, ಪುಟ ೧೦೦

೧೦೦. ಕರ್ನಾಟಕ ಪರಂಪರೆ, ಭಾಗ ೨ ಪುಟ ೨೦೪

೧೦೧. ಅದೇ, ಪುಟ ೨೦೪

೧೦೨. ಶೆಟ್ಟರ, ಎಸ್., ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಪುಟ ೮೨

೧೦೩. ಮೂರ್ತಿ ಚಿದಾನಂದ ಎಮ್., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ ೧೨೬

೧೦೪. ಅದೇ, ಪುಟ ೧೨೬

೧೦೫. ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪುಟ ೮

೧೦೬. ಅದೇ, ಪುಟ ೨೯

೧೦೭. ಸುಂದರ ಅ., ಕರ್ನಾಟಕ ಭಾರತಿ, ಸಂ ೭–೮, ಕರಾವಳಿಯಲ್ಲಿ ಇತ್ತೀಚಿನ ಮೂರ್ತಿಶಿಲ್ಪಗಳ ಶೋಧ ೧೯೮೬, ಪುಟ ೧೬ ಸಂಚಿಕೆ ೨೬

೧೦೮. ಮುರುಗೇಶಿ ಟಿ., (ಸಂ) ಬುದ್ದಿಸಂ ಇನ್ ಕೊಸ್ಟಲ್ ಕರ್ನಾಟಕ ಬುದ್ದಿಸಂ ಇನ್ ಕೊಂಕಣ:ಎ ಹಿಸ್ಟಾರಿಕಲ್ ಪರ್ಸಪೆಕ್ಟಿವ್, ಪುಟ ೬

೧೦೯. ಅಭಿಶಂಕರ ಕೆ., ಬನವಾಸಿ ಸಮಗ್ರ ಪರಿಚಯ, ಬನವಾಸಿ ಧಾರ್ಮಿಕ ಪರಂಪರೆ, ಪುಟ ೭೦.

೧೧೦. ನಾಗೇಗೌಡ ಎಚ್.ಎಲ್., (ಸಂ.) ಪ್ರವಾಸಿ ಕಂಡ ಇಂಡಿಯಾ, ಸಂಪುಟ ೧, ಪುಟ ೨೨೭

೧೧೧. ಅಭಿಶಂಕರ ಕೆ., ಬನವಾಸಿ ಸಮಗ್ರ ಪರಿಚಯ, ಬನವಾಸಿ ಧಾರ್ಮಿಕ ಪರಂಪರೆ, ಪುಟ ೭೨

೧೧೨. ಅದೇ, ಪುಟ ೭೨

೧೧೩. ಮುರುಗೇಶಿ ಟಿ., (ಸಂ) ಬುದ್ದಿಸಂ ಇನ್ ಕೊಸ್ಟಲ್ ಕರ್ನಾಟಕ ಬುದ್ದಿಸಂ ಇನ್ ಕೊಂಕಣ:ಎ ಹಿಸ್ಟಾರಿಕಲ್ ಪರ್‍ಸಪೆಕ್ಟಿವ್, ಬುದ್ದಿಸ್ಟ ರಿಮೇನ್ಸ್ ಇನ್ ಗೋವಾ ನಂಬಿರಾಜನ್ ಎಮ್., ಪುಟ ೩೦

೧೧೪. ಮುರುಗೇಶಿ ಟಿ., (ಸಂ) ಬುದ್ದಿಸಂ ಇನ್ ಕೊಸ್ಟಲ್ ಕರ್ನಾಟಕ ಬುದ್ದಿಸಂ ಇನ್ ಕೊಂಕಣ:ಎ ಹಿಸ್ಟಾರಿಕಲ್ ಪರ್‍ಸಪೆಕ್ಟಿವ್ ಬುದ್ದಿಸಂ ಇನ್ ಉಡುಪಿ ಡಿಸ್ಟ್ರಿಟ್, ಶೇಟ್ಟಿಗಾರ ಜಯರಾಮ್, ಪುಟ ೫೨

೧೧೫. ಅದೇ, ಕದ್ರಿ ಬೌದ್ಧ ಶಿಲ್ಪಗಳು- ಒಂದು ಸಮೀಕ್ಷೆ, ಮುರುಗೇಶಿ ಟಿ., ಪುಟ ೨೦೨

೧೧೬. ಕರ್ನಾಟಕ ಪರಂಪರೆ, ಸಂ.೨ ಪು. ೨೦೬

೧೧೭. ಅದೇ, ಪುಟ ೨೦೭

೧೧೮. ಅದೇ, ಪುಟ ೧೯೫

೧೧೯. ಅದೇ, ಪುಟ ೧೯೫

೧೨೦. ಅದೇ, ಪುಟ ೨೯

೧೨೧. ಸೂರ್ಯನಾಥ ಕಾಮತ ಯು., ಕರ್ನಾಟಕ ಕೈಗನ್ನಡಿ, ಪುಟ ೩೦

೧೨೨. ಗೋಪಾಲ ಬಾ.ರಾ., ಬನವಾಸಿಯ ಕದಂಬರು, ಪುಟ ೩೪

೧೨೩. ಅದೇ, ಪುಟ ೪೭

೧೨೪. ಶೆಟ್ಟಿ ಎಸ್. ಡಿ., ತುಳುನಾಡಿನ ಜೈನಧರ್ಮ, ಪುಟ ೩೦

೧೨೫. ರಮೇಶ ಕೆ.ವಿ., ತುಳುನಾಡಿನ ಅರಸು ಮನೆತನಗಳು, ಪುಟ ೨೭

೧೨೬. ಶೆಟ್ಟಿ ಎಸ್. ಡಿ., ತುಳುನಾಡಿನ ಜೈನಧರ್ಮ, ಪುಟ ೭೨

೧೨೭. ಭಟ್ ಜನಾರ್ಧನ ಬಿ.,(ಸಂ) ಕೊಪ್ಪರಿಗೆ. ತುಳುನಾಡಿಗೆ ಆಗಮಿಸಿದ ಮತಧರ್ಮಗಳು, ಶೆಟ್ಟಿ ಎಸ್.ಡಿ., ತುಳುನಾಡಿನ ಜೈನ ಧರ್ಮ, ಪುಟ ೧೨೭

೧೨೮. ಶೆಟ್ಟಿ ಎಸ್. ಡಿ., ತುಳುನಾಡಿನ ಜೈನಧರ್ಮ, ಪುಟ ೭೫

೧೨೯. ಅದೇ, ಪುಟ ೮೫

೧೩೦. ಕರ್ನಾಟಕ ಪರಂಪರೆ, ಭಾಗ ೨, ಪುಟ ೬೨೫

೧೩೧. ಅದೇ, ಪುಟ ೬೨೬

೧೩೨. ಅದೇ, ಪುಟ ೨೫೯

೧೩೩. ಅದೇ, ಪುಟ ೬೨೫

೧೩೪. ರಾಮಚಂದ್ರರಾವ್ ಎಸ್.ಕೆ., ಮೂರ್ತಿ ಶಿಲ್ಪ ನೆಲೆ ಮತ್ತು ಹಿನ್ನೆಲೆ, ಪುಟ ೧೬೨

೧೩೫. ಐಯರ್ ಸತ್ಯನಾಥ ಆರ್., (ಅನು) ಆನವಟ್ಟಿ, ಪ್ರಾಚೀನ ಭಾರತ, ಪುಟ ೨೭

೧೩೬. ಅದೇ, ಪುಟ ೨೮

೧೩೭. ಕೋಸಾಂಬಿ ಡಿ.ಡಿ., (ಅನು) ವೇಣುಗೋಪಾಲ ಟಿ.ಎಸ್., ಪುರಾಣ ಮತ್ತು ವಾಸ್ತವ ಊರು ಹಾದಿಯಲ್ಲಿ ಮಾತ್ರದೇವತೆಗಳು ಒಂದು ಅಧ್ಯಯನ, ಪುಟ ೧೧೮–೧೫೮

೧೩೮. ಶ್ರೀ ಮಹಾಲಸಾ ಸಂಸ್ಥಾನ, ಮಹಾಲಸಾ ಸಂಸ್ಥಾನ ಪ್ರಕಟಣೆ ಅಂಕೋಲಾ, ಪುಟ ೧೪

೧೩೯. ಸುಂದರ ಅ., ಬನವಾಸಿ ಸಮಗ್ರ ಪರಿಚಯ, ಬನವಾಸಿ ವಾಸ್ತು ಮತ್ತು ಮೂರ್ತಿ ಶಿಲ್ಪ, ಪುಟ ೮೬

೧೪೦. ಅದೇ, ಪುಟ ೮೫

೧೪೧. ಅದೇ, ಪುಟ ೧೦೫

೧೪೨. ಅದೇ, ಪುಟ ೧೧೨

೧೪೩. ಮುಜಮ್‌ದಾರ್ ಆರ್.ಸಿ., ಹಾಗೂ ಇತರರು, ದಕ್ಷಿಣ ಭಾರತದ ಇತಿಹಾಸ, ಪುಟ ೬೦

೧೪೪. ಗೌಡ ಗಣಪತಿ ಎಸ್., ಶಿಸುಗಲಿ ಪಾಂಡ್ಯರು ಹಾಗೂ ಚಂದಾವರ ಕಾದಂಬರು, ಪುಟ ೧೦೨

೧೪೫. ಅದೇ, ಪುಟ ೧೦೯

೧೪೬. ಶೈಲಾ ವರ್ಮಾ ಟಿ.ಎಸ್., ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೨೨೫

೧೪೭. ಅದೇ, ಪುಟ ೨೨೫

೧೪೮. ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಪುಟ ೭೯

೧೪೯. ಶೈಲಾ ವರ್ಮಾ ಟಿ., ದಕ್ಷಿಣ ಕನ್ನಡ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೧೨೫

೧೫೦. ಅದೇ, ಪುಟ ೧೨೫

೧೫೧. ಅದೇ, ಪುಟ ೧೨೬

೧೫೨. ಅದೇ, ಪುಟ ೧೨೬

೧೫೩. ರಮೇಶ ಕೆ.ವಿ., ಶರ್ಮಾ ಎಂ.ಜೆ., ತುಳುನಾಡಿನ ಅರಸು ಮನೆತನಗಳು, ಪುಟ ೧೫೬

೧೫೪. ಅದೇ, ಪುಟ ೧೫೭

೧೫೫. ನಾಗೇಗೌಡ ಎಚ್.ಎಲ್., ಪ್ರವಾಸಿಕಂಡ ಇಂಡಿಯಾ, ಸಂಪುಟ ೧, ಪುಟ ೧೩೧

೧೫೬. ಅದೇ, ಪುಟ ೧೩೩

೧೫೭. ಭಾರತ ಗೈಜೇಟಿಯರ್, ಭಾಗ ೧ ಪುಟ ೫೨೮

೧೫೮. ಅದೇ, ಪುಟ ೫೨೮

೧೫೯. ಅದೇ, ಪುಟ ೩೧೬

೧೬೦. ಅದೇ, ಪುಟ ೫೨೮

೧೬೧. ಅದೇ, ಪುಟ ೫೨೮

೧೬೨. ನವಾಯತರು, ಜಮಿರುಲ್ಲಾಷರಿಪ್ ಸೈಯದ್, ಪುಟ ೫

೧೬೩. ಅದೇ, ಪುಟ ೫–೬

೧೬೪. ಅದೇ, ಪುಟ ೫

೧೬೫. ಅದೇ, ಪುಟ ೬

೧೬೬. ಉಪಾಧ್ಯಾಯ ಸುಶೀಲಾ, ತರಂಗ ವಾರಪತ್ರಿಕೆ, ೮ ಜುಲೈ ೨೦೧೨ ಬ್ಯಾರಿಗಳು, ಪುಟ ೧೫

೧೬೭. ಅದೇ, ಪುಟ ೧೫

೧೬೮. ಅದೇ, ಪುಟ ೧೫

೧೬೯. ಪ್ರವಾಸಿಕಂಡ ಇಂಡಿಯಾ, ಸಂ.೧ ಪುಟ ೨೩

೧೭೦. ಚಟ್ಟೋಪಾದ್ಯಾಯ ದೇವಿಪ್ರಸಾದ, ದರ್ಶನ, ಪುಟ ೫೫

೧೭೧. ಸರ್ದೇಸಾಯಿ ಎಸ್. ಜಿ., ಪ್ರಾಚೀನ ಭಾರತದಲ್ಲಿ ದಾರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ, ಪುಟ ೧೩

೧೭೨. ಅದೇ, ಪುಟ ೧೩

೧೭೩. ಸರ್ದೇಸಾಯಿ ಎಸ್. ಜಿ.,ಭಾರತೀಯ ತತ್ವಜ್ಞಾನ: ವೈಚಾರಿಕ ಮತ್ತು ಸಾಮಾಜಿಕ ಸಂಘರ್ಷ, ಪುಟ ೧೮೧

೧೭೪. ಅದೇ, ಪುಟ ೧೮೧

೧೭೫. ಹಿರೇಮಠ ಎಸ್.ಎಸ್., ದ್ರಾವಿಡ ಅಧ್ಯಯನ, ಸಂ.೧ ಸಂ.೨ ಜೂನ್ ೨೦೦೨, ದ್ರಾವಿಡ ಸಂಸ್ಕೃತಿ ಚಿಂತನೆಯ ತಾತ್ವಿಕ ಹಿನ್ನೆಲೆ, ಪುಟ ೩

೧೭೬. ಅದೇ, ಪುಟ ೩

೧೭೭. ಅದೇ, ಪುಟ ೩

೧೭೮. ಅದೇ, ಪುಟ ೫

೧೭೯. ಅದೇ, ಪುಟ ೬

೧೮೦. ಬನ್ನಂಜೆ ಬಾಬು ಅಮೀನ, ತುಳುನಾಡಿನ ದೈವಗಳು, ಪುಟ ೮

೧೮೧. ಕಾಮತ್ ಜ್ಯೋತ್ಸ್ನಾ, ಮಹಿಳೆ ಒಂದು ಅಧ್ಯಯನ, ಪುಟ ೧೭

೧೮೨. ಚಟ್ಟೋಪಾಧ್ಯಾಯ ದೇವಿ ಪ್ರಸಾದ, (ಅನು) ವೇಣುಗೋಪಾಲ ಟಿ.ಎಸ್., ಶೈಲಜಾ, ಲೋಕಾಯತ, ಪುಟ ೪೦೧

೧೮೩. ರಮೇಶ ಸ.ಚಿ, ಬಲೀಂದ್ರ, ಪುಟ ೧

೧೮೪. ಕಲಬುರ್ಗಿ ಎಂ.ಎಂ., ಸಂಸ್ಕೃತಿ–ವಿಕೃತಿ, ಪುಟ ೬

೧೮೫. ಸೋಮೇಶ್ವರ ಅಮೃತ, ತುಳುವ ಜಾನಪದ ಲೋಕ ಕೆಲವು ನೋಟಗಳು, ಪುಟ ೬೩

೧೮೬. ಅದೇ, ಪುಟ ೧೭೦

೧೮೭. ಬನ್ನಂಜೆ ಬಾಬು ಅಮೀನ್, ತುಳುನಾಡಿನ ದೈವಗಳು, ಪುಟ ೫

೧೮೮. ಕಲ್ಲುಗುಡಿ ಬಸವರಾಜ, (ಸಂ) ಸುವರ್ಣ ವಿಚಾರ ಸಾಹಿತ್ಯ, ರೋಮಿಲಾಥಾಪರ, ಕಲ್ಪಿತ ಧಾರ್ಮಿಕ ಸಮುದಾಯಗಳು, ಪುಟ ೪೧೭

೧೮೯. ಅದೇ, ಪುಟ ೪೧೮

೧೯೦. ಅದೇ, ಪುಟ ೪೧೯

೧೯೧. ಚಟ್ಟೋಪಾಧ್ಯಾಯ, ದೇವಿಪ್ರಸಾದ (ಅನು) ವೇಣುಗೋಪಾಲ ಟಿ.ಎಸ್., ಶೈಲಜಾ, ಲೋಕಾಯತ, ಪುಟ ೩೨

೧೯೨. ಬಸವರಾಜ ಹಾ., ಜನಪದ ದೈವಗಳು, ಪುಟ ೧

೧೯೩. ಅದೇ, ಪುಟ ೩೩

೧೯೪. ಬಾಬು ಅಮೀನ್ ಬನ್ನಂಜೆ, ತುಳುನಾಡಿನ ದೈವಗಳು, ಸಾಂಸ್ಕೃತಿಕ ವಿಶ್ಲೇಷಣೆ, ಪುಟ ೪

೧೯೫. ಶರ್ಮಾ ಆರ್.ಎಸ್., ಪ್ರಾಚೀನ ಭಾರತ, ಪುಟ ೧೨೬

೧೯೬. ಇರ್ಫಾನ್ ಹಬೀಬ್, ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ, ಪುಟ ೬

೧೯೭. ಲೋಹಿಯಾ ರಾಮ ಮನೋಹರ, ಉತ್ತರ–ದಕ್ಷಿಣ, ಪುಟ ೧೩೦

೧೯೮. ಶರ್ಮಾ ಆರ್.ಎಸ್., ಪ್ರಾಚೀನ ಭಾರತ, ಪುಟ ೭೬–೭೭

೧೯೯. ಸೋಸಲೆ ಚಿನ್ನಸ್ವಾಮಿ ಎನ್., ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರು ಮತ್ತು ಮತಾಂತರ, ಪುಟ ೭

೨೦೦. ಇರ್ಫಾನ್ ಹಬೀಬ್, ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ, ಪುಟ ೧೪

೨೦೧. ಅದೇ, ಪುಟ ೧೭

೨೦೨. ಸೋಸಲೆ ಚಿನ್ನಸ್ವಾಮಿ ಎನ್., ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರು ಮತ್ತು ಮತಾಂತರ, ಪುಟ ೯

೨೦೩. ಇರ್‌ಫಾನ್ ಹಬೀಬ್, ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ, ಪುಟ ೨೧

೨೦೪. ದಿವಾಕರ ನಾ., ದಲಿತರು ವಿಮೋಚನೆಯ ಹಾದಿ ಒಂದು ಅವಲೋಕನ, ಪುಟ ೭೪

೨೦೫. ಅದೇ, ಪುಟ ೭೫

೨೦೬. ಶರ್ಮಾಆರ್.ಎಸ್., ಪ್ರಾಚೀನ ಭಾರತ, ಪುಟ ೧೭೬–೭೭

೨೦೭. ಅದೇ, ಪುಟ ೧೭೭

೨೦೮. ಇ.ಐ, xiii ೩೨೯, ೯೨೯. ಎ.ಡಿ, ಐ.ಎ xii.ಪುಟ ೨೨೩,೯೨೯–೩೦ಎ.ಡಿ

೨೦೯. ಚಿಂದಾನಂದಮೂರ್ತಿಎಮ್., ಕನ್ನಡಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ೪೮೭

೨೧೦. ಅದೇ, ಪುಟ ೪೮೯

೨೧೧. ಅದೇ, ಪುಟ ೪೯೦

೨೧೨. ಶರ್ಮಾ ಆರ್.ಎಸ್., ಪ್ರಾಚೀನ ಭಾರತ, ಪುಟ ೧೭೭

೨೧೩. ಗೋಪಾಲ ಬಾ.ರಾ., ಬನವಾಸಿ ಕದಂಬರು, ಪುಟ ೯–೧೧

೨೧೪. ಭಾರತದ ಗ್ಯಾಜಿಟಿಯರ್, ಭಾಗ ೨, ಪುಟ ೫೬೦–೭೧

೨೧೫. ಗೋಪಾಲ ಬಾ.ರಾ., ಬನವಾಸಿ ಕದಂಬರು, ಪುಟ ೧೩

೨೧೬. ಅದೇ, ಪುಟ ೧೩–೧೪

೨೧೭. ಭಟ್ ಗುರುರಾಜ ಪಾದೂರು, ತುಳುನಾಡು, ಪುಟ ೭೧

೨೧೮. ಅದೇ, ಪುಟ ೬೭

೨೧೯. ಅದೇ, ಪುಟ ೬೮

೨೨೦. ಅದೇ, ಪುಟ ೬೮

೨೨೧. ಅದೇ, ಪುಟ ೬೯

೨೨೨. ಅದೇ, ಪುಟ ೭೧

೨೨೩. ಅದೇ ಪುಟ ೭೨

೨೨೪. ಕ್ರಿ.ಶ. ೭ನೇ ಶತಮಾನ, ಆರ್ಕಿಲಾಜಿ ರಿಪೋರ್ಟ, ಮಡ್ರಾಸ್ ಪ್ರಸಿಡೆನ್ಸಿ, ೧೯೩೧–೩೨ ಪುಟ ೨೧೦

೨೨೫. ರಮೇಶ ಕೆ.ವಿ., ಶರ್ಮಾ ಎಂ.ಜೆ., ತುಳುನಾಡಿನ ಶಾಸನಗಳು, ಪುಟ ೧೪

೨೨೬. ಅದೇ, ಪುಟ ೨೦

೨೨೭. ಅದೇ, ಪುಟ ೨೨

೨೨೮. ಅದೇ, ಬಾರ್ಕೂರು ನಖರೇಶ್ವರ ದೇವಾಲಯ ಶಾಸನ, (ರಾಚಮಲ್ಲನ ತಾಮ್ರ ಶಾಸನ) ಪುಟ ೨೩

೨೨೯. ಭಟ್ ಗುರುರಾಜ್ ಪಾದೂರು, ತುಳುನಾಡು ಪುಟ ೧೧೭

೨೩೦. ಅದೇ, ಪುಟ ೧೧೬

೨೩೧. ಅದೇ, ಪುಟ ೧೧೬

೨೩೨. ಮೂರ್ತಿ ಚಿದಾನಂದ ಎಂ., ಕನ್ನಡನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪುಟ ४೯೩

೨೩೩. ಬಿ.ಕೆ.ಐ.ಐ. ii, ೨೦೧. ಸಿ. ೧೧೨೫ ಎ.ಡಿ

೨೩೪. ಬಿ.ಕೆ.ಐ.ಐ. ii, ೫೦. ಸಿ. ೧೦೦೫ ಎ.ಡಿ

೨೩೫. ಅದೇ, ಪುಟ ೨೦೨. ಸಿ. ೧೦೧೫

೨೩೬. ಶರ್ಮಾ ಆರ್.ಎಸ್., ಪ್ರಾಚೀನ ಭಾರತ, ಪುಟ ೨೭

೨೩೭. ಅದೇ, ಪುಟ ೧೦೩

೨೩೮. ಅದೇ, ಪುಟ ೧೦೪

೨೩೯. ಅದೇ, ಪುಟ ೧೦೫

೨೪೦. ಬಿ.ಕೆ.ಐ.ಐ. ii, ೫೦. ಸಿ. ೧೦೦೫ ಎ.ಡಿ

೨೪೧. ಶರ್ಮಾ ಆರ್.ಎಸ್., ಪ್ರಾಚೀನ ಭಾರತ, ಪುಟ ೧೦೪

೨೪೨. ಅದೇ, ಪುಟ ೧೦೫

೨೪೩. ಅದೇ, ಪುಟ ೧೦೪

೨೪೪. ಅದೇ, ಪುಟ ೧೦೪

೨೪೫. ಪಾವಟೆ ಚೆನ್ನಕ್ಕ, ಶಾಸನಗಳಲ್ಲಿ ಸ್ತ್ರೀ ಸಮಾಜ, ಪುಟ ೬೭

೨೪೬. ವಸಂತ ಮಾಧವ ಕೆ.ಜಿ., ಕರ್ನಾಟಕ ಥರ್ಡವರ್ಲ್ಡ್, ಪುಟ ೨೦

೨೪೭. ಅದೇ, ಪುಟ ೨೦

೨೪೮. ಅದೇ, ಪುಟ ೩೫

ಅಧ್ಯಾಯ: ಆರು

ಬಂದರುಗಳ ಆರ್ಥಿಕ ಇತಿಹಾಸ

ಅಧ್ಯಾಯ : ಆರು

ಬಂದರುಗಳ ಆರ್ಥಿಕ ಜೀವನ

ಪೀಠಿಕೆ

ಒಂದು ಪ್ರದೇಶದ ಜನಜೀವನದ ಸಂಪೂರ್ಣ ಪರಿಚಯ ನೀಡುವುದು ಅವರ ಆರ್ಥಿಕ ಚರಿತ್ರೆ. ಕರಾವಳಿಯ ಜನರ ಬದುಕಿಗೆ ನವಚೈತನ್ಯ ತುಂಬಿ, ಅವರ ಸಾಮಾಜಿಕ ಬದುಕನ್ನು ಬದಲಾಯಿಸಿದ್ದು ಬಂದರುಗಳ ಮೂಲಕ ನಡೆದ ಕಡಲೋತ್ತರ, ದೇಶಿಯ ವ್ಯಾಪಾರಗಳು. ಈ ವ್ಯಾಪಾರವು ಒತ್ತಾಯದ, ಕಠೀಣವಾಗಿ ಶ್ರಮಪಡುವ ದುಡಿಯುವ ವರ್ಗವನ್ನು ಸೃಷ್ಟಿಸಿದಂತೆ, ಆರ್ಥಿಕ ಲಾಭ, ವಿದೇಶಿ ವಸ್ತುಗಳ ಬಳಕೆಯ ವಿಲಾಸಿ ಜೀವನ ಮತ್ತು ವಸ್ತುಗಳನ್ನು ಪರದೇಶಕ್ಕೆ ಕಳಿಸುವ ಸಂಘಟಿತ ಶ್ರೀಮಂತಿಕೆಯ ಆರ್ಥಿಕ ಗುಂಪುಗಳನ್ನು ಹುಟ್ಟುಹಾಕಿತು. ಸಮಾಜದಲ್ಲಿ ದುಡಿಯುವ ಹಾಗೂ ಲಾಭ ಪಡೆಯುವ ಎರಡು ವರ್ಗಗಳನ್ನು ಸೃಷ್ಟಿಸಿತು. ಬಂದರುಗಳನ್ನು ಅವಲಂಭಿಸಿದ ಜನತೆಯಲ್ಲಿ ಉಂಟಾದ ಈ ಎರಡು ವರ್ಗಗಳಲ್ಲಿ ಶ್ರೀಮಂತರು ಪ್ರಭುತ್ವದೊಂದಿಗೆ ಸಂಪರ್ಕ ಪಡೆದು ಆಳುವ ಕಾರ್ಯದಲ್ಲಿ ಸಹಕರಿಸುವವರಾದರೆ, ಬಡವರು, ಶ್ರಮಜೀವಿಗಳಾಗಿ ತೆರೆಮರೆಗೆ ಸರಿದರು. ಶ್ರೀಮಂತವರ್ತಕರು, ಕುಲೀನಮನೆತನದವರು, ಪುರೋಹಿತರು, ಬ್ರಾಹ್ಮಣರು ಹಾಗೂ ರಾಜಪರಿವಾರದವರು, ಪಾಳೆಗಾರರು, ಸಾಮಂತರು ಉನ್ನತ ಸ್ಥಾನದಲ್ಲಿದ್ದು ಆಳುವ ವರ್ಗದವರಾಗಿದ್ದರು.

ವಿದೇಶಗಳಲ್ಲಿ ಬೆಲೆಬಾಳುತ್ತಿದ್ದ ಕರಕುಶಲ ವಸ್ತುಗಳು ಹಾಗೂ ಅಕ್ಕಿ ಮತ್ತು ಮಸಾಲೆ ಸಾಮಗ್ರಿಗಳು ಅಲ್ಲಿಗೆ ಹೋದರೆ, ಅಲ್ಲಿಂದ ಉತ್ತಮ ದರ್ಜೆಯ ಮದ್ಯ ಮತ್ತಿತರ ಸಾಮಾನು, ಚಿನ್ನ ಮುಂತಾದ ಲೋಹ ಹಾಗೂ ಕುದುರೆಯಂಥಹ ಪ್ರಾಣಿಗಳನ್ನು ತರಿಸಿಕೊಳ್ಳುತ್ತಿದ್ದರು. ನೌಕಾಯಾನಕ್ಕೆ ಬೇಕಾದ ದೊಡ್ಡಹಡಗುಗಳ ರಚನೆ, ರಿಪೇರಿ ಹಾಗೂ ಅವುಗಳನ್ನು ಎಲ್ಲ ಋತುವಿನಲ್ಲಿ ಯಾನಕ್ಕೆ ಯೋಗ್ಯವಾಗಿರಿಸಿಕೊಳ್ಳಲುಬೇಕಾದ ಕೆಲಸಗಳಿಗೆ ಕಾರ್ಮಿಕರು ತೊಡಗಿದ್ದರು. ಬಂದರುಗಳ ಸುತ್ತಮುತ್ತ ಕುಶಲಕರ್ಮಿಗಳು, ಕೃಷಿಕರು ನೆಲೆಸಿದ್ದರು. ವಿನಿಮಯ, ಉತ್ಪಾದಕ ಸಂಘಗಳು ನಿರ್ಮಾಣ ಗೊಂಡಿದ್ದವು. ಆರ್ಥಿಕ ಬದುಕಿಗೆ ಸಹಾಯಕವಾಗುವಂತಹ ನಾಣ್ಯಗಳು, ತೂಕ, ತೆರಿಗೆ ಪದ್ಧತಿಗಳು ಕಂಡುಬಂದವು ಆಂತರಿಕ ಬಾಹ್ಯ ವ್ಯಾಪಾರಕ್ಕೆ ಪೂರಕವಾಗಿ ಪೇಟೆ, ಸಂತೆಗಳ ರಚನೆಯಾದವು. ಎಲ್ಲಾ ವಿಧದ ಸರಕುಗಳ ವ್ಯಾಪಾರ ನಡೆಯಿತು. ಹಿನ್ನಾಡಿಗೆ ಸಂಪರ್ಕಿಸುವ ಭೂಮಾರ್ಗ ಹಾಗೂ ನದಿ ಮಾರ್ಗಗಳು ಮತ್ತು ಕಡಲೋತ್ತರ ವ್ಯಾಪಾರಕ್ಕೆ ಬೇಕಿದ್ದ ಸಮುದ್ರ

ಮಾರ್ಗಗಳನ್ನು ರಚಿಸಿಕೊಂಡರು. ಒಟ್ಟಿನಲ್ಲಿ ಕಡಲೋತ್ತರ ವ್ಯಾಪಾರವು ನಾಡಿನ ಆರ್ಥಿಕ ಜೀವನದಲ್ಲಿ ಅದ್ಭುತವಾದ ಬದಲಾವಣೆಗಳನ್ನು ಉಂಟುಮಾಡಿತ್ತು.

೬.೧ ಬಂದರುಗಳ ಆರ್ಥಿಕತೆ

ಬಂದರಿಗೆ ಸಂಬಂಧಿಸಿದಂತೆ ನಡೆದ ಎಲ್ಲ ಆರ್ಥಿಕ ಚಟುವಟಿಕೆಗಳನ್ನು ಒಂದೇ ಶಬ್ಧದಲ್ಲಿ ಆರ್ಥಿಕತೆ-ಬಂದರು ಆರ್ಥಿಕತೆ ಎನ್ನಬಹುದು. ಬಂದರಿನ ಮೂಲಕ ನಡೆದ ಕೃಷಿ ಉತ್ಪನ್ನ, ಸಾಂಬಾರದಿನಿಸು, ತೋಟಗಾರಿಕಾ ಉತ್ಪನ್ನ, ವನೋತ್ಪನ್ನಗಳ ವ್ಯಾಪಾರ-ವ್ಯವಹಾರ, ಕರಕುಶಲ ವಸ್ತುಗಳು, ಪ್ರಾಣಿಗಳು, ಲೋಹಗಳ ವ್ಯಾಪಾರ, ಅಂತೆಯೇ ವಿದೇಶಿ ಸರಕುಗಳ ವ್ಯಾಪಾರದ-ಲಾಭ ಅದರ ಪರಿಣಾಮ ಅಲ್ಲಿಯ ಜನತೆಯ ದುಡಿಮೆಗಳನ್ನು ಒಳಗೊಂಡಿದೆ. ಉತ್ಪಾದನೆಯನ್ನು ಮಾಡಿ ವ್ಯಾಪಾರ-ವ್ಯವಹಾರಗಳಲ್ಲಿ ತೊಡಗಿದ ಕರಾವಳಿಯ ಕರಕುಶಲರು, ಕೃಷಿಕರು, ಶ್ರಮಜೀವಿಗಳು ಉತ್ಪಾದಕ ಶಕ್ತಿಗಳೊಂದಿಗೆ ಹೊಂದಿದ್ದ ಸಂಬಂಧ ಬದಲಾಗುತ್ತಾ, ವಿಸ್ತಾರವಾಗುತ್ತಾ ಸಾಗಿತು. ಇದು ಸಾಮಾಜಿಕವಾಗಿ ವ್ಯಕ್ತಿಯನ್ನು ಬದಲಾಯಿಸಿತು. ಕೃಷಿಕ-ಭೂಮಾಲಿಕ, ಕುಶಲಕರ್ಮಿ-ಕೈಗಾರಿಕೆಗಳ ಮಾಲಿಕ ಹಾಗೂ ಶೂದ್ರ ಮತ್ತು ಒಡೆಯರ ನಡುವಿನ ಸಂಬಂಧಗಳು, ಉತ್ಪಾದನಾ ಸಂಬಂಧಗಳು ಬದಲಾಗಿದ್ದವು. ಒಂದು ನಿರ್ಧಿಷ್ಟ ಅವಧಿಯಲ್ಲಿನ ಸಮಾಜದ ಆರ್ಥಿಕ ರಚನೆಯನ್ನು ಉತ್ಪಾದನಾ ವಿಧಾನ ಎಂದು ಪರಿಗಣಿಸುತ್ತಾರೆ. ವಿಭಿನ್ನ ಚಾರಿತ್ರಿಕ ಅವಧಿಯಲ್ಲಿನ ಉತ್ಪಾದನಾ ವಿಧಾನಗಳಲ್ಲಿ ಅನೇಕ ವ್ಯತ್ಯಾಸ ಕಂಡುಬರುತ್ತದೆ. ಪ್ರಾಚೀನ ಜನಜೀವನದ ಸಮಾನತೆಯ ನಂತರದ ಇತಿಹಾಸ ಕಾಲದ ತಾರತಮ್ಯದ ಉಳಿಗಮಾನ್ಯ ಪ್ರಭುತ್ವದ ಭೂಮಾಲಿಕ-ರೈತರೆಂಬ ಭೇದ, ನಂತರದ, ಮಾಲಿಕ-ಕಾರ್ಮಿಕ ಎಂಬ ವ್ಯತ್ಯಾಸ ಕಂಡು ಬಂದರೂ ಶ್ರಮಿಕ-ಮಾಲಿಕರ ನಡುವಿನ ಕಂದಕದಲ್ಲಿ ಬದಲಾವಣೆಗಳಿರಲಿಲ್ಲ.

ಆರ್ಥಿಕತೆಯ ಶಿಸ್ತಿನಲ್ಲಿ ಕಾಣುವುದು ಬಹುಮುಖ್ಯವಾಗಿ ಮೂರು ಸಮಸ್ಯೆಗಳು. ೧. ಏನನ್ನು ೨. ಹೇಗೆ ಮತ್ತು ೩. ಯಾರಿಗಾಗಿ ಉತ್ಪಾದಿಸಬೇಕು?[೧] ಎಂಬ ಪ್ರಶ್ನೆಯಾಗಿದೆ. ಈ ಮೂರು ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡರೆ ಅಲ್ಲಿಯ ಆರ್ಥಿಕತೆ ಅರ್ಥವಾಗುತ್ತದೆ. ಇಂಥಹ ಉತ್ಪಾದನೆಯ ಶ್ರಮದಲ್ಲಿ ತೊಡಗಿದಾಗ ಸಾಮಾಜಿಕ ವಿಭಜನೆ ಕಾಣಿಸಿಕೊಳ್ಳುವುದು.

ಶ್ರಮಜೀವಿಗಳು ರಕ್ತವನ್ನು ಬೆವರು ಮಾಡಿ ಆಳ ಕಡಲನ್ನು, ದುರ್ಗಮ ಅರಣ್ಯಗಳನ್ನು ಮೊಗೆದು ತಂದರು, ಕೃಷಿಕರು, ಕುಶಲಕರ್ಮಿಗಳು ಹಗಲಿರುಳೆನ್ನದೇ ದುಡಿದು ವಸ್ತುಗಳನ್ನು ಉತ್ಪಾದಿಸಿದರು. ದೊಡ್ಡ ದೊಡ್ಡ ನೌಕೆಗಳ ನಿರ್ಮಾಣ ಮಾಡಿದರು.

ಶ್ರಮಜೀವಿಗಳ ಉತ್ಪಾದನೆಯ ಮಿಗುತೆಯನ್ನು ಮಧ್ಯವರ್ತಿ ವ್ಯಾಪಾರಿಗಳು, ಅರಸ-ಸಾಮಂತ ವರ್ಗದವರು ಒತ್ತಾಯದಿಂದ ಕಿತ್ತುಕೊಂಡರು. ಆಮಿಶದಿಂದ ಅಥವಾ ಮನ ಒಲಿಸಿ

ತೆಗೆದುಕೊಂಡು ವ್ಯಾಪಾರದಲ್ಲಿ ತೊಡಗಿಸಿದರು. ದೇಶೀಯ ವಿದೇಶೀಯ ವ್ಯಾಪಾರಿಗಳು ಲಾಭದ ಒಂದು ಪಾಲು ಪ್ರಭುತ್ವಕ್ಕೆ ಕೊಟ್ಟು ವ್ಯಾಪಾರ ನಡೆಸಿ ತಾವೂ ಲಾಭ ಮಾಡಿಕೊಂಡರು. ವ್ಯಾಪಾರಕ್ಕಾಗಿ ಹುಟ್ಟಿಕೊಂಡ ವ್ಯಾಪಾರಿ ಸಂಘಗಳು ಇಂದಿನ ಪೇಟೆಂಟಿನಂತೆ ನಿರ್ಧಿಷ್ಟ ಪಡಿಸಿದ ವಸ್ತುಗಳ ಮಾರಾಟದ ಏಕಸಾಮ್ಯ ಹೊಂದಿದ್ದರು. ಅದಕ್ಕಾಗಿಯೇ ಅವರ ಸಂಘಗಳಿಗೆ ನಾನಾದೇಶಿ, ಹಂಜಮಾನ, ಶೆಟ್ಟಿಗುತ್ತ, ಏಳಮೆ ಮುಂತಾದ ಹೆಸರುಗಳಿರುವುದನ್ನು ಕಾಣಬಹುದಾಗಿದೆ.

೬.೧.೧ ವರ್ತಕ ಸಮುದಾಯಗಳು

ವ್ಯಾಪಾರಕ್ಕಾಗಿ ಬಂದ ವರ್ತಕರೆ ದೇಶದ ಆಡಳಿತ ಚುಕ್ಕಾಣಿ ಹಿಡಿದು ಶತಮಾನಗಳವರೆಗೆ ಆಳಿದ್ದು ಆಧುನಿಕ ಜಗತ್ತಿನ ಚರಿತ್ರೆಯ ಭೀಕರ ಅಧ್ಯಾಯ. ಸಾಮ್ರಾಜ್ಯಶಾಹಿ ಆಡಳಿತ ವ್ಯವಸ್ಥೆಗೆ ಬುನಾದಿ ಹಾಕಿದ ಈ ವರ್ತಕರು ಸ್ಥಳೀಯರನ್ನು ವಂಚಿಸಿ ದೈಹಿಕ ಹಾಗೂ ಭೌದ್ಧಿಕ ಗುಲಾಮರನ್ನಾಗಿಸಿಕೊಂಡು ಆಡಳಿತ ನಡೆಸಿದರು. ವ್ಯಾಪಾರವೇ ಕಸುಬಾಗಿಸಿಕೊಂಡು ಆರಂಭವಾದ ವರ್ತಕರ ಚರಿತ್ರೆ ಪ್ರಾಚೀನವಾದದ್ದು. ಶ್ರೀಮಂತ ವರ್ತಕರು ಬಲಾಢ್ಯವಾದ ದಂಡನ್ನು ಕಟ್ಟಿಕೊಂಡು, ಬೃಹತ್ ಗಾತ್ರದ ನೌಕೆಗಳಲ್ಲಿ, ಕಡಲಗಲ ಸಂಚರಿಸಿ ತಾವು ಕೇಳಿದ, ಹಿಂದಿನವರು ನೋಡಿದ ದೇಶಗಳನ್ನು ಹುಡುಕುತ್ತಾ ಸಾಗಿದರು. ತಲುಪಿದ ಸ್ಥಳಗಳಲ್ಲಿ ಸ್ಥಳೀಯ ಆಡಳಿತಗಾರರು, ಶ್ರೀಮಂತ ವ್ಯಾಪಾರಿ ಸಮೂಹಗಳೊಂದಿಗೆ ವ್ಯಾಪಾರ ವ್ಯವಹಾರ ನಡೆಸಿದರು. ಸ್ಥಳೀಯ ಜನತೆ ಜೈಸಿತಂದ ವನೋತ್ಪನ್ನ, ಕಡಲಉತ್ಪನ್ನ ಹಾಗೂ ಬೆಳೆದ ಬೆಳೆಗಳನ್ನು ಆಮಿಷಗಳನ್ನೊಡ್ಡಿಯೋ ದಂಡಿನ ಭೀತಿಬಿತ್ತಿಯೋ ಪಡೆದುಕೊಂಡರು. ಇಂಥಹ ವ್ಯಾಪಾರ ವ್ಯವಹಾರ ಕರ್ನಾಟಕದ ತೀರ ಪ್ರದೇಶದಲ್ಲೂ ನಡೆದಿತ್ತು.

ರಾಜ್ಯಗಳ ಉದಯ ಅಲ್ಲಿಯ ಶ್ರಮ ಜೀವಿಗಳನ್ನು ಅಂಕಿತದಲ್ಲಿರಿಸಿಕೊಂಡಿತು. ಶ್ರಮ ವಿಭಜನೆ ಹೆಚ್ಚುತ್ತಾ ಸಾಗಿದ್ದರಿಂದ ಮಿಗುತಾಯದ ಉತ್ಪಾದನೆ ಕಂಡುಬಂದಿತು[೨]. ಇದು ವಿನಿಮಯ ಪದ್ದತಿಗೆ ದಾರಿಯಾಯಿತು. ಹೀಗೆ ಉಂಟಾದ ಶ್ರಮ ವಿಭಜನೆಯ ಮೂರನೇ ಹಂತವಾಗಿ, ಉತ್ಪಾದನೆಯಲ್ಲಿ ಪಾಲ್ಗೊಳ್ಳದಂಥ ಆದರೆ ಉತ್ಪನ್ನಗಳ ವಿನಿಮಯದಲ್ಲಷ್ಟೇ ತೊಡಗಿರುವಂಥ ಒಂದು ವರ್ಗವನ್ನು–ವರ್ತಕ ವರ್ಗವನ್ನು ಸೃಜಿಸಿತು[೩]. ಯಾವುದೇ ಶ್ರಮದಲ್ಲಿ ಭಾಗಿಗಳಾಗದೇ, ಮೈಗಳ್ಳರಾಗಿದ್ದು ಸಮಾಜದಲ್ಲಿ ದೊಡ್ಡ ಶೋಷಕ ವರ್ಗವಾಗಿ ಬೆಳೆದು ಬಂದು, ಶ್ರಮಿಕರ ಉತ್ಪಾದನೆಗಳನ್ನು ದೇಶ, ವಿದೇಶಗಳಲ್ಲಿ ವಿನಿಮಯ, ಮಾರಾಟ ಮಾಡುವ ಮೂಲಕ ಲಾಭಖೋರರಾಗಿ ಬದಲಾದ ಈ ವರ್ಗ ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನ ಪಡೆಯಿತು. ಇಂಥಹ ವರ್ಗವನ್ನು ಪೋಷಿಸಿದ ಆಳುವ ವರ್ಗ ತನ್ನ ಪ್ರಭುತ್ವವನ್ನು ಗಟ್ಟಿಗೊಳಿಸಿಕೊಳ್ಳಲು ಹಾಗೂ ಲಾಭಗಳಿಸಿಕೊಳ್ಳಲು ಈ ವರ್ತಕ ಸಮೂಹದ ಮೂಲಕ ವ್ಯಾಪಾರ ವ್ಯವಹಾರಗಳನ್ನು ಭರದಿಂದ

ನಡೆಸಿತು. ಬೇಡಿಕೆ ಇದ್ದ ವಸ್ತುಗಳನ್ನು ದುಡಿಯುವ ವರ್ಗದ ಸಹಾಯದಿಂದ ಉತ್ಪಾದಿಸಿ ದೇಶಿಯರಿಗೆ ಹಾಗೂ ವಿದೇಶಿಯರಿಗೆ ಮಾರಿಲಾಭ ಮಾಡಿಕೊಳ್ಳ ತೊಡಗಿದರು. ದೇಶದೊಳಗಿನ ಶ್ರೀಮಂತರು, ಸಾಮಂತರು, ರಾಜ ಪರಿವಾರದವರೂ, ಪುರೋಹಿತರು ಈ ವ್ಯಾಪಾರದ ಲಾಭದ ಫಲಾನುಭವಿಗಳಾಗಿದ್ದರು. ಕರ್ನಾಟಕದ ತೀರದ ಆಳಕಡಲಿನಿಂದ, ದುರ್ಗಮ ಪಶ್ಚಿಮ ಘಟ್ಟಗಳಿಂದ ಮೊಗೆದು ತಂದ ನೈಸರ್ಗಿಕ ಸಂಪತ್ತು ದೊಡ್ಡ ವ್ಯಾಪಾರಿ ಸರಕಾಗಿತ್ತು. ಈ ಲಾಭದಾಯಕ ಸರಕನ್ನು ತಂದವರು ಸ್ಥಳೀಯ ಶ್ರಮಜೀವಿಗಳು. ಇವರ ದಣಿವರಿಯದ ದುಡಿಮೆ ಆಳುವ ವರ್ಗದ ವೈಭವವನ್ನು ಹೆಚ್ಚಿಸಿತು. ಆದರೆ ಶ್ರಮಿಕರು ನಿರ್ಗತಿಕರಾದರು.

ಕರಾವಳಿಯಲ್ಲಿ ನಡೆದ ವ್ಯಾಪಾರ ವ್ಯವಹಾರಗಳಲ್ಲಿ ವ್ಯಾಪಾರಿ ಸಂಘಗಳ ಪಾತ್ರ ಬಹು ಮುಖ್ಯವಾಗಿದೆ. ಈ ವ್ಯಾಪಾರಿ ಸಂಘಗಳು ಆರಂಭದಲ್ಲಿ ವೃತ್ತಿ ಸಂಘಗಳಾಗಿದ್ದವು ಅನುವಂಶಿಕವಾದ ವೃತ್ತಿಗಳಿಂದ ಹಲವಾರು ಉಪವೃತ್ತಿ, ಒಳವೃತ್ತಿಗಳಾಗಿ ಕವಲೊಡೆದವು[೪]. ಇವುಗಳು ತಮ್ಮ ಉತ್ಪಾದನೆಗಳನ್ನು ಹೆಚ್ಚಿಸುವ, ವಿನಿಮಯ ಮಾಡುವ ಹಾಗೂ ಮಾರಾಟ ಮಾಡುವ ಚಟುವಟಿಕೆಗಳಲ್ಲಿ ತೊಡಗಿದ್ದವು.

ರಾಜಪ್ರಭುತ್ವವೆ ವ್ಯಾಪಾರನಡೆಸಿದ್ದು ಅಥವಾ ವ್ಯಾಪಾರಿಗಳೇ ರಾಜಪ್ರಭುತ್ವವಾದದ್ದು ಶಾತವಾಹನರಿಂದ ತಿಳಿಯುತ್ತದೆ. ಶಾತವಾಹನರ ಕಾಲದಲ್ಲಿ ಕರ್ನಾಟಕದಲ್ಲಿ ವ್ಯಾಪಾರವು ಅಭಿವೃದ್ಧಿ ಹೊಂದಿತು. ಹೀಗೆ ಅಭಿವೃದ್ಧಿಗೊಳ್ಳಲು ಇವರು ಮೂಲತಃ ವ್ಯಾಪಾರಿಗಳಾಗಿರುವುದೇ ಕಾರಣವಾಗಿರಬಹುದು[೫]. ರಾಜಪ್ರಭುತ್ವ ನೇಮಿಸಿದ ವ್ಯಾಪಾರಿ ಅಧಿಕಾರಿಗಳೇ ಶಾತವಾಹನರೆಂದು ಕೆಲವರ ನಂಬಿಕೆ[೬]. ಇವರ ಹೆಸರುಗಳ ಮುಂದೆ 'ಕರ್ಣಿ' ಎಂಬ ಪದ ಬಳಕೆಯಾಗಿರುವುದೇ ಇದಕ್ಕೆ ಉದಾಹರಣೆ ಎನ್ನುವುದು ಹಲವರ ವಾದವಾಗಿದೆ. ಐಹೊಳೆ ಐನೂರ್ವರ್ ಎಂಬ ವ್ಯಾಪಾರಿ ಸಂಘವು ಪ್ರಾಚೀನ ಕರ್ನಾಟಕದ ಪ್ರಖ್ಯಾತ ವ್ಯಾಪಾರಿ ಸಂಘವಾಗಿದ್ದು, ನಾಡಿನಾಧ್ಯಂತ ಅದರ ಪ್ರಭಾವ ವಿಸ್ತರಿಸಿತ್ತು. ಈ ವ್ಯಾಪಾರಿ ಸಂಘದ ಉಲ್ಲೇಖವು ೨–೩ನೇ ಶತಮಾನದಷ್ಟು ಪೂರ್ವದಲ್ಲಿ ಕಂಡುಬರುತ್ತದೆ. ಐಹೊಳೆ ಅವರ ಕೇಂದ್ರ ಎಂದು ಚರಿತ್ರೆ ತಿಳಿಸುತ್ತದೆ. ಶಾತವಾಹನರ ಧ್ವಜ ಅವಶೇಷವು ಐಹೊಳೆಯಿಂದಲೇ ಮುಂದುವರಿದಿರುವುದರಿಂದ ಶಾತವಾಹನರಿಗೂ ಅಯ್ಯವೊಳೆಐನೂರ್ವರ್ ಸಂಘಕ್ಕೆ ಸಂಬಂಧವಿರುವುದನ್ನು[೭] ತಜ್ಞರು ಗುರುತಿಸಿದ್ದಾರೆ. ಹೀಗೆ ವ್ಯಾಪಾರಿ ಸಂಘಟನೆಗಳ ರಚನೆಯಲ್ಲಿ ರಾಜಪ್ರಭುತ್ವ ತುಂಬಾ ಆಸಕ್ತವಾಗಿತ್ತು.

ಕರಾವಳಿಯ ಬಂದರು ಪಟ್ಟಣಗಳಲ್ಲಿ ಈ ವ್ಯಾಪಾರಿ ಸಂಘಟನೆಗಳು ಆಡಳಿತ, ದೇವಾಲಯ ಮೇಲುಸ್ತುವಾರಿ, ನ್ಯಾಯಾದಾನದಲ್ಲೂ ತಮ್ಮ ಗೌರವಾನ್ವಿತ ಸ್ಥಾನ ಹೊಂದಿರುವುದು ಬಾರ್ಕೂರು, ಬಸರೂರು ಶಾಸನಗಳಿಂದ ತಿಳಿಯುತ್ತದೆ. ಬಂದರುಗಳು ಬಹುಬಗೆಯ

ಉಪಯೋಗದ ಸ್ಥಳಗಳಾಗಿದ್ದವು. ವ್ಯಾಪಾರಿ ಸಂಘಗಳ ಚಟುವಟಿಕೆಗಳು ವಿವಿಧ ರಂಗಗಳನ್ನು ಒಳಗೊಂಡಿತ್ತು. ತಮ್ಮ ದೇಶದ ಸರಕನ್ನು ಹೊರಗೆ ಒಯ್ದು ಪರದೇಶಗಳ ವಸ್ತುಗಳನ್ನು ಇತ್ತತಂದ ವ್ಯಾಪಾರಿಗಳು ಕೇವಲ ವರ್ತಕರಾಗಿರದೆ ಒಂದು ಬಗೆಯ ಪ್ರಚಾರಕರಾಗಿದ್ದರು. ಅವರು ತಮ್ಮ ಲಾಭಕ್ಕೆ ದುಡಿಯುತ್ತಿದ್ದರೂ ಸಾಮಾಜಿಕ ದೃಷ್ಟಿಕೋನವನ್ನು ವಿಶಾಲಗೊಳಿಸಿಕೊಂಡು ಭೌಗೋಳಿಕ ಗಡಿಗಳನ್ನು ಭೇದಿಸಿ ಮನುಷ್ಯ ಸಮಾಜದ ಉನ್ನತಿಗಾಗಿ ಸಹಾಯವನ್ನು ಸಲ್ಲಿಸುತ್ತಿದ್ದರು[೮].

ಗುಪ್ತರ ಕಾಲದಲ್ಲಿ ಬದಲಾದ ಶೂದ್ರರ ಸ್ಥಾನವು ವೈಶ್ಯರೊಂದಿಗೆ ಸಮಾನತೆ ಹೊಂದಿತ್ತು[೯]. ವ್ಯಾಪಾರದಲ್ಲಿ ಭಾಗವಹಿಸಲು ಇವರಿಗೆ ಅನುಮತಿಯನ್ನು ಶಾಸ್ತ್ರಕಾರರು ನೀಡಿದ್ದರು. ಆದರೆ ತೆರಿಗೆಯನ್ನು, ಒಂದು ದಂಧೆಯಲ್ಲಿ ಪಾಲುದಾರನಾಗಿರುವ ಶೂದ್ರನು ಲಾಭದ ೧/೬ ನೀಡಬೇಕೆಂದು ವಿದಿಸಿದ್ದರು[೧೦]. ಇದು ಉಳಿದ ಜಾತಿ ವರ್ಣಗಳಿಗೆ ನೀಡಿದ ಬೆಂಬಲಕ್ಕಿಂತ ಕಠಿಣವಾಗಿದ್ದರೂ, ಮೇಲು ವರ್ಗಗಳೊಂದಿಗೆ ಸೇರಲು- ವ್ಯಾಪಾರದಂಥಹ ಲಾಭದಾಯಕ ವೃತ್ತಿ ಮಾಡಲು ಅನುಮತಿ ಮುದ್ರೆಯನ್ನು ನೀಡಿತ್ತು. ಇದು ಮುಂದುವರಿದಂತೆ, ದೈಹಿಕವಾಗಿ ಬಲಾಢ್ಯರೂ, ಸಾಮಾಜಿಕವಾಗಿ ದೊಡ್ಡ ಸಂಖ್ಯೆಯವರೂ ಹಾಗೂ ಕೈಕಸಬುಗಳ ಕುಶಲ ಕರ್ಮಿಗಳಾಗಿದ್ದ ಶೂದ್ರರು ವ್ಯಾಪಾರದಲ್ಲಿ ತೊಡಗಿ ಲಾಭ ಮಾಡಿಕೊಂಡರು. ಇವರಲ್ಲಿ ದೇಶಿಯ ಹಾಗೂ ವಿದೇಶಿಯ ವ್ಯಾಪಾರಿಗಳು ಇದ್ದರು. ಇವರು ತಮ್ಮದೆ ಆದ ವರ್ತಕ ಸಂಘಗಳನ್ನು ವಿವಿಧ ಹೆಸರುಗಳಲ್ಲಿ ಕಟ್ಟಿಕೊಂಡು ವ್ಯಾಪಾರ ವ್ಯವಹಾರಗಳನ್ನು ನಡೆಸಿದ್ದರು.

೬.೨ ಸ್ವದೇಶಿ ವ್ಯಾಪಾರಿ ಸಂಘಗಳು

ಕರಾವಳಿಯಲ್ಲಿ ವ್ಯಾಪಾರಿಕ್ಕಾಗಿಯೇ ಹುಟ್ಟಿ ಬಂದ ವಿವಿಧ ವಿನಿಮಯ ಹಾಗೂ ಉತ್ಪಾದಕ ಸಂಘಗಳಿದ್ದವು. ಅವುಗಳು ಸ್ಥಳೀಯ ಹಾಗೂ ಹಿನ್ನಾಡಿನಲ್ಲಿ ದೊರೆಯುತ್ತಿದ್ದ ಸರಕು-ಸಾಮಗ್ರಿಗಳನ್ನು, ಕರಕುಶಲ ವಸ್ತುಗಳನ್ನು ಹಾಗೂ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದರು. ಬಹು ಮುಖ್ಯವಾಗಿ ಹಿನ್ನಾಡಿನಲ್ಲಿ ಬೇಡಿಕೆಯಿದ್ದ ವಿದೇಶಿ ಸಾಮಗ್ರಿಗಳನ್ನು ಹಾಗೂ ವಿದೇಶಗಳಲ್ಲಿ ಬೇಡಿಕೆಯಿದ್ದ ವಸ್ತುಗಳನ್ನು ಅವರವರಿಗೆ ತಲುಪಿಸುವ ಕೆಲಸ ಮಡುತ್ತಿದ್ದರು. ಬಹುಮುಖ್ಯವಾಗಿ ಶೆಟ್ಟಿ, ಶೆಟ್ಟಿಕಾರ, ಬಣಂಜಿಗ, ನಖರ, ಎಳಮೆ, ಬಲ್ಲಾಳ, ಹಲರು, ವೀರಬಣಂಜು, ನಾನಾದೇಶಿ, ಉಭಯ ನಾನಾದೇಶಿ, ಹೊರಹಿನವರು, ವಡ್ಡವ್ಯವಹಾರಿ, ಗವರೆ, ತಂಬುಲಿಗೆಸಾಸಿರ್ವರು ಮುಂತಾದ ವ್ಯಾಪಾರಿ ಸಂಘಗಳು ಕರಾವಳಿಯಲ್ಲಿ ಜನ್ಮ ಪಡೆದವು. ಇವುಗಳೊಂದಿಗೆ ಮುಖ್ಯವಾಗಿ ಐಯ್ಯಾವೊಳೆ ಐನೂರ್ವರು ಹಾಗೂ ಉಗುರುಮುನ್ನೂರ್ವರು ದೇಶಿಯ ವ್ಯಾಪಾರಿ ಸಂಘಗಳಾಗಿದ್ದವು. ಕರಾವಳಿಯ ಉಪ್ಪು ಘಟ್ಟಕ್ಕೆ ಸಾಗಿಸುವಲ್ಲಿ ಹಾಗೂ ಕೃಷಿ ಉತ್ಪನ್ನಗಳ ವ್ಯಾಪಾರದಲ್ಲಿ ಇವರ ಕೊಡುಗೆ ಅಪೂರ್ವವಾದದ್ದು.

೬.೨.೧.೧ ಸೆಟ್ಟಿ, ಸೆಟ್ಟಿಕಾರರು

'ಶೆಟ್ಟಿ'ಎಂಬುದು ಸಂಸ್ಕೃತ ಶ್ರೇಷ್ಠಿ ಶಬ್ದದ ತದ್ಭವರೂಪವಾಗಿದೆ[೧೧]. ಶ್ರೇಷ್ಠಿ ಎಂದರೆ ವ್ಯಾಪಾರಿ ಎಂದು ಅರ್ಥ. ಶ್ರೇಷ್ಠಿನ್, ವಣಿಜ ಸಂಸ್ಕೃತ ಪದಗಳ ಕನ್ನಡ ರೂಪ ಸೆಟ್ಟಿ, ಬಣಂಜಿಗ, ಸೆಟ್ಟಿ. ಶ್ರೇಷ್ಠಿನ್ ಪ್ರತಿಷ್ಠೆಯ ಸೂಚಿ. ವಣಜ ವೃತ್ತಿಸೂಚಿ ಆಗಿರಬೇಕು. ಇದರ ಇನ್ನೊಂದು ರೂಪ ಬಣಂಜಿಗ. ಇವರು ವ್ಯಾಪಾರ ವ್ಯವಹಾರವನ್ನೇ ತಮ್ಮ ಜೀವನ ವೃತ್ತಿಯಾಗಿ ಸ್ವೀಕರಿಸಿದವರು. ತಾವು ಕೊಂಡ ಅಥವಾ ಸಂಗ್ರಹಿಸಿದ ಸರಕುಗಳನ್ನು ಹೇರುಗಳಲ್ಲಿ, ಗಾಡಿ (ಚಕ್ಕಡಿ, ಕುದುರೆ, ಕತ್ತೆ, ಕೋಣ) ಗಳ ಮೇಲೆ ಹೇರಿ ಬೇರೆಬೇರೆ ವ್ಯಾಪಾರ ಕೇಂದ್ರಗಳಿಗೆ ಸಾಗಿಸಿ ಅಲ್ಲಿ ನಡೆಯುವ ಸಂತೆ-ಜಾತ್ರೆ ಅಥವಾ ಅಂಗಡಿಗಳ ಮೂಲಕ ಮಾರಾಟ ಮಾಡುತ್ತಿದ್ದರು. ಒಂದು ಗಟ್ಟಿಯಾದ ೮ ರಿಂದ ೧೦ ಅಡಿ ಉದ್ದದ ಎಳೆಯನ್ನು ತೆಗೆದುಕೊಂಡು ಅದರ ಎರಡು ತುದಿಗಳಲ್ಲಿ ಸರಕುಗಳನ್ನು ಸಮಭಾರದಲ್ಲಿ ನೇತಾಡಿಸಿ (ಕಟ್ಟಿ) ಹೆಗಲ ಮೇಲೆ ಇಟ್ಟುಕೊಂಡು ಸಾಗಿಸುವುದು. ಇದು ಹೆಚ್ಚು ಭಾರವನ್ನು ದೇಹದ ಮೇಲೆ ಬೀಳದಂತೆ ನೋಡಿಕೊಳ್ಳುತ್ತಿತ್ತು. ಇನ್ನು ಊರಿನ ಒಳಗೆ ಸರಕುಗಳನ್ನು ಸಾಗಿಸುವಾಗ ಅಲ್ಲಿ ನದಿಗಳಿದ್ದರೆ, ನದಿಯಲ್ಲಿ ನೌಕೆ-ಚಿಕ್ಕದೋಣಿಗಳ ಮೂಲಕವೂ ಸರಕುಗಳನ್ನು ಸಾಗಿಸುತ್ತಿದ್ದರು. ಇವರು ತಾವು ಶ್ರೇಷ್ಠಿಯಾಗಿ ಯಜಮಾನನಾಗಿ ನಿಂತು ಕೆಲಸಗಾರರಿಂದ ಈ ಕೆಲಸ ಮಾಡಿಸುತ್ತಿದ್ದರು. ಚಕ್ಕಡಿಗಳಲ್ಲಿ ಹಾಗೇ ದೋಣಿಗಳಲ್ಲಿ ಸರಕುಗಳನ್ನು ಸಾಗಿಸುವಾಗ ಗುಂಪು-ಗುಂಪಾಗಿರುತ್ತಿದ್ದರು. ಕಳ್ಳಕಾಕರಿಂದ ರಕ್ಷಣೆಗೆ ಬಿಲ್ಲಾಳುಗಳನ್ನು ಜೊತೆಯಲ್ಲಿ ಇರಿಸಿಕೊಂಡಿರುತ್ತಿದ್ದರು. ಪ್ರಮುಖ ಪಟ್ಟಣಗಳಿಗೆ ತಲುಪುವ ಮೊದಲು ದಾರಿಯ ಮಧ್ಯದಲ್ಲಿ ಅನುಕೂಲವಾದ ಸ್ಥಳದಲ್ಲಿ ತಂಗುತ್ತಿದ್ದರು. ಹಲವು ಸಾರೆ ಇಂಥಹ ಸ್ಥಳಗಳಲ್ಲಿ ದೊರಕುವ ಸರಕುಗಳನ್ನು ತುಂಬಿಕೊಳ್ಳುತ್ತಿದ್ದರು. ಈಗಲೂ ಇಂಥಹ ಸ್ಥಳಗಳನ್ನು ನೆನಪಿಸುವ 'ಹೇರೂರು' ಹೆಸರಿನ ಊರುಗಳು ನೋಡ ಸಿಗುತ್ತವೆ.

ಈ ಶ್ರೇಷ್ಠಿಗಳು ಬಡ್ಡಿಗೆ ಸಾಲ ನೀಡುತ್ತಿದ್ದರು. ಶತಪಥ ಬ್ರಾಹ್ಮಣದಲ್ಲಿ ಕುಸೀದಿನ, ತೈತ್ತರೀಯ ಸಂಹಿತೆಯಲ್ಲಿ ಕುಸೀದ ಎಂಬ ಶಬ್ದಗಳು ಸಾಲ ಎನ್ನುವ ಅರ್ಥವನ್ನು ಸೂಚಿಸುತ್ತದೆ ಎಂದು ವಿದ್ವಾಂಸರು ಹೇಳುತ್ತಾರೆ. ಈ ವ್ಯಾಪಾರಿ ವೃತ್ತಿಯು ವಂಶಪಾರಂಪರ್ಯವಾಗಿತ್ತು. ಹೆಚ್ಚಾಗಿ ವೈಶ್ಯರು ಈ ವೃತ್ತಿಯನ್ನು ಕೃಷಿಯೊಂದಿಗೆ ನಡೆಸುತ್ತಿದ್ದರು.

ಕರಾವಳಿ ಪ್ರದೇಶದಲ್ಲಿ ಶೆಟ್ಟಿಕಾರರು ಪ್ರಬಲರಾಗಿದ್ದರು. ಶೆಟ್ಟಿಕಾರರು ಸ್ವದೇಶಿ ಸರಕುಗಳನ್ನು ಮಾರುತ್ತಿದ್ದರೆಂದು[೧೨] ವಿದ್ವಾಂಸರು ನಿರ್ಧರಿಸಿದ್ದಾರೆ. ಇವರು ಸ್ಥಳೀಯರಾಗಿದ್ದರು. ಬಂದರುಗಳ ಮೂಲಕ ವಿದೇಶಗಳಿಗೆ ಹೋಗುತ್ತಿದ್ದ ಸರಕುಗಳನ್ನು ಇವರೇ ಬಟವಾಡೆ ಮಾಡುತ್ತಿದ್ದರು. ಅಲ್ಲದೇ ವಿದೇಶದಿಂದ ಬರುವ ಸರಕುಗಳನ್ನು ವ್ಯಾಪಾರಿ ಪಟ್ಟಣಗಳಿಗೆ

ಊರುಗಳಿಗೆ ಅಂಗಡಿಗಳಿಗೆ ಕಳಿಸುವ ಕೆಲಸ ಮಾಡುತ್ತಿದ್ದರು. ಇದಕ್ಕಾಗಿ ಹೇರು, ಕುದುರೆಗಾಡಿ, ಎತ್ತಿನಬಂಡಿ, ಕತ್ತೆ ಮುಂತಾದವುಗಳನ್ನು ಬಳಸುತ್ತಿದ್ದರು. ನದಿಗಳ ಮೂಲಕ ಒಳನಾಡುಗಳಿಗೆ ನೌಕೆಯಲ್ಲಿ ಸರಕುಗಳನ್ನು ರವಾನಿಸಿ ಮಾರಾಟ ಮಾಡಿ ಲಾಭ ಪಡೆಯುತ್ತಿದ್ದರು.

ಶೆಟ್ಟಿಕಾರರು ರಾಜ್ಯದ ಆರ್ಥಿಕರಂಗದಲ್ಲಿ ಪ್ರಬಲರಾಗಿದ್ದು ಅರಸರಿಂದ ಗೌರವಿಸಲ್ಪಡುತ್ತಿದ್ದರು. ಇವರು ಸ್ವಂತ ಭೂಮಿಯನ್ನು ಹೊಂದಿದ್ದರು[೧೩]. ಆಳುಪರ ಕಾಲದಲ್ಲಿ ಕರಾವಳಿ ಪ್ರದೇಶದ ಶೆಟ್ಟಿಕಾರರು ಪ್ರಮುಖ ವಾಣಿಜ್ಯ ಕೇಂದ್ರಗಳಲ್ಲಿ ಉತ್ತಮ ಸ್ಥಾನದಲ್ಲಿದ್ದರು. ಬಾರ್ಕೂರು ಹಾಗೂ ಬಸರೂರುಗಳಲ್ಲಿ ಪ್ರತಿಕೇರಿಯಲ್ಲೂ ಶೆಟ್ಟಿಕಾರರು ತಮ್ಮ ಸಂಘದ ಶಾಖೆಗಳನ್ನು ಹೊಂದಿದ್ದರು[೧೪].

ಬಾರ್ಕೂರು, ವೇಣೂರು ಪಟ್ಟಣಗಳಲ್ಲಿ ಶೆಟ್ಟಿಕಾರ ಸಂಘದ ಸಂಖ್ಯಾಬಲವು ಹದಿನಾರಿತ್ತೆಂದೂ, ಬಿದಿರೆನಗರದಲ್ಲಿ ಎಂಟಿತ್ತೆಂದು ಶಾಸನಗಳಲ್ಲಿ ಉಲ್ಲೇಖಿತಗೊಂಡಿದೆ. ಜೈನರಾಗಿದ್ದ ಶೆಟ್ಟಿಕಾರರು ಬಸದಿಗಳ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಇವರ ಸಂಘದ ಮುಖ್ಯಸ್ಥನನ್ನು ಪಟ್ಟಣಶೆಟ್ಟಿ ಎಂದು ಕರೆಯುತ್ತಿದ್ದರು. ಇವರು ಕೇಂದ್ರದಲ್ಲಿದ್ದು ಸಹಾಯಕರಿಂದ ಕೆಲಸ ಮಾಡಿಸುತ್ತಿದ್ದರು.

ವಿಜಯನಗರ ಕಾಲದಲ್ಲಿ ತುಳುನಾಡಿನಲ್ಲಿ ಸೆಟ್ಟಿ ಹಾಗೂ ಸೆಟ್ಟಿಕಾರರ ಸಂಘವು ವ್ಯಾಪಾರದಲ್ಲಿ ಪ್ರಮುಖ ಸ್ಥಾನಗಳಿಸಿತ್ತು[೧೫]. ಪ್ರಮುಖ ನಗರಗಳಲ್ಲಿ ಬಂದರು ಪ್ರದೇಶಗಳಲ್ಲಿ ಇವರ ಶಾಖೆಗಳಿದ್ದವು. ವಿಜಯನಗರ ಅರಸರು ಮಂಗಳೂರು, ಭಟ್ಕಳ, ಹೊನ್ನಾವರ ಬಂದರುಗಳಿಂದ ಅರಬ್, ಪರ್ಶಿಯಾ ಮೊದಲಾದ ದೂರ ದೇಶಗಳಿಂದ ಕುದುರೆಗಳನ್ನು ಆಮದು ಮಾಡಿಕೊಳ್ಳುತ್ತಿದ್ದರು[೧೬]. ಶಾಸನಗಳಲ್ಲಿ ಇಂಥಹ ವ್ಯಾಪಾರ ನಡೆಸುವ ಕುದುರೆಯನೇಮಟ್ಟಶೆಟ್ಟಿ, ತುರಗಶೆಟ್ಟಿ, ಸೀರೆಶೆಟ್ಟಿ ಮುಂತಾದ ಉಲ್ಲೇಖಗಳು[೧೭] ಬರುತ್ತವೆ. ಇವುಗಳಿಂದ ಅಂದು ಶೆಟ್ಟಿ–ಶೆಟ್ಟಿಕಾರರು ವ್ಯಾಪಾರದಲ್ಲಿ ಬಹುಮುಖ್ಯ ಪಾತ್ರ ಹೊಂದಿದ್ದರು ಮತ್ತು ಎಲ್ಲ ರೀತಿಯ ವ್ಯಾಪಾರ ನಡೆಸುತ್ತಿದ್ದರೆಂದು ತಿಳಿಯುತ್ತದೆ.

ಗೇರುಸೊಪ್ಪ ಮತ್ತು ಹಾಡುವಳ್ಳಿಯ ಸಾಳುವರ ಕಾಲದಲ್ಲಿ ಮಿರ್ಜಾನ, ಹೊನ್ನಾವರ, ಭಟ್ಕಳ, ಬೈಂದೂರುಗಳು ಪ್ರಮುಖ ವಾಣಿಜ್ಯ ಕೇಂದ್ರಗಳಾಗಿದ್ದವು[೧೮]. ಈ ರೇವುಪಟ್ಟಣದಿಂದ ನಡೆಯುತ್ತಿದ್ದ ಕಡಲೋತ್ತರ ವ್ಯಾಪಾರದಲ್ಲಿ ಸೆಟ್ಟಿ–ಸೆಟ್ಟಿಕಾರರು ಪ್ರಮುಖ ಪಾತ್ರವಹಿಸತೊಡಗಿದರು. ವಿಜಯನಗರದ ಕಾಲದಲ್ಲಿ ಸಾಮ್ರಾಜ್ಯದ ಪಶ್ಚಿಮದೆಡೆಇದ್ದ ಕರಾವಳಿ ಪ್ರದೇಶವನ್ನು ಅತ್ಯಂತ ಫಲವತ್ತಾದ ಭೂಮಿ ಎಂದು ಪರಿಗಣಿಸಿ ಅಲ್ಲಿ ಉತ್ತಮವಾದ ಭತ್ತವನ್ನು ಬೆಳೆದು ಅಕ್ಕಿಯನ್ನು ಮಲಬಾರ ಮತ್ತು

ಅರ್‌ಮಜ್‌ಗೆ ರಫ್ತು ಮಾಡುತ್ತಿದ್ದರು[೧೯]. ಈ ವ್ಯಾಪಾರದಲ್ಲಿ ಸ್ಥಳೀಯ ಸೆಟ್ಟಿಕಾರರು ಪ್ರಮುಖ ಪಾತ್ರವಹಿಸಿದ್ದರು.

ಒಟ್ಟಿನಲ್ಲಿ ಬಂದರುಗಳ ಮೂಲಕ ನಡೆಯುತ್ತಿದ್ದ ವ್ಯಾಪಾರ-ವಹಿವಾಟಿಗೆ ಶೆಟ್ಟಿ-ಶೆಟ್ಟಿಕಾರರು, ಶೆಟ್ಟಿಗುತ್ತರು ಪ್ರಮುಖ ವ್ಯಾಪಾರಿಗಳಾಗಿದ್ದರು. ಕರಾವಳಿಯ ಬಂದರುಗಳ ಮೂಲಕ ನಡೆಯುತ್ತಿದ್ದ ಮಸಾಲೆ ದಿನಿಸು, ಹಣ್ಣಿನ ಗಿಡಗಳು, ದ್ವಿದಳ ಧಾನ್ಯಗಳು ತೆಂಗು, ಭತ್ತ, ಹತ್ತಿ, ವನಸ್ಪತಿ ಮುಂತಾದ ವ್ಯಾಪಾರಗಳಿಗೆ ಹಾಗೂ ಹೊರದೇಶಗಳಿಂದ ತರಿಸುತ್ತಿದ್ದ ಮಧ್ಯ, ಹೂಜಿಗಳು, ಕುದುರೆ ಮುಂತಾದವುಗಳ ವ್ಯಾಪಾರದಲ್ಲಿ ಇವರು ಪ್ರಮುಖ ಮಧ್ಯವರ್ತಿಗಳಾಗಿದ್ದರು.

೬.೨.೧.೨ ಬಣಂಜಿಗರು

'ಬಣಂಜಿಗರು' ಸ್ಥಳೀಯ ವ್ಯಾಪಾರಿಗಳಾಗಿ ಪ್ರಭಾವಿಗಳಾಗಿದ್ದರು. ಇವರೂ ತಮ್ಮನ್ನು ವಣಿಜಸ್ವಾಮಿಗಳಯ್ನೂರ್ವರು[೨೦] ಹಾಗೂ ಬಣಂಜಿಗರಯ್ನೋರ್ವರು[೨೧]ಗಳೆಂದು ಕರೆದುಕೊಂಡದ್ದು ತಿಳಿಯುತ್ತದೆ. ಇಂತಹ ಹೆಸರುಗಳು ಕಡಿಮೆ ಸಂಖ್ಯೆಯಲ್ಲಿ ಉಲ್ಲೇಖಿತ ವಾಗಿರುವುದರಿಂದ ಸೀಮಿತ ಸ್ಥಳಕ್ಕೆ ಮೀಸಲಾದ ವ್ಯಾಪಾರಿ ಸಂಘಗಳಾಗಿರಬೇಕು ಎಂದು ಊಹಿಸಲಾಗಿದೆ.ಇವರು ಬಣಜ, ಬಳಂಜು, ಬಳಂಜಿಗರು, ತಳಬಣಂಜಿಗರು, ಸ್ಥಾನಬಣಂಜಿಗರು, ತಳದಶೆಟ್ಟಿಯರು, ತಲಸೆಟ್ಟಿಯರು[೨೨] ಮುಂತಾದ ಹೆಸರುಗಳಿಂದ ಶಾಸನಗಳಲ್ಲಿ ಉಲ್ಲೇಖಿತಗಿದ್ದಾರೆ.

ವೀರಬಣಂಜು ವ್ಯಾಪಾರಿ ಸಂಘವು ಕದಂಬರ ಕಾಲದಲ್ಲಿ ವ್ಯಾಪಾರ ಮೊದಲಾದ ಆರ್ಥಿಕತೆಯಲ್ಲಿ ಪ್ರಬಲವಾಗಿತ್ತು. ಈ ವೀರಬಣಂಜುಗಳು ಪ್ರಾಚೀನ ಕರ್ನಾಟಕದಲ್ಲಿ ಅತ್ಯಂತ ಪ್ರಭಾವಶಾಲಿಗಳಾಗಿದ್ದರು[೨೩]. ಇವರು ತಮ್ಮ ವ್ಯಾಪಾರ-ವಹಿವಾಟಿನಿಂದ ಶ್ರೀಮಂತರಾಗಿದ್ದು ರಾಜನ ಆಡಳಿತದಲ್ಲಿ ಪ್ರಭಾವ ಬೀರುವಷ್ಟು ಗಟ್ಟಿಗರಾಗಿದ್ದರು. ವೀರಬಣಂಜುಗಳು ಸಾಂಸ್ಕೃತಿಕ-ಶೈಕ್ಷಣಿಕ ಅಭಿವೃದ್ಧಿಗೆ ತಮ್ಮದೆ ಆದ ಕೊಡುಗೆ ನೀಡುತ್ತಿದ್ದರು[೨೪].

'ಬಣಂಜಿಗ' ಪದಕ್ಕೆ ಸಂಬಂಧಿಸಿದಂತೆ ವೀರಬಣಂಜಿಗ ಮತ್ತು ವೀರವಣಿಗ ಸಮಾನಾರ್ಥ ಪದಗಳೆಂದು ತೋರುತ್ತದೆ[೨೫]. ಇವರುಗಳು ಧಾರ್ಮಿಕವಾಗಿ ಯಾವುದೇ ಒಂದು ಪಂಗಡದವರೆಂದು ಹೇಳಲು ಬರುವುದಿಲ್ಲ. ವೈದಿಕ ಅಥವಾ ಜೈನ ಧರ್ಮಗಳ ಯಾವುದಾದರೂ ಪಂಥವನ್ನು ಇವರು ಅನುಸರಿಸುತ್ತಿದ್ದಿರಬಹುದು.

ಶಾಸನಗಳಲ್ಲಿ ವಣಿಜರ ವಿಷಯವಾಗಿ ಸಿಗುವ ಇನ್ನೊಂದು ಪದ ಸೆಟ್ಟಿವಟ್ಟ. ಬಹುಶಃ ಬಳಂಜುವಟ್ಟವೆನ್ನುವುದು ಇದರ ಪರ್ಯಾಯ ಪದವೆಂದು ತೋರುತ್ತದೆ[೨೬]. ಹೀಗೆ ವಿವಿಧ ಹೆಸರುಗಳಿಂದ ಈ ವ್ಯಾಪಾರಿಗಳನ್ನು ಕರೆಯುತ್ತಿದ್ದರು. ಆದರೆ ಇವುಗಳು ಕೇವಲ ಹೆಸರುಗಳಾಗಿರದೇ ಗೌರವ ಸೂಚಕ ಪದಗಳೊಂದಿಗೆ ಇರುತ್ತಿದ್ದವು.

ಶೆಟ್ಟಿ ಹೆಸರಿನೊಂದಿಗೆ ತ್ರಿಭುವನಮಲ್ಲ, ತ್ರೈಲೋಕ್ಯಮಲ್ಲ, ಜಗದೇಕಮಲ್ಲ, ಚಲದಂಕಮಲ್ಲ ಬಿರುದುಗಳೂ ಮತ್ತು ಹೆಂಮಾಡಿಸೆಟ್ಟಿ, ಅಂಗಡಿಸೆಟ್ಟಿ, ಕೀರ್ತಿನಾರಾಯಣ ಸೆಟ್ಟಿ[೨೭] ಮುಂತಾದ ಗೌರವಸೂಚಕ ಹೆಸರುಗಳೂ ಇದ್ದವು. ಇಂಥಹ ವ್ಯಾಪಾರಿ ಶೆಟ್ಟರು ಯಾವುದೇ ಒಂದು ಧರ್ಮದವರಾಗಿರಲಿಲ್ಲ. ಇವರಲ್ಲಿ ಅಂದಿನ ಪ್ರಚಲಿತ ಧಾರ್ಮಿಕ ಪಂಥಗಳಾದ ಶೈವ, ವೈಷ್ಣವ, ಶಾಕ್ತ, ಜೈನ ಹಾಗೂ ಜೈನರಲ್ಲಿ ವಿವಿಧ ಪಂಥಗಳ ಅನುಯಾಯಿಗಳೂ ಆಗಿದ್ದರು. ಇವರುಗಳು ಪೋಷಿಸಿದ ದೇವಾಲಯ, ಬಸದಿಗಳನ್ನು ನೋಡಬಹುದು. ಅಲ್ಲದೆ ಇವರು ಎಲ್ಲ ರೀತಿಯ ವ್ಯಾಪಾರಗಳನ್ನು ನಡೆಸುತ್ತಿದ್ದರು. ಅಂದರೆ ತಾವೇ ಬೆಳೆದ ವಸ್ತುಗಳು ಮತ್ತು ಬೇರೆಯವರಿಂದ ತಂದ ವಸ್ತುಗಳ ವ್ಯಾಪಾರ ಮಾಡುತ್ತಿದ್ದರು. ಲಾಭತರುವ ಯಾವ ವಸ್ತುವಾದರೂ ಸರಿ ಇವರು ವ್ಯಾಪಾರಕ್ಕೆ ಬಳಸುತ್ತಿದ್ದರು.

೬.೨.೧.೩ ಸೆಟ್ಟಿಗುತ್ತರು

ಮಧ್ಯಕಾಲದಲ್ಲಿ ಕರ್ನಾಟಕದಲ್ಲಿ ಪ್ರಬಲರಾಗಿದ್ದವರು ಸೆಟ್ಟಿಗುತ್ತರು. ಇವರು ಸರಕುಗಳನ್ನು ಸಾಗಿಸಿಕೊಂಡು ಗ್ರಾಮ, ಪಟ್ಟಣಗಳಿಗೆ ಹೋಗಿ ವ್ಯಾಪಾರ ಕೈಗೊಳ್ಳುತ್ತಿದ್ದರು[೨೮]. ಹಲವಾರು ಶಾಸನಗಳು ಇವರನ್ನು ಉಲ್ಲೇಖಿಸುತ್ತವೆ[೨೯]. ಸೆಟ್ಟಿಗುತ್ತದ ಉತ್ತರಪದ 'ಗುತ್ತ'. ಇದು ಕನ್ನಡ ನಾಮಪದ[೩೦]. 'ಗುತ್ತಿ' ಎತ್ತರವಾದ ಸ್ಥಳವನ್ನು ಸೂಚಿಸುತ್ತದೆ. ಸಂಸ್ಕೃತದ ಗುಪ್ತದಿಂದ ಬಂದ ಗುತ್ತ(ದ್ದ)ಕ್ಕೂ ಕನ್ನಡದ ಕುತ್ತಕ್ಕೂ ಗುಂಪು ಸಮೂಹವೆಂದು ಇನ್ನೊಂದು ಅರ್ಥವೂ ಉಂಟು[೩೧]. ಈ ಶಬ್ದಗಳೆರಡೂ ಈ ವ್ಯಾಪಾರಿಗಳನ್ನು ಶ್ರೇಷ್ಠಿಗಳೆಂದೂ ಮತ್ತು ಗುಂಪೆಂದು ಗುರುತಿಸುತ್ತದೆ. ಈ ಸೆಟ್ಟಿಗುತ್ತರಲ್ಲೂ ಕೆಲವು ವಿಭಾಗಗಳಿದ್ದು, ಇದು ಸ್ಥಳೀಯ ಹಾಗೂ ಹೊರಗಡೆಯ ಎಂಬ ಅರ್ಥವನ್ನು ನೀಡುತ್ತದೆ. ಉದಾ: ತಳದಸೆಟ್ಟಿಗುತ್ತರು[೩೨], ಸ್ಥಾನಸೆಟ್ಟಿ, ಸ್ಥಳಸೆಟ್ಟಿ, ಪಟ್ಟಣದ ಸೆಟ್ಟಿಗುತ್ತರು, ಮಂಡಲಸೆಟ್ಟಿಗುತ್ತರು ಮುಂತಾಗಿ ಶಾಸನಗಳಲ್ಲಿ ಉಲ್ಲೇಖಿತರಾಗಿದ್ದಾರೆ.

೬.೨.೧.೪ ನಖರ ಅಥವಾ ನಕರ ಸಂಘ

ಕರ್ನಾಟಕದಲ್ಲಿ ಅನೇಕ ವ್ಯಾಪಾರಿ ಸಂಘಗಳು ವ್ಯವಸ್ಥಿತವಾಗಿ ತಮ್ಮ ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ಕೆಲವು ಸಂಘಗಳು ತಾವು ಬೆಳೆದ ವಸ್ತುಗಳನ್ನು ಮಾರುತ್ತಿದ್ದರೆ, ಇನ್ನೂ ಕೆಲವು ಕೊಂಡು ತಂದು ಸಂತೆಗಳಲ್ಲಿ, ಅಂಗಡಿಗಳಲ್ಲಿಟ್ಟು ಮಾರುತ್ತಿದ್ದರು. ಹಾಗೇ ಹಲವು ಸಂಘಗಳು ವಿದೇಶಗಳಿಂದ ತರಿಸಿದ ವಸ್ತುಗಳನ್ನು ಮಾರುತ್ತಿದ್ದರು.

ಇಂಥಹ ಒಂದು ವ್ಯಾಪಾರಿ ಸಂಘವಾಗಿದ್ದ ನಖರ ಅಥವಾ ನಕರವು ಬಹು ವ್ಯಾಪಕವಾದ ವ್ಯಾಪಾರಿ ಸಂಘವಾಗಿತ್ತು. ಇದು ಕರ್ನಾಟಕದಲ್ಲಿ ಪ್ರಾಚೀನ ಕಾಲದಿಂದಲೂ ಇದ್ದ[೩೩] ಸಂಘವಾಗಿತ್ತು. ಇವುಗಳ ಚಟುವಟಿಕೆಯ ಬಗ್ಗೆ ಅನೇಕ ಶಾಸನಗಳು[೩೪] ಉಲ್ಲೇಖಿಸುತ್ತವೆ. ಈ ನಖರ ಅಥವಾ ನಕರವು ಹೆಸರೆ ಸೂಚಿಸುವಂತೆ ನಗರ-ಪಟ್ಟಣ ಪ್ರದೇಶದ ವ್ಯಾಪಾರಿಗಳಾಗಿದ್ದಗೂ, ಇವರು ವ್ಯಾಪಾರಿಪಟ್ಟಣ ಅಥವಾ ನಗರಗಳಲ್ಲಿ ಸ್ಥಿರವಾಗಿ ವಾಸವಾಗಿದ್ದು, ತಮ್ಮ ವ್ಯಾಪಾರ ವ್ಯವಹಾರ ನಡೆಸುತ್ತಿದ್ದರು. ಕುರುಗೋಡಿನ ಶಾಸನವು[೩೫] ಇವರ ಕುರಿತ ಮೇಲಿನ ನಿರ್ಣಯಕ್ಕೆ ಪುಷ್ಟಿಕೊಡುತ್ತದೆ. ಈ ಶಾಸನದಲ್ಲಿ 'ಪಟ್ಟಣದನಖರರು' ಎಂದು ಕರೆದಿದ್ದಾರೆ. ಇವರು ಹೆಚ್ಚಾಗಿ ಪಟ್ಟಣದಲ್ಲೇ ವಾಸಿಸುವವರೆಂದು ವಿದ್ವಾಂಸರು ತಿರ್ಮಾನಿಸಿದ್ದಾರೆ[೩೬]. ಮೇಲಿನ ಶಾಸನವು ಕುರುಗೋಡಿನ ಮುಮ್ಮರಿದಂಡದ ಬಗ್ಗೆ ಉಲ್ಲೇಖಿಸುತ್ತದೆ. ಪಟ್ಟಣನಖರ ಸಂಘವನ್ನು ಮುಮ್ಮರಿದಂಡ ಎಂದು ಕರೆಯುತ್ತಿದ್ದಿರಬೇಕು. ಮಹಾ ಶಿವಭಕ್ತ ಕಲ್ಲಿಸೆಟ್ಟ ಕುರುಗೋಡಿನಲ್ಲಿರುವ ಕಲಿದೇವಾಲಯವನ್ನು ನಿರ್ಮಿಸಿ ಅನೇಕ ದತ್ತಿ ನೀಡಿದ ಬಗ್ಗೆ ತಿಳಿಯುತ್ತದೆ[೩೭].

ಈ ನಕರ ಅಥವಾ ನಖರ-ಮುಮ್ಮರಿದಂಡ ವ್ಯಾಪಾರಿಗಳು ಅಂದಿನ ಕಾಲದಲ್ಲಿ ತಮ್ಮ ಲಾಭದಲ್ಲಿ ಧಾರ್ಮಿಕ ಕಾರ್ಯಗಳನ್ನು, ಧಾನ-ಧರ್ಮಗಳನ್ನು ನಡೆಸುತ್ತಿದ್ದರು ಎನ್ನುವುದನ್ನು ಈ ಶಾಸನ ತಿಳಿಸುತ್ತದೆ. ಇದೇ ಶಾಸನದಲ್ಲಿ ತಂಬುಲಿಗೆ ಸಾಸಿರ್ವರ ಉಲ್ಲೇಖವೂ ಬರುತ್ತದೆ. ತಂಬುಲಿಗೆ ಎನ್ನುವುದು ತಾಂಬೂಲದ ವ್ಯಾಪಾರಗಳನ್ನು ಉಲ್ಲೇಖಿಸುತ್ತದೆ[೩೮]. ಇದರಿಂದ ನಿತ್ಯದ ಬಳಕೆಯ ಸಾಮಗ್ರಿಗಳು ಅಂಗಡಿ, ಸಂತೆ-ಬಯಲುಗಳಲ್ಲಿ ಮಾರಾಟಮಾಡುವ ಕಾರ್ಯವನ್ನು ಈ ನಖರ ಅಥವಾ ನಕರ ಮುಮ್ಮರಿದಂಡರು ಮಾಡುತ್ತಿದ್ದರು ಎಂದು ತಿಳಿಯುತ್ತದೆ.

ಇವರು ಜನ್ಮತಃ ವ್ಯಾಪಾರಿ ವೃತ್ತಿಯವರಾಗಿದ್ದು, ಧಾರ್ಮಿಕವಾಗಿ ಶೈವ ಹಾಗೂ ಜೈನ ಸಂಪ್ರದಾಯವನ್ನು ಅವಲಂಬಿಸುತ್ತಿದ್ದರು[೩೯]. ಈ ನಖರ, ನಕರ ಸಂಘದವರು ಬೆಲೆಬಾಳುವ ಮುತ್ತು, ರತ್ನಗಳಿಂದ ಹಿಡಿದು ದಿನನಿತ್ಯದ ಬಳಕೆಯ ಭತ್ತ, ಅಕ್ಕಿ, ಅಡಿಕೆ, ತೆಂಗು, ಬೇಳೆಕಾಳುಗಳು, ಉಣ್ಣೆಬಟ್ಟೆಯವರೆಗೂ ವ್ಯಾಪಾರ ನಡೆಸುತ್ತಿದ್ದರು. ಇಂತಹ ವ್ಯಾಪಾರದ ವಿವರ ನೀಡುವ ಶಾಸನ ಒಂದು ಮಾಣಿಕ್ಯನಕರ, ಚಿನ್ನಗೆಯಿಕದನಕರ, ತೆಲ್ಲಿಗ ನಕರ, ಭತ್ತವಸರದಂಗಡಿಯನಕರ ಮುಂತಾದ ಹೆಸರುಗಳನ್ನು[೪೦] ಉಲ್ಲೇಖಿಸುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ನಖರ-ನಕರ ಅರ್ಥ ನೀಡುವ ನಕರ, ಮಹಾನಕರ, ಮಹಾನಖರ, ಮಹಾನಗರ ಮುಂತಾದ ಶಬ್ಧಗಳು ಶಾಸನದಲ್ಲಿ ಬಂದಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ[೪೧]. ನಕರ ಸಮೂಹ, ನಕರದಲ್ಪುತ್ತೊಕ್ಕಲು, ನಗರಯ್ಯೂರ್ವರು[೪೨] ಎಂಬ ಶಬ್ಧಗಳು ವರ್ತಕರ ಸಂಘವನ್ನು ಉಲ್ಲೇಖಿಸುತ್ತದೆ. ಅಂದರೆ ವರ್ತಕರ ಸಂಘದವು ಒಂದು ಗುಂಪು ಆಗಿದ್ದರು. ಅದರಲ್ಲಿರುವ

ಸದಸ್ಯರ ಸಂಖ್ಯೆ ಅಥವಾ ಅವರು ನಡೆಸುವ ವ್ಯಾಪಾರ ಸರಕುಗಳನ್ನು ಇದು ಸೂಚಿಸುತ್ತದೆ. ಯಾವುದಾದರೂ ಒಂದು ವಸ್ತುವನ್ನು ವ್ಯಾಪಾರ ಮಾಡುವ ಜನರು (ವ್ಯಾಪಾರಿಗಳು) ತಮ್ಮದೇ ಆದ ಸಹಕಾರಿ ಸಂಘವನ್ನು ರಚಿಸಿಕೊಂಡು ನಿರ್ಧಿಷ್ಟಪಡಿಸಿದ ಪ್ರದೇಶಗಳ ವ್ಯಾಪಾರ-ವಹಿವಾಟನ್ನು ತಮ್ಮ ಕೈಯ್ಯಲ್ಲಿ ಇರಿಸಿಕೊಂಡಿರುತ್ತಿದ್ದರು. ಇವರು ಆ ಪ್ರದೇಶದಲ್ಲಿ ಪ್ರಭಾವಿಗಳಾಗಿರುತ್ತಿದ್ದರು. ನಗರ ಐನೂರ್ವರು ಎನ್ನುವಲ್ಲಿ ಈ ಸಂಘದ ಸದಸ್ಯರನ್ನು ಇದು ಸೂಚಿಸುತ್ತಿರಬಹುದು. ಅಥವಾ ಐನೂರು ಎಂದು ಗೌರವ ಸೂಚಕ ಸಂಖ್ಯೆಯಿಂದ ತಮ್ಮನ್ನು ಸಂಭೋಧಿಸಿ ಕೊಂಡಿರಬಹುದು. ಇದು ಯಾವುದೆಂದು ನಿರ್ಧಿಷ್ಟವಾಗಿ ಹೇಳಲು ಯಾವುದೇ ಸಾಕ್ಷಾಧಾರಗಳಿಲ್ಲ. ಆದರೆ ಈ 'ನಕರ' 'ನಖರ' ವ್ಯಾಪಾರಿಗಳು ಪಟ್ಟಣ ಪ್ರದೇಶದ ವ್ಯಾಪಾರಿಗಳೆನ್ನುವುದು ಸ್ಪಷ್ಟ. ಇವರುಗಳ ಸಮೂಹದಲ್ಲಿರುವ ಮಾರಾಟ ಮಳಿಗೆಗಳನ್ನು ಇದು ಸೂಚಿಸುವ ಸಾಧ್ಯತೆ ಇದೆ. ಈ ಸಂಖ್ಯೆ ದೊಡ್ಡದಾಗಿ ಕಂಡು ಬಂದರೂ, ಅಂದಿನ ವಿವಿಧ ವಸ್ತುಗಳ ವ್ಯಾಪಾರ ವಹಿವಾಟುಗಳನ್ನು ನೋಡಿದರೆ, ಈ ಊಹೆ ನಿರಾಕರಿಸುವಂತಿಲ್ಲ. ನಕರರು ಪಟ್ಟಣ ಪ್ರದೇಶಗಳಲ್ಲಿದ್ದುಕೊಂಡು ಸತತ ಪರಿಶ್ರಮ, ಪ್ರಯತ್ನಗಳ ಮೂಲಕ[೪೩] ಜನಜೀವನದಲ್ಲಿ ಪ್ರಮುಖ ಪಾತ್ರವಹಿಸಿದ್ದರು.

ನಕರರು ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದಲ್ಲಿ ಬಹುವ್ಯಾಪಕವಾಗಿ ಹರಡಿದ ವ್ಯಾಪಾರಿ ಸಮೂಹವಾಗಿತ್ತು. ಬಿ.ಆರ್.ಹಿರೇಮಠರವರು ತಮ್ಮ 'ಶಾಸನಗಳಲ್ಲಿ ಕರ್ನಾಟಕದ ವರ್ತಕರು' ಎಂಬ ಕೃತಿಯಲ್ಲಿ ಈ ಮೇಲಿನ ಅಭಿಪ್ರಾಯ ನಿಜವಾಗಿಸುವ ಅನೇಕ ಉದಾಹರಣೆ ನೀಡಿದ್ದಾರೆ. ಕರಾವಳಿಯ ಜೀವನಾಡಿಯೇ ವ್ಯಾಪಾರವಾಗಿದ್ದರಿಂದ, ಅದರಲ್ಲೂ ಕಡಲೋತ್ತರ ವ್ಯಾಪಾರ ನಡೆಸುತ್ತಿದ್ದಾಗ ಸ್ಥಳೀಯ ಹಾಗೂ ವಿದೇಶೀಯ ವ್ಯಾಪಾರಿಗಳು ದೊಡ್ಡ ಸಂಖ್ಯೆಯಲ್ಲಿ ವ್ಯಾಪಾರ-ವ್ಯವಹಾರದಲ್ಲಿ ತೊಡಗಿದ್ದರು. ನಖರ, ನಕರರು ದೊಡ್ಡಸಂಖ್ಯೆಯಲ್ಲಿದ್ದರು. ಹನ್ನೆರಡು ಹದಿಮೂರನೇ ಶತಮಾನದಲ್ಲಿ ಇವರು ಅಧಿಕಸಂಖ್ಯೆಯಲ್ಲಿದ್ದರು ಎನ್ನುವುದು ಹಾಗೂ ಇವರು ಕರಾವಳಿಯಲ್ಲಿ ಇದ್ದರು ಎನ್ನುವುದು ಶಾಸನಗಳಿಂದ ತಿಳಿದುಬರುತ್ತದೆ.

೧. ಉತ್ತರ ಕರ್ನಾಟಕದ ಧಾರವಾಡ, ವಿಜಯಪುರ, ಕಲಬುರ್ಗಿ, ಬಳ್ಳಾರಿ ಜಿಲ್ಲೆಗಳಲ್ಲಿ ನಕರರು ದಟ್ಟವಾಗಿಯೂ, ದಕ್ಷಿಣ ಕರ್ನಾಟಕ ಮತ್ತು ಇತರ ಸ್ಥಳಗಳಲ್ಲಿ ವಿರಳವಾಗಿಯೂ ಇದ್ದರು. ಆದರೆ ಈಗ ಈ ಪದಪ್ರಯೋಗ ದಕ್ಷಿಣ ಕರ್ನಾಟಕದಲ್ಲಿ ವಿಶೇಷ ಕಂಡುಬರುತ್ತದೆ[೪೪].

೨. ಕ್ರಿ.ಶ. ೨೭೫ ರಿಂದ ಕ್ರಿ.ಶ. ೧೪೪೬ರ ವರೆಗೆ ಇವರ ಉಲ್ಲೇಖ ಲಭಿಸುತ್ತದೆ.

೩. ಹನ್ನೆರಡು ಹದಿಮೂರನೆಯ ಶತಮಾನದಲ್ಲಿ ಇವರು ಅಧಿಕ ಸಂಖ್ಯೆಯಲ್ಲಿದ್ದರು ಎಂದು ಅದೇ ಕೃತಿಯಲ್ಲಿ ವಿವರಿಸಿದ್ದಾರೆ.

ಬಾರಕನ್ಯಾಪುರ (ಬಾರ್ಕೂರು), ಬಸುರೇಪಟ್ಟಣ (ಬಸರೂರು), ಮೂಡಬಿದರೆ, ಮಂಗಳಪುರ, ಮುಂತಾದ ವಾಣಿಜ್ಯ ಕೇಂದ್ರಗಳಲ್ಲಿ ನಖರ, ಸೆಟ್ಟಿಕಾರ, ಹಂಜಮಾನ ಎಂಬ ಮೂರು ವರ್ತಕ ಸಂಘಗಳು ಪ್ರಬಲವಾಗಿದ್ದವು[೪೫]. ಅಂತೆಯೇ ತುಳುನಾಡಿನ ಉಡುಪಿ, ಕಾಸರಗೋಡು, ಕುಂದಾಪುರ, ಗಂಗೊಳ್ಳಿ, ಕುಂಬ್ಳೆ, ನಿಲೇಶ್ವರ, ಪಾಣೆಮಂಗಳೂರು, ಬಂಟ್ವಾಳ, ಬ್ರಹ್ಮಾವರ, ಬೈಂದೂರು, ಭಟ್ಕಳ, ಶಿರಾಲಿ, ಹೊನ್ನಾವರ, ಕುಮಟಾ, ಮಿರ್ಜಾನ ಮತ್ತು ಸದಾಶಿವಗಡ, ಕಾರವಾರಗಳಲ್ಲಿ[೪೬] ನಕರರು ತಮ್ಮ ವ್ಯಾಪಾರಿ ಮಳಿಗೆಗಳನ್ನು ಹೊಂದಿದ್ದರು.

ಬಸರೂರಿನ ಪ್ರಾಚೀನತೆಯನ್ನು ಅನೇಕ ವಿದ್ವಾಂಸರು ಕ್ರಿ.ಶ.ದ ಆದಿಗೆ ಕೊಂಡೊಯ್ದಿದ್ದಾರೆ[೪೭]. ಪ್ಲಿನಿಯು ಬರಾಸ (ಕ್ರಿ.ಶ. ೨೩–೭೯) ಎಂದು ಟಾಲೆಮಿಯು ಇದನ್ನು ಬರೇಸಿ[೪೮] ಎಂದು ಉಲ್ಲೇಖಿಸಿದ್ದಾರೆ. ಇದು ಕ್ರಿ.ಶ ೨ನೇ ಶತಮಾನವಾಗಿದ್ದು, ಈ ಕಾಲಕ್ಕಾಗಲೇ ಕಡಲೋತ್ತರ ವ್ಯಾಪಾರದಲ್ಲಿ ಬಸರೂರು ತೊಡಗಿದ್ದು ಕಾಣುತ್ತದೆ. ಇಲ್ಲಿರುವ ದೇವಾಲಯಗಳಲ್ಲಿ ಒಂದಾಗಿರುವ, ಪ್ರಸ್ತುತ ಮಹಾಲಿಂಗೇಶ್ವರ ಎಂದು ಕರೆಯಲ್ಪಡುತ್ತಿರುವ ದೇವಾಲಯವು ಹಿಂದೆ ನಖರೇಶ್ವರ ದೇವಾಲಯ[೪೯] ಎಂದು ಕರೆಯಲ್ಪಟ್ಟಿತ್ತು. ಅಂದರೆ (ಶಕ ೧೦೭೭) ಕ್ರಿ.ಶ ೧೧೫೫ಕ್ಕೆ ಸೇರಿದ ಶಾಸನದ ರಚನೆಯ ಪೂರ್ವದಲ್ಲೇ ನಖರು 'ನಖರೇಶ್ವರ' ಎಂಬ ಹೆಸರಿನಲ್ಲಿ ಈ ರೇವುಪಟ್ಟಣದಲ್ಲಿ ಶಿವಾಲಯ ಒಂದನ್ನು ನಿರ್ಮಿಸಿದ್ದು ತಿಳಿಯುತ್ತದೆ. ಇದರಿಂದ ಅಂದು ನಖರರು ಹೊಂದಿದ್ದ ಪ್ರಭಾವ ಹಾಗೂ ಹಣಬಲ ವ್ಯಕ್ತವಾಗುತ್ತದೆ. ನಖರರು ಈ ಪ್ರದೇಶದಲ್ಲಿ ಶೈವರಾಗಿದ್ದು, ಸಮಾಜದ ಇನ್ನಿತರ ಜನವರ್ಗದವರ ಸ್ನೇಹ ಹಾಗೂ ಗೌರವಗಳಿಸಲು ಮತ್ತು ವ್ಯಾಪಾರದಲ್ಲಿ ಹೊಂದಿದ್ದ ಉಚ್ಚಸ್ಥಾನದ ಕಾರಣದಿಂದ ದೇವಾಲಯ ಕಟ್ಟಿಸಿರಬಹುದಾದ ಸಾಧ್ಯತೆಗಳನ್ನು ಅಲ್ಲಗೆಳೆಯಲಾಗದು.

ಹೀಗೆ ನಖರೇಶ್ವರ ದೇವಾಲಯದ ಉಲ್ಲೇಖದೊಂದಿಗೆ ಆಳುಪರಾಜ ಕವಿ ಆಳುಪೇಂದ್ರನ ಕಾಲದಲ್ಲಿ ದಾನಪಡೆದದ್ದು ತಿಳಿಯುತ್ತದೆ. ಇದೇ ರೀತಿಯ ಉಲ್ಲೇಖವು ಕ್ರಿ.ಶ. ೧೧೭೬ರ ಆಳುಪ ವೀರಕುಲಶೇಖರನ[೫೦] ಕ್ರಿ.ಶ. ೧೨೯೨ ಹಾಗೂ ಕ್ರಿ.ಶ. ೧೨೯೮[೫೧] ರ ಆಳುಪನಾಗದೇವರಸನ, ಕ್ರಿ.ಶ. ೧೪೦೦ ರ ಇಮ್ಮಡಿ–ಹರಿಹರನ[೫೨] ಶಾಸನಗಳಲ್ಲಿ ಈ ನಖರೇಶ್ವರ ದೇವಾಲಯಕ್ಕೆ ದಾನಪಡೆದ ಉಲ್ಲೇಖಗಳು ದೊರೆಯುತ್ತವೆ. ಮುಂದೆಯೂ ಇಂಥಹ ಅನೇಕ ದಾನದತ್ತಿಗಳು ಈ ದೇವಾಲಯಕ್ಕೆ ದೊರೆತಿವೆ. ಇಬ್ನು ಬತುತಾ (ಕ್ರಿ.ಶ. ೧೩೩೬–೧೩೪೧) ನು ತಾನು ಇಲ್ಲಿ ಭೇಟಿಯಿತ್ತಾಗ ನೋಡಿದ್ದನ್ನು ತಿಳಿಸಿದ್ದಾನೆ.[೫೩] ಇಲ್ಲಿ ಹೇರಳ ತೆಂಗು ಬೆಳೆಯುತ್ತಿದ್ದುದ್ದನ್ನು ತಿಳಿಸಿದ್ದಾನೆ. ಹಾಗೆ ಅನೇಕ ಚೀನಿಕಥನಗಳು ಅಕ್ಕಿ, ಕಬ್ಬು, ಶುಂಠಿ ವ್ಯಾಪಾರ ನಡೆಸುತ್ತಿದ್ದುದ್ದನ್ನು ತಿಳಿಸುತ್ತವೆ.

ಚೀನಿಯರಿಗೆ ಸ್ಥಳೀಯ ನಕರ, ನಖರ ವ್ಯಾಪಾರಿಗಳು ವಸ್ತುಗಳನ್ನು ಮಾರುತ್ತಿದ್ದರು. ಇದಕ್ಕೆ ಬದಲಾಗಿ ರೇಷ್ಮೆಬಟ್ಟೆ, ಪಿಂಗಾಣಿ ಸಾಮಾನು, ಚಿನ್ನದ ಅಧಿರಿರುವ ಮಣ್ಣು ಪಡೆಯುತ್ತಿದ್ದರು[೫೪].

ಚೀನಿಯರ ಕುರಿತು ಸ್ಥಳೀಯ ಜಾನಪದ ಕತೆಯೊಂದು ಚೀನಿಯರು ಪಂಜೂರ್ಲಿ ಭೂತಕ್ಕೆ ಅಪಮಾನ ಮಾಡಿದ್ದಕ್ಕಾಗಿ ಅವರ ಹಡಗುಗಳನ್ನು ಸ್ಥಳೀಯರು (ವ್ಯಾಪಾರಿಗಳು?) ಮುರಿದು ಹಾಕಿದ ಬಗ್ಗೆ ತಿಳಿಸುತ್ತದೆ. ಅಂದರೆ ಚೀನಿಯರ ನಂಬಿಕೆಗಳು ಸ್ಥಳೀಯ ನಂಬಿಕೆಯೊಂದಿಗೆ ಘರ್ಷಣೆ ನಡೆಯುವಷ್ಟು ನಿಟಕವಾಗಿ ಈ ಎರಡು ಗುಂಪುಗಳು ಒಂದೆಡೆ ವಾಸಿಸುತ್ತಿದ್ದವು ಎಂದು ಸ್ಪಷ್ಟಗೊಳ್ಳುತ್ತದೆ.

ಬಸರೂರಿಗೆ ಸಮೀಪದಲ್ಲಿ ಪಟ್ಟಿ ಎಂಬ ಊರು ಇರುವ ಬಗ್ಗೆ ಒಂದು ಶಾಸನ[೫೫] ತಿಳಿಸುತ್ತದೆ. ಆ ಊರು ಹಟ್ಟಿಅಂಗಡಿಯಾಗಿರಬೇಕು. ಹೆಸರೆ ಸೂಚಿಸುವಂತೆ ಇದೊಂದು ವ್ಯಾಪಾರಿ ಕೇಂದ್ರವಾಗಿತ್ತು. ಮತ್ತು ಬೌದ್ಧ, ಜೈನರ ಧಾರ್ಮಿಕ ಕೇಂದ್ರವೂ ಆಗಿತ್ತು.

ಅಂತೆಯೇ ಬಾರಹಕನ್ಯಾಪುರ ಎನಿಸಿದ್ದ ಬಾರ್ಕೂರು ಪಟ್ಟಣದಲ್ಲೂ ನಖರರು ಹೆಚ್ಚಿನ ಸಂಖ್ಯೆಯಲ್ಲಿದ್ದರು. ಕ್ರಿ.ಶ ಎಂಟನೇ ಶತಮಾನದಲ್ಲಿ ಆಳುಪರು ಉದ್ಯಾವರವನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡಿದ್ದರು[೫೬]. ಅದಾಗಲೇ ಪ್ರಖ್ಯಾತ ರೇವು ಎನಿಸಿದ್ದ, ಬಾರ್ಕೂರು ಇದರ ಸಮೀಪದಲ್ಲಿತ್ತು. ಮುಂದೆ ೧೧ನೆಯ ಶತಮಾನದಲ್ಲಿ ಬಾರ್ಕೂರನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡರು[೫೭]. ಈ ಕಾಲದಲ್ಲಿ ಇಲ್ಲಿ ನಡೆಯುತ್ತಿದ್ದ ವ್ಯಾಪಾರ ವ್ಯವಹಾರಗಳನ್ನು ನಖರರು ನಿಯಂತ್ರಿಸುತ್ತಿದ್ದರು.

ನಖರ ವರ್ತಕರು ಅಂಗಡಿಗಳನ್ನು ಇಟ್ಟು ವ್ಯಾಪಾರ–ವ್ಯವಹಾರ ನಡೆಸುತ್ತಿದ್ದರಿಂದ ನಗರ, ಅಂಗಡಿ ಎಂಬ ಹೆಸರಿನ ಊರುಗಳು ಇವರ ಪ್ರಮುಖ ಸ್ಥಳಗಳಾಗಿದ್ದವೆಂದು ತಿಳಿಯುತ್ತದೆ. ನಗರೆ, ನಗಿರೆ, ನಗರ, ಹೊಸಂಗಡಿ, ಹೆರೆಅಂಗಡಿ, ಅರೆಅಂಗಡಿ, ಹಳೆಅಂಗಡಿ, ಉಪ್ಪಿನಂಗಡಿ, ಹಟ್ಟಿಅಂಗಡಿ ಮುಂತಾದ ಊರ ಹೆಸರುಗಳನ್ನು ಇಂದಿಗೂ ನೋಡಬಹುದಾಗಿದೆ.

ಚಂದಾವರದಲ್ಲಿ ದೊರೆತಿರುವ ಶಾಸನವು[೫೮] ಭಾನುಕೀರ್ತಿಮಲಧಾರಿದೇವರ ಶಿಷ್ಯರು ನಕರ ಜೀನಾಲಯ ಮಾಡಿಸಿದ ಬಗ್ಗೆ ಹೇಳುತ್ತದೆ. ಮಂಗಳೂರು ತಾಲೂಕಿನ ಪಣಂಬೂರಿನಲ್ಲೂ ಅಲ್ಲಿಯ ನಖರದವರು ಒಂದು ನಳರೇಶ್ವರ ದೇವಸ್ಥಾನವನ್ನು ಕಟ್ಟಿಸಿದ್ದರು. ಈ ದೇವಾಲಯಕ್ಕೆ ಸಂಬಂಧಿಸಿದ ಶಾಸನಗಳಲ್ಲಿ ನಖರೇಶ್ವರದ ಗಣಪತಿಗೆ ಪ್ರಧಾನ ಸ್ಥಾನ ನೀಡಲಾಗಿದೆ[೫೯]. ಅಲ್ಲದೇ ಹಿರಿಯಂಗಡಿಯ ಶಾಸನವು[೬೦] ಕಾರ್ಕಳದ ಶಾಂತಿನಾಥ ದೇವರಿಗೆ ದಾನ ನೀಡಿದ ಬಗ್ಗೆ ತಿಳಿಸುತ್ತದೆ. ಹಾಗೇಯೇ ಬೇರೆ ಬೇರೆ ದೇವರುಗಳಿಗೆ, ದೇವಾಲಯಕ್ಕೆ, ಬಸಿದಿಗಳಿಗೆ ದಾನನೀಡಿದ್ದು ಶಾಸನಗಳಿಂದ

ತಿಳಿಯುತ್ತದೆ. ಅಂದರೆ ಇವರಿಗೆ ಯಾವುದೇ ಧಾರ್ಮಿಕ ನಿಷೇಧ–ತಾರತಮ್ಯಗಳಿರಲಿಲ್ಲ. ಎಲ್ಲಾ ವರ್ಗದ ಪೂಜಾ ಸ್ಥಳಗಳಿಗೆ ದೊಡ್ಡ ಪ್ರಮಾಣದಲ್ಲಿ ದಾನ ನೀಡುತ್ತಿದ್ದರು.

೨ನೇ ಆಳುವರಸನ ಕ್ರಿ.ಶ. ೮ನೇ ಶತಮಾನದ ಮಧ್ಯಭಾಗದ ಶಾಸನ[೬೧]ವು ದಾನ ಶಾಸನವಾಗಿದ್ದು, ಇದರಲ್ಲಿ ಉದಯಾವರದ ನಕರದ ಏಳ್ವತ್ತೊಕ್ಕಲನ್ನು ಉಲ್ಲೇಖಿಸುತ್ತದೆ. ಜೊತೆಯಲ್ಲಿ ಶಿವಳ್ಳಿಯ ಸಾಸಿರ್ವರು ಎಂಬ ಉಲ್ಲೇಖವೂ ಬರುತ್ತದೆ. ಇದು ನಕರದ ಕೆಲವು ಸಂಘಗಳಾಗಿರಬಹುದು ಎಂದು ಉಹಿಸಬಹುದಾಗಿದೆ.

ನಕರದವರ ಸಾಮಾಜಿಕ ಸೇವೆಯನ್ನು ತಿಳಿಸುವ ವಿಜಯಾದಿತ್ಯನ ಉದ್ಯಾವರ ಶಾಸನವು[೬೨] ಸುಮಾರು ೯ನೇ ಶತಮಾನಕ್ಕೆ ಸೇರಿದ್ದಾಗಿದ್ದು, ಇದು, ರಾಜನು ನಕರದವರೊಡಗೂಡಿ ಪಟ್ಟಿಪೊಂಬುಚ್ಚದ ನಗರಕ್ಕೆ ಸುಂಕಾದಾಯದಲ್ಲಿ ಅರ್ಧವನ್ನು ಬಿಟ್ಟುಕೊಟ್ಟನು ಎಂದು ತಿಳಿಸುತ್ತದೆ. ಅರಸರೊಂದಿಗೆ ಇವರಿಗಿದ್ದ ಸ್ನೇಹ ಹಾಗೂ ಸೌಹಾರ್ಧತೆಯನ್ನು ಈ ಶಾಸನ ತಿಳಿಸುತ್ತದೆ. ಅದೆ ಉದ್ಯಾವರದ ಇನ್ನೊಂದು[೬೩] ಶಾಸನವು ವಿಜಯಾದಿತ್ಯಆಳುಪೇಂದ್ರನು ಉದಯಪುರದ ನಕರದೊಡಗೂಡಿಕೊಂಡು ಪಟ್ಟಿಪೊಂಬುಚ್ಚದ ನಗರಕ್ಕೆ ಸುಂಕಾದಾಯದಲ್ಲಿ ರಿಯಾಯತಿ ನೀಡಿದ್ದು ತಿಳಿಸುತ್ತದೆ.

ಕರಾವಳಿಯ ಶಾಸನಗಳಲ್ಲಿ ಬರುವ ಮೌನಯೋಗಿ[೬೪], ರಾಜಪ್ಪ ಶೆಟ್ಟಿ, ಆತನ ಮಗಳು ಚಂಡಬ್ಬೆ[೬೫], ಮಾದಣ್ಣಸೆಟ್ಟಿ, ಯೀಸರಶೆಟ್ಟಿ, ಸನಿಯಮಸೆಟ್ಟಿ, ಆತನ ಅಳಿಯ ಕೋಟೆಯಂಣ, ಸಂಕರಶೆಟ್ಟಿಯ ಮಗ ಕುಡೆಯರ ಅಳಿಯ ನಾರಣಸೆಟ್ಟಿ, ಬಾಕಿಸೆಟ್ಟಿ, ಸೋಮಣ್ಣ, ಬಾಕಣ್ಣ, ಅಸ್ರಣ್ಣ, ಉತ್ತಮ ಸೆಟ್ಟಿ, ನಾಗಾ ಸೆಟ್ಟಿ, ಕೇಶವ ಶೆಟ್ಟಿ[೬೬] ಇವರುಗಳೆಲ್ಲಾ ನಕರರೆಂದು ತಿಳಿದುಬರುತ್ತದೆ. ಇನ್ನೂ ಅನೇಕ ಶಾಸನಗಳು ಸಮಸ್ತ ನಕರ ಎಂದೂ ಹೇಳುವುದು ಕಾಣುತ್ತದೆ. ಶಾಸನ ಫಲಕದಲ್ಲಿ ಸ್ಥಳಾಭಾವದಿಂದ ಎಲ್ಲರ ಹೆಸರು ಸೇರಿಸಲು ಸಾದ್ಯವಾಗದೇ ಇರುವುದರಿಂದ ಸಮಸ್ತನಕರ, ಸಮೂಹ, ಸರ್ವರು ಎಂದೆಲ್ಲಾ ಉಲ್ಲೇಖಿಸಿದ್ದಾರೆ.

ಪ್ರಾಚೀನ ಕಾಲದಿಂದ ಮಧ್ಯಕಾಲೀನ ಕರ್ನಾಟಕದ ಬಳ್ಳಿಗಾವೆ, ಅಗಡಿ, ಬಸವಕಲ್ಯಾಣ, ಬಸ್ತಿಹಳ್ಳಿ, ಸಂತೆಕೆರೆ, ಅಸಂದಿ, ಚಿತ್ರದುರ್ಗ, ಉಪ್ಪಿನಹಳ್ಳಿ, ಬೆಗೂರು, ಶ್ರವಣಬೆಳಗೊಳದ ಶಾಸನಗಳಲ್ಲಿ ಬಂದಿರುವ ಅನೇಕ ನಕರ–ವ್ಯಾಪಾರಿಗಳ ಹೆಸರುಗಳನ್ನು ಬಿ.ಆರ್.ಹಿರೇಮಠರು ತಮ್ಮ ಅಧ್ಯಯನದಲ್ಲಿ[೬೭] ವಿವರಿಸಿದ್ದಾರೆ.

ಬಹು ಅಪರೂಪಕ್ಕೆ ಶಾಸನ ಒಂದರಲ್ಲಿ ಸ್ತ್ರಿ ನಕರರ ಪರಿಚಯ ದೊರೆಯುತ್ತದೆ. ಬಾರಕೂರಿನ ಕೋಟೆಕೆರೆ ಶಾಸನದಲ್ಲಿ[೬೮] ಪಾಂಡ್ಯಮಹಾದೇವಿಯರ ನಗರಸಮೂಹ ಎಂದು ಬರುವುದು. ಮಹಾದೇವಿಯ ನಾಯಕತ್ವದಲ್ಲಿ ನಗರ ವ್ಯಾಪಾರಿಗಳ ವರ್ಗ ಒಂದಿತ್ತೆಂದು ಉಹಿಸಲು

ಆಸ್ಪದ ನೀಡುತ್ತದೆ. ಕ್ರಿ.ಶ.೧೧೭೬ರ ವೀರಕುಲಶೇಖರನ ಶಾಸನವು ಬಸರೂರು ಪಟ್ಟಣದ ನಖರೇಶ್ವರ ದೇವರಿಗೆ ರಾಜಪ್ಪಶೆಟ್ಟಿಯವರ ಮಗಳು ಚಂಡಬ್ಬೆ ಎಂಬಾಕೆ ನೀಡಿದ ದಾನದ ಬಗ್ಗೆ ತಿಳಿಸುತ್ತದೆ. ಇಲ್ಲಿ ಚಂಡಬ್ಬೆ ನಖರ ರಾಜಪ್ಪ ಒಡೆಯರ ಮಗಳಾಗಿದ್ದು, ತನ್ನ ಸ್ವಂತ ಹಣದಲ್ಲಿ ದಾನ ನೀಡಿರಬಹುದು. ಆಕೆಗೆ ಬಂದಿರುವ ಈ ಹಣವು ಪಿತ್ರಾರ್ಜಿತ ಅಥವಾ ವ್ಯಾಪಾರದಲ್ಲಿ ಪಡೆದ ಲಾಭವಾಗಿರಬಹುದು. ಇಲ್ಲಿ ವ್ಯಾಪಾರದ ಲಾಭ ಎಂಬ ಊಹೆ ನಿಜವಾದರೆ ಚಂಡಬ್ಬೆಯೂ ನಖರ ವ್ಯಾಪಾರಿಯಾಗಿದ್ದಿರಬಹುದು. ವಿಜಯನಗರದ ಕಾಲದಲ್ಲಿ ಹಂಪೆಯಲ್ಲಿ ಸ್ತ್ರೀಯರೂ ಅಂಗಡಿಗಳಲ್ಲಿ ವ್ಯಾಪಾರ ವ್ಯವಹಾರ[೯] ನಡೆಸುತ್ತಿದ್ದುದಿದೆ. ನಕರರು ರಾಜನಆಸ್ಥಾನದಲ್ಲಿ ಪ್ರಭಾವಿಗಳಾಗಿದ್ದರು. ಇವರು ಆಡಳಿತದಲ್ಲೂ ಭಾಗಿಗಳಾಗುತ್ತಿದ್ದರು. ಮಾರಮ್ಮನ ಉದಿಯಾವರ[೨೦] ಶಾಸನವು ನಕರದ ಆಡಳಿತಗಾರರನ್ನು ನೇಮಿಸಿದ್ದನ್ನು ತಿಳಿಸುತ್ತದೆ. ಈ ಕಾರ್ಯಕ್ರಮದಲ್ಲಿ ಉದಯಪುರದ ನಕರರು ಜೊತೆಗಿದ್ದುದ್ದನ್ನು ತಿಳಿಸುತ್ತದೆ.

ನಕರರು ಕೊಂಡು ತಂದು, ಹೊತ್ತು ಮಾರುವುದರ ಜೊತೆಗೆ ಒಂದೆಡೆ ಸಂತೆಗಳಲ್ಲಿ, ಬಯಲುಗಳಲ್ಲಿ, ಪ್ರಮುಖ ಪಟ್ಟಣಗಳಲ್ಲಿ ಅಂಗಡಿಗಳನ್ನಿಟ್ಟು ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ಇವರು ವ್ಯಾಪಾರಕ್ಕೆ ಎಲ್ಲರೀತಿಯ ಸಾಮಾನು–ಸರಕುಗಳನ್ನು ಬಳಸುತ್ತಿದ್ದರು. ಇದನ್ನು ತಿಳಿಸುವ ಪಂಚಲೋಹಾದಿಪತಿಗಳಂ[೨೧], ರತ್ನತ್ರಯಾಭರಣಂ[೨೨], ಸಮುದ್ರ ವ್ಯಾಪಾರದಲ್ಲಿ ಕುಶಲಿಗಳು[೨೩], ಕುದುರೆ ವ್ಯಾಪಾರ ನಡೆಸುವವರು ಇತ್ಯಾದಿಗಳಾಗಿ ಕರೆಯಲಾಗಿದೆ. ಹಲವು ಸಂದರ್ಭಗಳಲ್ಲಿ ಸಾಧನಿಕರಾಗಿ ಅಂದರೆ ರಾಜನ ಯುದ್ಧಾಶ್ವಗಳನ್ನು[೨೪] ನೋಡಿಕೊಳ್ಳುವ ಅಧಿಕಾರಿಗಳಾಗಿ, ಬೇಹಾರಿ ಅಂದರೆ ವ್ಯಾಪಾರದಲ್ಲಿ ಅರಮನೆಯ ವ್ಯವಹಾರ ಹಿತಾಸಕ್ತಿ ನೋಡಿಕೊಳ್ಳುವ ಅಧಿಕಾರಿ ಮುಂತಾಗಿ ಕಾರ್ಯ ನಿರ್ವಹಿಸುತ್ತಿದ್ದರು.

ಕರಾವಳಿಯಲ್ಲಿ ಕಾಯ್ಕಿಣಿ, ಮುಂಡೊಳ್ಳಿ, ಭಟ್ಕಳ, ಬಸರೂರು, ಬಾರ್ಕೂರು, ಕುಂದಾಪುರ, ಹಟ್ಟಿಅಂಗಡಿ, ಹೊನ್ನಾವರ, ಕುಮಟಾ, ಮಂಗಳೂರು, ಮಿರ್ಜಾನ, ಅಂಕೋಲಾ, ಗೇರುಸೊಪ್ಪಾ, ಹಾಡುವಳ್ಳಿ, ಗಂಗೊಳ್ಳಿ, ಮುಲ್ಕಿ, ಉದ್ಯಾವರ, ಕೋಟೇಶ್ವರ, ಆವರ್ಸೆ, ಬೀಜಾಡಿ, ಹಂಗಳೂರು, ವಡೇರಹೋಬಳ್ಳಿ, ವರಾಂಗ, ತೆಕ್ಕಟ್ಟೆ, ಕುಂಬಾಸಿ, ಬೀಜಾಡಿ, ಕೋಣೆ–ಮೂರೂರು, ಮೂಡಬಿದರೆ, ಕಾರ್ಕಳ, ಕಳಸ, ಹೆಬ್ರೆ, ಚಾರ, ಶಿವಪುರ, ಬೇಳಂಜೆ, ಚಂದಾವರಗಳು, ಪ್ರಮುಖ ರೇವು–ಪಟ್ಟಣ ವ್ಯಾಪಾರಿ ಪಟ್ಟಣಗಳಾಗಿದ್ದವು. ಇಲ್ಲೆಲ್ಲಾ ನಕರರು ವ್ಯಾಪಾರ ವಹಿವಾಟು ನಡೆಸುತ್ತಿದ್ದರು ಎಂದು ತಿಳಿದು ಬರುತ್ತದೆ.

ನಖರರನ್ನು ಕೆಲವು ಶಾಸನಗಳಲ್ಲಿ ದೇಸಿಯ ವಸ್ತುಗಳ ವ್ಯಾಪಾರಿಗಳೆಂದು ಕರೆಯಲಾಗಿದೆ. ಆದರೆ ನಖರರು ಸ್ಥಳೀಯರಾಗಿದ್ದು, ಅವರು ದೇಶೀಯ–ವಿದೇಶೀಯ ಸರಕು–ಪ್ರಾಣಿಗಳ

ವ್ಯಾಪಾರಿಗಳಾಗಿದ್ದರು. ಸುಮಾರು ೧೨-೧೩ನೆಯ ಶತಮಾನದಲ್ಲಿ ಇವರು ವ್ಯಾಪಾರಿ ರಂಗದಲ್ಲಿ ಬಹುತೇಕ ಏಕಸಾಮ್ಯ ಹೊಂದಿದ್ದಂತೆ ಕಾಣುತ್ತದೆ. ಕ್ರಿ.ಶ ಸುಮಾರು ೧೩ನೇ ಶತಮಾನದ ಶ್ರವಣಬೆಳಗೋಳದ ಶಾಸನ[೭೫] ಒಂದು ನಖರರನ್ನು ಸಿಂಹಪರಾಕ್ರಮಿಗಳೆಂದೂ, ಕುಶಲರೆಂದೂ, ರತ್ನತ್ರಯ ಆಭರಣರೆಂದೂ, ನಾನಾವ್ಯಾವಹಾರಿಗಳೆಂದು ಹೇಳುತ್ತದೆ. ಇದರಿಂದ, ನಖರರು ಕಡಲೋತ್ತರ-ವಿದೇಶಿ ವ್ಯಾಪಾರಿಗಳೂ, ಮುತ್ತು ರತ್ನಗಳನ್ನು ಗುರುತಿಸುವಲ್ಲಿ ಕುಶಲರೆಂದೂ ತಿಳಿಯುತ್ತದೆ. ದೇಶದ ವಿವಿಧ ಭಾಗಗಳಲ್ಲೂ ಇವರು ವ್ಯಾಪಾರ ನಡೆಸುತ್ತಿದ್ದರು. ಆದರೆ ರಾಜ್ಯಗಳಿಗೆ ನಗರವೆಂಬ[೭೬] ಹೆಸರುಗಳಿರುವುದು ಶಾಸನಗಳಿಂದ ವ್ಯಕ್ತವಾಗುತ್ತದೆ. ಆಂಧ್ರದಲ್ಲೂ ನಗರ್ತ(ವೈಶ್ಯ)ರನ್ನು ನಕರಮು[೭೭] ಎಂದು ಕರೆಯುತ್ತಿದ್ದ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ.

ಸ್ಥಳೀಯ ಆಡಳಿತಗಾರರಿಗೆ ಆಡಳಿತದ ವಿವಿಧ ರಂಗದಲ್ಲಿ ನಖರರು ಸಹಾಯ ನೀಡಿದ್ದರು. ಇವರ ಶ್ರೀಮಂತಿಕೆ, ವೀರತ್ವ ಹಾಗೂ ವ್ಯವಹಾರ ಕುಶಲತೆಗಳು ರಾಜಾಸ್ಥಾನದಲ್ಲಿ ಉತ್ತಮ ಸ್ಥಾನ ನೀಡಿತ್ತು. ಹೊಯ್ಸಳರು ಕರಾವಳಿ ಪ್ರದೇಶ ಆಳುವಾಗ ಇವರು ವಿವಿಧ ಕ್ಷೇತ್ರಗಳಲ್ಲಿ ಪ್ರಧಾನಪಾತ್ರ ವಹಿಸಿದ್ದರು[೭೮].

ಒಟ್ಟಿನಲ್ಲಿ ಕರಾವಳಿಯ ಜನಜೀವನದಲ್ಲಿ ನಖರ ಅಥವಾ ನಕರರು ಹಾಸು ಹೊಕ್ಕಾಗಿದ್ದರು. ಶ್ರೀಮಂತರ ವಿಲಾಸಿ ಬದುಕಿಗೆ ಬೇಕಿದ್ದ ಬೆಲೆ ಬಾಳುವವಸ್ತುಗಳಲ್ಲದೇ, ಅರಮನೆಯ-ರಾಜ್ಯದ ರಕ್ಷಣೆಗೆ ಬೇಕಿದ್ದ ಕುದುರೆಗಳು, ಯುದ್ಧಾಸ್ತ್ರಗಳು ಮತ್ತು ಜನಸಾಮಾನ್ಯರ ಜೀವನ ನಿರ್ವಹಣೆಗೆ ಬೇಕಿದ್ದ ಉಪ್ಪು, ಆಹಾರಪದಾರ್ಥ, ಬಟ್ಟೆ-ಬರೆ ಪ್ರತಿಯೊಂದರ ವ್ಯಾಪಾರದಲ್ಲಿ ಇವರು ತೊಡಗಿಕೊಂಡಿದ್ದರು. ಕರಾವಳಿಯ ತೀರ ಪ್ರದೇಶ, ಬಂದರುಗಳು ಇವರ ಮುಖ್ಯಕೇಂದ್ರಗಳಾಗಿದ್ದರೂ, ಕಡಲೋತ್ತರ ವ್ಯಾಪಾರದಿಂದ ಬಂದ ಸರಕುಗಳನ್ನು ಒಳನಾಡಿಗೆ ಸಾಗಿಸಿ ವ್ಯಾಪಾರ ಮಾಡುತ್ತಿದ್ದರು. ಜೊತೆಯಲ್ಲಿ ಘಟ್ಟ ಪ್ರದೇಶದಲ್ಲಿ ದೊರೆಯುತ್ತಿದ್ದ ಬೆಲೆಬಾಳುವ ಸರಕುಗಳನ್ನು ಹೇರು, ಚಕ್ಕಡಿ, ಕುದುರೆ-ಕತ್ತೆಗಾಡಿಗಳ ಮೂಲಕವೂ, ಸಾಧ್ಯವಿದ್ದೆಡೆ ನೌಕೆಗಳ ಮೂಲಕವೂ ಬಂದರು ಪ್ರದೇಶಕ್ಕೆ ತಂದು ಇಲ್ಲಿಂದ ವಿದೇಶಗಳಿಗೂ ಕಳುಹಿಸುತ್ತಿದ್ದರು. ಹೀಗೆ ಬಂದರು-ಕಡಲಿನೊಂದಿಗೆ ತಮ್ಮ ವ್ಯಾಪಾರಿ ಸಂಬಂಧ ಬೆಸೆದುಕೊಂಡಿದ್ದರು.

೬.೨.೧.೫. ಎಳಮೆ ಅಥವಾ ಎಳಮೆಗೊಳಗಾದವರು

ಎಳಮೆ ಅಥವಾ ಎಳಮೆಗೊಳಗಾದವರು ಎಂದು ಕರೆಸಿಕೊಳ್ಳುವ ವರ್ತಕವರ್ಗ ಒಂದು ಕರಾವಳಿ ಪ್ರದೇಶದ ವ್ಯಾಪಾರ-ವ್ಯವಹಾರದಲ್ಲಿ ತೊಡಗಿತ್ತು. ಇವರು ಧಾರ್ಮಿಕ ಸ್ಥಳಗಳ ಆಗು ಹೋಗುಗಳನ್ನು ನೋಡಿಕೊಳ್ಳುವ ಜವಾಬ್ದಾರಿಯನ್ನು ಹೊಂದಿದ್ದರು. ಈ ಹೆಸರಿನ ಕುರಿತು ಕೆ.ವಿ.ರಮೇಶರವರು-ಎಳಮೆ ಎಂದರೆ ಎಳಸು ಹಾಗೂ ಎಣೆ ಎಂಬ ಶಬ್ಧಕ್ಕೆ ಸಂಯೋಗ, ಕೂಟ,

ಸಂಘ[೭೯] ಮುಂತಾದ ಅರ್ಥವನ್ನು ವಿವರಿಸಿದ್ದಾರೆ. ಇವುಗಳಿಂದ ಎಳಮೆ ಎಂದು ಕರೆಯಲ್ಪಡುವ ಈ ವ್ಯಾಪಾರಿ ವರ್ಗ ಒಂದು ಗುಂಪಾಗಿತ್ತು ಅಥವಾ ನಿರ್ಧಿಷ್ಟ ಸಂಖ್ಯೆಯ ವ್ಯಾಪಾರಿಗಳ ಕೂಟವಾಗಿತ್ತು ಎಂದು ಉಹಿಸಬಹುದು. ಇವರನ್ನು ವಿಜಯನಗರದ ಕಾಲದಲ್ಲಿ ಎಳಮೆಗೊಳಗಾದವರು ಎಂದು ಕರೆಯಲಾಗಿದೆ.

ಕ್ರಿ.ಶ. ೧೪೯೦ರ ಬಾರ್ಕೂರಿನ ಮಣಿಗಾರ ಕೇರಿಯ ಶಾಸನವು ಈ ಎಳಮೆಗೊಳಗಾದವರನ್ನು ಉಲ್ಲೇಖಿಸುತ್ತದೆ[೮೦]. ಈ ಶಾಸನವು ದಾನಶಾಸನವಾಗಿದ್ದು, ದೇವಾಲಯಗಳಿಗೆ ಬೆಮ್ಮಣ್ಣಸೆಟ್ಟಿ ಮತ್ತು ಆತನ ತಮ್ಮ ನೀಡಿದ ಅನೇಕ ದಾನಗಳನ್ನು ಉಲ್ಲೇಖಿಸುತ್ತದೆ. ಶಾಸನದ ಕೊನೆಯಲ್ಲಿ ಈ ಧರ್ಮವನ್ನು ಅಂದರೆ ದಾನವನ್ನು ರಕ್ಷಿಸುವ ಹೊಣೆ ಮಣಿಗಾರಕೇರಿಯ ಮೂರುಸೆನಾಕಾರರು, ಸಮಸ್ತಹಲರೊಂದಿಗೆ ೧೫೦ ಎಳಮೆಗೊಳಗಾದವರದ್ದೆಂದು ಹೇಳಿದೆ. ಇಲ್ಲಿ ಬರುವ ೧೫೦ ಎಳಮೆಗೊಳಗಾದವರು ಎಂಬ ಪದವು ಈ ವ್ಯಾಪಾರಿಗಳು ಒಂದು ಗಣವಾಗಿದ್ದರೆಂದು ತಿಳಿಯುತ್ತದೆ. ಇದನ್ನು ಸಮರ್ಥಿಸುವಂತೆ ಶಾಸನಗಳು ೩೬೦ ಎಳಮೆ[೮೧], ೩೬೬ ಎಳಮೆ[೮೨], ೭೭೦ ಎಳಮೆ[೮೩], ನಾಲ್ವರು ಎಳಮೆ[೮೪] ಮುಂತಾಗಿ ಉಲ್ಲೇಖಿಸಿದ್ದು ಕಾಣುತ್ತದೆ.

ಕ್ರಿ.ಶ ೧೨ನೇ ಶತಮಾನದಲ್ಲಿ ಕಂಡುಬಂದ ಇವರು ಮುಂದೆ ೧೩ನೇ ಶತಮಾನದಲ್ಲಿ ಬೆಳೆಯುತ್ತ ಬಂದು ೧೫-೧೬ನೇ ಶತಮಾನದವರೆಗೆ ಮುಂದುವರಿದರು[೮೫]. ಶಾಸನಗಳ ಉಲ್ಲೇಖದಿಂದ ಇವರು ಪ್ರಬಲವಾದ ಗುಂಪಿನಿಂದ ಕೂಡಿದ ವ್ಯಾಪಾರಿ ವರ್ಗವಾಗಿತ್ತು ಎಂದು ತಿಳಿಯುತ್ತದೆ. ಕೇವಲ ವ್ಯಾಪಾರ ಮಾತ್ರವಲ್ಲದೇ ಧಾರ್ಮಿಕ ಕೇಂದ್ರಗಳ ಆಗು ಹೋಗುಗಳ ಜವಾಬ್ದಾರಿಯನ್ನು ಇವರು ನಿರ್ವಹಿಸುತ್ತಿದ್ದರು. ಇದಕ್ಕೆ ಆಡಳಿತಗಾರರ ಬೆಂಬಲವಿತ್ತು. ಆರಾಧನಾ ಸ್ಥಳಗಳಿಗೆ ಬರುವ ದಾನ-ದತ್ತಿಯ ವ್ಯವಹಾರ ಇವರು ನೋಡಿಕೊಳ್ಳುತ್ತಿದ್ದರು.

೬.೨.೧.೬ ಸಾಲಿಕೆಯ ಬಲ್ಲಾಳರು

ಸಾಲಿಕೆಯ ಬಲ್ಲಾಳರು ತುಳು ಪ್ರದೇಶದ ವರ್ತಕರೆಂದು ಬಿ.ಆರ್. ಹಿರೇಮಠರವರು[೮೬] ತಿಳಿಸುತ್ತಾರೆ. ಕರಾವಳಿಯ ಅದರಲ್ಲೂ ತುಳುನಾಡಿನ ಶಾಸನಗಳಲ್ಲಿ ಸಾಲಿಕೆಯ ಬಲ್ಲಾಳರ ಉಲ್ಲೇಖ ಕಂಡುಬರುತ್ತದೆ. ಸಾಲಿಕೆಯ ಬಲ್ಲಾಳರು ಎಂಬ ಶಬ್ಧವು ಒಂದು ಗುಂಪನ್ನು ಪ್ರತಿನಿಧಿಸುತ್ತದೆ. ಸಾಲಿಕೆ ಎಂದರೆ ಅಂಗಡಿ ಎಂದರ್ಥ. ಬಲ್ಲಾಳು ಎಂದರೆ ಬಲ್ಲವನು, ನಿಪುಣ ಎಂದರ್ಥ. ಹೀಗಾಗಿ ಸಾಲಿಕೆಯ ಬಲ್ಲಾಳುಗಳು ಕೂಡ ವರ್ತಕ ಸಂಘದವರೇ ಇದ್ದಿರಬೇಕು[೮೭] ಎಂದು ಕೆ.ವಿ. ರಮೇಶರು ತಿಳಿಸಿದ್ದಾರೆ. ಆದರೆ ಇವರು ಸ್ಥಳೀಯರಾಗಿರದೆ ಹೊರಗಿನಿಂದ ಬಂದವರಾಗಿರಬಹುದು ಎಂದು ಊಹಿಸಬಹುದಾಗಿದೆ. ಇವರ ಉಲ್ಲೇಖಗಳು ಕೆಲವೇ ಶಾಸನಗಳಲ್ಲಿ ಕಂಡುಬರುತ್ತವಲ್ಲದೆ ಬಹು

ಅಪರೂಪವೂ ಆಗಿದೆ. ಶೆಟ್ಟಕಾರರಂತೆ, ನಕರರಂತೆ ಇವರು ವ್ಯಾಪಕತೆ ಹೊಂದಿರಲಿಲ್ಲ. ತಾತ್ಕಾಲಿಕ ಕೆಲಕಾಲ ಇದ್ದು ಕೆಲವು ಸರಕುಗಳನ್ನು ವಿಕ್ರಯಿಸುತ್ತಿದ್ದರು. ಈ ವರ್ತಕರು ತಮ್ಮ ನಿರ್ಧಿಷ್ಟಪಡಿಸಿದ ಸರಕುಗಳನ್ನು ಅಂದರೆ ಬಹುಶಃ ಬೆಲೆಬಾಳುವ ಮುತ್ತು ರತ್ನಗಳಂತಹ ವಸ್ತುಗಳ ವ್ಯಾಪಾರಿಗಳಾಗಿದ್ದಿರಬೇಕು.

ಸಾಲಿಕೆಯಬಲ್ಲಾಳರು ವ್ಯಾಪಾರಕ್ಕಾಗಿ ಹೋಗುತ್ತಿದ್ದ ವ್ಯಾಪಾರಿ ಬಣದಲ್ಲಿರುವ ವೀರರಾಗಿರಬಹುದೆಂದು ಇನ್ನೊಂದು ಊಹೆ ಮಾಡಬಹುದು. ಬಲ್ಲಾಳು ಶಬ್ದವು ಸೈನ್ಯದ ವೀರರನ್ನು ನೆನಪಿಸುತ್ತದೆ. ಅರಸನ ರಕ್ಷಣಾಪಡೆಗೆ ಸಂಬಂಧಿಸಿದಂತೆ ಆಡಳಿತ ವರ್ಗಕ್ಕೆ ಸೇರಿದವರು ಬಲ್ಲಾಳುಗಳು[೮೮]. ಈ ಬಲ್ಲಾಳುಗಳು ಆಡಳಿತಾತ್ಮಕ ಚಟುವಟಿಕೆಗಳಲ್ಲೂ ತೊಡಗಿರುತ್ತಿದ್ದರು. ರಾಜನು ಇವರ ಸಹಾಯ, ಸಲಹೆಗಳನ್ನು ಆಡಳಿತದಲ್ಲಿ ಪಡೆಯುತ್ತಿದ್ದನು. ಮೂಡಬಿದಿರೆಯ ಜಾಗತಿಕ ಖ್ಯಾತಿಯ ಸಾವಿರ ಕಂಬಗಳ ಬಸದಿಯ ನಿರ್ಮಾಣದಲ್ಲಿ ಹಲವಾರು ವ್ಯಾಪಾರಿ ಸಂಘಗಳು ಭಾಗಿಗಳಾಗಿದ್ದವು[೮೯]. ಈ ವ್ಯಾಪಾರಿ ಸಂಘಗಳಲ್ಲಿ ಬಲ್ಲಾಳರು ಸೇರಿದ್ದರು. ಹೀಗೆ ದಾನ, ದತ್ತಿ, ಧಾರ್ಮಿಕ ಆರಾಧನಾ ಸ್ಥಳಗಳ ನಿರ್ಮಾಣ, ಮುಂತಾದ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಾ ಬಂದಿದ್ದರು. ಸಣ್ಣ ಸಂಖ್ಯೆಯ ವ್ಯಾಪಾರಿಗಳಾಗಿರಬಹುದಾದ ಇವರು ಬೆಲೆಬಾಳುವ ಮುತ್ತು, ರತ್ನ, ವಜ್ರ ದಂಥಹ ವಸ್ತುಗಳನ್ನು ಪ್ರಮುಖ ಪಟ್ಟಣಗಳಿಗೆ ಕೊಂಡೊಯ್ದು ಮಾರುತ್ತಿದ್ದಿರಬೇಕು. ಅಥವಾ ಪಟ್ಟಣಗಳಲ್ಲಿ ಅಂಗಡಿಗಳಲ್ಲಿ ಮಾರುತ್ತಿದ್ದಿರಬೇಕು.

ಇವರ ವ್ಯಾಪಾರಕ್ಕೆ ಕಳ್ಳರಿಂದಲೋ ಅಥವಾ ವ್ಯಾಪಾರಿ ಗುಂಪುಗಳಿಂದಲೋ ಅಥವಾ ನೆರೆ ಕೆರೆಯ ರಾಜ್ಯಗಳ ಸೈನಿಕರಿಂದ ಉಪಟಳ-ಕಿರಿಕಿರಿ, ದಾಳಿ ಅಥವಾ ವಸ್ತುಗಳ ದರೋಡೆಯಂತಹ ಭೀತಿಯಿದ್ದರಿಂದ ಇವರು ಬಲ್ಲಾಳುಗಳಂತೆ ಅಂದರೆ ಸೈನಿಕರಾಗಿ ರಕ್ಷಣೆ ನೀಡುತ್ತಿದ್ದರು. ಅಂದರೆ ಇವರು ಸದಾ ಶಸ್ತ್ರಸನ್ನದ್ಧರಾಗಿರುತ್ತಿದ್ದರು. ತರಬೇತಿಗೊಂಡು, ಗುಂಪು, ಗುಂಪುಗಳಲ್ಲಿ ವ್ಯಾಪಾರದಲ್ಲಿ ತೊಡಗಿಕೊಂಡಿರುತ್ತಿದ್ದ ಸಾಧ್ಯತೆಗಳಿವೆ. ದಾರಿಗಳ್ಳರಹಾವಳಿಯ ಕುರಿತು ಅನೇಕ ಬೌದ್ಧ ಸಾಹಿತ್ಯಗಳಲ್ಲಿ ಉಲ್ಲೇಖಗಳು ಬರುತ್ತವೆ. ಹ್ಯೂಯೆನ್‌ತ್ಸಾಂಗ್[೯೦]ನ ಪ್ರವಾಸಿಕತನದಲ್ಲೂ ಉಲ್ಲೇಖಗಳು ಬರುತ್ತವೆ. ಕರ್ನಾಟಕದ ಕೆಲವು ವೀರಗಲ್ಲುಗಳು ದಾರಿಗಳ್ಳರೊಡನೆ ಹೋರಾಡಿ ಪ್ರಾಣ ತೆತ್ತ ವೀರರ ಬಗ್ಗೆ ತಿಳಿಸುತ್ತವೆ. ಕ್ರಿ.ಶ. ೧೧೭೩ರ, ಕ್ರಿ.ಶ. ೧೨೭೭ರ ವೀರಗಲ್ಲು ಇಂತಹ ದಾರಿಗಳ್ಳರ ವಿರುದ್ಧ ಹೋರಾಡಿ ಪ್ರಾಣಬಿಟ್ಟವರನ್ನು ತಿಳಿಸುತ್ತದೆ[೯೧]. ಕೊಣಂಗೇರಿಯ ಹಾರುವ ಬಮ್ಮಿಶೆಟ್ಟಿಯ ಮಗ ಸೋಮಶೆಟ್ಟಿ ಎಂಬುವನು ಬಡಗಲು ವ್ಯವಹಾರದಲ್ಲಿ, ಸಿವಯ್ಯ ಎಂಬುವನು ಕಡಹದದಾರಿಯಲ್ಲಿ ಕಳ್ಳರೊಂದಿಗೆ ಸೆಣಸಾಡಿದ್ದನ್ನು, ಕಣಸೋಗೆಯ ಮಲ್ಲಸೆಟ್ಟಿಯಮಗ ದೇವಣ್ಣನು ಉಭಯಗಟ್ಟದ ಸಾಳಗೆ ಬರುವಾಗ ಕಳ್ಳರು

ಅವನನ್ನು ಸಾಯಿಸಿದ್ದನ್ನು ರಾಜಿಸೆಟ್ಟಿಯಮಗ ದುಗ್ಗಣ್ಣ ಎಂಬುವನು ಹರಿಹರಕ್ಕೆ ಹೋಗಿಬರುವಾಗ ಬಟ್ಟೆಯ ಕಳ್ಳರನ್ನು ತಾಗಿ ಹೋರಾಡಿ ಸತ್ತದ್ದನ್ನು ಶಾಸನಗಳು ತಿಳಿಸುತ್ತವೆ[೯೨]. ಇವುಗಳಿಂದ ಪ್ರಾಚೀನ ಕಾಲದಲ್ಲಿ ಹಾದಿಕಳ್ಳರ ಉಪಟಳ ತುಂಬಾ ಇದ್ದದ್ದು ತಿಳಿಯುತ್ತದೆ.

ಸಾಲಿಕೆ–ಬಲ್ಲಾಳು ಎಂಬ ಶಬ್ಧವನ್ನು ಕೆ.ವಿ.ರಮೇಶರು ಸಾಲಿಕೆ ಎಂದರೆ ಅಂಗಡಿ ಎಂದೂ, ಬಲ್ಲಾಳ ಎಂದರೆ ನಿಪುಣ ಎಂದೂ ವಿವರಿಸಿದ್ದಾರೆ. ಇಲ್ಲಿ ಸಾಲಿಕೆ–ಅಂಗಡಿಯಾಗಿ ಪರಿಗಣಿಸಿ, ಬಲ್ಲಾಳು ಎನ್ನವುದು ಈ ವ್ಯಾಪಾರಿ ಮಳಿಗೆಯನ್ನು ನಡೆಸುವ ಅಥವಾ ರಕ್ಷಿಸುವ ವೀರರೂ ಆಗಿರಬಹುದಾದ ಸಾದ್ಯತೆ ಇದೆ.

ಒಟ್ಟಿನಲ್ಲಿ ಈ ಸಾಲಿಕೆಯ ಬಲ್ಲಾಳರು ಕರಾವಳಿಯ ದಕ್ಷಿಣದ ವ್ಯಾಪಾರಿ ಪಟ್ಟಣಗಳಲ್ಲಿ ಪ್ರಬಲ ವರ್ತಕರಾಗಿದ್ದರು ಎಂದು ಸ್ಪಷ್ಟಗೊಳ್ಳುತ್ತದೆ.

೬.೨.೧.೭ ಹಲರು

ಇವರನ್ನು ಕರಾವಳಿಯ ಶಾಸನಗಳು ಹಲರು, ಸಮಸ್ತಹಲರೆಂದು[೯೩] ಉಲ್ಲೇಖಿಸಿದರೆ, ಉತ್ತರಕನಾಟಕದ ಶಾಸನಗಳು ಹಲರುಸ್ವಾಮಿ ಎಂದು ಕರೆದರೆ ಸಿತಾಳಮಳಿಗೆಯ ಶಾಸನಗಳು ಹಲರು, ಕಂನಡಿಗ ಹಲರು, ನಾನಾದೇಶಿಯ ಹಲರು[೯೪] ಮುಂತಾಗಿ ಕರೆದಿರುವುದು ಕಾಣಬಹುದಾಗಿದೆ.

ಹಲರು ಶ್ರೀಮಂತ ಜೈನ ವ್ಯಾಪಾರಿಗಳಾಗಿದ್ದರು[೯೫]. ಈ ಹಲರ ಸಂಘಗಳು ಪ್ರಮುಖ ಜೈನ ಕೇಂದ್ರಗಳಾದ ವೇಣೂರು, ಮೂಡಬಿದಿರೆ, ಭಟ್ಕಳ, ಪಡುಬಿದರೆ, ಗೇರುಸೊಪ್ಪಾ[೯೬], ಚಂದಾವರ[೯೭], ಮಂಕಿ[೯೮] ಮುಂತಾದೆಡೆ ಪ್ರಬಲವಾಗಿದ್ದರು. ಅಂಕೋಲಾ, ಉಡುಪಿ, ಉಪ್ಪಿನಂಗಡಿ, ಕಾರವಾರ, ಕುಂದಾಪುರ, ಬಸ್ರೂರು, ಬಾರ್ಕೂರು, ಬೈಂದೂರುಗಳಲ್ಲೂ ಇವರ ಕೇಂದ್ರಗಳಿದ್ದವು[೯೯].

ಹಿರಿಯಂಗಡಿಯ ಕ್ರಿ.ಶ ೧೨೫೬ ಲೋಕನಾಥದೇವರಸನ ಹಿರಿಯಂಗಡಿ[೧೦೦] ಶಾಸನವು ಅರಸ ಮತ್ತಿತರರು ನೀಡಿದ ದಾನದ ಬಗ್ಗೆ ತಿಳಿಸುತ್ತಾ ಹಲರು ಮಾಡಿದ ದಾನವನ್ನು ತಿಳಿಸುತ್ತದೆ. ಹೊಲಗದ್ದೆಗಳನ್ನು ಬಸದಿಯ ಜೀರ್ಣೋದ್ದಾರಕ್ಕೆ, ದೇವರ ಕಾರ್ಯಕ್ಕೆ ಬಳಸಿಕೊಂಡು, ಉಳಿದದ್ದನ್ನು ಅಕ್ಷಯ ಭಂಡಾರಕ್ಕೆ ಸಲ್ಲಿಸಬೇಕೆಂದು ತಿಳಿಸುತ್ತದೆ. ಈ ಶಾಸನದ ಉಲ್ಲೇಖದಿಂದ ಹಲರು ಪ್ರಬಲ ವ್ಯಾಪಾರಿಗಳಾಗಿದ್ದು, ಹಲವು ರೀತಿಯ ಸರಕುಗಳ ವ್ಯಾಪಾರ ನಡೆಸುತ್ತಿದ್ದರೆಂದು ತಿಳಿಯುತ್ತದೆ. ಅವರು ತಮ್ಮ ಅನೇಕ ಸುಂಕಗಳನ್ನು ದೇವರ ಕೆಲಸಕ್ಕೆ ಬಿಟ್ಟು ಕೊಟ್ಟ ಬಗ್ಗೆ ತಿಳಿದು ಬರುತ್ತದೆ.

ಕ್ರಿ.ಶ ೧೩೧೨ರ ಬಾರ್ಕೂರಿನ ೨ನೆಯ ಹರಿಹರನ ಶಾಸನವು[೧೦೧] ದಾನವನ್ನು ರಕ್ಷಿಸುವ ಹೊಣೆಯನ್ನು ಮಣಿಗಾರಕೇರಿಯ ಇತರ ವ್ಯಾಪಾರಿಗಳೊಂದಿಗೆ ಸಮಸ್ತ ಹಲರದ್ದೆಂದೂ ಹೇಳಿದೆ.

ಅಂದರೆ ಆ ಕೆಲಸ ಅಲ್ಲಿದ್ದ ಎಲ್ಲ ಹಲರದು ಎಂದು ಅರ್ಥೈಸಬಹುದು. ಇದು ಹಲರು ಒಂದು ಸಮೂಹವಾಗಿದ್ದರೆಂದು ತಿಳಿಯಲು ಸಹಾಯಕವಾಗಿದೆ. ಅಂತೆಯೇ ಬಿದಿರೆಯ ಸಮಸ್ತಹಲರು[೧೦೨] ವೇಣುಪುರದ ಸಮಸ್ತಹಲರು[೧೦೩], ಮೂಡಬಿದರೆ ಶಾಸನದಲ್ಲಿ ಸಮಸ್ತಹಲರು[೧೦೪] ಎಂಬ ಉಲ್ಲೇಖಗಳು ಬರುತ್ತವೆ. ಶಾಸನಗಳಲ್ಲಿ ಬರುವ ಈ ಸಮಸ್ತ ಹಲರುಗಳಲ್ಲಿ ಕರಾವಳಿಯ ಬಾರ್ಕೂರು, ಬಸರೂರು, ಕಾರ್ಕಳ, ಮೂಡಬಿದರೆಗಳ ಹಲರು ಪ್ರಖ್ಯಾತರು[೧೦೫]. ರಾಜನ ಆಸ್ಥಾನದಲ್ಲಿ ಇವರಿಗೆ ಗೌರವದ ಸ್ಥಾನಪ್ರಾಪ್ತವಾಗಿತ್ತು. ತಮಗೆ ಬೇಕಿದ್ದವರನ್ನೇ ಸಿಂಹಾಸನದ ಮೇಲೆ ಕುಳ್ಳಿರಿಸಿಕೊಂಡದ್ದು ಇದೆ. ಇಂಥಹ ಪ್ರಮುಖ ರಾಜಕೀಯದ ಆಟ ನಡೆಸುವಷ್ಟು ಪ್ರಬಲವಾಗಿದ್ದ ಇವರು ಬಲಾಢ್ಯರಾದ ವರ್ತಕರ ಕೂಟವಾಗಿದ್ದರು.

೬.೨..೧.೮ ಅಯ್ಯಾವೊಳೆ ಐನೂರ್ವರು

ಪ್ರಾಚೀನ ಕರ್ನಾಟಕದ ವ್ಯಾಪಾರಿ ಸಂಘಗಳಲ್ಲಿ ಅಯ್ಯಾವೊಳೆ ಐನೂರ್ವರು ಪ್ರಖ್ಯಾತರು[೧೦೬]. ಇದು ವ್ಯಾಪಕವೂ ಪ್ರಬಲವೂ ಆಗಿದ್ದ ವರ್ತಕರ ಸಂಘಟನೆಯಾಗಿತ್ತು. ಇವರ ಕೇಂದ್ರ ಸ್ಥಳವಾದ ಐಹೊಳೆಯಿಂದ ಇವರನ್ನು ಗುರುತಿಸಲಾಗುತ್ತಿತ್ತು. ಪ್ರಸ್ತುತ ಬಾಗಲಕೋಟೆ ಜಿಲ್ಲೆಯ ಐಹೊಳೆ[೧೦೭]ಯು ಅಂದಿನ ಅಯ್ಯವೊಳೆಯಾಗಿತ್ತು. ಈ ಸಂಘಟನೆ ಎಷ್ಟೊಂದು ಪ್ರಬಲವಾಗಿತ್ತೆಂದರೆ, ದಕ್ಷಿಣ ಭಾರತದಾದ್ಯಂತ ಇವರು ತಮ್ಮ ಚಟುವಟಿಕೆನ್ನು ನಡೆಸುತ್ತಿದ್ದರು[೧೦೮]. ವ್ಯಾಪಾರವೆ ಇವರ ಉದ್ದೇಶವಾಗಿದ್ದರೂ, ಅದರೊಂದಿಗೆ ಸಂಸ್ಕೃತಿಯನ್ನು ಪಸರಿಸಿದರು. ಇವರು ದೇಶ-ವಿದೇಶಗಳಲ್ಲಿ ತಮ್ಮ ಸರಕುಗಳನ್ನು ಚಕ್ಕಡಿಗಾಡಿಗಳಲ್ಲಿ ಹೇರಿಯೂ, ಹೇರುಗಳ ಮೇಲೆ ಹೊತ್ತೋಯ್ದು ಮಾರುತ್ತಿದ್ದರು. ಇವರು ಬ್ರಹ್ಮ, ವಿಷ್ಣು, ಮಹೇಶ್ವರರ ಆರಾಧಕರಾಗಿದ್ದರು ಒಂದು ಬೌದ್ಧ ವಿಹಾರಕ್ಕೆ ದತ್ತಿಯನ್ನು ಬಿಟ್ಟುಕೊಟ್ಟಿದ್ದಾರೆ. ಇವರು ತಮ್ಮ ಶಾಸ್ತ್ರವನ್ನು ಗುಡ್ಡಶಾಸ್ತ್ರ ಎಂದು ಕರೆದುಕೊಂಡಿದ್ದಾರೆ[೧೦೯]. ಇದರಿಂದ ಇವರು ವ್ಯಾಪಾರಿ ಚಟುವಟಿಕೆಗಳು ಧಾರ್ಮಿಕ ಚಟುವಟಿಕೆಗಳಂತೆ ಗುರುತಿಸಿಕೊಂಡಿದ್ದಾರೆ ಎಂದು ಸ್ಪಷ್ಟಗೊಳ್ಳುತ್ತದೆ.

ಈ ವ್ಯಾಪಾರಿ ಗಣವನ್ನು ಗುರುತಿಸುವಾಗ, ಬರುವ 'ಐನೂರ್ವರು' ಎಂಬುದನ್ನು ಇವರ ಪ್ರಾಚೀನರನ್ನು ಉಲ್ಲೇಖಿಸುತ್ತಿರಬಹುದು. ಅಥವಾ ಸಂಘದ ಆರಂಭ ಕಾಲದಲ್ಲಿದ್ದ ಇವರ ಸಂಖ್ಯೆ ಇದಾಗಿರಬಹುದು. ಈ ಐನೂರ್ವರು ಎಂಬುವರು ವರ್ತಕರ ಪ್ರಾಚೀನ ವಂಶಸ್ಥರೇ ಹೊರತು ಶಾಸನಗಳು ರಚಿತವಾದ ಸಮಯದಲ್ಲಿ ಬಾಳುತ್ತಿದ್ದವರಲ್ಲ[೧೧೦] ಎಂಬ ಅಭಿಪ್ರಾಯವು ಇದನ್ನು ಸಮರ್ಥಿಸುತ್ತದೆ.

ಗುಡ್ಡಧ್ವಜ ಎನ್ನುವುದು ಇವರು ಬಳಸುತ್ತಿದ್ದ ಧ್ವಜವಾಗಿರಬೇಕು. ವಿದ್ವಾಂಸರು ಈ ಗುಡ್ಡಧ್ವಜವು ಐನೂರ್ವರು ತಮ್ಮ ವ್ಯಾಪಾರದ ಸಂದರ್ಭದಲ್ಲಿ ತಮ್ಮೊಂದಿಗೆ ಕೊಂಡೊಯ್ಯುತ್ತಿದ್ದ

ನಿಶಾನೆಯಾಗಿರಬೇಕು ಎಂದು ಊಹಿಸಿದ್ದಾರೆ. ಈ ಕುರಿತು ವಿದ್ವಾಂಸರಲ್ಲಿ ಯಾವುದೇ ಭಿನ್ನಾಭಿಪ್ರಾಯ ಕಂಡುಬರುತ್ತಿಲ್ಲ[೧೧೧]. ಈ ಗುಡ್ಡಧ್ವಜವು ಕೈಲಾಸ ಪರ್ವತ ಚಿತ್ರಗಳನ್ನೊಳಗೊಂಡ ನಿಶಾನೆ ಎಂದೂ ತಿರ್ಮಾನಿಸಿದ್ದಾರೆ.

ಈ ಅಯ್ಯವೊಳೆ ಐನೂರ್ವರ್ ವೃತ್ತಿ ಸಂಘದ ಆರಂಭವನ್ನು ಶಾತವಾಹನರ ಕಾಲಕ್ಕೆ ಕೊಂಡೊಯ್ಯಲಾಗಿದೆ[೧೧೨]. ದಕ್ಷಿಣದಲ್ಲಿ ಆಳಿದ ಶಾತವಾಹನರು ಹೊರಡಿಸಿದ ನಾಣ್ಯಗಳ ಮೇಲೆ ಮೂರು ಶಿಖರಗಳು, ಶೀಖರಗಳ ನೆತ್ತಿಯ ಮೇಲೆ ಒಂದು ಕೋರೆಚಂದ್ರವಿರುತ್ತದೆ[೧೧೩]. ಬಹುಶಃ ಈ ಪರ್ವತಲಾಂಚನವೇ ಅಯ್ಯಾವೊಳೆ ಐನೂರ್ವರಿಗೆ ಬಳುವಳಿಯಾಗಿ ಬಂದು, ಗುಡ್ಡಧ್ವಜ ಹೆಸರಿನಿಂದ ಪ್ರಸಿದ್ಧಿ ಪಡೆದಿರಬೇಕು ಎಂದು ವಿದ್ವಾಂಸರ ಅಭಿಪ್ರಾಯ.

ಶಾತವಾಹನರು ದಕ್ಷಿಣ ಭಾರತದಲ್ಲಿ ಮೌರ್ಯರ ನಂತರ ಆಳಿದ ರಾಜ ಮನೆತನ. ಬನವಾಸಿ, ಬೆಳಗಾಂವ್ ಜಿಲ್ಲೆಯ ವಡಗಾಂವ್, ಮಾಧಾಪುರ, ಸನ್ನತಿ ಮುಂತಾದವು ಕರ್ನಾಟಕದಲ್ಲಿ ಶಾತವಾಹನರ ನೆಲೆಗಳಾಗಿದ್ದವು. ಬ್ರಹ್ಮಗಿರಿ, ಕೊಪ್ಪಳ, ಸೋಂದಾ, ಹಂಪಿ ಮುಂತಾದೆಡೆ ಶಾತವಾಹನರ ಕಾಲದ ಕೆಲವು ಅವಶೇಷಗಳು ದೊರೆತಿವೆ[೧೧೪]. ಹೊನ್ನಾವರದ ಹೈಗುಂದದಲ್ಲಿ ಶಾತವಾಹನರ ಕಾಲದ ಕೆಲವು ಅವಶೇಷಗಳು, ಸುಡಾವೆ ಮಣ್ಣಿನ ಆಟಿಕೆಗಳು ದೊರೆತಿವೆ. ಉತ್ತರ ಕನ್ನಡದ ಯಲ್ಲಾಪುರದ ಕುಂದುರಿನಲ್ಲಿ ದೊಡ್ಡ ಸಂಖ್ಯೆಯಲ್ಲಿ ಶಾತವಾಹನರ ಕಾಲದ ನಾಣ್ಯಗಳು ದೊರೆತಿವೆ. ಅರಸು ಮನೆತನವಾಗಿದ್ದರೂ ವ್ಯಾಪಾರ–ವ್ಯವಹಾರಗಳಿಗೆ ಈ ವಂಶದವರು ಹೆಚ್ಚಾಗಿ ತೊಡಗಿದ್ದರು. ಇವರ ಹೆಸರುಗಳಲ್ಲಿ ಬರುವ ಕರ್ಣಿ ಎಂಬ ಅಂತ್ಯ ಪದವು ಕರಣಿ, ಕರಣಿಕ ಎಂಬ ಅರ್ಥವನ್ನು ಹೊಂದಿದ್ದು, ಇವರು ನಡೆಸುತ್ತಿದ್ದ ವ್ಯಾಪಾರಿವೃತ್ತಿಯ ಜ್ಯೋತಕ[೧೧೫] ಎಂದು ವಿದ್ಯಾಂಸರು ಅಭಿಪ್ರಾಯಪಟ್ಟಿದ್ದಾರೆ. ಈ ಶಾತವಾಹನರ ನಾಣ್ಯಗಳಲ್ಲಿ ಕಂಡುಬರುವ ಶಿಖರಗಳು ಗುಡ್ಡಧ್ವಜದ ಹುಟ್ಟಿಗೆ ಕಾರಣವಾಗಿರಬೇಕೆಂದು ವಿದ್ವಾಂಸರ ತೀರ್ಮಾನ. ಅಯ್ಯಾವೊಳೆ ಐನೂರ್ವರು ಭಗವತೀಲಬ್ಧವರ ಪ್ರಸಾದರೆಂದು ಖ್ಯಾತರಾಗಿದ್ದು, ಇದು ಐಹೊಳೆಯ ಇಂದಿನ ದುರ್ಗಾದೇವಾಲಯವೇ ಇವರ ಭಗವತೀ ದೇವಾಲಯವಾಗಿರಬಹುದೆಂದು ವಿದ್ವಾಂಸರು ಊಹಿಸಿದ್ದಾರೆ. ಇದರ ವಿನ್ಯಾಸವೂ ಈ ಊಹೆಯನ್ನು ಸಮರ್ಥಿಸುತ್ತದೆ. ಶಾತವಾಹನರು ಆರಂಭದಲ್ಲಿ ವ್ಯಾಪಾರಿಗಳಾಗಿದ್ದೂ ಮುಂದೆ ತಾವೇ ಪ್ರಬುಗಳಾದರೆಂಬವಾದವೂ ಇದೆ. ವ್ಯಾಪಾರ–ವೃತ್ತಿಯಿಂದ ಬರುತ್ತಿದ್ದ ಲಾಭವು ರಾಜ್ಯ ನಿರ್ಮಿಸುವಲ್ಲಿ ಸಹಕರಿಸಿತ್ತೆಂದು ಊಹಿಸಬಹುದು. ಸಾರ್ಥ ಶಬ್ದವನ್ನು ಒಂಟೆಯ ಮೇಲೆ ಹೇರನ್ನು ಹಾಕಿ ವ್ಯಾಪಾರ ನಡೆಸುವ ಗುಂಪು ಅಂದರೆ ಒಂಟೆಯ ಮೇಲೆ ಹೇರನ್ನು ಹೊತ್ತು ಸಾಗಿಸುತ್ತಿದ್ದ ವ್ಯಾಪಾರಿಗಳು, ಸಾರ್ಥವಾಹರು ಎಂದೂ ಹೇಳಲಾಗಿದೆ.

ಶಾತವಾಹನರ ಕಾಲದಲ್ಲಿ ದಕ್ಷಿಣದ ಬಂದರುಗಳು ಪ್ರಗತಿ ಹೊಂದಿದ್ದವು. ಇವರು ಅನೇಕ ವ್ಯಾಪಾರಿ–ಪಟ್ಟಣಗಳನ್ನು ನಿರ್ಮಿಸಿದ್ದರು. ಪೂರ್ವ ಮತ್ತು ಪಶ್ಚಿಮ ತೀರಗಳಲ್ಲಿ ಅನೇಕ ರೇವುಪಟ್ಟಣಗಳಿದ್ದವು. ಬ್ರೋಚ್, ಸೋಪಾರ, ಕಲ್ಯಾಣ, ಮಂಗಳೂರು, ಮಲ್ಪೆ, ಭಟ್ಕಳ, ವೈಜಯಂತಿ ಹೊನ್ನಾವರಗಳು ಪ್ರಖ್ಯಾತ ವ್ಯಾಪಾರ ಬಂದರುಗಳಾಗಿದ್ದವು. ಈ ಬಂದರುಗಳ ಮೂಲಕ ಗ್ರೀಸ್, ರೋಮ್, ಅರಬ್ ಮತ್ತು ಆಫ್ರಿಕಾದ ದೇಶಗಳೊಂದಿಗೆ ವ್ಯಾಪಾರ ನಡೆಸುತ್ತಿದ್ದವು. ಚಿತ್ರದುರ್ಗ ಜಿಲ್ಲೆಯ ಬ್ರಹ್ಮಗಿರಿ ಹಾಗೂ ಚಂದ್ರವಳ್ಳಿ ಉತ್ಖನನಗಳಲ್ಲಿ ಮತ್ತು ಬೆಂಗಳೂರಿನಲ್ಲಿ ಶಾತವಾಹನರ ಹಾಗೂ ಅವರ ಮಾಂಡಳಿಕ ಅರಸರ ನಾಣ್ಯಗಳೂ, ಅಗಷ್ಟಸ್ (ಕ್ರಿ.ಪೂ. ೨೭ ಕ್ರಿ.ಶ ೧೪) ಟೈಬೀರಿಯಸ್ (ಕ್ರಿ.ಶ. ೧೪–೩೭) ಮುಂತಾದ ರೋಮನ್ ಚಕ್ರವರ್ತಿಗಳ ನಾಣ್ಯಗಳು[೧೧೬] ದೊರೆತಿವೆ. ಇದು ಶಾತವಾಹನರು ಕಡಲೋತ್ತರ ವ್ಯಾಪಾರ ನಡೆಸುತ್ತಿದ್ದ ಬಗ್ಗೆ ತಿಳಿಯಲು ಸಹಾಯಕವಾಗಿದೆ.

ಶಾತವಾಹನರು ಕಾರವಾರ, ಮಿರ್ಜಾನ–ತದಡಿ, ಬೇಲಿಕೇರಿ, ಕುಮಟಾ, ಹೊನ್ನಾವರ ಬಂದರುಗಳನ್ನು ತಮ್ಮ ಕಡಲೋತ್ತರ ವ್ಯಾಪಾರಕ್ಕಾಗಿ ಬಳಸಿಕೊಂಡಿದ್ದರು. ಇವರ ಕಾಲದ ನಾಣ್ಯಗಳಲ್ಲಿ ಕಂಡುಬರುವ ಹಡಗಿನ ಚಿತ್ರಗಳು ಇವರು ಕಡಲೋತ್ತರ ವ್ಯಾಪಾರ ನಡೆಸುತ್ತಿದ್ದ ಬಗ್ಗೆ ಖಚಿತ ಸಾಕ್ಷಿ ಒದಗಿಸುತ್ತವೆ. ಶಾತವಾಹನರು ತಮ್ಮ ನಾಣ್ಯಕ್ಕೆ ಚಿನ್ನಕ್ಕಿಂತ ಹೆಚ್ಚಾಗಿ ತಾಮ್ರ, ಸೀಸ ಹಾಗೂ ಬೆಳ್ಳಿಯನ್ನು ಬಳಸುತ್ತಿದ್ದರು[೧೧೭]. ತಾಮ್ರ, ಸೀಸಗಳನ್ನು ವಿದೇಶಗಳಿಂದ ತರಿಸಿಕೊಳ್ಳುತ್ತಿದ್ದರು.

ಶಾತವಾಹನರ ಕಾಲದಲ್ಲಿ ವಿವಿಧ ವೃತ್ತಿಗಳ ಸಂಘಗಳು ಸ್ಥಾಪನೆಗೊಂಡಿದ್ದವು. ಈ ವೃತ್ತಿ ಸಂಘಗಳು ಸ್ವಾಯತ್ತ ಸಂಸ್ಥೆಗಳಂತೆ ಕಾರ್ಯನಿರ್ವಹಿಸುತ್ತಿದ್ದವು. ಅವು ಆಧುನಿಕ ಬ್ಯಾಂಕುಗಳಂತೆ ವ್ಯವಹಾರ–ನಡೆಸುತ್ತಿದ್ದವು[೧೧೮]. ಠೇವಣಿಗಳನ್ನು ಸ್ವೀಕರಿಸುವುದು, ಬಡ್ಡಿಗೆ ಸಾಲ ನೀಡುವುದು, ವಿವಿಧ ವ್ಯಾಪಾರಿ ವೃತ್ತಿಯವರಿಗೆ ಹಣದ ಸಹಾಯ ಮಾಡುವುದು ಮುಂತಾದ ಚಟುವಟಿಕೆ ನಡೆಸುತ್ತಿದ್ದರು. ಇವರ ಈ ವೃತ್ತಿಯು ವ್ಯಾಪಕವಾಗಿ ಬೆಳೆಯಿತಲ್ಲದೆ, ದೂರ ದೂರದ ದೇಶಗಳಿಗೂ ವ್ಯಾಪಾರ ವಿಸ್ತರಿಸುವಷ್ಟು ಬೆಳೆದಿದ್ದರು. ಧಾರ್ಮಿಕ ಕಾರ್ಯಗಳಿಗೆ ಅನೇಕ ರೀತಿಯ ಸಹಾಯ ನೀಡುತ್ತಿದ್ದರು. ಗುಹಾಲಯ, ದೇವಾಲಯ, ಚೈತ್ಯ ಹಾಗೂ ಮಠಗಳ[೧೧೯] ನಿರ್ಮಾಣ ಮತ್ತು ಇವುಗಳಿಗೆ ದಾನದತ್ತಿ ನೀಡುವುದು ಮಾಡುತ್ತಿದ್ದರು. ಹೀಗೆ ಕರಾವಳಿ ಬಂದರಿನ ಮತ್ತು ಘಟ್ಟ ಪ್ರದೇಶದ ನಡುವೆ ಹಾಗೂ ವಿದೇಶಗಳ ನಡುವೆ ಶ್ರೇಣಿಗಳ ಮೂಲಕ ಆರಂಭವಾದ ವ್ಯಾಪಾರಿ ಸಂಘಟನೆಗಳು ಬೆಳೆದು ಐಹೊಳೆಯ ಐನೂರ್ವರು ಹೆಸರಿನ ವರ್ತಕಶ್ರೇಣಿ ಅಸ್ತಿತ್ವಕ್ಕೆ ಪ್ರಚೋದನೆ ನೀಡಿರಬಹುದು[೧೨೦] ಎಂಬ ವಿಚಾರವು ನಿಜವಾಗಿದ್ದಂತಿದೆ.

ಶಾತವಾಹನರ ಅಂತ್ಯ ೪ನೇ ಶತಮಾನವಾಗಿದೆ. ಆದರೆ ಐಹೊಳೆ ಐನೂರ್ವರ ಉಲ್ಲೇಖವು ೫ನೇ ಶತಮಾನವಾಗಿದೆ. ಅಂದರೆ ಒಂದು ರಾಜಕೀಯ ಆಡಳಿತದ ಅಂತ್ಯ ದೊಂದಿಗೆ ಈ ವ್ಯಾಪಾರಿ ಗುಂಪುಗಳು, ಶ್ರೇಣಿಗಳು ಒಂದಾಗಿ ವ್ಯವಸ್ಥಿತವಾದ ಒಂದು ಸಂವಿಧಾನ(ಗುಡ್ಡಶಾಸ್ತ್ರ)ವನ್ನು ರಚಿಸಿಕೊಂಡು, ನ್ಯಾಯಪರವೂ, ಮೋಸರಹಿತವೂ ಆದ ವ್ಯಾಪಾರವನ್ನು ಆರಂಭಿಸಿರುವ ಸಾಧ್ಯತೆಯಿದೆ. ಈ ಗಣದ ನಿರ್ಮಾಣಕ್ಕೆ ಆರಂಭದಲ್ಲಿ ಐಹೊಳೆಯನ್ನು ಆಯ್ದುಕೊಂಡಿರಬೇಕೆಂದು ಊಹಿಸಲಾಗಿದೆ. ಶಾತವಾಹನರ ಕೇಂದ್ರಗಳ ಹತ್ತಿರ ಮತ್ತು ಹೊಸರಾಜ ಪ್ರಭುತ್ವಗಳ ಕೇಂದ್ರವಾಗಿದ್ದ ಐಹೊಳೆಯು ಪಾರಂಪರಿಕ ಖ್ಯಾತಿಯೊಂದಿಗೆ ವ್ಯಾಪಾರಿ ಸಂಘಗಳು ಸಂಘಟಿತಗೊಂಡವು.

ವಿವಿಧ ವೃತ್ತಿಯವರಿಂದ ಕೂಡಿರುವುದು ಹಾಗೂ ವಸ್ತುಗಳನ್ನು ವಿವಿಧ ಪ್ರದೇಶಗಳಿಗೆ ಸಾಗಿಸಿ ಮಾರಾಟ ಮಾಡುವ ಕ್ರಿಯಾಶೀಲತೆ, ಉತ್ಸಾಹ ಹೊಂದಿರುವುದೂ ಈ ಹೊಸ ಸಂಘಟನೆಯ ಬೆಳವಣಿಗೆಗೆ ಕಾರಣವಾಯಿತು. ಇವರು ತಮ್ಮ ಕಾರ್ಯಗಳ ಮೊದಲು ಅಥವಾ ವ್ಯಾಪಾರ–ವಹಿವಾಟಿನಲ್ಲೇನಾದರು ತೊಂದರೆ–ದೋಷ ಕಂಡು ಬಂದಲ್ಲಿ ಎಲ್ಲ ಸದಸ್ಯರ ಸಭೆ ಕರೆಯುತ್ತಿದ್ದರು. ಇಂಥಹ ಸಭೆಗಳು ಊರ ಸಭಾ ಮಂಟಪದಲ್ಲಿ, ದುರ್ಗಾಗುಡಿಯಲ್ಲಿ[೧೨೧], ಕನ್ನಿಕಾ ಪರಮೇಶ್ವರಿ[೧೨೨] ಮಂದಿರಗಳಲ್ಲಿ ಸೇರುತ್ತಿದ್ದರು. ಇಲ್ಲಿ ಸರ್ವಸಮ್ಮತವಾದ ತೀರ್ಮಾನಗಳನ್ನು ಕೈಗೊಳ್ಳುತ್ತಿದ್ದರು.

ಐಹೊಳೆ ಐನೂರ್ವರ ಸಂಘಟನೆಯಲ್ಲಿ ಇಂತಿಷ್ಟೇ ಸದಸ್ಯರು ಶ್ರೇಣಿಗಳಲ್ಲಿ, ಗಣಗಳಲ್ಲಿರಬೇಕೆಂಬ ತೀರ್ಮಾನ ಇರಲಿಲ್ಲ. ಆ ಊರಿನ ಅವಶ್ಯಕತೆ, ಆ ಸಾಮಗ್ರಿಗಳ ಲಭ್ಯತೆ ಹಾಗೂ ಆಸಕ್ತಿಯ ಮೇಲೆ ಈ ಸಂಖ್ಯೆ ತೀರ್ಮಾನವಾಗುತ್ತಿತ್ತು. ಈ ವ್ಯಾಪಾರಿಗಳು ಚೋಳ, ಚೇರ, ಪಾಂಡ್ಯ, ಮಲಯ, ಮಗಧ, ಪಾರಸ ಮತ್ತು ಕಾಂಭೋಜ[೧೨೩] ಮುಂತಾದೆಡೆಗಳಲ್ಲಿ ವ್ಯಾಪಾರಕ್ಕೆ ಹೋಗುತ್ತಿದ್ದರು. ಇವರು ಭೂಮಾರ್ಗ ಮತ್ತು ಕಡಲ ಮಾರ್ಗವಾಗಿ ತಮ್ಮ ವ್ಯಾಪಾರ ನಡೆಸುತ್ತಿದ್ದರು[೧೨೪]. ಭೂಮಾರ್ಗವಾಗಿ ತಮ್ಮ ಸರಕುಗಳ ಸಾಗಾಣಿಕೆಗೆ. ಕತ್ತೆ, ಎಮ್ಮೆ, ಎತ್ತು, ಕೋಣ, ಕುದುರೆ, ಕುದುರೆಗಾಡಿ, ಚಕ್ಕಡಿಗಳನ್ನು ಬಳಸುತ್ತಿದ್ದರು. ಇವರ ವ್ಯಾಪಾರದಲ್ಲಿ ಆನೆಗಳು, ಉತ್ತಮ ತಳಿಯ ಕುದುರೆಗಳು, ಬೆಲೆಬಾಳುವ ಹರಳುಗಳು, ವನಸ್ಪತಿಗಳು ಸೇರಿದ್ದವು. ಇವರ ವ್ಯಾಪಾರವು ಸಗಟು ಮತ್ತು ಚಿಲ್ಲರೆಯಾಗಿತ್ತು. ವಿದೇಶಿ ವರ್ತಕರಿಗೆ ಸ್ಥಳೀಯ ಉತ್ಪನ್ನಗಳನ್ನು ಮಾರುತ್ತಿದ್ದರು.

ಕರ್ನಾಟಕದಲ್ಲಿ ಬಳ್ಳಾರಿ, ವಿಜಯಪುರ, ಹಾಸನ, ಶಿವಮೊಗ್ಗಾ, ಚಿತ್ರದುರ್ಗ, ಬೆಂಗಳೂರು, ಬನವಾಸಿ, ಬಳ್ಳಿಗಾವೆ, ಐಹೊಳೆ, ಹಂಪಿ. ಚಂದ್ರವಳ್ಳಿ, ಕಾರವಾರ, ಸೋಂದಾ ಮುಂತಾದವು ಇವರ ಪ್ರಮುಖ ಕೇಂದ್ರಗಳಾಗಿದ್ದವು.

೬.೨.೧.೯ ವೀರಬಣಂಜು

ಕರ್ನಾಟಕ ಕರಾವಳಿಯ ಉತ್ತರದ ಬಂದರುಗಳನ್ನು ಬಳಸಿ ವ್ಯಾಪಾರ ಮಾಡುವ ಅನೇಕ ಪೇಟೆ, ಪಟ್ಟಣಗಳಲ್ಲಿ ವೀರಬಣಂಜು ಎಂಬ ವರ್ತಕರ ಗುಂಪನ್ನು ಕಾಣಬಹುದಾಗಿದೆ. ಕರ್ನಾಟಕದ ಪ್ರಾಚೀನ ಕಾಲದ ಅಂತ್ಯದಲ್ಲಿ ಹಾಗೂ ಮಧ್ಯಕಾಲೀನ ರಾಜಮನೆತನಗಳ ಕಾಲದಲ್ಲಿ ಈ ವರ್ತಕ ಸಂಘವು ಪ್ರಭಲವಾಗಿತ್ತು.

ವಾಣಿಜ್ಯ ವೃತ್ತಿಯ ಈ ಗುಂಪಿನ ಸದಸ್ಯರು ವೀರರೆಂಬ ಅಭಿದಾನಕ್ಕೆ ಪಾತ್ರರಾಗಿದ್ದರು. ತಮ್ಮ ವ್ಯಾಪಾರದಿಂದ ಬಂದ ಆದಾಯದ ಬಹುಭಾಗಗಳನ್ನು ದಾನ, ಧರ್ಮಗಳಿಗಾಗಿ[೧೨೫] ಬಳಸುತ್ತಿದ್ದರು. ಸಮಾಜದ ಉನ್ನತಿಗಾಗಿ ಇವರ ಕೊಡುಗೆ ಅಪಾರವಾದದ್ದಾಗಿತ್ತು. ಉತ್ಪಾದನೆ–ಮಾರಾಟಗಳೆರಡೂ ಈ ಸಂಘದ ಕೆಲಸಗಳಾಗಿದ್ದವು. ವಿವಿಧ ವೃತ್ತಿಯವರು ಈ ಸಂಘಕ್ಕೆ ಸದಸ್ಯರಾಗಿದ್ದರು. ವೀರಬಣಂಜುಗಳಿಂದಾಗಿ ಹಾನಗಲ್ಲು ಕಾದಂಬರ ಕಾಲದಲ್ಲಿ ಬಂಕಾಪುರವು ಪಯಿಠಾಣಪುರ[೧೨೬] ಎಂದು ಖ್ಯಾತಿಗೊಂಡಿತ್ತು. ಪೈಠಾಣವು ಶಾತವಾಹನರ ಕಾಲಕ್ಕಾಗಲೇ ದೇಶ–ವಿದೇಶದ ವ್ಯಾಪಾರಿಗಳನ್ನು ಸೆಳೆದು ಪ್ರಖ್ಯಾತ ವ್ಯಾಪಾರಿ ಪಟ್ಟಣವಾಗಿತ್ತು.

ಈ ವ್ಯಾಪಾರಿ ಸಂಘದವರು ತಮ್ಮ ಸರಕುಗಳೊಂದಿಗೆ ಬಿಲ್ಲುಗಾರರ ದೊಡ್ಡ ತಂಡವನ್ನು ಕೊಂಡೊಯ್ಯುತ್ತಿದ್ದರು[೧೨೭]. ಈ ಬಿಲ್ಲುಗಾರರು ಮಾರ್ಗದಲ್ಲಿ ಉಂಟಾಗುತ್ತಿದ್ದ ದರೋಡೆಕಾರರ ಉಪಟಳ, ಕಾಡು ಪ್ರಾಣಿಗಳ ಹಾವಳಿಯಿಂದ ರಕ್ಷಣೆ ನೀಡುತ್ತಿದ್ದರು. ಪರಊರುಗಳಿಂದ ಬಂದ ಈ ವ್ಯಾಪಾರಿಗಳಿಗೆ ಇವರಿಂದ ಸೈನಿಕರ ಅಥವಾ ದರೋಡೆಕೋರರ ಭಯವಾಗಲಿ, ಯಾವುದೇ ತೊಂದರೆಯಾಗಲಿ ಅಥವಾ ವ್ಯಾಪಾರದಲ್ಲಿ ವಂಚನೆಯಾಗಲಿ ಉಂಟಾಗುತ್ತಿರಲಿಲ್ಲ.

ಈ ವೀರಬಣಂಜುಗಳು ಅತ್ಯಂತ ಪ್ರಭಾವಶಾಲಿ[೧೨೮] ವ್ಯಾಪಾರಿಗಳಾಗಿದ್ದರು. ಸಾಮಾನ್ಯರಿಗೆ ಅಗತ್ಯವಾದ ದಿನಬಳಕೆಯ ಸಾಮಗ್ರಿಗಳು, ಶ್ರೀಮಂತರಿಗೆ ವಿಲಾಸಿ ವಸ್ತುಗಳನ್ನು ಇವರು ಒದಗಿಸುತ್ತಿದ್ದರು. ರಾಜನ ಮೇಲೆ ಪ್ರಭಾವ ಬೀರ ಬಲ್ಲವರಾಗಿದ್ದರು[೧೨೯]. ರಾಜನು ಇವರಿಗೆ ತುಂಬಾ ಗೌರವ ನೀಡುತ್ತಿದ್ದನು. ಈ ವ್ಯಾಪಾರಿಗಳಲ್ಲಿ ಬಣಜಿಗರೈನೂರ್ವರ್, ಗವರೆಗಳೈನೂರ್ವರ್ ಮುಂತಾದ ವಿಭಾಗಗಳಿದ್ದವು. ಇವುಗಳೆಲ್ಲಾ ಐಹೊಳೆ ವರ್ತಕ ಸಂಘದ ವಿಭಾಗಗಳಂತೆ ಕಾಣುತ್ತವೆ.

೬.೨.೧.೧೦ ನಾನಾದೇಶಿಯರು, ಉಭಯನಾನಾದೇಶಿಯರು

ನಾನಾದೇಶಿ–ಉಭಯನಾನಾದೇಶಿಗಳು ವ್ಯಾಪಾರಿ ಪ್ರಕಾರಗಳಲ್ಲ ಎಂದು ವಿದ್ವಾಂಸರು[೧] ತೀರ್ಮಾನಿಸಿದ್ದಾರೆ. ಆದರೆ ಇವರು ವ್ಯಾಪಾರ–ವ್ಯವಹಾರಗಳಲ್ಲಿ ತೊಡಗಿದ್ದವರು. ನಾನಾದೇಶಿ–ಉಭಯನಾನಾದೇಶಿಗಳಾಗಿ, ಸೆಟ್ಟಿಗುತ್ತ, ನಕರ, ಮುಂಮ್ಮರಿದಂಡ, ವಡ್ಡವ್ಯವಹಾರಿ, ಹಲರು, ಎಳಮೆಗೊಳಗಾದವರು ಮತ್ತು ಹಂಜಮಾನ ಇತ್ಯಾದಿಗಳಿರಬಹುದು. ಅಂದರೆ, ಯಾವುದೇ

ವ್ಯಾಪಾರಿ ಗಣಗಳು ಜಲ-ನೆಲ ಮಾರ್ಗಗಳೆರಡರ ಮೂಲಕ ವ್ಯಾಪಾರ ಮಾಡುತ್ತಿದ್ದರೆ ಹಾಗೂ ದೇಶಿಯರು ಮತ್ತು ವಿದೇಶಗಳಲ್ಲಿ ವ್ಯಾಪಾರ ಮಾಡುತ್ತಿದ್ದರೆ ಅವರನ್ನು ನಾನಾದೇಶಿಯರು, ಉಭಯ ದೇಶಿಯರೆಂದು[೧೩೦] ಕರೆಯುತ್ತಿದ್ದರು. ಇವರನ್ನು ಉಭಯಮಾರ್ಗ, ಉಭಯ ದೇಶಿಯರು ಮುಂತಾಗಿ ಶಾಸನಗಳಲ್ಲಿ ಕರೆಯುತ್ತಿದ್ದದ್ದು ಕಾಣುತ್ತದೆ. ಇವರು ಬಹುಶಃ ಹಲವು ರಾಜರ ರಾಜ್ಯಗಳಿಗೆ ವ್ಯಾಪಾರಕ್ಕೆ ಹೋಗುತ್ತಿದ್ದಿರಬಹುದು. ಮತ್ತು ದ್ವಿಭಾಷಿಗಳಾಗಿ ವಿದೇಶಿ ವರ್ತಕರರೊಂದಿಗೆ ತೀರುಗುತ್ತಿದ್ದವರಾಗಿರಬಹುದು.

ಕರ್ನಾಟಕದ ಬಂದರುಗಳು ಭರದಿಂದ ವ್ಯಾಪಾರ-ವಹಿವಾಟು ನಡೆಸುತ್ತಿದ್ದಾಗ, ದೇಶ, ವಿದೇಶಗಳ ವ್ಯಾಪಾರಿಗಳಿಂದ ತುಂಬಿರುತ್ತಿತ್ತು. ಇಂಥಹ ಬೃಹತ್ ವ್ಯಾಪಾರಿ ಕೇಂದ್ರದಲ್ಲಿ ಸ್ಥಳೀಯ ಸರಕುಗಳನ್ನು ವಿದೇಶಕ್ಕೆ ಕೊಂಡೊಯ್ಯುವ ಹಾಗೂ ವಿದೇಶಿ ಸರಕುಗಳನ್ನು ಭಾರತಕ್ಕೆ ತರುವ ವ್ಯಾಪಾರಿಗಳಿದ್ದರು. ಜೊತೆಯಲ್ಲಿ ಪಶ್ಚಿಮ ಹಾಗೂ ಪೂರ್ವ ಕರಾವಳಿಯ ಬಂದರುಗಳಿಗೆ ಸಂಪರ್ಕ ಕಲ್ಪಿಸುವ ವ್ಯಾಪಾರಿಗಳಿದ್ದರು. ಸೋಪಾರ, ಕಲಿಯಾಣ. ಬ್ರೋಚ್, ನಿಲೇಶ್ವರ ಮುಂತಾದ ರಾಜ್ಯದ ಹೊರಗಿನ ಬಂದರುಗಳಿಗೆ ಸರಕು ಸಾಗಿಸುವ ಮತ್ತು ಅಲ್ಲಿಂದ ವಸ್ತುಗಳನ್ನು ತರುವ ದೊಡ್ಡ ವ್ಯಾಪಾರಿ ದಂಡು ಇತ್ತು. ಅಂತೆಯೇ ಅಂತಾರಾಜ್ಯ ವ್ಯಾಪಾರಿಗಳ ನಡುವೆ ಕರ್ನಾಟಕದ ಬಂದರುಗಳಲ್ಲಿ ತಂಗುವುದು, ಅಗತ್ಯವಿದ್ದ ಸರಕುಗಳನ್ನು ಮಾರುವುದು ಅಥವಾ ಕೊಳ್ಳುವುದು ಮಾಡುತ್ತಿದ್ದರು. ಇಂಥಹ ವ್ಯಾಪಾರಿ ಗಣವನ್ನು ನಾನಾದೇಶಿಯರು-ಉಭಯನಾನಾದೇಶಿಗಳೆಂದು ಕರೆಯುತ್ತಿದ್ದರು.

‘ಉಭಯನಾನಾದೇಶಿ’ ಶಬ್ಧವನ್ನು ವಿದ್ವಾಂಸರು ಅರ್ಥೈಸಿದ್ದನ್ನು ಮೇಲೆ ನೀಡಲಾಗಿದೆ. ಅದು ಜಲ-ನೆಲ ಮಾರ್ಗಗಳೆರಡನ್ನು ಬಳಸುವ ವ್ಯಾಪಾರಿಗಳು ಎಂದು ಹೇಳಲಾಗಿದೆ. ಕರಾವಳಿಯ ಪ್ರದೇಶದಲ್ಲಿ ಈ ಎರಡೂ ಮಾರ್ಗಗಳನ್ನು ಬಳಸುವುದು ಅನಿವಾರ್ಯವಾಗಿತ್ತು. ಹೀಗೆ ಎರಡು ಮಾರ್ಗ ಬಳಸುವುದರಿಂದ ಕಡಿಮೆ ಖರ್ಚು ಹಾಗೂ ಕಡಿಮೆ ಶ್ರಮದಿಂದ ಸರಕುಗಳನ್ನು ಅಗತ್ಯ ಸ್ಥಳಗಳಿಗೆ ತಲುಪಿಸಬಹುದಾಗಿತ್ತು. ಈ ಶಬ್ದವನ್ನು ಇನ್ನೊಂದು ರೀತಿಯಲ್ಲಿ ಅರ್ಥೈಸಿದ್ದರೆ, ಈ ವ್ಯಾಪಾರಿ ಗುಂಪು ದೇಶದಲ್ಲಿ ಹಾಗೂ ಕಡಲೋತ್ತರ ದೇಶಗಳಲ್ಲಿ ವ್ಯಾಪಾರ ನಡೆಸುತಿತ್ತೆಂದು ತಿಳಿಯಬಹುದು.

ಕಡಲೋತ್ತರ ದೇಶಗಳಿಂದ ಸರಕುಗಳನ್ನು ದೊಡ್ಡ ದೊಡ್ಡ ಹಡಗುಗಳ ಮೂಲಕ ಕರ್ನಾಟಕದ ಬಂದರುಗಳಿಗೆ ತಲುಪಿಸುವುದು, ಹಾಗೂ ಕಡಲ ಮೂಲಕ ಬಂದ ಸರಕುಗಳನ್ನು ಘಟ್ಟದ ಪ್ರದೇಶಗಳಿಗೆ ತಲುಪಿಸಿವುದು ನಾನಾದೇಶಿಗಳ ಕೆಲಸವಾಗಿತ್ತು. ಹಾಗೇ ಘಟ್ಟ ಪ್ರದೇಶದ ಸರಕುಗಳನ್ನು ಬಂದರಿಗೆ ತಲುಪಿಸಿ ವಿದೇಶಗಳಿಗೆ ತಲುಪಿಸುವುದೂ ಇವರದೇ ಕೆಲಸವಾಗಿತ್ತು.

ಉಭಯನಾನಾದೇಶಿಗಳು ಕಡಲ ಮಾರ್ಗವಾಗಿ ತಂದ ಸರಕುಗಳನ್ನು, ಬಂದರನ್ನು ಸಂಪರ್ಕಿಸುವ ವಿವಿಧ ನದಿಗಳ ಮೂಲಕ ನೌಕೆಗಳಲ್ಲಿ ಸಾಧ್ಯವಾದಷ್ಟು ದೂರ ಸಾಗಿಸಿ, ಮುಂದೆ ಭೂಮಾರ್ಗವಾಗಿ ಬೇಕಾದ ಪಟ್ಟಣಗಳಿಗೆ, ಸಂತೆ ಪ್ರದೇಶಕ್ಕೆ ಸಾಗಿಸುವ ಕೆಲಸ ಮಾಡುತ್ತಿದ್ದರು. ಹಾಗೇ ಘಟ್ಟ ಪ್ರದೇಶದ ಹತ್ತಿ, ಶುಂಠಿ, ವನಸ್ಪತಿ, ಅಕ್ಕಿ ಮುಂತಾದ ವಸ್ತುಗಳನ್ನು, ಭೂಮಾರ್ಗವಾಗಿ ತಂದು, ನದಿಗಳ ಮೂಲಕ ಮುಂದೆ ಬಂದರಿಗೆ ಸಾಗಿಸುತ್ತಿದ್ದರು. ಹಲವು ಸಾರೆ ಇವರು ವಿದೇಶಿ ಹಾಗೂ ದೇಶಿಯ ವರ್ತಕರ ನಡುವೆ ದ್ವಿಭಾಷಿಗಳು, ಸಹಾಯಕರು ಆಗಿದ್ದ ಸಾಧ್ಯತೆಗಳಿವೆ.

ಕರ್ನಾಟಕದ ಎಲ್ಲ ಬಂದರುಗಳು ಇಂಥಹ ನಾನಾದೇಶಿ, ಉಭಯ ನಾನಾದೇಶಿಗಳಿಂದ ತುಂಬಿರುತ್ತಿದ್ದವು. ಇಲ್ಲಿಯ ಎಲ್ಲ ಬಂದರಗಳು ವಿವಿಧ ನದಿಗಳಿಂದ ಸಂಪರ್ಕ ಪಡೆದಿವೆ. ಕಾಳಿನದಿ ಕಾರವಾರ, ಅಘನಾಶಿನಿ, ಬೇಲಿಕೇರಿ, ತದಡಿ, ಗೋಕರ್ಣ, ಘಟ್ಟದ ಸಾಲುಗಳಲ್ಲಿ ಹುಟ್ಟುವ ಸಣ್ಣ ನದಿಗಳಿಂದ ಅಂಕೋಲಾ, ಕುಮಟಾಗಳು, ಶರಾವತಿಯಿಂದ ಹೊನ್ನಾವರ, ಸ್ಥಳೀಯ ನದಿ ಹೊಳೆಗಳಿಂದ ಭಟ್ಕಳ, ಬೈಂದೂರು, ಶಿರೂರುಗಳು, ಪಂಚಗಂಗಾವಳಿಯಿಂದ ಗಂಗೊಳ್ಳಿ, ಬಸರೂರು, ಹಟ್ಟಿಅಂಗಡಿ, ಕುಂದಾಪುರಗಳು, ಸೀತಾನದಿ, ಸುವರ್ಣಾ ನದಿಗಳಿಂದ ಉಡುಪಿ ಬಳಿಯ ಬಂದರುಗಳು, ಗುರುಪುರ ನೇತ್ರಾವತಿಗಳಿಂದ ಮಂಗಳೂರು ಬಂದರು ಸಂಪರ್ಕ ಪಡೆಯುತ್ತವೆ. ಇವುಗಳಲ್ಲಿ ಬಹುಸಂಖ್ಯೆಯ ನದಿಗಳು ನೌಕಾಯಾನಕ್ಕೆ ಉಪಯುಕ್ತವಾಗಿವೆ. ಈ ನದಿಗಳಲ್ಲಿ ಈಗಲೂ ಬಹುದೂರದವರೆಗೆ, ಅಂದರೆ ಬಂದರಿನಿಂದ ಘಟ್ಟಸಾಲುಗಳ ಬುಡದವರೆಗೆ ಸಲೀಸಾಗಿ ನೌಕಾಯಾನ ಕೈಗೊಳ್ಳಬಹುದು. ನೇರವಾಗಿ ಸಂಪತ್ ಭರಿತ ಪಶ್ಚಿಮ ಘಟ್ಟಕ್ಕೆ ಇವು ಸಂಪರ್ಕ ಕಲ್ಪಿಸುತ್ತಿದ್ದವು. ಗುಂಪಾಗಿ ನೌಕೆಗಳಲ್ಲಿ ಅರಣ್ಯ ಉತ್ಪನ್ನ, ಕೃಷಿ ಉತ್ಪನ್ನಗಳನ್ನು ತುಂಬಿಕೊಂಡು ಬಂದರುಗಳಿಗೆ ಹಾಯಿಗಳ ಸಹಾಯದಿಂದ ರಾತ್ರಿಯಾನದಲ್ಲಿ ತಲುಪುವುದು ಸುಲಭವಾಗಿತ್ತು. ಹಾಗೇಯೆ ಬಂದರುಗಳಿಗೆ ಬಂದ ಸರಕುಗಳನ್ನು ನೌಕೆಗಳ ಮೂಲಕ ಘಟ್ಟ ಪ್ರದೇಶದ ಪಟ್ಟಣಗಳಿಗೆ ನಗರಗಳಿಗೆ ಸಾಗಿಸುತ್ತಿದ್ದರು.

ನಾನಾದೇಶಿಗಳು ತಮ್ಮ ಚಟುವಟಿಕೆ ನಡೆಸಿದ ಪಟ್ಟಣಗಳು, ಊರುಗಳ ಹೆಸರುಗಳು ಶಾಸನಗಳಲ್ಲಿ[೧೩೧] ಬಂದಿವೆ. ಅಂತೆಯೇ ಹಲವು ನಾನಾದೇಶಿಗರ ಹೆಸರುಗಳೂ[೧೩೨] ಶಾಸನಗಳಲ್ಲಿ ಉಲ್ಲೇಖಿತಗೊಡಿವೆ. ಸವದತ್ತಿಯ[೧೩೩] ಶಾಸನವು ಹಲಸಿಗೆ ೧೨೦೦೦, ಬನವಾಸಿ ೧೨೦೦೦ ಮುಂತಾದ ಸ್ಥಳಗಳನ್ನು ಉಲ್ಲೇಖಿಸುತ್ತದೆ. ಇವುಗಳು ಕರ್ನಾಟಕದ ಪ್ರಮುಖ ಬಂದರುಗಳೊಂದಿಗೆ ಆರ್ಥಿಕ ಸಂಬಂಧಹೊಂದಿದ ಆಡಳಿತ ಪ್ರದೇಶಗಳಾಗಿವೆ. ಅಂತೆಯೇ ಬೆಳಗಾವಿ, ಬೆಳ್ಳಿಗಾವೆಗಳೂ ಬಂದರುಗಳೊಂದಿಗೆ ಸಂಪರ್ಕ ಪಡೆದ ಪಟ್ಟಣಗಳು. ಹಿರಿಯಂಗಡಿ ಶಾಸನ[೧೩೪]ದಲ್ಲಿ

ಉಭಯನಾನಾದೇಶಿಗಳು ರಾಜನ ಬೊಕ್ಕಸಕ್ಕೆ ತಮ್ಮ ವ್ಯಾಪಾರದ ಲಾಭದಲ್ಲಿ ತೆರಿಗೆ ಸಲ್ಲಿಸುತ್ತಿದ್ದ ಬಗ್ಗೆ ಉಲ್ಲೇಖವಿದೆ.

ನಾನಾದೇಶಿಗಳು, ಉಭಯನಾನಾದೇಶಿಗಳು ಬಹುಪರಾಕ್ರಮಿಗಳು. ಇವರು ತಮ್ಮ ಸಾಹಸಿ ಪ್ರವೃತ್ತಿಯೊಂದಿಗೆ ಬಹುದೂರದ ಪಟ್ಟಣಗಳಿಗೆ-ನಾಡುಗಳಿಗೆ, ವಿದೇಶಗಳಿಗೆ ಹೋಗಿ ವ್ಯಾಪಾರ ನಡೆಸುತ್ತಿದ್ದರು. ಸ್ಥಳೀಯರ ಉತ್ಪನ್ನಗಳಿಗೆ ಇವರಿಂದ ಉತ್ತಮ ಬೆಲೆ ದೊರಕುವಂತಾದರೆ, ಸ್ಥಳೀಯ ಜನರಿಗೆ ಬೇಕಿದ್ದ ವಸ್ತುಗಳು ಸಮಯಕ್ಕೆ ದೊರಕುತ್ತಿದ್ದವು. ಸ್ಥಳೀಯರ ಉತ್ತಮ ಬದುಕಿಗೆ ಇವರ ಕೊಡುಗೆ ಅಪಾರವಾಗಿತ್ತು.

೬.೨.೧.೧೧ ಹೊರಹಿನವರು

ತುಳುನಾಡಿನಲ್ಲಿ ಕಂಡು ಬರುವ ಒಂದು ವ್ಯಾಪಾರಿ ಸಮೂಹವೆಂದರೆ ಹೊರಹಿನವರು. ಇವರ ಹೆಸರಿನಿಂದ ಇವರು ಪರಸ್ಥಳದವರೆಂದು ತಿಳಿಯುತ್ತದೆ. ಬೇರೆ ಸ್ಥಳಗಳಿಂದ ಬಂದು ವ್ಯಾಪಾರಿ ಪಟ್ಟಣಗಳಲ್ಲಿ ವ್ಯಾಪಾರ-ವಹಿವಾಟು ನಡೆಸುತ್ತಿದ್ದವರು. ತಮ್ಮ ಪ್ರಾಮಾಣಿಕತೆ, ರಾಜನಿಷ್ಠೆಯಿಂದ ರಾಜನ ಆಸ್ಥಾನದಲ್ಲಿ ಇವರು ಪ್ರಮುಖ ಸ್ಥಾನ ಪಡೆದಿದ್ದಂತೆ ಕಾಣುತ್ತದೆ. ಕ್ರಿ.ಶ ೧೨೨೪ ಲೋಕನಾಥದೇವರಸನ ಹಿರಿಯಂಗಡಿ ಶಾಸನವು[೧೩೪] ಹೊರಹೀನವರು ದೇವರವರ್ಧಂತಿಯ ಗೌರವಾರ್ಥ ಭೂಮಿಯ ಎಲ್ಲಾ ತೆರಿಗೆ ದಾನ ನೀಡಿದ್ದು ಹಾಗೂ ಇತರರೊಡಗೂಡಿ ಭೂಮಿಯನ್ನು ಕೊಂಡು ದೇವರಿಗೆ ನೀಡಿದ್ದು ತಿಳಿಸುತ್ತದೆ.

ಹೊಯ್ಸಳ ವೀರಬಲ್ಲಾಳನ ಕಾಲದಲ್ಲಿ ತನ್ನ ರಾಜ್ಯದ ಗಡಿನಿರ್ಧಾರದ ಕಲ್ಲು ನೆಡುವಾಗ ಹಲವು ಗಣ್ಯರೊಂದಿಗೆ ಹೊರಹೀನವರು ಉಪಸ್ಥಿತರಿದ್ದ ಬಗ್ಗೆ[೧೩೫] ತಿಳಿಸಿದ್ದಾರೆ. ಅಂದರೆ ರಾಜನ ಆಸ್ಥಾನದಲ್ಲಿ ಇವರು ಹೊಂದಿದ್ದ ಗೌರವವನ್ನು ಇದು ತೋರಿಸುತ್ತದೆ. ಕ್ರಿ.ಶ ೧೩೮೦ ಮೂಡಬಿದರೆ[೧೩೬] ಶಾಸನದಲ್ಲಿ ಗುರುಬಸದಿಗೆ ಪೂಜಾ ಕಾರ್ಯಗಳಿಗೆ ಐವರು ಹೊರಹಿನವರು ದಾನ ನೀಡಿದ್ದು ಉಲ್ಲೇಖವಿದೆ. ಇವುಗಳನ್ನು ನೋಡಿದರೆ ಸ್ವಲ್ಪ ಸಂಖ್ಯೆಯಲ್ಲಿದ್ದರೂ ಹೊರಹಿನವರು ಪ್ರಮುಖ ಸ್ಥಾನ ಹೊಂದಿದ್ದು ಮತ್ತು ಸಮಾಜದಲ್ಲಿ ಗೌರವ ಹೊಂದಿದ್ದುದ್ದು ತಿಳಿಯುತ್ತದೆ. ಇಂತಹ ಕೆಲವೇ ಶಾಸನಾಧಾರಗಳನ್ನು ಬಿಟ್ಟರೆ ಹೆಚ್ಚಿನ ವಿವರ ದೊರೆಯುವುದಿಲ್ಲ.

೬.೨.೧.೧೨ ವಡ್ಡವ್ಯವಹಾರಿ

ಹೊಯ್ಸಳರು ಕೇರಳದ ಪ್ರದೇಶಗಳನ್ನು ಆಳುವಾಗ ಹುಟ್ಟಿಕೊಂಡ ವಾಪಾರಿ ಸಮೂಹವೇ ವಡ್ಡ ವ್ಯವಹಾರಿಗಳು. ಕ್ರಿ.ಶ ೧೧-೧ಳನೆಯ ಶತಮಾನದಲ್ಲಿ ಇವರ ಪ್ರಭಾವ ಕರ್ನಾಟಕದ ಮೇಲೂ ಕಂಡುಬಂದಿತು[೧೩೭]. ಇವರು ಶ್ರೀಮಂತ ವ್ಯಾಪಾರಿಗಳಾಗಿದ್ದರು. ಇವರನ್ನು ಹಿರಿಯ ವ್ಯಾಪಾರಿ ವೃದ್ಧ>ವದ್ದ>ವಡ್ಡ[೧೩೮] ಎಂಬ ಅರ್ಥದಲ್ಲಿ ಗುರುತಿಸುತ್ತಾರೆ ಎಂದು ವಿದ್ವಾಂಸರ

ಅಭಿಪ್ರಾಯ. ಇವರನ್ನು ಅರಸರು ಕೆಲವು ಪ್ರದೇಶಗಳ ಆಡಳಿತಗಾರರಾಗಿಯೂ ನೇಮಿಸಿದ್ದಿದೆ[೧೪೦]. ವಡ್ಡ ವ್ಯವಹಾರಿ, ವೊಡ್ಡವ್ಯವಹಾರಿ, ವಡ್ಡವ್ಯಹಾರಿ, ವಡ್ಡಬೆವಹಾರಿ ಮುಂತಾಗಿ ಇವರನ್ನು ಕರೆಯುತ್ತಿದ್ದರು[೧೪೧]. ಇನ್ನು ಕೆಲವು ಸಂಭೋಧನೆಗಳು ಇಂತಿವೆ. ಮಹಾವಡ್ಡ ವ್ಯವಹಾರಿಗಳು, ಮಹಾವಡ್ಡಬೆವಹಾರಿ, ಮಹಾವೊಡಂಬೆವಹಾರಿ, ಮಹಾವಡ್ಡಬೆಹರಿ. ಇಲ್ಲಿ ಬರುವ 'ಮಹಾ' ಶಬ್ದವು ಅವರ ಉನ್ನತ ದರ್ಜೆಯನ್ನು ಸೂಚಿಸುವಂತಿದೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ವಿರಳ ಸಂಖ್ಯೆಯಲ್ಲಿಯೂ, ಯಾದವ, ಹೊಯ್ಸಳರ ಸಮಯದಲ್ಲಿ ವಿಪುಲ ಸಂಖ್ಯೆಯಲ್ಲಿಯೂ ಪ್ರಚಲಿತವಾಗಿದ್ದರು, ಪ್ರಭಾವ ಶಾಲಿಗಳಾಗಿದ್ದ ಇವರು ವ್ಯಾಪಾರ ಹಾಗೂ ಆಡಳಿತಗಳೆರಡರಲ್ಲೂ ಭಾಗಿಗಳಾಗಿದ್ದರು. ರಾಜನ ಆಸ್ಥಾನದಲ್ಲಿ ರಾಜ ಭಂಡಾರ ಅಕ್ಷಯವಾಗಿರುವಂತೆ ನೋಡಿಕೊಳ್ಳುತ್ತಿದ್ದರು. ಅಂದರೆ ಖಜಾನೆ ಅಧಿಕಾರಿಗಳಾಗಿಯೋ, ಹಣಕಾಸಿನ ಬಡ್ಡಿ ವ್ಯವಹಾರಿಗಳಾಗಿಯೋ ಇವರಿದ್ದರು. ತೆರಿಗೆ ವಸೂಲಿ, ತೆರಿಗೆ ನಿರ್ಣಯಿಸುವುದು ಇತ್ಯಾದಿಗಳಲ್ಲಿ ಇವರು ತೊಡಗಿದ್ದರು. ಇದರಿಂದ ರಾಜನ ಆಸ್ಥಾನದಲ್ಲಿ ಇವರು ಗೌರವಾನ್ವಿತ ಸ್ಥಾನ ಪಡೆದಿದ್ದರು. ಬೆಲೆಬಾಳುವ ಹರಳುಗಳು ಮತ್ತು ದಿನನಿತ್ಯದ ಜೀವನಕ್ಕೆ ಬೇಕಾಗುವ ವಸ್ತುಗಳು ಇವರ ವ್ಯಾಪಾರಿ ಸರಕುಗಳಾಗಿದ್ದವು. ಸಗಟು ವ್ಯಾಪಾರಿಗಳಂತಿದ್ದ ಇವರು ಬಹುಲಾಭಗಳಿಸುವ ವ್ಯಾಪಾರಿಗಳಾಗಿದ್ದರು.

ವೈದಿಕ, ಜೈನ ಧರ್ಮಗಳೆರಡರ ಅನುಯಾಯಿಗಳು ಈ ವ್ಯಾಪಾರಿ ವರ್ಗದಲ್ಲಿದ್ದರು. ಈ ವ್ಯಾಪಾರಿಗಳು ಬೇರೆ ಬೇರೆ ವ್ಯಾಪಾರಿ ಗುಂಪುಗಳಿಗೆ ಬಡ್ಡಿಗೆ ಹಣ ನೀಡುತ್ತಿದ್ದು, ಇವರ ಕುರಿತು ಬಿ.ಆರ್.ಹಿರೇಮಠರು ಈ ಕೆಳಗಿನ ಅಭಿಪ್ರಾಯ ನೀಡಿದ್ದಾರೆ[೧೪೨]. ೧. ಚಕ್ರವರ್ತಿ ನೇಮಿಸುತ್ತಿದ್ದನು. ೨. ಅನುವಂಶಿಯವಾಗಿತ್ತು ೩. ಗೋತ್ರಹಚ್ಚಿಕೊಳ್ಳುತ್ತಿದ್ದರು. ೪. ಅರಸನ, ಸಾಮಂತ, ದಂಡನಾಯಕರ ಪಾದಪದ್ಮೋಪಜೀವಿಗಳಾಗಿದ್ದರು. ೫. ರಾಜ ಶ್ರೇಷ್ಠಿಗಳಾಗಿದ್ದರು ಹಾಗೂ ಮುದ್ರಾಪಣ, ಕಮ್ಮಟದ ಒಡೆತನದವರಾಗಿದ್ದರು. ೬. ಭಂಡಾರದ ಸಂಪತ್ತು ಹೆಚ್ಚಿಸುವುದು ಇವರ ಆದ್ಯಕರ್ತವ್ಯವಾಗಿತ್ತು. ೭. ವೈದಿಕ, ಶೈವ, ಜೈನ ಮತೀಯರಾಗಿದ್ದರು. ೮. ಇವರು ಪಟ್ಟಣಸ್ವಾಮಿಗಳೂ ಆಗಿದ್ದರು. ೯. ಕಲ್ಯಾಣ ಚಾಲುಕ್ಯರ, ಯಾದವ, ಹೊಯ್ಸಳರ ಕಾಲದಲ್ಲಿದ್ದರು. ೧೦. ತಾವು ನೀಡುವ ದಾನಪ್ರಸಂಗಗಳಲ್ಲಿ ಚಕ್ರವರ್ತಿಯ ಅನುಮತಿ ಪಡೆಯುತ್ತಿದ್ದರು, ಕೆಲವು ಸಲ ಮಹಾಜನರಿಗೆ ಪಾದ ಪೂಜೆ ಸಲ್ಲಿಸಿ ದತ್ತಿ ಬಿಡುತ್ತಿದ್ದರು. ೧೧. ಶಾಸನ ಹೊರಡಿಸುವ ಅಧಿಕಾರ ಹೊಂದಿದ್ದರು. ೧೨. ವೈದಿಕ ವಡ್ಡವ್ಯವಹಾರಿಗಳು ಶ್ವೇತಕುಲ ವೈಶ್ಯರು ಶೈವ ವಡ್ಡವ್ಯವಹಾರಿಗಳು ಕುಬೇರ, ಪಂಚಮ ವಂಶದವರೂ ಆಗಿದ್ದರು. ೧೩. ಭೀಮೇಶ್ವರ, ಶಾರದಾದೇವಿ ಮೊದಲಾದ ಸ್ಥಾನಿಕ ದೇವರ ಲಬ್ಧವರಪ್ರಸಾದರು ಆಗಿದ್ದರು. ೧೪. ರಾಜನ ಆಸ್ಥಾನದಲ್ಲಿ ದಂಡನಾಯಕ ಮೊದಲಾದ ಉಚ್ಚಸ್ಥಾನವನ್ನು ಅಲಂಕರಿಸಿದ್ದರು. ೧೫.ಸೆಟ್ಟಿ ಕುಟುಂಬದವರು. ೧೬. ಚಕ್ರವರ್ತಿಯ

ನಿಯಂತ್ರಣಗೊಳಪಟ್ಟಿದ್ದರು. ೧೭. ಮಲೆಯಾಲ ವಡ್ಡವ್ಯವಹಾರಿಗಳು ಕರ್ನಾಟಕದಲ್ಲಿ ನೆಲೆನಿಂತಿದ್ದರು. ೧೮. ಬಹುಪತ್ನಿತ್ವ ಇವರಲ್ಲಿತ್ತು. ೧೯. ವಡ್ಡಾಚಾರ, ಗುಡ್ಡಶಾಸ್ತ್ರಗಳನ್ನು ಪಾಲಿಸುತ್ತಿದ್ದರು.

ಸುಮಾರು ಐದು ಶತಮಾನಗಳ ಕಾಲ ಇವರು ವ್ಯಾಪಾರ ಹಾಗೂ ಆಡಳಿತರಂಗದಲ್ಲಿ ಹೆಸರುಮಾಡಿದ್ದರು, ಕರಾವಳಿಯಲ್ಲಿ ಚಾಲುಕ್ಯರ, ಯಾದವರ ಹಾಗೂ ಹೊಯ್ಸಳರ ಕಾಲದಲ್ಲಿ ವ್ಯಾಪಾರ-ವ್ಯವಹಾರಗಳಲ್ಲಿ, ಹಣಕಾಸಿನ ವ್ಯವಹಾರದಲ್ಲಿ ತೊಡಗಿದ್ದರು. ಆಡಳಿತ ಹಾಗೂ ಆರ್ಥಿಕತೆಯಲ್ಲಿ ಸಂಪೂರ್ಣ ಭಾಗಿಗಳಾಗಿದ್ದೂ ಜನಪ್ರೀಯರಾಗಿದ್ದರು. ತಮ್ಮ ವ್ಯಾಪಾರಕ್ಕೆ ಅನೂಕೂಲವಾಗುವಂತೆ ದೇವಾಲಯಗಳಿಗೆ ದಾನದತ್ತಿ ನೀಡುತ್ತಿದ್ದರು. ಇವರು ದೇವಾಲಯಗಳಿಗೆ ಬರುತ್ತಿದ್ದ ದಾನ ದತ್ತಿಗಳನ್ನು ಬಡ್ಡಿವ್ಯವಹಾರಗಳಿಗೆ ಬಳಸಿಕೊಳ್ಳುತ್ತಿದ್ದರು.

೬.೨.೧.೧೩ ಗವರೆ-ಗಾತ್ರಿಗ, ಎಲೆಯ ಬೋಜಂಗರು ೫೦೪

ಈ ಎರಡು ಹೆಸರುಗಳಲ್ಲಿ ಕರೆಯಲ್ಪಡುತ್ತಿದ್ದ ವ್ಯಾಪಾರಿಗಳ ಮುಖ್ಯ ವ್ಯಾಪಾರಿ ಸರಕು ವಿಳ್ಯದೆಲೆ ಆಗಿತ್ತು. ಅಂದು, ಇಂದಿನಂತೆ ಕರಾವಳಿ ಹಾಗೂ ಮಲೆನಾಡಿನ ತೋಟದ ಬೆಳೆಯಾಗಿದ್ದ ವಿಳ್ಯದ ಎಲೆ ದೇಶ-ವಿದೇಶಗಳಲ್ಲಿ ಪ್ರಖ್ಯಾತವಾಗಿತ್ತು. ವೀಳ್ಯದ ಎಲೆ[೧೪೩] (ಅಡಿಕೆ-ಸುಣ್ಣದೊಂದಿಗೆ) ತಿನ್ನುವುದಕ್ಕೂ, ಅದರಲ್ಲೂ ಮುಖ್ಯವಾಗಿ ದೇವರ ಕೆಲಸದಲ್ಲಿ, ಮಂಗಳ ಕಾರ್ಯದಲ್ಲಿ ಅತೀ ಅವಶ್ಯಕವಾಗಿ ಬೇಕಿತ್ತು. ಔಷಧವಾಗಿಯೂ ಎಲೆಯನ್ನು ಬಳಸುವುದಿದೆ. ಮೈಸೂರು ಚಿಗುರೆಲೆ, ಹೊನ್ನಾವರದ ತೋಟದ (ರಾಣಿ) ಎಲೆ ಹಾಗೂ ಕರಿಎಲೆಗಳು ಬಹು ಪ್ರಖ್ಯಾತವಾಗಿವೆ. ಇಂದಿಗೂ ವಿದೇಶಗಳಲ್ಲಿ ಈ ಎಲೆಗಳಿಗೆ ಬೇಡಿಕೆ ಇದೆ.

ಗವರೆಯವರು ಪ್ರಾಣಿಗಳ ಮೇಲೆ ಎಲೆಯ ಕಟ್ಟುಗಳನ್ನು ಹೇರಿಕೊಂಡು ಊರಿಂದೂರಿಗೆ ಹೋಗಿ ಮಾರುತ್ತಿದ್ದರು. ಇವರನ್ನು ಗವರೆಸೆಟ್ಟಿ, ಗವರೆಗಂಡ[೧೪೪]ರೆಂದೂ ಕರೆಯುತ್ತಿದ್ದರು. ಎಲೆಯಕಟ್ಟುಗಳನ್ನು ಹೆಗಲಮೇಲೆ ಹೇರಿಕೊಂಡು ವ್ಯಾಪಾರಕ್ಕೆ ತೆಗೆದುಕೊಂಡು ಹೋಗುವವರನ್ನು ಹೆಗಲಗವರೆಗಳೆಂದು ಕರೆಯುತ್ತಿದ್ದರು[೧೪೫]. ಇವರ ಸಂಖ್ಯೆಯನ್ನು ಸಾವಿರದ ಎಳುನೂರು ಎಂದು ಶಾಸನಗಳು ತಿಳಿಸುತ್ತವೆ[೧೪೬]. ಗಾತ್ರಿಗ ಎನ್ನುವುದು ಒಂದು ಸಾವಿರ ವೀಳ್ಯದೆಲೆಗಳ ಕಟ್ಟುಳ್ಳದ್ದು. ಇದನ್ನು ಹೊತ್ತು ಒಯ್ಯುವ ವ್ಯಾಪಾರಿಗಳು ಗಾತ್ರಿಗರು. ಇವರು ಈ ಸರಕನ್ನು ಹೇರುಗಳ ಮೇಲೂ ಹೊತ್ತೊಯ್ಯುತ್ತಿದ್ದರು. ಈ ಎರಡು ವೀಳ್ಯದೆಲೆ ವ್ಯಾಪಾರಿಗಳು ಹಲಸಿಗೆ ಪನ್ನಿಚ್ಚಾಸಿರ, ಬನವಸೆ ಪನ್ನಿಚ್ಚಾಸಿರ, ಬೆಳ್ಳಿಗಾವೆಗಳಲ್ಲಿ[೧೪೭] ವ್ಯಾಪಕವಾಗಿದ್ದರು.

ಹಾನಗಲ್ಲು ಕಾದಂಬರ ಕಾಲದಲ್ಲಿ ಎಲೆಯಭೋಜಂಗ ೫೦೪ ಎಂಬ ಎಲೆಯ ವ್ಯಾಪಾರಿಗಳಿದ್ದರು[೧೪೮]. ವೀಳ್ಯದೆಲೆ ಬೆಳೆಸುವುದು, ಮಾರುವುದು ಇವರ ವೃತ್ತಿಯಾಗಿತ್ತು. ಇವರು

ಅರ್ಥಿಕವಾಗಿ ಪ್ರಬಲರಾಗಿದ್ದು, ಇವರ ದತ್ತಿಯೊಂದನ್ನು ತಿಳಿಸುವ ತಿಳಿವಳ್ಳಿ[೧೪೯] ಶಾಸನವು 'ತಿಳಿವಳ್ಳಿಯ ಸೋಮಯಾಜಿಗಳ ದೇವಾಲಯದ ನಂದಾ ದೀವಿಗೆಗೆ ಎಲೆಯ ಭೋಜಂಗರೂ ೫೦ಳ ದತ್ತಿ ನೀಡಿದ್ದು' ತಿಳಿಸುತ್ತದೆ. ಈ ಭೋಜಂಗರು ಎಲೆ ಬೆಳೆದು ಮಾರುವ ಜನರ ಒಂದು ಗಣವನ್ನು ಸ್ಥಾಪಿಸಿಕೊಂಡಿದ್ದಿರಬೇಕು. ಇದನ್ನು ಭೋಜಂಗ ೫೦ಳ ಎಂದು ಕರೆದುಕೊಂಡಿದ್ದರು.

ಇವರು ವೀಳ್ಯದೆಲೆ ಬೆಳೆಯುವುದು ಹಾಗೂ ಮಾರಾಟಗಳೆರಡನ್ನೂ ಮಾಡುತ್ತಿದ್ದರು. ಆದ್ದರಿಂದ ಇವರು ಮಾರುಕಟ್ಟೆ, ಸಂತೆ, ಪಟ್ಟಣ ಪ್ರದೇಶಗಳ ಬಳಿಯಲ್ಲಿ ನೀರಿನ ಸೌಲಭ್ಯ, ಉತ್ತಮ ಫಲವತ್ತಾದ ಮಣ್ಣಿರುವ ಭೂಮಿಯನ್ನು ಆಯ್ದುಕೊಂಡು ಎಲೆ ಬೆಳೆಸಿ ಮಾರಾಟ ಮಾಡುತ್ತಿದ್ದರು. ಜೊತೆಯಲ್ಲಿ ನೈಸರ್ಗಿಕವಾಗಿ ಎಲೆ ಬೆಳೆಯುವ ಉತ್ತಮ ಭೂಮಿಯಾದ ಯಲ್ಲಾಪುರ, ಅಂಕೋಲಾ, ಹೊನ್ನಾವರ, ಶಿರಸಿ, ಕುಂದಾಪುರದ ಮಲೆನಾಡು ಭಾಗ, ಶಿವಮೊಗ್ಗಾಗಳಲ್ಲಿ ಎಲೆ ಬೆಳೆಸಿ ಹೇರುಗಳ ಮೂಲಕ ಪಟ್ಟಣಗಳಿಗೆ ಸಾಗಿಸಿ ವ್ಯಾಪಾರ ನಡೆಸುತ್ತಿದ್ದರು.

೬.೨.೧.೧೪ ತಂಬುಲಿಗ ಸಾಸಿರ್ವರು

ವೀಳ್ಯ ವಿನಿಮಯ ಸಂಘದವರು ತಂಬುಲಿಗೆ ಸಾಸಿರ್ವರು[೧೫೦]. ಇವರು ವೀಳ್ಯದ ಎಲೆಯ ವ್ಯಾಪಾರ ಮಾಡುತ್ತಿದ್ದರು. ಇವರ ಸಂಘಟನೆಯಲ್ಲಿ ಸಾವಿರ ಸಂಖ್ಯೆಯ ಸದಸ್ಯರಿದ್ದರೆಂದು ಊಹಿಸುವುದು ಸ್ವಲ್ಪ ಕಷ್ಟವಾದರೂ, ವಿಳ್ಯದ ವ್ಯಾಪಾರಕ್ಕೆ ಒಂದು ಸಂಘವಿತ್ತೆಂದು ಖಚಿತಗೊಳ್ಳುತ್ತದೆ. ಹಾನಗಲ್ಲು ತಾಲೂಕಿನ ಹೊಟ್ಟೂರು[೧೫೧] ಹಾಗೂ ಬಾಳಂಬೀಡ ಶಾಸನಗಳು[೧೫೨] ಇವರು ದತ್ತಿಯನ್ನು ಕಾಯುತ್ತಿದ್ದ ಬಗ್ಗೆ ಹಾಗೂ ದೇವಾಲಯಗಳಿಗೆ ದತ್ತಿ ನೀಡಿದ ಬಗ್ಗೆ ತಿಳಿಸುತ್ತದೆ. ಹಣದ ರೂಪದಲ್ಲೂ ಇವರು ದಾನ ನೀಡಿದ್ದು, ಭೂಮಿ(ಗದ್ದೆ) ದಾನ ನೀಡಿದ್ದು ಶಾಸನಗಳಿಂದ ತಿಳಿಯುತ್ತದೆ. ಇದರಿಂದ ತಂಬುಲಿಗ ಸಂಘವು ಆರ್ಥಿಕವಾಗಿ ಬಲಾಢ್ಯವಾಗಿದ್ದಂತೆ, ಭೂಒಡೆಯರೂ ಆಗಿದ್ದರೆಂದು ತಿಳಿಯುತ್ತದೆ. ವೀಳ್ಯಕ್ಕೆ ಅಂದು ಸಮಾಜದಲ್ಲಿ ಇದ್ದ ಗೌರವ ಹಾಗೂ ಅದರ ವ್ಯಾಪಕ ಬಳಕೆಯಿಂದ ಈ ವೀಳ್ಯದ ವ್ಯಾಪಾರಿಗಳಿಗೆ ತುಂಬಾ ಲಾಭಬರುತ್ತಿತ್ತು. ಇವರು ದೂರದೂರದ ಊರುಗಳಿಗೂ ಎಲೆಗಳನ್ನು ಕಳಿಸುತ್ತಿದ್ದರು.

೬.೨.೧.೧೫ ಉಗುರು ಮುನ್ನೂರ್ವರು

ಉತ್ತರ ಕನ್ನಡ ಪ್ರದೇಶದಲ್ಲಿ ಮುಖ್ಯವಾಗಿ ಹಾನಗಲ್ ಕಾದಂಬರ ಕಾಲದಲ್ಲಿ ವೀಳ್ಯದೆಲೆಗಳನ್ನು ಕೊಯ್ಯುವ ವೃತ್ತಿಯವರ ಒಂದು ಸಂಘವಿತ್ತು. ಇಂದಿಗೂ ಈ ಪದ್ದತಿ ಕರಾವಳಿಯ ಗ್ರಾಮೀಣ ಪ್ರದೇಶಗಳಲ್ಲಿ ಕಾಣಬಹುದು. ಇಂಥಹ ಎಲೆ ಕೊಯ್ಯುವ (ಸಾಗುವ) ವೃತ್ತಿಯವರ ಸಂಘವು ಉಗುರು ಮುನ್ನೂರ್ವರು ಎಂದು[೧೫೩] ಕರೆದುಕೊಳ್ಳುತ್ತಿತ್ತು. ಇದರಲ್ಲೇ ಕೆಲವರು ತಮ್ಮ ಹೆಬ್ಬೆರಳಿನ ಅಳತೆಗೆ ಸರಿಯಾದ ಬೆರಳಿಗಿಂತ ಸುಮಾರು ಅರ್ಧ ಅಂಗುಲ

ಉದ್ದವಿರುವ, ಚಿಕ್ಕ ಚಾಕುವಿನ ಆಕಾರದ ತೆಲುಲೋಹದ ತಗಡನ್ನು ಹಾಕಿಕೊಂಡು ಎಲೆಗಳನ್ನು ಕೊಯ್ಯುತ್ತಿದ್ದರು. ಇಂದಿಗೂ ಈ ಪದ್ಧತಿ ಗ್ರಾಮೀಣ ಪ್ರದೇಶಗಳಲ್ಲಿ ಕಾಣಬರುತ್ತದೆ. ಇವರ ಸಂಘವೂ ಇದ್ದು ಇವರು ಉಳಿಯ ಮುನ್ನೂರ್ವರು[೧೫೪] ಎಂದು ಕರೆದುಕೊಳ್ಳುತ್ತಿದ್ದರು. ಇವರನ್ನುಳಿದು ಬೇರೆ ಸ್ಥಳಗಳಿಂದಲೂ ಎಲೆ ಕೊಯ್ಯಲು ಬರುತ್ತಿದ್ದವರಿದ್ದರು. ಅಂಥಹ ತೋಟ ಕಾರ್ಮಿಕರನ್ನು ಕೊಯ್ಲಾಳಿಗಳು[೧೫೫] ಎಂದು ಕರೆಯಲಾಗುತ್ತಿತ್ತು. ಇವರುಗಳಿಗೆ ದೇವರಿದ್ದು ಉಗುರು ಮುನ್ನೂರ್ವರು ಉಗುರೇಶ್ವರ, ಕೊಯ್ಲಾಳಿಗಳು ಕೊಯ್ಲಾಳೇಶ್ವರ[೧೫೬] ದೇವರನ್ನು ಆಧಿದೇವತೆ ಎಂದು ಆರಾಧಿಸುತ್ತಿದ್ದರು. ಈ ಎರಡು ಸಂಘದವರು ಗ್ರಾಮಗಳಲ್ಲಿ ಪ್ರಬಲರು, ಗೌರವಾನ್ವಿತರೂ ಆಗಿದ್ದರು. ಇವರು ದಾನ-ದತ್ತಿ ಕಾಯುವ, ದಾನದತ್ತಿ ನೀಡುವ[೧೫೭], ಊರ ರಕ್ಷಣೆ ಮುಂತಾದ ಜವಾಬ್ದಾರಿ ಹೊರುತ್ತಿದ್ದರು.

ಹೀಗೆ ಅಂದಿನ ಜನರ ರಸಿಕತೆಗೆ, ದೈವಿಕ ಕಾರ್ಯಕ್ಕೆ, ದಾನ ಧರ್ಮದ ಸಮಯದಲ್ಲಿ, ಔಷಧರೂಪದಲ್ಲಿ ಬಳಕೆಯಾಗುತ್ತಿದ್ದ ವೀಳ್ಯದೆಲೆ ಬಹುಜನ ಮನ್ನಣೆಗಳಿಸಿತ್ತು. ವೀಳ್ಯಕ್ಕೆ ಜ್ಞಾನಚೂರ್ಣ ಎಂದು ಕರೆಯುವುದು ಇಂದಿಗೂ ಕಾಣಬಹುದು. ಇಂತಹ ವೀಳ್ಯದೆಲೆಯ ವ್ಯಾಪಾರ-ನಾಡಿನಲ್ಲಿ ಮತ್ತು ನಾಡಿನ ಹೊರಗೂ ಭರದಿಂದ ನಡೆದಿತ್ತು. ಅದನ್ನು ಈ ಸಂಘಗಳು ನಡೆಸುತ್ತಿದ್ದವು. ವಿದೇಶಗಳಲ್ಲೂ ಈ ಎಲೆಗಳಿಗೆ ಬಹು ಬೇಡಿಕೆ ಇತ್ತು.

೬.೩ ವಿದೇಶಿ ವ್ಯಾಪಾರಿ ಸಂಘಗಳು

ಕರ್ನಾಟಕದ ಬಂದರುಗಳ ಮೂಲಕ ವ್ಯಾಪಾರ ನಡೆಯುತ್ತಿದ್ದಾಗ ಅದು ಕೇವಲ ಸ್ವದೇಶಿ ವ್ಯಾಪಾರಿಗಳಿಂದ ಮಾತ್ರ ನಡೆಯುತ್ತಿದ್ದಿದ್ದಲ್ಲ. ಇಲ್ಲಿ ವಿವಿಧ ಬಗೆಯ ಸರಕುಗಳಿಗಾಗಿ ವಿದೇಶಿ ವ್ಯಾಪಾರಿಗಳೂ ಬರುತ್ತಿದ್ದರು. ಹೀಗೆ ಬರುತ್ತಿದ್ದ ವಿದೇಶಿ ವ್ಯಾಪಾರಿಗಳು ದೊಡ್ಡ ಸಂಖ್ಯೆಯಲ್ಲಿರುತ್ತಿದ್ದರು. ಹಲವಾರು ದೊಡ್ಡ ಹಡಗುಗಳಲ್ಲಿ ತಮ್ಮ ಸಹಾಯಕರೊಂದಿಗೆ ಹಾಗೂ ತಮ್ಮ ರಕ್ಷಣೆಗಿದ್ದ ಸೈನಿಕರೊಂದಿಗೆ ಬರುತ್ತಿದ್ದ ಇವರು, ಬಂದರು ಪಟ್ಟಣಗಳಲ್ಲಿ ಉಳಿದು ವ್ಯಾಪಾರ ವಹಿವಾಟು ನಡೆಸುತ್ತಿದ್ದರು. ತಮ್ಮ ಸರಕುಗಳು ಖಾಲಿಯಾಗುವವರೆಗೂ, ಅಥವಾ ತಮಗೆ ಕೊಂಡೊಯ್ಯಲು ಬೇಕಾದ ಸರಕುಗಳು ಸಾಕಷ್ಟು ಸಂಗ್ರಹವಾಗುವವರೆಗೂ ಇಲ್ಲಿರುತ್ತಿದ್ದರು. ಸ್ಥಳೀಯ ಭಾಷೆಯ ಜ್ಞಾನ ಪಡೆದುಕೊಂಡು ವ್ಯಾಪಾರದಲ್ಲಿ ತೊಡಗುತ್ತಿದ್ದರು. ಅಥವಾ ದುಬಾಶಿಗಳನ್ನು ಬಳಸುತ್ತಿದ್ದರು.

ವ್ಯಾಪಾರಿಗಳಿಗೆ ಸ್ಥಳೀಯ ವೈಶ್ಯರು ಸರಕುಗಳನ್ನು ಪೂರೈಸುತ್ತಿದ್ದರು. ತಮ್ಮ ನಾಡಿನ ಒಳ ಪ್ರದೇಶಗಳಿಂದ ಸಂಗ್ರಹಿಸಿ ಹೆಚ್ಚಿನ ಬೆಲೆಗಳಿಗೆ ವಿದೇಶಿ ವ್ಯಾಪಾರಿಗಳಿಗೆ ಮಾರುತ್ತಿದ್ದರು. ಅಲ್ಲದೆ ಈ ವಿದೇಶಿ ವ್ಯಾಪಾರಿಗಳು ಸ್ಥಳೀಯ ರೀತಿರಿವಾಜು ಮತ್ತು ಭಾಷೆಗಳನ್ನು ತಿಳಿಯದ್ದರಿಂದ ಅವರು

ದೇಸೀಯ ವರ್ತಕರನ್ನು ತಮ್ಮ ಸಹಾಯಕರಾಗಿ ಮಾಡಿಕೊಂಡು ತಾವು ತಂದ ಸರಕುಗಳನ್ನು ಒಳನಾಡುಗಳಿಗೆ ಕಳಿಸುತ್ತಿದ್ದರು. ಇದರಿಂದ ಸ್ಥಳೀಯ ವ್ಯಾಪಾರಿಗಳು ವ್ಯಾಪಾರಿ ಪಟ್ಟಣಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಅನುಕೂಲವಾಗುತ್ತಿತ್ತು. ಮತ್ತು ವಿದೇಶಿ ವ್ಯಾಪಾರಿಗಳಿಗೂ ಸಹಾಯಕವಾಗುತ್ತಿತ್ತು. ಒಳನಾಡಿನ ಮುಖ್ಯ ಪಟ್ಟಣಗಳು ಈ ವ್ಯಾಪಾರ-ವಿನಿಮಯದ ಕೇಂದ್ರಗಳಾಗಿರುತ್ತಿದ್ದವು. ಇಂಥಹ ಸ್ಥಳಗಳಲ್ಲಿ ನಿರ್ಧಿಷ್ಟಪಡಿಸಿದ ಸರಕುಗಳ ಮಾರಾಟ ನಡೆಯುತ್ತಿತ್ತು. ಇದನ್ನು ತಿಳಿದ ಗ್ರಾಹಕರು ತಮಗೆ ಬೇಕಿದ್ದ ನಿರ್ಧಿಷ್ಟ ಸರಕುಗಳಿಗಾಗಿ ಅವು ದೊರೆಯುತ್ತಿದ್ದ ಸ್ಥಳಗಳಿಂದ ಕೊಂಡು ಕೊಳ್ಳುತ್ತಿದ್ದರು. ಇಂಥಹ ಪಟ್ಟಣಗಳು ಕರ್ನಾಟಕದ ಬಂದರುಗಳಿಂದ ನೇರವಾದ ಮಾರ್ಗಗಳನ್ನು ಹೊಂದಿದ್ದವು. ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ವ್ಯಾಪಾರಿ ಪಟ್ಟಣಗಳನ್ನು ನೋಡಿದರೆ ಇದು ತಿಳಿಯುತ್ತದೆ. ಜೊತೆಗೆ ಈ ಪಟ್ಟಣಗಳನ್ನು ಪ್ರಮುಖ ನದಿಗಳು ಸಂಪರ್ಕಿಸುವುದು ತಿಳಿಯುತ್ತದೆ.

ವಿದೇಶಿಯ ವ್ಯಾಪಾರಿಗಳ ಆಗಮನ ಮತ್ತು ಇಲ್ಲಿ ನಡೆಯುತ್ತಿದ್ದ ವ್ಯಾಪಾರದ ಬಗ್ಗೆ ಮೋತಿಚಂದ್ರರು ಹೀಗೆ ಹೇಳಿದ್ದಾರೆ. 'ದಕ್ಷಿಣ ಭಾರತದ ಸಂಸ್ಕೃತಿಯು ಉತ್ತರ ಭಾರತದ ಸಂಸ್ಕೃತಿಗೆ ಏನೂ ಕಡಿಮೆಯಿರಲಿಲ್ಲ. ವಿದೇಶ ವ್ಯಾಪಾರದಿಂದ ದಕ್ಷಿಣ ಭಾರತಕ್ಕೆ ಹೇರಳವಾಗಿ ಹಣಬರುತ್ತಿತ್ತು. ಕಡಲವ್ಯಾಪಾರದಿಂದ ದಕ್ಷಿಣ ಭಾರತದ ಸಂಬಂಧವು ಸಮುದ್ರ ದಂಡೆಯಲ್ಲಿ ಪಶ್ಚಿಮದ ಸಿಂದ್‌ದವರೆಗೆ ಮತ್ತು ಪೂರ್ವದ ತಾಮ್ರಲಿಪ್ತಿವರೆಗೆ ಹಬ್ಬಿತ್ತು. ದಕ್ಷಿಣದ ವರ್ತಕರು ತಮ್ಮ ಸರಕುಗಳನ್ನು ಸಿಂಹಳ, ಸುವರ್ಣದ್ವೀಪ ಮತ್ತು ಆಫ್ರಿಕಾದವರೆಗೆ ಒಯ್ಯುತ್ತಿದ್ದರು. ರೋಮನ್ ವ್ಯಾಪಾರಿಗಳು ಯಾವಾಗಲೂ ದಕ್ಷಿಣದ ರೇವುಗಳಲ್ಲಿ ವ್ಯಾಪಾರ ನಡೆಸುತ್ತಿದ್ದರು. ಇಲ್ಲಿಂದ ಬೆಲೆಬಾಳುವ ವಸ್ತು ರೋಮನ್ ಸಾಮ್ರಾಜ್ಯಕ್ಕೆ ಒಯ್ಯುತ್ತಿದ್ದರು. ರೋಮ್‌ದ ವ್ಯಾಪಾರಿಗಳಿಗೆ ಈ ಯುಗದಲ್ಲಿ ದಕ್ಷಿಣಭಾರತದ ಕಡಲದಂಡೆಯ ಪರಿಚಯ ಸಾಕಷ್ಟಿತ್ತು[೧೫೮]'. ಇವುಗಳೆಲ್ಲಾ ನಮ್ಮ ಊಹೆಗಳನ್ನು ನಿಜಗೊಳಿಸುತ್ತವೆ. ಕರ್ನಾಟಕದ ಬಂದರುಗಳು ವಿದೇಶಿ ವರ್ತಕರಿಂದ ಗಿಜಿಗುಡುತ್ತಿತ್ತು ಎಂದು ಪ್ರವಾಸಿಗರು[೧೫೯] ಹೇಳುತ್ತಾರೆ.

ಕರ್ನಾಟಕದ ಕರಾವಳಿಯಲ್ಲಿ ಇಂದಿಗೂ ನೋಡಸಿಗುವ ದಾಲ್ಜಿಗಳು, ನವಾಯುತರು ಹಾಗೂ ಬ್ಯಾರಿಗಳು ಹೀಗೆ ವಿದೇಶದಿಂದ ಬಂದ ವ್ಯಾಪಾರಿಗಳ ವಂಶಸ್ಥರೆಂದು ಗುರುತಿಸಲಾಗುತ್ತದೆ. ಬೇರೆ-ಬೇರೆ ಕಾಲಾವಧಿಯಲ್ಲಿ ಇಲ್ಲಿಗೆ ಬಂದ ಈ ವ್ಯಾಪಾರಿಗಳು ಇಲ್ಲಿಯೇ ಉಳಿದು ಕೊಂಡರು. ಸ್ಥಳೀಯ ಭಾಷೆ, ಸಂಸ್ಕೃತಿಗಳೊಂದಿಗೆ ಒಂದಾದರು. ಇಂಥ ಕೇಲವು ವ್ಯಾಪಾರಿ ಸಂಘಗಳ ಕುರಿತು ಶಾಸನಗಳು ತಿಳಿಸುತ್ತವೆ.

೬.೩.೧ ಹಂಜಮಾನರು

'ಹಂಜಮಾನ' ಎಂಬುದು ಕರಾವಳಿಯ ಅದರಲ್ಲೂ ಬಂದರುಗಳನ್ನು ಅವಲಂಭಿಸಿ ಸರಕುಗಳ ವ್ಯಾಪಾರ ನಡೆಸುವ ವರ್ತಕರ ಸಂಘ ಎಂದು ವಿದ್ವಾಂಸರು ತೀರ್ಮಾನಿಸಿದ್ದಾರೆ. ಶಾಸನಗಳಲ್ಲೂ ಈ ವ್ಯಾಪಾರಿಗಳ ಬಗ್ಗೆ ಉಲ್ಲೇಖಗಳು ದೊರೆಯುತ್ತವೆ. ಹಂಜಮಾನವು ಅಂಜುಮನ್‌ದಿಂದ ಬಂದಿದೆ ಎಂದು ವಿದ್ವಾಂಸರು ಗುರುತಿಸಿದ್ದಾರೆ[೧೬೦]. ಅಂಜುಮನ್ ಪರ್ಷಿಯನ್ ಪದ. ಪರ್ಷಿಯಾದ ವ್ಯಾಪಾರಿಗಳನ್ನು ಗುರುತಿಸಲು ಅಂಜುಮನ್ ಅಂದರೆ ಸಂಘ, ಗುಂಪು ಎಂದು ಕರೆಯುತ್ತಿದ್ದುದೇ ಮುಂದೆ ಅಂ 'ಹಂ' ಆಗಿ ಹಂಜಮಾನರಾದರೆನ್ನುವುದು ಬಹುಜನ ವಿದ್ವಾಂಸರು ಒಪ್ಪಿರುವ ನಿಷ್ಪತ್ತಿ. ಕ್ರಿ.ಶ ೧೪ನೇ ಶತಮಾನದ ಆರಂಭ ಮತ್ತು ಅದರ ಹಿಂದಿನ ಶತಮಾನದ ಅಂತ್ಯದ ಕಾಲದಲ್ಲಿ ತುಳುನಾಡಿನ ಬಂದರುಗಳಿಗೆ ಬಂದ ಪರ್ಶಿಯಾದ ವ್ಯಾಪಾರಿಗಳ ಒಕ್ಕೂಟ ಅಥವಾ ಗುಂಪು ಹಂಜಮಾನ. ಈ ಹಂಜಮಾನರು ಅಲ್ಪಾವಧಿಯಲ್ಲಿ ಕರಾವಳಿಯ ರೇವುಗಳನ್ನು ವ್ಯಾಪಿಸಿದರು. ಪ್ರಖ್ಯಾತ ರೇವುಗಳಾದ ಬಸರೂರು, ಮಂಗಳೂರು, ಬಾರ್ಕೂರು ಮತ್ತು ಹೊನ್ನಾವರದ ಶಾಸನಗಳು ಹಂಜಮಾನರ ಬಗ್ಗೆ ತಿಳಿಸುತ್ತವೆ.

ಹಂಜಮಾನರು ಕರಾವಳಿಯ ರೇವುಪಟ್ಟಣಗಳಲ್ಲಿ ಗುಂಪಾಗಿ ವಾಸಿಸುತ್ತಾ, ಪರ್ಶಿಯಾದ ಮೂಲಕ ತಂದ ಅಲ್ಲಿಯ ಹಾಗೂ ಬೇರೆ ದೇಶಗಳ ಸರಕುಗಳನ್ನು ಮಾರುತ್ತಾ, ಸ್ಥಳೀಯವಾಗಿ ದೊರೆಯುತ್ತಿದ್ದ, ವಿದೇಶದಲ್ಲಿ ಬೆಲೆಬಾಳುತ್ತಿದ್ದ ಸರಕುಗಳನ್ನು ಕೊಂಡು ಸಂಗ್ರಹಿಸುತ್ತಿದ್ದರು. ಈ ವ್ಯಾಪಾರದಲ್ಲಿಗಳಿಸುತ್ತಿದ್ದ ಲಾಭದಲ್ಲಿ ಅರಸನ ಬೊಕ್ಕಸಕ್ಕೆ, ಅರಮನೆ ವಿಧಿಸಿದಷ್ಟು ತೆರಿಗೆ ತುಂಬುತ್ತಿದ್ದರು. ಇವರು ತಮಗೆ ಬೇಕಿದ್ದ ಬೆಳೆಗಳನ್ನು ಬೆಳೆಯಲು ಇಲ್ಲಿ ಭೂಮಿಯನ್ನು ಕೊಂಡುಕೊಂಡಿದ್ದರು. ಹಾಗೇ ತಮ್ಮ ಧಾರ್ಮಿಕ ಆಚರಣೆಗಾಗಿ ಪೂಜಾ ಸ್ಥಳಗಳನ್ನು ಸ್ಥಾಪಿಸಿಕೊಂಡಿದ್ದು, ಇತರರ ಧಾರ್ಮಿಕ ಆಚರಣೆಗೆ ದಾನದತ್ತಿ ನೀಡಿದ್ದು ತಿಳಿಯುತ್ತದೆ.

ವಿಜಯನಗರದ ಕಾಲದಲ್ಲಿ ಈ ಹಂಜಮಾನ ಸಂಘವು ತುಂಬಾ ಉಚ್ಛ್ರಾಯ ಸ್ಥಿತಿ ಕಂಡಿತು. ವಿಜಯನಗರದ ಸೈನ್ಯಕ್ಕೆ ಬೇಕಿದ್ದ ಉತ್ತಮ ತಳಿಯ ಕುದುರೆಗಳು ಇವರಿಂದಲೇ ತರಿಸಲ್ಪಡುತ್ತಿತ್ತು. ವಿಜಯನಗರ ಕಾಲದ ಶಾಸನ[೧೬೧] ಒಂದು ಹಂಜಮಾನದವರ ಪಳ್ಳಿಯೊಂದಕ್ಕೆ ಧಕ್ಕೆ ಉಂಟುಮಾಡಿದ್ದಕ್ಕೆ ಪರಿಹಾರ ಒದಗಿಸಿದ್ದನ್ನು ತಿಳಿಸುತ್ತದೆ. ಅಷ್ಟರಲ್ಲಾಗಲೇ ಹಂಜಮಾನರು ಪ್ರಾರ್ಥನೆಗಾಗಿ ಪಳ್ಳಿಯೊಂದನ್ನು ನಿರ್ಮಿಸಿಕೊಂಡಿದ್ದರೆಂದು ತಿಳಿಯುತ್ತದೆ. ಅಲ್ಲದೇ ವ್ಯಾಪಾರದಲ್ಲಿ ಪಡೆಯುತ್ತಿದ್ದ ಲಾಭ ಸ್ಥಳೀಯರಲ್ಲಿ ಅಸಮಧಾನವನ್ನು ಉಂಟುಮಾಡಿದ್ದು ತಿಳಿಯುತ್ತದೆ. ಹಂಜಮಾನರು ವಿಜಯನಗರ ಕಾಲದಲ್ಲಿ ಪಡೆದಿದ್ದ ಗೌರವ ಹಾಗೂ ಪ್ರತಿಷ್ಠೆಯನ್ನು ತೋರಿಸುವ ಶಾಸನವಿದೆ[೧೬೨]. ಕ್ರಿ.ಶ. ೧೩೮೭ ರಿಂದ ೧೪೨೩ರ ವರೆಗೆ ಬಾರ್ಕೂರು ಮತ್ತು ಮಂಗಳೂರು

ರಾಜ್ಯಗಳು ಹಲವಾರು ರಾಜ್ಯಪಾಲರುಗಳಿಂದ ಆಳಲ್ಪಟ್ಟಿತ್ತು. ಬೈಚಯ್ಯ ದಂಡನಾಯಕನಿಂದ ನೇಮಿಸಲ್ಪಟ್ಟಿದ್ದ ರಾಜಪಾಲನಾದ ಕ್ರಿ.ಶ ೧೪೧೮ ರಲ್ಲಿ ಮಂಗಳೂರು ರಾಜ್ಯವನ್ನು ಆಳುತ್ತಿದ್ದವನೂ ಆದ ತಿಮ್ಮಣ್ಣ ಒಡೆಯ ಸಾಮ್ರಾಜ್ಯದ ಸೇನೆಯನ್ನು ಹರಿಯಬಿಟ್ಟು ಹಂಜಮಾನರ ಕೆಲವು ಹಳ್ಳಿಗಳನ್ನು ಸುಟ್ಟುಹಾಕಿಸಿದನು. ಈ ವಿಚಾರ ಒಂದನೇ ದೇವರಾಯ ಹಾಗೂ ಬೈಚಯ್ಯ ದಂಡನಾಯಕರಿಗೆ ತಿಳಿದು ನಕರಹಂಜಮಾನರ ವಿರುದ್ದ ಕೈಗೊಂಡಿದ್ದ ಕಾರ್ಯಾಚರಣೆಯನ್ನು ಆ ಕೂಡಲೇ ನಿಲ್ಲಿಸಿ, ಅವರ ಒಕ್ಕಲುತನವನ್ನು ಅವರಿಗೇ ಒಪ್ಪಿಸಬೇಕೆಂದೂ, ಅವರಿಗೆ ಮಾನ್ಯ ಪರಿಹಾರ ನೀಡಬೇಕೆಂದು ಆದೇಶಿಸಿದ್ದು[೧೬೩] ಆ ಶಾಸನ ತಿಳಿಸುತ್ತದೆ. ಇದರಿಂದ ಅಂದು ಹಂಜಮಾನರು ಹೊಂದಿದ್ದ ಗೌರವ ತಿಳಿಯುತ್ತದೆ. ಅಂಥಹದ್ದೇ ಇನ್ನೊಂದು ಘಟನೆ ತಿಳಿಸುವ ಕೈಕಿಣಿಯ[೧೬೪] ಶಾಸನವಿದೆ. ವಿಜಯನಗರದರಸ ಒಂದನೇ ದೇವರಾಯನ ಕಾಲದಲ್ಲಿ ತಿಮ್ಮಣ್ಣ ಒಡೆಯನು ಹೊನ್ನಾವರದಿಂದ ಹೈವೆ, ತುಳು, ಕೊಂಕಣ ರಾಜ್ಯಗಳನ್ನು ಪರಿಪಾಲಿಸುತ್ತಿದ್ದಾಗ, ಹಂಜಮಾನ ಸಂಘದ ನಾಯಕನಾದ ಉಮ್ಮರ ಮರಕಾಲನು ತಿಮ್ಮಣ್ಣ ಒಡೆಯರೊಂದಿಗೆ ವಿರೋಧ ಬೆಳೆಸಿ ತನ್ನ ಸೇನಾ ಪರಿವಾರ ಸಮೇತನಾಗಿ ನಗಿರೆಯ ಸಂಗೀರಾಯ ಒಡೆಯನ ಬಳಿಗೆ ಧಾವಿಸಿಬಂದು, ತನಗೂ ರಾಜ್ಯಪಾಲನಿಗೂ ನಡುವೆ ಪುನಃ ಶಾಂತಿವಾತಾವರಣವು ನೆಲೆಸುವಂತೆ ಮಾಡಬೇಕೆಂದು ಬಿನ್ನವಿಸಿಕೊಂಡನು. ಸಂಗೀರಾಯನು ಅದಕ್ಕೆ ಒಪ್ಪಿ, ಮಾತುಕತೆಗಳು ನಡೆಯುತ್ತಿರುವಾಗ ಉಮ್ಮರಮರಕಾಲನು ಅವನ ಪರಿವಾರದವರೂ ಕಾಸರಕೋಡಿನಲ್ಲಿ ತಂಗಿರಬೇಕೆಂದು ಸೂಚಿಸಿದನು. ಅಲ್ಲದೆ ಹಂಜಮಾನದವರ ರಕ್ಷಣೆಗಾಗಿ ಕೋಟೇಶ್ವರನಾಯಕನ ನಾಯಕತ್ವದಲ್ಲಿ ತನ್ನ ಸೇನೆಯ ಸಾವಿರ ಭಂಟರನ್ನು ಕಾಸಕೋಡಿಗೆ ಕಳುಹಿಸಿಕೊಟ್ಟನು. ಇಷ್ಟರಲ್ಲೇ ತಿಮ್ಮಣ್ಣ ಒಡೆಯನು ಸೇನೆಯೊಡನೆ ಬಂದು ಮೋಸದಿಂದ ಕಾಸರಕೋಡನ್ನು ಮುತ್ತಿ ಉಮ್ಮರ ಮರಕಾಲ ಮುಂತಾದ ಹಂಜಮಾನದವರ ಹೆಣ್ಣುಮಕ್ಕಳನ್ನು ತೊಂದರೆ ಗೀಡು ಮಾಡಿದಕ್ಕೆ ಸಿಟ್ಟಿಗೆದ್ದ ಕೋಟೇಶ್ವರ ನಾಯಕನು ಸಾಮ್ರಾಜ್ಯದ ಸೇನೆಯೊಡನೆ ಕಾದಾಡುತ್ತ, ಹಂಜಮಾನದವರನ್ನು ಸುರಕ್ಷಿತ ಪ್ರದೇಶಕ್ಕೆ ದೋಣಿಗಳ ಮೂಲಕ ಸಾಗಿಸಿದನು[೧೬೫] ಎಂದು ಶಾಸನದಲ್ಲಿ ವಿವರಿಸಿದೆ. ಇದೆಲ್ಲ ಹಂಜಮಾನರು ಆಡಳಿತದೊಂದಿಗೆ ಸ್ನೇಹ ಹಾಗೂ ಅವರ ಬಗ್ಗೆ ಅರಸರಲ್ಲಿದ್ದ ಗೌರವವನ್ನು ತೋರಿಸುತ್ತದೆ.

ಹಂಜಮಾನರು ತಾವು ನಡೆಸುವ ವ್ಯಾಪಾರವನ್ನು ನಖರರ ಮೂಲಕ ನಡೆಸುತ್ತಿದ್ದರೆಂದು ಊಹಿಸಬಹುದಾಗಿದೆ. ಶಾಸನಗಳಲ್ಲಿ ನಖರಹಂಜಮಾನ ಎಂಬ ಶಬ್ಧವನ್ನು ಆಗಾಗ ನೋಡಬಹುದು. ಸ್ಥಳೀಯ ಭಾಷೆ ಹಾಗೂ ರೀತಿ ನೀತಿಗಳು ಸರಿಯಾಗಿ ತಿಳಿಯದ್ದರಿಂದ ಒಳನಾಡಿನ ವ್ಯಾಪಾರಕ್ಕೆ ಸ್ಥಳೀಯರಾದ ನಖರ ಅಥವಾ ನಕರರ ಸಹಾಯ ಪಡೆಯುತ್ತಿದ್ದರು.

ಅವರ ಮೂಲಕ ತಮ್ಮ ವಿದೇಶಿ ಸರಕುಗಳನ್ನು ಮಾರಾಟ ಮಾಡಿಸುವುದು, ತಮಗೆ ಬೇಕಾದ ಸ್ಥಳೀಯ ಸರಕುಗಳನ್ನು ಸಂಗ್ರಹಿಸುವ ಕೆಲಸ ಮಾಡುತ್ತಿದ್ದರು. ಕೈಕಿಣಿಯ[೧೬೬] ಶಾಸನವು ನಖರ ಹಂಜಮಾನದವರನ್ನು ಉಲ್ಲೇಖಿಸುತ್ತದೆ. ಕೊನೆಯಲ್ಲಿ ನಖರರನ್ನು ಮತ್ತಿತರರನ್ನು ಹೆಸರಿಸುತ್ತದೆ. ಕ್ರಿ.ಶ ೧೪೭೪ ರಲ್ಲಿ ವಿಠ್ಠರಸನು ಮಂಗಳೂರು-ಬಾರ್ಕೂರು ರಾಜ್ಯಪಾಲನಾಗಿದ್ದ. ಒದೆವೂರು ಹೊಲಗಳ ವಿಷಯದಲ್ಲಿ ಬಾರ್ಕೂರಿನ ಸೈನಿಕರಿಗೂ ಮತ್ತು ನಖರಹಂಜಮಾನ ಸಂಘಗಳಿಗೂ ವ್ಯಾಜ್ಯ ಹುಟ್ಟಿದಾಗ ವಿಚಾರಣೆ ನಡೆದು ನಕರ ಸಂಘಕ್ಕೆ ಅನುಕೂಲವಾದ ತೀರ್ಪು ನೀಡಿದ್ದು[೧೬೭] ತಿಳಿಯುತ್ತದೆ. ಇದೆಲ್ಲ ಉಲ್ಲೇಖಗಳಿಂದ ನಖರರು ಹಂಜಮಾನರ ಸ್ಥಳೀಯ ವ್ಯವಹಾರಗಳ ಮಧ್ಯವರ್ತಿಗಳೆಂದು ತಿಳಿಯಬಹುದಾಗಿದೆ.

ನಕರ ಸಂಘವು ಪ್ರಾಚೀನವಾಗಿದ್ದು ಅದು ಸ್ಥಳೀಯವಾಗಿ ಹಾಗೂ ರಾಜ್ಯದ ವಿವಿಧ ಪ್ರಮುಖ ವ್ಯಾಪಾರಿ ಪಟ್ಟಣಗಳಲ್ಲಿ ವ್ಯಾಪಕವಾಗಿ ಹಬ್ಬಿತ್ತು. ನಖರರು ಎಲ್ಲ ವಿಧದ ವ್ಯಾಪಾರ ಮಾಡುತಿದ್ದರೂ, ಇವರು ಬೆಲೆಬಾಳುವ ಹರಳುಗಳು, ಉತ್ತಮ ತಳಿಯ ಕುದುರೆಗಳು ಮುಂತಾದವುಗಳ ವ್ಯಾಪಾರದಲ್ಲಿ(ಬೆಳ್ಳಿಗಾವೆ ಶಾಸನ) ತೊಡಗಿದ್ದನ್ನು ತೋರಿಸುವ ಉಲ್ಲೇಖಗಳು ಸಿಗುತ್ತವೆ. ವಿಜಯ ನಗರದ ಅರಸರಿಗೆ ಹರಳು, ಮುತ್ತು, ವಜ್ರ ಹಾಗೂ ಕುದುರೆ ಮುಂತಾದ ವಿದೇಶಿಯ ವಸ್ತುಗಳನ್ನು ಪ್ರಾಣಿಗಳನ್ನು ಒದಗಿಸುತ್ತಿದ್ದರು, ಇವರು ಪರ್ಶಿಯಾ, ಅರೇಬಿಯಾ ಮುಂತಾದದೇಶಗಳ ವ್ಯಾಪಾರಿಗಳಾಗಿದ್ದರೆಂದು ತಿಳಿಯಬಹುದಾಗಿದೆ.

ಬಾರ್ಕೂರು, ಮಂಗಳೂರು, ಬಸರೂರು, ಮೂಡಬಿದರೆ, ವೇಣೂರು, ಕುಂದಾಪುರ, ಗಂಗೊಳ್ಳಿ, ಬೈಂದೂರು, ಭಟ್ಕಳ, ಹಾಡೋವಳ್ಳಿ, ಕೈಕಿಣಿ, ಮುರ್ಡೇಶ್ವರ, ಹೊನ್ನಾವರ, ಕಾಸರಕೊಡ, ಗೇರುಸೊಪ್ಪಾ, ಕುಮಟಾ, ಚಂದಾವರ, ಅಂಕೋಲಾ, ಹಟ್ಟಿಕೇರಿ, ಅವರ್ಸಾ, ಅಲಿಗದ್ದಾ, ಅಮದಳ್ಳಿ, ಕಾರವಾರ ಮುಂತಾದವು ಇವರ ಕೇಂದ್ರಗಳಾಗಿದ್ದವು.

ಹಂಜಮಾನರು ಶ್ರೀಮಂತ ವರ್ತಕರಾಗಿದ್ದಂತೆ ಸ್ಥಳೀಯರೊಂದಿಗೆ ಉತ್ತಮ ಬಾಂದವ್ಯವನ್ನು ಹೊಂದಿದ್ದರು. ಸೌಹಾರ್ಧತೆಯಿಂದ ನಡೆದುಕೊಳ್ಳುತ್ತಿದ್ದರು. ಬಸರೂರಿನ ದಾಖಲೆಯೊಂದರಲ್ಲಿ ತಿಳಿಸಿದಂತೆ ಇವರು ಮಾಡಿದ ಕೊಲೆಗೆ ಕ್ಷಮೆಯಾಗಿ ದಂಡತೆತ್ತಿದ್ದು, ದೇವಾಲಯಕ್ಕೆ ದಾನ ನೀಡಿದ್ದು ತಿಳಿಯುತ್ತದೆ[೧೬೮]. ಸ್ಥಳೀಯರೊಂದಿಗೆ ಇವರ ಹೊಂದಾಣಿಕೆ ಉತ್ತಮವಾಗಿತ್ತು. ಮುಂದೆ ಹಲವಾರು ಬದಲಾವಣೆಗಳಿಂದ ಮತ್ತು ಐರೋಪ್ಯರ ಆಗಮನದೊಂದಿಗೆ ಇವರು ಹಿನ್ನೆಲೆಗೆ ಸರಿದರು.

೬.೪ ವ್ಯಾಪಾರ ಹಾಗೂ ವಾಣಿಜ್ಯ

ವೃತ್ತಿ ಸಂಘಗಳನ್ನು ಸ್ಥಾಪಿಸಿಕೊಂಡು ವ್ಯಾಪಾರ-ವ್ಯವಹಾರಗಳನ್ನು ನಡೆಸಿಕೊಂಡು ಬಂದ ವರ್ತಕ ಸಂಘಗಳು ವಿವಿಧ ಬಗೆಯ ವ್ಯಾಪಾರ ನಡೆಸಿದ್ದರು. ಹಲವಾರು ಹೆಸರುಗಳಲ್ಲಿ ಸಂಘ ನಿರ್ಮಿಸಿಕೊಂಡು ವಾಣಿಜ್ಯವನ್ನು ನಡೆಸಿದ್ದರು. ಹಲವಾರು ಹೆಸರುಗಳಲ್ಲಿ ನಿರ್ಮಾಣಗೊಂಡ ವ್ಯಾಪಾರಿ ಸಂಘಗಳು ಹೇರು, ನದಿ ಮಾರ್ಗ, ಕಡಲು ಮಾರ್ಗಗಳ ಮೂಲಕ ಸರಕುಗಳನ್ನು ಸಾಗಿಸಿ ದೇಶದ ಆಂತರಿಕ ಹಾಗೂ ಕಡಲೋತ್ತರ ವ್ಯಾಪಾರ ನಡೆಸಿದ್ದರು. ಗುಂಪು ಗುಂಪಾಗಿ ಹೋಗುತ್ತಿದ್ದ ಈ ವರ್ತಕರು ಕಡಲೋತ್ತರ ವ್ಯಾಪಾರದಲ್ಲೂ ಹತ್ತು-ಹನ್ನೆರಡು ನೌಕೆಗಳಲ್ಲಿ ಸಾಗುತ್ತಿದ್ದರು. ಹಸುಬೆ, ಮೂಟೆ, ಹೆಡಗಿ, ಕಲ್ಲಿ, ಕೊಡ, ಚರ್ಮದಚೀಲ, ಬಿದಿರಿನ ಕೊಳವೆ, ಸೋರೆಕಾಯಿ, ಜಲ್ಲೆಗಳ ಎರಡು ತುದಿಗಳಲ್ಲಿ ಸಮಭಾರದಲ್ಲಿ ತುಂಬಿದ ಸರಕುಗಳನ್ನು ಹೆಗಲ ಮೇಲೆ ಹೊತ್ತು ಸಾಗಿಸುತ್ತಿದ್ದರು. ಎತ್ತು, ಕತ್ತೆ, ಕೋಣ, ಎಮ್ಮೆ, ಕುದುರೆ, ಬಂಡಿಗಳ ಮೂಲಕವೂ ಸಾಗಿಸುತ್ತಿದ್ದರು. ಬಂಡಿಗಳಲ್ಲಿ ಬಿದಿರಿನ ಬಂಡಿ, ಮರದ ಬಂಡಿಗಳೆಂದು ಎರಡು ಪ್ರಕಾರಗಳಿದ್ದವು. ಜೊತೆಗೆ ಮೂಟೆ, ಹೆಡಿಗೆ ತಲೆಯ ಮೇಲೆ ಹೊತ್ತುಕೊಂಡು ಹೋಗುತ್ತಿದ್ದರು[೧೭]. ಕತ್ತೆ, ಕುದುರೆ, ಎಮ್ಮೆ, ಕೋಣಗಳ ಸಹಾಯದಿಂದ ಚಕ್ಕಡಿಯಲ್ಲಿ ಸಾಗಾಟ ಮಾಡುತ್ತಿದ್ದರು. ಕರಾವಳಿಯ ನದಿಗಳಲ್ಲಿ ಸಣ್ಣ ದೋಣಿಗಳು, ಪಾತಿ ದೋಣಿಗಳು, ತೆಪ್ಪ, ಹಾಯಿದೋಣಿಗಳನ್ನು ಬಳಸುತ್ತಿದ್ದರು. ಒಳಭಾಗದ ವ್ಯಾಪಾರದಲ್ಲಿ ನದಿ-ಹಳ್ಳ ಹಾಗೂ ಕಾಲುದಾರಿ ಎರಡನ್ನು ಬಳಸಿ ಸ್ಥಳ ತಲುಪುತ್ತಿದ್ದರು.

ವ್ಯಾಪಾರಕ್ಕಾಗಿ ಹೊರಟಾಗ ನಡೆಯುತ್ತಿದ್ದ ಹಾದಿಗಳ್ಳರ ದಾಳಿಗಳಿಂದ ರಕ್ಷಣೆ ಪಡೆಯಲು ಬಿಲ್ಲುಗಾರರನ್ನು ತಮ್ಮೊಡನೆ ಕರೆದೊಯ್ಯುತ್ತಿದ್ದರು. ವ್ಯಾಪಾರಕ್ಕಾಗಿ ಹೊರಟಾಗ ಕೇವಲ ೫೦-೬೦ ಜನರ ಸಣ್ಣ ಗುಂಪುಗಳಲ್ಲಿ ಸಂಚರಿಸದೆ ೧೫೦-೨೦೦ ಜನರ ದೊಡ್ಡ ತಂಡದೊಂದಿಗೆ ಹೋಗುತ್ತಿದ್ದರು. ಪ್ರಮುಖ ವ್ಯಾಪಾರಿ ಪಟ್ಟಣ ತಲುಪುವುದಕ್ಕೆ ದೀರ್ಘಕಾಲ ತಗಲುತ್ತಿದ್ದುದರಿಂದ ತಮ್ಮೊಡನೆ ದಾರಿ ಮಧ್ಯೆ ಊಟ ಇತ್ಯದಿಗಳಿಗಾಗಿ ಅಡುಗೆಯವರನ್ನು ಕರೆದೊಯ್ಯುತ್ತಿದ್ದರು.

ನಿರ್ಧಿಷ್ಟ ವ್ಯಾಪಾರಿ ಪಟ್ಟಣಗಳಿಗೆ ಹೋಗಿ ವ್ಯಾಪಾರ ನಡೆಸಿ, ಅಲ್ಲಿಯ ಆಡಳಿತಕ್ಕೆ ತೆರಿಗೆ ಸಲ್ಲಿಸುತ್ತಿದ್ದರು. ಸಣ್ಣ ಸಣ್ಣ ವ್ಯಾಪಾರಿಗಳು ಹಳ್ಳಿ-ಕೇರಿಗಳಲ್ಲಿ ತಮ್ಮ ಹೇರುಗಳಲ್ಲಿ ಒಯ್ದುಸಾಮಾನುಗಳ ವ್ಯಾಪಾರ ಮಾಡುತ್ತಿದ್ದರು. ಘಟ್ಟದ ಪ್ರದೇಶಗಳಲ್ಲಿ ಜನರಿಗೆ ಅಗತ್ಯವಿದ್ದ ಉಪ್ಪು ದೊಡ್ಡ ಪ್ರಮಾಣದಲ್ಲಿ ಕರಾವಳಿಯಿಂದ ಸಾಗಾಟವಾಗುತ್ತಿತ್ತು. ಅದಕ್ಕಾಗಿ ಮಧ್ಯ-ಮಧ್ಯ ಉಪ್ಪು ಸಂಗ್ರಹಾಗಾರಗಳಿದ್ದವು. ಇಂದಿಗೂ ನೋಡಸಿಗುವ ಉಪ್ಪೂರು, ಉಪ್ಪುಂದ, ಉಪ್ಪೋಣಿ,

ಉಪ್ಪಿನಗಣಪತಿ ಮುಂತಾದವುಗಳು ಹಿಂದೆ ಉಪ್ಪು ಸರಬರಾಜಾಗುತ್ತಿದ್ದ, ಉಪ್ಪು ಸಂಗ್ರಹಿಸುತ್ತಿದ್ದ ಸ್ಥಳಗಳನ್ನು ಸೂಚಿಸುತ್ತವೆ.

೬.೪.೧ ಆಂತರಿಕ ವ್ಯಾಪಾರ ಮತ್ತು ಬಾಹ್ಯ ವ್ಯಾಪಾರ

ಪ್ರಾಚೀನ ಹಾಗೂ ಮಧ್ಯಕಾಲದಲ್ಲಿ ಬಂದರುಗಳ ಮೂಲಕ ದೇಶ ಹಾಗೂ ವಿದೇಶಗಳ ನಡುವೆ ವ್ಯಾಪಾರ-ವ್ಯವಹಾರಗಳು ಬೃಹತ್ ಪ್ರಮಾಣದಲ್ಲಿ ನಡೆಯುತ್ತಿತ್ತು. ಹಾಗೆ ಬಂದರುಗಳು ಆಂತರಿಕ ವ್ಯಾಪಾರ ವ್ಯವಹಾರಗಳಲ್ಲೂ ತೊಡಗಿಕೊಂಡಿದ್ದವು. ಈ ಕಾಲದಲ್ಲಿ ವಿವಿಧ ಸರಕುಗಳು ಪ್ರಾಣಿ-ಪಕ್ಷಿಗಳು, ವನಸ್ಪತಿ ಮುಂತಾದವುಗಳ ವ್ಯಾಪಾರ ನಡೆಯುತ್ತಿತ್ತು. ವಿವಿಧ ಬಗೆಯ ಮಸಾಲೆ ದಿನಿಸುಗಳು ಹಾಗೂ ಆಹಾರ ಧಾನ್ಯಗಳು, ವಿವಿಧ ತಳಿಯ ಭತ್ತಗಳು ವ್ಯಾಪಾರದ ಮುಖ್ಯ ಸರಕಾಗಿದ್ದವು.

ಸ್ಥಳೀಯ ಹಾಗೂ ವಿದೇಶಗಳ ವ್ಯಾಪಾರಿಗಳು ತಮ್ಮ ಸಹಾಯಕರೊಂದಿಗೆ ರೇವು ಪಟ್ಟಣದಲ್ಲಿ ತಮ್ಮ ಮಳಿಗೆಗಳನ್ನು ಸ್ಥಾಪಿಸಿಕೊಂಡು ವ್ಯಾಪಾರ ಮಾಡುತ್ತಿದ್ದರು[೧೭೦]. ಈ ವ್ಯಾಪಾರದಲ್ಲಿ ಅಕ್ಕಿ, ಅಡಿಕೆ, ಉಪ್ಪು, ಏಲಕ್ಕಿ, ಕಾಳುಮೆಣಸು, ದಂತ, ಉಕ್ಕು, ಗಂಧದೆಣ್ಣೆ, ದಾಲ್ಚಿನಿ, ತಾಳೆ, ಸಕ್ಕರೆ, ತಾಮ್ರ, ತಾಳೆಮದ್ಯ, ತೆಂಗಿನಕಾಯಿ, ಬಟ್ಟೆ, ಬೀಟೆ-ಸಾಗುವಾನಿ ಮರಮಟ್ಟುಗಳು, ಭತ್ತ, ಮಸಾಲೆ ಪದಾರ್ಥಗಳು, ಲವಂಗ, ವೀಳ್ಯದೆಲೆ, ಶುಂಠಿ, ಶ್ರೀಗಂಧ[೧೭೧], ಹತ್ತಿ, ಹುರಿಹಗ್ಗ ಮುಂತಾದವುಗಳ ವ್ಯಾಪಾರ ನಡೆಯುತ್ತಿತ್ತು. ಆಂತರಿಕ ವ್ಯಾಪಾರಕ್ಕೆ ಮುಖ್ಯವಾಗಿ ಸ್ಥಳೀಯರ ಅಗತ್ಯ ವಸ್ತುಗಳಾದ ಭತ್ತ, ಜೋಳ, ಎಳ್ಳು ಹಾಲುವಳ್ಳಿ, ಅವರೆ, ಕಡಲೆ, ತೊಗರಿ, ಗೋಧಿ, ಉದ್ದು, ಜೀರಿಗೆ, ಸಾಸಿವೆ, ಮೆಣಸು, ಶುಂಠಿ, ಅರಿಶಿಣ , ಏಲಕ್ಕಿ, ಮೆಂತೆ, ಸಬ್ಬಸಿಗೆ, ಕೊತ್ತುಂಬರಿ, ಬೆಳ್ಳುಳ್ಳಿ, ಈರುಳ್ಳಿ, ಬೇಳೆ, ಇಂಗು, ಹತ್ತಿ ನೂಲು, ಸೀರೆ, ಪಟ್ಟ, ಪಟ್ಟಾವಳಿ, ಪಳಿಪಟ್ಟ, ಸೂತ್ರ, ಪಂಚವಣ್ಣಿಗೆ, ಸೆಣಬು, ಕಂಬಳಿ, ಹುಲಿದೊಗಲು, ವೀಳ್ಯದೆಲೆ, ವಜ್ರವೈಢೂರ್ಯ, ಗೋಮೆದಿಕ, ಪುಷ್ಯರಾಗ, ಪದ್ಮರಾಗ, ಪದಳ, ಮರಕತ, ಕೇತನ, ಚಿನ್ನ, ತವರ, ಬೆಲ್ಲ, ಸಕ್ಕರೆ, ಉಪ್ಪು, ಎಣ್ಣೆ, ತುಪ್ಪ, ಲವಂಗ, ಅರಗು, ಚಂದನ, ಕುಂಕುಮ, ಮಾಲೆ, ಗಜ, ಕರ್ಪೂರ, ಕಸ್ತೂರಿ, ಕಾಡಿಗೆ, ಓಲೆ(ತಾಳೆ), ಕಾಯಿಪಲ್ಲೆ, ಬಾಳೆಹಣ್ಣು, ತೆಂಗಿನಕಾಯಿ, ಎಲಿವಾದ್ರಕಾಯಿ, ನೆಲ್ಲಿಕಾಯಿ, ಹಾವು, ಕಬ್ಬು, ಹಿಪ್ಪಲಿ, ಶಂಖ, ಕಾಷ್ಟ, ಕುದುರೆ, ಎತ್ತು, ನಾರು, ಬೇವು, ಚಮರಿ, ಸೈಂದವ, ಕಾರಬೀಜ, ಮೊರ, ಪಾದರಕ್ಷೆ, ಮಿಣಿ, ಗಡಿಗೆ, ಹುಲ್ಲು, ಬುಟ್ಟಿ[೧೭೨] ಮುಂತಾದವು ವ್ಯಾಪಾರ ಗೊಳ್ಳುತ್ತಿದ್ದವು.

ಬೆಲೆಬಾಳುವ ಲೋಹಗಳಾದ ಬಂಗಾರ, ಬೆಳ್ಳಿ, ತಾಮ್ರ ಮುಂತಾದವುಗಳು ವ್ಯಾಪಾರಕ್ಕಾಗಿ ಕರಾವಳಿಯ ಬಂದರುಗಳಿಗೆ ಬರುತ್ತಿದ್ದವು. ಕೋಲಾರ ಚಿನ್ನದಗಣಿಯಲ್ಲಿ ತೆಗೆದ ಲೋಹವನ್ನು ಹೊನ್ನಾವರ ಬಂದರಿನ ಮೂಲಕ ಸಿಂಧು ಕಣಿವೆಗೆ ಸಾಗಿಸುತ್ತಿದ್ದರು ಎಂದು ಅನೇಕ ವಿದ್ವಾಂಸರು

ಗುರುತಿಸಿದ್ದಾರೆ. ಅನೇಕ ಬಂದರುಗಳು ಚಿನ್ನದ ಸಾಗಾಟವನ್ನು ತಮ್ಮ ಹೆಸರಿನಲ್ಲಿಯೇ ಸೂಚಿಸುತ್ತವೆ. ಉದಾಹರಣೆಗೆ ಹೊನ್ನಾವರದಂತೆ ಕುಮಟಾ ಬಂದರಿನ ಮುಖಜ ಪ್ರದೇಶ ಹೊನ್ನಳ್ಳಿ. ಇದು ಹೊನ್ನಿನ ಹಳ್ಳಿ ಎಂಬ ಅರ್ಥವನ್ನು ಹೊಮ್ಮಿಸುತ್ತದೆ. ಅಂತಹ ಬೆಲೆಬಾಳುವ ಲೋಹಗಳ ವ್ಯಾಪಾರ ಈ ಬಂದರುಗಳ ಮೂಲಕ ನಡೆಯುತ್ತಿತ್ತೆಂದು ತಿಳಿಸುತ್ತವೆ.

ಬಳ್ಳಿಗಾವೆಯ ವರ್ತಕರು ಇಂದ್ರನೀಲ, ಚಂದ್ರಕಾಂತ, ಮುತ್ತು, ಮಾಣಿಕ್ಯ, ವಜ್ರ, ವೈಢೂರ್ಯ, ಗೋಮೇಧಿಕ, ಪುಷ್ಯರಾಗ, ಪದ್ಮರಾಗ ಮುಂತಾದ ರತ್ನಗಳ ವ್ಯಾಪಾರ ಮಾಡುತ್ತಿದ್ದರೆಂದು ತಿಳಿದು ಬರುತ್ತದೆ[೧೭೩].

ಬ್ರಹ್ಮಗಿರಿ, ಸಿದ್ಧಾಪುರ, ಜಟಿಂಗರಾಮೇಶ್ವರ, ಮಸ್ಕಿ, ನಿಟ್ಟೂರು, ಉದಂಗೋಲ, ಪಾಲಕಿಗುಂಡು, ಗವಿಮಠಗಳಲ್ಲಿ ಬಹುಲೋಹ ದೊರಕುತ್ತಿತ್ತು. ಕರ್ನಾಟಕದ ವ್ಯಾಪಾರಿಗಳು ವಜ್ರದ ವ್ಯಾಪಾರವನ್ನು ನಡೆಸುತ್ತಿದ್ದರು. ಬಳ್ಳಾರಿಯಲ್ಲಿ ದೊರೆಯುವ ವಿಶಿಷ್ಟ ಮಣಿಗಳ ಹಾರ ಮಾಡಿ ವ್ಯಾಪಾರ ಮಾಡುತ್ತಿದ್ದರು.

ಆನೆ, ಕುದುರೆ, ಮಂಗ, ನವಿಲು ಮುಂತಾದ ಪ್ರಾಣಿ ಪಕ್ಷಿಗಳು ಎಣ್ಣೆ, ಹತ್ತಿಯ ನೂಲು, ಬಣ್ಣದ ನೂಲು, ವಸ್ತ್ರಗಳು, ಮರದ ಹಲಗೆ, ಬಿದಿರು, ಲೋಹದ ವಿಗ್ರಹಗಳು, ಬಳಪ, ಓಲೆಗರಿ[೧೭೪] ಮಾವು, ಹಲಸು, ಲಿಂಬೆ, ದ್ರಾಕ್ಷಿ, ದಾಳಿಂಬೆ, ಕಿತ್ತಳೆ, ಮಾದಲ, ಹುಣಿಸೆ, ಚಂದನ, ಹೊಂಗೆ, ಬೇವು, ನೆಲ್ಲಿಕಾಯಿ, ಹೊನ್ನೆ, ಹಿಪ್ಪೆ, ಕುಂಬಳ, ಬದನೆ, ಪಡವಲ[೧೭೫], ಮುಂತಾದವುಗಳು ವ್ಯಾಪಾರದ ಇನ್ನಿತರ ಸರಕುಗಳಾಗಿದ್ದವು. ಇವುಗಳನ್ನು ಚಾವುಂಡರಾಯ ತನ್ನ ಲೋಕೋಪಕಾರ ಕೃತಿಯಲ್ಲಿ ನೀಡಿದ್ದಾನೆ. ಇವುಗಳು ಅಂದು ಸಂತೆ, ಪೇಟೆ ಪಟ್ಟಣ ಅಂಗಡಿಗಳಲಿ ಮಾರಾಟವಾಗುತ್ತಿದ್ದವು. ಕೃಷಿಗೆ ಸಂಬಂಧಿಸಿದ ಸಲಕರಣೆಗಳು, ಶಿಲ್ಪಗಾರರ ಶಿಲ್ಪಗಳು, ಮರದ ಸಲಕರಣೆಗಳು ಕೂಡಾ ಮಾರಾಟವಾಗುತ್ತಿದ್ದವು. ಚೀನಾದೊಂದಿಗೆ ಚೀನಾಂಬರ, ರೋಮನ್ನರೊಂದಿಗೆ ಮದ್ಯ ಹಾಗೂ ಸುವಾಸನಾ ದ್ರವ್ಯಗಳು ಮುಂತಾದವುಗಳ ವ್ಯಾಪಾರ ನಡೆಸುತ್ತಿದ್ದರು. ಮಸ್ಲೀನ್ ಬಟ್ಟೆ ಹಾಗೂ ಕಾರ್ಲಿನಿಯನ್ ಗಾಜು, ಕ್ಲೋವರ್ ಎಂಬ ಕುದುರೆ ಮೇವು[೧೭೬] ಮುಂತಾದವುಗಳ ವ್ಯಾಪಾರವೂ ಇತ್ತು. ಕಡಲ ವ್ಯಾಪಾರಕ್ಕೆ ಕಲ್ಲಡ ಪಡವು, ಹಾಯಿ ಪಡವು, ಹಾಯಿ ದೋಣಿ, ಹಡಗು, ಮಾಂಜಿ, ಮಚ್ಚವೆ, ಪಟ್ಟಮಾರು, ಪೇರು, ಪಾತಿಮರಿ ವಿವಿಧ ಬಗೆಯ ಸಾಗರಯಾನದ ನೌಕೆಗಳಿದ್ದವು. ಒಳನಾಡುಗಳ ವ್ಯಾಪಾರಕ್ಕೆ ಚಕ್ಕಡಿಗಾಡಿ, ಕುದುರೆಗಾಡಿ, ಎತ್ತು, ದನ ಹಾಗೂ ಕತ್ತೆಗಳ ಹೇರು ಮುಂತಾದವುಗಳನ್ನು ಬಳಸುತ್ತಿದ್ದರು.

೬.೪.೨ ಹಣ ಮತ್ತು ನಾಣ್ಯಗಳು

ಪ್ರಾಚೀನ ಹಾಗೂ ಮಧ್ಯಕಾಲೀನ ಅವಧಿಯಲ್ಲಿ ವಿನಿಮಯ ಪದ್ಧತಿಯಿದ್ದರೂ, ಸರಕುಗಳ ವ್ಯಾಪಾರಕ್ಕೆ ಹಣವನ್ನು ಬಳಸುತ್ತಿದ್ದರು. ಶಾತವಾಹನರು ನಾಣ್ಯಗಳನ್ನು ಟಂಕಿಸಿದ್ದರು. ಶಾತವಾಹನರ ಮಾಂಡಲಿಕರಲ್ಲಿದ್ದ ಒಂದು ವರ್ಗದವರು 'ಕಾಜಾ' ಎಂಬ ನಾಣ್ಯ ಟಂಕಿಸುವ ಅಧಿಕಾರ ಉಳ್ಳವರಾಗಿದ್ದರು. ಬನವಾಸಿಯ ಚುಟುಗಳು ಈ ವರ್ಗಕ್ಕೆ ಸೇರಿದ್ದರು[೧೭೭].

ಬನವಾಸಿ ಕದಂಬರು ಮತ್ತು ಅವರ ವಂಶಸ್ಥರು ನಾಣ್ಯ ಚಲಾವಣೆಗೆ ತಂದ ನಾಣ್ಯಗಳ ಬಗ್ಗೆ ವಿದ್ವಾಂಸರು ತಿಳಿಸುತ್ತಾರೆ[೧೭೮]. ಅಂತೆಯೇ ಚಾಲುಕ್ಯರು, ಆಳುಪರು, ಹೊಯ್ಸಳರು ಮತ್ತು ವಿಜಯನಗರದ ಅರಸರು ನಾಣ್ಯಗಳನ್ನು ಟಂಕಿಸಿದ್ದರು. ಸ್ಥಳೀಯ ಅರಸು ಮನೆತನಗಳು ಸೀಮಿತವಾಗಿ ನಾಣ್ಯಗಳನ್ನು ಟಂಕಿಸಿದ್ದರು.

ಅಂದು ಕರಾವಳಿಯಲ್ಲಿ ಪ್ರಚಲಿತವಿದ್ದ ನಾಣ್ಯಗಳೆಂದರೆ ಪೊನ್ನು, ಗದ್ಯಾಣ, ಪಣ, ಹಾಗ, ಬೇಳೆ, ವೀಸ, ಕಾಣಿ, ಅಡ್ಡ, ದುಗ್ಗ, ಹೊನ್ನು, ವರಹ, ವಿದಳಪಾಂಡ್ಯ, ಗದ್ಯಾಣ, ಕಾಟಿ ಗದ್ಯಾಣ, ಕಠಾರಿ ಗದ್ಯಾಣ, ಅಂಕುಶ ಗದ್ಯಾಣ, ಕೋದಂಡ ಗದ್ಯಾಣ, ಅರ್ಧ ಕಾಟಿ ಗದ್ಯಾಣ, ಘಟ್ಟಿವರಹಗದ್ಯಾಣ, ಹಣ, ಬಾಹಿರ ಗದ್ಯಾಣ, ಸಣ್ಣ ಪ್ರತಾಪ ಗದ್ಯಾಣ, ದೊಡ್ಡ ವರಾಹ, ದೊಡ್ಡ ವರಾಹ ಗದ್ಯಾಣ, ಘಟ್ಟಿ ವರಾಹ, ಕಾಟಿ ಹೊನ್ನು, ಕಾಟಿ ಹಣ ಮುಂತಾದ ವಿವಿಧ ಬಗೆಯ ನಾಣ್ಯಗಳು[೧೭೯] ಚಲಾವಣೆಯಲ್ಲಿದ್ದವು. ಜೀತಗದ್ಯಾಣ ಮತ್ತು ತಾರಗಳೆಂಬ ಬೆಳ್ಳಿ ನಾಣ್ಯಗಳೂ[೧೮೦] ಬಳಕೆಯಲ್ಲಿದ್ದವು.

ಕರ್ನಾಟಕದ ವಿವಿಧೆಡೆಗಳಲ್ಲಿ ರೋಮನ್ ನಾಣ್ಯಗಳು ದೊಡ್ಡ ಸಂಖ್ಯೆಯಲ್ಲಿ ದೊರೆತಿವೆ. ರೋಮನ್ ವ್ಯಾಪಾರಿಗಳ ವಸತಿನೆಲೆ ಪೂರ್ವ ಕರಾವಳಿಯಲ್ಲಿ ಇದ್ದದ್ದು ತಿಳಿದು ಬಂದಿದೆ. ರೋಮನ್ ವ್ಯಾಪಾರಿಗಳು ಕರ್ನಾಟಕದ ಬಂದರುಗಳಲ್ಲಿ ತಮ್ಮ ವಸತಿ ನೆಲೆಯನ್ನು ಹೊಂದಿದ್ದರು. ಇವರು ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿದ್ದಾಗ ನಾಣ್ಯಗಳನ್ನು ಬಳಸಿದ್ದರು.

ಬಾರ್ಕೂರು-ಮಂಗಳೂರುಗಳಲ್ಲಿ ವಿಜಯನಗರದ ಕಾಲದಲ್ಲಿ ಟಂಕ ಶಾಲೆಗಳಿದ್ದವು[೧೮೧]. ಯಲ್ಲಾಪುರದ ಕುಂದುರಿನಲ್ಲಿ[೧೮೨] ದೊರೆತಿರುವ ಶಾತವಾಹನರ ನಾಣ್ಯಗಳ ರಾಶಿಯು, ಬನವಾಸಿ ಸಮೀಪದಲ್ಲಿ ಒಂದು ಟಂಕಶಾಲೆ ಇತ್ತೆಂಬುದನ್ನು ಸಾಬೀತುಪಡಿಸುತ್ತದೆ. ಕದಂಬರು ಮುಂದೆ ಚಲಾವಣೆಗೆ ತಂದ ನಾಣ್ಯಗಳನ್ನು ಟಂಕಿಸಲು ಇದೇ ಟಂಕಶಾಲೆ ಬಳಸಿಕೊಂಡಿರಬಹುದು.

ಚಿನ್ನದ ನಾಣ್ಯಗಳು ಬಳಕೆಗೆ ಬಂದ ಮೇಲೆ ವಿದೇಶಿ ವ್ಯಾಪಾರಕ್ಕೆ ಅನುಕೂಲವಾಯಿತು. ನಾಣ್ಯಗಳನ್ನು ಬಳಸಿ ಸರಕುಗಳ ವ್ಯಾಪಾರ ನಡೆಯತೊಡಗಿತು. ರೋಮನ್ ಅರಸರ ನಾಣ್ಯಗಳು ರಾಜ್ಯದಾದ್ಯಂತ ದೊರೆತಿರುವುದು ಇದಕ್ಕೊಂದು ನಿದರ್ಶನವಾಗಿದೆ.

ಬಂದರುಗಳು ದೇಶಿಯ ಹಾಗೂ ವಿದೇಶಿಯ ವ್ಯಾಪಾರದಲ್ಲಿ ತೊಡಗಿದ್ದಾಗ, ವ್ಯಾಪಾರಿಗಳು ತುಂಬಾ ಲಾಭಗಳಿಸಿಕೊಳ್ಳುತ್ತಾ, ಸಾಮಾಜಿಕವಾಗಿ ಗೌರವದ ಸ್ಥಾನ ಪಡೆದುಕೊಂಡಿದ್ದರು. ಸಮಾಜದ ಆಗು ಹೋಗುಗಳನ್ನು ನಿಯಂತ್ರಿಸುತ್ತಿದ್ದರು. ಅರಮನೆಯೊಂದಿಗೆ ಇವರಿಗೆ ಉತ್ತಮ ಸಂಬಂಧವಿತ್ತು. ಈ ವ್ಯಾಪಾರ ವಹಿವಾಟುಗಳಲ್ಲಿ ರಾಜನು ಸ್ವತಃ ಆಸಕ್ತಿ ಹೊಂದಿದ್ದನು. ರಾಜನ ಬೊಕ್ಕಸಕ್ಕೆ ಈ ವ್ಯಾಪಾರದಿಂದ ದೊಡ್ಡ ಪ್ರಮಾಣದ ಸಂಪತ್ತು ಹರಿದು ಬರುತ್ತಿತ್ತು. ಅಲ್ಲದೇ ನಾಡಿನ ಕೃಷಿ ಉತ್ಪನ್ನಗಳು, ನೈಸರ್ಗಿಕ ಉತ್ಪನ್ನಗಳು ಮಾರಾಟವಾಗುತ್ತಿದ್ದುದ್ದರಿಂದ ಸಲೀಸಾಗಿ ಆರ್ಥಿಕ ಬೆಳವಣಿಗೆ ಆಗುತ್ತಿತ್ತು. ರಾಜನ ಬೊಕ್ಕಸಕ್ಕೆ ನಾಣ್ಯದ ರೂಪದಲ್ಲಿ ಇವರು ತೆರಿಗೆಯನ್ನು ತುಂಬುತ್ತಿದ್ದರು. ಹಾಗೆ ದೇವಾಲಯಗಳಿಗೆ ನೀಡುತ್ತಿದ್ದ ದಾನದಲ್ಲಿ ಹಣವು ಸೇರಿತ್ತು.

ಸಮಾಜದ ದೊಡ್ಡ ಭಾಗವಾಗಿದ್ದ ಶೂದ್ರರು, ಕಾರ್ಮಿಕರಾಗಿ ಕೃಷಿ ಕಾರ್ಮಿಕರಾಗಿ ಮತ್ತು ವಿವಿಧ ವೃತ್ತಿಗಳನ್ನು ನಡೆಸುತ್ತಾ ಜೀವನ ನಿರ್ವಹಿಸುತ್ತಿದ್ದರು. ಅಂದಿನ ಸಮಾಜಕ್ಕೆ ಬೇಕಿದ್ದ ಕುಂಬಾರಿಕೆ, ಚರ್ಮಗಾರಿಕೆ, ಕೃಷಿ, ಬಡಗಿಕೆಲಸ, ಲೋಹದ ಕೆಲಸಗಳನ್ನೂ ಮಾಡುತ್ತಿದ್ದರು. ದಾನದತ್ತಿ ಪಡೆಯುವವರಾದ ಪುರೋಹಿತರು, ಬ್ರಾಹ್ಮಣರು, ವಿದ್ವಾಂಸರು, ಸೈನಿಕರು, ಮಾಂಡಲಿಕರು, ಅಧಿಕಾರಿಗಳು ಮತ್ತು ವಿವಿಧ ವ್ಯಾಪಾರಿ ಸಮುದಾಯದವರು ಸಮಾಜದ ಉನ್ನತ ಸ್ಥಾನದಲ್ಲಿದ್ದು, ಯಾವುದೇ ತೊಂದರೆ ಇಲ್ಲದೇ ಜೀವಿಸುತ್ತಿದ್ದರು.

೬.೫.೧ ಬಂದರಿನಿಂದ ಹಿನ್ನಾಡಿಗೆ ಸಂಪರ್ಕ ಕಲ್ಪಿಸುವ ವ್ಯಾಪಾರಿ ಮಾರ್ಗಗಳು

ಸರಕುಗಳನ್ನು ಒಂದು ಸ್ಥಳದಿಂದ–ಬೇಡಿಕೆ ಇರುವ ಸ್ಥಳಕ್ಕೆ ಸಾಗಿಸಲು ಉತ್ತಮ ಮಾರ್ಗಗಳ ಅವಶ್ಯಕತೆ ಇದೆ. ಸರಕು ಎಷ್ಟೇ ಬೆಲೆಬಾಳುವುದಿದ್ದರು, ಸರಿಯಾದ ಸಮಯಕ್ಕೆ ಅದು ಸ್ಥಳಕ್ಕೆ ತಲುಪದಿದ್ದರೆ ಅದರ ಮೌಲ್ಯ ಕಡಿಮೆ ಆಗುತ್ತದೆ. ಹೀಗೆ ವಸ್ತುಗಳನ್ನು ಕಡಿಮೆ ಸಮಯದಲ್ಲಿ ಸ್ಥಳಕ್ಕೆ ತಲುಪಿಸಲು ಉತ್ತಮ ಸಾಗಾಣಿಕಾ ಸೌಲಭ್ಯಬೇಕು.

ಪ್ರಾಚೀನ ಕಾಲದಲ್ಲಿ ಹಾಗೂ ಮಧ್ಯಕಾಲದಲ್ಲಿ ಕರಾವಳಿಯ ಮೂಲಕ ನಡೆದ ವ್ಯಾಪಾರ–ವಾಣಿಜ್ಯ ಉತ್ತಮ ಸಾಗಣಿಕಾ ಸೌಲಭ್ಯಗಳಿಂದ ಕೂಡಿತ್ತು. ಇದು ನದಿ ಹಾಗೂ ಭೂಮಾರ್ಗವನ್ನು ಒಳಗೊಂಡಿತ್ತು. ಕಡಲೋತ್ತರ ವ್ಯಾಪಾರಕ್ಕೆ ಅನುಕೂಲವಾದ, ಸುರಕ್ಷಿತವಾದ ಹತ್ತಿರದ ಕಡಲ ಮಾರ್ಗಗಳೂ ಇದ್ದವು. ಇವು ರೋಮ್, ಗ್ರೀಸ್, ಕೆಂಪು ಸಮುದ್ರ, ಭೂಮಧ್ಯ ಸಮುದ್ರ, ಪರ್ಶಿಯಾ–ಅರಬ್ ದೇಶಗಳು ಹಾಗೂ ಇಂಡೋನೇಷ್ಯ, ಶ್ರೀಲಂಕಾ, ಚೀನಾ ಮುಂತಾದೆಡೆ ತಲುಪುವ ಕಡಲ ಮಾರ್ಗವಾಗಿತ್ತು.

ಸರಕುಗಳನ್ನು ಸಾಗಿಸಲು ಹಾಗೂ ಉದ್ಯಮಗಳಿಗೆ ಕಚ್ಚಾ ಪದಾರ್ಥಗಳನ್ನು ಒದಗಿಸುವ ಹಿನ್ನಾಡಿನೊಂದಿಗೆ ಉತ್ತಮ ಸಂಪರ್ಕ ವ್ಯವಸ್ಥೆ ಏರ್ಪಟ್ಟಿತ್ತು. ಕರ್ನಾಟಕದ ಬಂದರುಗಳಿಗೆ ಆಂಧ್ರ

ಪ್ರದೇಶದ ಅನಂತಪುರ, ಗುತ್ತಿಗಳು, ತಮಿಳುನಾಡಿನ ಕೊಯಮತ್ತೂರು, ಮಹಾರಾಷ್ಟ್ರದ ದಕ್ಷಿಣ ಭಾಗಗಳು ಹಿನ್ನಾಡುಗಳಾಗಿದ್ದವು. ಆ ಪ್ರದೇಶಗಳಿಂದ ಸಿದ್ಧ ವಸ್ತುಗಳು ಮತ್ತು ವಿದೇಶಿ ವಸ್ತುಗಳೂ ಸಾಗಾಟಗೊಳ್ಳುತ್ತಿದ್ದವು. ತಮಿಳುನಾಡಿನ ಮಾಮಲ್ಲಪುರಂ, ಅರಿಕಮೇಡು ಮುಂತಾದೆಡೆ ಕರಾವಳಿಯ ವಸ್ತುಗಳು ಭೂಮಾರ್ಗವಾಗಿ ಸಾಗಾಟಗೊಳ್ಳುತ್ತಿತ್ತು.

೬.೫.೨ ಭೂಮಾರ್ಗಗಳು

ಭೂಮಾರ್ಗಗಳು ವಿಶಾಲವಾಗಿಯೂ, ಭೌಗೋಳಿಕ ಅಡೆತಡೆಗಳಿಂದ ಮುಕ್ತವಾಗಿಯೂ ಇದ್ದವು. ಹತ್ತಿರದ ಪೇಟೆ-ಪಟ್ಟಣ-ನಗರಗಳಿಗೆ ಬಂದರುಗಳ ಮೂಲಕ ಸಂಪರ್ಕ ಕಲ್ಪಿಸುವಂತಿದ್ದವು. ಈ ಮಾರ್ಗಗಳ ಮಧ್ಯದಲ್ಲಿ ಪಥಗಳ್ಳರಿಂದ ನಡೆಯುತ್ತಿದ್ದಂಥಹ ದರೋಡೆಯಿಂದ ರಕ್ಷಣೆ ಪಡೆಯಲು ಬಿಲ್ಲುಗಾರರ ಪಡೆಯನ್ನು ಜೊತೆಯಲ್ಲಿ ಕರೆದೊಯ್ಯುತ್ತಿದ್ದರು. ಹಲವಾರು ಹೇರು, ಕುದುರೆ, ಎತ್ತಿನ ಗಾಡಿ, ಎಮ್ಮೆ, ಎತ್ತು,ಕತ್ತೆ ಮುಂತಾದ ಪ್ರಾಣಿಗಳ ಮೇಲೆ ಹೇರಿಕೊಂಡು ಗುಂಪು ಗುಂಪಾಗಿ ಸಾಗುತ್ತಿದ್ದ ಸಾರ್ಥಗಳು ತಿಂಗಳು ಗಟ್ಟಲೆ ಪ್ರಯಾಣದ ನಂತರ ಸ್ಥಳಗಳನ್ನು ತಲುಪುತ್ತಿದ್ದವು. ದಕ್ಷಿಣ ಭಾರತವು ವಿಂಧ್ಯ-ಸಾತ್ಪುರಾ ಬೆಟ್ಟಗಳಿಂದ ಉತ್ತರದ ನೇರ ಸಂಪರ್ಕವನ್ನು ಕಳೆದು ಕೊಂಡಿದೆ. ಆದ್ದರಿಂದ ದಕ್ಷಿಣದಿಂದ ಉತ್ತರಕ್ಕೆ ಅಥವಾ ಪಶ್ಚಿಮ ಭಾರತದ ಗುಜರಾತ್-ರಾಜಸ್ಥಾನ ಮುಂತಾದೆಡೆ ತಲುಪಲು ಕಡಲ ಮಾರ್ಗ ಸಹಾಯಕವಾಗಿತ್ತು. ಅಲ್ಲಿಂದ ಮುಂದೆ ಭೂ ಮಾರ್ಗದಿಂದ ಸರಕುಗಳನ್ನು ವಿವಿಧ ಪ್ರದೇಶಗಳಿಗೆ ಕಳಿಸುತ್ತಿದ್ದರು.

ದಕ್ಷಿಣ ಭಾರತದ ಮಾರ್ಗಗಳು ನದಿಗಳ ಸಂಗಡ ಸಾಗುತ್ತವೆ[೧೮೩]. ಪಶ್ಚಿಮ ಕರಾವಳಿಯ ಬಂದರುಗಳಿಗೂ ನದಿಗಳ ಸಂಗಡ ಸಾಗುವ ಮಾರ್ಗಗಳು ಸುಲಭದ ಮಾರ್ಗಗಳಾಗಿವೆ. ಹಲವು ನದಿಗಳು ಬಂದರಿನಿಂದ ಒಳನಾಡಿಗೆ ಸರಕು ಸಾಗಾಣಿಕೆಗೆ ಅನುಕೂಲವಾಗಿದ್ದು, ಮುಂದೆ ಭೂಮಾರ್ಗ ಅನುಸರಿಸಿ ಹಿನ್ನಾಡನ್ನು ಪೇಟೆ-ಪಟ್ಟಣಗಳನ್ನು ಸೇರಬಹುದಾಗಿತ್ತು. ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕವನ್ನು ಆಳಿದ ಹಲವು ರಾಜಮನೆತನಗಳ ಕೇಂದ್ರ ಹಾಗೂ ರಾಜಧಾನಿ ಪಟ್ಟಣಗಳು ಬಂದರುಗಳಿಂದ ಬಹುದೂರದಲ್ಲಿದ್ದರೂ, ಇವುಗಳ ನಡುವೆ ಸಂಪರ್ಕ ಏರ್ಪಡಿಸುವ ಸುಲಭ ಮಾರ್ಗಗಳನ್ನು ನಿರ್ಮಿಸಿ ಕೊಂಡಿದ್ದರು.

ಪ್ರಾಚೀನ ಕರ್ನಾಟಕದ ಶೈಕ್ಷಣಿಕ ಕೇಂದ್ರಗಳು, ಆಡಳಿತ ಕೇಂದ್ರಗಳು, ರಾಜಧಾನಿ ಪಟ್ಟಣಗಳು, ಪೇಟೆ-ಪಟ್ಟಣಗಳ ಜೊತೆಯಲ್ಲಿ, ಕೈಗಾರಿಕಾ ಪಟ್ಟಣಗಳೊಂದಿಗೆ ಬಂದರುಗಳನ್ನು ಜೋಡಿಸುವ ಮಾರ್ಗಗಳು ರಚಿತಗೊಂಡಿದ್ದವು.

ಬಂದರುಗಳು ಪ್ರಾಚೀನ ಕಾಲ ಹಾಗೂ ಮಧ್ಯಕಾಲದ ಕರ್ನಾಟಕದ ಆರ್ಥಿಕ ಬೆಳವಣಿಗೆಯ ಕ್ರಾಂತಿಕಾರಿ ಕೇಂದ್ರಗಳಾಗಿದ್ದರಿಂದ ಇವುಗಳೊಂದಿಗೆ ದುಡಿಯುವ ವರ್ಗ ಪ್ರಮುಖ

ಸಂಬಂಧ ಹೊಂದಿತ್ತು. ಹೊರನಾಡಿನ ಶ್ರಮಿಕರು, ಕರಕುಶಲ ಕರ್ಮಿಗಳು ಬಂದರು ಪಟ್ಟಣದ ಬಳಿಯಲ್ಲಿ ನಿರ್ಮಿಸಿದ ಕೈಗಾರಿಕಾ ಕೇಂದ್ರಗಳಲ್ಲಿ ವಾಸ ಮಾಡುತ್ತಿದ್ದರು. ಕರ್ನಾಟಕವು ಭಾರತದಲ್ಲಿ ಕಾಶ್ಮೀರ ಬಿಟ್ಟರೆ ಉನ್ನತ ಸ್ಥಾನದಲ್ಲಿರುವ ಭೂಪ್ರದೇಶವಾಗಿದ್ದು. ದಕ್ಷಿಣ ಭಾರತದ ನಡುನಾಡಿನಂತಿದ್ದು, ದಕ್ಷಿಣ ಭಾರತದ ಅಗಸೆ ಬಾಗಿಲು ಆಗುವ ಅನುಕೂಲತೆ ಹೊಂದಿರುವ ನಾಡಾಗಿದೆ.[೧೪೪] ವ್ಯಾಪಾರವು ಕನ್ನಡನಾಡಿನಲ್ಲಿ ನವಪಲ್ಲಟದ ಕ್ರಾಂತಿಕಾರಿ ಮನ್ವಂತರವನ್ನುಂಟು ಮಾಡುವಲ್ಲಿ ಈ ಸುರಕ್ಷಿತ ಮಾರ್ಗಗಳೂ ಕಾರಣವಾದವು. ಇಂಥಹ ಮಾರ್ಗಗಳು ಪ್ರತಿಬಂದರಿನಿಂದ ಹಿನ್ನಾಡಿಗೆ ಪಡೆದ ಸಂಪರ್ಕವು ಅಪೂರ್ವವಾಗಿದೆ.

ಕರ್ನಾಟಕದ ಕರಾವಳಿಯನ್ನು ಪಶ್ಚಿಮ ಘಟ್ಟಗಳು ಪೂರ್ವದತ್ತ ಸುಲಭ ಸಂಪರ್ಕವನ್ನು ತಪ್ಪಿಸಿವೆ. ೧೫೦೦ ಮೀಟರ್ ನಿಂದ ೪೫೦೦ ಮೀಟರ್ ವರೆಗೆ ಇವುಗಳ ಎತ್ತರವಿದೆ. ಈ ಪಶ್ಚಿಮ ಘಟ್ಟಗಳು ಪದರು ಪದರಾಗಿ ಪಶ್ಚಿಮ ಉತ್ತರವಾಗಿ ಹಬ್ಬಿದ್ದು, ಉತ್ತರ ದಕ್ಷಿಣವಾಗಿ ಗೋಡೆಯಂತೆ ನಿಂತಿದೆ. ದುರ್ಗಮವಾದ ಪಶ್ಚಿಮ ಘಟ್ಟಗಳ ಸಾಲುಗಳ ಮಧ್ಯೆ ಅಲ್ಲಲ್ಲಿ ಪಶ್ಚಿಮ ಪೂರ್ವವಾಗಿ ಹಲವಾರು ಕೊರಕಲುಗಳು ಉಂಟಾಗಿವೆ. ಈ ಕೊರಕಲುಗಳು ಅತ್ಯುತ್ತಮವಾದ ಪೂರ್ವದತ್ತ ಸಂಪರ್ಕ ಕಲ್ಪಿಸುವ ಭೂಮಾರ್ಗಗಳಾಗಿವೆ. ಈ ಕಣಿವೆಗಳ ಪಕ್ಕದಲ್ಲಿ ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಕಡಲತ್ತ ಹರಿಯುವ ನದಿಗಳಿವೆ. ಕಾರವಾರದಿಂದ ಮಂಗಳೂರಿನವರೆಗೆ ಇರುವ ಕಾಳಿ, ಅಘನಾಶಿನಿ, ಬೆಡ್ತಿ, ಶರಾವತಿ, ಸೌರಭಿ, ಪಂಚಗಂಗಾವಳಿ, ಸೀತಾನದಿ, ಸ್ವರ್ಣಾನದಿ, ಗುರುಪುರ, ನೇತ್ರಾವತಿ ನದಿಗಳು ಹಿನ್ನಾಡಿಗೆ ಸಂಪರ್ಕ ಕಲ್ಪಿಸುವ ಅತ್ಯತ್ತಮ ಮಾರ್ಗಗಳಾಗಿವೆ.

೬.೫.೨.೧ ಕಾರವಾರ ಬಂದರಿನಿಂದ ಹಿನ್ನಾಡಿಗೆ ಮಾರ್ಗ

ಕಾರವಾರ ಬಂದರಿನಿಂದ ಹಿನ್ನಾಡಿಗೆ ಸಂಪರ್ಕ ಪಡೆಯಲು ಕಾರವಾರಕೈಗಾ- ಹುಬ್ಬಳ್ಳಿ-ಬೆಳಗಾಂವ್ ಮಾರ್ಗಗಳು ಒಂದಾದರೆ, ಇನ್ನೊಂದು ಕಾರವಾರ-ಅವರ್ಸಾ-ಬಾಳೆಗುಳಿ-ಅಗಸೂರು-ರಾಮನಗರ-ಅರೇಬೈಲು ಮಾರ್ಗ ಪ್ರಮುಖವಾಗಿದೆ. ಈ ಎರಡು ಮಾರ್ಗಗಳು ಕಾರವಾರ ಬಂದರಿಗೆ ಹಿನ್ನಾಡಿನೊಂದಿಗೆ ಅಂದರೆ ಮಹಾರಾಷ್ಟ್ರದ ಪಶ್ಚಿಮ ಭಾಗ ಹಾಗೂ ದಕ್ಷಿಣ ಭಾಗ, ಆಂಧ್ರ ಪ್ರದೇಶದ ಗುಂಟೂರು, ಗುತ್ತಿ, ಅನಂತಪುರ ಹಾಗೂ ತಮಿಳುನಾಡಿನ ಪೂರ್ವ ಕರಾವಳಿಯ ಬಂದರುಗಳಿಗೆ ಸಂಪರ್ಕ ಕಲ್ಪಿಸುತ್ತವೆ. ಕಾಳಿನದಿಯಲ್ಲಿ ಬಹು ದೂರದವರೆಗೆ ಸರಕುಗಳನ್ನು ಸಾಗಾಟ ಮಾಡಬಹುದಿತ್ತು. ಹಾಗೂ ಹಿನ್ನಾಡಿನ ಸರಕುಗಳನ್ನು ಕಾಳಿನದಿಯ ಮೂಲಕ ಬಂದರುವರೆಗೂ ತರಬಹುದಾಗಿತ್ತು.

೬.೫.೨.೨ ಅಂಕೋಲಾ ಬಂದರಿನಿಂದ ಹಿನ್ನಾಡಿಗೆ ಮಾರ್ಗ

ಅಂಕೋಲಾ-ಬೇಲಿಕೇರಿ ಬಂದರಿಂದ ಹಿನ್ನಾಡಿಗೆ ಸಂಪರ್ಕ ಪಡೆಯಲು ಉತ್ತಮವಾದ ಮಾರ್ಗವಿತ್ತು. ಅರೇಬೈಲ್ ಮಾರ್ಗ. ಗುಲ್ಬರ್ಗಾ, ಹೊಸಪೇಟೆ ಹಾಗೂ ಉತ್ತರದ ಮುಂತಾದೆಡೆ ಹೋಗಲು ಸಂಪರ್ಕ ಕಲ್ಪಿಸುತ್ತಿತ್ತು. ಕಾರವಾರ ಬಂದರಿಗೆ ಇದ್ದಂತಹ ಹಿನ್ನಾಡೆ ಇದಕ್ಕೂ ಇದ್ದುದ್ದರಿಂದ ಈ ಮಾರ್ಗವು ಅಲ್ಲಿಗೆ ತಲುಪಿಸುತ್ತಿತ್ತು. ಅಘನಾಶಿನಿ ಹಾಗೂ ಬೇಡ್ತಿ ನದಿಗಳ ಮೂಲಕ ಹಿನ್ನಾಡಿಗೆ ಸಂಪರ್ಕ ಕಲ್ಪಿಸುವ ನದಿ ಮಾರ್ಗದ ಜೊತೆಯಲ್ಲಿ ಸಲೀಸಾದ ಯಾನವನ್ನು ಬಹುದೂರದವರೆಗೆ ಕೈಗೊಳ್ಳಬಹುದಾಗಿತ್ತು. ಅಲ್ಲದೇ ಈ ಕಣಿವೆ ಮಾರ್ಗಗಳಲ್ಲಿ ದೊರೆಯುತ್ತಿದ್ದ ಸಾಂಬಾರ ದಿನಸುಗಳನ್ನು ಹಾಗೂ ಮರಮಟ್ಟುಗಳನ್ನು ನೌಕೆಗಳ ಮೂಲಕ ತರಬಹುದಾಗಿತ್ತು. ಇಂತಹ ಯಾನಕ್ಕೆ ಅಂಕೋಲಾನದಿ ಕೂಡಾ ಸಹಾಯಕವಾಗಿತ್ತು.

೬.೫.೨.೩ ಕುಮಟಾ ಬಂದರಿನಿಂದ ಹಿನ್ನಾಡಿಗೆ ಮಾರ್ಗ

ಬಹುಮುಖ್ಯವಾಗಿ ಕುಮಟಾ-ತದಡಿ ಬಂದರುಗಳಿಂದ ಹಿನ್ನಾಡನ್ನು ತಲುಪಲು ಈ ಪಶ್ಚಿಮ ಘಟ್ಟಗಳಲ್ಲಿ ಉಂಟಾಗಿರುವ ಕಣಿವೆ ಮಾರ್ಗಗಳು ತುಂಬಾ ಉಪಯುಕ್ತವಾಗಿದ್ದವು. ನೀಲಕುಂದ, ವಡ್ಡಿ ಹಾಗೂ ದೇವಿಮನೆ ಕೊರಕಲು/ಕಣಿವೆಗಳು ಈ ವ್ಯಾಪಾರಕ್ಕೆ ತುಂಬಾ ಉಪಯುಕ್ತ ಮಾರ್ಗಗಳಾಗಿವೆ. ಇವುಗಳಗುಂಟ ಪ್ರಯಾಣ ಮಾಡಿದರೆ ಸಲೀಸಾಗಿ ಹಿನ್ನಾಡಿಗೆ ಸಂಪರ್ಕ ಪಡೆಯಬಹುದಾಗಿತ್ತು. ಈ ಮಾರ್ಗದಲ್ಲಿ ಸುರಕ್ಷಿತವಾಗಿ ಬನವಾಸಿ, ಬೆಳ್ಳಿಗಾವೆ, ಪೊಂಬುಚ್ಚ ಹಾಗೂ ಶಿವಮೊಗ್ಗಾಗಳಿಗೆ ಸಂಪರ್ಕ ಪಡೆಯಬಹುದಾಗಿತ್ತು. ಕುಮಟಾ-ದೀವಗಿ-ಕತಗಾಲ-ದೇವಿಮನೆ-ಶಿರಸಿ ಹಾಗೂ ಕುಮಟಾ-ಚಂದಾವರ-ಬಡಾಳ ಮಾರ್ಗಗಳು ಬಹುಮುಖ್ಯವಾದ ಭೂಮಾರ್ಗಗಳಾಗಿವೆ. ಈ ಮೇಲಿನ ವ್ಯಾಪಾರಿ ಕೇಂದ್ರಗಳಿಗೆ ತಲುಪಲು ಇದ್ದ ಹತ್ತಿರದ ಮಾರ್ಗಗಳೂ ಇವಾಗಿದ್ದವು. ಈ ಬಂದರಿಗೂ ಅಘನಾಶಿನಿ ಹಾಗೂ ಬೇಡ್ತಿ ನದಿಗಳು ಸಹಾಯಕವಾಗಿದ್ದವು. ಕುಮಟಾದ ಬಳಿಯ ಚಿಕ್ಕ ಹೊಳೆಯೂ ಈ ವ್ಯಾಪಾರಿ ಮಾರ್ಗಕ್ಕೆ ಅನುಕೂಲಕರವಾಗಿತ್ತು.

೬.೫.೨.೪ ಹೊನ್ನಾವರ ಬಂದರಿನಿಂದ ಹಿನ್ನಾಡಿಗೆ ಮಾರ್ಗ

ಹೊನ್ನಾವರ ಬಂದರಿಗೆ ಶರಾವತಿ ಕಣಿವೆಯ ಬದಿಯಲ್ಲಿ ಸಾಗಿದರೆ ಹೊನ್ನಾವರ ಬಂದರಿನ ಹಿನ್ನಾಡಾಗಿರುವ ಶಿವಮೊಗ್ಗಾ, ಬೆಂಗಳೂರು, ಕೋಲಾರಗಳನ್ನು ಸುಲಭವಾಗಿ ತಲುಪಬಹುದಾಗಿತ್ತು. ಹೀಗೆ ಪಶ್ಚಿಮ ಘಟ್ಟದಲ್ಲಿ ಉಂಟಾಗಿರುವ ಎರಡು ಕಣಿವೆ ಮಾರ್ಗಗಳು, ಒಂದು, ಮಾವಿನಗುಂಡಿ-ಕತ್ತಲೆಕಾನು ಹಾಗೂ ಎರಡು, ರಾಮತೀರ್ಥ-ಚಂದಾವರ ಮೂಲಕ ಬಡಾಳ ಮಾರ್ಗ. ಹೊನ್ನಾವರ ಬಂದರಿನಿಂದ ಹೊರಟ ಭೂಮಾರ್ಗ ಕವಲಕ್ಕಿ, ಹಡಿನಬಾಳ,

ಮೂಡ್ಕಣಿ, ಗೇರಸೊಪ್ಪಾ, ಕತ್ತಲೆಕಾನು, ಮಾವಿನಗುಂಡಿ ಮೂಲಕ ಸಿದ್ಧಾಪುರಕ್ಕೂ ಮತ್ತು ಜೋಗಕ್ಕೂ ಸಂಪರ್ಕ ಕಲ್ಪಿಸುತ್ತಿತ್ತು. ಗೇರಸೊಪ್ಪಾದವರೆಗೆ ಬಂದರಿನಿಂದ ನೌಕೆಯ ಮೂಲಕ ಬಂದ ಸರಕು ಮುಂದೆ ರಸ್ತೆ ಮಾರ್ಗವಾಗಿ ಈ ದಾರಿಯ ಮೂಲಕ ಸಾಗುತ್ತಿತ್ತು. ಜೋಗದಿಂದ ಶಿವಮೊಗ್ಗಾ, ಬೆಂಗಳೂರು, ಮೈಸೂರು, ಕೋಲಾರದವರೆಗೂ ಈ ಮಾರ್ಗ ಸಂಪರ್ಕ ಸಾಧಿಸುತ್ತಿತ್ತು.

ಇನ್ನೊಂದು ಮಾರ್ಗ ಹೊನ್ನಾವರ ಅರೆಅಂಗಡಿ, ಮೂಲಕ ಸಿದ್ಧಾಪುರ–ಬಿಳಗಿಗಳಿಗೆ ಅಲ್ಲಿಂದ ಬನವಾಸಿಗೆ ಸಂಪರ್ಕ ಕಲ್ಪಿಸುತ್ತಿತ್ತು. ಇದೇ ಮಾರ್ಗ ಅರೆ –ಅಂಗಡಿಯಿಂದ ಚಂದಾವರ ಹಾಗೂ ಅಲ್ಲಿಂದ ಬಡಾಳ ಘಾಟಿ ಮಾರ್ಗವಾಗಿ ಶಿರ್ಶಿ–ಬನವಾಸಿ–ಬೆಳ್ಳಿಗಾವಿ–ಹುಬ್ಬಳ್ಳಿಗಳಿಗೆ ಸಂಪರ್ಕ ಕಲ್ಪಿಸುತ್ತಿತ್ತು.

ಇನ್ನೊಂದು ಹೊನ್ನಾವರ ಹಳದೀಪುರ–ಅಗ್ರಹಾರ–ಚಿಪ್ಪಿಹಕ್ಕಲು–ಕೆಕ್ಕಾರ ಮೂಲಕ ಬಡಾಳಕ್ಕೆ ಹೋಗುತ್ತಿತ್ತು.

ಈ ಬಂದರುಗಳಿಗೆ ಹಿನ್ನಾಡಾಗಿ ಹುಬ್ಬಳ್ಳಿ, ಶಿವಮೊಗ್ಗಾ ಪ್ರಮುಖವಾಗಿದ್ದವು. ಶಿವಮೊಗ್ಗ ಮತ್ತು ಹುಬ್ಬಳ್ಳಿಯನ್ನು ಸಂಪರ್ಕಿಸುವ ಗುಲ್ಬರ್ಗಾ, ಬಳ್ಳಾರಿ, ಕೋಲಾರ, ಬೆಂಗಳೂರುಗಳು, ಆಂಧ್ರಪ್ರದೇಶದ ಗುತ್ತಿ, ತಮಿಳುನಾಡಿನ ಪೂರ್ವದ ಜಿಲ್ಲೆಗಳು ಮತ್ತು ಮೈಸೂರುಗಳು ಹಿನ್ನಾಡಾಗಿದ್ದವು

ಶರಾವತಿ ನದಿಯ ಗುಂಟ ಸುಮಾರು ೪೦ಕಿ.ಮೀ ಪೂರ್ವದತ್ತ ನೌಕಾಯಾನ ಮಾಡಬಹುದಿತ್ತು. ಶರಾವತಿಯ ಕಣಿವೆಯಲ್ಲಿ ದೊರೆಯುತ್ತಿದ್ದ ಉತ್ತಮ ಗುಣಮಟ್ಟದ ಕಾಳುಮೆಣಸು ನೌಕೆಗಳಲ್ಲಿ ಬಂದರಿನವರೆಗೆ ಸಾಗಿಸಲು ಸಾಧ್ಯವಾಗಿತ್ತು. ಬಡಗಣಿ ನದಿಯ ಮೂಲಕ ಸರಕುಗಳನ್ನು ಬಂದರಿಗೆ ಸಾಗಿಸಬಹುದಿತ್ತು. ಇದೆಲ್ಲವೂ ಒಳನಾಡಿನ ಸರಕುಗಳನ್ನು ಬಂದರಿಗೂ ಹಾಗೂ ಬಂದರಿನಿಂದ ಸರಕುಗಳನ್ನು ಹಿನ್ನಾಡಿಗೂ ಸಾಗಿಸಲು ಸಹಾಯಕವಾಗಿದ್ದವು.

೬.೫.೨.೫ ಭಟ್ಕಳ ಬಂದರಿನಿಂದ ಹಿನ್ನಾಡಿಗೆ ಮಾರ್ಗ

ಭಟ್ಕಳ ಬಂದರಿನ ಮೂಲಕ ಹಿನ್ನಾಡಿಗೆ ಹೋಗಲು ಸುಲಭದ ಮಾರ್ಗಗಳಿದ್ದವು. ಭಟ್ಕಳ ಹಾಡುವಳ್ಳಿ, ಕೊಗಾರ ಮಾರ್ಗವಾಗಿ ಒಂದು, ಇನ್ನೊಂದು ಭಟ್ಕಳ–ವೆಂಕಟಾಪುರ–ಶಿರಾಲಿ–ಚಿತ್ರಾಪುರ ಮಾರ್ಗವಾಗಿ ಹಾಗೂ ಭಟ್ಕಳ–ಶಿರೂರು ಮಾರ್ಗವಾಗಿ ಇನ್ನೊಂದು ಭೂಮಾರ್ಗಗಳಿದ್ದವು. ಇದು ಹೇರು, ಚಕ್ಕಡಿ, ಕುದುರೆಗಾಡಿ ಮಾರ್ಗವಾಗಿತ್ತು. ಅದು ಮುಂದೆ ಕುಂದಾಪುರ ಬಂದರಿಗೆ ಹೊರನಾಡಾಗಿದ್ದ ಶಿವಮೊಗ್ಗಾ, ಮೈಸೂರು, ಸೇಲಂ, ಕೋಲಾರ ಹಾಗೂ ಅನಂತಪುರ ಜಿಲ್ಲೆಗಳ ವರೆಗೂ ಸಂಪರ್ಕ ಕಲ್ಪಿಸುತ್ತಿತ್ತು.

೬.೫.೨.೬ ಬೈಂದೂರು ಬಂದರಿನಿಂದ ಹಿನ್ನಾಡಿಗೆ ಮಾರ್ಗ

ಬೈಂದೂರು–ಶಿರೂರು ಬಂದರುಗಳಿಗೆ ಸಂಪರ್ಕ ಕಲ್ಪಿಸುವ ಮಾರ್ಗಗಳೆಂದರೆ, ಒಂದು ಶಿರೂರು ಭಟ್ಕಳ ಮಾರ್ಗವಾಗಿ ಹಿನ್ನಾಡಿಗೆ ತಲುಪುವುದು, ಇನ್ನೊಂದು ಬೈಂದೂರು, ವಣ್ಸೆ, ಕೊಲ್ಲೂರು ಮಾರ್ಗವಾಗಿ ಹಿನ್ನಾಡಿಗೆ ಸಾಗುವುದು. ಈ ಎರಡು ಮಾರ್ಗಗಳು ಹಲವಾರು ನದಿಗಳ ಸಂಪರ್ಕದಿಂದ ಉತ್ತಮ ಭೂ–ನದಿ ಮಾರ್ಗಗಳಾಗಿವೆ.

೬.೫.೨.೭ ಕುಂದಾಪುರ ಬಂದರಿನಿಂದ ಹಿನ್ನಾಡಿಗೆ ಮಾರ್ಗ

ಕುಂದಾಪುರ ಬಂದರಿಗೆ ಸಂಪರ್ಕ ಕಲ್ಪಿಸುವ ಉತ್ತಮ ಮಾರ್ಗಗಳೆಂದರೆ ಬಾಳೆಬರೆ ಘಾಟಿ ಮಾರ್ಗ. ಈ ಮಾರ್ಗವು ವಿಸ್ತಾರವಾಗಿದ್ದು ಏಕಕಾಲದಲ್ಲಿ ಹಲವು ಚಕ್ಕಡಿಗಳನ್ನು, ಹೇರುಗಳನ್ನು ಬಳಸಲು ಯೋಗ್ಯವಾಗಿತ್ತು. ಬಾಳೆಬರೆ ಘಾಟಿಯನ್ನು ದಾಟಿದರೆ ಹಿನ್ನಾಡಿಗೆ ಸುಲಭವಾಗಿ ಸಂಪರ್ಕ ಪಡೆಯಬಹುದಾಗಿತ್ತು. ಕುಂದಾಪುರ–ಬಸರೂರು–ಸಿದ್ದಾಪುರ–ಹೊಸಂಗಡಿ–ಹಿನ್ನಾಡಿಗೆ ಸಂಪರ್ಕ ನೀಡುವ ಉತ್ತಮ ಘಾಟಿ ಮಾರ್ಗಗಳು. ಇನ್ನೊಂದು ಕುಂದಾಪುರ–ಆಗುಂಬೆ ಮಾರ್ಗ. ಗಂಗೊಳ್ಳಿ–ನಾಯಕವಾಡಿ–ಮುಳ್ಳಿಕಟ್ಟೆ–ಆಲೂರು ಅಥವಾ ಹಕ್ಲಾಡಿ ಮಾರ್ಗವಾಗಿ ಸಂಪರ್ಕ ಕಲ್ಪಿಸಿತ್ತು. ಇನ್ನೊಂದು ಉಪ್ಪಿನಕುದ್ರು–ಹಟ್ಟಿಅಂಗಡಿ–ಕೊಲ್ಲೂರು ಮಾರ್ಗ ಮತ್ತು ಹೆಮ್ಮಾಡಿ ಕೊಲ್ಲೂರು ಮಾರ್ಗಗಳಿದ್ದವು. ಚಕ್ರಾ–ವಾರಾಹಿನದಿಗಳು–ಬಸರೂರನ್ನು ಹಿನ್ನಾಡಿನಿಂದ ತಲುಪಲು ಉತ್ತಮ ಮಾರ್ಗವಾಗಿತ್ತು. ಹಾಗೆಯೇ ಗಂಗೋಳ್ಳಿಯವರಿಗೆ ಎಲ್ಲಾ ಐದು ನದಿಗಳು ಸೇರಿ ಹರಿದು ಬರುವುದರಿಂದ ಈ ಎಲ್ಲಾ ನದಿಗಳು ಹಿನ್ನಾಡಿಗೆ ಹಾಗೂ ಹಿನ್ನಾಡಿನಿಂದ ಬಂದರಿಗೆ ಸರಕುಗಳನ್ನು ಸಾಗಿಸಲು ಅನುಕೂಲವಾಗಿದ್ದವು.

೬.೫.೨.೮ ಬಾರ್ಕೂರು ಬಂದರಿನಿಂದ ಹಿನ್ನಾಡಿಗೆ ಮಾರ್ಗ

ಬಾರ್ಕೂರು ಕಾರ್ಕಳದ ಮೂಲಕ ಹಿರಿಯಡ್ಕ–ಬಂಡಸಾಲೆವರೆಗೆ ನದಿಮಾರ್ಗವಾಗಿ, ಮುಂದೆ ಹೇರು–ಚಕ್ಕಡಿಗಾಡಿ ಇತ್ಯಾದಿಗಳ ಮೂಲಕ ಘಟ್ಟಕ್ಕೆ ಸಂಪರ್ಕ ಪಡೆಯಬಹುದಿತ್ತು. ಹಾಗೇ ಕಾರ್ಕಳದಿಂದ ವರಾಂಗದ ಮೂಲಕವೂ ಹಿನ್ನಾಡಿಗೆ ಸಂಪರ್ಕ ಹೊಂದುತ್ತಿತ್ತು. ಇನ್ನೊಂದು ಮಾರ್ಗವಾಗಿ ಕಾರ್ಕಳ–ಚಿಕ್ಕಮಗಳೂರು–ಶೃಂಗೇರಿ–ಆಗುಂಬೆ–ಭಜಗೋಳಿ ಮಾರ್ಗವು ಇತ್ತು. ಹೀಗೆ ಹಿನ್ನಾಡಿನ ಬಹುದೂರದ ಮೈಸೂರು–ಸೇಲಂವರೆಗೂ ಸಂಪರ್ಕ ಸಾಧ್ಯವಾಗಿತ್ತು. ಬಾರ್ಕೂರಿನಿಂದ ಕಾರ್ಕಳ–ಹಿರಿಯಡ್ಕಗಳ ಮೂಲಕ ಬಂಡಸಾಲೆ ಮಾರ್ಗವಾಗಿ ಘಟ್ಟದ ಮೇಲಿನ ಶಿವಮೊಗ್ಗ, ಬೆಂಗಳೂರು, ಕೋಲಾರ, ಮೈಸೂರು ತಲುಪಬಹುದಿತ್ತು. ಈ ಘಟ್ಟದ ಮಾರ್ಗವನ್ನು ಹೊಯ್ಸಳರ ಶಾಸನ 'ಬಾರಕನೂರುಘಟ್ಟ' ಎಂದು ವರ್ಣಿಸಿದೆ. ಬಾರ್ಕೂರು, ವರಾಂಗ, ಕಾರ್ಕಳ,

ಸುಬ್ರಹ್ಮಣ್ಯ ಮೈಸೂರುಗಳಿಗೆ ಈ ಸಂಪರ್ಕಮಾರ್ಗ ಅನುಕೂಲಕರವಾಗಿತ್ತು. ಸೀತಾ ನದಿ ಹಾಗೂ ಸ್ವರ್ಣಾನದಿಗಳು ಹಿನ್ನಾಡಿಗೆ ಸಂಪರ್ಕ ಕಲ್ಪಿಸುವಲ್ಲಿ ಸಹಾಯಕವಾಗಿದ್ದವು.

೬.೫.೨.೯ ಮಂಗಳೂರು ಬಂದರಿನಿಂದ ಹಿನ್ನಾಡಿಗೆ ಮಾರ್ಗ

ಮಂಗಳೂರು ಬಂದರಿಗೆ ಸಂಪರ್ಕ ಕಲ್ಪಿಸುವ ಮಂಗಳೂರು ಹಾಸನ–ಬೆಂಗಳೂರು ಭೂಮಾರ್ಗಗಳಿವೆ. ಮಂಗಳೂರು ಬಂದರನ್ನು ಹಿನ್ನಾಡಿನ್ನೊಂದಿಗೆ ಸಂಪರ್ಕಕ್ಕೆ ತರುವಲ್ಲಿ ಗುರುಪುರ–ನೇತ್ರಾವತಿ ನದಿಗಳು ತುಂಬಾ ಸಹಾಯಕವಾಗಿದ್ದವು. ನದಿಗಳ ಕೊರಕಲುಗಳಲ್ಲಿ ದೊರೆಯುತ್ತಿದ್ದ ಪ್ರಾಣಿ–ಪಕ್ಷಿಗಳು ಹಾಗೂ ಮರಮಟ್ಟುಗಳನ್ನು ಈ ನದಿಗಳ ಮೂಲಕ ಬಂದರಿಗೆ ತಲುಪಿಸಬಹುದಿತ್ತು. ಬಂದರಿನಿಂದ ಸರಕುಗಳನ್ನು ಬಂಟವಾಳದವರೆಗೂ ತಲುಪಿಸಲು ಸಾದ್ಯವಾಗಿತ್ತು.

ಮಂಗಳೂರು ಮೂಲಕ ಕಾಸರಕೋಡು, ನೀಲೇಶ್ವರ ಹಾಗೂ ಮಲಬಾರಿನ ಬಂದರುಗಳಿಗೆ ತಲುಪಲು ಸುಲಭದ ನೇರಮಾರ್ಗಗಳು ಇದ್ದವು.

೬.೬ ಕಡಲ ಮಾರ್ಗಗಳು

ಭಾರತವು ತನ್ನ ಪಶ್ಚಿಮ ಕರಾವಳಿಯ ಮೂಲಕ ನಡೆಸಿದ ವಿದೇಶಿ ವ್ಯಾಪಾರಕ್ಕೆ ಹಲವು ಬಂದರುಗಳನ್ನು ಬಳಸಿಕೊಂಡಿತ್ತು. ಕರ್ನಾಟಕದ ಬಂದರುಗಳು ಒಂದರ್ಥದಲ್ಲಿ ಪಶ್ಚಿಮ ಕರಾವಳಿಯ ನಡುಮಧ್ಯದಲ್ಲಿರುವುದರಿಂದ ಈ ಬಂದರುಗಳು ದೊಡ್ಡ ಪ್ರಮಾಣದ ವ್ಯಾಪಾರಕ್ಕೆ ತೆರೆದುಕೊಂಡಿದ್ದವು. ಅತ್ತ ಗುಜರಾತ್ ಇತ್ತ ಕೇರಳದ ಬಂದರುಗಳಿಗಿಂತ ಹಲವು ಬಗೆಯ ಭೌಗೋಳಿಕ, ನೈಸರ್ಗಿಕ ರಕ್ಷಣೆ ಹೊಂದಿದ್ದರಿಂದ ಕರ್ನಾಟಕದ ಬಂದರುಗಳು ವಿಶ್ವ ವ್ಯಾಪಾರದ ರಾಜ ಮಾರ್ಗಗಳಾಗಿದ್ದವು. ಕರ್ನಾಟಕದ ಪಶ್ಚಿಮ ಘಟ್ಟಗಳಲ್ಲಿ ದೊರೆಯುತ್ತಿದ್ದ ಮರಗಳು ದೊಡ್ಡ ದೊಡ್ಡ ನೌಕೆಗಳನ್ನು ನಿರ್ಮಿಸಲು ಸಹಾಯಕವಾಗಿದ್ದವು. ಉಪ್ಪು ನೀರಿನಲ್ಲಿ ಬಾಳಿಕೆಬರುವಂತೆ ಲೇಪಿಸಲು ಔಷಧಯುಕ್ತ ವನಸ್ಪತಿ ಇಲ್ಲಿ ದೊರೆಯುತ್ತಿತ್ತು. ಮತ್ತು ಎಲ್ಲ ಮಾರುತಗಳ ಸಮಯದಲ್ಲಿ ಸುರಕ್ಷಿತವಾಗಿ ಈ ಬಂದರುಗಳಲ್ಲಿ ನೌಕೆಗಳನ್ನು ಲಂಗರು ಮಾಡಬಹುದಾಗಿತ್ತು. ಕಡಲೋತ್ತರ ಸಂಪರ್ಕಕ್ಕೆ ಇವುಗಳು ಉಪಯುಕ್ತವಾಗಿದ್ದವು.

ಕರ್ನಾಟಕದ ಕಡಲ ತೀರದ ಗುಂಟ ಉತ್ತರಕ್ಕೆ ಹೊರಟರೆ ಗುಜರಾತಿನ ಬಹು ಅಮೂಲ್ಯವಾದ ಬಂದರು ಬ್ರಗುಕಚ್ ತಲುಪಬಹುದಿತ್ತು. ದಕ್ಷಿಣದತ್ತ ಹೊರಟರೆ ಕೊಚ್ಚಿನ್, ಶ್ರೀಲಂಕಾ ತಲುಪುವುದು ಸುಲಭವಿತ್ತು ಹಾಗಾಗಿ ದೇಶದ ಆಂತರಿಕ ವ್ಯಾಪಾರಕ್ಕೆ ಕರ್ನಾಟಕದ ಬಂದರುಗಳು ಸಹಾಯಕವಾಗಿದ್ದವು. ಸಿಂಧು ನಾಗರಿಕತೆಯೊಂದಿಗೂ ಕರ್ನಾಟಕದ ಬಂದರು (ಹೊನ್ನಾವರ) ವ್ಯಾಪಾರಿ ಸಂಪರ್ಕ ಹೊಂದಿದ್ದದ್ದು ಹೊನ್ನಾವರ ಬಂದರಿನ ವಿವರದಲ್ಲಿ

ತಿಳಿಸಲಾಗಿದೆ. ಇನ್ನೂ ಗುಜರಾತ್, ಮಹಾರಾಷ್ಟ್ರ-ಕೊಂಕಣ ಬಂದರುಗಳಲ್ಲಿ ಹಾಗೂ ಮಲಬಾರ್ ಬಂದರುಗಳಲ್ಲಿ ಬರುತ್ತಿದ್ದ ವಿದೇಶಿ ಸರಕುಗಳನ್ನು ಕರಾವಳಿಗೆ ತರಲು ಅಥವಾ ಆ ಬಂದರುಗಳಿಗೆ ಸರಕು ಸಾಗಿಸುವುದು ಸುಲಭವಾಗಿತ್ತೆಂದು ಮೇಲೆ ಹೇಳಲಾಗಿದೆ. ಈ ರೀತಿಯ ವ್ಯಾಪಾರವು ಆಂತರಿಕ ವ್ಯಾಪಾರಕ್ಕೆ ಸಹಾಯ ಮಾಡುತ್ತಿತ್ತು. ಹಾಗೇ ಕಡಲೋತ್ತರ ವ್ಯಾಪಾರಕ್ಕೂ ಸಹಾಯ ಮಾಡುತ್ತಿತ್ತು.

೬.೬.೧ ರೋಮ್ ಹಾಗೂ ಗ್ರೀಕ್ ವ್ಯಾಪಾರಿ ಮಾರ್ಗಗಳು

ಕರ್ನಾಟಕದ ಬಂದರಿನಿಂದ ಹೊರಟ ನೌಕೆಗಳು ಸಕೊತ್ರಾ ದ್ವೀಪ ಅಥವಾ ಎಡೆನ್‌ಖಾರಿ ಮೂಲಕ ಕೆಂಪು ಸಮುದ್ರ ತಲುಪಿ ಅಲ್ಲಿಂದ ಯರೋಪಿಯನ್ ದೇಶಗಳನ್ನು ತಲುಪುತ್ತಿದ್ದವು.

ಅಲೆಗ್ಸಾಂಡ್ರಿಯಾವು ದೊಡ್ಡ ವ್ಯಾಪಾರಿ ಕೇಂದ್ರವಾಗಿದ್ದರಿಂದ ಅಲ್ಲಿಗೆ ಕರ್ನಾಟಕ ಬಂದರುಗಳ ಮೂಲಕ ವ್ಯಾಪಾರಿ ನೌಕೆಗಳು ಹೊಗುತ್ತಿದ್ದವು. ಗ್ರೀಕ್ ಹಾಗೂ ರೋಮ್‌ಗಳಿಗೆ ಮೆಡಿಟೇರೇನಿಯನ್ ಸಮುದ್ರ ಸಂಪರ್ಕ ಮಾರ್ಗವಾಗಿತ್ತು. ಆಫ್ರಿಕಾದ ದೇಶಗಳಲ್ಲಿ ಮುಖ್ಯವಾಗಿ ಈಜಿಪ್ಟ ಹಾಗೂ ಸೊಮಾಲಿಯಾಗಳಲ್ಲಿ ಭಾರತದ ಹಡಗುಗಳು ಸಂಪರ್ಕಪಡೆದಿದ್ದವು[೧೮೫].

ಅಲೆಗ್ಸಾಂಡ್ರಿಯಾವು ಗ್ರೀಸ್ ಮತ್ತು ಭಾರತ ನಡುವಿನ ಸಮುದ್ರ ವ್ಯಾಪಾರ ಮಳಿಗೆಯಾಗಿತ್ತು. ಲಾಗಸ್‌ನ ಮಗನಾದ ಟೋಲಮಿಯು ತನ್ನ ಆಡಳಿತಾವಧಿಯಲ್ಲಿ ಭಾರತೀಯ ವ್ಯಾಪಾರಕ್ಕೆ ಬಹಳಷ್ಟು ಉತ್ತೇಜನ ನೀಡಿದ್ದನು. ಇವನು, ಭಾರತದ ವಸ್ತುಗಳನ್ನು ಅಲೆಗ್ಸಾಂಡ್ರಿಯಾಕ್ಕೆ ನೇರವಾಗಿ ಕೊಂಡೊಯ್ಯಲು ಕೆಂಪುಸಮುದ್ರ ಮತ್ತು ನೈಲ್ ನದಿಗಳನ್ನು ಒಂದುಗೂಡಿಸುವ ಕಾಲುವೆಯನ್ನು ಕಟ್ಟಲು ಪ್ರಾರಂಭಿಸಿದ್ದನು. ಕೆಂಪು ಸಮುದ್ರದ ಪಶ್ಚಿಮ ಕರಾವಳಿಯಲ್ಲಿ ಒಂದು ನಗರವನ್ನು ನಿರ್ಮಿಸಿ ಬೆರಿನೈಸ್ ಎಂಬ ಹೆಸರನ್ನಿಟ್ಟನು. ಇದು ಭಾರತಿಯ ಸರಕುಗಳ ವ್ಯಾಪಾರದ ಪ್ರಮುಖ ನಗರವಾಗಿ ಮುಂದುವರೆಯಿತು[೧೮೬].

ಹಿಪ್ಪಲಸ್‌ನು ಕಂಡುಹಿಡಿದ ಮಾರುತದ ಪರಿಣಾಮವಾಗಿ ರೋಮ್‌ಗೆ ನೇರ ಸಮುದ್ರ ಮಾರ್ಗ ಸಾಧ್ಯವಾಯಿತು. ಇದು ಹಿಂದೂ ಮಹಾ ಸಾಗರದಲ್ಲಿ ರೋಮನ್ನರ ಹಡಗುಗಳು ಬರುವಂತೆ ಮಾಡಿ ಅಂದಿನ ವ್ಯಾಪಾರದ ಗತಿ ಬದಲಾಯಿಸಿತು. ಇದರಿಂದ ಪೆಟಿಯಾ, ಗೆರ್ರಾಹ, ಪಾಲ್ಮೀರಾ ಹಾಗೂ ಪಾರ್ಥಿಯಾ ದೇಶಗಳ ವ್ಯಾಪಾರ ಮಾರ್ಗಗಳ ಬಳಕೆ ಕಡಿಮೆಯಾದವು. ಮತ್ತು ಈ ಆದಾಯಗಳು ವ್ಯಾಪಾರಗತಿಯ ಬದಲಾವಣೆಯಿಂದ ರೋಮನ್‌ರ ಕೈಸೇರಿದವು. ದಕ್ಷಿಣ ಅರೇಬಿಯಾದ ಹೊಮೆರೈಟ್ ಸಾಮ್ರಾಜ್ಯದ ಮೇಲೆ ಕೆಟ್ಟ ದಿನಗಳ ಕರಾಳ ಛಾಯೆ ಮುಸುಗಿತು ಹಾಗೂ ಅದರ ರಾಜಧಾನಿ ನಾಶವಾಯಿತು[೧೮೭].

ರೋಮ್ ಹಾಗೂ ಗ್ರೀಸ್ ತಲುಪಲು ಇನ್ನೆರಡು ಮಾರ್ಗಗಳಿದ್ದವು. ಒಂದು ಅರ್ಧ ಕಡಲು ಹಾಗೂ ಅರ್ಧಭೂಮಾರ್ಗವಾಗಿತ್ತು. ಭಾರತೀಯ ಬಂದರುಗಳಿಂದ ಹಡಗುಗಳು ಹಿಂದೂ ಮಹಾಸಾಗರವನ್ನು ದಾಟಿ ಒಂದೆಡೆ ದಕ್ಷಿಣ ಆಫ್ರೀಕಾ ಅಥವಾ ಇನ್ನೊಂದೆಡೆ, ಮೇಲ್ಗಡೆ ಸಾಗಿ ದಕ್ಷಿಣ ಅರೇಬಿಯಾ, ಸೆಂಟ್ ಆಫ್ ಬಾಬೆಲ್, ಮಂಡೆಬ್ನ ಮುಖಾಂತರ ಕೆಂಪುಸಮುದ್ರಕ್ಕೆ ಬರುತ್ತಿದ್ದರು. ಅರೇಬಿಯಾದ ಜೆಡ್ಡಾ, ಈಜಿಪ್ಟಿನ ಬೆರನೈಸ್ ತಲುಪುತಿದ್ದವು[೧೮೮]. ಬೆರನೈಸ್ ನಿಂದ ವಸ್ತುಗಳನ್ನು ಒಂಟೆಯ ಮೇಲೆ ಥೇಬ್ಸ್‌ಗೆ ಮತ್ತು ಕೊಸ್‌ಗೆ ಸಾಗಿಸಲಾಗುತ್ತಿತ್ತು. ಇಲ್ಲಿಂದ ನೈಲ್‌ನದಿಯ ಮುಖಾಂತರ ಸಮುದ್ರ ಪ್ರಯಾಣ ಕೈಗೊಂಡು ಮಸ್ಕಟ್ ಮತ್ತು ವರ್ಮಜದ ಸಮೀಪವಿರುವ ಭೂಮಿಯನ್ನು ಸರಕುಗಳು ಸೇರುತ್ತಿದ್ದವು. [೧೮೯]

ಇನ್ನೊಂದು ಸಮುದ್ರ ಮಾರ್ಗ. ಪರ್ಷಿಯನ್‌ಕೊಲ್ಲಿಯನ್ನು ಹಾದು ಹೋಗುತ್ತಿತ್ತು. ಈ ಮಾರ್ಗವು ಬರೋಚ್ ಮೂಲಕ ಸಮುದ್ರಯಾನ ಮಾಡಿ ಮಸ್ಕಟ್ ಹಾಗೂ ಒರ್ಮುಝ್ ಎಂಬಲ್ಲಿ ಭೂಮಿಯನ್ನು ಮುಟ್ಟುತ್ತಿದ್ದವು. ಮತ್ತು ಓಮ್ಮಾನ್ ಕೊಲ್ಲಿಯ ಮುಖಾಂತರ ಒಸೋರಾವನ್ನು ಸೇರುತ್ತಿದ್ದವು. ಅಲ್ಲಿಂದ ಯುಪ್ರಟಿಸ್-ಟೈಗ್ರೀಸ್‌ಗಳ ದಂಡೆಗಳ ಮೂಲಕ ವಸ್ತುಗಳನ್ನು ಒಂಟೆಗಳ ಮೇಲೆ ಬೆಬಿಲೋನಿಯಾಕ್ಕೆ ತರಲಾಗುತ್ತಿತ್ತು. ಅಲ್ಲಿಂದ ಅವುಗಳನ್ನು ಮೆಡಿಟರೇನಿಯನ್ ಆ್ಯಂಟಿಯೋಕ್‌ಗೆ ಒಯ್ಯಲಾಗುತ್ತಿತ್ತು[೧೯೦].

೬.೬.೨ ಅರೇಬಿಯಾ ಹಾಗೂ ಪರ್ಷಿಯಾಕ್ಕೆ ಕಡಲು ಮಾರ್ಗ

ಅರೇಬಿಯಾ ಭಾರತದೊಂದಿಗೆ ವ್ಯಾಪಾರ ನಡೆಸಿದ ಕಡಲೋತ್ತರ ದೇಶಗಳಲ್ಲಿಯ ವಿಶೇಷವಾದ ದೇಶ. ಇಲ್ಲಿಯ ವರ್ತಕರು ಮತ್ತು ಭಾರತೀಯ ವರ್ತಕರು ವಿವಿಧ ಬಗೆಯ ಕೊಡುಕೊಳ್ಳುಗೆ ನಡೆಸಿದ್ದರು. ಅರೇಬಿಯಾ ತಲುಪಲು ಅರಬ್ಬೀ ಸಮುದ್ರದ ಮೂಲಕ ನೇರವಾದ ಮಾರ್ಗವಿತ್ತು. ಹಿಪ್ಪಲಸ್ ಮಾರುತವು ಬೀಸುವ ಸಂದರ್ಭದಲ್ಲಿ ಹಡಗುಗಳಗುಂಪೇ ಕಡಲಮೂಲಕ ಸಾಗುತ್ತಿದ್ದವು. ಒಂದರ್ಥದಲ್ಲಿ ಪರ್ಷಿಯಾಖಾರಿಯಿಂದ ಭಾರತದ ಪಶ್ಚಿಮ ಕರಾವಳಿಯ ವರೆಗಿನ ಪ್ರದೇಶ ಸರೋವರದಂತೆ ಕಂಗೊಳಿಸುತ್ತಿತ್ತು. ಪರ್ಶಿಯಾದೊಂದಿಗೆ ಪ್ರಾಚೀನ ಭಾರತದ ನಾಗರಿಕತೆ ವಿಶೇಷವಾದ ಸಂಪರ್ಕ ಹೊಂದಿತ್ತು. ಓಮನ್, ಪರ್ಶಿಯಾ ಕೊಲ್ಲಿಗಳ ಮೂಲಕ ಸುಲಭವಾಗಿ ತಲುಪಬಹುದಿತ್ತು. ರೋಮನ್ನರು ಹೇರಿದ ಸೇಡಿನ ನಿಷೇಧದ ಕಾಲದಲ್ಲಿ ಅರಬ್ಬಿಯಾದ ವರ್ತಕರು ಭಾರತದ ಸರಕುಗಳನ್ನು ಮೊದಲು ಅರಬ್ಬಿಯಾ ಪರ್ಶಿಯಾಗಳಿಗೆ ತಲುಪಿಸಿ ಮುಂದೆ ಭೂಮಾರ್ಗವಾಗಿ ರೋಮ್-ಗ್ರೀಕ್‌ಗಳಿಗೆ ತಲುಪಿಸುತ್ತಿದ್ದರು. ಕಾರವಾರ, ಹೊನ್ನಾವರ, ಕುಂದಾಪುರ, ಬಾರ್ಕೂರು ಮಂಗಳೂರುಗಳ ಮೂಲಕ ಅರಬ್ ದೇಶಗಳಿಗೆ ನೇರವಾದ ಕಡಲು ಮಾರ್ಗಗಳಿದ್ದವು.

೬.೬.೩ ಶ್ರೀಲಂಕಾಕ್ಕೆ ಕಡಲು ಮಾರ್ಗ

ಶ್ರೀಲಂಕಾಕ್ಕೆ ಸಾಗಲು ಕರಾವಳಿಯ ಎಲ್ಲ ಬಂದರುಗಳ ಮೂಲಕ ಸುಲಭದ ಮಾರ್ಗವಿತ್ತು. ಬಹುಮುಖ್ಯವಾಗಿ ಮಲಬಾರಿನ ತೀರದ ಮೂಲಕ ಕುಮಾರಿಯನ್ನು ತಲುಪಿ ಶ್ರೀಲಂಕಾಕ್ಕೆ ಹೋಗಬಹುದಿತ್ತು.

೬.೬.೪ ಚೀನಾ, ಸುಮಾತ್ರಾ ಹಾಗೂ ಬಾಲಿ ಕಡಲು ಮಾರ್ಗ

ಚೀನಾ–ಸುಮಾತ್ರಾ–ಬಾಲಿ ಮುಂತಾದ ದೇಶಗಳಿಗೆ ಪಶ್ಚಿಮ ಕರಾವಳಿಯ ಬಂದರಿನ ಮೂಲಕ ಹೋಗುವ ನೌಕೆಗಳಿಗೆ ಶ್ರೀಲಂಕಾ ಭಾರತದ ನಡುವಿನ ಜಲಸಂಧಿ ಮಾರ್ಗವು ಉತ್ತಮಮಾರ್ಗವಾಗಿತ್ತು. ಅಂತೆಯೇ ಪೂರ್ವಕರಾವಳಿಯ ಬಂದರುಗಳಾದ ಅರಿಕಮೇಡು, ಕಾವೇರಿಪಟ್ಟಣಂಗಳನ್ನು ಭೂಮಾರ್ಗವಾಗಿ ಅಥವಾ ಕಡಲ ಮಾರ್ಗವಾಗಿ ತಲುಪಿ ಮುಂದೆ ಸಾಗುವುದಾಗಿತ್ತು.

ಇವುಗಳಲ್ಲದೇ ಅನುಕೂಲತೆಗೆ ಹಾಗೂ ಗಾಳಿಗೆ ತಕ್ಕಂತೆ ಹಡಗುಗಳನ್ನು ಹತ್ತಿರದ ಬಂದರುಗಳಿಗೆ ತಲುಪಿಸಿ ಮುಂದೆ ನಿರ್ಧಿಷ್ಟವಾದ ದೇಶಗಳಿಗೆ ತಲುಪುತ್ತಿದ್ದರು. ಪೂರ್ವದ ದ್ವೀಪಗಳಿಗೆ ಹಾಗೂ ಚೀನಾಗಳಿಗೆ ಹೊರಡುತ್ತಿದ್ದ ಹಡಗುಗಳು ಬರ್ಗಜ್, ಮಸೇಲಿಯಾ, ಪಲೂರಾ ಮತ್ತು ತಾಮ್ರಲಿಪ್ತಿ ಬಂದರುಗಳ ಮೂಲಕ ತಲುಪುತ್ತಿದ್ದರು[೯೧]. ಹಾಗೇ ನಾಗಪಟ್ಟಣ, ಮಂಗಳೂರು, ಹೊನ್ನಾವರದವರೆಗೂ ಚೀನಾದ ವರ್ತಕರ ಹಡಗುಗಳು ಬಂದಿರುತ್ತಿದ್ದವು[೯೨]. ಅಲ್ಲಿ ಅವುಗಳೊಡನೆ ಮುಂದಿನ ವ್ಯಾಪಾರ ನಡೆಯುತ್ತಿತ್ತು. ಆಫ್ರಿಕಾದ ಭೀಕರ ಮರಳುಗಾಡು ಇವರ ಪ್ರಯಾಣದ ದಾರಿಯಾಗಿತ್ತು. ಉತ್ಪಾತಗಳಿಂದ ಕೂಡಿದ ಆಫ್ರಿಕಾದ ಕಡಲನ್ನು ತಲುಪದೆ ಬೇರೆ ಮಾರ್ಗ ಆಯ್ದುಕೊಳ್ಳುವುದು ಅನಿವಾರ್ಯವಾದ್ದರಿಂದ, ಕಡಲು–ಭೂ ಎರಡೂ ಮಾರ್ಗಗಳನ್ನು ಬಳಸಿಕೊಂಡರು. ಈಜಿಪ್ಟ ಹಾಗೂ ರೋಮ್ ದೇಶಗಳ ಸಂಪರ್ಕವನ್ನು ಪಡೆಯುತ್ತಿದ್ದರು,

ಮಾನಸೂನ್ ಮಾರುತಗಳ ಪರಿಚಯಹೊಂದಿದ್ದ ಪ್ರಾಚೀನ ನಾವಿಕರು, ಹಿಪ್ಪಲಸ್ ಮಾರುತ ಕಂಡುಹಿಡಿದ ಮೇಲೆ ತಮ್ಮ ಯಾನವನ್ನು ಸರಳಗೊಳಿಸಿಕೊಂಡರು. ಹೊರಡುವ ತಿಂಗಳು–ತಲುಪುವ ತಿಂಗಳು ಮತ್ತು ತೆಗೆದುಕೊಳ್ಳುವ ಕಾಲವನ್ನು ಸರಿಯಾಗಿ ಅಂದಾಜು ಮಾಡುತ್ತಿದ್ದರು. ಹೀಗೆ ಭಾರತದ ಪಶ್ಚಿಮ ಹಾಗೂ ಪೂರ್ವ ಕರಾವಳಿಯ ಮೂಲಕ ವಿವಿಧ ದೇಶಗಳಿಗೆ ವ್ಯಾಪಾರಿ ಹಡಗುಗಳು ಹೋಗುತ್ತಿದ್ದವು.

೬.೭ ನಗರ ಕೇಂದ್ರ, ಪಟ್ಟಣ, ಪೇಟೆ ಹಾಗೂ ಸಂತೆ

ಬಂದರುಗಳು ವಾಣಿಜ್ಯ ಚಟುವಟಿಕೆಗಳಿಂದ ಕೂಡಿದ್ದಂತೆ, ಅಲ್ಲಿಬಂದ ಸಾಮಗ್ರಿಗಳ ಮಾರಾಟಕ್ಕೆ ಸ್ಥಳಗಳ ಅವಶ್ಯಕತೆ ಉಂಟಾಗುತ್ತಿತ್ತು. ಬಂದರುಗಳಲ್ಲಿ ವಿದೇಶದಿಂದ ಸರಕು ತುಂಬಿ ಬಂದ ಹಡಗುಗಳಲ್ಲಿ ಇರುತ್ತಿದ್ದ ವರ್ತಕರು ಕೇವಲ ಸರಕುಗಳನ್ನು ಬಂದರುಗಳಿಗೆ ತಂದು ಮಾರುತ್ತಿದ್ದರು. ಬಂದರು ಪ್ರದೇಶಗಳಲ್ಲಿ ಸರಕು ಕೊಂಡುಕೊಳ್ಳುತ್ತಿದ್ದ ಸ್ಥಳೀಯ ವರ್ತಕರು ಅವುಗಳನ್ನು ತೀರ ಪ್ರದೇಶದ ಪಟ್ಟಣಗಳಿಗೆ ಹಾಗೂ ಒಳನಾಡಿನ ಪಟ್ಟಣಗಳಿಗೆ ಕೊಂಡೊಯ್ದು ಮಾರುತ್ತಿದ್ದರು. ಸಂತೆ ನಡೆಯುತ್ತಿದ್ದಲ್ಲಿ ಮತ್ತು ಜನವಸತಿಯ ಪಕ್ಕದಲ್ಲಿರುವ ವಿಶಾಲ ಭೂಪ್ರದೇಶಗಳಲ್ಲಿ ತಮ್ಮ ಸಾಮಗ್ರಿಗಳನ್ನಿಟ್ಟು ಮಾರಾಟ ಮಾಡುತ್ತಿದ್ದರು.

ಹೀಗೆ ನಿರ್ದಿಷ್ಟ ಪ್ರದೇಶಗಳನ್ನು ಗುರುತಿಸಿ ಅವುಗಳನ್ನು ಸರಕು ಮಾರಾಟದ ಕೇಂದ್ರಗಳಾಗಿ ಮಾಡಿಕೊಳ್ಳುವಾಗ ಕೆಲವು ನಿಯಮಗಳು ಇದ್ದು ಅವು ಸಾಂದರ್ಭಿಕವಾಗಿರುತ್ತಿದ್ದವು[೧೯೩]. ಇಲ್ಲಿ ಜನಸಂಖ್ಯೆ ಕೈಗಾರಿಕೆಗಳ ಅಸ್ತಿತ್ವ, ಕೃಷಿ ಬೆಳವಣಿಗೆ ಉತ್ತಮ ನೈಸರ್ಗಿಕ ಲಕ್ಷಣ, ಸಾಗಾಣಿಕೆಗೆ ಅನುಕೂಲಗಳಿರಬೇಕಿತ್ತು. ನೀರಿನ ಪೂರೈಕೆ ಹಾಗೂ ವಸ್ತುಗಳ ಸಂಗ್ರಹಕ್ಕೆ ಮತ್ತು ರಕ್ಷಣೆಯ ಅವಶ್ಯಕತೆ ಇತ್ತು. ಹಲವು ಬಾರಿ ಧಾರ್ಮಿಕ ಹಾಗೂ ಆಡಳಿತ ಕೇಂದ್ರಗಳೂ ಮಾರುಕಟ್ಟೆ–ವಾಣಿಜ್ಯ ವ್ಯವಹಾರದ ಸ್ಥಳಗಳಾಗಿರುತ್ತಿದ್ದವು. ರಾಜ, ಸಾಮಂತ ಅಥವಾ ರಾಜ್ಯಪಾಲರು ವಾಸಿಸುತ್ತಿದ್ದ ಸ್ಥಳಗಳು ವಾಣಿಜ್ಯಕೇಂದ್ರಗಳಾಗಿರುತ್ತಿದ್ದವು. ಇಲ್ಲಿ ರಕ್ಷಣೆ ಮತ್ತು ಮೇಲ್ಕಾಣಿಸಿದ ಸೌಲಭ್ಯಗಳು ಸಹಜವಾಗಿ ದೊರಕುತ್ತಿದ್ದವು. ಕ್ರಿ.ಶ. ೬೦೦ ರಿಂದ ೧೨೦೦ ರವರೆಗಿನ ನಗರಗಳ ಅಧ್ಯಯನ ನಡೆಸಿರುವ ವಿದ್ವಾಂಸರು ರಾಜಕೀಯ ಮತ್ತು ಧಾರ್ಮಿಕ ಚಟುವಟಿಕೆಗಳು ತೀವ್ರವಾಗಿದ್ದಲ್ಲಿ ಪಟ್ಟಣಗಳು ನಿರ್ಮಾಣವಾಗಿವೆ ಎಂದು ಹೇಳುತ್ತಾರೆ[೧೯೪].

ಅಲೆಮಾರಿ ಮಾನವ ತನ್ನ ಬದುಕನ್ನು ಒಂದು ನೆಲೆಯಲ್ಲಿ ಕಟ್ಟಿಕೊಂಡು ತನ್ನ ಪರಿವಾರ ಇಷ್ಟದವರೊಂದಿಗೆ ನೆಲೆಸಿದ ಪ್ರದೇಶಗಳು ಗ್ರಾಮಗಳಾಗಿ, ಹಳ್ಳಿಗಳಾಗಿ ಬೆಳೆದವು. ಒಂದಡೆ ನೆಲೆ ನಿಂತವರು ಆಹಾರಕ್ಕಾಗಿ ಅಲೆಯುವುದರ ಬದಲು ತಮಗೆ ಬೇಕಿದ್ಧ ಆಹಾರವನ್ನು ಬೆಳೆಯಲಾರಂಭಿಸಿದರು. ಮಾನವ ನೇಗಿಲನ್ನು ಬಳಸಿ ಬೇಸಾಯ ಮಾಡುತ್ತಾ[೧೯೫] ಆರ್ಥಿಕವಾಗಿ ಪರಿವರ್ತನೆಗೊಳ್ಳತೊಡಗಿದ. ಆಹಾರ ಸಂಗ್ರಹಣೆಯ ಹಂತದಾಟಿ, ಆಹಾರ ಉತ್ಪಾದನೆಯ ಹಂತದಲ್ಲಿ ಉತ್ಪಾದನಾ ಸಂಬಂಧಗಳು ಹೆಚ್ಚು ಸಂಕೀರ್ಣವಾಗಿರುತ್ತವೆ.[೧೯೬] ಉತ್ಪಾದನೆಗಳು ಹೆಚ್ಚಾದಂತೆ ಮಿಗುತಾಯ ಮೌಲ್ಯ ಉಂಟಾಯಿತು. ಮಿಗುತೆ ಆಹಾರೋತ್ಪಾದನೆಯನ್ನು ಬೇಡಿಕೆ ಹೊಂದಿದವರಿಗೆ ತಲುಪಿಸುವ ವಿವಿಧ ಪದ್ಧತಿಗಳು ಕಂಡು ಬಂದವು. ವಿನಿಮಯದಿಂದ ವಸ್ತುಗಳ ಪೂರೈಕೆ ಒಂದಾದರೆ, ವಸ್ತುಗಳನ್ನು ಮೌಲ್ಯಕ್ಕೆ ಕೊಂಡುಕೊಳ್ಳುವ ಪದ್ಧತಿಯೂ ಉಂಟಾಯಿತು.

ಹೀಗೆ ವಸ್ತುಗಳನ್ನು ನಿರ್ದಿಷ್ಟ ಪಡಿಸಿದ ಸ್ಥಳಗಳಲ್ಲಿ ಸಂಗ್ರಹಿಸಲು ಮಾರಾಟ-ವಿನಿಮಯ ನಡೆಸುವ ಪದ್ದತಿ ಬೆಳೆದಂತೆ, ಆ ಸ್ಥಳಗಳು ಪೇಟೆಗಳಾಗಿ ಮುಂದೆ ನಗರಗಳಾಗಿ ಬೆಳೆದವು. ಇಂಥಹ ಪಟ್ಟಣಗಳ ರಚನೆ ಬಹುಮುಖಿಯಾಗಿದ್ದವು. ಮಾನವನ ಜೀವನದ ವಿಕಾಸದಲ್ಲಿ ನಗರವು ಒಂದು ವಿಶಿಷ್ಟ ಹಂತವಾಗಿದೆ.[೧೯೭] ಮಾನವನ ಬದುಕಿನ ವಿವಿಧ ಮಜಲುಗಳು ಈ ನಗರದ ಬೆಳವಣಿಗೆಗಳಲ್ಲಿ ಕಾಣಬಹುದು. ಈ ನಗರಗಳು ಕೇವಲ ಜನರ ವಾಸಸ್ಥಳಗಳಲ್ಲ[೧೯೮] ಎಂಬುದು ತಿಳಿಯುತ್ತದೆ. ಮಾನವನು ತನಗೆ ಬೇಕಿದ್ದ ಅನುಕೂಲತೆಗಳನ್ನು ನಗರದಲ್ಲಿ ಕಂಡುಕೊಂಡಿದ್ದರೂ, ಈ ನಗರಗಳು ಬೆಳೆಯುತ್ತಿರುವ ಸಂಘಟಿತ ಸಮಾಜದ ಅನಿವಾರ್ಯ ಅಂಶವಾಗಿರುತ್ತದೆ. ನಗರೀಕರಣವು ಪ್ರಪಂಚದ ಯಾವುದೇ ಭಾಗದಲ್ಲಿ ಆಗುತ್ತಿದ್ದರೂ ಅದು ಅಲ್ಲಿದ್ದ ಸಾಮಾಜಿಕ, ರಾಜಕೀಯ, ಆರ್ಥಿಕ, ಭೌಗೋಳಿಕ ಮತ್ತು ಧಾರ್ಮಿಕ ಅಂಶಗಳಿಂದ ಪ್ರೇರಣೆಗೊಂಡಿರುತ್ತದೆ[೧೯೯]. ಕರಾವಳಿಯ ನಗರಗಳು, ಪಟ್ಟಣಗಳು, ಪೇಟೆಗಳು ಆಡಳಿತ ಕೇಂದ್ರಗಳಾಗಿ, ಧಾರ್ಮಿಕ ಸ್ಥಳಗಳಾಗಿ ಅಂತೆಯೇ ಭೌಗೋಳಿಕವಾಗಿ ಕೂಡು ಸ್ಥಳದಲ್ಲಿದ್ದು, ವ್ಯಾಪಾರ ವ್ಯವಹಾರಕ್ಕೆ ಅನುಕೂಲಕರವಾದ ಸ್ಥಳಗಳಲ್ಲಿದ್ದವು. ಇಲ್ಲಿಗೆ ಬರಲು ಹಾಗೂ ಸುತ್ತಲಿನ ಊರುಗಳಿಗೆ ಹೋಗಲು ಸರಿಯಾದ ಸುರಕ್ಷಿತ ಮಾರ್ಗಗಳಿದ್ದವು. ಎಲ್ಲಕಿಂತ ಮುಖ್ಯವಾಗಿ ಕುಶಲಕರ್ಮಿಗಳು ಸುತ್ತಲ ಹಳ್ಳಿಗಳಿಂದ ಬಂದು ವಾಸವಾಗಿ ತಮ್ಮ ವೃತ್ತಿಗಳನ್ನು ನಡೆಸಲು ಸಹಾಯಕವಾಗಿತ್ತು.

ನೈಸರ್ಗಿಕ ಲಕ್ಷಣವು ಉತ್ತಮ ಮಣ್ಣು, ಮಳೆ, ಸುತ್ತಲಿನ ಊರುಗಳೊಂದಿಗೆ ಸಂಪರ್ಕಕ್ಕೆ ಅನುಕೂಲತೆ, ಖನಿಜ ಸಂಪತ್ತು ಮತ್ತು ಅರಣ್ಯ ಉತ್ಪನ್ನಗಳು[೨೦೦] ಯಥೇಚ್ಛವಾಗಿ ಸಿಗುವಂತಿದ್ದ ಪ್ರದೇಶಗಳು ನಗರಗಳಾಗಲು ಯೋಗ್ಯವಾಗಿದ್ದಂತೆ, ಕರಾವಳಿಯ ನಗರಗಳಿಗೆ ಬಹುಮುಖ್ಯವಾಗಿ ಕಡಲೋತ್ತರ ವ್ಯಾಪಾರಕ್ಕೆ ಅನುಕೂಲವಾಗಿದ್ದ ಸ್ಥಳಗಳು ಪಟ್ಟಣಗಳಾಗಿ ಪರಿವರ್ತಿತವಾಗಿದ್ದವು. ಕಡಲೆಡೆಯಿಂದ ಬರುವ ಬೃಹತ್ ಹಡಗುಗಳನ್ನು ಲಂಗರು ಮಾಡಲು ಹಾಗೂ ಸಾಮಾನುಗಳನ್ನು ಇಳಿಸಲು ಮತ್ತು ತುಂಬಲು ಅನುಕೂಲಕರವಾಗಿದ್ದ ಸ್ಥಳಗಳಾಗಿದ್ದವು.

ನಗರಗಳ ರಚನೆಯನ್ನು ಗುರುತಿಸುವ ಹಲವು ಅಧ್ಯಯನಗಳು ನಡೆದಿವೆ. ನಗರಗಳ ರಚನೆಗೆ ಬೇಕಾದ ಇನ್ನೊಂದು ಬಹುಮುಖ್ಯವಾದ ಸಂಗತಿಯೆಂದರೆ ಉತ್ತಮ ಮಣ್ಣು ಹಾಗೂ ಪರಿಸರ, ನೀರು ಮೂಲಭೂತ ಅಗತ್ಯಗಳು ಹಾಗೂ ಮುಂದುವರಿದ ತಂತ್ರಜ್ಞಾನದಿಂದ ಕೂಡಿದ ಕೃಷಿ ಮತ್ತು ಇತರ ಸಲಕರಣೆಗಳು ಸಿಗುತ್ತಿರಬೇಕು[೨೦೧]. ಇಂಥಹ ಪ್ರದೇಶದಲ್ಲಿ ಜನರು ತಾವಾಗಿಯೇ ತಮ್ಮ ಕರಕುಶಲ ವಸ್ತುಗಳ ಉತ್ಪಾದನೆ, ಮಾರಾಟಕ್ಕೆ ಬರುತ್ತಾರೆ. ಹಾಗೇ ಬೇರೆಡೆಯಿಂದ ಮಧ್ಯವರ್ತಿ ವ್ಯಾಪಾರಿಗಳು ಬಂದು ವ್ಯಾಪಾರ ವ್ಯವಹಾರ ನಡೆಸುತ್ತಾರೆ.

ನಗರ ಕೇಂದ್ರಗಳು, ಪಟ್ಟಣಗಳನ್ನು ಗುರುತಿಸುವಲ್ಲಿ ಆರ್.ಎಸ್.ಶರ್ಮಾರವರು ಈಗಾಗಲೇ ಉತ್ಖನನ ನಡೆದಿರುವ ಸ್ಥಳಗಳನ್ನು ಪರಿಶೀಲಿಸಿ ನಗರಗಳ ಲಕ್ಷಣವನ್ನು ಹೀಗೆ ನೀಡಿದ್ದಾರೆ. ಒಂದು ಕಿಲೋಮೀಟರ ಚಚ್ಚೌಕ ಹಾಗೂ ಬೃಹತ್ ಜನಸಂಖ್ಯೆ, ಇಟ್ಟಿಗೆಗಳಿಂದ ಮಾಡಿರುವ ಯೋಜಿತರೀತಿಯ ನಿರ್ಮಾಣಗಳಿಂದ[೨೦೨] ಗುರುತಿಸಬಹುದು ಎನ್ನುತ್ತಾರೆ. ಒಳಚರಂಡಿ, ವಿಸ್ತಾರವಾದ ರಸ್ತೆಗಳು ಹಾಗೂ ನೀರಿನ ಪೂರೈಕೆಗಳು ಒಂದು ಸುಸಂಬದ್ಧ ನಗರದ ಲಕ್ಷಣಗಳಾಗಿರುತ್ತವೆ. ಕರಾವಳಿಯಲ್ಲಿಯ ಪ್ರಮುಖ ವ್ಯಾಪಾರಿ ಪಟ್ಟಣಗಳಾದ ಮಂಗಳೂರು, ಬಾರ್ಕೂರು, ಬಸರೂರು, ಗಂಗೊಳ್ಳಿ, ಭಟ್ಕಳ, ಕಾರವಾರಗಳು ಮೇಲ್ಕಾಣಿಸಿದ ಎಲ್ಲ ಬಗೆಯ ಸೌಲಭ್ಯಗಳನ್ನು ಹೊಂದಿದ್ದವು.

ಬಂದರುಗಳಿಗೆ ಸಂಬಂಧಿಸಿದಂತೆ ಧಾರ್ಮಿಕ ಹಾಗೂ ರಾಜಕೀಯ ಕೇಂದ್ರಗಳು ಪಟ್ಟಣವಾಗಿರುವುದು ನೋಡಲು ಸಿಗುತ್ತದೆ. ಅದೆಲ್ಲಕ್ಕಿಂತ ವ್ಯಾಪಾರಿಗಳಿಗೆ ಬಂದು ಹೋಗಲು ಜಲ ಹಾಗೂ ಭೂ ಎರಡೂ ಮಾರ್ಗಗಳ ಸೌಲಭ್ಯಗಳಿರುವ ಸ್ಥಳ ಮತ್ತು ಅವರಿಗೆ ಸುರಕ್ಷಿತ ಎನಿಸಿದ್ದ ಸ್ಥಳ ಹಾಗೂ ಹತ್ತಿರದ ಸುತ್ತಲಿನ ಗ್ರಾಹಕರಿಗೆ ಬಂದು ಹೋಗಲು ಅನುಕೂಲವಿರುವ ಸ್ಥಳಗಳು ಪಟ್ಟಣಗಳಾಗಿರುವುದು ಕಾಣುತ್ತದೆ.

ಬನವಾಸಿ, ಮಂಗಳೂರು, ಬಾರ್ಕೂರು, ಹೊಂಬುಚ್ಚ, ಅಜಿಲ, ಮುಲ್ಕಿ ಮೂಡಬಿದಿರೆ, ಕಾರ್ಕಳ, ಭಟ್ಕಳ, ಹೊನ್ನಾವರಗಳು ರಾಜಕೀಯ ಕೇಂದ್ರಗಳಾಗಿದ್ದರೆ, ಬಸರೂರು, ಕುಂದಾಪುರ, ಗಂಗೊಳ್ಳಿ, ಬೈಂದೂರು, ಶಿರೂರು, ಅಂಕೋಲಾ, ಕುಮಟಾ, ಮಿರ್ಜಾನ, ತದಡಿ, ಕಾರವಾರಗಳು ಅಲ್ಲಿರುವ ಅನುಕೂಲತೆಗಳಿಂದ ವ್ಯಾಪಾರಿ ಪಟ್ಟಣಗಳಾಗಿದ್ದವು. ಬನವಾಸಿ, ಗೋಕರ್ಣ, ದಿವಗಿ, ಚಂದಾವರ, ಹೈಗುಂದ, ಗೇರಸೊಪ್ಪಾ ಮಂಕಿ, ಹಾಡೋವಳ್ಳಿ, ಶಿರಾಲಿ, ಹಟ್ಟಿಅಂಗಡಿ, ಹೊಸಂಗಡಿ, ಕೋಟೇಶ್ವರ, ಉಡುಪಿ, ಬಾರ್ಕೂರು, ಮಂಗಳೂರುಗಳು ಧಾರ್ಮಿಕ ಹಾಗೂ ರಾಜಕೀಯ ಕಾರಣಗಳೊಂದಿಗೆ ವ್ಯಾಪಾರಿಗಳಿಗೆ ಅನುಕೂಲವಾದ ವ್ಯಾಪಾರಿ ಪಟ್ಟಣವಾಗಿದ್ದವು.

ಇದಲ್ಲದೆ ವ್ಯಾಪಾರದ ಅನುಕೂಲಕ್ಕಾಗಿ ಸಂತೆ ಏರ್ಪಡಿಸುತ್ತಿದ್ದರು. ತೀರದ ಸಮೀಪದ ವಿಶಾಲ ಸ್ಥಳಗಳೂ ಹಾಗೂ ಘಟ್ಟದ ಮೇಲಿನ, ಅನುಕೂಲತೆಗಳಿರುವ ಸ್ಥಳಗಳು, ಸುತ್ತಲಿನ ಜನರು ಬಂದು ಸರಕು ಕೊಳ್ಳಲು ಸಹಾಯಕವಾಗಿರುವ ಸ್ಥಳಗಳು ಸಂತೆ ನಡೆಸಲು ಉತ್ತಮ ಸ್ಥಳಗಳಾಗಿದ್ದವು. ಇಂತಹ ಸಂತೆಯ ಸ್ಥಳಗಳ ಬಗ್ಗೆ ಎರಿತ್ರಿಯನ್ ಸಿ ಪ್ರವಾಸಿ ಕಥನದಲ್ಲಿ ಕಂಡುಬರುತ್ತದೆ[೨೫೮]. ಪ್ರದೇಶದ ಸೌಕರ್ಯಕ್ಕೆ ಅನುಗುಣವಾಗಿ ವಸ್ತುಗಳು ಆ ಸ್ಥಳಗಳಿಗೆ ಬರುತ್ತಿದ್ದವು. ಜನರು ಕೊಂಡು ಕೊಳ್ಳುತ್ತಿದ್ದರು. ಕಾರವಾರದ ಬಳಿಯ ಚೆರ್ಸೋನಿಸಸ್ ಸ್ಥಳವನ್ನು ಸಂತೆ ನಡೆಯುವ ಸ್ಥಳ ಎಂದು ಪ್ರವಾಸಿ ಹೇಳಿದ್ದಾನೆ.

ಪ್ರಾಚೀನ ಕಾಲದ ಕರ್ನಾಟಕದ ವ್ಯಾಪಾರಿ ಕೇಂದ್ರಗಳನ್ನು ಟಾಲೆಮಿ ತನ್ನ ಪ್ರವಾಸಿ ಕಥನದಲ್ಲಿ ಹೆಸರಿಸಿದ್ದಾನೆ. ಅವುಗಳು ಮಲಿಪ್ಪಲ (ಮಲ್ಪೆ), ತಬಸೊ(ತಾವಸಿ), ಇಂಡೆ(ಇಂಡಿ) ತಿರಿಪಂಗಲಿದ (ಗಡಹಿಂಗ್ಲಜ) ಹಿಪ್ಪೊಕೊರ (ಹೂವಿನಹಿಪ್ಪರಗಿ) ಸಿರಿಮಲಗ (ಚಿಮ್ಮಲಗಿ) ಕಲ್ಲಿಗೇರಿಯಸ್ (ಕಲಗೇರಿ) ಪತಿರ್ಗಾಲ (ಹತ್ತಿರ್ಕಹಾಳ ಅಥವಾ ಮಿರಜ್) ಕೂಬ (ಗೋವ) ಪಸಗೇ (ಹಲಸಿ), ಪುನ್ನಾಟ ಇವುಗಳಲ್ಲದೇ ಇನ್ನೂ ಗುರುತಿಸಲು ಸಾಧ್ಯವಾಗದ ಊರುಗಳ ಹೆಸರುಗಳು ಹೇಳಲ್ಪಟ್ಟಿವೆ. ಮೇಲಿನವುಗಳೆಲ್ಲಾ ವ್ಯಾಪಾರಿ ಕೇಂದ್ರಗಳಾಗಿದ್ದುವು. ಇಬ್–ನೆ–ಬತುತಾ ತನ್ನ ಪ್ರವಾಸಿ ಕಥನದಲ್ಲಿ ಹಲವು ವ್ಯಾಪಾರಿ ಪಟ್ಟಣಗಳನ್ನು ಹೆಸರಿಸಿದ್ದಾನೆ. ಸಂದಾಪುರ (ಗೋವಾ), ಅಂಜದೀವ್, ಹೆನಾವರ (ಹೊನ್ನಾವರ) ಮಂಜರೂರ (ಮಂಗಳೂರ) ಅಬೂಸರು (ಬಸರೂರು) ಫಾಕನೂರ್ (ಬಾರ್ಕೂರು) ಮುಂತಾಗಿ ಹೆಸರಿಸಿದ್ದಾನೆ.

ಪ್ರಾಚೀನ ಕರ್ನಾಟಕದಲ್ಲಿ ಪ್ರಖ್ಯಾತವಾಗಿದ್ದ ಐಹೊಳೆಐನೂರ್ವರು ಎಂಬ ವ್ಯಾಪಾರಿ ಗಣ ಜನಪ್ರಿಯವಾಗಿದ್ದಾಗ ಅದನ್ನು ಉಲ್ಲೇಖಿಸುವ ಶಾಸನಗಳು ದೊರೆತ ಹಾಗೂ ಶಾಸನಗಳಲ್ಲಿ ಉಲ್ಲೇಖಿತ ಹೆಸರುಗಳಿಂದ ಅಂದಿನ ಪ್ರಮುಖ ಪಟ್ಟಣಗಳನ್ನು ಈ ರೀತಿ ಹೆಸರಿಸಬಹುದು. ಬಾಗಳಿ, ತಿರುಮಕೊಡಲು, ಬೆಡಕಿಹಾಳ, ಸುತ್ತೂರ ರಾಜೂರ, ಬೆಳೆತೂರ, ಬಳ್ಳಿಗಾವೆ, ಹಿರೇಹಡಗಲಿ, ಹೊಳಲ, ಗಂಗವಳ್ಳಿ, ಯಂಗಲ್ಲ, ಹನಮನಹಾಳ, ಎಲಿಶಿರೂರ, ಅಗರಖೇಡ, ಐಹೊಳೆ, ಮಾಶ್ಯಾಳ, ಹಾನಗಲ್ಲ, ಶಿರೋಳ, ನೆಗಳೂರು, ಹಿರೇಬೇವಿನೂರ, ಕೊಲ್ಲಾಪುರ, ವಿಜಾಪುರ, ಮೀರಜ, ಗಂಗಾಪುರಂ, ಸಂಸಿ, ತೆಲಸಂಗ, ಎಮ್ಮಿಗನೂರ, ಬಂದಳಿಕೆ, ಎಕ್ಸಂಬಾ ಬಾಳಂಬೀಡ, ಹುಯಿಲಗೊಳ, ಬೆಣಚಮಟ್ಟಿ, ಕಾಮಧೇನು, ಆಡಕಿ, ಗೋಲಹಳ್ಳಿ, ಚೆನ್ಮಳ್ಳಿ, ಗೋಲಹಳ್ಳಿ, ಕುರಗೋಡ, ಲಕ್ಕುಂಡಿ, ಆಲಂಪುರ,ಕೊಣ್ಣೂರ, ಸಿರಸಂಗಿ, ಲಕ್ಷ್ಮೇಶ್ವರ, ಮೇವುಂಡಿ, ಮುಳಗುಂದ, ಕೊಂಗವಾಡ, ಕುರವತ್ತಿ, ಕೋಲಾರ, ಸವದತ್ತಿ ಮನವಳ್ಳಿ, ಮಮದಾಪುರ, ದೊಡ್ಡಬಳ್ಳಾಪುರ, ಬೇಲೂರು ಮುಂತಾದವು. ಇನ್ನೂ ರೋಣ, ಧಾರವಾಡ, ಹರಪನಹಳ್ಳಿ, ಹಿರೇಕೇರೂರು, ಬಳ್ಳಾರಿ, ಬಸವಕಲ್ಯಾಣ, ಗದಗ, ಅಫಜಲಪುರ ಮುಂತಾದವುಗಳು ವ್ಯಾಪಾರಿ ಪಟ್ಟಣಗಳಾಗಿದ್ದವು.

ಕರಾವಳಿಯಿಂದ ಘಟ್ಟಕ್ಕೆ ಸಂಪರ್ಕಕಲ್ಪಿಸುವಾಗ ದಾರಿಯ ಮಧ್ಯದಲ್ಲಿ ಅನೇಕ ಪಟ್ಟಣಗಳು, ವ್ಯಾಪಾರಿ ಕೇಂದ್ರಗಳು ಇದ್ದವು. ಉದಾ: ಕಾರವಾರದಿಂದ ಹಳಗಾ, ಹೊಟೆಗಾಳಿ, ಕೆರವಾಡಿ ಘೋಡೆಗಾಳಿ, ಮಲ್ಲಾಪುರ, ಕದ್ರಾ, ಹೊನ್ನಳ್ಳಿ, ಕೈಗಾ, ದೇವಕಾರ, ದಾಂಡೇಲಿ, ಯಲ್ಲಾಪುರ, ಕಿರವತ್ತಿಗಳಾದರೆ ಅಂಕೋಲಾದಿಂದ ಹೊರಟ ಮಾರ್ಗದಲ್ಲಿ ಶಿರಕೂರು, ಹಿಚ್ಕಡ, ಶಿರೂರು, ಹಿಲ್ಲೂರು, ಸುಂಕಸಾಳ, ಹೆಗ್ಗಾರ, ರಾಮನಗುಡಿ, ಕುಮಟಾದಿಂದ ಉಪ್ಪಿನ ಪಟ್ಟಣ, ಆನೆಗುಂಡಿ,

ರಾಗಿಹೊಸಳ್ಳಿ, ಬಂಡಲ, ಶಿರ್ಶಿ, ಬನವಾಸಿ ಇನ್ನೊಂದು ಮಾರ್ಗ, ಬಡಾಳ, ಚಂದಾವರ ಭುವನಗಿರಿ, ಬಿಳಗಿಗಳಾಗಿದ್ದವು. ಹೊನ್ನಾವರದಿಂದ ಹೊರಟ ಮಾರ್ಗವು ಅರೆಅಂಗಡಿ, ಚಂದಾವರಗಳು ಒಂದು ಮಾರ್ಗದಲ್ಲಾದರೆ, ಇನ್ನೊಂದು ಗೇರಸೊಪ್ಪಾ, ಮಾವಿನಗುಂಡಿ, ಶಿವಮೊಗ್ಗಾ, ತೀರ್ಥಳ್ಳಿ, ಸಾಗರ, ಸೊರಬ ಮುಂತಾದ ಪಟ್ಟಣಗಳಿದ್ದವು. ಶಿರೂರು, ಬೈಂದೂರುಗಳು, ಕೊಲ್ಲೂರು-ಶಿವಮೊಗ್ಗಾಗಳ ಮಧ್ಯ ಅನೇಕ ವ್ಯಾಪಾರಿ ಪಟ್ಟಣ ಹೊಂದಿತ್ತು. ಕುಂದಾಪುರವು-ಗಂಗೋಳ್ಳಿ, ಬಸರೂರು, ಸಿದ್ಧಾಪುರ, ಹೊಸಂಗಡಿ, ಶಂಕರನಾರಾಯಣ, ಶಿವಮೊಗ್ಗಾವರೆಗೆ ಹಾಗೂ ತೀರ ಪ್ರದೇಶದಲ್ಲಿ ಹಟ್ಟಿಯಂಗಡಿ, ಉಪ್ಪುಂದ, ನಾವುಂದ, ಕಿರಿಮಂಜೇಶ್ವರ, ಆಲೂರು ಮುಂತಾದ ವ್ಯಾಪಾರಿ ಸ್ಥಳ ಹೊಂದಿತ್ತು.

ಬಾರ್ಕುರಿನಿಂದ ಮೇಲಕ್ಕೆ ಬೆಲ್ಲಂಪಾಡಿ, ಕೊರಂಗಪಾಡಿ, ಕಾರ್ಕಳ ಮುಂದೆ ತೀರದಲ್ಲಿ ಮುಲ್ಕಿ, ಕಾರ್ನಾಡ, ಹಳಯಂಗಡಿ, ಶಿರ್ಲಾಲು, ಸುರತ್ಕಲ್, ಹೊಸಬೆಟ್ಟುಗಳಾದರೆ ಮಂಗಳೂರಿನಿಂದ ಮೇಲಕ್ಕೆ ಹೋದಂತೆ ಪಣಂಬೂರು, ಗುರುಪುರ, ಕಂದಾವರ, ಬಂಟ್ವಾಳ, ಮೂಡಬಿದಿರೆ, ಬೆಳ್ತಂಗಡಿ, ಸುಬ್ರಹ್ಮಣ್ಯಗಳು ವ್ಯಾಪಾರಿ, ಸಂತೆ ಕೇಂದ್ರಗಳಾಗಿದ್ದವು.

೬.೮ ಉದ್ದಿಮೆಗಳು ಹಾಗೂ ಕೈಗಾರಿಕಾನಗರಗಳು

ಮಾರಾಟ ಅಥವಾ ಕೊಳ್ಳುವುದರ ಮೂಲಕ ವಿನಿಮಯ ಮಾಡಿಕೊಳ್ಳುವ ಸಲುವಾಗಿ ಶ್ರಮದಿಂದ ಉತ್ಪಾದಿಸಿದ ಒಂದು ವಸ್ತುವೇ ಸರಕು[೨೦೩]. ಇಂಥಹ ಸರಕುಗಳಲ್ಲಿ ಬೇಡಿಕೆ ಇರುವ ವಸ್ತುಗಳ ಉತ್ಪಾದನೆಗೆ ದೊಡ್ಡ ಪ್ರಮಾಣದಲ್ಲಿ ಉತ್ಪಾದನಾಗಾರಗಳನ್ನು ಪ್ರಮುಖ ಬಂದರು ಪಟ್ಟಣಗಳಲ್ಲಿ ಹಾಗೂ ಅವುಗಳ ನೆರೆಹೊರೆಯಲ್ಲಿ ಸ್ಥಾಪನೆ ಮಾಡಿಕೊಂಡಿದ್ದರು. ಹತ್ತಿರದಲ್ಲಿ ಕರಕುಶಲ ವಸ್ತುಗಳಿಗೆ ಬೇಕಾಗಿದ್ದ ಕಚ್ಚಾಪದಾರ್ಥಗಳು ಸುಲಭವಾಗಿ ಪಡೆಯುವ ವ್ಯವಸ್ಥೆ ಇರುವಲ್ಲಿ ಹಾಗೂ ವಿದೇಶಿ ವ್ಯಾಪಾರಕ್ಕೆ ಹತ್ತಿರದ ಸಾಗಾಣಿಕಾ ಮಾರ್ಗದ ಸಮೀಪದಲ್ಲಿ ಕೈಗಾರಿಕೆಗಳನ್ನು ಸ್ಥಾಪಿಸಿಕೊಂಡಿದ್ದರು. ಕರಾವಳಿಯ ಜನಜೀವನ ಒಂದು ಹಂತದಲ್ಲಿ ಒಂದೇ ಸ್ಥಳದಲ್ಲಿ ನೆಲೆ ನಿಂತು ಬದುಕನ್ನು ಕಟ್ಟಿಕೊಂಡದ್ದು ಈ ಉದ್ಯಮದ ದೆಸೆಯಿಂದ. ಜಗತ್ತಿನ ಎಲ್ಲ ನಾಗರಿಕತೆಗಳಲ್ಲೂ ಇಂಥಹುದೇ ಸ್ಥಿತಿ ನಿರ್ಮಾಣಗೊಂಡಿತ್ತು. ಕಲ್ಲಿನ ಸಾಧನಗಳು, ಕೈ ಉಪಕರಣಗಳಿಂದ ಬಿಲ್ಲು ಮತ್ತು ಕವಣೆ, ದೋಣಿ ಮತ್ತು ಮೀನುಗಾರಿಕೆ, ವ್ಯವಸಾಯ ಮತ್ತು ಆಹಾರ ಉತ್ಪಾದನೆ, ಉಣ್ಣೆ ತಯಾರಿಕೆ ಮುಂದೆ ಸಾಣೆ ಹಿಡಿದ ಉಪಕರಣಗಳು, ಕೊಡಲಿ-ಗುದ್ದಲಿಗಳು[೨೦೪] ನಾಗರಿಕತೆಯ ಆರಂಭದ ಲಕ್ಷಣಗಳಾದರೆ, ಮುಂದೆ ಬೆಳೆದ ನಗರಗಳು ಬಂದರುಗಳು-ಕೈಗಾರಿಕಾ ಪಟ್ಟಣಗಳು ಕರಕುಶಲ ಕರ್ಮಿಗಳ ನುರಿತ ಕೈ ಕಸುಬಿನಿಂದ ಬೆಳೆದವುಗಳು.

ಭಾತರದಲ್ಲಿ ಲೋಹ ವಿದ್ಯೆಯು ಪ್ರಾಚೀನವೂ ಮತ್ತು ಬಹುವ್ಯಾಪ್ತಿಯದ್ದೂ ಆಗಿತ್ತು[೨೦೫]. ತಾಮ್ರ, ಹಿತ್ತಾಳೆ, ಕಂಚು, ಬಂಗಾರ ಮತ್ತು ಬೆಳ್ಳಿಯ ವಸ್ತುಗಳು ವ್ಯಾಪಕವಾಗಿ ಉಪಯೋಗದಲ್ಲಿದ್ದವು. ಮೆಹರಾಲಿಯ ಕಬ್ಬಿಣದ ಕಂಬ ಮತ್ತು ಸುಲ್ತಾನ ಗಂಜ್‌ನಲ್ಲಿರುವ ಕಂಚಿನ ಬುದ್ಧನ ವಿಗ್ರಹ[೨೦೬] ಭಾರತೀಯರ ಲೋಹವಿದ್ಯೆಯ ನಿಷ್ಣಾತತೆಯನ್ನು ತೋರುತ್ತವೆ. ಸುಲ್ತಾನ್‌ಗಂಜ್ ಬುದ್ಧನ ವಿಗ್ರಹವು ಎರಡು ಮೀಟರ್ ಎತ್ತರವಿದ್ದಿತು. ಸುಮಾರು ಒಂದು ಟನ್ ತೂಗುತ್ತಿತ್ತು[೨೦೭], ಹೀಗೆ ಧಾರ್ಮಿಕವಾಗಿ ಲೋಹದ ಬಳಕೆ ಬೆಳೆದಂತೆಯೇ ಆರ್ಥಿಕ ಉತ್ಪಾದನೆಯಲ್ಲೂ ಲೋಹದ ಬಳಕೆ ನಡೆಯಿತು. ಯರೋಪಿಯನ್ನರು ಕಬ್ಬಿಣ ಕಂಡುಹಿಡಿಯುವುದಕ್ಕೆ ಎಷ್ಟೋ ಮುಂಚಿತವಾಗಿಯೇ ಕಬ್ಬಿಣವನ್ನು ಹದಗೊಳ್ಳಿಸುವ ಮತ್ತು ಎರಕ ಹೊಯ್ಯುವ ಕಲೆ ಭಾರತದಲ್ಲಿ ಅಭಿವೃದ್ಧಿಗೊಂಡಿತ್ತು[೨೦೮]. ಭಾರತದಲ್ಲಿ ಬೇರೆಲ್ಲ ಕಡೆಗಳಿಗಿಂತ ಮೊದಲು ಹತ್ತಿಯ ಕೃಷಿ ಕಾಣಿಸಿಕೊಂಡಿತು[೨೦೯]. ಭಾರತದ ಹತ್ತಿಬಟ್ಟೆಗೆ ವಿದೇಶದಲ್ಲಿ ದೊಡ್ಡ ಬೇಡಿಕೆ ಇತ್ತು.

ವಿದೇಶಗಳಲ್ಲಿ ಭಾರತೀಯ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾದಂತೆಲ್ಲಾ ಅವುಗಳನ್ನು ಹೆಚ್ಚು-ಹೆಚ್ಚು ಉತ್ಪಾದಿಸುವ ಕೈಗಾರಿಕೆಗಳನ್ನು ನಿರ್ಮಿಸಿದರು. ಇಲ್ಲಿ ವರ್ತಕರು ಹಾಗೂ ವರ್ತಕಸಂಘಗಳು ಸಾಕಷ್ಟು ಬಂಡವಾಳವನ್ನು ಅಂದರೆ ಉತ್ಪಾದನೆಗೆ ಅಗತ್ಯವಾದ ಕಚ್ಚಾ ಸಾಮಗ್ರಿಗಳನ್ನು ತಂದು ಸುರಿಯತೊಡಗಿದರು. ಬೇರೆ-ಬೇರೆ ಸ್ಥಳಗಳಲ್ಲಿದ್ದ ಕುಶಲಕರ್ಮಿಗಳನ್ನು ಒಂದೆಡೆ ಸೇರಿಸಿದರು. ಅವರಿಗೆ ಬದುಕು ನಡೆಸಲು ಬೇಕಿದ್ದಷ್ಟು ಮಾತ್ರ ನೀಡಿ, ಅವರು ಉತ್ಪಾದಿಸಿದ್ದನ್ನು ದೇಶದ ಒಳಗೂ, ಹೊರಗೂ ಮಾರಿ ಲಾಭ ಮಾಡಿಕೊಂಡರು. ಹಲವು ಹಂತದಲ್ಲಿ ವಿವಿಧ ಉತ್ಪಾದನೆಗಳು ವೃತ್ತಿ ಸಂಘದ ನೇತ್ರತ್ವದಲ್ಲಿಯೇ ನಡೆಯುತ್ತಿದ್ದವು. ಆದ್ದರಿಂದಲೇ ವಿವಿಧ ವೃತ್ತಿಗೆ ಸಂಬಂಧಿಸಿದ ಸಂಘಗಳು ಕಂಡು ಬರುತ್ತವೆ.

ಕರಕುಶಲ ಕರ್ಮಿಗಳನ್ನು ಒಂದೆಡೆ ತರುವ ಸಾಹಸದ ಕೆಲಸದ ಜರುರತ್ತು ಅಂದಿನ ಶ್ರೀಮಂತ ವ್ಯಾಪಾರಿಗಳಿಗಿತ್ತು. ಬಹುತೇಕ ಜನರು ಕುಶಲರಲ್ಲದ ಕಾರ್ಮಿಕರಾಗಿರುತ್ತಾರೆ. ಕುಶಲ ಶ್ರಮ ಎಂದರೆ ಸರಳ ಶ್ರಮವೇ ಗಾಢವಾದಂತೆ ಅಥವಾ ಬೇರೆ ಮಾತುಗಳಲ್ಲಿ ಹೇಳುವುದಾದರೆ ಕುಶಲ ಶ್ರಮವೆಂದರೆ ಗುಣಿತವಾದ ಸರಳ ಶ್ರಮ. ಒಂದು ಪ್ರಮಾಣದ ಕುಶಲ ಶ್ರಮ ಅದಕ್ಕಿಂತ ಹೆಚ್ಚು ಪ್ರಮಾಣದ ಸರಳ ಶ್ರಮಕ್ಕೆ ಸಮ[೨೧೦]. ಕಾರ್ಮಿಕರು ತಮ್ಮ ಚಾಕಚಕ್ಯತೆ ಹಾಗೂ ಶ್ರಮವನ್ನು ತೊಡಗಿಸಿ ವಸ್ತು ಉತ್ಪಾದಿಸುತ್ತಿದ್ದರು.

ಈ ಅಧ್ಯಯನದ ಕಾಲಾವಧಿ ಸರಿಸುಮಾರು ಎರಡೂವರೆ ಸಹಸ್ರ ವರ್ಷಗಳಾಗುವುದು. ಈ ಸಮಯದಲ್ಲಿ ಆಂತರಿಕ ಹಾಗೂ ವಿದೇಶಿ ಮಾರಾಟ ಉನ್ನತ ಸ್ಥಾನಗಳಿಸಿತ್ತು. ರೋಮನ್-ಗ್ರೀಕ್-

ಪರ್ಷಿಯಾ–ಅರಬ್–ಚೀನಾ ದೇಶಗಳ ಸ್ತ್ರೀ–ಪುರುಷರು ಬಳಸುತ್ತಿದ್ದ ವಿಲಾಸಿ ವಸ್ತುಗಳು ಕರ್ನಾಟಕದ ಬಂದರು ಪಟ್ಟಣಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸಲಾಗುತ್ತಿತ್ತು. ಅಥವಾ ಸಂಸ್ಕರಿಸಿ ಹೊಳಪು ನೀಡಲಾಗುತ್ತಿತ್ತು.

ಪ್ರಾಚೀನ ಭಾರತದಲ್ಲಿ ಚಿನ್ನ, ಬೆಳ್ಳಿ, ಸೀಸ, ತವರ, ತಾಮ್ರ, ಹಿತ್ತಾಳೆ, ಕಬ್ಬಿಣ ಹಾಗೂ ರತ್ನಗಳಿಗೆ[೨೧೧] ಸಂಬಂಧಿಸಿದಂತಹ ಎಂಟು ಕಸಬುಗಳನ್ನು ಹೇಳಲಾಗಿದ್ದರೂ ಇನ್ನೂ ಅನೇಕ ರೀತಿಯ ಕಸಬುಗಳು ಚಾಲ್ತಿಯಲ್ಲಿದ್ದವು. ಮೇಲ್ಕಾಣಿಸಿದ ಕಸಬುಗಳೊಂದಿಗೆ ಕರಾವಳಿಯ ಬಂದರು ಪಟ್ಟಣಗಳು ದೋಣಿ, ಹಡಗು ನಿರ್ಮಾಣ, ಚಕ್ಕಡಿಗಾಡಿಗಳ ನಿರ್ಮಾಣ, ಉತ್ತಮ ದರ್ಜೆಯ ಭತ್ತದ ಉತ್ಪಾದನೆ, ಕೃಷಿ, ತೋಟಗಾರಿಕೆ, ಮರ–ದಂತದ ಕೆತ್ತನೆ, ಹತ್ತಿ, ರೇಷ್ಮೆ ಬಟ್ಟೆಗಳ ನೇಯ್ಗೆ, ತೆಂಗಿನ ನಾರಿನ ನೇಯ್ಗೆ, ಮುಂತಾದ ಕೈಗಾರಿಕೆಗಳನ್ನು ಹೊಂದಿದ್ದವು. ಆಯುಧಗಳು ಮತ್ತು ಭೋಗ ವಸ್ತು[೨೧೨], ಕವಡೆ, ಶಂಖ, ಸಿಂಪಿ ಹಾಗೂ ಇತರ ಕಡಲಲ್ಲಿರುವ ಜೀವಿಗಳಲ್ಲಿ ಉತ್ಪನ್ನವಾಗುವ ಕವಚ, ಮಣಿ ಮುಂತಾದವುಗಳ ಸಂಗ್ರಹ, ಸಂಸ್ಕರಣೆಯಂತಹ ಕೆಲಸ ನಡೆಯುತ್ತಿದ್ದವು. ಮನೆಗಳ ನಿರ್ಮಾಣ, ವ್ಯಾಪಾರಿಗಳ ತಾತ್ಕಾಲಿಕ ತಂಗುದಾಣ ಹಾಗೂ ದೋಣಿ, ಹಡಗುಗಳ ರಿಪೇರಿ ಬಹು ಮುಖ್ಯವಾದ ಉದ್ಯಮವಾಗಿತ್ತು. ಕಟ್ಟಿಗೆಯ ಕೆಲಸ ಮಾಡುವ ಕುಶಲಕರ್ಮಿಗಳ ದೊಡ್ಡ ವಸತಿ ಪ್ರಮುಖ ಬಂದರು ಪಟ್ಟಣದಲ್ಲಿತ್ತು. ಕ್ರಿ.ಶ ೧೩೩೬ ರ ಚಿಕ್ಕಾಯಿತಾಯಿಯ ಶಾಸನವು[೨೧೩] ಕಟ್ಟಿಗೆಯ ಸೇತುವೆ ಒಂದನ್ನು ಬಾರ್ಕೂರು ಹಾಗೂ ಬೆಣ್ಣೆಕುದ್ರುವನ್ನು ಸಂಪರ್ಕಿಸುವಂತೆ ನಿರ್ಮಿಸಿ ಅದರ ಸಂರಕ್ಷಣೆಗಾಗಿ ದತ್ತಿ ನೀಡಿದ್ದನ್ನೂ ತಿಳಿಸುತ್ತದೆ. ಹಾಗೇ ಬಾರ್ಕೂರಿನ ಕ್ರಿ.ಶ ೧೩೪೯ ರ ಶಾಸನವು[೨೧೪] ಐದು ಮೂಟೆ ಧ್ಯಾನವನ್ನು ಕುಂಬಾರರಿಗೆ ನೀಡುವ ಕುರಿತು ತಿಳಿಸುತ್ತದೆ. ಕುಂಬಾರಿಕೆ ಅಂದು ಬಾರ್ಕೂರು ಪಟ್ಟಣದಲ್ಲಿ ಹೊಂದಿದ್ದ ಮಹತ್ವ ಹಾಗೂ ಆ ವೃತ್ತಿಯ ಜನರ ಸಂಖ್ಯೆಯನ್ನು ಊಹಿಸುವಂತೆ ಮಾಡುತ್ತದೆ. ಕುಂಬಾರಿಕೆ, ರೇಷ್ಮೆನೇಯುವವರು, ಚಿನ್ನದ ಕೆಲಸ ಮಾಡುವವರು, ಸೂವಕಾರರು (ಅಡಿಗೆಯವರು) ಸಂಗೀತಗಾರರು, ನಾಪಿಕ, ಮೂಲಾಕಾರರು, ಕಚ್ಚಕಾರ, ವೀಳ್ಯದ ಎಲೆಯ ಮಾರಾಟಗಾರರು, ಸಮಗಾರರು, ಬಟ್ಟೆಗಳ ಮೇಲೆ ಅಚ್ಚುಹಾಕುವವರು, ಎಣ್ಣೆಗಾರರು, ಕಂಚುಗಾರರು, ಸಿಂಪಿಗ, ಗವಳಿಗ, ಬೇಟೆಗಾರರು, ಮೀನುಗಾರರು[೨೧೫] ಎಂಬ ಹದಿನೆಂಟು ಪ್ರಾಚೀನ ಕಾಲದ ವೃತ್ತಿಗಾರರಿದ್ದು ಅವರು ವಿದೇಶಿ–ದೇಶಿ ವ್ಯಾಪಾರದ ಸರಕುಗಳ ಉತ್ಪಾದನೆ, ಸಂಸ್ಕರಣೆ ಇತ್ಯಾದಿ ಕೆಲಸಗಳಲ್ಲಿ ತೊಡಗಿರುತ್ತಿದ್ದರು.

ಬಾರ್ಕೂರು–ಬಸರೂರುಗಳು ವ್ಯಾಪಾರಿ ಪಟ್ಟಣಗಳಾಗಿ ಬೆಳೆದಂತೆಲ್ಲಾ ಅಲ್ಲಿ ವಿವಿಧ ಕೇರಿಗಳು ನಿರ್ಮಾಣವಾದವು. ಈ ಕೇರಿಗಳಲ್ಲಿ ವಿವಿಧ ವೃತ್ತಿಯವರು ವಾಸವಾಗಿರುತ್ತಿದ್ದರು. ವಜ್ರ, ವೈಢೂರ್ಯ,

ಪಚ್ಚೆ, ರತ್ನ, ಮಾಣಿಕ್ಯ, ಗೋಮೇದಿಕ ಮುಂತಾದ ಬೆಲೆಬಾಳುವ ಹರಳುಗಳನ್ನು ತಂದು ಅವುಗಳಿಗೆ ಹೊಳಪು ನೀಡುವುದು, ಸಂಸ್ಕರಿಸುವುದು ಮುಂತಾದ ಕೆಲಸಗಳ ಕಾರ್ಯಾಗಾರ ಬಂದರು ಪಟ್ಟಣದ ಬಳಿ ನಡೆಯುತ್ತಿದ್ದವು. ಶ್ರೀಮಂತ ವರ್ತಕರು ಇವುಗಳ ಸಂಸ್ಕರಣೆ ಹಾಗೂ ಮಾರಾಟದ ಆಕಾಂಕ್ಷೆ ಹೊಂದಿದ್ದಂತೆ, ಅವುಗಳ ರಕ್ಷಣೆಯ ಹೊಣೆಯನ್ನು ಹೊತ್ತಿದ್ದರು. ಇನ್ನೂ ಕೃಷಿ ಉತ್ಪನ್ನಗಳಾದ ಉತ್ತಮ ದರ್ಜೆಯ ಅಕ್ಕಿ, ತೋಟದ ಬೆಳೆಗಳಾದ ವಿಳ್ಯದ ಎಲೆ, ತೆಂಗಿನಕಾಯಿ, ತೆಂಗಿನನಾರಿನ ಹಗ್ಗ, ವನೋತ್ಪನ್ನ ಮಸಾಲೆ ದಿನಿಸುಗಳಾದ ಯಾಲಕ್ಕಿ, ಲವಂಗ, ದಾಲ್ಚಿನಿ, ಕರಿಮೆಣಸಿನಕಾಳುಗಳನ್ನು ಸಂಸ್ಕರಿಸುವುದು ಮತ್ತು ಸರಿಯಾಗಿ ಸಂಗ್ರಹಿಸಿಡುವ ಕೈಗಾರಿಕೆಗೆ ಬಹುಬೆಲೆ ಇದ್ದಿತು. ಇಂಥಹ ಕೈಗಾರಿಕೆಗಳಲ್ಲಿ ಸ್ಥಳೀಯ, ಪರ ಊರಿನ ಬಲಾಢ್ಯ ಕಾರ್ಮಿಕರು ದುಡಿಯುತ್ತಿದ್ದರು. ಇಲ್ಲಿಂದ ರಫ್ತಾಗುತ್ತಿದ್ದ ಬಹುದೊಡ್ಡ ಸರಕೆಂದರೆ ಹತ್ತಿ. ಹಿನ್ನಾಡಿನಲ್ಲಿ ಬೆಳೆದ ಹತ್ತಿಯನ್ನು ಬಂದರು ಪಟ್ಟಣದಲ್ಲಿ ಸಂಗ್ರಹಿಸಿಡುವುದು, ಸಂಸ್ಕರಿಸುವುದು ಮತ್ತು ನವಿರಾದ ಬಟ್ಟೆಯಾಗಿ ಹೆಣೆಯುವ ಉದ್ಯಮವು ದೊಡ್ಡ ರೀತಿಯಲ್ಲಿ ಬೆಳೆದಿತ್ತು. ಬಟ್ಟೆಗಳಿಗೆ ಬಣ್ಣ ಹಚ್ಚಿ ಚಿತ್ತಾರ ಬಿಡಿಸುವ, ವಿವಿಧ ಬಣ್ಣದ ಬಟ್ಟೆಗಳನ್ನು ಸಿದ್ಧಗೊಳಿಸುವ ಕರಕುಶಲ ಕಾರ್ಮಿಕರು ಇಲ್ಲಿದ್ದರು.

ವಿದೇಶಗಳಿಗೆ ಕಳಿಸಲ್ಪಡುತ್ತಿದ್ದ ಪಕ್ಷಿಗಳು (ನವಿಲು) ಪ್ರಾಣಿಗಳು (ಮಂಗ, ಆನೆ) ಮುಂತಾದವುಗಳು ವ್ಯಾಪಾರಿನೌಕೆಗಳ ಬರುವನ್ನು ಕಾಯುತ್ತಿರುತ್ತಿದ್ದವು. ಅಂಥಹ ನೌಕೆಗಳು ಬರುವವರೆಗೂ ಈ ಜೀವಿಗಳ ರಕ್ಷಣೆ ಹಾಗೂ ಪೋಷಣೆಯು ದೊಡ್ಡ ಉದ್ಯಮವಾಗಿತ್ತು. ಇದರಲ್ಲೂ ತುಂಬಾ ಕಾರ್ಮಿಕರು ದುಡಿಯುತ್ತಿದ್ದರು.

ಉದ್ಯಮವು ಬೆಳೆದಂತೆ ಕಾರ್ಮಿಕ ವರ್ಗವು ವಿಭಜಿತಗೊಂಡಿತು. ಸರಕು ಉತ್ಪಾದನೆಯು ಹೆಚ್ಚಿದಂತೆಲ್ಲಾ ಅದರ ಮೌಲ್ಯಕ್ಕೆ ತಕ್ಕಂತೆ ಬೆಲೆ ನಿಗಧಿಯಾದ ಪರಿಣಾಮ ವಸ್ತುವಿನ ಮೌಲ್ಯಹೆಚ್ಚಾಯಿತು. ಆಗಾಗ ಈ ಮೌಲ್ಯ ಬದಲಾಗುತ್ತಿತ್ತು. ಸರಕು ಎನ್ನುವುದು ಮಾರಾಟದ ಅಥವಾ ಕೊಳ್ಳುವುದರ ಮೂಲಕ ವಿನಿಮಯ ಮಾಡಿಕೊಳ್ಳುವ ಸಲುವಾಗಿ ಶ್ರಮದಿಂದ ಉತ್ಪಾದಿಸಿದ ಒಂದು ವಸ್ತು[೨೧೬]. ಆದರೆ ಪ್ರತಿಯೊಂದು ವಿನಿಮಯಗಳಲ್ಲೂ ಸರಕಿನಲ್ಲಿ ಮೈತಾಳಿರುವ ಶ್ರಮ, ಸಮಯಕ್ಕೆ ಸಮಾನಾದ ಮೌಲ್ಯ[೨೧೭] ನಿಗಧಿಗೊಂಡಿರುತ್ತದೆಂದು ಹೇಳಲಾಗುವುದಿಲ್ಲ. ಯಾಕೆಂದರೆ ಶ್ರೀಮಂತರು ಶ್ರಮ ಜೀವಿಗಳ ಶ್ರಮಕ್ಕೆ ತಕ್ಕ ಬೆಲೆ ನಿಗಧಿಗೊಳಿಸದೆ ಸರಕನ್ನು ವಿನಿಮಯ ಮಾಡಿ ಲಾಭ ಪಡೆಯುತ್ತಾರೆ. ಆಗ ಸಮಾಜದಲ್ಲಿ ಬಡವರಾದ ಶ್ರಮಿಕವರ್ಗ ಹಾಗೂ ಶ್ರೀಮಂತ ವರ್ತಕ, ಆಳುವವರ್ಗ ಕಂಡುಬರುತ್ತದೆ. ನಾಗರಿಕತೆ ಶುರುವಾದಾಗಿನಿಂದ ಇಂದಿನವರೆಗೆ ಆಗಿರುವ ಪ್ರತಿಯೊಂದು ತಾಂತ್ರಿಕ ಬದಲಾವಣೆಯೂ ಪ್ರತಿಹಂತದಲ್ಲೂ ವ್ಯಕ್ತಿಗಳು ಹಾಗೂ ಆ ಕಾಲದ

ಆಡಳಿತ ವರ್ಗದ ಹಿತಾಸಕ್ತಿಗಳಿಂದ ಪ್ರೇರಿತವಾದವು[೨೧೮]ಗಳಾಗಿವೆ. ಹೀಗಾಗಿ ಉತ್ಪಾದನೆಗಳಿಂದ ಬರುವ ಲಾಭ ಸಂಪೂರ್ಣ ಸಮಾಜಕ್ಕೆ ದೊರೆಯದೇ ಕೇವಲ ಶ್ರೀಮಂತ ವರ್ತಕರಿಗೆ, ಆಳುವವರ್ಗಕ್ಕೆ ದೊರೆತು ಸಮಾಜವು ಶ್ರೀಮಂತ–ಬಡವ ಎಂಬ ವರ್ಗಗಳಾಗಿ ವಿಭಜಿತಗೊಳ್ಳುತ್ತದೆ. ಇಲ್ಲಿಯೂ ಈ ತಾಂತ್ರಿಕತೆ–ಯಾಂತ್ರಿಕತೆ ಹಾಗೂ ವಿವಿಧ ಉದ್ಯಮಗಳಿಂದ ಉಂಟಾದ ಹೆಚ್ಚುವರಿ ಉತ್ಪಾದನೆಯಿಂದ ವಿದೇಶಿ–ದೇಶಿ ವ್ಯಾಪರ ಬೃಹತ್ತಾಗಿ ಬೆಳೆದರೂ ಲಾಭ ಕೆಲವೆ ಜನರ ಪಾಲಾಯಿತು. ಕಾರ್ಮಿಕರು, ಕುಶಲಕರ್ಮಿಗಳು ನಾಳಿನ ಜೀವಿತಕ್ಕಾಗಿ ಕೂಲಿ ಪಡೆದು ಜೀವನ ಸಾಗಿಸತೊಡಗಿದರು.

ಬಸರೂರು, ಬಾರ್ಕೂರುಗಳಲ್ಲಿ ವಿವಿಧ ಕೇರಿಗಳನ್ನು ನಿರ್ಮಿಸಿಕೊಂಡು ಕೈಗಾರಿಕಾ ಕಾರ್ಮಿಕರು ವ್ಯಾಪಾರಿಗಳು ಒಂದೆಡೆ ಇರುವಂತೆ ವ್ಯವಸ್ಥೆ ಮಾಡಿಕೊಂಡಿದ್ದರು. ಹೊನ್ನಾವರ ಬಂದರಿನ ಬಳಿಯಲ್ಲಿ ಹಡಗು ನಿರ್ಮಾಣದ ಪ್ರಾಚೀನ ಕಟ್ಟೆಗಳನ್ನು, ಸಮೀಪದಲ್ಲೇ ಲೋಹ ಕೈಗಾರಿಕೆಯ ಸ್ಥಳಗಳನ್ನು ಗುರುತಿಸಬಹುದು. ಕಾರವಾರ, ಕುಮಟಾ ಬಂದರುಗಳಿಗೆ ಲೋಹದ ಅದಿರು, ಹತ್ತಿ ಮತ್ತು ವನೋತ್ಪನ್ನಗಳನ್ನು ಪೂರೈಸುವ ಸುಸ್ಥಿರ ಮಾರ್ಗಗಳಿದ್ದವು. ಬೈಂದೂರು, ಮಂಗಳೂರು ಹಾಗೂ ಹೊನ್ನಾವರ ಬಂದರುಗಳು ವನೋತ್ಪನ್ನ ಹಾಗೂ ಕೃಷಿ ಉತ್ಪನ್ನಗಳನ್ನು ಪೂರೈಸುವ ಮಾರ್ಗಗಳಿಂದ ಕೂಡಿದ್ದವು. ಕೃಷಿ ಒಂದು ವ್ಯಾಪಾರಿ ರಂಗವಾಗಿ ಪರಿವರ್ತಿಸಿ, ವಾಣಿಜ್ಯೀಕರಣ ಮಾಡಲಾಯಿತು. ಇಂಥಹ ವಾಣಿಜ್ಯೀಕರಣದ ಸಂದರ್ಭದಲ್ಲಿ ಭೂಮಾಲಿಕರು ತಮ್ಮ ವಿಶಾಲ ಭೂಮಿಯಲ್ಲಿ ವಿದೇಶೀ ಬೇಡಿಕೆಯ ಉತ್ಪನ್ನಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ಪಾದಿಸತೊಡಗಿದರು. ಅಕ್ಕಿ ಮತ್ತು ತೆಂಗಿನ ಬೆಳೆಗೆ ಅತಿಯಾದ ಬೇಡಿಕೆಯಿದ್ದುದರಿಂದ ಪೂರೈಕೆಗಾಗಿ ಕೃಷಿ ಕಾರ್ಮಿಕರನ್ನು ದುಡಿಮೆಗೆ ಹಚ್ಚಲಾಯಿತು. ತೆಂಗಿನನಾರಿನ ಹಗ್ಗ ಉತ್ಪಾದನೆ ಕಡಲಯಾನಕ್ಕೆ ಅತೀ ಅಗತ್ಯವಾಗಿತ್ತು. ಇಂಥಹ ಸಂದರ್ಭದಲ್ಲಿ ಕೃಷಿಯೊಂದು ಕೈಗಾರಿಕೆಯಾದಂತೆ, ಕೃಷಿ ಉತ್ಪನ್ನಕ್ಕೆ ಬೇಕಾದ ಸಾಧನ ಸಲಕರಣೆಗಳ ಉತ್ಪಾದನೆ ಒಂದು ಪ್ರಮುಖ ಕೈಗಾರಿಕೆಯಾಯಿತು.

ಬಸರೂರಿನ ಬಳಿಯ ಇಂದಿನ 'ಕಮಲಶಿಲೆ' ಊರು ಹಿಂದೆ ಕಮ್ಮಾರ ಶಾಲೆ[೨೧೯]ಯಾಗಿತ್ತೆಂದು ವಿದ್ವಾಂಸರು ಗುರುತಿಸಿದ್ದಾರೆ. ಕಮ್ಮಾರರು ದೊಡ್ಡ ಪ್ರಮಾಣದಲ್ಲಿ ಇಲ್ಲಿ ಲೋಹದ ವಸ್ತುಗಳನ್ನು ಉತ್ಪಾದಿಸುತ್ತಿದ್ದರು. ಹಾಗೇ ಅನೇಕ ಸ್ಥಳಗಳ ಹೆಸರು ಇಂಥಹ ಉದ್ದಿಮೆಗಳನ್ನು ಸೂಚಿಸುತ್ತವೆ.

ಕೈಗಾರಿಕೆಗಳಲ್ಲಿ ವಸ್ತುಗಳನ್ನು ಸಂಗ್ರಹಿಸಿಡುವ ಮಡಿಕೆಗಳು, ಬೆತ್ತದ ದೊಡ್ಡ ಬುಟ್ಟಿಯಾಕಾರದ ಸಾಧನಗಳು, ವಿದೇಶಕ್ಕೆ ಸಾಗಿಸುವ ವನೋತ್ಪನ್ನ ಹಾಗೂ ಕೃಷಿ ಉತ್ಪನ್ನ

ಕೆಡದಂತೆ ತುಂಬಿಡುವ ಸಾಧನಗಳನ್ನು ತರಿಯಾರಿಸುವುದು ದೊಡ್ಡ ಉದ್ದಿಮೆಯಾಗಿ ಬೆಳೆಯಿತು. ವಸ್ತುಗಳ ಆಧಾರದಲ್ಲಿ ಸಂಗ್ರಹಾಗಾರಗಳ ರಚನೆಯಾಯಿತು. ಚಾಕಚಕ್ಯತೆಯ ಕರಕುಶಲಕಾರರಿಂದ ವಿವಿಧ ಸಾಧನಗಳು ಸಿದ್ಧಗೊಂಡವು. ಇವುಗಳನ್ನು ಸಿದ್ಧಗೊಳಿಸಲು ಪೇಟೆ, ಪಟ್ಟಣದ ಬಳಿಯಲ್ಲಿಯೇ ಕೈಗಾರಿಕೆಗಳನ್ನು ನಿರ್ಮಿಸಿಕೊಂಡಿದ್ದರು.

ವಸ್ತುಗಳ ಸಾಗಣಿಕೆಗೆ–ನೌಕಾಯಾನಕ್ಕೆ ಬೇಕಾಗಿದ್ದ ನೌಕೆಗಳನ್ನು ಕಟ್ಟುವುದು ಹಾಗೂ ಅವುಗಳ ರಿಪೇರಿ ಮತ್ತು ಸರ್ವಋತುಗಳಲ್ಲಿ ರಕ್ಷಿಸಿಡಲು ಬಳಸಬೇಕಾದ ವಿವಿಧ ಮರಗಿಡಗಳ ಎಣ್ಣೆಗಳನ್ನು ತಯಾರಿಸುವುದು ದೊಡ್ಡ ಕೈಗಾರಿಕೆಯಾಗಿತ್ತು. ಕಡಲಲ್ಲಿ ನೂರಾರು ದಿನ ಪ್ರಯಾಣ ಮಾಡುತ್ತಾ, ತೆರೆಗಳ ಉತ್ಪಾತ ಹಾಗೂ ಸುಳಿಗಳು ಮತ್ತು ಬೀಸುವ ಭೀಕರ ಬಿರುಗಾಳಿಗಳಿಂದ ರಕ್ಷಣೆ ಪಡೆಯುತ್ತಾ ಸಾಗುವ ನೌಕೆಗಳ ರಚನೆ ದೊಡ್ಡ ಸವಾಲಾಗಿತ್ತು. ಇದನ್ನು ಸೂಕ್ತ ಮರಗಳಿಂದ ಹಾಗೂ ನುರಿತ ಕಾರ್ಮಿಕರಿಂದ ಮಾತ್ರ ಮಾಡಲು ಸಾಧ್ಯವಾಗುತ್ತಿತ್ತು. ಇಂಥಹ ಹಡಗು ಉದ್ಯಮಕ್ಕಾಗಿಯೇ ಒಂದು ವರ್ಗವನ್ನು ಮಾಡಿಕೊಂಡಿದ್ದರು.

ಸಾಗಾಟದ ಹಡಗುಗಳೆಂದರೆ ದೊಡ್ಡ ಪ್ರಮಾಣದಲ್ಲಿ ಮಸಾಲೆ ದಿನಿಸುಗಳನ್ನು ಹೇರಿಕೊಂಡು ಹೋಗುವ, ಆನೆ, ಕೋತಿ, ನವಿಲಿನಂಥ ಪ್ರಾಣಿ, ಪಕ್ಷಿಗಳನ್ನು ಕೊಂಡೊಯ್ಯುವ ಸಾಧನಗಳಾಗಿದ್ದವು. ಸುಲಭದಲ್ಲಿ ಇವುಗಳನ್ನು ಸಾಗಿಸುವುದು ಮತ್ತು ತಲುಪಿಸುವುದು ಅತೀ ಆಳದ ಕಡಲು ಮಾರ್ಗದಲ್ಲಿ ಬಹು ಪ್ರಯಾಸದ ಕೆಲಸವಾಗಿತ್ತು.

ಪಶ್ಚಿಮ ಘಟ್ಟಗಳಲ್ಲಿ ದೊರೆಕುತ್ತಿದ್ದ ಸಾಂಬಾರ ದಿನಿಸು, ಬೆಲೆಬಾಳುವ ಗಂಧ, ತೇಗದ ಮರಗಳು ಹಾಗೂ ಇತರ ಕೃಷಿ ಉತ್ಪನ್ನಗಳು ಸಾಗಿಸುವಮೊದಲು ಅವುಗಳನ್ನು ಶುದ್ಧಗೊಳಿಸುವುದು ಅಗತ್ಯವಾಗಿತ್ತು. ಇಂದಿಗೂ ದುರ್ಗಮವಾಗಿರುವ ಪಶ್ಚಿಮ ಘಟ್ಟಗಳನ್ನು ಭೇದಿಸಿ ವಸ್ತುಗಳನ್ನು ತರುವುದು ಬಲಾಢ್ಯ ಹಾಗೂ ಧೈರ್ಯವಂತರಿಂದ ಮಾತ್ರ ಸಾಧ್ಯವಿತ್ತು. ಇಂಥಹ ಕೆಲಸಕ್ಕಾಗಿಯೇ ವಿಶಾಲಕಾರ್ಮಿಕವರ್ಗವಿತ್ತು.

ಬಂದರಿನ ಮೂಲಕ ಸಾಗಾಣಿಕೆಗೊಳ್ಳುತ್ತಿದ್ದ ಇನ್ನೊಂದು ಪ್ರಮುಖ ವಸ್ತುವೆಂದರೆ ಹತ್ತಿ. ಹತ್ತಿ ಪ್ರಾಚೀನ ಕಾಲದಿಂದಲೇ ವಿದೇಶಗಳೊಂದಿಗೆ ವ್ಯಾಪಾರಕ್ಕೆ[೨೨೦] ಬಳಸುತ್ತಿದ್ದರು. ಹತ್ತಿಯನ್ನು ಕರಾವಳಿಯ ಬಂದರುಗಳ ಮೂಲಕ ಕಳಿಸಲು ಕರ್ನಾಟಕದ ಉತ್ತರ ಭಾಗಗಳಿಂದ ಹಾಗೂ ಮಹಾರಾಷ್ಟ್ರದ ದಕ್ಷಿಣ ಭಾಗಗಳಿಂದ ತರಿಸುತ್ತಿದ್ದರು. ಈ ಹತ್ತಿಯನ್ನು ಬಂದರಿನ ಬಳಿ ಸಂಗ್ರಹಿಸಲು, ರಕ್ಷಿಸಲು ಮತ್ತು ಅವುಗಳಿಂದ ನವಿರಾದ ಬಟ್ಟೆಗಳನ್ನು ತಯಾರಿಸಲು ಕೆಲಸಗಾರರತಂಡವೇ ಇರುತ್ತಿತ್ತು. ಬಟ್ಟೆ ನೇಯುವುದು ಒಂದು ದೊಡ್ಡ ಉದ್ಯಮವಾಗಿತ್ತು. ನವಿರಾದ ಮತ್ತು ಹಗುರವಾದ ಹತ್ತಿ ಬಟ್ಟೆಗೆ ಉತ್ತಮ ಬೇಡಿಕೆ ವಿದೇಶಗಳಲ್ಲಿತ್ತು.

ಹೀಗೆ ವಿವಿಧ ಕೈಗಾರಿಕೆಗಳು ಬಂದರು ಪಟ್ಟಣ-ಪೇಟೆಗಳಲ್ಲಿ ಮತ್ತು ಹತ್ತಿರದ ಪ್ರದೇಶಗಳಲ್ಲಿದ್ದಿತ್ತು. ಹಿನ್ನಾಡಿನಿಂದ ಬರುವ ಸರಕುಗಳಿಗೆ ಹಾಗೂ ಹಿನ್ನಾಡಿಗೆ ಕಳಿಸುವ ಸರಕುಗಳಿಗೆ ರಕ್ಷಣೆ ನೀಡುವ ಮತ್ತು ಸಾಗಾಟ ನಡೆಸುವ ದೊಡ್ಡ ಉಧ್ಯಮ ನೆರೆ-ಹೊರೆಯಲ್ಲಿದ್ದವು. ಸಾಗಾಟದ ಸಂದರ್ಭದಲ್ಲಿ ಚಕ್ಕಡಿಗಾಡಿ, ಹೇರು ಕತ್ತೆ, ಕುದುರೆ ಗಾಡಿಗಳನ್ನು ಬಳಸುತ್ತಿದ್ದರು. ಇದರಲ್ಲಿ ಹೇರು ಕಾರ್ಮಿಕರ ತಲೆ, ಬೆನ್ನುಹೊರೆ ಆಗಿತ್ತು. ಒಟ್ಟಿನಲ್ಲಿ ಹೇರು ಮನುಷ್ಯನನ್ನು ಅವಲಂಭಿಸಿತ್ತು. ಇಂಥಹ ಶ್ರಮ ಜೀವಿಗಳು ಶೂದ್ರರು ಅಥವಾ ಭೂರಹಿತ ಕೃಷಿಕಾರ್ಮಿಕರು, ದಲಿತರಾಗಿರುತ್ತಿದ್ದರು. ಹೇರು-ಸಾಗಾಟಕ್ಕೆ ಎಮ್ಮೆ, ಕತ್ತೆ, ಕೋಣಗಳನ್ನು ಬಳಸುತ್ತಿದ್ದರು. ಇದರೊಂದಿಗೆ ಬಳಕೆಯಾಗುತ್ತಿದ್ದ ಚಕ್ಕಡಿ ಹಾಗೂ ಇತರ ಗಾಡಿಗಳ ತಯಾರಿಕೆ, ರಿಪೇರಿ ಮತ್ತು ಅವುಗಳಿಗೆ ಬಳಸುತ್ತಿದ್ದ ಪ್ರಾಣಿಗಳಾದ ಎತ್ತು, ಎಮ್ಮೆ, ಕೋಣ, ಕುದುರೆ, ಕತ್ತೆಗಳನ್ನು ಸಾಕುವುದೂ ಒಂದು ಉದ್ಯಮವಾಗಿ ಬದಲಾಗಿತ್ತು.

ಸಾಗಾಣಿಕೆಯ ಸಂದರ್ಭದಲ್ಲಿ ಸರಕುಗಳೊಂದಿಗೆ ಒಳನಾಡಿಗೆ ಕಡಲ ಮಾರ್ಗದಲ್ಲಿ ರಕ್ಷಕರಾಗಿ ಹೋಗುತ್ತಿದ್ದ ದೊಡ್ಡ ಸಂಖ್ಯೆಯ ಸೈನಿಕರಿದ್ದರು. ಇವರ ಉಲ್ಲೇಖ ಶಾಸನಗಳಲ್ಲಿ ಬರುತ್ತದೆ. ಬಿಲ್ಲುಐನೂರ್ವರು, ಸಾಲಿಕೆಯ ಬಲ್ಲಾಳರು ಇಂಥಹ ಸೈನಿಕರಾಗಿದ್ದರು[೨೨೧]. ಕಡಲ್ಗಳ್ಳರು[೨೨೨] ಹಾಗೂ ರಸ್ತೆ ಮಾರ್ಗದಲ್ಲಿರುವ ದರೋಡೆಗಾರರಿಂದ ಇವರು ರಕ್ಷಣೆ ನೀಡುತ್ತಿದ್ದರು.

ಹೀಗೆ ವಿವಿಧ ಬಗೆಯ ಉದ್ಯಮ ಬಂದರು ಪಟ್ಟಣವನ್ನು ಆಶ್ರಯಿಸಿಕೊಂಡಿದ್ದಿತ್ತು. ಇಲ್ಲಿ ಶ್ರಮವಿಭಜನೆಯಿಂದ ವರ್ಗಗಳು ನಿರ್ಮಾಣವಾಗಿದ್ದವು. ಅದರಲ್ಲೂ ಒಳಪಂಗಡಗಳು, ಜಾತಿಗಳು ವೃತ್ತಿ ಕಾರಣದಿಂದ ನಿರ್ಮಾಣವಾಗಿದ್ದವು.

೬.೯ ತೆರಿಗೆ, ತೂಕ ಹಾಗೂ ಅಳತೆ

ಕರಾವಳಿ ಪ್ರದೇಶದ ಉತ್ಪನ್ನಗಳನ್ನು ನಿರ್ದಿಷ್ಟ ತೂಕ ಹಾಗೂ ಅಳತೆಗಳ ಮೂಲಕ ಅದರ ಮೌಲ್ಯ ನಿರ್ಧರಿಸುತ್ತಿದ್ದರು. ಅದು ಹೆಚ್ಚಾಗಿ ಇಲ್ಲಿ ಬೆಳೆಯುವ ಭತ್ತ ಮತ್ತಿತರ ಬೆಳೆಕಾಳುಗಳನ್ನು ಅಳೆಯಲು ಬಳಸುತ್ತಿದ್ದರು. ಬೇರೆಡೆಯಿಂದ ತಂದ ಸರಕುಗಳನ್ನು ಅದೇ ರೀತಿ ತೂಗುತ್ತಿದ್ದರು. ಸಂಕುರ, ಪುಟ್ಟಗೆ, ಮಳವೆ, ಪಲ, ಪೇರು, ಮುಂತಾದ ಅಳತೆಗಳಿದ್ದವು[೨೨೩]. ಸಂಕುರ ಅಂದರೆ ಎರಡು ಚೀಲಗಳಿಂದಾದ ಎತ್ತಿನ ಹೊರೆ, ಪುಟ್ಟಗೆ ಒಂದು ಪ್ರಮಾಣದ ಅಳತೆಯ ಬುಟ್ಟಿ, ಮಳವೆ-ಮಣವು ಅಥವಾ ಮಣ, ಪಲ ಎಂದರೆ ಮೂರು ತೊಲೆಗಳ ತೂಕ. ಪೇರು ಎಂದರೆ ಹೇರು, ಎತ್ತಿನ ಹೇರು, ಹೊರೆ ಎಂದು ಗುರುತಿಸಿದ್ದಾರೆ. ಕರಾವಳಿಯಲ್ಲಿ ಬಳಕೆಯಲ್ಲಿದ್ದ ಕೆಲವು ಅಳತೆ-ತೂಕಗಳು ಇಂತಿವೆ. ಹಾನ ಇಂತಹ ಅಳತೆಗಳಲ್ಲಿ ಒಂದು. ಇದರಲ್ಲಿ ವಿವಿಧ ಹಾನೆ ಅಥವಾ ಹಾನಿಗಳಿದ್ದವು. ಉದಾ: ಎರಡು, ಮೂರು, ನಾಲ್ಕು ಹಾನೆಗಳು, ನಾಗಂಡುಗದಮೂಡೆ, ಕಡುಂಗ, ಸೊಳಗಿ, ಕುಡಿತೆ, ಪಡಿ, ಮಾನ, ಕೋಲು ಮುಂತಾದವು ಇತರ ಅಳತೆಗಳಾಗಿದ್ದವು.[೨೨೪]

ತೆರಿಗೆ ಅಂದಿನ ಕಾಲದ ಬಹುಮುಖ್ಯವಾದ ಆದಾಯ ಮೂಲವಾಗಿತ್ತು. ರಾಜನ ಬೊಕ್ಕಸಕ್ಕೆ ಎಲ್ಲರೀತಿಯ ವೃತ್ತಿಯವರು ತೆರಿಗೆ ನೀಡಬೇಕಾಗಿತ್ತು. ಸರ್ಕಾರದ ವರಮಾನವು ಭೂವ್ಯವಸಾಯದ ಹುಟ್ಟುವಳಿಯನ್ನೇ ಹೆಚ್ಚಾಗಿ ಅವಲಂಭಿಸಿತ್ತು[೨೨೫]. ಭೂವರಮಾನದ ತೆರಿಗೆಯನ್ನು, ನೆಲಸುಂಕವೆಂದೂ ಕಡಲು ಮತ್ತು ನದಿಯ ಮೇಲಿನ ವ್ಯಾಪಾರದಿಂದ ದೊರೆಯುತ್ತಿದ್ದ ತೆರಿಗೆಯ ಆದಾಯವನ್ನು ಜಲಸುಂಕವೆನ್ನುತ್ತಿದ್ದರು[೨೨೬]. ಗ್ರಾಮಗಳ ಮೇಲೆ ಸಮುದಾಯ ಎಂಬ ತೆರಿಗೆ, ಜಮೀನುದಾರರಿಂದ ಭುಕ್ತಿ ಸಮುದಾಯ ಬೇಸಾಯಕ್ಕೊಳಗಾಗಿದ್ದ ಹೊಲಗಳ ಮೇಲೆ ಬಾಳುತೆರೆ, ಕಟ್ಟುಂದೆರು, ಬೇಡಗುಳ, ಬೇಡುಂಗೋಳು, ಮೇಲಾಯ, ಆರುವಾರ, ಬೀಡಾರುವಾರ, ಕುಳಾಗ್ರ ಮುಂತಾದ ತೆರಿಗೆಗಳ ಕುರಿತ ಪ್ರಸ್ತಾಪ ದಕ್ಷಿಣ ಕನ್ನಡದ ಶಾಸನಗಳಲ್ಲಿ ಬರುತ್ತದೆ[೨೨೭].

ಸಿದ್ಧಾಯ, ಆರುವಣ, ಒಕ್ಕಲುದೆರೆ, ಮನೆದೆರೆ, ಕೊಟ್ಟಿಗೆದೆರೆ, ದ್ರಮ್ಮಕಿರುದೆರೆ, ಅಡಿಗರ್ಚುಕಾಣಿಕೆ, ಗಾಣದೆರೆ, ಎಣ್ಣೆ ತೆರಿಗೆ, ಹೆಜ್ಜುಂಕ, ವಡ್ಡರಾವುಳ, ಬೊಲ್ಕೊಡೆ, ಕಿರುದೆರೆ[೨೨೮] ಮುಂತಾಗಿ ಕರೆಯುವ ತೆರಿಗೆಗಳಿದ್ದವು. ಮುಂದೆ ಉತ್ತರಕನ್ನಡ, ಶಿವಮೊಗ್ಗಾ ಮುಂತಾದೆಡೆ ಸುವರ್ಣಾದಾಯ, ಹೊಂನ್ನಗುತ್ತಿಗೆ ಮುಂತಾದ ಹೆಸರುಗಳ ತೆರಿಗೆಗಳು, ಕರಗಳು ಇದ್ದವು.

೬.೧೦ ವ್ಯಾಪಾರಿ ಸಂಘಗಳು ಹಾಗೂ ಅವುಗಳ ಚಟುವಟಿಕೆ

ವ್ಯಾಪಾರಿ ಸಂಘಗಳು ಸಾಮಾಜಿಕವಾಗಿ ಸಕ್ರೀಯವಾಗಿದ್ದವು. ಅವುಗಳು ಆಡಳಿತದಲ್ಲಿ ಭಾಗಿಗಳಾಗಿದಂತೆ ಇನ್ನಿತರ ಚಟುವಟಿಕೆಗಳಲ್ಲಿಯೂ ಭಾಗಿಗಳಾಗಿದ್ದವು. ದಾನ–ದತ್ತಿ ನೀಡುವುದು ಅವುಗಳ ರಕ್ಷಣೆ ಕ್ರೀಡೆಗಳಿಗೆ ಸಹಾಯ ಹಾಗೂ ಶಿಕ್ಷಣಕ್ಕೆ ಅಗ್ರಹಾರಗಳ ಸ್ಥಾಪನೆ ಮತ್ತು ಅವುಗಳಿಗೆ ಸಹಾಯ ಮಾಡುವ ಚಟುವಟಿಕೆಗಳಲ್ಲಿ ತೊಡಗಿದ್ದವು. ಇವೆಲ್ಲವೂ ಅವರ ವ್ಯಾಪಾರಿ ಹಿತಾಸಕ್ತಿಗೆ ಅನುಗುಣವಾಗಿದ್ದವು.

೬.೧೦.೧ ವ್ಯಾಪಾರಿ ಸಂಘಗಳು ಹಾಗೂ ದಾನದತ್ತಿಗಳು

ದಾನದತ್ತಿಗಳು ಅರಸರಿಂದ, ಶ್ರೀಮಂತರಿಂದ, ದೊಡ್ಡ ವ್ಯಾಪಾರಿಗಳಿಂದ ಹಾಗೂ ವಿವಿಧ ಸಂಘಗಳಿಂದ ನೀಡಲ್ಪಡುತ್ತಿತ್ತು. ದಾನ ಪಡೆದವರಲ್ಲಿ ಪೂಜಾಮಂದಿರಗಳು ಹಾಗೂ ಬ್ರಾಹ್ಮಣರು ದೊಡ್ಡ ಸಂಖ್ಯೆಯಲ್ಲಿದ್ದಾರೆ. ಆರಂಭದ ದಿನಗಳಲ್ಲಿ ದಾನವು ಸಾಮೂಹಿಕ ಹಿತವನ್ನು ಪರಿಗಣಿಸಿದಂತೆ ಕಾಣುತ್ತದೆ. ಕೆರೆ[೨೨೯], ಕಾಲುವೆಗಳ ನಿರ್ಮಾಣ, ದೇವಾಲಯಗಳಿಗೆ, ಬಸದಿಗಳಿಗೆ[೨೩೦], ಬೌದ್ಧಸಂಘಗಳಿಗೆ[೨೩೧] ದಾನ ನೀಡಿರುವುದು ಕಾಣಬಹುದು. ವಿದ್ಯಾಕೇಂದ್ರಗಳಿಗೂ ದೇವಾಲಯದ ಇತರ ಖರ್ಚುಗಳಿಗೂ ದಾನಗಳು ಸಿಕ್ಕಿವೆ. ಮುಂದುವರೆದಂತೆ ವ್ಯಕ್ತಿಗಳಿಗೆ ದಾನ ಸಂದಾಯವಾಗಿದ್ದು ಕಾಣಬಹುದು. ಇಲ್ಲಿ ರಾಜನ ಪರವಾಗಿ ಸೆಣಸಿ ವೀರಗತಿ ಪಡೆದ ಸೈನಿಕನ ಕುಟುಂಬಕ್ಕೆ[೨೩೨] ದಾನ ದೊರೆಯುತ್ತಿತ್ತು. ಮತ್ತು ಹಲವು ವೀರರು ಬದುಕಿರುವಾಗಲೆ ದಾನ

ಪಡೆದದ್ದು ಕಂಡುಬರುತ್ತದೆ. ಆದರೆ ಸಮಾಜದಲ್ಲಿ ಉಂಟಾದ ಲೌಖಿಕ ಕೀರ್ತಿಯ ಆಸೆ ಹಾಗೂ ಮುಕ್ತಿ ಮತ್ತು ಪುಣ್ಯದ ಕುರಿತ ಹೊಸಚಿಂತನೆಗಳು ದಾನದತ್ತಿಯ ಬಗ್ಗೆ ಹೊಸ ಅರ್ಥಕಲ್ಪಿಸಿದ್ದವು. ಮೋಕ್ಷ ಹಾಗೂ ಶ್ರೇಯಸ್ಸಿನ ಕಾರಣಕ್ಕೆ ಬ್ರಾಹ್ಮಣರಿಗೆ ಹಾಗೂ ಕೆಲವು ದೇವಾಲಯಗಳಿಗೆ ದಾನ ನೀಡುವ ಪದ್ಧತಿ ಕಂಡುಬರತೊಡಗಿತು. ಮಾಡಿದ ತಪ್ಪುಗಳಿಗೆ ದಂಡದರೂಪದಲ್ಲಿ ದೇವಾಲಯಗಳಿಗೆ ಕೊಡುಗೆ ಸಲ್ಲಿಸುತ್ತಿದ್ದರು.[೨೩೩] ಭೂಮಿಯನ್ನು ಕ್ರಯಕ್ಕೆ ಕೊಂಡು ಬ್ರಾಹ್ಮಣರಿಗೆ ನೀಡುತ್ತಿದ್ದರು. ಅವರು ಕೃಷಿಕರಲ್ಲದ್ದರಿಂದ ಅವರಿಗೆ ಕೃಷಿ ಕೆಲಸಕ್ಕೆ ಆಳುಗಳನ್ನು ದಾನ ಮಾಡುತ್ತಿದ್ದರು. ಇಲ್ಲಿಂದ ಭೂ ಮಾಲಿಕ ಪದ್ಧತಿ ಆರಂಭವಾಯಿತು.

೬.೧೦.೨ ವ್ಯಾಪಾರಿ ಸಂಘಗಳು ಮತ್ತು ಶಿಕ್ಷಣ ವ್ಯವಸ್ಥೆ

ಭಾರತದಾದ್ಯಂತ ಕಂಡುಬಂದಂತೆ ಇಲ್ಲಿಯೂ ಶಿಕ್ಷಣ ಎನ್ನುವುದು ಧಾರ್ಮಿಕ ಮೂಲವಾಗಿತ್ತು. ಜೀವನದ ಗುರಿ ಆತ್ಮಜ್ಞಾನ ಅಥವಾ ಮೋಕ್ಷ. ಈ ಮೋಕ್ಷ ಪಡೆಯಲು ವಿದ್ಯಾಭ್ಯಾಸ ಒಂದು ಮಾರ್ಗ[೨೩೪] ಎಂದು ಬಲವಾಗಿ ನಂಬಿದರು. ಆದರೆ ಸೈನಿಕರಿಗೆ, ರಾಜವಂಶೀಯರಿಗೆ ಯುದ್ಧ ಭೂಮಿಯಲ್ಲಿ ಸೆಣಸುವ ಕಲೆ, ಅಗತ್ಯಶಾಸ್ತ್ರ, ಭಾಷೆ, ವ್ಯಾಕರಣ ಇತ್ಯಾದಿಗಳನ್ನು ಕಲಿಸಲಾಗುತ್ತಿತ್ತು. ವಿದ್ಯೆ ಎನ್ನುವುದು ಆಪತ್‌ಧನ ಎಂಬ ನಂಬಿಕೆಯನ್ನು ಜನರು ಹೊಂದಿದರು. ವಿದ್ಯೆಯಿದ್ದವನು ಎಲ್ಲಿಗೆ ಹೋದರು ಜಯಿಸಿ ಬರುತ್ತಾನೆ ಮತ್ತು ವಿದ್ಯೆಹೊಂದಿದವನು ಗೌರವಕ್ಕೆ ಪಾತ್ರನಾಗುತ್ತಾನೆ ಎಂಬ ನಂಬಿಕೆ ಪ್ರಚಲಿತವಾಗಿತ್ತು. ವಿದ್ಯೆ ಇಲ್ಲದವನು ಪಶುಸಮಾನ[೨೩೫] ಎಂಬ ಭಾವನೆ ಪ್ರಚಲಿತವಾಗಿತ್ತು.

ಶಾತವಾಹನರ ಕಾಲದಲ್ಲಿ ಶಿಕ್ಷಣಕ್ಕೆ ದೊರೆತ ಪ್ರೋತ್ಸಾಹ ಶಾಸನಗಳಲ್ಲಿ ನೋಡಲು ಸಿಗುತ್ತದೆ. ಬ್ರಾಹ್ಮಣರಿಗೆ ಅಗ್ರಹಾರಗಳನ್ನು ಸ್ಥಾಪಿಸಿಕೊಟ್ಟಿದ್ದರು. ಬನವಾಸಿ ಬಳಿಯ ತಾಳಗುಂದ[೨೩೬]ವು ಅಂತಹ ಒಂದು ಅಗ್ರಹಾರವಾಗಿತ್ತು. ಕದಂಬರ ಮಯೂರನು ಉನ್ನತ ವಿದ್ಯಾಭ್ಯಾಸಕ್ಕಾಗಿ ಘಟಿಕಸ್ಥಾನಕ್ಕೆ ಹೋದಬಗ್ಗೆ[೨೩೭] ತಿಳಿಯುತ್ತದೆ. ಪಲ್ಲವರು ಈ ಭಾಗವನ್ನು ಆಳುತ್ತಿದ್ದಾಗ ಇಲ್ಲಿ ಉನ್ನತ ಶಿಕ್ಷಣ ನೀಡುವ ಘಟಿಕಸ್ಥಾನಗಳು ಇದ್ದಂತಿಲ್ಲ. ಬದಲಿಗೆ ಅಗ್ರಹಾರಗಳಂತಹ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಿತ್ತು. ಕದಂಬರ ಕಾಲದಲ್ಲಿ ತಾಳಗುಂದ ಪ್ರಣವೇಶ್ವರಮಂದಿರದಲ್ಲಿ ವೇದ, ನ್ಯಾಯ, ವೇದಾಂತಗಳನ್ನು ಕಲಿಸುತ್ತಿದ್ದರು.[೨೩೮] ದೇವಾಲಯಗಳು ಆ ಕಾಲದಲ್ಲಿ ಧಾರ್ಮಿಕ ಚಟುವಟಿಕೆಯೊಂದಿಗೆ ಶಿಕ್ಷಣ ಕೇಂದ್ರಗಳು ಆಗಿದ್ದವು. ಕದಂಬರ ಕಾಲದಲ್ಲಿ ಬ್ರಾಹ್ಮಣರಿಗೆ ಶಿಕ್ಷಣಕ್ಕಾಗಿ ನೀಡಿದ ದಾನಗಳನ್ನು ಹೇಳುವ ಶಾಸನಗಳು ಕಂಡುಬರುತ್ತವೆ. ಶೈಕ್ಷಣಿಕ ರಂಗದಲ್ಲಿ ಸಹಕರಿಸಿದ ವಿದ್ವಾಂಸರಿಗೆ ಮತ್ತು ವೈಯಕ್ತಿಕ ಸಾಧನೆಗೆ ಮಹತ್ವ ನೀಡಿ ದಾನಗಳನ್ನು ನೀಡುತ್ತಿದ್ದರು. ದಾನ ಪಡೆದ ವಿದ್ವಾಂಸರು ಬಹುತೇಕ ಬ್ರಾಹ್ಮಣರಾಗಿರುತ್ತಿದ್ದರು. ವಿದ್ಯಾಭ್ಯಾಸ ಪಡೆದ ವಟುಗಳಿಗೆ

ಸಂಸಾರಿಗಳಾಗಿ ಜೀವನ ನಡೆಸಲು ಸಹಾಯಕವಾಗುವಂತೆ ಅಗ್ರಹಾರಗಳನ್ನು ದಾನವಾಗಿ ನೀಡುತ್ತಿದ್ದರು. ಈ ಬಗ್ಗೆ ಹಲವು ವಾದಗಳು ಇದ್ದವು. ಬ್ರಾಹ್ಮಣರಿಗೆ ಜೀವನ ನಿರ್ವಹಣೆಗೆ ನೀಡಿದ ಊರುಗಳು ಇವು ಎಂದು ಹೇಳಬಹುದು.

ಇಮ್ಮಡಿ ಕೃಷ್ಣವರ್ಮನ ಅಜ್ಜಿಬೈಲದ ತಾಮ್ರ ಶಾಸನವು[೨೩೯] ವಿಜಯ ವೈಜಯಂತಿ ರಾಜಧಾನಿಯಿಂದ ಧರ್ಮ ಮಹಾರಾಜ ಕೃಷ್ಣವರ್ಮನು ಆಳುತ್ತಿರುವಾಗ ತನ್ನ ರಾಜ್ಯಾಭೀಷೇಕ ಕಾಲದ ೧೯ನೇ ವರ್ಷದಲ್ಲಿ ಕಾರ್ತಿಕ ಮಾಸದಲ್ಲಿ ಋಗ್ವೆದ ಪಾರಂಗತನಾದ ಸೋಮಸ್ವಾಮಿ ಎಂಬ ಬ್ರಾಹ್ಮಣನಿಗೆ ಕರ್ವನಾಡ ಕಮಕಪಲ್ಲಿಯನ್ನು ಸಹಿರಣ್ಯ ಸಹಿತ ಉಂಬಳಿ ಹಾಕಿಕೊಟ್ಟ ಎಂದಿದೆ. ಇದೆ ರೀತಿ ಕದಂಬ ರವಿವರ್ಮನು[೨೪೦] ನೀಡಿದ ಕೊಡುಗೆಗಳು ತಿಳಿಯುತ್ತವೆ.

ಗೋವಾ ಕದಂಬರು ತಮ್ಮ ಕಾಲದಲ್ಲಿ ಶಿಕ್ಷಣಕ್ಕೆ ಪ್ರೋತ್ಸಾಹ ನೀಡಿದ್ದರು. ಹಳಿಯಾಳದ ಶಾಸನವು[೨೪೧] ಜಯಕೇಶಿ ರಾಜನ ಕಾಲದಲ್ಲಿ ಅಗ್ರಹಾರವಾದ ಪಳ್ಳಯಾಲದ ಮಹಾಜನರು ಅಲ್ಲಿಯ ದೇವಿಕೆರೆಗೋಸ್ಕರ ಭೂಮಿಯನ್ನು ದತ್ತಿಬಿಟ್ಟ ವಿಷಯ ತಿಳಿಯುತ್ತದೆ. ಈ ಶಾಸನ ಮಹಾಜನರನ್ನು ಅಪೂರ್ವವಾಗಿ ವರ್ಣಿಸಿದಲ್ಲದೆ, ಇದರಲ್ಲಿ ಬೇರೆ ಬೇರೆ ಭಾಷೆ ಹಾಗೂ ವಿವಿಧ ರೀತಿಯಲ್ಲಿ ಕಾವ್ಯರಚಿಸುತ್ತಿದ್ದ[೨೪೧] ಬಗ್ಗೆ ತಿಳಿಸುತ್ತದೆ.

ಸದಾಶಿವಗಡದ ತಾಮ್ರಪಟ[೨೪೨]ವು ಅರವಟ್ಟುಗಡಲು ಭಾಗದಲ್ಲಿಯ ಅರುವಿಗೆ ಎಂಬ ಗ್ರಾಮವನ್ನು ದಾನವಾಗಿ ಕೊಟ್ಟ ಬಗ್ಗೆ ತಿಳಿಸುತ್ತದೆ. ಹಾನಗಲ್ ಕಾದಂಬರ ಕಾಲದಲ್ಲಿ ಶಿಕ್ಷಣಕ್ಕೆ ಹಲವಾರು ಪ್ರೋತ್ಸಾಹಗಳು ದೊರೆತವು. ಬಹುಮುಖ್ಯವಾಗಿ ಕದಂಬ ಅಕ್ಕದೇವಿ ಮಠವೊಂದರಲ್ಲಿ ನಡೆಯುವ ವಿದ್ಯಾದಾನಕ್ಕಾಗಿ ಎರಡು ಗದ್ಯಾಣದ ತೆರಿಗೆಯನ್ನು[೨೪೩] ದಾನ ನೀಡಿದ್ದಳು. ಅವಳೇ ಬ್ರಹ್ಮಪುರಿಗೆ ನೀಡಿದ ದಾನವನ್ನು ಅರಸೀಬೀದಿಯ ಶಾಸನ[೨೪೪] ಒಂದು ವಿವರಿಸುತ್ತದೆ. ಹಾನಗಲ್ಲ ಕಾದಂಬರ ಕಾಲಕ್ಕೆ ಬಂಕಾಪುರ ಶಿರಸಿ, ಹಾನಗಲ್ಲು, ಹುಲಗೂರು, ಆಡೂರು ಮುಂತಾದವು ಪ್ರಮುಖ ವಿದ್ಯಾದಾನಕ್ಕೆ ಕೇಂದ್ರಗಳಾಗಿದ್ದವು. ಇಲ್ಲಿ ಪ್ರಾಥಮಿಕ ಶಿಕ್ಷಣದಿಂದ ಉನ್ನತ ಘಟಿಕಾಸ್ಥಾನದ ಶಿಕ್ಷಣದವರೆಗೆ ಸೌಲಭ್ಯಗಳಿದ್ದವು. ಉನ್ನತ ವಿದ್ಯಾಸಂಸ್ಥೆಗಳು ಅಗ್ರಹಾರ, ಬ್ರಹ್ಮಪುರಿ, ಘಟಿಕಸ್ಥಾನಗಳು ರಾಜರ ನೇರಳಿನೊಂದಿಗೆ ಕಾರ್ಯಪ್ರವೃತ್ತವಾಗಿದ್ದವು[೨೪೫].

ಬಾದಾಮಿ ಚಾಲುಕ್ಯರ ಕಾಲದಲ್ಲಿ ೨೦೦೦ ಮಹಾಜನಗಳು ಚತುರ್ವೇದಗಳಲ್ಲಿ ಪರಿಣಿತರಾಗಿದ್ದರು. ಕುರ್ತುಕೋಟಿ, ಐಹೊಳೆಗಳಲ್ಲಿ ಅಗ್ರಹಾರಗಳು ಇದ್ದವು.[೨೪೬] ರಾಷ್ಟ್ರಕೂಟರ ಕಾಲದಲ್ಲಿ ಮಠಗಳು, ಅಗ್ರಹಾರಗಳು ಶೈಕ್ಷಣಿಕ ಕೇಂದ್ರಗಳಾಗಿದ್ದವು. ಮುಂದೆ ಬಳ್ಳಿಗಾವೆಯಲ್ಲಿ ವಿದ್ಯಾರ್ಥಿ ಅಧ್ಯಾಪಕರಿಗಾಗಿ ಊಟೋಪಚಾರಕ್ಕಾಗಿ ಭೂಮಿದಾನ ನೀಡಿದ್ದರು.

ಚಂದಾವರ ಕಾದಂಬರು ಹಾಗೂ ಶಿಸುಗಲಿ ಪಾಂಡ್ಯರು ತಮ್ಮ ಆಡಳಿತ ಕಾಲದಲ್ಲಿ ಶೈಕ್ಷಣಿಕ ಬೆಳವಣಿಗೆಗೆ ಪ್ರೋತ್ಸಾಹ ನೀಡಿದ್ದರು. ಮುಗ್ವೆ[೨೪೭] ಅಗ್ರಹಾರವಾಗಿತ್ತು. ತುಂಬೋಳ್ಳಿ[೨೪೮]ಯು ಕನ್ಯಾದಾನದ ಅಗ್ರಹಾರವಾಗಿತ್ತು. ಶಿಸುಗಲಿಪಾಂಡ್ಯರ ದೊರೆ ಮಲ್ಲಿದೇವನ ತುಂಬೋಳ್ಳಿ ಶಾಸನವು ಈ ಮೇಲಿನ ವಿಷಯವನ್ನು ತಿಳಿಸುತ್ತದೆ. ಮುರೂರು, ಸಂಡಳ್ಳಿ ಮುಂತಾದವು ಪ್ರಮುಖ ವಿದ್ಯಾ ಕೇಂದ್ರಗಳಾಗಿದ್ದವು.

ಆಳುಪರು ದಕ್ಷಿಣ ಕರಾವಳಿಯ ದಕ್ಷಿಣಭಾಗ ಆಳುತ್ತಿದ್ದಾಗ, ಒಂದನೆಯ ಆಳುವರಸನ ಮಗ ಪಂಬುಚ್ಚ ಪ್ರದೇಶದಲ್ಲಿ ಅಧಿಪತಿಯಾಗಿ ಆಡಳಿತದ ಶಿಕ್ಷಣ ಪಡೆಯುತ್ತಿದ್ದ ಎಂದು ಕಿಗ್ಗದ ಶಾಸನ ತಿಳಿಸುತ್ತದೆ. ಉದ್ಯಾವರದ ವಿರಗಲ್ಲು ಒಂದರಲ್ಲಿ ಚಕ್ರವ್ಯೂಹದ ಪ್ರಸ್ತಾಪವಿದೆ. ಅಲ್ಲದೆ. ಆಳುಪರ ಶಾಸನಗಳಲ್ಲಿ ವಾಳ್, ಅಂಬು ಮತ್ತು ಪಲಗೆ ಯುದ್ಧ ಅಸ್ತ್ರಗಳ ಪ್ರಸ್ಥಾಪವು ಇದೆ. ಇದರಿಂದ ಇವುಗಳ ಬಳಕೆ, ಯುದ್ಧವ್ಯೂಹ ರಚನೆ, ಕುದುರೆಸವಾರಿ ಹಾಗೂ ಕುದುರೆ ಗಾಡಿಗಳ ಚಲನೆಗಳ ಶಿಕ್ಷಣ ನೀಡಲಾಗುತ್ತಿತ್ತು ಎಂದು ತಿಳಿದುಬರುತ್ತದೆ.

ಬ್ರಹ್ಮಾವರ ಹಾಗೂ ಶೃಂಗೇರಿಗಳು ಪ್ರಮುಖ ವಿದ್ಯಾಪೀಠಗಳಾಗಿದ್ದವು. ಶಿವಳ್ಳಿ (ಉಡುಪಿ) ಮತ್ತು ಬ್ರಹ್ಮಾವರಗಳು ಬ್ರಹ್ಮಪುರಿಗಳಾಗಿದ್ದವು. ಬಂಟವಾಳದ ಕ್ರಿ.ಶ ೧೩೬೪ರ ಶಾಸನವು ಅಗ್ರಹಾರದ ಉಲ್ಲೇಖ ಮಾಡುತ್ತದೆ. ಜೈನಧರ್ಮವು ಬಸದಿ ಹಾಗೂ ಮಠಗಳಲ್ಲಿ ಶಿಕ್ಷಣ ನೀಡುತ್ತಿತ್ತು. ಬಸದಿಗಳಲ್ಲಿ ಶಾಸ್ತ್ರಕೃತಿಗಳ ದೊಡ್ಡ ಭಂಡಾರವೇ ಇರುತ್ತಿತ್ತು. ಕಾರ್ಕಳದ ಶಾಸನವೊಂದು ಮಕ್ಕಳಿಗೆ ಓದಿಸುವಾತನಿಗೆ ದಾನ ನಿಡಿದ್ದು ತಿಳಿಸುತ್ತದೆ. ದಕ್ಷಿಣ ಕನ್ನಡದ ತುಂಡರಸರು ಈ ಪ್ರೋತ್ಸಾಹವನ್ನು ಮುಂದುವರೆಸಿದ್ದರು. ವಿಜಯನಗರ ಕಾಲದಲ್ಲಿ ಶಿಕ್ಷಣವು ಯಾವುದೇ ಬದಲಾವಣೆಗೆ ಒಳಗಾಗದೆ ಮುಂದುವರೆದಂತೆ ಕಾಣುತ್ತದೆ. ಶಿಕ್ಷಣದಲ್ಲಿ ವಿವಿಧ ಭಾಷೆಗಳು, ಕಲೆ, ತಂತ್ರ, ಮಂತ್ರಗಳನ್ನು ಕಲಿಸಲಾಗುತ್ತಿತ್ತು.

ಈ ಶಿಕ್ಷಣವು ಕರಾವಳಿ ಪ್ರದೇಶದ ಸಾಮಾನ್ಯ ಜನರಿಗೆ ವ್ಯಾಪಕವಾಗಿ ದೊರೆತ ಯಾವ ಆಧಾರಗಳು ಸಿಗುವುದಿಲ್ಲ. ಬ್ರಾಹ್ಮಣರು, ಜೈನರು ಹಾಗೂ ಅರಸು ಕುಲದವರೇ ಈ ಶಿಕ್ಷಣದ ವಾರಸುದಾರರಾಗಿದ್ದರು. ಜನಸಾಮಾನ್ಯರ ಕುಲಕಸಬುಗಳಾದ ಮೀನುಗಾರಿಕೆ, ನೇಯ್ಗೆ, ಹೆಣಿಗೆ, ಚರ್ಮದ ಸಾಧನಗಳ ತಯಾರಿಕೆ, ಕುಂಬಾರಿಕೆ, ಬಡಿಗಿತನ, ಶಿಲ್ಪಗಾರಿಕೆ ಮುಂತಾದವುಗಳ ತರಬೇತಿ ಮನೆಯಲ್ಲಿಯೇ ಪಡೆಯುತ್ತಿದ್ದರು. ಸ್ತ್ರೀಯರ ಶಿಕ್ಷಣದ ಬಗ್ಗೆ ಇದ್ದ ನಿರ್ಲಕ್ಷ ಎದ್ದು ಕಾಣುತ್ತದೆ. ಎಲ್ಲಿಯೂ ಹೆಣ್ಣುಮಕ್ಕಳು ಶಿಕ್ಷಣಕ್ಕೆ ಸೇರಿದ್ದು ಕಾಣುವುದೇ ಇಲ್ಲ.

೬.೧೦.೩ ವ್ಯಾಪಾರಿ ಸಂಘಗಳು ಮತ್ತು ಕ್ರೀಡೆ

ಬಿಡುವಿನ ವೇಳೆಯಲ್ಲಿ ಆಟಗಳ ಮೂಲಕ ಹಾಗೂ ವಿವಿಧ ಕಾರ್ಯಕ್ರಮಗಳ ಮೂಲಕ ಮನರಂಜನೆ ಪಡೆಯುವುದು ಮಾನವನ ಸಹಜ ಗುಣವಾಗಿದೆ. ಇದಕ್ಕೆ ಕರಾವಳಿ ಕರ್ನಾಟಕದ ಜನರು ಹೊರತಾಗಿಲ್ಲ. ಶೌರ್ಯ ಹಾಗೂ ಸಾಹಸವನ್ನು ಪ್ರದರ್ಶಿಸುವುದು ಕ್ರೀಡೆಗಳ ಲಕ್ಷಣ. ಕರಾವಳಿಯಲ್ಲಿ ಕಂಡುಬರುವ ಕ್ರೀಡೆಗಳಲ್ಲಿ ಭೇಟೆಗಾರಿಕೆ, ಎತ್ತುಗಳನ್ನು ಓಡಿಸುವುದು, ಎತ್ತಿನಗಾಡಿಗಳನ್ನು ಓಡಿಸುವುದು, ಕಂಬಳ, ಸೋಲ್‌ಗಾಯಿ, ಗುರಿ ಇಡುವುದು, ಚೆನ್ನೆಮಣೆ, ಚೆನ್ನಿದಾಂಡು, ಹುಲಿ–ಹಸು, ಸರಿ–ಬೆಸ, ಮರ–ಕೋತಿ, ಕುಂಟಾಬಿಲ್ಲೆ, ಗಜ್ಜುಗ, ಬುಗರಿ, ಕೋಳಿಅಂಕ, ಕುಸ್ತಿ, ಓಟ, ಪಗಡೆಯಾಟ ಮುಂತಾದವುಗಳು ಇದ್ದವು.

ಇವುಗಳ ಆರಂಭ ನಿಖರವಾಗಿ ಹೇಳಲು ಬರುವುದಿಲ್ಲ. ಆದರೆ ಸಾಹಿತ್ಯ, ಶಿಲ್ಪ ಮತ್ತು ರೂಢಿಯಲ್ಲಿ ಕಂಡುಬರುವುದರಿಂದ ಇವು ಕಾಲ–ಕಾಲದಲ್ಲಿ ಅಭಿವೃದ್ಧಿ ಹೊಂದುತ್ತಾ ಇಂದಿನ ರೂಪ ಪಡೆದಿವೆ ಎಂದು ಹೇಳಬಹುದು.

ಬೇಟೆ ಕಾಡುಗಳು ಇರುವ ಪ್ರದೇಶದಲ್ಲಿ ಮೂರು ನಾಲ್ಕು ಜನರ ತಂಡಗಳು ಕಾಡಿಗೆಹೋಗಿ ಅಲ್ಲಿ ಬಲೆ ಹಾಕುವುದರ ಮೂಲಕವೋ ಅಥವಾ ಅವರೇ ಸಿದ್ದಪಡಿಸಿಕೊಂಡ ಬಿಲ್ಲುಬಾಣಗಳನ್ನು ಬಳಸಿ ಪ್ರಾಣಿಗಳನ್ನು ಹಿಡಿಯುತ್ತಿದ್ದರು. ಇದು ಮಾನವನು ಪ್ರಾಚೀನ ಕಾಲದಿಂದ ತನ್ನ ಆಹಾರಕ್ಕಾಗಿ ನಡೆಸಿದ ವೃತ್ತಿಯಾಗಿದ್ದು ಮುಂದೆ ಇದು ಈ ಪ್ರದೇಶದಲ್ಲಿ ವೀರತ್ವವನ್ನು ಪ್ರದರ್ಶಿಸುವ ಕ್ರೀಡೆಯಾಯಿತು. ಈ ಬೇಟೆಯು ಕೆರೆಗಳಲ್ಲಿ, ನದಿಗಳಲ್ಲಿ ಮೀನು ಹಿಡಿಯುವುದರಲ್ಲೂ ಕಾಣಬರುತ್ತದೆ.

ಎತ್ತು ಓಡಿಸುವುದು ಹಾಗೂ ಚಕ್ಕಡಿಗಾಡಿ ಸ್ಪರ್ಧೆ ಕೃಷಿಕರಲ್ಲಿ ಇಂದಿಗೂ ಕಂಡುಬರುವ ಕ್ರೀಡೆ. ಇದು ದಷ್ಟ–ಪುಷ್ಟವಾಗಿ ಬೆಳೆಸಿದ ಎತ್ತುಗಳನ್ನು ಅಲಂಕರಿಸಿ, ಅವುಗಳ ಕೋಡುಗಳಿಗೆ ಬಣ್ಣದ ಬಟ್ಟೆಗಳನ್ನು ಸುತ್ತಿ ಅದರ ಮೂಗುದಾಣ ಹಿಡಿದು ಯುವಕನೊಬ್ಬ ಓಡಿಸುತ್ತಾನೆ. ಕೆಲವು ಸಾರಿ ಎತ್ತಿನ ಕೋರಳಿಗೆ ಹಗ್ಗಕಟ್ಟಿ, ಅದರ ಬಾಲವನ್ನು ಹಿಡಿದು ಓಡಿಸುವುದು ಇದೆ. ಈ ಸ್ಪರ್ದೆಗಾಗಿ ವಿಶೇಷವಾದ ಗೂಳಿ ಮತ್ತು ಎತ್ತುಗಳನ್ನು ಸಾಕುತ್ತಾರೆ. ಅಂತೆಯೇ ಚಕ್ಕಡಿಗಾಡಿಯ ಸ್ಪರ್ದೆಗಳು ನಡೆಯುತ್ತವೆ. ಶೃಂಗರಿಸಿದ ಚಕ್ಕಡಿಗಾಡಿಗೆ ಒಂದೇ ಅಳತೆಯ ಎತ್ತುಗಳನ್ನು ಕಟ್ಟಿ ಗಾಡಿಗಳನ್ನು ಓಡಿಸುವ ಸ್ಪರ್ದೆಯನ್ನು ಮಾಡುತ್ತಿದ್ದರು.

ಕಂಬಳ ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಆಚರಣೆ ಆಗುತ್ತಿರುವ ಕ್ರೀಡೆ. ಈಗಲೂ ಈ ಪ್ರದೇಶದಲ್ಲಿ ಕಂಬಳ ಗದ್ದೆಯಲ್ಲಿ ಕೋಣಗಳನ್ನು ಓಡಿಸುವ ಸ್ಪರ್ದೆಗಳು ನಡೆಯುತ್ತವೆ. ಕ್ರಿ.ಶ ೧೪೯೮ ರ ಶಾಸನದಲ್ಲಿ[೨೪] ಕಂಬಳಗದ್ದೆಯ ಉಲ್ಲೇಖ ಕಂಡುಬರುತ್ತದೆ. ೧೪ನೇ ಶತಮಾನದ

ಕಾಲದಲ್ಲಿಯೇ ಕಂಬಳಗದ್ದೆಯ ಸ್ಪರ್ದೆಯು ತುಳುನಾಡಿನಲ್ಲಿ ಶೌರ್ಯ ಸಾಹಸವನ್ನು ಪ್ರದರ್ಶಿಸುವ ಕ್ರೀಡೆಯಾಗಿತ್ತು ಸ್ಥಳೀಯ ಅರಸರುಗಳು ಮತ್ತು ಶ್ರೀಮಂತ ಪರಿವಾರದವರು ಈ ಕ್ರೀಡೆಗೆ ಬೇಕಾದ ವಿಶೇಷ ಗದ್ದೆ ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸಿಕೊಡುತ್ತಿದ್ದರು[೨೫೦] ಎನ್ನುವುದಕ್ಕೆ ಸಾಕ್ಷಿಯಾಗಿ ಇಂದಿಗೂ ರಾಜವಂಶಗಳ ಹೆಸರಿನಲ್ಲಿ ಕಂಬಳ ನಡೆಯುವುದು ಕಾಣಬರುತ್ತದೆ.

ಸೋಲ್‌ಗಾಯಿ ಚಿಕ್ಕದಾದ ಸುಲಿದ ತೆಂಗಿನಕಾಯಿಯನ್ನು ನಿರ್ಧಿಷ್ಟ ಪಡಿಸಿದ ದೂರದಲ್ಲಿ ಇಟ್ಟು ಗೋಲಾಕಾರದ ಕಲ್ಲಿನಿಂದ ಬಿಸಿಹೊಡೆದು ಒಡೆಯುವ ಸ್ಪರ್ದೆಗೆ ಸೋಲ್‌ಗಾಯಿ ಎನ್ನುತ್ತಿದ್ದರು. ಈ ಸ್ಪರ್ಧೆಯಲ್ಲಿ ಗೆದ್ದವರಿಗೆ ಆ ತೆಂಗಿನಕಾಯಿ ಜೊತೆಯಲ್ಲಿ ಗೌರವ ನೀಡಿ ಬಹುಮಾನಿಸುತ್ತಾರೆ.

ಗುರಿ ಇಡುವುದು ಊರಿನ ಗಡಿಭಾಗದಲ್ಲಿ ಇರುವ ದೊಡ್ಡ ಅರಳಿಮರದ ತುದಿಯ ಟೊಂಗೆಗೆ ಸುಲಿದ ತೆಂಗಿನಕಾಯಿ ಕಟ್ಟುತ್ತಾರೆ. ನಿರ್ದಿಷ್ಟಪಡಿಸಿದ ದೂರದಲ್ಲಿ ನಿಂತವರು ಕೋವಿಯಿಂದ ಗುಂಡು ಹೊಡೆದು ಆ ತೆಂಗಿನಕಾಯಿಯನ್ನು ಒಡೆಯಬೇಕು. ಇಲ್ಲೂ ಕೂಡ ಗೆದ್ದವರಿಗೆ ಚಿನ್ನದ ಪದಕ ಇತ್ಯಾದಿ ಕೊಟ್ಟು ಗೌರವಿಸುತ್ತಾರೆ. ಈ ಕ್ರೀಡೆಗಳು ಯುದ್ಧ ಕಾಲದ ನೆನಪನ್ನು ಮಾಡಿಕೊಡುತ್ತವೆ.

ಚೆನ್ನೆಮಣೆ ಆಟ ಇದೊಂದು ಒಳಾಂಗಣ ಕ್ರೀಡೆಯಾಗಿದ್ದು ಹೆಣ್ಣುಮಕ್ಕಳ ಪ್ರೀತಿಯ ಆಟವಾಗಿದೆ. ಹುಣಿಸೆ ಬೀಜ ಅಥವಾ ಚಿಕ್ಕ ಚಿಕ್ಕ ಕಲ್ಲುಗಳನ್ನು ಹಾಕಿ ಆಡುವ ಈ ಆಟವು ಪಗಡೆ ಆಟವನ್ನು ನೆನಪಿಸುತ್ತದೆ. ಬಸರೂರಿನ ಗುಡ್ಡದಲ್ಲಿ ಬಂಡೆಗಲ್ಲಿನ ಮೇಲೆ ಚೆನ್ನೆಮಣೆ ಹೋಲುವ ಕೆತ್ತನೆ[೨೫೧] ಕಾಣುತ್ತದೆ

ಚಿನ್ನಿದಾಂಡು ಹುಡುಗರ ಅಚ್ಚು ಮೆಚ್ಚಿನ ಆಟ ಇದು. ಇದನ್ನು ಗುಂಪುಗಳಲ್ಲು ಹಾಗೂ ವೈಯಕ್ತಿಕವಾಗಿಯೂ ಆಡುತ್ತಾರೆ. ಈ ಆಟ ಕೌರವ ಪಾಂಡವರು ಬಾಲ್ಯದಲ್ಲಿ ಆಡಿದ ಉಲ್ಲೇಖ ಮಹಾಭಾರತದಲ್ಲಿ ಕಂಡುಬರುತ್ತದೆ.

ಹುಲಿ–ಹಸು ಇದು ಕಾಡುಪ್ರಾಣಿ ಹುಲಿ ಹಾಗೂ ಸಾದು ಪ್ರಾಣಿ ಆಕಳ ನಡುವಿನ ಹೋರಾಟವನ್ನು ನೆನಪಿಸುತ್ತದೆ. ಮರಕೋತಿ, ಸರಿಬೆಸ, ಕುಂಟಾಬಿಲ್ಲೆ, ಬುಗುರಿ ತಿರುಗಿಸುವುದು ಬಾಲಕ ಬಾಲಕಿಯರ ಹಾಗೂ ಯುವಕರ ಆಟವಾಗಿದ್ದರೆ ಪಗಡೆ ಹಿರಿಯರ ಹಾಗೂ ಪ್ರತಿಷ್ಠಿತ ಕುಟುಂಬಗಳ ಆಟವಾಗಿತ್ತು.

ಕೋಳಿಅಂಕ ಪ್ರಬಲ ಸ್ಪರ್ಧೆಯ ಆಟಗಳಲ್ಲಿ ಕೋಳಿ ಅಂಕ ಒಂದು. ಇದು ಬಡವರ್ಗಗಳಲ್ಲಿ ಕಂಡುಬರುವ ಆಟ. ಒಂದು ರೀತಿಯಲ್ಲಿ ಇದು ಮನರಂಜನೆಯ ಆಟವೂ ಹೌದಾಗಿತ್ತು. ಕೋಳಿಗಳ ಕಾದಾಟವನ್ನು ಏರ್ಪಡಿಸುವುದು ವಿದೇಶಗಳಲ್ಲೂ ಜನಪ್ರೀಯವಾಗಿತ್ತು. ಕೋಳಿಅಂಕ

ಜಾತ್ರೆಗಳಲ್ಲಿ, ಹಬ್ಬದ ಸಮಯದಲ್ಲಿ ಕೋಲ, ನೇಮ, ಕಂಬಳ[೨೫೨] ಮುಂತಾದವುಗಳು ನಡೆಯುವಾಗ ಪಕ್ಕದಲ್ಲಿ ಆಡಿಸುತ್ತಿದ್ದ ಆಟವಾಗಿದೆ. ಇಂದಿಗೂ ಅಲ್ಲಲ್ಲಿ ಕಂಡುಬರುವ ಅಂಕದಕಟ್ಟೆ, ಅಂಕದಗದ್ದೆಗಳು ಹಿಂದೆ ಕೋಳಿ ಅಂಕ ಹೊಂದಿದ್ದ ಜನಪ್ರೀಯತೆಯನ್ನು ತೋರಿಸುತ್ತವೆ.

ಓಟದ ಸ್ಪರ್ಧೆ ಜಾಗತಿಕವಾದದ್ದು. ಎಲ್ಲಾ ದೇಶಗಳಲ್ಲಿ, ಕಾಲಗಳಲ್ಲಿ ಇದನ್ನು ನೋಡಬಹುದು. ಸೈನ್ಯಕ್ಕೆ ಓಟದ ಕಾಲಾಳುಗಳು ಅತಿ ಅವಶ್ಯವಾಗಿದ್ದರು. ಸಂದೇಶ ತಲುಪಿಸಲು, ಘಟನೆಗಳನ್ನು ದೂರ-ದೂರಕ್ಕೆ ತಲುಪಿಸಲು ಇವರ ಅಗತ್ಯವಿತ್ತು. ಇಂತಹ ಓಟಗಾರರನ್ನು ಓಟದ ಸ್ಪರ್ಧೆಗಳ ಮೂಲಕ ಆಯ್ದುಕೊಳ್ಳುತ್ತಿದ್ದರು.

ಕುಸ್ತಿ ಪ್ರಾಚೀನಕಾಲದ ಇನ್ನೊಂದು ಕ್ರೀಡೆಯೆಂದರೆ ಕುಸ್ತಿ. ಕದಂಬರ ಕಾಲದಿಂದಲು ಇದಕ್ಕೆ ಬಹು ಗೌರವವಿದ್ದಿತ್ತು. ಮಲ್ಲಾಪುರ, ಮಲ್ಲುಕುರ್ವ ಊರುಗಳ ಹೆಸರುಗಳಲ್ಲೂ ಜಟ್ಟಿಗ ಎಂಬ ವ್ಯಕ್ತಿ ಹೆಸರುಗಳಲ್ಲಿ ಈ ಕುಸ್ತಿಯ ಪ್ರಾಮುಖ್ಯತೆ ತಿಳಿಯುತ್ತದೆ.

ದೋಣಿ ಸ್ಪರ್ಧೆ ಕಡಲು ಹಾಗೂ ನದಿಗಳೇ ಈ ಪ್ರದೇಶಗಳ ಜೀವನಾಡಿ ಆಗಿರುವುದರಿಂದ ವೇಗವಾಗಿ ಈಜುವುದು ಮತ್ತು ನದಿ, ಕಡಲುಗಳಲ್ಲಿ ದೋಣಿ ಸ್ಪರ್ಧೆನಡೆಸುವುದು ಇಲ್ಲಿ ಸಾಮಾನ್ಯವಾಗಿತ್ತು.

೬.೧೦.೪ ಬಂದರುಗಳ ಮೂಲಕ ವ್ಯಾಪಾರಕ್ಕೆ ಬಳಸುತ್ತಿದ್ದ ಸರಕುಗಳು

ಕರ್ನಾಟಕದ ಕರಾವಳಿ ಅಗಲ ಕಿರಿದಾದ, ಸುಮಾರು ೩೨೦ಕಿ.ಮೀ. ಉದ್ದದ ತೀರ ಪ್ರದೇಶವಾಗಿದೆ. ಪಶ್ಚಿಮದಲ್ಲಿ ವಿಶಾಲ ಕಡಲು, ಪೂರ್ವದಲ್ಲಿ ಎತ್ತರದ ಪಶ್ಚಿಮ ಘಟ್ಟಗಳ ಸಾಲು ಹಬ್ಬಿವೆ. ನಡುವಿನ ಭೂಭಾಗವು ತೀರ ಪ್ರದೇಶ, ಕರಾವಳಿ ಪ್ರದೇಶ ಎಂದು ಕರೆಯಲ್ಪಡುತ್ತದೆ. ಈ ಪಶ್ಚಿಮ ತೀರದ ಕರಾವಳಿ ಪ್ರದೇಶದ ಆರ್ಥಿಕತೆಯು ಕೃಷಿ ಪ್ರಧಾನವಾಗಿದೆ. ಹಾಗೂ ಕಡಲನ್ನು ಆಶ್ರಯಿಸಿದ ಉತ್ಪನ್ನಗಳನ್ನೂ ಅವಲಂಭಿಸಿದೆ. ಶತ-ಶತಮಾನಗಳಿಂದ ಇಲ್ಲಿಯ ಜನರು ಕಡಲಮಾರ್ಗವಾಗಿ ಸುತ್ತಲಿನ ದ್ವೀಪಗಳಿಗೆ, ಭೂಪ್ರದೇಶಗಳಿಗೆ ಹೋಗಿ ವ್ಯಾಪಾರ ವ್ಯವಹಾರ ನಡೆಸುತ್ತಿದ್ದರು. ಅವರಿಗೆ ದೇಶದೊಳಗಿನ ಉತ್ತರದ ಭೂಭಾಗಗಳಿಗಿಂತ ಕಡಲ ಮಾರ್ಗವಾಗಿ ಚಲಿಸಿದರೆ ಸಿಗುತ್ತಿದ್ದ ದ್ವೀಪಗಳು, ವಿದೇಶಗಳು ಹತ್ತಿರದವಾಗಿದ್ದವು. ಆದ್ದರಿಂದ ಇಲ್ಲಿಯ ಆರ್ಥಿಕತೆ ಭೂಮಿ ಹಾಗೂ ಕಡಲು ಎರಡನ್ನೂ ಆಶ್ರಯಿಸಿದೆ. ಇಲ್ಲಿಯ ಪಶ್ಚಿಮ ಘಟ್ಟಗಳು ಬಹುಮೂಲ್ಯ ನೈಸರ್ಗಿಕ ಸಂಪತ್ತಿನಿಂದ ಕೂಡಿದೆ. ಇಲ್ಲಿಯ ಮಣ್ಣು ಇಲ್ಲಿ ಹರಿಯುವ ನದಿ-ತೊರೆಗಳಿಂದ ಫಲವತ್ತಾಗಿದೆ. ಇಲ್ಲಿ ದೊರೆಯುವ ಖನಿಜ, ವನಸ್ಪತಿಗಳು ಬಹುಲಾಭ ತಂದು ಕೊಡುತ್ತವೆ. ವಿಶಾಲವಾದ ಕಡಲು ನೌಕಾಯಾನಕ್ಕೂ, ಕಡಲೋತ್ತರ ವ್ಯಾಪಾರಕ್ಕೂ ಅನುಕೂಲಕರವಾಗಿದೆ.

ಇಲ್ಲಿಯ ನೈಸರ್ಗಿಕ ಬಂದರುಗಳು ಕ್ರಿಸ್ತ ಪೂರ್ವದ ಅನೇಕ ಶತಮಾನಗಳಿಂದಲೂ ವಿದೇಶಗಳೊಂದಿಗೆ ಸಂಪರ್ಕ ಪಡೆದಿದ್ದವು. ಏಷ್ಯಾದ ಇರಾನ ಮತ್ತಿತರ ಅರಬ್ ರಾಷ್ಟ್ರಗಳು, ಗ್ರೀಸ್, ರೋಮ್ ಮುಂತಾದ ಐರೋಪ್ಯ ರಾಷ್ಟ್ರಗಳು, ಈಜಿಪ್ಟ್ ಮತ್ತಿತರ ಆಫ್ರಿಕಾದ ದೇಶಗಳೊಂದಿಗೆ ನಿರಂತರ ವ್ಯಾಪಾರ ನಡೆಸುತ್ತಿದ್ದವು. ಯಹೂದ್ಯ ಸಾಲೋಮನ್‌ನ ಕಾಲದಲ್ಲಿ (ಕ್ರಿ.ಪೂ. ೧೦೦೦) ಚಿನ್ನ, ದಂತ, ಮಂಗ, ನವಿಲು ಮುಂತಾದ ಸರಕುಗಳು ವಿದೇಶಗಳಿಗೆ ಹೋಗುತ್ತಿದ್ದುದಾಗಿ ತಿಳಿಯುತ್ತದೆ. ಈ ವ್ಯಾಪಾರದ ಕುರಿತು ಅನೇಕ ವಿದೇಶಿ ಯಾತ್ರಿಕರು, ಭೂಗೋಳಜ್ಞರು ತಿಳಿಸಿದ್ದಾರೆ. ಫಿನಿಶಿಯನ್‌ರು, ಅರಬ್ಬರು, ರೋಮನ್ ಮತ್ತು ಗ್ರೀಸ್ ಜನರು ಈ ವ್ಯಾಪಾರದ ನಾಯಕರಾಗಿದ್ದರು. ಈ ನಿಮಿತ್ತ ಜನರು ಕರ್ನಾಟಕದ ಕೆಲಭಾಗದಲ್ಲಿ ಒಕ್ಕಲಾಗಿ ನೆಲೆಸಿದುದರ ಕುರುಹುಗಳು ಸಿಗುತ್ತವೆ.

ಅಂತೆಯೇ ಈ ಪ್ರದೇಶದಲ್ಲಿ ಲೋಹಗಾರಿಕೆ, ಎಣ್ಣೆ ತಯಾರಿಸುವುದು ಚರ್ಮಗಾರಿಕೆ, ಕೃಷಿ ಉಪಕರಣಗಳ ತಯಾರಿಕೆ, ಕುಂಬಾರಿಕೆ, ದೋಣಿ, ಹಡಗು ನಿರ್ಮಾಣ, ಚಕ್ಕಡಿ ತಯಾರಿಕೆ, ಅವುಗಳಲ್ಲಿ ಬಳಸುವ ಸಲಕರಣೆಗಳ ತಯಾರಿಕೆ ಮುಂತಾದ ಕೈಗಾರಿಕೆಗಳು ನಡೆಯುತ್ತಿದ್ದವು.

ಈ ಮೇಲಿನ ಎಲ್ಲವುಗಳು ಕರಾವಳಿಯ ಆರ್ಥಿಕ ಪ್ರಗತಿಯಲ್ಲಿ ಭಾಗಿಗಳಾಗಿದ್ದ ವೃತ್ತಿಗಳಾಗಿದ್ದವು. ಇವುಗಳ ಆಚೆಯೂ ಹಣ್ಣು ಮಾರುವ, ಹೂವು ಮಾರುವ, ಕೃಷಿ ಕಾರ್ಮಿಕರಾಗಿದ್ದವರ, ತೋಟದ ಕಾರ್ಮಿಕರ, ಮೀನುಗಾರರ ದೋಣಿ ನಡೆಸುವವರ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದವರ ಕೊಡುಗೆಯೂ ಇತ್ತು. ಇವರೆಲ್ಲರ ಚಟುವಟಿಕೆ, ಭೂವ್ಯವಹಾರ, ತೆರಿಗೆ ಪದ್ದತಿ, ನಾಣ್ಯಗಳ ಮುದ್ರಣ, ವಿನಿಮಯ ಪದ್ಧತಿ, ವಾಣಿಜ್ಯ ವಹಿವಾಟುಗಳು ಆರ್ಥಿಕತೆಯ ಜೀವಾಳವಾಗಿದ್ದಿತ್ತು. ಕರಾವಳಿ ಪ್ರದೇಶದಲ್ಲಿ ಪಶುಸಂಗೋಪನೆಯೊಂದೇ ಪ್ರಮುಖ ವೃತ್ತಿಯಾಗಿದ್ದ ಕಾಲವೂ ಇತ್ತು. ಕಾಲಕ್ರಮೇಣ ಮಾನವನ ಅಲೆದಾಟ ನಿಂತು ಒಂದೆಡೆ ನೆಲೆನಿಂತು ವಸತಿ ಕಲ್ಪಿಸಿಕೊಂಡು ಜೀವನ ನಿರ್ವಹಣೆ ಮಾಡತೊಡಗಿದ ಮೇಲೆ ಈ ಮೇಲಿನ ವೃತ್ತಿ ಚಟುವಟಿಕೆಗಳಿಗೆ ಆರಂಭ ದೊರೆಯಿತು.

೬.೧೦.೫. ಕೃಷಿ

ಕರಾವಳಿಯ ಆರ್ಥಿಕ ಬೆಳವಣಿಗೆಯಲ್ಲಿ ಪ್ರಮುಖ ಸ್ಥಾನ ಕೃಷಿ ತೋಟಗಾರಿಕೆಯದ್ದು. ಇಲ್ಲಿಯ ಕೃಷಿಕರು ತಮ್ಮ ಸ್ವಂತ ಭೂಮಿಯಲ್ಲಿ ಕೃಷಿ, ತೋಟಗಾರಿಕೆ ಮಾಡುತ್ತಿದ್ದರು. ಮುಂದೆ ಪ್ರಭುತ್ವವು ಒಂದು ಕುಟುಂಬದ ಕೈಯಲ್ಲಿ ಹೋದಂತೆ ಭೂಒಡೆತನದ ಮಾದರಿಗಳು ಬದಲಾದವು. ರಾಜವಂಶಸ್ಥರು, ಅವರ ಮಾಂಡಳೀಕರು, ಅರಮನೆಯ ನಿಷ್ಠರು, ಪುರೋಹಿತರು, ಸೈನಿಕರು ಮುಂತಾದವರು ಭೂಮಿಯನ್ನು ದಾನ-ದತ್ತಿ ರೂಪದಲ್ಲಿ ಪಡೆಯುತ್ತಿದ್ದರು. ಇದರಿಂದ ನೇರವಾಗಿ

ಕೃಷಿ ಕಾರ್ಯದಲ್ಲಿ ತೊಡಗದ ಈ ವರ್ಗದ ಜನರು ಕೃಷಿ ಕಾರ್ಮಿಕರನ್ನು ತಮ್ಮ ಜಾಗಗಳಲ್ಲಿ ದುಡಿಸುತ್ತಿದ್ದರು. ಜನಸಾಮಾನ್ಯರಿಗೆ ಕಾರ್ಮಿಕರಿಗೆ ಜೀವನ ನಿರ್ವಹಣೆಗೆ ಕೃಷಿಯೇ ಮೂಲವಾಗಿತ್ತು. ರಾಜನ ಭೂಮಿಯಲ್ಲಿಯೂ ಈ ಕೃಷಿ ಕಾರ್ಮಿಕರು ದುಡಿಯಬೇಕಾಗಿತ್ತು. ಈ ಭೂವ್ಯವಸಾಯವು ರಾಜನ ಬೊಕ್ಕಸಕ್ಕೆ ವರಮಾನವನ್ನು ತರುತ್ತಿತ್ತು.

ಕೃಷಿ ಭೂಮಿಯಲ್ಲಿ ಭತ್ತ, ಕಬ್ಬು, ತರಕಾರಿಗಳು, ಹಣ್ಣು–ಹಂಪಲು ಮುಂತಾದವುಗಳನ್ನು ಬೆಳೆಯುತ್ತಿದ್ದರು. ತೋಟಗಳಲ್ಲಿ ಯಾಲಕ್ಕಿ, ಮೆಣಸು, ಅಡಿಕೆ, ತೆಂಗು, ಬಾಳೆ, ವೀಳ್ಯದ ಎಲೆ ಮುಂತಾದವುಗಳನ್ನು ಬೆಳೆಸುತ್ತಿದ್ದರು. ಈ ಕೃಷಿಗೆ ಅನುಕೂಲವಾಗುವಂತೆ ಕೆರೆ, ಬಾವಿ ನಿರ್ಮಿಸಿಕೊಡುವುದು ಪುಣ್ಯ ಕೆಲಸವೆಂದು ಅರಸ ಮತ್ತು ಶ್ರೀಮಂತರು ಭಾವಿಸಿದ್ದರು. ನೀರಾವರಿಯ ವ್ಯವಸ್ಥೆ ಮಾಡಿಕೊಟ್ಟ ಉದಾಹರಣೆಗಳಿವೆ.

ಕರ್ನಾಟಕದಲ್ಲಿ ರಾಗಿ, ಗೋಧಿ, ಜೋಳ, ಭತ್ತ, ಸಾವೆ, ಅರಿಸಿನ, ಲವಂಗ, ಬಜೆ ಮೆಣಸು, ಕರ್ಪೂರ, ಮಾವು, ಹಲಸು, ನಿಂಬೆ, ದ್ರಾಕ್ಷಿ, ದಾಳಿಂಬೆ, ಕಿತ್ತಳೆ, ಮಾದಲ, ಲವಂಗ, ತಾಳೆ, ಹುಣಸೆ, ಚಂದನ, ಹೊಂಗೆ, ಬೇವು, ನೆಲ್ಲಿಕಾಯಿ, ಹೊನ್ನೆ, ಹಿಪ್ಪೆ, ಕುಂಬಳ, ಬದನೆ. ಪಡವಲು, ನೇರಲೆ, ಬೇಲ, ಹಾಗಲ, ತೊಗರಿ, ಅವರೆ, ಕಡಲೆ, ಅಲಸಂದೆ, ಹೆಸರು, ಉದ್ದು[೨೫೩] ಮುಂತಾದವುಗಳನ್ನು ಬೆಳೆಯುತ್ತಿದ್ದರು.

ಭೂಮಿಗೆ ಸಿಗುತ್ತಿರುವ ನೀರು, ಅದರ ಮಟ್ಟಗಳನ್ನು ಪರಿಗಣಿಸಿ, ನೀರಾವರಿ ಭೂಮಿಯೆಂದೂ, ನೀರು ಸಿಗದ ಭೂಮಿಯನ್ನು ಒಣ ಭೂಮಿಯೆಂದು, ಸದಾ ನೀರಿನಿಂದ ಕೂಡಿರುವ ಭೂಮಿಯನ್ನು ಜವಗು ಭೂಮಿಯೆಂದೂ ವಿಂಗಡಿಸಿದ್ದರು. ಬೆದೆಕಾರು, ಬೆದೆಗಣಕಾಲು ಎಂಬ ವಿಭಾಗಗಳು ಮಳೆಗಾಲದಲ್ಲಿ ವ್ಯವಸಾಯಕ್ಕೆ ಯೋಗ್ಯವಾದ ಭೂಮಿಯಾಗಿತ್ತು[೨೫೪]. ಮಧ್ಯಕಾಲೀನ ಅವಧಿಯಲ್ಲಿ ಗೇಣಿಪದ್ಧತಿಚಾಲ್ತಿಗೆ ಬಂದದ್ದು ತಿಳಿಯುತ್ತದೆ. ಇದರಲ್ಲೂ ಮೂಲಗೇಣಿ, ಚಾಲಕಗೇಣಿ, ಪದ್ಧತಿಗಳಿದ್ದವು. ರೈತರ ಸ್ವಂತ ಜಮೀನು ಭೂಮಿ, ಬಾಳಿಕೆ ಪಟ್ಟಿ[೨೫೫] ಎಂದು ಕರೆಯುತ್ತಿದ್ದರು. ಕಳಭೂಮಿ, ಎಂಬ ಪ್ರಕಾರದ ಭೂಮಿಯೂ ಇತ್ತು[೨೫೬]. ಬೆಟ್ಟು, ಮಜಲು, ಮಕ್ಕಿ, ಹಕ್ಕಲು ಇನ್ನಿತರ ಭೂವಿಭಾಗಗಳಾಗಿದ್ದವು. ಒಂದು ಬೆಳೆ ತೆಗೆಯುವ ಕುದುರು ಹಡಲುಗಳಿದ್ದವು.

ಹೊಲಗಳಲ್ಲಿ ಬಿತ್ತುವ ಬೀಜಗಳ ಲೆಕ್ಕದಲ್ಲಿ ಹೊಲಗಳನ್ನು ವಿಭಾಗಿಸಿದ್ದರು. ಉದಾಹರಣೆಗೆ ೬೦ ಮೂಡೆ ಬಿತ್ತುವ ಬಯಲು[೨೫೭] ಎಂಬುದು, ಆರವತ್ತುಮೂಡೆ ಬೀಜ ಬಿತ್ತುವ ಪ್ರದೇಶ ಎಂದಾಗಿತ್ತು. ಇನ್ನೂ ಕೆಲವು ದೇವರಗದ್ದೆ, ದೇವಸ್ಥಾನಗದ್ದೆ, ಶೆಟ್ಟರ ಗದ್ದೆ, ಒಡೆಯರ ಗದ್ದೆ[೨೫೮] ಮುಂತಾದ ಗದ್ದೆಗಳು ಇದ್ದವು.

ಅಂದಿನ ಕಾಲದಲ್ಲಿ ಪ್ರಚಲಿತದಲ್ಲಿದ್ದ ಅಳತೆಗಳು ಇಂತಿದ್ದವು. ಮುಡಿ, ಮಡೆ ಅಥವಾ ಮುಡೆ, ಖಂಡುಗ ಅಥವಾ ಕಂಡುಗ, ಹಾನೆ, ಕುಡಿತೆ, ಪಡಿ[೨೫] ಇತ್ಯಾದಿಗಳಾಗಿದ್ದವು.

ಟಿಪ್ಪಣಿಗಳು

೧. ಅರ್ಥಶಾಸ್ತ್ರದ ಮೂಲ ಅಂಶಗಳು, ರಾಮನ್ ಬಿ.ಎಸ್., ಪುಟ ೪೨

೨. ಮಾರ್ಕ್ಸ್‌ವಾದಿ ತತ್ವಶಾಸ್ತ್ರ ಮತ್ತು ರಾಜಕೀಯ ಅರ್ಥಶಾಸ್ತ್ರ, ಶಿಕ್ಷಣ ಮಾಲೆ ೧, ಸಿ.ಪಿ.ಎಮ್., ರಾಜ್ಯ ಸಮಿತಿ, ಬೆಂಗಳೂರು ಪುಟ ೨೪

೩. ಕೆಪಿಟಲ್, ಸಂ ೧, ಕಾರ್ಲ್‌ಮಾರ್ಕ್ಸ್, ಪುಟ ೧೧-೧೨

೪. ದಕ್ಷಿಣ ಕನ್ನಡ ಜಿಲ್ಲೆಯ ಶಾಸನಗಳ ಸಂಸ್ಕೃತಿಕ ಅಧ್ಯಯನ, ವರ್ಮಾ ಶೈಲಾ ಟಿ., ಪುಟ ೩೬

೫. ಪ್ರಾಚೀನ ಭಾರತ ಶರ್ಮ ಆರ್.ಎಸ್., ಪುಟ ೧೮೬

೬. ಅದೇ, ಪುಟ ೧೮೬

೭. ಅದೇ, ಪುಟ ೧೮೬

೮. ನಮ್ಮ ಪ್ರಾಚ್ಯ ಪರಂಪರೆ, ನಾಗರಿಕತೆಯ ಕತೆ, ವಿಲ್‌ಡ್ಯುರಾಂಟ್, ಪುಟ ೪೬೧

೯. ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ, ಇರ್‌ಫಾನ್ ಹಬೀಬ್, ಪುಟ ೧೭

೧೦. ಅದೇ, ಪುಟ ೧೮

೧೧. ಅದೇ, ಪುಟ ೧೯

೧೨. ತುಳುನಾಡಿನ ಇತಿಹಾಸ ರಮೇಶ ಕೆ.ವಿ., ಪುಟ ೭೦

೧೩. ಬಸರೂರು ಒಂದು ಸಾಂಸ್ಕೃತಿಕ ಅಧ್ಯಯನ, (ಸಂ) ಭಟ್ಟ ವಾದಿರಾಜ್ ಕಾನಾರಾಡಿ, ಬಸರೂರು ಒಂದು ಸಮೀಕ್ಷೆ, ಭಟ್ಟ ಗುರುರಾಜ್ ಪಿ., ಪುಟ ೩-೪

೧೪. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೭೦

೧೫. ತುಳುನಾಡಿನ ಜೈನಧರ್ಮ, ಶೆಟ್ಟಿ ಎಸ್.ಡಿ., ಪುಟ ೨೫

೧೬. ಅದೇ, ಪುಟ ೨೫

೧೭. ಅದೇ, ಪುಟ ೨೫

೧೮. ತುಳು ಕರ್ನಾಟಕದ ಅರಸು ಮನೆತನಗಳು, (ಸಂ) ಶೆಟ್ಟಿ ಎಸ್.ಡಿ., ಗೇರಸೊಪ್ಪ ಮತ್ತು ಹಾಡುವಳ್ಳಿ ಸಾಳುವರು, ಶೆಟ್ಟಿ ಎಸ್.ಡಿ., ಪುಟ ೩೬

೧೯. ಸಾಮ್ರಾಜ್ಯ ಮತ್ತು ಸಂಸ್ಥಾನ, ಸೋಸಲೆ ಚಿನ್ನಸ್ವಾಮಿ ಎನ್., ಪುಟ ೧೧೧

೨೦. ವೇದಯುಗ ಭಾಗ ೨, ಆಪ್ಟೆ ಬಿ.ಎಂ., (ಅನು) ಮರುಳಸಿದ್ದಯ್ಯ ಎಚ್.ಎಂ., ಪುಟ ೨೮೮

೨೧. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಹಿರೇಮಠ ಬಿ.ಆರ್., ಪುಟ ೧೬

೨೨. ಹಾನಗಲ್ಲ ಕದಂಬರು, ಪಾವಟೆ ಚೆನ್ನಕ್ಕ, ಪುಟ ೧೨೦

೨೩. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೂರ್ತಿ ಚಿದಾನಂದ ಎಂ., ಪುಟ ೪೨೩

೨೪. ಅದೇ, ಪುಟ ೪೨೩-೪೨೪

೨೫. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಹಿರೇಮಠ ಬಿ.ಆರ್., ಪುಟ ೧೫

೨೬. ಮಾರ್ಗ-೪, ಗುಡ್ಡಧ್ವಜ-ಸೆಟ್ಟಿವಟ್ಟ-ಬಣಂಜುವಟ್ಟ, ಕಲಬರ್ಗಿ ಎಂ.ಎಂ., ಪುಟ ೪೭೮

೨೭. ಅದೇ, ಪುಟ ೪೭೮

೨೮. ಕರ್ನಾಟಕದ ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೩೦

೨೯. ಅದೇ, ಪುಟ ೨೯

೩೦. ಅದೇ, ಪುಟ ೩೦

೩೧. ಅದೇ, ಪುಟ ೩೨

೩೨. ಅದೇ, ಪುಟ ೩೩

೩೩. ಕರ್ನಾಟಕದ ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೩೪

೩೪. ತುಳುನಾಡಿನ ಶಾಸನಗಳು, ರಮೇಶ ಕೆ.ವಿ., ಪುಟ ೪೩

೩೫. ಎಸ್.ಇ.ಇ., ಕುಡಗೋಡು ಶಾಸನ, ಬಳ್ಳಾರಿ ಜಿಲ್ಲೆಯ ಶಾಸನಗಳು, ನಂ.೩೧೯, ೩೨೨

೩೬. ಕರ್ನಾಟಕದ ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೩೪

೩೭. ಕನ್ನಡ ಶಾಸನ ಸಂಪದ, (ಸಂ) ಹಿರೇಮಠ ಬಿ.ಆರ್., ಕಲಬುರ್ಗಿ ಎಮ್.ಎಮ್.,
ಪುಟ ೩೩-೩೪

೩೮. ಅದೇ, ಪುಟ ೬೯

೩೯. ಅದೇ, ಪುಟ ೩೫

೪೦. ಅದೇ, ಪುಟ ೩೬

೪೧. ಕರ್ನಾಟಕದ ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೩೫

೪೨. ಅದೇ, ಪುಟ ೩೬

೪೩. ಅದೇ, ಪುಟ ೪೧

೪೪. ಕರ್ನಾಟಕದ ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೩೬

೪೫. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೬೯

೪೬. ಮಹಾಮಂಡಳೇಶ್ವರಿ ರಾಣಿ ಚೆನ್ನಭೈರಾದೇವಿ ಮತ್ತು ಇತರ ಕರಾವಳಿಯ ರಾಣಿಯರು, ಕಮಲಾ ಹಂಪಾನಾ, ಪುಟ ೧೮

೪೭. ಬಸರೂರು ಒಂದು ಅಧ್ಯಯನ, (ಸಂ) ಭಟ ವಾದಿರಾಜ ಕಾನರಾಡಿ, ಬಸರೂರು ಒಂದು ಸಮೀಕ್ಷೆ, ಭಟ ಗುರುರಾಜ ಪಿ., ಪುಟ ೩–೪

೪೮. ಪ್ರವಾಸಿಕಂಡ ಇಂಡಿಯಾ, ಸಂ.೧, ನಾಗೇಗೌಡ ಎಚ್.ಎಲ್., ಪುಟ ೩೩

೪೯. ತುಳುನಾಡಿನ ಶಾಸನಗಳು, ರಮೇಶ ಕೆ.ವಿ., ಪುಟ ೬೩–೬೪

೫೦. ಅದೇ, ಪುಟ ೬೬

೫೧. ಅದೇ, ಪುಟ ೬೭

೫೨. ಅದೇ, ಪುಟ ೬೮

೫೩. ಎ.ಆರ್.ಎಸ್.ಐ.ಇ., ೧೯೨೩–೨೮. ಪಿ.ಸಿ.X., ಪುಟ ೪೧೫

೫೪. ಅದೇ, ಪುಟ ೪೨೦

೫೫. ಕರ್ನಾಟಕ ಥರ್ಡವರ್ಡ, ವಸಂತ ಮಾಧವ ಕೆ.ಜಿ., ಪುಟ ೪೩

೫೬. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೭೬

೫೭. ಅದೇ, ಪುಟ ೭೯

೫೮. ಹಾನಗಲ್ಲ ಕದಂಬರು, ಪಾವಟೆ ಚೆನ್ನಕ್ಕ, ಪುಟ ೨೧

೫೯. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೭೯

೬೦. ಅದೇ, ಪುಟ ೮೦

೬೧. ಅದೇ, ಪುಟ ೮೧

೬೨. ತುಳುನಾಡಿನ ಶಾಸನಗಳು, ರಮೇಶ ಕೆ.ವಿ., ಶರ್ಮಾ ಎಂ.ಜೆ., ಪುಟ ೧೫–೧೬

೬೩. ಅದೇ, ಪುಟ ೩೦–೩೧

೬೪. ಸೌಥ ಇಂಡಿಯನ್ ಇನ್ಸ್ಕ್ರಿಪ್ಷನ್ಸ್, ಸಂಪುಟ IX, ಪುಟ ೩೯೩

೬೫. ಅದೇ, ನಂ ೩೬೨

೬೬. ಎ.ಇ.ಎಸ್.ಐ.ಅರ್., ೧೯೨೭–೨೮೮, ಪುಟ ೪೫೧

೬೭. ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೭೯

೬೮. ಕರ್ನಾಟಕದ ಶಾಸನಗಳಲ್ಲಿ ಸ್ತ್ರಿಸಮಾಜ, ಎಲಿಗಾರ ಚೆನ್ನಕ್ಕ, ಪುಟ ೨೭

೬೯. ಸಾಮ್ರಾಜ್ಯ ಮತ್ತು ಸಂಸ್ಥಾನ, ಸೋಸಲೆ ಚೆನ್ನಸ್ವಾಮಿ ಎನ್., ಪುಟ ೭೭

೭೦. ಎಸ್.ಐ.ಐ., ನಂ. VII ಪುಟ ೨೮೩

೭೧. ಎ.ಕೆ VII ಬೆಳ್ಳಿಗಾವೆ ಶಾಸನ,

೭೨. ಅದೇ, ಬೆಳ್ಳಿಗಾವೆ ಶಾಸನ,

೭೩. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೬೯

೭೪. ಅದೇ, ನಂ ೬೯

೭೫. ಇ.ಕೆ., ಶ್ರವಣಬೆಳಗೊಳ ಶಾಸನ, ಪುಟ ೧೮೩

೭೬. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೬೯

೭೭. ಲೋಕಲ ಬೋಡಿಸ್ ಇನ್ ಮಿಡಿವಲ್ ಸೌಥ ಇಂಡಿಯಾ, ದೀಕ್ಷಿತ್ ಜೆ.ಎಸ್., ಪುಟ ೪೬

೭೮. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೭೧

೭೯. ಎ.ಆರ್.ಎಸ್.ಐ.ಇ., ೧೯೦೧, ಪುಟ ೧೫೬, ಎಸ್.ಐ.ಐ., VII ಸಂ, ನಂ. ೩೫೩ ತುಳುನಾಡಿನ ಶಾಸನಗಳು, ರಮೇಶ ಕೆ.ವಿ., ಪುಟ ೧೨೫–೧೨೭

೮೦. ತುಳುನಾಡಿನ ಶಾಸನಗಳು, ರಮೇಶ ಕೆ.ವಿ., ಪುಟ ೧೨೮

೮೧. ಸೌ.ಇ.ಇ., ಸಂ.VII ನಂ ೨೦೫

೮೨. ಅದೇ, ನಂ ೨೫೭

೮೩. ಅದೇ, ನಂ ೩೫೦

೮೪. ಅದೇ, ನಂ ೨೦೫

೮೫. ಕರ್ನಾಟಕದ ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೬೪

೮೬. ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ವರ್ಮಾ ಶೈಲಾ ಟಿ., ಪುಟ ೧೪೪

೮೭. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೭೧

೮೮. ಅದೇ, ಪುಟ ೭೮

೮೯. ತುಳುನಾಡಿನ ಜೈನಧರ್ಮ, ಶೆಟ್ಟಿ ಎಸ್.ಡಿ., ಪುಟ ೩೨೨

೯೦. ಪ್ರವಾಸಿಕಂಡ ಇಂಡಿಯಾ, ಸಂ.೧, ನಾಗೇಗೌಡ ಎಚ್.ಎಲ್., ಪುಟ ೨೭

೯೧. ವೀರಗಲ್ಲುಗಳು, ಶೇಷಶಾಸ್ತ್ರಿ ಎಸ್., ಪುಟ ೬೩

೯೨. ಕರ್ನಾಟಕದ ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೭೭

೯೩. ತುಳುನಾಡಿನ ಶಾಸನಗಳು ರಮೇಶ ಕೆ.ವಿ., ಪುಟ ೨೭

೯೪. ಕರ್ನಾಟಕದ ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೬೩

೯೫. ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ವರ್ಮಾ ಶೈಲಾ ಟಿ., ಪುಟ ೧೪೩

೯೬. ತುಳುನಾಡಿನಲ್ಲಿ ಜೈನಧರ್ಮ, ಶೆಟ್ಟಿ ಎಸ್.ಡಿ., ಪುಟ ೨೪೦

೯೭. ಶೋಧ, ನಂ.೨, ಸಂ.೨, ಬ್ರಹ್ಮದೇವರ ಕುರಿತ ಶಾಸನಗಳು ಮತ್ತು ಇತರ ದಾಖಲೆಗಳು ಶೆಟ್ಟಿ ಎಸ್.ಡಿ., ಪುಟ ೧೫

೯೮. ಮಹಾಮಂಡಳೇಶ್ವರಿ ರಾಣಿ ಚೆನ್ನಭೈರಾದೇವಿ, ಕಮಲಾ ಹಂಪಾನ, ಪುಟ ೧೮

೯೯. ತುಳುನಾಡಿನ ಶಾಸನಗಳು, ಸಂ.೧, ರಮೇಶ ಕೆ.ವಿ., ಪುಟ ೯೪–೯೫

೧೦೦. ಅದೇ, ಪುಟ ೯೭

೧೦೧. ಅದೇ, ಪುಟ ೧೨೫–೧೨೭

೧೦೨. ಅದೇ, ಪುಟ ೧೨೭

೧೦೩. ಅದೇ, ಪುಟ ೧೫೧–೧೫೨

೧೦೪. ಅದೇ, ಪುಟ ೧೫೫–೧೫೭

೧೦೫. ಕರ್ನಾಟಕದ ಶಾಸನಗಳಲ್ಲಿ ವರ್ತಕರು, ಹಿರೇಮಠ ಬಿ.ಆರ್., ಪುಟ ೬೩–೬೪

೧೦೬. ಸೋಷಿಯಲ್ ಆಂಡ್ ಎಕನಾಮಿಕಲ್ ಕಂಡಿಷನ್ ಆಫ್ ಕರ್ನಾಟಕ, ಎ.ಡಿ., ೪೦೦–೧೦೦೦ ಕೃಷ್ಣಪ್ಪ ಎಮ್.ವಿ., ಪುಟ ೧೪೨

೧೦೭. ಲೋಕಲ್ ಬಾಡಿಸ್ ಇನ್ ಮಿಡಿವಲ್ ಸೌಥ ಇಂಡಿಯಾ, ದೀಕ್ಷಿತ್ ಜಿ.ಎಸ್., ಪುಟ ೩೭

೧೦೮. ಅದೇ, ಪುಟ ೩೭

೧೦೯. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೂರ್ತಿ ಚಿದಾನಂದ ಎಮ್., ಪುಟ ೪೨೬

೧೧೦. ಅದೇ, ಪುಟ ೪೨೬

೧೧೧. ಮಾರ್ಗ ೪, ಕಲಬುರ್ಗಿ ಎಮ್.ಎಮ್., ಉಡ್ಡಧ್ವಜ, ಪುಟ ೪೭೩

೧೧೨. ಸ್ಟಡೀಸ್ ಇನ್ ಅರ್ಲಿಕ್ವಾನ್ಸಿ ಆಫ್ ಕರ್ನಾಟಕ, ಭಟ್ ರಘುನಾಥ ಎಚ್.ಆರ್., ಪುಟ ೧೧–೧೨

೧೧೩. ಅದೇ, ಪುಟ ೩೨

೧೧೪. ಮಾರ್ಗ ೪, ಕಲಬುರ್ಗಿ ಎಮ್.ಎಮ್., ಉಡ್ಡಧ್ವಜ, ಪುಟ ೪೭೬

೧೧೫. ಅದೇ, ಪುಟ ೪೭೭

೧೧೬. ಕರ್ನಾಟಕ ಶಾಸನ, ಕಲೆ, ಭಟ್ ರಘುನಾಥ ಎಚ್.ಆರ್., ಪುಟ ೧೦೦–೧೦೧

೧೧೭. ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಗೌಡ ಜಯಪ್ಪ ಡಿ.ಎಸ್., ಪುಟ ೧೦೪

೧೧೮. ದಕ್ಷಿಣ ಭಾರತದ ಇತಿಹಾಸ, ಷೇಕ್ ಅಲಿ ಬಿ., ರಂಗಸ್ವಾಮಯ್ಯ ಜಿ.ಆರ್., ಪುಟ ೫೮

೧೧೯. ಅದೇ, ಪುಟ ೫೮–೫೯

೧೨೦. ಮಾರ್ಗ೪, ಕಲಬುರ್ಗಿ ಎಮ್.ಎಮ್., ಉಡ್ಡಧ್ವಜ, ಪುಟ ೪೭೭

೧೨೧. ಅದೇ, ಪುಟ ೪೭೮

೧೨೨. ಲೋಕಲ್ ಬಾಡಿಸ್ ಇನ್ ಮಿಡಿವಲ್ ಸೌಥ ಇಂಡಿಯಾ, ದೀಕ್ಷಿತ್ ಜಿ.ಎಸ್., ಪುಟ ೨೦

೧೨೩. ಸೋಸಿಯಲ್ ಆಂಡ್ ಎಕನಾಮಿಕಲ್ ಕಂಡಿಷನ್ ಆಫ್ ಕರ್ನಾಟಕ, ಎ.ಡಿ. ೪೦೦-೧೦೦೦ ಕೃಷ್ಣಪ್ಪ ಎಮ್.ವಿ., ಪುಟ ೧೪೨

೧೨೪. ಅದೇ, ಪುಟ ೧೪೩

೧೨೫. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಹಿರೇಮಠ ಬಿ.ಆರ್., ಪುಟ ೬೭-೬೮

೧೨೬. ಅದೇ, ಪುಟ ೧೨೨

೧೨೭. ಅದೇ, ಪುಟ ೧೨೩

೧೨೮. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೂರ್ತಿ ಚಿದಾನಂದ ಎಮ್., ಪುಟ ೪೨೩

೧೨೯. ಅದೇ, ಪುಟ ೪೨೩

೧೩೦. ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಹಿರೇಮಠ ಬಿ.ಆರ್., ಪುಟ ೬೬

೧೩೧. ಅದೇ, ಪುಟ ೬೬-೬೭

೧೩೨. ಅದೇ, ಪುಟ ೬೬

೧೩೩. ಅದೇ, ಪುಟ ೬೬

೧೩೪. ಸೌ.ಇ.ಇ., ಸಂ VII ನಂ ೨೪೭

೧೩೫. ತುಳುನಾಡಿನ ಶಾಸನಗಳು (ಸಂ) ೧ ಸಂ ರಮೇಶ ಕೆ.ವಿ., ಪುಟ ೯೪-೯೮

೧೩೬. ಸೌ.ಇ.ಇ., ಸಂ VII ನಂ ೨೧೩

೧೩೭. ಅದೇ, ನಂ ೨೧೩

೧೩೮. ಲೋಕಲ್ ಬಾಡಿಸ್ ಇನ್ ಮಿಡಿವಲ್ ಸೌಥ ಇಂಡಿಯಾ, ದೀಕ್ಷಿತ್ ಜಿ.ಎಸ್., ಪುಟ ೩೮

೧೩೯. ಶಾಸನಗಳಲ್ಲಿ ಕರ್ನಾಟಕ ವರ್ತಕರು, ಹಿರೇಮಠ ಬಿ.ಆರ್., ಪುಟ ೪೯

೧೪೦. ಲೋಕಲ್ ಬಾಡಿಸ್ ಇನ್ ಮಿಡಿವಲ್ ಸೌಥ ಇಂಡಿಯಾ, ದೀಕ್ಷಿತ್ ಜಿ.ಎಸ್., ಪುಟ ೩೮

೧೪೧. ಶಾಸನಗಳಲ್ಲಿ ಕರ್ನಾಟಕ ವರ್ತಕರು, ಹಿರೇಮಠ ಬಿ.ಆರ್., ಪುಟ ೪೯

೧೪೨. ಅದೇ, ಪುಟ ೫೮

೧೪೩. ಅದೇ, ಪುಟ ೫೯,೬೦,೬೧

೧೪೪. ಅದೇ, ಪುಟ ೫೯

೧೪೫. ಎ.ಕೆ, ಸಂ.VII ನಂ ೧೧೮ ಶಿಕಾರಿಪುರ ಶಾಸನ, ಕ್ರಿ.ಶ ೧೦೫೪

೧೪೬. ಶಾಸನಗಳಲ್ಲಿ ಕರ್ನಾಟಕ ವರ್ತಕರು, ಹಿರೇಮಠ ಬಿ.ಆರ್., ಪುಟ ೬೦

೧೪೭. ಅದೇ, ಪುಟ ೬೧

೧೪೮. ಹಾನಗಲ್ಲ ಕದಂಬರು, ಪಾವಟೆ ಚೆನ್ನಕ್ಕ, ಪುಟ ೧೨೫

೧೪೯. ಕೆ.ಐ. ನಂ ೧೯, ತಿಳವಳ್ಳಿ, ಹಾನಗಲ್ಲು, ಕ್ರಿ.ಶ ೧೧೨೧

೧೫೦. ಹಾನಗಲ್ಲ ಕದಂಬರು, ಪಾವಟೆ ಚೆನ್ನಕ್ಕ, ಪುಟ ೧೨೫

೧೫೧. ಐ.ಎ., XVI ನಂ ೧೬, ಪುಟ ೧೧, ಹೊಟ್ಟೂರು, ಕ್ರಿ.ಶ ೧೦೬೭

೧೫೨. ಎಸ್.ಐ.ಐ., ನಂ. XX ನಂ. ೮೮ ಬಾಳಂಬೀಡ, ಕ್ರಿ.ಶ ೧೧೨೩

೧೫೩. ಹಾನಗಲ್ಲ ಕದಂಬರು, ಪಾವಟೆ ಚೆನ್ನಕ್ಕ, ಪುಟ ೧೨೫

೧೫೪. ಅದೇ, ಪುಟ ೧೨೬

೧೫೫. ಅದೇ, ಪುಟ ೧೨೬

೧೫೬. ಅದೇ, ಪುಟ ೧೨೭

೧೫೭. ಅದೇ, ಪುಟ ೧೨೬

೧೫೮. ಸಾರ್ಥವಾಹ, ಮೋತಿಚಂದ್ರ, (ಅನು) ಪಾಟೀಲ ಎಚ್.ಎಸ್., ಪುಟ ೨೧೭

೧೫೯. ಪ್ರವಾಸಿಕಂಡ ಇಂಡಿಯಾ, ಸಂ.೧, ನಾಗೇಗೌಡ ಎಚ್.ಎಲ್., ಪುಟ ೬೪

೧೬೦. ಶಾಸನಗಳಲ್ಲಿ ಕರ್ನಾಟಕ ವರ್ತಕರು, ಹಿರೇಮಠ ಬಿ.ಆರ್., ಪುಟ ೧೦೨

೧೬೧. ಸೌ.ಇ.ಇ., ಸಂ VII ನಂ ೧೮೨

೧೬೨. ಅದೇ, ನಂ ೩೪೯

೧೬೩. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೮೭

೧೬೪. ಕೆ.ಇ.೧ ಪುಟ ೧೧೨–೧೧೩, ಕೈಕಿಣಿ, ಭಟ್ಕಳ, ಕ್ರಿ.ಶ ೧೪೨೭

೧೬೫. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೯೫

೧೬೬. ಕೆ.ಇ.೧ ಪುಟ ೧೧೩, ಕೈಕಿಣಿ, ಭಟ್ಕಳ, ಕ್ರಿ.ಶ ೧೪೨೭

೧೬೭. ತುಳುನಾಡಿನ ಇತಿಹಾಸ, ರಮೇಶ, ಕೆ.ವಿ, ಪುಟ ೯೩

೧೬೮. ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ವರ್ಮಾ ಶೈಲಾ ಟಿ., ಪುಟ ೧೪೩

೧೬೯. ಅದೇ, ಪುಟ ೧೪೫

೧೭೦. ಸಾರ್ಥವಾಹ, ಮೋತಿಚಂದ್ರ, (ಅನು) ಪಾಟೀಲ ಎಚ್.ಎಸ್., ಪುಟ ೨೧೮

೧೭೧. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೧೧೪

೧೭೨. ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಜಯಪ್ಪ ಗೌಡ ಡಿ.ಎಸ್., ಪುಟ ೬೩

೧೭೩. ಅದೇ, ಪುಟ ೧೧೮

೧೭೪. ಅದೇ, ಪುಟ ೧೧೮

೧೭೫. ಅದೇ, ಪುಟ ೧೧೯

೧೭೬. ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ವರ್ಮ ಶೈಲಾ ಟಿ., ಪುಟ ೬೯

೧೭೭. ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಕಾಮತ್ ಸೂರ್ಯನಾಥ ಯು., ಪುಟ ೨೦-೨೧

೧೭೮. ಕದಂಬಾಸ್ (ಸಂ) ಗೋಪಾಲ ಬಿ.ಆರ್., ತಾರಾನಾಥ ಎನ್.ಎಸ್., ಪುಟ ೮೨

೧೭೯. ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ವರ್ಮ ಶೈಲಾ ಟಿ., ಪುಟ ೧೭೩

೧೮೦. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೧೩೬

೧೮೧. ಅದೇ, ಪುಟ ೧೩೬

೧೮೨. ಸ್ಟಡೀಸ್ ಇನ್ ಅರ್ಲಿ ಕೊಯಿನ್ಸ್ ಆಫ್ ಕರ್ನಾಟಕ, ಭಟ್ ರಘುನಾಥ ಎಚ್.ಆರ್., ಪುಟ ೩೨

೧೮೩. ಕನ್ನಡ ನಾಡಿನ ಸಂಚಾರ ಸಂಪರ್ಕ, (ಸಂ) ಚಂದ್ರಶೇಖರ ಟಿ.ಆರ್., ಪುಟ ೧೦

೧೮೪. ಅದೇ, ಪುಟ ೧೧

೧೮೫. ಡಾ॥ ಬಾಬಾಸಾಹೇಬ ಅಂಬೇಡ್ಕರರ ಬರಹಗಳು ಮತ್ತು ಭಾಷಣಗಳು, ಸಂಪುಟ ೧೨, ಭಾಗ-೧, ಪ್ರಾಚೀನ ಭಾರತದ ವಾಣಿಜ್ಯ, ಪುಟ ೨೩

೧೮೬. ಅದೇ, ಪುಟ ೨೪

೧೮೭. ಅದೇ, ಪುಟ ೨೫-೨೬

೧೮೮. ಅದೇ, ಪುಟ ೨೬

೧೮೯. ಅದೇ, ಪುಟ ೨೭-೨೮

೧೯೦. ಅದೇ, ಪುಟ ೨೯

೧೯೧. ಕರ್ನಾಟಕ ಥರ್ಡ್‌ವರ್ಡ, ವಸಂತ ಮಾಧವ ಕೆ.ಜಿ., ಪುಟ ೧೭

೧೯೨. ಅದೇ, ಪುಟ ೧೯

೧೯೩. ವಸಾಹತು ಪೂರ್ವ ಕರ್ನಾಟಕದ ನಗರ ಚರಿತ್ರೆ, ಮೋಹನಕೃಷ್ಣ ರೈ. ಕೆ., ಪುಟ ೨೩

೧೯೪. ಡಿಕೆ ಎಂಡ ರಿವೈವಲ್ ಆಫ್ ಅರ್ಬನ್ ಸೆಂಟರ, ಪ್ರಸಾದ ಓಂಪ್ರಕಾಶ, ಪುಟ ೩೬

೧೯೫. ಪ್ರಾಚೀನ ಭಾರತದ ಚರಿತ್ರೆ, ಕೋಸಾಂಬಿ ಡಿ.ಡಿ., ಪುಟ ೬೪

೧೯೬. ವಸಾಹತು ಪೂರ್ವ ಕರ್ನಾಟಕದ ನಗರ ಚರಿತ್ರೆ, ಮೋಹನಕೃಷ್ಣ ರೈ. ಕೆ., ಪುಟ ೨೪

೧೯೭. ಚರಿತ್ರೆ ಕಥನ, ಮೋಹನಕೃಷ್ಣ ರೈ. ಕೆ., ಪುಟ ೧೬೭

೧೯೮. ಅದೇ, ಪುಟ ೧೬೮

೧೯೯. ಅದೇ, ಪುಟ ೧೫೩

೨೦೦. ಡಿಕೆ ಎಂಡ ರಿವೈವಲ್ ಆಫ್ ಅರ್ಬನ್ ಸೆಂಟರ, ಪ್ರಸಾದ ಓಂಪ್ರಕಾಶ, ಪುಟ ೩೬

೨೦೧. ಅದೇ, ಪುಟ ೨೯

೨೦೨. ಪ್ರಾಚೀನ ಭಾರತ, ಶರ್ಮಾ ಆರ್.ಎಸ್., ಪುಟ ೧೧೭

೨೦೩. ಕೂಲಿ, ಬೆಲೆ ಮತ್ತು ಲಾಭ, ಮಾರ್ಕ್ಸ್, ಪುಟ ೩೦

೨೦೪. ಇತಿಹಾಸದಲ್ಲಿ ವಿಜ್ಞಾನ, ಬರ್ನಾಲ್ ಜೆ.ಡಿ., (ಸಂ) ೧, ಪುಟ ೨೧೨

೨೦೫. ಭಾರತದ ಇತಿಹಾಸ, ಅಂತೋನೋವ ಕೆ., ಬೊಂಗಾರ್ಡ ಲೇವಿನ್ ಈ., ಪುಟ ೨೨೦

೨೦೬. ನಮ್ಮ ಪ್ರಾಚ್ಯೆಪರಂಪರೆ ನಾಗರಿಕತೆಯ ಕತೆ, ಡ್ಯೂರಾಂಟ ವಿಲ್., (ಸಂ) ೧ ಪುಟ ೪೬೧

೨೦೭. ಅದೇ, ಪುಟ ೪೬೧

೨೦೮. ಅದೇ, ಪುಟ ೪೬೨

೨೦೯. ಅದೇ, ಪುಟ ೪೬೫

೨೧೦. ಕ್ಯಾಪಿಟಲ್, ಮಾರ್ಕ್ಸ್, (ಸಂ) ೧, ಪುಟ ೧೧-೧೨

೨೧೧. ಪ್ರಾಚೀನ ಭಾರತ, ಶರ್ಮಾ,ಆರ್.ಎಸ್., ಪುಟ ೧೮೬

೨೧೨. ಅದೇ, ಪುಟ ೧೮೬

೨೧೩. ತುಳುನಾಡಿನ ಶಾಸನಗಳು, ರಮೇಶ ಕೆ.ವಿ., ಪುಟ ೨೯-೩೦

೨೧೪. ಅದೇ, ಪುಟ ೩೩

೨೧೫. ಸಾರ್ಥವಾಹ, ಮೋತಿಚಂದ್ರ ಪುಟ ೨೪೭

೨೧೬. ಮಾರ್ಕ್ಸ್‌ವಾದಿ ತತ್ವಶಾಸ್ತ್ರ ಮತ್ತು ರಾಜಕೀಯ ಅರ್ಥಶಾಸ್ತ್ರ, ಸಿ.ಪಿ.ಎಂ., ಕರ್ನಾಟಕ ರಾಜ್ಯ ಸಮಿತಿ, ಶಿಕ್ಷಣಮಾಲೆ ೧, ಪುಟ ೨೪

೨೧೭. ಅದೇ, ಪುಟ ೨೮

೨೧೮. ಇತಿಹಾಸದಲ್ಲಿ ವಿಜ್ಞಾನ, ಬರ್ನಾಲ್ ಜೆ.ಡಿ., (ಸಂ) ೪, ಪುಟ ೧೨೩೪

೨೧೯. ತುಳುನಾಡಿನ ಸ್ಥಳನಾಮಗಳ ಅಧ್ಯಯನ, ಮಣಿಪಾಲ ಆರ್.ಕೆ., ಪುಟ ೩೬

೨೨೦. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೩೮

೨೨೧. ಅದೇ, ಪುಟ ೩೯

೨೨೨. ಅದೇ, ಪುಟ ೩೦

೨೨೩. ದಕ್ಷಿಣ ಕನ್ನಡ ಜಿಲ್ಲೆಯ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ವರ್ಮ ಶೈಲಾ ಟಿ., ಪುಟ ೬೭

೨೨೪. ಅದೇ, ಪುಟ ೬೬

೨೨೫. ಅದೇ, ಪುಟ ೬೭

೨೨೬. ಅದೇ, ಪುಟ ೬೮

೨೨೭. ಅದೇ, ಪುಟ ೭೦

೨೨೮. ಅದೇ, ಪುಟ ೭೧

೨೨೯. ಕಾರವಾರ ಜಿಲ್ಲೆಯ ಶಾಸನಗಳು, ಗುರವ ಆರ್.ಎನ್., ಪುಟ ೪

೨೩೦. ಅದೇ, ಪುಟ ೬

೨೩೧. ಅದೇ, ಪುಟ ೧೨

೨೩೨. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಚಿದಾನಂದ ಮೂರ್ತಿ ಎಂ., ಪುಟ ೨೩೦

೨೩೩. ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ವರ್ಮಾ ಶೈಲಾ ಟಿ., ಪುಟ ೧೯೭

೨೩೪. ಅದೇ, ಪುಟ ೨೨೫

೨೩೫. ಅದೇ, ಪುಟ ೨೨೭

೨೩೬. ಕಾರವಾರ ಜಿಲ್ಲೆಯ ಶಾಸನಗಳು, ಗುರವ ಆರ್.ಎನ್., ಪುಟ ೮

೨೩೭. ಅದೇ, ಪುಟ ೩೧

೨೩೮. ಅದೇ, ಪುಟ ೩೧

೨೩೯. ಅದೇ, ಪುಟ ೩೭

೨೪೦. ಅದೇ, ಪುಟ ೧೮

೨೪೧. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಚಿದಾನಂದ ಮೂರ್ತಿ ಎಂ., ಪುಟ ೬೨

೨೪೨. ಕಾರವಾರ ಜಿಲ್ಲೆಯ ಶಾಸನಗಳು, ಗುರವ ಆರ್.ಎನ್., ಪುಟ ೧೮

೨೪೩. ಹಾನಗಲ್ಲ ಕದಂಬರು, ಪಾವಟೆ ಚೆನ್ನಕ್ಕ, ಪುಟ ೯೭

೨೪೪. ಕರ್ನಾಟಕದ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಚಿದಾನಂದಮೂರ್ತಿ ಎಂ., ಪುಟ ೬೩

೨೪೫. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೨೦

೨೪೬. ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಕಾಮತ್ ಸೂರ್ಯನಾಥ ಯು., ಪುಟ ೫೮

೨೪೭. ಶಿಸುಗಲಿ ಪಾಂಡ್ಯರು ಹಾಗೂ ಚಂದಾವರ ಕಾದಂಬರು, ಗಣಪತಿ ಗೌಡ ಎಸ್., ಪುಟ ೬೪

೨೪೮. ಅದೇ, ಪುಟ ೬೪

೨೪೯. ತುಳುನಾಡಿನ ಜೈನಧರ್ಮ, ಶೆಟ್ಟಿ ಎಸ್.ಡಿ., ಪುಟ ೨೫೪

೨೫೦. ಅದೇ, ಪುಟ ೨೫೫

೨೫೧. ಬಸರೂರು ಒಂದು ಸಾಮಾಜಿಕ ಅಧ್ಯಯನ, ಭಟ್ಟ ವಾದಿರಾಜ್ ಕಾನರಾಡಿ, ಪುಟ ೧೨

೨೫೨. ಕಾರ್ಕಳ ಒಂದು ಪ್ರಾದೇಶಿಕ ಅಧ್ಯಯನ, ಭಟ್ ಎಲ್.ಜಿ., ಪುಟ ೯೦–೯೧

೨೫೩. ಸೋಶಿಯಲ್ ಎಂಡ್ ಎಕೊನೊಮಿಕಲ್ ಕಂಡಿಷನ್ ಆಫ್ ಕರ್ನಾಟಕ, ಕ್ರಿ.ಶ. ೪೦೦–೧೦೦೦, ಕೃಷ್ಣಪ್ಪ ಎಂ.ವಿ., ಪುಟ ೧೩೫–೧೩೬

೨೫೪. ತುಳುನಾಡಿನ ಇತಿಹಾಸ, ರಮೇಶ ಕೆ.ವಿ., ಪುಟ ೬೪

೨೫೫. ಅದೇ, ಪುಟ ೪೪

೨೫೬. ಅದೇ, ಪುಟ ೪೪

೨೫೭. ತುಳುನಾಡಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ವರ್ಮಾ ಶೈಲಾ ಟಿ., ಪುಟ ೧೫೯

೨೫೮. ಅದೇ, ಪುಟ ೩೯–೪೦

೨೫೯. ಅದೇ, ಪುಟ ೪೧–೪೨

ಅಧ್ಯಾಯ: ಏಳು

ಸಮಾರೋಪ

ಅಧ್ಯಾಯ : ಏಳು
ಸಮಾರೋಪ

ಕರ್ನಾಟಕದ ಬಂದರುಗಳ ಮೂಲಕ ಉಂಟಾಗಿರುವ ಆರ್ಥಿಕ ಮತ್ತು ಸಾಂಸ್ಕೃತಿಕ ಬದುಕಿನ ಬದಲಾವಣೆಯ ವಿವಿಧ ಮಜಲುಗಳನ್ನು ಒಂದೆಡೆ ಸೇರಿಸಿ ಜನಮುಖಿ ನೆಲೆಯಲ್ಲಿ ವಿಶ್ಲೇಷಿಸುವುದು ಈ ಅಧ್ಯಯನದ ಉದ್ದೇಶವಾಗಿತ್ತು. ವಿವಿಧ ಆರು ಅಧ್ಯಾಯಗಳಲ್ಲಿ ಅವುಗಳನ್ನು ನೋಡಲಾಗಿದೆ. ಕನ್ನಡ ಕರಾವಳಿಯ ಪ್ರಮುಖ ಒಂಭತ್ತು ಬಂದರುಗಳು ರಾಜ್ಯದ ತೀರ ಪ್ರದೇಶದ ಉತ್ತರದ ತುದಿಯಿಂದ ದಕ್ಷಿಣದ ತುದಿಯವರೆಗೆ ಹಬ್ಬಿನಿಂತಿವೆ. ಪಶ್ಚಿಮ ತೀರದಲ್ಲಿರುವ ಈ ಬಂದರುಗಳು ಪ್ರಾಚೀನ ಜಗತ್ತಿನ ಪ್ರಮುಖ ನಾಗರಿಕತೆಗಳಾದ ಗ್ರೀಕ್, ರೋಮ್, ಈಜಿಪ್ಟ್ ಹಾಗೂ ಪರ್ಶಿಯಾ, ಅರೇಬಿಯಾದೊಂದಿಗೆ ನೇರ ಸಂಪರ್ಕದ ಕಡಲು ಮಾರ್ಗ ಹೊಂದಿದ್ದವು. ಅಂತೆಯೆ ಚೀನಾ ಹಾಗೂ ಆಗ್ನೇಯ ಏಷ್ಯಾದ ದ್ವೀಪ ಹಾಗೂ ದ್ವೀಪಕಲ್ಪ ರಾಷ್ಟ್ರಗಳಿಗೆ ಮತ್ತು ಶ್ರೀಲಂಕಾಕ್ಕೆ ಸಂಪರ್ಕ ಪಡೆದಿದ್ದವು. ಪಶ್ಚಿಮ ಘಟ್ಟದ ಬುಡದಲ್ಲಿ ನಿರ್ಮಿತವಾದ ನೈಸರ್ಗಿಕ ಬಂದರುಗಳು ಸ್ಥಳೀಯರ ಆ ಮೂಲಕ ಸಮಗ್ರ ನಾಡಿನ ಜೀವನ ಪದ್ಧತಿಯನ್ನೇ ಬದಲಿಸಿದವು. ಈ ಬಂದರುಗಳ ಮೂಲಕ ತೇಲಿದ ನೌಕೆಗಳು ಹಿಂದೂ ಮಹಾಸಾಗರ ಹಾಗೂ ಅರಬ್ಬೀ ಸಮುದ್ರವನ್ನು ಸರೋವರಗಳಾಗಿ ಮಾರ್ಪಡಿಸಿದವು. ಆರಂಭದಲ್ಲಿ ಪಶ್ಚಿಮ ಘಟ್ಟಗಳಲ್ಲಿ ದೊರಕುವ ಮಸಾಲೆ ದಿನಿಸು, ಮರಮಟ್ಟುಗಳ ವ್ಯಾಪಾರಕ್ಕೆ ಮೀಸಲಾಗಿದ್ದದ್ದು ಮುಂದೆ ದೊರೆಯುವ ಎಲ್ಲ ವಿಶಿಷ್ಠ ವಸ್ತುಗಳ ವ್ಯಾಪಾರಕ್ಕೆ ತೆರೆದು ಕೊಂಡಿತು. ಮುಂದುವರಿದು ಗುಲಾಮರ ವ್ಯಾಪಾರದ ವರೆಗೂ ಸಾಗಿತು. ಇವುಗಳೆಲ್ಲ ಆರಂಭದ ವ್ಯಾಪಾರಕ್ಕೆ ಸಂಬಂಧಿಸಿದರೆ, ಇದಕ್ಕೂ ಹಿಂದಿನ, ಚರಿತ್ರೆಯ ಮುಸುಕು ಮುಂಜಾವಿನ, ಶಿಲಾಯುಗಗಳ ಕಾಲದ ಸಂಪರ್ಕಗಳು ಯಾವ ಭೇದವನ್ನೂ ಮಾಡದೆ ಜನಜೀವನಕ್ಕೆ ಅನೇಕ ಬಗೆಯ ಕೊಡುಗೆಗಳನ್ನು ನೀಡಿದವು. ಹಾಗೆ ವಿವಿಧೆಡೆಯಿಂದ ಬಂದ ಅನೇಕರು ಇಲ್ಲಿಯೇ ಉಳಿದರು. ಇಲ್ಲಿಯವರೇ ಆಗಿ ಬಿಟ್ಟರು.

ಇತಿಹಾಸದ ಕಾಲಘಟ್ಟದಲ್ಲಿ ನಡೆದು ಹೋದ ಘಟನೆಗಳನ್ನು ಐತಿಹಾಸಿಕ ಭೌತಿಕತೆ ಎಂಬ ಕಾರ್ಲ್‌ಮಾರ್ಕ್ಸ್ ಪ್ರಣೀತ ಚಿಂತನೆಯ ಮೂಸೆಯಲ್ಲಿಟ್ಟು ವಿಶ್ಲೇಷಿಸಿದರೆ ಸತ್ಯವು ಗೋಚರಿಸುತ್ತದೆ. ಇದುವರೆಗಿನ ಅಧ್ಯಯನಗಳಲ್ಲಿ ಹೆಚ್ಚಿನವು ರಾಜಾಶಾಹಿಯ ಉದಾರ ಕೊಡುಗೆ, ಸಾಮ್ರಾಜ್ಯ ವಿಸ್ತರಣೆಯ ಯುದ್ಧ ಕುತೂಹಲ ಮತ್ತು ಕೊನೆಯಲ್ಲಿ ನೀಡುವ ಆರ್ಥಿಕ ಕೊಡುಗೆಗಳು ಹಾಗೂ ಸಾಮಾಜಿಕ ಜೀವನವೆಂಬ ಕಿರು ವಿವರಗಳಿಗೆ ಅಂತ್ಯಗೊಂಡಿವೆ. ಆದರೆ ಬಂದರುಗಳ ಚರಿತ್ರೆಯನ್ನು ಅಧ್ಯಯನ ನಡೆಸುವಾಗ ಅಂದಿನ ಘಟನೆಗಳ ಕಾರ್ಯ-ಕಾರಣಗಳನ್ನು ತಿಳಿಯಬೇಕು. ಅಂಥಹ ಅಧ್ಯಯನ ಮಾತ್ರ ಇಂದಿನ ಭ್ರಮಾತ್ಮಕ ನಂಬಿಕೆ ಬಿತ್ತುವ ಕೋಮುವಾದ, ಜನಾಂಗವಾದ ಮತ್ತು

ತಲ್ಲಣಿಸುತ್ತಾ ಸಾವಿನತ್ತ ಕೊಂಡೊಯ್ಯುವ ಬಡತನಕ್ಕೆ ಏನು? ಹೇಗೆ? ಎಂಬ ಪ್ರಶ್ನೆಗಳನ್ನು ಎತ್ತಿ ಉತ್ತರವನ್ನು ನೀಡುತ್ತದೆ. ಅಂದಿನ ಭೌತಿಕ ಘಟನೆಗಳು ಅರ್ಥವತ್ತಾಗಿ ಅನ್ವಯಿಸಬೇಕಾದರೆ ಹಿಂದಿನ ಘಟನೆಗಳನ್ನು ಕೇವಲ ಭ್ರಮಾತ್ಮಕವಾದ ಪಾವಿತ್ರ್ಯದ ದೃಷ್ಟಿಯಿಂದ ನೋಡಬಾರದು. ಒಂದು ವೇಳೆ ಹಾಗೆ ನೋಡಿದಲ್ಲಿ ಅಲ್ಲಿ ದುಷ್ಟರನ್ನು ಶಿಕ್ಷಿಸುವ, ಪ್ರಜೆಗಳನ್ನು ತನ್ನ ಕರುಳ ಕುಡಿಗಳಂತೆ ಕಾಣುವವರು ಮಾತ್ರ ಇರುತ್ತಾರೆ. ಪ್ರಜೆಗಳೆಲ್ಲಾ ಮುತ್ತು-ರತ್ನಗಳನ್ನು ಮಾರುವ ಬೀದಿಗಳಲ್ಲೇ ಓಡಾಡುವುದು, ಸುರಕ್ಷಿತವಾದ ಮನೆಗಳಲ್ಲೇ ವಾಸಮಾಡುವುದು ಮತ್ತು ಸಂಸ್ಕೃತ ಜನ್ಯ ಮಂತ್ರಗಳನ್ನು ಸದಾ ಕೇಳುತ್ತಿರುವಂತೆ, ವರ್ಷದ ೩೬೫ ದಿನವೂ ಒಂದೊಂದು ಭವ್ಯ ದೇವಾಲಯಗಳಿಗೆ ಭೇಟಿ ನೀಡುವುದು ಕಂಡುಬರುತ್ತದೆ. ಇಂಥಹ ವೈಭವದ, ಭಾವನಾತ್ಮಕ ಊಹೆಗಳನ್ನೆ ದೇಶಪ್ರೇಮ ಎಂದು ಬಿಂಬಿಸುವ ಚಿಂತನೆಗಳನ್ನು ಬದಿಗಿಟ್ಟು ನೋಡಿದಾದ ಸತ್ಯ ತಿಳಿಯುತ್ತದೆ. ಹದಿನಾರನೇ ಶತಮಾನಕ್ಕೆ ವ್ಯಾಪಾರಕ್ಕೆಂದು, ಅಂದಿಗೆ ಮರೆತು ಹೋದ ಮಾರ್ಗಗಳನ್ನು ಹೊಸದಾಗಿ ಕಂಡುಹಿಡಿದು ಮತ್ತೆ ಬಂದ ಪಾಶ್ಚಾತ್ಯ ವರ್ತಕರು, ಭರತಖಂಡದಲ್ಲೇ ಉಳಿದು, ಇಲ್ಲಿಯ ಅನೈಕ್ಯತೆ, ತಾರತಮ್ಯ ಜೀವನ ಪದ್ಧತಿಯನ್ನು ತಮಗೆ ಬೇಕಾದಂತೆ ಬಳಸಿಕೊಂಡು ವಸಾಹತುಗಳನ್ನು ರಚಿಸಿಕೊಂಡು ಶೋಷಣೆ ನಡೆಸಿದ್ದರ ಹಿನ್ನೆಲೆ ಅರ್ಥವಾಗುತ್ತದೆ.

ಉತ್ಪಾದನೆ ಬೆಳವಣಿಗೆಯ ಕಾಲಘಟ್ಟವನ್ನು ಉತ್ಪಾದಕ ಶಕ್ತಿಗಳು ಹಾಗೂ ಉತ್ಪಾದಕರ ನಡುವಿನ ಸಂಬಂಧದ ಹಿನ್ನೆಲೆಯಲ್ಲಿ ಅರ್ಥೈಸುವ ಪ್ರಯತ್ನ ಇಲ್ಲಿ ಮಾಡಲಾಗಿದೆ. ಆಹಾರೇತರ ಜೀವನಾಶ್ಯಕ ವಸ್ತುಗಳನ್ನು ನಿರ್ಮಿಸುವ ಸಾಮರ್ಥ್ಯ ಬೆಳೆದಂತೆ ಸಾಮಾಜಿಕ ಸಂಬಂಧಗಳು ಬದಲಾದವು.

ಕರಾವಳಿಯ ಚರಿತ್ರೆಯನ್ನು ಜನಕೇಂದ್ರಿತ ಚರಿತ್ರೆಯಾಗಿ ಇಲ್ಲಿ ನೋಡಲಾಗಿದೆ. ಅಧಿಕಾರದ ಮೇಲ್ತುದಿಯಲಿದ್ದ ರಾಜಪರಿವಾರ, ಭೂಮಾಲಿಕ, ಮಾಂಡಳಿಕ ಮುಂತಾದ ಆಳುವ ವರ್ಗದಂತೆ, ಶ್ರೇಣಿಕೃತ ಸಮಾಜದಲ್ಲಿ ನಿರ್ಲಕ್ಷಕ್ಕೆ ಒಳಗಾದ ದುಡಿಯುವ ವರ್ಗದ ಕೊಡುಗೆಯೂ ಇಲ್ಲಿಯ ಸಾಮಾಜಿಕ-ಆರ್ಥಿಕ ಬೆಳವಣಿಗೆಯಲ್ಲಿ ಬಹುದೊಡ್ಡ ಕೊಡುಗೆ ನೀಡಿದೆ. ಇಲ್ಲಿ ಕರಾವಳಿಯ ಚರಿತ್ರೆಯನ್ನು ಬಹುಮುಖಿ ನೆಲೆಯಲ್ಲಿ ಜನಕೇಂದ್ರಿತ ಚರಿತ್ರೆಯೆಂದು ಭಾವಿಸಿ ನೋಡಲಾಗಿದೆ. ಬದಲಾದ ಚರಿತ್ರೆಯ ಅಧ್ಯಯನದ ಸೈದಾಂತಿಕತೆಯನ್ನು ಬಳಸಿಕೊಂಡು ಆರ್ಥಿಕ ಚರಿತ್ರೆ ರಚಿಸಲಾಗಿದೆ.

ಕಡಲೋತ್ತರ ಸಂಪರ್ಕವು ಬಹು ವಿಧದ ಕೊಡು-ಕೊಳುಗೆಯನ್ನು ಉಂಟು ಮಾಡಿತ್ತು. ಕರಾವಳಿ ಕೊಡುವಾಗ ಒಂಟಿಯಾಗಿದ್ದರೆ, ಪಡೆಯುವಾಗ ಹಲವರಿಂದ ಪಡೆಯಿತು. ಇದರಿಂದ ವಿವಿಧ ರೀತಿಯ ಕೊಡುಗೆಗಳು ಕರಾವಳಿಗೆ ದೊರೆಯಿತು.

ಕಬ್ಬಿಣಯುಗದ ಕಾಲಕ್ಕೆ ಸೇರಿದ ಸಂಸ್ಕೃತಿಯ ನೆಲೆಗಳಲ್ಲಿ ಮುಖ್ಯವಾಗಿ ಕಾವೇರಿ ಬಯಲಿನಲ್ಲಿ ಕಂಡು ಬರುವ ತಲೆಯಾಸರೆಗಳು ಈಜಿಪ್ಟ್‌ನ ಕೊಡುಗೆಯೆಂದು ಊಹಿಸಲಾಗಿದೆ. ಅಲ್ಲದೇ ಹಲವಾರು ಪ್ರಾಕೃತಿಕ ಕಾರಣಗಳಿಂದ ಜನಾಂಗಗಳು ಬೇರೆಡೆಯಿಂದ ವಲಸೆ ಬಂದಿರಲೂ ಬಹುದು. ಈಜಿಪ್ಟ್ ದೊರೆಗಳ ಕಡಲೋತ್ತರ ಯಾನ ಮತ್ತು ದಾಳಿಯ ಸಂದರ್ಭದಲ್ಲಿ ಈ ಪದ್ಧತಿ ಬಂದು ಸೇರಿರಬಹುದು ಎಂದು ತಿಳಿಯಲಾಗಿದ್ದು, ಈಜಿಪ್ಟ್‌ನ ದಾಳಿಯ ಸಮಯದಲ್ಲಿ ಪೂರ್ವದೇಶದ "ಪುನ್ಟ್" ಎಂಬ ದೇಶ ಸೇರಿರುವ ವಿಚಾರ ತಿಳಿಯುತ್ತದೆ. ಇದು ಕರ್ನಾಟಕದ ಪುನ್ನಾಟವಾಗಿರುವ ಸಾದ್ಯತೆಗಳಿವೆ. ಇಲ್ಲಿಯ ಹಲವು ಬೆಲೆಬಾಳುವ ವಸ್ತುಗಳು ಐರೋಪ್ಯ ದೇಶಗಳಿಗೆ ಸಾಗಾಟವಾಗುತ್ತಿತ್ತು. ಹೀಗೆ ಆರಂಭವಾಗಿರುವ ಸಂಪರ್ಕ ಮುಂದೆ ಕರಾವಳಿಯ ಬಂದರೊಂದಿಗೆ ನಿರಂತರ ವ್ಯಾಪಾರಿ ಸಂಪರ್ಕವಾಗಿ ಬದಲಾಯಿತು. ಇಲ್ಲಿ ಹೊರಗಿನಿಂದ ಬಂದ ಜನಾಂಗಗಳನ್ನು ಈಗಿರುವ ಜನಾಂಗಗಳಲ್ಲಿ ಹುಡುಕುವುದು ಸಾಧ್ಯವಿಲ್ಲ. ಅವುಗಳೆಲ್ಲ ಸ್ಥಳೀಯ ಜನಜೀವನದೊಂದಿಗೆ ಹಾಗೂ ಆ ತರುವಾಯ ಭೂಮಾರ್ಗವಾಗಿ ಉತ್ತರದೆಡೆಯಿಂದ ಬಂದವರೊಂದಿಗೆ ಲೀನವಾಗಿವೆ. ಅವುಗಳೆಲ್ಲಾ ಸೇರಿ ಮಿಶ್ರ ಸಾಮಾಜಿಕ-ಧಾರ್ಮಿಕ, ರೂಢಿಗಳೊಂದಿಗೆ ಜೀವನ ಪದ್ಧತಿಯನ್ನು ರೂಪಿಸಿಕೊಂಡಿವೆ.

ಈ ಅಧ್ಯಯನದಲ್ಲಿ ಚಾರಿತ್ರಿಕವಾದ ಘಟನೆಗಳನ್ನು ಬಿಡಿಬಿಡಿಯಾಗಿ ನೋಡದೆ ಸಮಗ್ರವಾಗಿ ವಂಶಾಡಳಿತವಾಗಿ ನೋಡಲಾಗಿದೆ. ಮಯೂರವರ್ಮ, ಕಾಕುಸ್ಥವರ್ಮ, ೨ನೇ ಆಲೂಪೇಂದ್ರ, ಚಿತ್ರಸೇನರಂಥಹ ಅರಸರು ತಮ್ಮ ವೈಯಕ್ತಿಕ ವರ್ಚಸ್ಸು ಬಿಟ್ಟು ಹೋಗಿದ್ದರೂ, ಅವರೆಲ್ಲ ಆ ವಂಶಗಳಲ್ಲಿ ಪಟ್ಟಕ್ಕೆ ಬಂದ ನಿಮಿತ್ತರು ಮಾತ್ರವಾಗಿದ್ದರು. ಆದ್ದರಿಂದ ಸಮಗ್ರ ವಂಶಾಡಳಿತದಲ್ಲಿ ಉಂಟಾದ ಆರ್ಥಿಕ ಬದಲಾವಣೆಗಳು ಅಂದರೆ ಅಂದು ಉಂಟಾದ ಕೃಷಿ, ಕೈಗಾರಿಕೆಗಳು, ನಗರಗಳು, ಸಂತೆ, ಪೇಟೆಗಳು, ಅಂದು ವಿಧಿಸಿದ ತೆರಿಗೆ-ಸುಂಕ, ಆಡಳಿತದ ರೀತಿ, ನಿರ್ಮಿಸಿಕೊಂಡ ಸಾಮಾಜಿಕ ಆರ್ಥಿಕ ಸಂಘಟನೆಗಳು ಮತ್ತು ಅವು ನಿರ್ವಹಿಸಿದ ಸಾಮಾಜಿಕ-ಧಾರ್ಮಿಕ ಪಾತ್ರಗಳನ್ನು ದಾಖಲಿಸಲಾಗಿದೆ.

ಕದಂಬರ ಕುರಿತ ಪ್ರಥಮ ಉಲ್ಲೇಖಗಳು ಶಂಗಂ ಸಾಹಿತ್ಯದಲ್ಲಿ ಸಿಗುತ್ತವೆ. ಇವರು ಕರ್ನಾಟಕದ ಉತ್ತರದ ಬಂದರುಗಳ ಹಿನ್ನಾಡಿನಲ್ಲಿ, ಬನವಾಸಿಯಲ್ಲಿ ರಾಜ್ಯಸ್ಥಾಪಿಸುವ ಪೂರ್ವದ ೫೦೦ ವರ್ಷಗಳ ಹಿಂದೆಯೇ ಕಂಡುಬರುತ್ತಾರೆ. ಕಡಲ ಮೂಲಕ ಉಂಟಾಗುತ್ತಿದ್ದ ವ್ಯಾಪಾರ ವ್ಯವಹಾರಗಳೆ ಇವರನ್ನು ಸ್ವತಂತ್ರ ಸಾಮ್ರಾಜ್ಯ ನಿರ್ಮಿಸುವಂತೆ ಪ್ರಚೋದಿಸಿತ್ತು. ತರುವಾಯದ ಈ ಪ್ರದೇಶ ಆಳಿದ ಎಲ್ಲ ರಾಜ ಮನೆತನಗಳು ಬಂದರುಗಳನ್ನೆ ತಮ್ಮ ಸಂಪತ್ ಸಮೃದ್ಧಿಯ ಮಾರ್ಗಗಳಾಗಿಸಿಕೊಂಡವು. ಕದಂಬರು ಬನವಾಸಿಯಲ್ಲಿ ಆಳುವ ಕಾಲಕ್ಕಿಂತ ಸ್ವಲ್ಪ ಹಿಂದೆಯೇ

ಶಾತವಾಹನರು ಈ ಬಂದರುಗಳ ಮಹತ್ವ ಅರಿತಿದ್ದರು. ಅವರೂ ತಾವೇ ಅಥವಾ ತಮ್ಮ ಸಾಮಂತರುಗಳಿಂದ ಬಂದರುಗಳನ್ನು ವಶಪಡಿಸಿಕೊಂಡಿದ್ದರು. ಮುಂದಿನ ರಾಜವಂಶಗಳು ಇದೇ ಮಾರ್ಗವನ್ನು ಅನುಸರಿಸಿದವು. ಆದ್ದರಿಂದಲೇ ಕರಾವಳಿಯ ಒಳಹೊರಗನ್ನು ಬಲ್ಲ, ಬೃಹತ್‌ನೌಕೆಗಳನ್ನು ನಿರ್ಮಿಸಬಲ್ಲ, ಕಡಲಗಾಳಿ, ಉತ್ಪಾತ ಹಾಗೂ ಒಳಸುಳಿಗಳ ಅರಿವು ಹೊಂದಿದ್ದ ಭೋಜರು, ಕೇಕೆಯರು, ಪಾಂಡ್ಯರು, ಆಳುಪರು, ಹಲವು ವಂಶಗಳಲ್ಲಿ ವಿಭಾಗಿತವಾಗಿದ್ದ ಕಾದಂಬರು, ಸಾಳ್ವರು, ಕೆಲ್ಲರು, ಸಾವಂತರೇ ಮುಂತಾದ ಸಾಮಂತರು ಈ ಪ್ರದೇಶದಲ್ಲಿ ಮೆರೆದರು. ಕೇವಲ ಹೆಸರಿಗೆ ಸಾಮಂತರೆನಿಸಿಕೊಂಡು, ಚಕ್ರಾಧಿಪತ್ಯದ ಯಾವುದೆ ಭೀಕರ ನಿಯಂತ್ರಣಗಳಿಗೆ ಒಳಗಾಗದೇ ಈ ಪ್ರದೇಶಗಳಲ್ಲಿ ಹಾಯಾಗಿ ಉಳಿದರು.

ಕಡಲೋತ್ತರ ವ್ಯಾಪಾರ ಭರದಿಂದ ಸಾಗಿದಂತೆ ಕೃಷಿಯು ಚಿಗುರಿಕೊಂಡಿತು. ನೈಸರ್ಗಿಕವಾಗಿ ದೊರೆಯುತ್ತಿದ್ದ ವನೋತ್ಪನ್ನಗಳೊಂದಿಗೆ ಕೃಷಿ ಉತ್ಪನ್ನಗಳು, ಸಿದ್ಧವಸ್ತುಗಳು, ಕಡಲೋತ್ಪನ್ನಗಳು ವಿದೇಶದೆಡೆಗೆ ಹೋದವು. ಸ್ಥಳೀಯ ಅಪರೂಪದ ಪ್ರಾಣಿ, ಪಕ್ಷಿಗಳೂ ಅವನ್ನು ಸೇರಿಕೊಂಡವು. ಇವುಗಳನ್ನೆಲ್ಲ ನಿಭಾಯಿಸಲು ವೃತ್ತಿ ಸಂಘಗಳು ಹುಟ್ಟಿಕೊಂಡವು. ಬಹುದುರ್ಗಮ ಪಶ್ಚಿಮ ಘಟ್ಟ ಹಾಗೂ ಪಶ್ಚಿಮ ಕಡಲನ್ನು ಮೊಗೆದು ತಂದ ಕರಕುಶಲಗಾರರು ತಮ್ಮದೇ ವರ್ತಕ ಶ್ರೇಣಿ ರಚಿಸಿಕೊಂಡರು. ವಿದೇಶಗಳಲ್ಲಿ ಬೆಲೆ ಬಾಳುತ್ತಿದ್ದ ವೀಳ್ಯದೆಲೆ, ಚರ್ಮದ ವಸ್ತುಗಳು, ನವೂರಾದ ಕೆತ್ತನೆಯ ಗಂಧದ ಸಾಮಾನುಗಳ, ಹತ್ತಿ ಬಟ್ಟೆ ಮತ್ತಿತರ ಉತ್ಪಾದಕರ ಶ್ರೇಣಿಗಳು ರಚನೆಗೊಂಡವು. ವ್ಯಾಪಾರವನ್ನೇ ಬದುಕಾಗಿಸಿಕೊಂಡ, ಯಾವುದೆ ಉತ್ಪಾದನೆಗಳಲ್ಲಿ ಭಾಗಿಗಳಾಗದ ಪರಾವಲಂಬಿ ಜೀವಿಗಳ ಗುಂಪುಗಳು ವಿವಿಧ ಹೆಸರುಗಳ ವರ್ತಕ ಸಂಘಗಳಿಗೆ ಜೀವ ನೀಡಿದವು. ಕೇವಲ ಲಾಭ ಒಂದನ್ನೇ ಉಸಿರಾಗಿಸಿಕೊಂಡ ಈ ಸಂಘಗಳು ವ್ಯಾಪಾರಕ್ಕಾಗಿ ಗುಂಪು ಗುಂಪಾಗಿ ಚಲಿಸತೊಡಗಿದವು. ಇವರ ಈ ವೃತ್ತಿ ಬದುಕು ಕೇವಲ ನಾಡನ್ನಲ್ಲದೆ ಪರನಾಡುಗಳಿಗೂ ವಿಸ್ತರಿಸಿತು. ನಗರಗಳಲ್ಲಿ ನಖರರು, ಕೃಷಿ ಸಂಬಂಧಿತ ಎಳಮೆಗೊಳಗಾದವರು, ಎಣ್ಣೆ ಉತ್ಪಾದಕ ತೆಲ್ಲಿಗರು, ವಿಳ್ಯೆದೆಲೆ ಸಂಗ್ರಹಿಸುವ ಉಗುರುಮುನ್ನೂರ್ವರು, ಅಂತರ್‌ರಾಜ್ಯಗಳಲ್ಲಿ ತಿರುಗುವ ಹೊರಹಿನವರು, ಅಂತರ್‌ರಾಷ್ಟ್ರೀಯರಾದ ಹಂಜಮಾನರು, ನಾನಾ ದೇಶಿಗಳು ಮುಂತಾದ ಸಂಘಗಳು ರಚಿಸಲ್ಪಟ್ಟವು. ಈ ವೃತ್ತಿ ಸಂಘಗಳು ಬೆಳೆಯುತ್ತಾ ಆಳುವ ವರ್ಗದ ಪಾತ್ರ ನಿರ್ವಹಿಸಿದವು. ತಿಳಿದೋ ತಿಳಿಯದೆಯೋ ತಿಂಗಳುಗಟ್ಟಲೆ ಒಂದೊಂದು ಸ್ಥಳದಲ್ಲಿ ವಾಸವಾಗಬೇಕಾಗಿದ್ದ ಇವರು ಸಂಸ್ಕೃತಿಕ ರಾಯಭಾರಿಗಳಾದರು. ರೀತಿ–ನೀತಿಗಳ ಪ್ರಚಾರಕರಾದರು. ಈ ವ್ಯಾಪಾರಿ ಸಂಘಗಳಿಗೆ ಯಾವುದೇ ವ್ಯಾಪ್ತಿ ಇರಲಿಲ್ಲ. ಹಾಗಾಗಿ ಇವರು ಕೈಗೊಂಡ ಆರ್ಥಿಕ ಚಟುವಟಿಕೆಗಳು ಬಂದರುಗಳ ಆರ್ಥಿಕತೆಯಾಯಿತು.

ಕರ್ನಾಟಕದಲ್ಲಿ ಅಲ್ಲಲ್ಲಿ ದೊರೆತಿರುವ ರೋಮನ್ನರ ನಾಣ್ಯಗಳು, ಬಾರ್ಕೂರಿನಿಂದ ಹಿಡಿದು ಹಲವೆಡೆ ದೊರೆತಿರುವ ರೋಮ್, ಗ್ರೀಕ್ ಹೂಜಿಗಳ ಅವಶೇಷಗಳು ಇಂಥಹ ಆರ್ಥಿಕತೆಯ ಕಾಲದ ಸ್ಥಿತಿಗತಿಯನ್ನು ಸೂಚಿಸುತ್ತವೆ. ರೋಮ್‌ನಲ್ಲಿ ಬೆಲೆ ಬಾಳುತ್ತಿದ್ದ ವಿವಿಧ ತಳಿಯ ಅಕ್ಕಿ, ಏಲಕ್ಕಿ, ತೇಗದ ಮರ, ಶ್ರೀಗಂಧದ ಮರ ಹಾಗೂ ತೆಂಗು ಮತ್ತು ಮಸಾಲೆ ದಿನಿಸುಗಳು ಬೆಳೆಯಲಾರಂಭಿಸಿದರು. ನಿಸರ್ಗದಲ್ಲಿ ದೊರೆಯುವುದು ಮಾತ್ರವಲ್ಲದೇ, ಬೇಕಿದ್ದ ಪದಾರ್ಥಗಳನ್ನು ಬೆಳೆಯುವ ಪದ್ಧತಿ ಬಂದ ಮೇಲೆ ಭೂಮಿಯ ಬೆಲೆ ಹೆಚ್ಚಾಯಿತು. ಭೂಸಾಗುವಳಿಗೆ ಗೌರವ ಪ್ರಾಪ್ತವಾಯಿತು. ಭೂ ಖರೀದಿಯ ಯುಗ ಆರಂಭವಾಯಿತು. ಕರ್ನಾಟಕದ ಮೂಲಕ ರೋಮನ್ನರಿಗೆ ತಲುಪುತಿದ್ದ ಚೀನಾದ ರೇಷ್ಮೆ ಭಾರತಕ್ಕೆ ತಲುಪಿ ಅಲ್ಲಿಂದ ಕರಾವಳಿ ಬಂದರುಗಳ ಮೂಲಕ ರೋಮ್ ತಲುಪುತ್ತಿದ್ದವು. ಇಂಥಹ ಸಂದರ್ಭದಲ್ಲಿಯೇ ಕರ್ನಾಟಕದಲ್ಲೂ ರೇಷ್ಮೆ ಬೆಳೆಯುವ ಪ್ರಯತ್ನ ಸಾಗಿತ್ತು. ಧಾರ್ಮಿಕ ಕ್ಷೇತ್ರದಲ್ಲಿಯ ಹಲವು ಬದಲಾವಣೆಗೆ ಬಂದರುಗಳು ಕಾರಣವಾದವು. ಬೌದ್ಧ ಧರ್ಮವು ಉಂಟು ಮಾಡಿದ ಸಾಮಾಜಿಕ ಪರಿವರ್ತನೆಯು, ನವಬೌದ್ಧರು ದೊಡ್ಡ ಪ್ರಮಾಣದಲ್ಲಿ ವ್ಯಾಪಾರ-ವ್ಯವಹಾರದಲ್ಲಿ ತೊಡಗಿಕೊಳ್ಳುವಂತೆ ಮಾಡಿತು. ಅಶೋಕನು ಕೈಗೊಂಡ ಬೌದ್ಧ ಪ್ರಚಾರಕ್ಕೆ ಹೊನ್ನಾವರದ ಬಂದರು ಬಹುದೊಡ್ಡ ಸಹಾಯ ಮಾಡಿತು. ಶ್ರೀಲಂಕಾದಲ್ಲಿ ಬೆಳೆದು ಬಂದ ಬೌದ್ಧ ಧರ್ಮ ಹಾಗೂ ಸಿಂಹಳ ಲಿಪಿಗೆ ಈ ಬಂದರುಗಳೆ ಕಾರಣವಾಗಿದ್ದವು. ಕಾರ್ಲೆಯಲ್ಲಿ ನಿರ್ಮಿತವಾಗಿರುವ ಸ್ಥಂಭ ಒಂದರ ನಿರ್ಮಾಣದ ಖರ್ಚು ವೆಚ್ಚವನ್ನು ಬನವಾಸಿಯ ವ್ಯಾಪಾರಿ ಕ್ಷೇತ್ರಪಾಲನು ನೀಡಿದ್ದನು. ಬೌದ್ಧ ಧರ್ಮ ಕರಾವಳಿಯಲ್ಲಿ ದೊಡ್ಡ ಮಟ್ಟದಲ್ಲಿ ಬೆಳಗಿತ್ತೆಂದು ತೋರಿಸುವ ಆರ್ಗಾದಿಂದ ಆರಂಭಿಸಿ ಮಂಗಳೂರಿನವರೆಗಿನ ಅನೇಕ ಅವಶೇಷಗಳು ಇಂದಿಗೂ ಇವೆ. ಅಂತೆಯೆ ಕಾಪಾಲಿಕರ, ಕಾಳಾಮುಖರ ಚಟುವಟಿಕೆಗಳು ಕಂಡುಬಂದಿವೆ. ಕರ್ನಾಟಕದಲ್ಲಿಯ ವಿಷ್ಣುವಿನ ಅತಿ ಪ್ರಾಚೀನ ವಿಗ್ರಹ ಕರಾವಳಿಯ ಕೊಂತಪಾಲದಲ್ಲಿ ದೊರೆತಿದೆ. ಬೌದ್ಧ ಧರ್ಮದ ಪ್ರಾಚೀನ ಬುದ್ಧನ ವಿಗ್ರಹಗಳ ಸಾಲಿನಲ್ಲಿ ನಿಲ್ಲಬಲ್ಲ ಹೈಗುಂದದ ವಿಗ್ರಹಗಳು, ಮತ್ತು ದೊಡ್ಡ ಸ್ಥೂಪ ಒಂದರ ಅವಶೇಷಗಳು ಕಂಡುಬಂದಿವೆ. ಜೈನರ ಪ್ರವೇಶ ಶ್ರವಣಬೆಳಗೋಳದ ತರುವಾಯ ಕರಾವಳಿಯಲ್ಲಾದರೂ ಜೈನಮತೀಯರು ಸಾಮಾಜಿಕ ಪರಿವರ್ತನೆ ಹಾಗೂ ಆರ್ಥಿಕ ಪರಿವರ್ತನೆಗೆ ಅಮೋಘ ಕೊಡುಗೆ ನೀಡಿದರು. ಕೇರಳದ ಕಡೆಯಿಂದ ಬಂದಿರಬಹುದಾದ ಭೂತಾರಾಧನೆ ಹಾಗೂ ಇತರ ದೈವದ ಕಲ್ಪನೆಗೂ ಬಂದರಿಗೂ ನಿಕಟ ಸಂಬಂಧವಿದೆ. ವ್ಯಾಪಾರಿ ವೃತ್ತಿ ಹಾಗೂ ಅದಕ್ಕೆ ಸಂಬಂಧಿಸಿದಂತೆ ಪೂರಕವಾಗಿದ್ದ ಮೀನುಗಾರರು ಹಾಗೂ ಕೃಷಿಕರೇ ಇದನ್ನು ನಡೆಸುತ್ತ ಬಂದಿದ್ದಾರೆ.

ಇಲ್ಲಿ ಮಾತ್ರ ಆರಾಧನಾ ಪದ್ಧತಿ ವಿವಿಧ ರೂಪದಲ್ಲಿ ಬೆಳೆದು ನಿಂತಿದೆ. ಹಿಂದೂ ಧಾರ್ಮಿಕ ಆಚರಣೆಯ ಪಂಥವಾದ ಶೈವರು ಹಲವು ಹೆಸರುಗಳಲ್ಲಿ ಇದ್ದರೆನ್ನುವುದಕ್ಕೆ ಸಿದ್ದಾಪುರ, ಸೋಮೇಶ್ವರ, ರಾಮೇಶ್ವರ ಮುಂತಾದ ಹೆಸರುಗಳ ಊರು, ದೇವಾಲಯಗಳು ಕಂಡುಬರುತ್ತವೆ. ಶೈವರ ನಂಬಿಕೆಯಲ್ಲಿರುವ ಆತ್ಮಲಿಂಗದ ಆರಾಧನೆ ಗೋಕರ್ಣ, ಧಾರೇಶ್ವರ, ಗುಣವಂತೇಶ್ವರ ಹಾಗೂ ಮುರ್ಡೇಶ್ವರಗಳಲ್ಲಿ ಕಂಡುಬರುತ್ತವೆ. ವಿದೇಶೀಯ ವರ್ತಕರ ಆಗಮನ ಹಾಗೂ ಉತ್ತರದ ವ್ಯಾಪಾರಿಗಳು ಬಂದು ನೆಲೆಸಿದ ಮೇಲೆ ಇನ್ನಷ್ಟು ಪರಿವರ್ತನೆಗಳಾದವು. ಕ್ರಿ.ಶ ೧ ನೆಯ ಶತಮಾನದ ನಂತರ ರೋಮ್‌ನ ವ್ಯಾಪಾರಿಗಣ ಪೂರ್ವದ ತೀರ ಪ್ರದೇಶದಲ್ಲಿ ವಾಸಿಸಿದ್ದ ಬಗ್ಗೆ ತಿಳಿಯುತ್ತದೆ. ಅದೆ ರೀತಿಯ ವಸತಿ ನೆಲೆಗಳು ಪಶ್ಚಿಮ ತೀರದಲ್ಲಿದ್ದಿತ್ತು. ಒಂಬತ್ತನೇ ಶತಮಾನದ ನಂತರ, ಕರ್ನಾಟಕದ ಕರಾವಳಿಯಲ್ಲಿಯ ಬಂದರು ಪಟ್ಟಣಗಳು ಭರದಿಂದ ಬೆಳೆದ ಮೇಲೆ ಪರ್ಶಿಯಾ ಅರೇಬಿಯಾಗಳ ವರ್ತಕ ಸಮುದಾಯದ ವಸತಿ ನೆಲೆಗಳು ಕಂಡುಬಂದವು. ಹಂಜಮಾನರೆಂಬ ವರ್ತಕ ಸಮುದಾಯ ಇಲ್ಲಿ ಪ್ರಬಲವಾಗಿತ್ತು. ಅಂಜುಮಾನ್ ಎಂಬ ಪದ ಇಲ್ಲಿ ಹಂಜಮಾನ ಎಂಬ ರೂಪವಾಗಿದೆ. ಸಮೂಹವನ್ನು ಸೂಚಿಸುವ ಈ ಪದವು ಅರೇಬಿಯಾ-ಪರ್ಶಿಯಾ ವರ್ತಕ ಸಮುದಾಯವು ದೊಡ್ಡ ಸಂಖ್ಯೆಯಲ್ಲಿ ಇಲ್ಲಿ ನೆಲೆಸಿತ್ತೆನ್ನುತ್ತದೆ. ಅವರೊಂದಿಗೆ ಇಸ್ಲಾಂ ಧರ್ಮವೂ ಬಂದಿತು. ನೌಕಾಸಾರಿಗೆಯಲ್ಲಿ ಹೆಸರಾದ ನಾಖುದಾ ದಾಲ್ಜಿ ಮುಸ್ಲಿಂ ಸಮುದಾಯವು ಇಲ್ಲೇ ಉಳಿದು ಇಲ್ಲಿಯವರೆ ಆದರು.

ಪರದೇಶಗಳ ವರ್ತಕ ಸಮುದಾಯವು ಹಲವು ತಿಂಗಳು ಇಲ್ಲೇ ವಸತಿ ಮಾಡುತ್ತಿದ್ದರು. ಹೊನ್ನಾವರ ಬಂದರು ಪಟ್ಟಣದಲ್ಲಿ ಮುಸ್ಲಿಂ ಹೆಣ್ಣು ಮಕ್ಕಳಿಗೆ ಹದಿಮೂರು, ಗಂಡು ಮಕ್ಕಳಿಗೆ ಇಪ್ಪತ್ತನಾಲ್ಕು ಶಾಲೆಗಳು ಇದ್ದವೆಂದು ಪ್ರವಾಸಿ ಕಥನಗಳು ತಿಳಿಸುತ್ತವೆ. ಅಂದರೆ ಇಲ್ಲಿ ದೊಡ್ಡ ಸಂಖ್ಯೆಯಲ್ಲಿ ೧೦-೧೧ನೇ ಶತಮಾನದಲ್ಲಿ ಪರ್ಶಿಯಾ ಅರೇಬಿಯಾದ ವರ್ತಕರು ವಾಸವಾಗಿದ್ದರೆಂದು ತಿಳಿಯುತ್ತದೆ. ಕಡಲಗಾಳಿ, ಹಿಪ್ಪಲಸ್ ಮಾರುತ ಗುರುತಿಸಿದ ಮೇಲೆ ಪ್ರಯಾಣದ ಒಂದು ಸಮಯ ನಿಗದಿಗೊಂಡಿತು. ಪರ್ಷಿಯಾ ಕೊಲ್ಲಿಯಿಂದ ಹೊರಟ ನೌಕೆಗಳಿಂದ ಕರ್ನಾಟಕದ ಬಂದರು ತಲುಪಲು ಸುಮಾರು ಒಂದೂವರೆ ತಿಂಗಳು ಹಿಡಿಯುತ್ತಿತ್ತು. ಹಾಗೇ ಯುರೋಪಿನಿಂದ ಭಾರತಕ್ಕೆ ನೌಕೆಗಳಲ್ಲಿ ತಲುಪಲು ನಾಲ್ಕು ತಿಂಗಳು ಬೇಕಾಗುತ್ತಿತ್ತು. ಒಮ್ಮೆ ಹೋದ ನೌಕೆಗಳು ಹಿಂದಿರುಗುವವರೆಗೆ ಪರದೇಶಗಳ ವರ್ತಕರು ಇಲ್ಲೆಯೇ ವಾಸವಾಗಿದ್ದು ಮುಂದಿನ ಪ್ರಯಾಣಕ್ಕೆ ಬೇಕಾಗುವ ಸರಕುಗಳನ್ನು ಸಂಗ್ರಹಿಸುತ್ತಿದ್ದರು. ಬಂದರಿನ ಕಾರಣವಾಗಿಯೇ ಕ್ರೈಸ್ತರು ಎರಡನೇ ಶತಮಾನದಲ್ಲೇ ಭಾರತ ತಲುಪಿದ್ದರು. ಹೀಗೆ ಇಲ್ಲಿ ಉಳಿದ ವ್ಯಾಪಾರಿ

ಸಮೂಹ ತಮ್ಮ ಉಡಿಗೆ ತೊಡಿಗೆ, ರೀತಿ ರಿವಾಜು ಮತ್ತು ಆಹಾರ, ಹಾಗೂ ಆಭರಣಗಳನ್ನು ಸ್ಥಳೀಯರಿಗೆ ಪರಿಚಯಿಸಿದರು. ತಾವು ಇಲ್ಲಿಯ ಪದ್ದತಿಗಳನ್ನು ಪಡೆದುಕೊಂಡರು.

ಹೈಗುಂದದಲ್ಲಿ ಕಂಡುಬರುವ ಬುದ್ಧನ ಶಿಲ್ಪಗಳು ಗ್ರೀಕ್, ಮಥುರಾ ಶಿಲ್ಪ ಕಲೆಯನ್ನು ಪ್ರಕಟಿಸಿದರೆ, ಅಲ್ಲೇ ಇರುವ ಬೃಹತ್ ಶಿಲ್ಪ ಒಂದು ತಾಂತ್ರಿಕ ಪಂಥದ ಆರಾಧನಾ ಪದ್ಧತಿಯನ್ನೋ ಅಥವಾ ತಮ್ಮ ಪೂರ್ವಜರ ಹಿರಿಯನನ್ನೋ ನೆನಪಿಸಿಕೊಳ್ಳಲು ನಿರ್ಮಿಸಿದಂತಿದೆ. ಕರಾವಳಿಯ ತೀರದುದ್ದಕ್ಕೂ ಅಲ್ಲಲ್ಲಿ ಕಂಡುಬರುವ ವಿವಿಧ ಶಿಲ್ಪಗಳು, ವಿಗ್ರಹಗಳು ಮತ್ತು ಲಿಂಗಗಳು ಶಕ್ತಿ ರೂಪದಲ್ಲಿ ಆರಾಧನೆಗೆ ಒಳಪಟ್ಟಿದ್ದು ಕಾಣುತ್ತದೆ. ಅಂಕೋಲಾದ ಬೋಳೆಯಲ್ಲಿ ದೊರೆತಿರುವ ಮೀಟರ್ ಉದ್ದ ಹಾಗೂ ಒಂದು ಅಡಿ ಅಗಲದ ಲಿಂಗವು ಶೈವಾರಾಧನೆಯ ಪ್ರಾಚೀನತೆ ತೋರುತ್ತವೆ. ಹೈಗುಂದ ಹಾಗೂ ಅಲ್ಲೇ ಬಳಿಯ ಕೃಷ್ಣಕೇರಿಯಲ್ಲಿ ಇಂಥಹುದೇ ಲಿಂಗಗಳು ದೊರೆತಿವೆ. ಹಾಗೇ ಇದೇ ರೀತಿಯ ಶಕ್ತಿ–ಲಿಂಗ ಆರಾಧನೆ ಕರಾವಳಿಯ ಉದ್ದಕ್ಕೂ ಕಂಡುಬರುತ್ತವೆ. ಜನಾಂಗಗಳು ಟೋಟೆಸಿಸಂನ ಭಾಗಗಳಾಗಿರುವುದು ಕಾಣಬಹುದು. ದಕ್ಷಿಣ ಕನ್ನಡದಲ್ಲಿರುವ ಅಳಿಯಕಟ್ಟು ಮೆಡಿಟರೇನಿಯನ್ ಮೂಲದೆನ್ನಲಾಗುತ್ತದೆ. ವೃಷಭವು ಭಾರತೀಯ ಎಷ್ಟೊ ಅಷ್ಟೇ ಈಜಿಪ್ಟ್ ಕೂಡಾ ಆಗಿದೆ. ಟೋಟೆಸಿಸಂ ಪದ್ದತಿಗಳು ಇಂದಿಗೂ ಆಫ್ರಿಕಾದ ದೇಶಗಳಲ್ಲಿ ಕಂಡುಬರುತ್ತವೆ. ಕರಾವಳಿಯ ಒಳನಾಡಿನ ಹಲವು ಜನಾಂಗಗಳಲ್ಲಿ ಇವುಗಳನ್ನು ಗುರುತಿಸಬಹುದು.

ಪ್ರಪಂಚದ ಯುವುದೇ ಭಾಗದಲ್ಲಿ ಹೊಸದು ಬಂದಾಗ ಅದು ಕೆಲವೇ ಕಾಲ ಅಲ್ಲಿರಬಹುದು. ಕಾಲಕ್ರಮೇಣ ಅದು ಎಲ್ಲೆಡೆ ಹರಡುತ್ತದೆ. ಇದೇ ನಾಗರಿಕತೆಗಳ ಸಂಸ್ಕೃತಿಗಳ ಅಂತರಾವಲಂಭನೆ. ನೀರಿನಕಣಗಳು ಪ್ರತ್ಯೇಕವಾಗಿದ್ದರೂ ಅವುಗಳು ಒಂದಾಗಿದ್ದಾಗ ಮಾತ್ರ ಅದರ ರೂಪ ಕಂಡುಬರುತ್ತದೆ. ಆದರೆ ಅದರ ಸ್ವತಂತ್ರ ರೂಪ ಕಣ್ಮರೆಯಾಗಿರುತ್ತದೆ. ಆ ನೀರು ನದಿಯಾಗಿ ಎಲ್ಲೆಲ್ಲೋ ಹರಿಯುತ್ತದೆ. ಹೀಗೆ ಸಂಸ್ಕೃತಿ ಎನ್ನುವುದು ಪರಸ್ಪರ ಕೊಡುಕೊಳುಗೆಗಳಿಂದ ರೂಪಿತವಾಗಿರುತ್ತದೆ. ಮುಂದೆ ಅದರ ಪ್ರತ್ಯೇಕತೆ ಕಣ್ಮರೆಯಾಗಿ ಅದು ಪ್ರತ್ಯೇಕವಾಗಿ ಗುರುತಿಸಲಾಗದಷ್ಟು ಒಂದಾಗಿರುತ್ತದೆ. ಅದೇ ರೀತಿ ಇಲ್ಲಿಯೂ ಸಾಂಸ್ಕೃತಿಕ ಹಾಗೂ ಇತರ ಕೊಡುಗೆಗಳು ಒಂದಾಗಿ ಬೆರೆತಿವೆ. ಇಲ್ಲಿಂದ ಹೋದ ರೀತಿ ನೀತಿಗಳೂ ವಿದೇಶಗಳಲ್ಲಿ ಸೇರಿಹೋಗಿವೆ.

ಹೀಗೆ ಬಂದರುಗಳ ಅಧ್ಯಯನದ ಸಂದರ್ಭದಲ್ಲಿ ನಿರೀಕ್ಷೆ ಮಾಡಿದಂತೆ, ಬಂದರುಗಳು ಕರಾವಳಿಯ ಆರ್ಥಿಕ ಹಾಗೂ ಸಾಂಸ್ಕೃತಿಕ ಜೀವನದ ಮೇಲೆ ಬಹುತರದ ಪ್ರಭಾವ ಬೀರಿದ್ದು ಕಂಡುಕೊಳ್ಳಲಾಗಿದೆ.

ಫಲಿತಗಳು

ಕರಾವಳಿಯ ಬಂದರುಗಳ ಭೌಗೋಳಿಕ ಲಕ್ಷಣಗಳು ಅಲ್ಲಿ ನಡೆದ ವ್ಯಾಪಾರ-ವ್ಯವಹಾರಗಳಿಗೆ ಸಹಾಯಕವಾಗಿದ್ದವು. ಪಶ್ಚಿಮ ಘಟ್ಟಗಳು ತೀರ ಪ್ರದೇಶಕ್ಕೆ ಹತ್ತಿರದಲ್ಲಿ ಹಾದು ಹೋಗಿರುವುದು ಮತ್ತು ಕಡಲಿಗೇ ಚಾಚಿರುವುದು ಹಾಗೂ ಬಂದರುಗಳ ಹತ್ತಿರದಲ್ಲಿ ಕಡಲಲ್ಲಿ ದ್ವೀಪಗಳಿರುವುದು ಕಡಲೋತ್ತರ ವ್ಯಾಪಾರಕ್ಕೆ ತುಂಬಾ ಸಹಾಯ ಮಾಡಿತ್ತು. ಬಂದರು ಪ್ರದೇಶದಲ್ಲಿ ಪರ್ವತಗಳು ಅರ್ಧಚಂದ್ರಾಕೃತಿಯಲ್ಲಿ ಭಾಗಿರುವುದರಿಂದ ನೌಕೆಗಳನ್ನು ಸುರಕ್ಷಿತವಾಗಿ ಲಂಗರು ಮಾಡಿ ಸರಕುಗಳನ್ನು ತುಂಬುವುದು, ಇಳಿಸುವುದು ಮಾಡಬಹುದಿತ್ತು.

ಪಶ್ಚಿಮ ಘಟ್ಟಗಳಲ್ಲಿ ಹುಟ್ಟಿ ಕಡಲನ್ನು ಸೇರುವ ನದಿಗಳು ಅರಣ್ಯ ಉತ್ಪನ್ನಗಳನ್ನು ಬಂದರುಗಳಿಗೆ ತರಲು ಹಾಗೂ ಕಡಲೋತ್ತರ ವ್ಯಾಪಾರದಿಂದ ಬಂದ ಸರಕನ್ನು ಹಿನ್ನಾಡಿಗೆ ಸಾಗಿಸಲು ಸಹಾಯಕವಾಗಿದ್ದವು. ನದಿಗಳ ಪಕ್ಕದಲ್ಲಿ ಉಂಟಾಗಿದ್ದ ಕಣಿವೆಗಳು ಸುಲಭವಾಗಿ ಹಿನ್ನಾಡಿಗೆ ಸಂಪರ್ಕ ಕಲ್ಪಿಸುವ ಮಾರ್ಗಗಳಾಗಿದ್ದವು.

ಪಶ್ಚಿಮ ಘಟ್ಟಗಳಲ್ಲಿ ಅರಣ್ಯ ಉತ್ಪನ್ನಗಳಾಗಿದ್ದ ಮಸಾಲೆ ದಿನಿಸು, ಮರಮಟ್ಟು, ಪಕ್ಷಿ-ಪ್ರಾಣಿಗಳು, ಕಡಲ ಉತ್ಪನ್ನಗಳು ಕಡಲೋತ್ತರ ವ್ಯಾಪಾರದ ಪ್ರಮುಖ ವಸ್ತುಗಳಾಗಿದ್ದವು.

ಕರಾವಳಿಯಲ್ಲಿ ಕಂಡು ಬರುವ ಜನಾಂಗಿಕ ವೈವಿಧ್ಯ – ಸಾಂಸ್ಕೃತಿಕ ವೈವಿಧ್ಯಕ್ಕೆ ಬಂದರುಗಳೇ ಕಾರಣ ಆಗಿವೆ. ಕರ್ನಾಟಕದಲ್ಲಿ ಶಿಲಾಯುಗ ಸಂಸ್ಕೃತಿ ಐವತ್ತು ಸಹಸ್ರ ವರ್ಷಗಳ ಪೂರ್ವದಿಂದ ಇರುವುದು ಕಂಡು ಬಂದಿದೆ. ಮಾನವ ಜನಾಂಗಳ ವಲಸೆ ಮತ್ತು ವ್ಯಾಪಾರಿ ಸಂಪರ್ಕಗಳು ಈ ಎಲ್ಲ ಬೆಳವಣಿಗೆಗೆ ಕಾರಣವಾಗಿವೆ. ಪರ್ಯಾಯ ದ್ವೀಪವು ಲಿಮೂರಿಯಾ ಎಂಬ ಪ್ರಾಚೀನ ಭೂಖಂಡದ ಭಾಗ ಎಂದು ದೃಢಪಟ್ಟಿದ್ದು, ಪೂರ್ವ ಆಫ್ರಿಕಾದಲ್ಲಿ ಉಗಮ ಮತ್ತು ವಿಕಾಸ ಹೊಂದಿದ ಮಾನವ ಸಲೀಸಾಗಿ ಇಂದಿನ ದಕ್ಷಿಣ ಭಾರತವನ್ನು ಪ್ರವೇಶಿಸಿದ್ದನು. ಇದರೊಂದಿಗೆ ಲಿಮೂರಿಯಾದ ಪ್ರಾಣಿವರ್ಗ, ಸಸ್ಯವರ್ಗಗಳು ಈ ಪ್ರದೇಶದಲ್ಲಿ ಕಂಡು ಬರುತ್ತವೆ.

ಶಿಲಾಯುಧಗಳಾದ ಕಲ್ಲುಮಚ್ಚು, ಮಚ್ಚುಗತ್ತಿ, ಉಂಡೆಗಲ್ಲಿನ ಮಚ್ಚಿನಂಥ ಆಯುಧಗಳು ದಕ್ಷಿಣ ಭಾರತದಲ್ಲಿ, ಕರ್ನಾಟಕದಲ್ಲಿ ಕಂಡು ಬಂದಿವೆ. ಈಜಿಪ್ಟ್‌ನಲ್ಲಿ ಬಹು ಹಿಂದಿನಿಂದ ಪ್ರಚಲಿತದಲ್ಲಿದ್ದ ತಲೆಯಾಸರೆಗಳು ಕಾವೇರಿ ತೀರದ ಸಮಾಧಿಗಳಲ್ಲಿ ಕಂಡು ಬಂದಿವೆ. ಇದು ಈ ಹಿಂದೆ ಈಜಿಪ್ಟ್ ಅರಸರ ವ್ಯಾಪಾರಿ ದಾಳಿಯ ಸಂದರ್ಭದ ಸಂಪರ್ಕಗಳಿಂದ ಬಂದಿರುವಂಥಹದ್ದು.

ಮೆಸೆಪೊಟೇಮಿಯಾ, ಈಜಿಪ್ಟ್, ಗ್ರೀಕ್, ರೋಮ್, ಮೆಡಿಟರೇನಿಯನ್ ಮುಂತಾದೆಡೆಗಳಿಂದ ಬಂದ ಮಾನವನನ್ನು ಈ ಪ್ರದೇಶದಲ್ಲಿ ಗುರುತಿಸಬಹುದು. ಪರ್ಯಾಯ

ದ್ವೀಪದಲ್ಲಿ ನಿಗ್ರಿಟೊ ಮತ್ತು ಪ್ರೊಟೋ ಆಸ್ಟ್ರೋಲಾಯ್ಡ್, ಮೆಡಿಟರೇನಿಯನ್ ದ್ರಾವಿಡರು, ಸೆಮೈಟಿಕ್, ಮುಂಗೋಲಾಯ್ಡ್ ಮುಂತಾದ ಜನಾಂಗಗಳ ರೂಪವನ್ನು ಇಲ್ಲಿ ಕಾಣಬಹುದು. ವಾಣಿಜ್ಯ ಸಂಪರ್ಕ ಉಂಟು ಮಾಡಿದ ಈ ಎಲ್ಲ ಸಂಬಂಧಗಳು ಬೆಳೆದು ಬಂದಿದ್ದು, ಈ ಎಲ್ಲ ಜನಾಂಗಗಳು ತಮ್ಮ ಹಿಂದಿನ ಮೂಲ ಸಂಸ್ಕೃತಿಯೊಂದಿಗೆ ಹೊಂದಿದ್ದ ಸಂಪರ್ಕದಿಂದ. ಕಡಲು ಇವರನ್ನು ಒಂದುಗೂಡಿಸುವ ಸಂಪರ್ಕ ಮಾಧ್ಯಮವಾಗಿತ್ತು.

ಕರಾವಳಿಯಲ್ಲಿ ಉಂಟಾದ ಆರ್ಥಿಕ ಸಂಬಂಧಗಳ ಬದಲಾಣೆಗೆ ರಾಜ್ಯ ಸಾಮ್ರಾಜ್ಯಗಳ ರಚನೆಗೆ ಕಾರಣವಾಯಿತು. ವ್ಯಾಪಾರ-ವ್ಯವಹಾರಗಳು ಆರಂಭದಲ್ಲಿ ರಾಜ್ಯಗಳ ಸ್ಥಾಪನೆ, ಸಾಮ್ರಾಜ್ಯ ವಿಸ್ತರಣೆಗೆ ಕಾರಣವಾಗಿತ್ತು. ವರ್ಗಗಳು ಕಂಡು ಬಂದಂತೆ, ವರ್ಗ ವೈಷಮ್ಯಗಳನ್ನು ಅಂಕೆಯಲ್ಲಿಡುವ ಅಗತ್ಯತೆಯಿಂದ ರಾಜ್ಯಗಳು ಹುಟ್ಟಿಕೊಂಡವು. ಇವುಗಳು ಪ್ರಬಲ ಆರ್ಥಿಕ ಶಕ್ತಿಗಳ ರಕ್ಷಣೆಗಾಗಿ ನಿರ್ಮಿಸಿಕೊಂಡವುಗಳಾಗಿದ್ದವು. ಉತ್ಪಾದನೆಯಲ್ಲಿ ಭಾಗಿಗಳಾಗದ ಆದರೆ ಶ್ರಮ ಜೀವಿಗಳ ಮಿಗುತಾಯದ ಉತ್ಪಾದನೆಯಿಂದ ಲಾಭ ಪಡೆಯುವ ವರ್ತಕ ವರ್ಗ ಹುಟ್ಟಿಕೊಂಡಿತ್ತು. ಇಂಥಹ ವರ್ಗಗಳೇ ಇಲ್ಲಿ ಆಳುವ ವರ್ಗವಾಯಿತು. ಮತ್ತು ಹಲವು ಸಂದರ್ಭದಲ್ಲಿ ರಾಜಾಶಾಹಿಯೊಂದಿಗೆ ಸೌಹಾರ್ದ ಸಂಬಂಧ ಪಡೆದು ಬಂದರು ಪಟ್ಟಣಗಳು ಹಾಗೂ ವ್ಯಾಪಾರಿ ಕೇಂದ್ರಗಳ ಆಡಳಿತಗಾರರಾದರು.

ಕರ್ನಾಟಕ ಆಳಿದ ಎಲ್ಲಾ ರಾಜ ಮನೆತನಗಳು ಬಂದರುಗಳನ್ನು ವಶಪಡಿಸಿಕೊಳ್ಳುವ ಯುದ್ಧಗಳಲ್ಲಿ ಅಥವಾ ವೈವಾಹಿಕ ಸಂಬಂಧ ಏರ್ಪಡಿಸಿಕೊಳ್ಳುವಲ್ಲಿ ತೊಡಗಿದ್ದರು. ಬಂದರುಗಳನ್ನು ವಶಪಡಿಸಿಕೊಳ್ಳುವ ಹೋರಾಟದಲ್ಲಿ ಹೊಸ ಹೊಸ ಸಾಮ್ರಾಜ್ಯಗಳು, ಸಾಮಂತ ಪ್ರಭುತ್ವಗಳು ಹುಟ್ಟುಕೊಂಡಿದ್ದವು. ಮತ್ತೆ ಕೆಲವು ನಿರ್ಮಾಣಗೊಂಡವು.

ಕಡಲೋತ್ತರ ವ್ಯಾಪಾರ ದೊಡ್ಡ ಪ್ರಮಾಣದಲ್ಲಿ ಬೆಳೆದು ಬಂದಂತೆ ಬಂದರು ಪಟ್ಟಣಗಳು ವ್ಯವಸ್ಥಿತವಾಗಿ ರಚನೆಗೊಂಡು ಅವುಗಳ ಆಡಳಿತವು ಒಂದು ದೊಡ್ಡ ಜವಾಬ್ದಾರಿಯಾಗಿ ಬದಲಾಯಿತು.

ಬಂದರುಗಳನ್ನು ಎಲ್ಲ ಪ್ರದೇಶಗಳಲ್ಲಿ ನಿರ್ಮಿಸಲು ಸಾಧ್ಯವಿರಲಿಲ್ಲ. ಅಲ್ಲಿಯ ತೀರದ ಸ್ಥಿತಿಗತಿ-ನೀರಿನ ಸೌಲಭ್ಯ ಕಡಲೆಡೆಯಿಂದ ಬೀಸಿ ಬರುವ ಗಾಳಿಯ ವೇಗ, ಸರಕು ಸಂಗ್ರಹಕ್ಕೆ ಸ್ಥಳಾವಕಾಶ, ಹಿನ್ನಾಡಿಗೆ ಸಂಪರ್ಕ, ವನ್ಯೋತ್ಪನ್ನಗಳ ಸಂಗ್ರಹಕ್ಕೆ ಅನುಕೂಲ, ಸಂಸ್ಕರಣೆಗೆ ಸ್ಥಳಾವಕಾಶ, ಕೈಗಾರಿಕೆಗಳ ನಿರ್ಮಾಣ ಮುಂತಾದ ಸೌಲಭ್ಯಗಳನ್ನು ಪರಿಗಣಿಸಿ ಬಂದರು ಪಟ್ಟಣಗಳ ನಿರ್ಮಾಣ ಮಾಡಬೇಕಾಗಿತ್ತು. ಬಸರೂರು, ಬಾರ್ಕೂರು, ಹೊನ್ನಾವರ ಹಾಗೂ ಮಂಗಳೂರುಗಳು ವ್ಯಾಪಾರಕ್ಕಾಗಿಯೇ ನಿರ್ಮಿಸಿಕೊಂಡ ಬಂದರುಗಳು. ಅಂತೆಯೇ ಕಾರವಾರ,

ಅಂಕೋಲಾ, ಕುಮಟಾ, ಭಟ್ಕಳ ಬೈಂದೂರು ಮತ್ತು ಅವುಗಳ ನಡುವಿರುವ ಅನೇಕ ಬಂದರುಗಳು ನೈಸರ್ಗಿಕವಾಗಿ ನಿರ್ಮಿತಗೊಂಡಿದ್ದು, ಸಾಂದರ್ಭಿಕವಾಗಿ ವ್ಯಾಪಾರಕ್ಕೆ ಬಳಕೆಯಾಗುತ್ತಿದ್ದ ಬಂದರುಗಳಾಗಿದ್ದವು.

ಇಂಥಹ ಬಂದರು ಪಟ್ಟಣಗಳ ಆಡಳಿತ ಒಂದು ಸವಾಲಾಗಿದ್ದು, ಶಾಂತಿ, ಸುವ್ಯವಸ್ಥೆಯ ನಿರ್ಮಾಣ, ವ್ಯಾಪಾರಿ ವರ್ಗಕ್ಕೆ ಅನುಕೂಲ ಒದಗಿಸುವುದು ರಾಜ ಪ್ರಭುತ್ವದ ಜವಾಬ್ದಾರಿಯಾಗಿತ್ತು. ಅದಕ್ಕಾಗಿ ಬಂದರು ಪಟ್ಟಣ ವಿವಿಧ ವಿಭಾಗಗಳಾಗಿ ವಿಂಗಡಿಸಿಕೊಂಡು, ಆಡಳಿತಕ್ಕಾಗಿ ಅಧಿಕಾರಿಗಳನ್ನು ನೇಮಿಸಿಕೊಂಡು ತೆರಿಗೆ ಸಂಗ್ರಹ, ಶಾಂತಿ-ಸುವ್ಯವಸ್ಥೆ ನಿರ್ಮಿಸಿಕೊಂಡಿದ್ದರು.

ರಾಜಶಾಹಿಯೊಂದಿಗೆ ನಿಕಟ ಸಂಬಂಧ ಹೊಂದಿದ್ದ ವರ್ತಕ ಸಂಘಗಳು ಬಂದರುಗಳ ಆಡಳಿತದಲ್ಲಿ ಪ್ರಮುಖ ಪಾತ್ರ ವಹಿಸಿದ್ದವು. ಯಾವುದೇ ಉತ್ಪಾದನೆಯಲ್ಲಿ ತೊಡಗಿರದ ಈ ವರ್ಗವು ಅರಮನೆಯ ಪಾರುಪತ್ಯ ಆರಾಧನಾ ಸ್ಥಳಗಳ ಮೇಲುಸ್ತುವಾರಿ ಹಾಗೂ ತೆರಿಗೆ ಸಂಗ್ರಹ, ದಾನ-ದತ್ತಿಗಳ ರಕ್ಷಣೆ ಮುಂತಾದ ಆರ್ಥಿಕ ಚಟುವಟಿಕೆಯಲ್ಲಿ ಭಾಗಿಯಾಗಿತ್ತು.

ಕೊಡವರ ಸಂಪ್ರದಾಯ ಹಾಗೂ ಕುರ್ದಿ ಸಂಪ್ರದಾಯಗಳ ನಡುವೆ ಸಾಮ್ಯತೆ ಇದೆ. ಅರಬ್‌ರ ದಾಳಿಗೆ ಬೆದರಿ ಕಡಲ ಮಾರ್ಗವಾಗಿ ಕರಾವಳಿ-ಮಲಬಾರ ತೀರಕ್ಕೆ ಬಂದ ಕುರ್ದಿಗಳೇ ಕೊಡವರೆಂದು ಸ್ಪಷ್ಟವಾಗಿ ಗುರುತಿಸಲಾಗಿದೆ.

ಹಾಗೇ ಕೊಂಕಣಿ ಭಾಷೆಯಾಡುವ ಹಲವು ಪಂಗಡಗಳು ಕರಾವಳಿ ತೀರದಲ್ಲಿ ವಾಸವಾಗಿವೆ. ಇವರಲ್ಲಿ ಕೆಲವರು ಸರಸ್ವತಿ ನದಿಯ ಹೆಸರಿನಿಂದ ಗುರುತಿಸಿಕೊಳ್ಳುತ್ತಾರೆ. ಈ ಎಲ್ಲಾ ಪಂಗಡದವರು ಕಡಲೋತ್ತರ ವ್ಯಾಪಾರ, ಮೀನುಗಾರಿಕೆ, ಕಡಲ ಉತ್ಪನ್ನಗಳನ್ನು ಸಂಗ್ರಹಿಸುವ ಹಾಗೂ ಮಾರುವ ವೃತ್ತಿಗಾಗಿ ಇಲ್ಲಿ ಬಂದು ನೆಲೆಸಿದ್ದರು.

ಕರಾವಳಿ ಆಳಿದ ರಾಜ ಮನೆತನಗಳಾದ ಚಾಲುಕ್ಯರು ತಮ್ಮ ರಾಜ ಲಾಂಛನವಾಗಿ ವರಾಹವನ್ನು, ಗಂಗರು ಹಾಗೂ ರಟ್ಟರು ಆನೆಯನ್ನು, ಶಾತವಾಹನರು ಬಸವನನ್ನು ಲಾಂಛನವಾಗಿ ಹೊಂದಿದ್ದರು. ಇವುಗಳು ಕ್ರಮವಾಗಿ ಸುಮೇರಿಯಾ, ಬ್ಯಾಬಿಲೋಮಿಯಾ, ಈಜಿಪ್ಟ್, ಗ್ರೀಕ್ ಪ್ರಾಚೀನ ಸಂಸ್ಕೃತಿಗಳಲ್ಲಿ ಮಹತ್ವದ ಸ್ಥಾನ ಹೊಂದಿದ್ದ ಪ್ರಾಣಿಗಳಾಗಿವೆ. ಆನೆ ಮೆಹೆಂಜೋದಾರೊದಲ್ಲಿ ಹಾಗೂ ಈಜಿಪ್ಟ್‌ನಲ್ಲೂ ಮಹತ್ವ ಪಡೆದಿತ್ತು.

ಕರಾವಳಿಯಲ್ಲಿ ಕಡಲೋತ್ತರ ಸಂಪರ್ಕವು ಹಲವು ವಿಧದ ಭಾಷೆಗಳನ್ನು ಭಾಷೆಯನ್ನಾಡುವ ಪಂಗಡಗಳನ್ನು ಇಲ್ಲಿ ಹುಟ್ಟು ಹಾಕಿತ್ತು. ಹಾಗೂ ಸ್ಥಳೀಯ ಭಾಷೆಯ ಮೇಲೆ ವಿವಿಧ ಭಾಷೆಗಳ ವ್ಯಾಪಕ ಪ್ರಭಾವ ಉಂಟು ಮಾಡಿತ್ತು.

ಕೊಂಕಣಿ ಭಾಷೆಯು ಸ್ಥಳೀಯರ ಭಾಷೆಯಾಗಿತ್ತು. ಮಹಾರಾಷ್ಟ್ರದ ಕೊಂಕಣ ತೀರ ಪ್ರದೇಶದಿಂದ ಬಂದ ಭಾಷೆ ಇದೆಂದು ಗುರುತಿಸಲಾಗಿದೆ. ಪಾಲಿ, ಪ್ರಾಕೃತ, ಮಾಗದ, ಅರ್ಧ ಮಾಗಧಿ ಭಾಷೆಗಳ ಸಮ್ಮಿಶ್ರ ರೂಪದಂತಿರುವ ಕೊಂಕಣಿ ಭಾಷೆ ಸ್ಥಳೀಯ ಶ್ರಮ ಜೀವಿಗಳ ಹಾಗೂ ವರ್ತಕರ ಭಾಷೆಯಾಗಿತ್ತು. ನವಾಯತಿ ಕೊಂಕಣಿಯು ಕೊಂಕಣಿ ಭಾಷೆಯ ಇನ್ನೊಂದು ರೂಪವಾಗಿವೆ. ೮ನೇ ಶತಮಾನದಲ್ಲಿ ಎಮನ್ ದೇಶದಲ್ಲಿ ಉಂಟಾದ ಪ್ರಕ್ಷುಬ್ಧ ಪರಿಸ್ಥಿತಿಯಿಂದ ರಕ್ಷಣೆಗಾಗಿ ಹೊರಟ ಅಲ್ಲಿಯ ಇಸ್ಲಾಂ ಮತಾನುಯಾಯಿಗಳ ಒಂದು ಗುಂಪು ಕರಾವಳಿ ತೀರವನ್ನು ಸೇರಿಕೊಂಡಿತ್ತು. ವರ್ತಕ ವೃತ್ತಿಯನ್ನು ಕೈಗೊಂಡು ಇಲ್ಲಿ ಬದುಕಿರುವ ಈ ಸಮೂಹವು ತನ್ನ ಸಂಪರ್ಕಕ್ಕೆ ಬಂದ ಎಲ್ಲಾ ಭಾಷೆಗಳನ್ನು ಬಳಸಿಕೊಂಡು ತನ್ನದೇ ಆದ ಕೊಂಕಣಿ ಭಾಷೆಯನ್ನು ರೂಪಿಸಿಕೊಂಡಿದೆ.

ಅಂತೆಯೇ ತುಳು ಭಾಷೆ ಕರಾವಳಿಯಲ್ಲಿದ್ದ ದ್ರಾವಿಡ ಭಾಷೆ. ಇದು ಕೂಡ ಕಡಲೋತ್ತರ ವ್ಯಾಪಾರದೊಂದಿಗಿನ ಸಂಪರ್ಕದಿಂದ ಬೆಳೆಯಿತು. ಹಾಗೇ ಇಲ್ಲಿಯ ಬ್ಯಾರಿ ಭಾಷೆ ಕೂಡಾ ವ್ಯಾಪಾರಿ ವರ್ಗಗಳಲ್ಲಿ ಕಂಡುಬರುತ್ತದೆ.

ಕರಾವಳಿಯ ಕಡಲೋತ್ತರ ಸಂಪರ್ಕದಿಂದ ಬೇರೆ ಬೇರೆ ದೇಶಗಳ ಭಾಷೆಗಳು ಸಂಪರ್ಕಕ್ಕೆ ಬಂದವು. ಬಹುಮುಖ್ಯವಾಗಿ ಸ್ಪೇನ್ ದೇಶದ ಪೂರ್ವ ತೀರದ ಭಾಷೆಯಾದ ಬಾಸ್ಕ ಭಾಷೆಯ ಸಂಬಂಧ ದ್ರಾವಿಡ ಭಾಷೆಗಳೊಂದಿಗೆ ನಿಕಟವಾಗಿದೆ. ಅಲ್ಲಿ ಬಳಸುವ ಅನೇಕ ಪದಗಳು ದ್ರಾವಿಡ ಭಾಷೆಯ ಪದಗಳ ಸಮನಾರ್ಥಕ ಪದಗಳಂತಿವೆ. ದ್ರಾವಿಡ ಭಾಷೆಗಳಲ್ಲಿ ಬಳಕೆಯಾಗುವ ಅಪ್ಪ, ಅಣ್ಣ, ಉಸುರು, ಮಲಗು, ಪುಟ್ಟ, ಚಿಕ್ಕ, ಮನ್ನೇಯ, ಕಲ್ಲು, ಬೆಳೆ, ಆರಂಭ, ಬಿತ್ತು, ಹೆರು, ಸುಡು, ನೆನೆ, ಅರೆ, ಊರು, ತಳಗಳು ಕ್ರಮವಾಗಿ ಆಯ್ತ, ಅಣಿ, ಉಸ್ನಾನ್, ಮಲತ್, ಪೊಟ್, ಚಿಕ್ಕಿ, ಮೆನ್, ಕಲ್, ಬೆರ, ಅರ–ತು, ಬಿಹಿ, ಇರ್‍ರು, ಸುಟು, ನೆನ್, ಅಸ್ಪ, ಉರ್, ತಲ ಮುಂತಾಗಿ ಬಳಕೆಯಾಗುತ್ತಿವೆ. ಅಲ್ಲದೆ ಇನ್ನೂ ಅನೇಕ ಶಬ್ಧಗಳು ದ್ರಾವಿಡ ಭಾಷೆಯ ಶಬ್ಧಗಳಂತಿವೆ.

ಹಾಗೇ ಊರಿನ ಹೆಸರುಗಳಲ್ಲಿ ಬರುವ 'ಊರು'ಗಳಲ್ಲಿ ಸಾಮ್ಯಾತೆಯನ್ನು ಕಾಣಬಹುದು. ಬ್ಯಾಬಿಲೋನಿನಲ್ಲಿರುವ 'ಊರ್' ಗಳಂತೆ ಕರಾವಳಿಯ ಅನೇಕ ಸ್ಥಳಗಳ ಹೆಸರು ಕೊನೆಯಲ್ಲಿ 'ಊರು' ಎಂಬ ಪ್ರತ್ಯೇಯ ನೋಡಬಹುದು. ಇದೇ ರೀತಿ ಮೇಡಿಟರೇನಿಯನ್ ಪ್ರದೇಶಗಲ್ಲೂ ಈ 'ಊರ' ಕಂಡುಬರುತ್ತದೆ.

ಅರಬ್ ರಾಷ್ಟ್ರಗಳಲ್ಲಿ ಸಂಖ್ಯೆಗೆ ಹಿಂದ್ಸಾ ಎಂದೂ, ಬೆಬಿಲೋನಿನಲ್ಲಿ ಮಕ್‌ಮಲ್ ಬಟ್ಟೆಗೆ 'ಸಿಂಧೂ' ಎಂದೂ ಕರೆಯುತ್ತಿದ್ದರು. ಮೆಣಸಿನಕಾಳನ್ನು 'ಯವನಪ್ರಿಯ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ. ಯವನಿಕಾ ಎಂದರೆ ನಾಟಕಗಳಲ್ಲಿ ಬಳಸುವ ಪರದೆ. ಇವುಗಳೆಲ್ಲ ಯವನರಾದ

ಗ್ರೀಕ್‌ರಿಂದ ಬಂದ ಶಬ್ಧಗಳಾಗಿವೆ. ಅಂತಹುದೆ ಒಂದು ಶಬ್ಧ ಯುನಾನಿ. ಆಯುರ್ವೇದವನ್ನು ಯುನಾನಿಯೆಂದು ಕರೆಯುತ್ತಾರೆ. ಹಾಗೆ ಚೀನಾದ ಮಾಂಜಿ ಎಂಬ ಶಬ್ಧದಿಂದಲೇ ಕರಾವಳಿಯಲ್ಲಿ ಒಂದು ದೋಣಿಯನ್ನು ಗುರುತಿಸುತ್ತಾರೆ.

ಬಂದರು ಪಟ್ಟಣಗಳಲ್ಲಿಯ ವ್ಯಾಪಾರ–ವ್ಯವಹಾರಗಳು ಭರದಿಂದ ಸಾಗಿದಂತೆ ಅದನ್ನು ಸುಲಲೀತವಾಗಿಸಲು ಮತ್ತು ವರ್ತಕರಿಗೆ ಹಾಗೂ ಆಳುವ ವರ್ಗಕ್ಕೆ ಅನುಕೂಲ ಮಾಡಿಕೊಡಲು ಬಂದರು ಪಟ್ಟಣಗಳಲ್ಲಿ ವಿವಿಧ ಕೇರಿಗಳನ್ನು ನಿರ್ಮಿಸಿ ವಿವಿಧ ಪಂಗಡಗಳಿಗೆ ವಾಸಿಸಲು ಅನುಕೂಲ ಕಲ್ಪಿಸಲಾಯಿತು.

ಬಂದರುಗಳ ಮೂಲಕ ನಡೆದ ವ್ಯಾಪಾರ – ವ್ಯವಹಾರ ಕೇವಲ ಕೆಲವೇ ತಿಂಗಳುಗಳಿಗೆ ಮೀಸಲಾಗಿರದೆ ವರ್ಷವಿಡೀ ನಡೆಯುತ್ತಿತ್ತು. ಹೊರ ಹೋಗುವ ಸರಕುಗಳು ಹಾಗೂ ಹೊರನಾಡಿನಿಂದ ಬಂದ ಸರಕುಗಳನ್ನು ಸಂಗ್ರಹಿಸಿಡುವುದು. ಸಂಸ್ಕರಿಸುವುದು ಒಂದು ದೊಡ್ಡ ಕೆಲಸವಾಗಿತ್ತು. ಹಾಗೆ ಹೊರನಾಡಿಗೆ ಹೋಗುತ್ತಿದ್ದ ಪ್ರಾಣಿ–ಪಕ್ಷಿಗಳನ್ನು ರೇವು ಪಟ್ಟಣಗಳಲ್ಲಿ ಇಟ್ಟು ಪೋಷಿಸುವುದು ಒಂದು ದೊಡ್ಡ ವೃತ್ತಿಯಾಗಿತ್ತು. ಹಾಗೆ ಹಡಗುಗಳನ್ನು ನಿರ್ಮಿಸುವುದು, ಹಡಗುಗಳ ರಿಪೇರಿ, ಕರಕುಶಲ ವಸ್ತುಗಳ ನಿರ್ಮಾಣ ಮತ್ತು ಕೃಷಿಯ ಮೂಲಕ ಬೇಡಿಕೆ ಇದ್ದ ಉತ್ಪನ್ನಗಳನ್ನು ಬೆಳೆಯುವುದು ಮುಂತಾದವುಗಳು ಇತರ ಪ್ರಮುಖ ವೃತ್ತಿಗಳಾಗಿದ್ದವು. ಕುಶಲಕರ್ಮಿಗಳು ಸ್ವತಂತ್ರರಾಗಿದ್ದರು. ಇವರನ್ನು ಗುಲಾಮರಾಗಿ ಪರಿಗಣಿಸುತ್ತಿರಲಿಲ್ಲ. ವಿವಿಧೆಡೆಯಿಂದ ಹಲವು ವೃತ್ತಿಯ ಕುಶಲಕರ್ಮಿಗಳು ಇಲ್ಲಿಗೆ ಬಂದಿದ್ದರು. ನೇಯ್ಗೆ ಹಾಗೂ ಗಂಧದ ಮತ್ತು ಮರದ ವಿವಿಧ ವಸ್ತುಗಳನ್ನು ನಿರ್ಮಿಸುವ ಕುಶಲಕರ್ಮಿಗಳು ದೊಡ್ಡ ಸಂಖ್ಯೆಯಲ್ಲಿ ಇಲ್ಲಗೆ ಬಂದಿದ್ದರು. ಬಸರೂರು ಹಾಗೂ ಬಾರ್ಕೂರುಗಳಲ್ಲಿ ಕಂಡು ಬರುವ ನೇಯ್ಗೆ ಕಾರ್ಮಿಕರು ಹಿಂದೆ ತಮಿಳು ನಾಡಿನ ಮದುರೈ, ಕಾಂಚಿ ಮುಂತಾದೆಡೆಗಳಿಂದ ಇಲ್ಲಿಗೆ ಬಂದವರಾಗಿದ್ದಾರೆ.

ರೇವು ಪಟ್ಟಣದ ಸಮೀಪ ಹೊರವಲಯದಲ್ಲಿ ಇವರುಗಳಿಗೆ ಸ್ಥಾನ ಕಲ್ಪಿಸಲಾಗಿತ್ತು. ಆಡಳಿತಗಾರರಿಗೆ, ಸೈನಿಕರಿಗೆ, ರಾಜ ಪರಿವಾರದವರಿಗೆ, ದೇಶಿಯ ವರ್ತಕರಿಗೆ, ವಿದೇಶಿ ವರ್ತಕರಿಗೆ, ಪುರೋಹಿತರಿಗೆ, ಜೀತದಾಳುಗಳಿಗೆ, ಕೃಷಿಕರಿಗೆ ಹಾಗೂ ವಿವಿಧ ವೃತ್ತಿಯ ಕಾರ್ಮಿಕರಿಗೆ ಉಳಿಯಲು ಪ್ರತ್ಯೇಕ ವ್ಯವಸ್ಥೆ ರೂಪಿಸಿದ್ದರು. ಬಾರ್ಕೂರು ಬಂದರಿನಲ್ಲಿ ಹತ್ತು ಕೇರಿಗಳಿದ್ದರೆ, ಬಸರೂರಿನಲ್ಲಿ ಏಳು ಕೇರಿಗಳಿದ್ದವು. ಬಸರೂರು ಎರಡು ಪಟ್ಟಣಗಳ ಬಂದರಾಗಿತ್ತು. ಈ ಎರಡು ಪಟ್ಟಣಗಳಲ್ಲಿ ಒಂದೇ ಬಗೆಯ ಏಳು ಕೇರಿಗಳಿದ್ದವು. ಮಂಗಳೂರು ರೇವಿನಲ್ಲಿ ನಾಲ್ಕು ಕೇರಿಗಳಿದ್ದವು. ಹೊನ್ನಾವರ ಬಂದರು ಪಟ್ಟಣದಲ್ಲಿ ವರ್ತಕರಿಗೆ, ಹಡಗು

ರಿಪೇರಿ ಮಾಡುವವರು ಹಾಗೂ ಹಡಗು ನಿರ್ಮಿಸುವವರಿಗೆ, ಸರಕು ಸಂಗ್ರಹಿಸುವವರಿಗೆ ಮತ್ತು ಜನ ಸಾಮಾನ್ಯರಿಗೆ ಪ್ರತ್ಯೇಕವಾಗಿ ಕೇರಿಗಳನ್ನು ನಿರ್ಮಿಸಿದ್ದರು. ಹೀಗೆ ವಿವಿಧ ಬಗೆಯಲ್ಲಿ ವಸತಿ ಪ್ರದೇಶಗಳನ್ನು ನಿರ್ಮಿಸಿ ಬಂದರುಗಳನ್ನು ಆಡಳಿತಕ್ಕೆ, ವ್ಯಾಪಾರಕ್ಕೆ ಅನುಕೂಲವಾಗುವಂತೆ ಮಾಡಿಕೊಂಡಿದ್ದರು.

ಕಡಲೋತ್ತರ ವ್ಯಾಪಾರ ಭರದಿಂದ ಸಾಗಿದಂತೆ ಬೇಡಿಕೆಯಿದ್ದ ವಸ್ತುಗಳನ್ನು ಉತ್ಪಾದಿಸಲು ಕೃಷಿಗೆ ಪ್ರೋತ್ಸಹ ದೊರೆಯಿತು. ಇದರಿಂದ ಭೂ ಸಂಬಂಧಗಳು ಬದಲಾದವು. ಭೂಮಿಯಲ್ಲಿ ಕೃಷಿಯು ವಿಶೇಷ ಪ್ರೋತ್ಸಾಹದೊಂದಿಗೆ ನಡೆಸಲಾರಂಭಿಸಿದರು. ಸೀತಾಭೂಮಿ ಹಾಗೂ ಹೊಸ ಉಳುವೆಯ ಭೂಮಿಯಲ್ಲಿ ವರ್ತಕ ಸಂಘಗಳು ಮತ್ತು ಪ್ರಭುತ್ವ ಪ್ರಲೋಭನೆ ಒಡ್ಡಿ ಕೃಷಿಗೆ ಜನಸಾಮಾನ್ಯರನ್ನು ತೊಡಗಿಸಲಾರಂಭಿಸಿದರು. ಮೀನು, ವನ್ಯಪ್ರಾಣಿ, ಮರಮಟ್ಟುಗಳು ಅರಸನ ಅಧೀನ ಎಂದು ಪರಿಗಣಿಸಲಾಗಿತ್ತು. ಇವುಗಳನ್ನು ಹಿಡಿಯುವುದು ಇವುಗಳಿಂದ ಸಿದ್ಧವಸ್ತು ಉತ್ಪಾಧಿಸುವುದು ಹಾಗೂ ಅರಣ್ಯ ಮತ್ತು ಕಡಲ ಉತ್ಪನ್ನಗಳನ್ನು ಸಂಗ್ರಹಿಸುವವರು ಬೊಕ್ಕಸಕ್ಕೆ ತೆರಿಗೆ ತುಂಬಬೇಕಾಗಿತ್ತು. ಕೃಷಿಗೆ ರಾಜ್ಯವು ನೀರಾವರಿಯನ್ನು ಒದಗಿಸುತ್ತಿತ್ತು. ನೀರಾವರಿ ಭೂಮಿಯ ಬೆಳೆಗಳಿಗೆ ವಿಶೇಷ ತೆರಿಗೆಯೂ ಇತ್ತು. ಅದುವರೆಗೆ ರೈತರು ಮಿಗುತಾಯವನ್ನು ಮಾರಾಟ ಮಾಡುತ್ತಿದ್ದರೆ, ಪಾಳು ಭೂಮಿ, ಸೀತಾ ಭೂಮಿ, ಹೊಸ ಭೂಮಿಯಲ್ಲಿ ಕೃಷಿಗೆ ಪುಸಲಾಯಿಸಿದ್ದರಿಂದ ವರ್ತಕರಿಗೆ ಬೇಕಿದ್ದ ವಸ್ತುಗಳನ್ನೇ ಬೆಳೆಯಬೇಕಾಯಿತು. ಮತ್ತು ಅದನ್ನು ನಿರ್ಧಿಷ್ಟಪಡಿಸಿದ ವರ್ತಕ ಸಂಘಗಳಿಗೆ ನೀಡಬೇಕಾಗುತ್ತಿತ್ತು.

ಪಶ್ಚಿಮ ತೀರದಲ್ಲಿರುವ ತೆಂಗಿನ ಮರವು ಕಡಲೋತ್ತರ ಯಾನದ ಫಲವಾಗಿ ಇಲ್ಲಿಗೆ ಬಂದವು. ಹಡುಗಗಳ ನಿರ್ಮಾಣದಲ್ಲಿ ಹಾಗೂ ಸರಕುಗಳನ್ನು ಬಿಗಿಯಾಗಿ ಕಟ್ಟುವುದಕ್ಕೆ ತೆಂಗಿನ ನಾರಿನ ಹಗ್ಗಗಳ ಅವಶ್ಯಕತೆಯಿತ್ತು. ಕ್ರಿ.ಶ. ಮೊದಲನೇ ಶತಮಾನದಲ್ಲಿ ಪೂರ್ವತೀರದಲ್ಲಿ ಬೆಳೆಯುತ್ತಿದ್ದ ಈ ತೆಂಗನ್ನು ಮುಂದೆ ಪಶ್ಚಿಮ ತೀರಕ್ಕೂ ತರಲಾಯಿತು. ಈ ತೆಂಗಿನ ಬೆಳೆ ದೊಡ್ಡ ರೀತಿಯಲ್ಲಿ ಬೆಳೆಯಲಾರಂಭಿಸಿದಂತೆ ಹಡುಗಗಳಿಗೆ, ವಸತಿಗಳಿಗೆ ಹಾಗೂ ತೆಂಗಿನಕಾಯಿಯ ಎಣ್ಣೆಗೆ ಬಳಕೆಯಾಯಿತು. ಇದರಿಂದ ಕರಾವಳಿಯ ಉಪ್ಪಿನೊಂದಿಗೆ ತೆಂಗಿನ ಮರದ ಉತ್ಪನ್ನಗಳು ಒಳನಾಡಿಗೆ ಸಾಗಿದವು. ತೆಂಗಿನ ತೋಟದ ಮಾಲಿಕರು ಇದೆ ತೋಟದಲ್ಲಿ ವೀಳ್ಯದ ಎಲೆ ಹಾಗೂ ಕಾಳುಮೆಣಸಿನ ಬಳ್ಳಿಗಳನ್ನು ಬೆಳೆಸಲಾರಂಭಿಸಿದರು. ಇದರಿಂದ ಸ್ಥಳೀಯ ತೋಟದ ಮಾಲಿಕರಿಗೆ ಆರ್ಥಿಕವಾಗಿ ಲಾಭವಾಯಿತು.

ಭೂಮಿಯನ್ನು ದಾನ ನೀಡುವ ಪದ್ಧತಿ ಬಂದಿತು. ದಾನ ಪಡೆಯುವವರು ಪುರೋಹಿತರಾಗಿದ್ದರಿಂದ ಅವರು ಉಳುಮೆ ಮಾಡುತ್ತಿರಲಿಲ್ಲ. ಅವರಿಗೆ ಭೂಮಿಯೊಂದಿಗೆ ಕೃಷಿ

ಕಾರ್ಮಿಕರನ್ನು ದಾನ ಮಾಡುತ್ತಿದ್ದರು. ಇದರಿಂದ ಜೀತಗಾರರು, ಭೂ ರಹಿತ ಕೃಷಿ ಕಾರ್ಮಿಕರು ಉಂಟಾದರು.

ವರ್ತಕ ಸಂಘಗಳು ಮತ್ತು ಪ್ರಭುತ್ವ ಬಸದಿ, ಸಂಘರಾಮ ಹಾಗೂ ದೇವಾಲಯಗಳಿಗೆ ಭೂ ದಾನ ನೀಡಿ ಅದರಿಂದ ಬರುವ ಉತ್ಪನ್ನಗಳಿಂದ ಪುರೋಹಿತರ ದಿನದ ಖರ್ಚು, ದೇವಾಲಯದ ದೀಪದ ಖರ್ಚು ಹಾಗೂ ಬಸದಿ, ದೇವಾಲಯ, ಆಗ್ರಹಾರಗಳ ಅಭಿವೃದ್ಧಿಗೆ ವಿನಿಯೋಗಿಸುವಂತೆ ಮಾಡುತ್ತಿದ್ದರು. ಗ್ರಾಮೀಣ ಪ್ರದೇಶದ ಬ್ರಾಹ್ಮಣರಿಗೆ ವರ್ಷದ ಊಟದ ಖರ್ಚು, ಪೌರೋಹಿತ್ಯದ ಸಂಭಾವನೆ ಎಂದು ದಾನ ನೀಡಿದ್ದೂ ಇದೆ. ಇವೆಲ್ಲ ಭೂ ಸಂಬಂಧದಲ್ಲಿ ಭಾರಿ ಪರಿವರ್ತನೆ ಉಂಟು ಮಾಡಿತ್ತು.

ಭೂಮಿಯನ್ನು ಹಣಕ್ಕೆ ಕೊಂಡು ಕೃಷಿಗಾಗಿ ಬಳಸುವ ಪದ್ಧತಿ ಬಂದ ಮೇಲೆ ವರ್ತಕ ಸಂಘಗಳು ಹೆಚ್ಚಿನ ಸರಕನ್ನು ಪಡೆಯುತ್ತಿದ್ದರು. ಇದರಿಂದ ಹೆಚ್ಚಿನ ಲಾಭ ವರ್ತಕರಿಗೆ ಬಂದಿತ್ತು. ಭೂಮಿಯ ಬೆಲೆಯೂ ಹೆಚ್ಚಾಯಿತು. ಭೂ ಮಾಲಿಕ ಪದ್ಧತಿ ತಲೆದೋರಿತ್ತು. ಜೊತೆಯಲ್ಲಿ ಭೂರಹಿತ ಕೃಷಿ ಕಾರ್ಮಿಕರು, ಜೀತ ಕಾರ್ಮಿಕರು ಹಾಗೂ ಅಸ್ಪರ್ಷತೆ, ತಾರತಮ್ಯತೆ ಸಮಾಜದಲ್ಲಿ ಹೆಚ್ಚಾಯಿತು.

ಬಂದರುಗಳ ಮೂಲಕ ನಡೆದ ವ್ಯಾಪಾರ ವಹಿವಾಟಿಗೆ ಮಧ್ಯವರ್ತಿಗಳಾಗಿ ವರ್ತಕ ಸಂಘಗಳು ಹುಟ್ಟಿಕೊಂಡವು. ಇವುಗಳಲ್ಲಿ ದೇಶಿಯ ಹಾಗೂ ವಿದೇಶಿಯ ವರ್ತಕ ಸಂಘಗಳಿದ್ದವು. ದೇಶಿಯ ಸಂಘಗಳಾದ ಶೆಟ್ಟಿ, ಶೆಟ್ಟಿಕಾರ, ಬಣಂಜಿಗ, ನಖರ, ಎಳಮೆ, ಬಲ್ಲಾಳ, ಹಲರು, ವೀರಬಣಂಜು, ನಾನಾದೇಶಿ, ಉಭಯ ನಾನಾದೇಶಿ, ಹೊರಹಿನವರು, ವಡ್ಡವ್ಯವಹಾರಿ, ಗವರೆ-ಗಾತ್ರಿಗ, ತಂಬುಲಿಗೆ ಸಾಸಿರ್ವರು, ಎಲೆಯ ಬೋಜಂಗರು, ಉಗುರು ಮುನ್ನುರ್ವರು, ಅಯ್ಯಾವೊಳೆ ಐನೂರ್ವರು ಮುಂತಾದವರಿದ್ದರೆ, ವಿದೇಶಿ ವರ್ತಕರ ಸಂಘ ಹಂಜಮಾನವಾಗಿತ್ತು.

ಇವರು ಗುಂಪು-ಗುಂಪಗಳಲ್ಲಿ ಸಂಚರಿಸುತ್ತಿದ್ದರು. ನಿರ್ದಿಷ್ಟಪಡಿಸಿದ ಸರಕು ಸಾಮಗ್ರಿಗಳನ್ನು ಮಾರಾಟ ಮಿನಿಮಯ ಮಾಡುವ ಪೇಟೆಂಟ್ ಹೊಂದಿರುತ್ತಿದ್ದರು. ಇವರು ಬೇರೆ ರಾಜ್ಯಗಳಿಗೆ ಪ್ರವೇಶಿಸುವಾಗ ತಮ್ಮ ಅಧಿಕೃತ ಮುದ್ರೆ ತೋರಿಸಿ ಪರವಾನಿಗೆ ಪಡೆಯುತ್ತಿದ್ದರು. ಪರವಾನಿಗೆ ಪಡೆಯಲು ದುಬಾರಿ ಶುಲ್ಕ ನೀಡುತ್ತಿದ್ದರು. ಈ ವರ್ತಕ ಸಂಘಗಳು ದಾರಿಗಳ್ಳರಿಂದ ಹಾಗೂ ಪರಸ್ಥಳಗಳಲ್ಲಿ ತಮ್ಮ ವಿತ್ತ ಜೀವಿತಗಳ ರಕ್ಷಣೆಗೆ ಬಲವಾದ ಸೈನಿಕ ಪಡೆ ಹೊಂದಿರುತ್ತಿದ್ದರು. ಪ್ರಭುತ್ವದೊಂದಿಗೆ ಇವರ ಸಂಪರ್ಕ ವ್ಯವಹಾರಿಕವಾಗಿತ್ತು. ಇದರಿಂದ ಈ ಸಂಘಗಳ ಪ್ರತಿನಿಧಿಗಳು ಅರಮನೆ, ಬೊಕ್ಕಸ ಅಭಿವೃದ್ಧಿ, ದಾನದತ್ತಿಗಳ ರಕ್ಷಣೆಯಲ್ಲಿ ಮಧ್ಯವರ್ತಿಗಳಾಗಿರುತ್ತಿದ್ದರು.

ಕಡಲೋತ್ತರ ವ್ಯಾಪಾರಿ ಸಂಪರ್ಕವು ಹೊರ ದೇಶಗಳಿಗೆ ಹಾಗೂ ರಾಜ್ಯದ ಒಳಗಿನ ವ್ಯಾಪಾರಿ ಪಟ್ಟಣಗಳಿಗೆ ಸುಲಭವಾದ ಹಾಗೂ ಹತ್ತೀರದ ಮಾರ್ಗಗಳನ್ನು ರಚಿಸಿತು.

ಕಡಲ ಮೂಲಕ ಗ್ರೀಕ್ ರೋಮ್‌ಗಳಿಗೆ ಹಾಗೂ ಪರ್ಷಿಯಾ ಕೊಲ್ಲಿಗೆ ಹತ್ತಿರದ ಕಡಲ ಮಾರ್ಗವನ್ನು ಕಂಡು ಹಿಡಿಯುವಂತೆ ಮಾಡಿತ್ತು. ಹಿಪ್ಪಲಸ್‌ನು ಅಂಥಹ ಕಡಲು ಮಾರ್ಗವನ್ನು ಕಂಡು ಹಿಡಿದನು. ಇದರಿಂದ ಕರಾವಳಿ ಹಾಗೂ ಪರ್ಷಿಯಾ ಕೊಲ್ಲಿಯ ನಡುವೆ ೩೦ ದಿನಗಳ ಯಾತ್ರೆಯಾದರೆ, ಮೆಡಿಟರೇನಿಯನ್ ದೇಶಗಳು ಹಾಗೂ ಕರಾವಳಿಯ ನಡುವೆ ೪೫ ದಿನದ ಯಾತ್ರೆಯಾಯಿತು.

ರಾಜ್ಯದ ಒಳಗೆ ಇರುವ ಪ್ರಮುಖ ವ್ಯಾಪಾರಿ ಪಟ್ಟಣಗಳಿಗೆ ಹಾಗೂ ಬಂದರುಗಳ ನಡುವೆ ಸುರಕ್ಷಿತವಾದ ಹಾಗೂ ಸುಲಭವಾದ ಮಾರ್ಗಗಳನ್ನು ಪ್ರಭುತ್ವ ಹಾಗೂ ವ್ಯಾಪಾರಿ ಸಂಘಗಳು ನಿರ್ಮಿಸಿದವು.

ಕರಾವಳಿಯಲ್ಲಿ ಉಂಟಾದ ಕಡಲೋತ್ತರ ಸಂಪರ್ಕವು ಹೊಸ ಧಾರ್ಮಿಕ ಬದಲಾವಣೆಯನ್ನು ಉಂಟು ಮಾಡಿತ್ತು. ಕರ್ನಾಟಕದಲ್ಲಿ ಪ್ರಚಲಿತದಲ್ಲಿದ್ದ ಎಲ್ಲ ವಿಧದ ಧಾರ್ಮಿಕ ಆಚರಣೆಗಳು ಇಲ್ಲಿದ್ದವು. ವ್ಯಾಪಾರದ ಕಾರಣದಿಂದ ಜೈನ ಧರ್ಮ ಇಲ್ಲಗೆ ಆಗಮಿಸಿತ್ತು. ಜೈನ ಧರ್ಮೀಯರು ವಿವಿಧ ಬಗೆಯ ವರ್ತಕ ಸಂಘಗಳನ್ನು ನಿರ್ಮಿಸಿಕೊಂಡು ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿದ್ದರು. ಜೈನ ಧರ್ಮವು ಜನಸಾಮಾನ್ಯರ ಆಚರಣೆಯ ಧರ್ಮವೂ ಆಗಿತ್ತು. ಮುಂದೆ ಜೈನ ಧರ್ಮದ ಆಚರಣೆಗಳನ್ನು ನಡೆಸಲು ಸಾಧ್ಯವಾಗದ ಜನರು ಅದರಿಂದ ದೂರವಾದರು. ಹಾಗೆಯೆ ರಾಜಾಶ್ರಯ, ವರ್ತಕ ಸಂಘಗಳ ಬೆಂಬಲ ಕಡಿಮೆ ಆದಂತೆ ಜೈನ ಧರ್ಮ ದುರ್ಬಲಗೊಂಡಿತ್ತು.

ಬೌದ್ಧ ಧರ್ಮವು ಕರಾವಳಿಯಲ್ಲಿ ಪ್ರಬಲ ಆಚರಣಾ ಪದ್ಧತಿ ಆಗಿತ್ತು ಎನ್ನುವುದು ಕಾರವಾರ ಬಳಿಯ ಆರ್ಗಾದಿಂದ ಮಂಗಳೂರಿನ ತನಕ ವ್ಯಾಪಿಸಿರುವ ಬೌದ್ಧ ಅವಶೇಷಗಳು ದೃಢಪಡಿಸುತ್ತವೆ. ಬನವಾಸಿ ಬೌದ್ಧರ ಪ್ರಬಲ ಕೇಂದ್ರವಾಗಿದ್ದು, ಅಲ್ಲಿಂದ ಹೊರಟ ಬೌದ್ಧ ಬಿಕ್ಷುಗಳು ಶ್ರೀಲಂಕಾವನ್ನು ಕಡಲ ಮಾರ್ಗವಾಗಿಯೇ ತಲುಪಿದ್ದರು. ಹೈಗುಂದವು ಬೌದ್ಧರ ಕೇಂದ್ರವಾಗಿತ್ತು. ಇಲ್ಲಿ ಕ್ರಿ.ಶ. ೧–೨ ಶತಮಾನಕ್ಕೆ ಸೇರುವ ಬುದ್ಧನ ಎರಡು ಮೂರ್ತಿಗಳು ಹಾಗೂ ದೊಡ್ಡದಾದ ಸ್ತೂಪದ ಅವಶೇಷಗಳಿವೆ. ಕಡಲೋತ್ತರ ಸಂಪರ್ಕವೇ ಕರಾವಳಿಗೆ ಬೌದ್ಧ ಧರ್ಮ ಬರಲು ಕಾರಣವಾಗಿದೆ.

ಕ್ರೈಸ್ತ ಧರ್ಮ ಹಾಗೂ ಇಸ್ಲಾಂ ಧರ್ಮವನ್ನು ಇಲ್ಲಿಗೆ ಬರುವಂತೆ ಮಾಡಿದ್ದು ಕಡಲೋತ್ತರ ಸಂಪರ್ಕಗಳು. ಕ್ರೈಸ್ತ ವ್ಯಾಪಾರಿಗಳೊಂದಿಗೆ ಬಂದ ಕ್ರೈಸ್ತ ಸನ್ಯಾಸಿಗಳು ಸ್ಥಳೀಯರನ್ನು ಕ್ರೈಸ್ತರನ್ನಾಗಿ

ಮಾಡಿದರು. ಹಾಗೆಯೇ ಇಸ್ಲಾಂ ಮತಾನುಯಾಯಿ ಅರಬ್-ಪರ್ಶಿಯನ್ ವ್ಯಾಪಾರಿ ಸಮೂಹವು ಕರಾವಳಿಯ ವ್ಯಾಪಾರಕ್ಕಾಗಿ ಬಂದವರು ಇಸ್ಲಾಂ ಧರ್ಮವನ್ನು ತಂದರು. ಹಂಜಮಾನ ಸಂಘವು ವ್ಯಾಪಕವಾಗಿ ಎಲ್ಲ ದೊಡ್ಡ ಸಣ್ಣ ಬಂದರುಗಳಲ್ಲಿ ತನ್ನ ವ್ಯಾಪಾರ ನಡೆಸುತ್ತಿತ್ತು. ಹೀಗೆ ಬಂದ ಇಸ್ಲಾಂ ಮತಾನುಯಾಯಿ ವರ್ತಕರು ಸ್ಥಳೀಯರೊಂದಿಗೆ ಬೆಳೆಸಿಕೊಂಡ ವೈವಾಹಿಕ ಸಂಬಂಧದ ಪರಿಣಾಮವಾಗಿ ಬ್ಯಾರಿ ಎಂಬ ಪ್ರತ್ಯೇಕ ಪಂಗಡವೇ ಹುಟ್ಟಿಕೊಂಡಿತ್ತು. ಹಾಗೆ ಬಂದವರಲ್ಲಿ ಕಡಲಲ್ಲಿ ದೋಣಿ ನಡೆಸುವಲ್ಲಿ ನುರಿತವರಾದ ನಾಖುದಾ ದಾಲ್ಜಿ ಪಂಗಡ ಕರಾವಳಿಯ ತೀರದಲ್ಲಿ ಅಲ್ಲಲ್ಲಿ ವಾಸವಾಗಿದ್ದರೆ, ವರ್ತಕ ವೃತ್ತಿಯ ನವಾಯುತರೂ ದೊಡ್ಡ ಸಂಖ್ಯೆಯಲ್ಲಿ ಪ್ರಮುಖ ಬಂದರು ಪಟ್ಟಣಗಳಲ್ಲಿ ವಾಸವಾಗಿದ್ದಾರೆ.

ಕರಾವಳಿ ರೇವುಪಟ್ಟಣಗಳಲ್ಲಿ ಸಾಮೂಹಿಕ ಧರ್ಮದಂತೆ ಬೆಳೆದ ಜೈನಧರ್ಮದಿಂದ ಅನೇಕ ರೀತಿಯಲ್ಲಿ ಆರಾಧನೆಗಳು ಪ್ರಭಾವಿತಗೊಂಡವು. ಮುಂದೆ ಬಂದ ಭಕ್ತಿ ಪಂಥವು ಜೈನರನ್ನು ವಿರೋಧಿಸಿತು. ಗುಜರಾತ್‌ನಂಥಹ ಕೇಲವೇ ಬಂದರು ಪಟ್ಟಣ ಬಿಟ್ಟರೆ ಉಳಿದೆಡೆ ಜೈನಧರ್ಮ ಅಳಿಯಿತು. ಉಳಿದ ಜೈನ ವರ್ತಕರು ಬಡ್ಡಿ ವ್ಯವಹಾರಿ ಲಾಭಖೋರರಂತಾದರು. ಕರ್ನಾಟಕದಲ್ಲೂ ವೇದಪ್ರಾಮಾಣ್ಯ ಎಂದು ಒಪ್ಪದ ಪಂಥಗಳು ಕಂಡುಬಂದವು. ಮುಂದೆ ಶಂಕರರತತ್ವ ಹಾಗೂ ಮಾಧ್ವತತ್ವಗಳು ಆ ಸ್ಥಾನ ಆಕ್ರಮಿಸಿದವು. ಆದರೆ ಆ ತತ್ವಗಳು ಕಠೀಣವಾಗಿದ್ದರಿಂದ ಜನಸಾಮಾನ್ಯರಿಂದ ದೂರವಾದವು. ದೇವಾಲಯಗಳು ಆರ್ಥಿಕ ಚಟುವಟಿಕೆಯ ಕೇಂದ್ರಗಳಾದವು. ಬಡ್ಡಿಗೆ ಹಣ ನೀಡುವುದು ಮತ್ತು ದೇವಾಲಯದ ಹಣದಿಂದ ಇನ್ನಿತರ ಉದ್ಯಮಗಳನ್ನು ನಡೆಸುವುದನ್ನು ಸ್ಥಳೀಯ ವರ್ತಕಸಂಘಗಳು ಹಾಗೂ ಪುರೋಹಿತರು ಮಾಡತೊಡಗಿದರು.

ಕರಾವಳಿಯ ಕಡಲೋತ್ತರ ಸಂಪರ್ಕವು ಒಂದು ಸಂಮ್ಮಿಶ್ರ ಆರಾಧನಾ ಪದ್ಧತಿಯನ್ನು ನಿರ್ಮಿಸಿತು. ಕಡಲೋತ್ತರ ವ್ಯಾಪಾರದಲ್ಲಿ ಭಾಗಿಗಳಾಗಿದ್ದ ಸಮುದಾಯಗಳು ವರ್ತಕ ಸಂಘಗಳ ಆರಾಧನಾ ಪದ್ಧತಿಯನ್ನು ಅನುಸರಿಸುವುದು ಸಾಮಾನ್ಯವಾಗಿ ಕಂಡುಬರುತ್ತದೆ. ವರ್ತಕ ಸಂಘಗಳು ನೀಡುತ್ತಿದ್ದ ಆರ್ಥಿಕ ಹಾಗೂ ಸಾಮಾಜಿಕ ಬೆಂಬಲವು ಇದಕ್ಕೆ ಕಾರಣವಾಗಿತ್ತು.

ಆದರೆ ಸ್ಥಳೀಯ ಜನತೆ ತಮ್ಮ ಅನುಕೂಲಕ್ಕೆ ತಕ್ಕಂತೆ ಸರಳವಾದ ಆಚರಣೆಗಳನ್ನು ಅನುಸರಿಸುತ್ತಾ ಬಂದಿದ್ದವು. ಶಿಷ್ಠ ದೇವರಿಗೆ ಬದಲಾಗಿ ನಿಸರ್ಗವನ್ನೋ, ಮರಗಿಡಬಳಿ, ಪ್ರಾಣಿ-ಪಕ್ಷಿಗಳನ್ನು ದೇವರೆಂದು ಗುರುತಿಸಿಕೊಂಡು ಆರಾಧಿಸುತ್ತಾ ಬಂದರು. ಮುಂದೆ ಜೈನ, ಬೌದ್ಧ ಹಾಗೂ ವೈದಿಕ ದೇವ-ದೇವತೆಗಳನ್ನು ಮತ್ತು ಸಾಂಪ್ರದಾಯಗಳನ್ನು ಹಿತಮಿತವಾಗಿ

ಬಳಸಿಕೊಂಡು ತಮ್ಮ ಪೂರ್ವಜರನ್ನು, ಊರಿಗಾಗಿ ಮಡಿದವರನ್ನು ಸ್ಮರಿಸುವ ಪದ್ಧತಿ ನಡೆಸಿಕೊಂಡು ಬಂದರು. ಒಂದು ಸಂಮ್ಮಿಶ್ರ ಸಂಸ್ಕೃತಿ ಇಲ್ಲಿ ಹುಟ್ಟಿಕೊಂಡಿತು.

ವಿವಿಧ ಸಂಸ್ಕೃತಿಗಳ ಒಂದೆಡೆ ಸೇರಿದಾಗ ಪರಸ್ಪರ ಕೊಡುಕೊಳುಗೆಗಳು ನಡೆಯುವುದು ಸಹಜ. ಹೀಗೆ ಉಂಟಾದ ಸಂಪರ್ಕದಿಂದ ಕರಾವಳಿಯ ಜನಜೀವನಕ್ಕೆ ವಿವಿಧ ದೇಶಗಳ ಉಡಿಗೆ ತೊಡಿಗೆಗಳು ಬಂದು ಸೇರಿವೆ. ಆಹಾರ, ಆಭರಣಗಳೂ ಬಂದಿವೆ. ಬನಿಯನ್, ವ್ಯಾಪಾರಿ ಸಮೂಹ ತೊಡುವ ಬಿಳಿಯ ಟೊಪ್ಪಿ, ಪೈಜಾಮ, ಚೂಡಿದಾರ್, ಅಚ್‌ಕನ್ ಮುಂತಾದವು ಪರಕೀಯರ ಸಂಪರ್ಕದಿಂದ ಬಂದಿರುವಂಥಹವು. ಬಹುಮುಖ್ಯವಾಗಿ ಗ್ರೀಕ್ ನಾಗರಿಕತೆಯ ಹಾಗೂ ಪರ್ಶಿಯನ್ ನಾಗರಿಕತೆಯ ಕೊಡುಗೆಗಳಿವು. ಆಭರಣಗಳಲ್ಲಿ ಮೂಗಿನ ನತ್ತು ಹಾಗೂ ಕಿವಿಯ ಚಿಕ್ಕ ಓಲೆ ಈಜಿಪ್ಟ್ ಸಂಪರ್ಕದ ಕೊಡುಗೆ.

ಕರಾವಳಿಯ ಭಾಷೆಯಲ್ಲಿಯೂ ಅನೇಕ ಹೊಸ ಸೇರ್ಪಡೆಯಾದದ್ದು ಕಾಣಬಹುದು. ಗ್ರೀಕರು ಗುರುತಿಸಿದ 'ಕರ್ಪಿಯಾನಾ' ಎಂಬ ಮರವು ದಾಲ್ಚಿನಿ ಮರವಾಗಿದ್ದು, ದ್ರಾವಿಡ ಪದ 'ಕರುಪ್ಪು' 'ಕಾರ್ಪು' ಪದದ ಮೂಲದಿಂದ ಬಂದಿದೆ. ಇದು ಸಂಸ್ಕೃತದ 'ಕರ್ಪೂರ' ಪದದ ಮೂಲ ರೂಪವಾಗಿದೆ.

ಬಂದರು ಪ್ರದೇಶದ ಆಡಳಿತದಲ್ಲಿ ವರ್ತಕ ಸಂಘದ ಪ್ರತಿನಿಧಿಗಳು ಭಾಗಿಗಳಾಗಿದ್ದರು. ತೆರಿಗೆ ಸಂಗ್ರಹ ಶಾಂತಿ–ಸುವ್ಯವಸ್ಥೆ ಮುಂತಾದವುಗಳ ನಿರ್ವಹಣೆಯಲ್ಲಿ ಭಾಗಿಗಳಾಗಿದ್ದರು. ದೇವಾಲಯ ಬಸದಿಗಳಿಗೆ ಬಂದ ಚಿನ್ನ–ಬೆಳ್ಳಿ ನಾಣ್ಯಗಳನ್ನು ತಮ್ಮ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಸಿ ಬಂದ ಲಾಭದಲ್ಲಿ ಅಸಲನ್ನು ಹಿಂದಿರುಗಿಸುತ್ತಿದ್ದರು. ರಾಜನ ಸೈನ್ಯದಂತೆ ಇವರು ಪ್ರಬಲ ಖಾಸಗಿ ಸೈನ್ಯ ಹೊಂದಿದ್ದರು. ತಮಗಾಗದವರ ಹತ್ಯೆಯನ್ನು ಮಾಡಿ ಶಿಕ್ಷೆಯಿಂದ ಪಾರಾಗಿದ್ದ ಉದಾಹರಣೆಗಳು ಇವೆ. ಒಟ್ಟಿನಲ್ಲಿ ವರ್ತಕ ಸಂಘದ ಪ್ರತಿನಿಧಿಗಳು ರೇವು ಪಟ್ಟಣಗಳಲ್ಲಿ ಪರ್ಯಾಯ ಶಕ್ತಿಯಾಗಿ ಬೆಳೆದಿದ್ದರು.

ಬಂದರು ಪ್ರದೇಶದಲ್ಲಿ ಉಂಟಾದ ವ್ಯಾಪಕ ಕಡಲೋತ್ತರ ಸಂಪರ್ಕವು ಸ್ಥಳೀಯರ ಜೀವನ ಪದ್ಧತಿ, ಸಂಪ್ರದಾಯ–ಆಚರಣೆಗಳಲ್ಲಿ ಬದಲಾವಣೆಗಳನ್ನು ತಂದಿತ್ತು. ಕರಾವಳಿಯಲ್ಲಿ ಪ್ರಚಲಿತದಲ್ಲಿದ್ದ ಅಳಿಯ ಕಟ್ಟು ಪದ್ಧತಿ ಮೆಡಿಟರೇನಿಯನ್ ಜನಾಂಗಗಳು ಅನುಸರಿಸುತ್ತಿದ್ದ, ಮಾತೃ ದೇವತಾ ಆರಾಧನೆಯೊಂದಿಗೆ ಸಂಬಂಧ ಹೊಂದಿವೆ. ಮಾತೃ ಪ್ರಧಾನತೆಯನ್ನು ಏಷ್ಯಾ ಮೈನರ್, ಕ್ರೀಟ್, ಈಜಿಪ್ಟ್ ಹಾಗೂ ಬಾಲ್ಕನ್ ಪ್ರದೇಶಗಳಲ್ಲಿ ನೋಡ ಸಿಗುತ್ತದೆ. ಕಡಲೋತ್ತರ ಸಂಪರ್ಕಗಳು ಈ ಪದ್ಧತಿಯನ್ನು ಇಲ್ಲಿ ಪರಿಚಯಿಸಿತ್ತು. ಇಲ್ಲಿ ಸಂಪತ್ತಿನ ಉತ್ತರಾಧಿಕಾರತ್ವವು ಸ್ತ್ರೀಯರದ್ದಾಗಿತ್ತು. ಅದನ್ನು ಸಮರ್ಥಿಸುವ ಭೂತಾಳಪಾಂಡ್ಯನ ಕಥೆಯು ಕಡಲೋತ್ತರ ವ್ಯಾಪಾರದೊಂದಿಗೆ ಸಂಬಂಧ

ಹೊಂದಿರುವದನ್ನು ಕಾಣಬಹುದು. ಮುಂದೆ ಈ ಪದ್ಧತಿ ಅಳಿಯಕಟ್ಟು ಎನ್ನುವ ಹೆಸರಿನಲ್ಲಿ ಮತ್ತೆ ಪುರುಷರಿಗೆ ಪ್ರಾಧಾನ್ಯತೆ ನೀಡುವವರೆಗೆ ಮುಂದುವರೆಯಿತು. ಸ್ತ್ರೀಯನ್ನು ಪ್ರಧಾನವಾಗಿ ವಂಶಾವಳಿಯಲ್ಲಿ ಗುರುತಿಸುತ್ತಿದ್ದ ಪದ್ಧತಿ ಕೇವಲ ಸ್ತ್ರೀ ಪ್ರತಿಮೆಗಳ ಆರಾಧನೆಗೆ ಮೀಸಲಾಯಿತು. ಮನೆಯಲ್ಲಿ, ಸಮಾಜದಲ್ಲಿ ಪುರುಷ ಪ್ರಾಧಾನ್ಯತೆ ವ್ಯಾಪಿಸಿಕೊಂಡಿತ್ತು.

ಶಾಸನಗಳನ್ನು ನಿರ್ಮಿಸುವಲ್ಲಿ ಕರ್ನಾಟಕದ ರಾಜವಂಶಗಳು ಮುಂಚೋಣಿಯಲ್ಲಿವೆ. ಅಸ್ಸಿರಿಯಾ, ಬ್ಯಾಬಿಲೋನಿಯಾ ಮುಂತಾದೆಡೆಗಳಲ್ಲಿ ಕಂಡುಬರುವ ಶಾಸನಗಳ ಶೈಲಿ ಇಲ್ಲಿಯ ಶಾಸನಗಳಲ್ಲಿ ಕಂಡುಬರುತ್ತದೆ.

ಜಾವಾ, ಸುಮಾತ್ರಾ ಮತ್ತಿತರ ದ್ವೀಪಗಳಲ್ಲಿ ಕನ್ನಡದ ಸಂಸ್ಕೃತಿ ಪ್ರಚಲಿತವಾಗಿತ್ತು. ೮ನೇ ಶತಮಾನದ ಜಾವಾದ ಶಾಸನಗಳಲ್ಲಿ ಶಕಗಣನೆಯನ್ನು ಕಾಣಬಹುದಾಗಿದೆ. ಜಾವಾದಲ್ಲಿ ಲಿಂಗಪೂಜೆ ಕರ್ನಾಟಕದ ಪ್ರಭಾವದಿಂದಲೇ ಕಂಡುಬಂದಿದೆ. ಈ ಎಲ್ಲಾ ಪ್ರಭಾವಗಳು ಕರ್ನಾಟಕವನ್ನು ಆಳಿದ ಚಾಲುಕ್ಯ, ರಾಷ್ಟ್ರಕುಟ ಮತ್ತು ಹೊಯ್ಸಳರ ಕಾಲದ ವ್ಯಾಪಾರದ ಸಂದರ್ಭದಲ್ಲಿ ಉಂಟಾಗಿತ್ತು. ಪ್ಯಾಗನ್ ಶಾಸನದಲ್ಲಿ ನಾನಾದೇಶಿ ವ್ಯಾಪಾರಿಗಳು ವಿಷ್ಣು ದೇವಾಲಯವನ್ನು ಕಟ್ಟಿಸಿದ್ದು ತಿಳಿಯುತ್ತದೆ.

ಆಗ್ನೇಷಿಯಾದ ಅತ್ಯಂತ ಹಳೆಯ ಶಾಸನವಾದ ಪೊಕ್ಕನ್ಹ ಶಾಸನದ ಲಿಪಿ ದಕ್ಷಿಣ ಭಾರತೀಯ ಲಿಪಿಯೆಂದು ಗುರುತಿಸಿದ್ದಾರೆ. ಅಲ್ಲಿಯ ಐದುಆರನೇ ಶತಮಾನದ ಶಾಸನಗಳಲ್ಲಿ ಕದಂಬರ ಲಿಪಿ ಕಾಣುತ್ತದೆ. ಒಕಲ್‌ನ ಕ್ರಿ.ಶ ೮೭೯ ರ ಶಾಸನದಲ್ಲಿ ಪ್ರಣವೇಶ್ವರನ ವರ್ಣನೆ, ತಾಳಗುಂದದ ಪ್ರಣವೇಶ್ವರನ ವರ್ಣನೆಯಂತಿದೆ. ಇಂತಹ ಅನೇಕ ಶಿಲ್ಪ, ಭಾಷೆ, ಲಿಪಿ ಮುಂತಾದ ಹೊಲಿಕೆಗಳು ಇಂದಿಗೂ ನೋಡಲು ಸಿಗುತ್ತವೆ. ಬಹು ಮುಖ್ಯವಾಗಿ ಆಗ್ನೇಷಿಯಾದ ಹಲವಾರು ಅರಸರ ಹೆಸರುಗಳ ಮುಂದೆ ವರ್ಮಾ ಎನ್ನುವ ವಿಶೇಷಣ ಸಾಮಾನ್ಯವಾಗಿತ್ತು. ಇದು ಕದಂಬ ಅರಸರ ಹೆಸರುಗಳಲ್ಲಿ ಕಂಡುಬರುವ ವಿಶೇಷಣೆಯಾಗಿದೆ.

ಕರಾವಳಿಯ ಕಡಲೋತ್ತರ ವ್ಯಾಪಾರವು ಪಡೆಯುತ್ತಿದ್ದ ಲಾಭ ನೋಡಲಾಗದೆ ಗ್ರೀಕರು ಸೇಡಿನ ನಿಷೇಧ ಹೇರಿದ್ದರು.

ಪ್ಲಿನಿಯು ಭಾರತದೊಂದಿಗಿನ ವ್ಯಾಪಾರದಿಂದ ರೋಮ್ ಸಾಮ್ರಾಜ್ಯವು ಪ್ರತಿ ವರ್ಷ ೫೫೦ ದಶಲಕ್ಷಕ್ಕಿಂತ ಕಡಿಮೆ ಇಲ್ಲದಷ್ಟು ಸ್ಟೆಸ್ಟರ್ಸ‌ಗಳನ್ನು ಕಳೆದುಕೊಳ್ಳುತ್ತಿದೆ ಎಂದು ಪ್ರಲಾಪಿಸುವಷ್ಟು ದೊಡ್ಡ ವ್ಯಾಪಾರ ನಡೆದಿತ್ತು. ಅಲ್ಲಿಯ ಸ್ತ್ರೀಯರು ಭಾರತದಲ್ಲಿ ದೊರೆಯುತ್ತಿದ್ದ ಶೃಂಗಾರ ವಸ್ತುಗಳ ದೊಡ್ಡ ಗ್ರಾಹಕರಾಗಿದ್ದರು. ಹತ್ತಿಯ ನುಣುಪು ಬಟ್ಟೆ ಹಾಗೂ ಕಾಳುಮೆಣಸು ಮುಖ್ಯ ಮಾರಾಟ ವಸ್ತುವಾಗಿತ್ತು. ಒಂದು ಪೌಂಡ ಕಾಳುಮೆಣಸಿಗೆ ೩೦೦ ರಿಂದ ೪೦೦

ದಿನಾರುಗಳು ಕೊಡಬೇಕಾಗುತ್ತಿತ್ತು. ಇದರಿಂದ ಕುಪಿತಗೊಂಡ ಅಲ್ಲಿನ ಗ್ರೀಕ್, ರೋಮ್ ಸಾಮ್ರಾಟರು ಭಾರತದೊಂದಿಗೆ ನೇರ ವ್ಯಾಪಾರವನ್ನು ನಿಷೇಧಿಸಿದ್ದರು. ಇದರಿಂದ ಭಾರತದ ವ್ಯಾಪಾರಿಗಳು ಗ್ರೀಕ್‌ನೊಂದಿಗೆ ನೇರ ವ್ಯಾಪಾರಿ ಸಂಬಂಧ ನಿಲ್ಲಿಸಿದ್ದರು. ಅರಬ್ ಮತ್ತು ಪರ್ಷಿಯಾದ ವ್ಯಾಪಾರಿಗಳು ಭಾರತ ಮತ್ತು ಗ್ರೀಕ್ ರೋಮ್‌ನ ನಡುವೆ ವ್ಯಾಪಾರಿ ಮಧ್ಯವರ್ತಿಗಳಾಗಿ ಅಪೂರ್ವ ಲಾಭಗಳಿಸಿಕೊಂಡರು.

ಭಾರತದೊಂದಿಗಿನ ನೇರ ಸಂಪರ್ಕ ತಪ್ಪಿದ್ದರಿಂದ ಪಿಟ್ರಾ, ಗೆರ್ರಾ, ಪಾಲ್ಮೀರಾ ಹಾಗೂ ಪಾರ್ಥಿಯಾದಂತ ಪ್ರದೇಶಗಳು ವ್ಯಾಪಾರವನ್ನು ಕಳೆದುಕೊಂಡು ಬಡವಾದವು. ಅಲೆಗ್ಝಾಂಡ್ರಿಯಾವು ಗ್ರೀಸ್ ಮತ್ತು ಭಾರತ ನಡುವಿನ ಸಮುದ್ರ ವ್ಯಾಪಾರ ಮಳಿಗೆಯಾಗಿತ್ತು. ಲಾಗಸ್‌ನ ಮಗನಾದ ಟೋಲೆಮಿಯು ತನ್ನ ಕಾಲದಲ್ಲಿ ಭಾರತೀಯ ವ್ಯಾಪಾರಕ್ಕಾಗಿ ಕೆಂಪುಸಮುದ್ರ ಮತ್ತು ನೈಲ ನದಿಯನ್ನು ಒಂದುಗೂಡಿಸುವ ಕಾಲುವೆಯನ್ನು ಕಟ್ಟಿಸಿದನು. ಹೊಮರೈಟ್ ಸಾಮ್ರಾಜ್ಯದ ಮೇಲೆ ಕೆಟ್ಟ ಛಾಯೆ ಆವರಿಸಿತು. ಹೊಮರೈಟ್ ಸಾಮ್ರಾಜ್ಯ ಪತನಗೊಂಡಿತು.

ರೋಮ್–ಗ್ರೀಕ್‌ಗಳಿಗೆ ಸಾಗುತ್ತಿದ್ದ ಭಾರತದ ಸರಕುಗಳು ಅಲೇಗ್ಝಾಂಡ್ರಿಯಾ ತಲುಪಿ ಅಲ್ಲಿಂದ ಮುಂದೆ ಕೆಂಪುಸಮುದ್ರದವರೆಗೆ ಭೂಮಾರ್ಗವಾಗಿಯೂ ಅಲ್ಲಿಂದ ಕಾಲುವೆಯ ಮೂಲಕ ಅಥವಾ ನೈಲ್ ನದಿಯ ಮೂಲಕ ದೇಶ–ದೇಶಗಳನ್ನು ತಲುಪುತ್ತಿದ್ದವು. ಸಿರಿಯಾದ ಪಾಲ್ಮಿರಾ ಇವರ ಇನ್ನೊಂದು ಮುಖ್ಯ ಕೇಂದ್ರವಾಗಿತ್ತು.

ವ್ಯಾಪಾರ ಸಂಘಗಳ ಸಂಪರ್ಕದಿಂದ ಚೀನಾ ದಶಮಾನಪದ್ಧತಿ ಕಲಿಯಿತು. ಇದರೊಂದಿಗೆ ಬೌದ್ಧ ಭಿಕ್ಷುಗಳೂ ಭಾಗಿಗಳಾಗಿದ್ದರು. ವ್ಯಾಪಾರಿಗಳು ಕಚ್ಚಾ ಪದಾರ್ಥಗಳ, ಅಂದರೆ ವಿವಿಧ ಬಗೆಯ ಅಕ್ಕಿಗಳನ್ನು ಉತ್ಪಾದಿಸಲು ಪ್ರೊತ್ಸಾಹಿಸಿದರು, ಕರಕುಶಲ ವಸ್ತುಗಳನ್ನು ಸಿದ್ಧಪಡಿಸಲು ಪ್ರಚೋದಿಸಿದರು. ಬಟ್ಟೆಗಳನ್ನು ನೆಯುವುದು, ಅವುಗಳಿಗೆ ಬಣ್ಣ ನೀಡುವ ಕೆಲಸಗಳನ್ನು ದೊಡ್ಡ ರೀತಿಯಲ್ಲಿ ಬಂದರು ಪಟ್ಟಣಗಳಲ್ಲಿ ಆರಂಭಿಸಿದರು. ಇವುಗಳು ಸ್ಥಳೀಯ ಹಾಗೂ ಹಿನ್ನಾಡಿನ ಜನರಲ್ಲಿ ಆರ್ಥಿಕ ಪರಿವರ್ತನೆ ತಂದಿತು. ಹಡಗುನಿರ್ಮಾಣ, ರಿಪೇರಿ ಹಾಗೂ ದೂರಯಾನಕ್ಕೆ ಬೇಕಾದ ಸಲಕರಣೆಗಳ ಉತ್ಪಾದನೆಯೂ ಸ್ಥಳೀಯ ನುರಿತ ನೌಕಾಯಾನಿ ಮೀನುಗಾರರಲ್ಲಿ ಹೊಸತನ ತಂದಿತು. ಜೊತೆಯಲ್ಲಿ ಕಡಲೋತ್ಪನ್ನಗಳನ್ನು ಸಂಗ್ರಹಿಸುವ ಮತ್ತು ವನೋತ್ಪನ್ನ ಸಂಗ್ರಹಿಸುವ ಕಾರ್ಮಿಕರು ಆರ್ಥಿಕವಾಗಿ ಚೇತರಿಸಿಕೊಂಡರು.

ಭಾರತದ ಸಂಪರ್ಕವು ಗ್ರೀಸ್, ಬೈಬಿಲೋನಿಯಾ, ಅರಬ್ ದೇಶಗಳಲ್ಲಿ ವಿಜ್ಞಾನ ಹಾಗೂ ತತ್ವಶಾಸ್ತ್ರಗಳಲ್ಲಿ ಬಿಂಬಿತವಾಯಿತು. ಅಲೆಗ್ಝಾಂಡ್ರಿಯವು ಪ್ರಮುಖ ಕೇಂದ್ರವಾಗಿದ್ದರಿಂದ ಅಲ್ಲಿ ಹೋಗಿಬಂದ ಭಾರತೀಯರು ಅಲ್ಲಿಯ ವಿಜ್ಞಾನಿಗಳೊಂದಿಗೆ ಸಂಪರ್ಕ ಪಡೆದರು. ಯವನಜಾತಕ

ಎಂಬ ಜ್ಯೋತಿಷ್ಯ ಕಾವ್ಯವು ಗ್ರೀಕ್ ಕೃತಿಯ ಆಧಾರದಲ್ಲಿ ರಚಿಸಿದ್ದಾಗಿತ್ತು. ಭಾರತೀಯರ ಔಷಧಿಗಳನ್ನು ಉಪಯೋಗಿಸುವುದು ಗ್ರೀಕ್ ಹಾಗೂ ರೋಮನ್ನರು ಕಲಿತರು. ನವಪ್ಲೋಟೋವಾದಿಗಳು ಭಾರತೀಯ ಪುರಾತನ ತತ್ವಜ್ಞಾನದಿಂದ ತಮ್ಮ ಜ್ಞಾನ ಹೆಚ್ಚಿಸಿ ಕೊಂಡರು. ಆದರೆ ಗ್ರೀಕ್ ಹಾಗೂ ಭಾರತೀಯರು ಒಂದೇ ರೀತಿಯ ಪ್ರಶ್ನೆಗಳನ್ನು ಎತ್ತಿ ಉತ್ತರಗಳನ್ನು ಒಂದೇ ರೀತಿಯಾಗಿ ಪಡೆದಿದ್ದಾರೆ. ಇಲ್ಲಿ ಯಾರ ಮೇಲೆ ಯಾರ ಪ್ರಭಾವ ಎಂದು ಗುರುತಿಸುವುದು ಕಷ್ಟವಾಗಿದೆ.

ಗಣಿತ, ಖಗೋಳವಿಜ್ಞಾನ ದೇಶದ ಗಡಿದಾಟಿ ಅಲೆದಾಡಿದವು. ರೋಮನ್ನರು ಗೃಹಗಳಿಗೆ ವಾರದ ಹೆಸರುಗಳನ್ನು ನೀಡಿದರು. ಮತ್ತು ವಾರದ ಹೆಸರುಗಳನ್ನು ರೋಮನ್ ಪಂಚಾಗಕ್ಕೆ ಸೇರಿಸಿದ್ದರು, ಕ್ರಿ.ಶ ನಾಲ್ಕನೇ ಶತಮಾನದಲ್ಲಿ ಭಾರತದಲ್ಲಿ ಈ ಪದ್ಧತಿ ಜಾರಿಗೆ ಬಂದಿತು. ಏಳುದಿನಗಳವಾರ, ರವಿವಾರ ಆರಂಭದ ದಿನವಾಗಿತ್ತು. ರೋಮನ್ನರು ಹಾಗೂ ಗ್ರೀಕರು ಯವನರೆಂದು ಭಾರತದಲ್ಲಿ ಗುರುತಿಸಿ ಕೊಂಡಿದ್ದರು. ಯುನಾನಿಯು ವೈಧ್ಯ ಶಾಸ್ತ್ರವಾಗಿತ್ತು. ಈ ಪದ್ದತಿಯನ್ನು ಗ್ರೀಕ್ ನಿಂದ ಸಂಪಾದಿಸಿ ಜತನದಿಂದ ಕಾಪಾಡಿಕೊಂಡು ಬಂದ ಅರಬ್ಬರು ಅದನ್ನು ಭಾರತಕ್ಕೆ ಆ ಹೆಸರಿನಲ್ಲಿಯೇ ನೀಡಿದರು. ವಿಜ್ಞಾನವನ್ನು ಭಾರತದಲ್ಲಿ ವಿಸ್ತಾರಗೊಳಿಸಿದವರು ಅರಬ್ಬರು. ಆಕ್ಷಾಂಶ-ರೇಖಾಂಶಗಳ ಪರಿಚಯ, ಖಗೋಳ ಶಾಸ್ತ್ರಕ್ಕೆ ತಾಂತ್ರಿಕ ಪದಗಳ ಸೇರ್ಪಡೆ, ನಕ್ಷತ್ರಗಳ ವಿವರ ಇದರಿಂದಾಯಿತು. ಈಜಿಪ್ಟದಿಂದ ೩೬೫ ದಿನಗಳ ವಾರ್ಷಿಕ ಪಂಚಾಂಗ, ಮೆಸೆಪೊಟೇಮಿಯನ್ನರ ಅಳತೆ, ತೂಕಗಳು ಭಾರತಕ್ಕೆ ಪರಿಚಯಿಸಲ್ಪಟ್ಟವು. ಕರಾವಳಿಯ ಅಳತೆ, ತೂಕಗಳ ಜೊತೆ ಅವುಗಳು ಗುರುತಿಸಪಟ್ಟವು. ಇಂದಿಗೂ ಕೂಡ ದ್ರಮ್ಮವು ದಾಮ್ ಎಂದು ಬಳಕೆಯಾಗುತ್ತಿದೆ. ಗ್ರೀಕ್‌ನ ಥೇಲಿಸನು ಕ್ರಿ.ಶ. ಪೂ. ೬ನೇ ಶತಮಾನದ ಈಜಿಪ್ಟ್‌ಗೆ ಹೊಸ ರೇಖಾಶಾಸ್ತ್ರ ಪರಿಚಯಿಸಿದರೆ, ಪೈಥಾಗೊರಸ್ ಕ್ರಿ.ಪೂ ೫ನೇ ಶತಮಾನದಲ್ಲಿ ಜಾಮಿತಿಯ ಒಳಹೊರಗನ್ನು ಪರಿಚಿಸಿದ್ದನು. ಹಲವರು ಮಾಡಿದ ಸಾಧನೆ ಭಾರತಕ್ಕೂ ಬಂದಿತು. ಖಗೋಳದ ಅಧ್ಯಯನವು ಪ್ರಪಂಚದ ಜನರಲ್ಲಿ ಭವಿಷ್ಯದ ಬಗ್ಗೆ ಚಿಂತಿಸುವಂತೆ ಮಾಡಿತು. ಖಗೋಳದ ಅಧ್ಯಯನದಲ್ಲಿ ಗ್ರೀಕರು ಹಾಗೂ ಭಾರತೀಯರು ಯಾರಿಗೆ ಯಾರು ಕೃತಜ್ಞರೆಂದು ಗುರುತಿಸುವುದೇ ಕಷ್ಟ. ಆದರೆ ದ್ವಾದಶ ರಾಶಿಗಳಿಗೆ ಯವನರು ಕೊಟ್ಟ ಹೆಸರುಗಳನ್ನೇ ಭಾರತೀಯರು ನೀಡಿದ್ದಾರೆ. ಭಾಸ್ಕರನು ಬೀಜಗಣಿತದಲ್ಲಿ ತುಂಬಾ ಸಾಧನೆ ಮಾಡಿದ್ದನ್ನು. ಚೀನಾದ ರಸವಾದದ ಪ್ರಯೋಗದ ಫಲ ಭಾರತೀಯರು ಬಳಸಿಕೊಂಡಿದ್ದಾರೆ. ಅವರ ಮೀನಿನ ಬಲೆ, ಸೆಣಬು, ರೇಷ್ಮೆ ಬಟ್ಟೆ, ಭಾರತಕ್ಕೆ ಬಂದವು. ರೇಷ್ಮೆ ಬಟ್ಟೆಯು ಪವಿತ್ರವು, ವೈಭವದ್ದೂ ಆದ ಚೀನಾಂಬರ ಬಟ್ಟೆಯಾಗಿ ಬಳಕೆಯಾಗುತ್ತಿತ್ತು. ಚೀನಿ ಭಾಷೆಗೆ ಅನೇಕ ಬೌದ್ಧ ಗ್ರಂಥಗಳು

ಅನುವಾದವಾದವು. ಬಸರೂರುರಿನಲ್ಲಿ ಚೀನಾದ ವರ್ತಕರಿಗೂ, ಸ್ಥಳೀಯ ವರ್ತಕರಿಗೂ ಧಾರ್ಮಿಕ ಕಾರಣಕ್ಕೆ ಕಲಹ ಉಂಟಾಗುತ್ತಿತ್ತು. ಮುಂದೆ ಭಾರತೀಯ ವರ್ತಕರು ಹಾಗೂ ಚೀನಾ ವರ್ತಕರು ಪರಸ್ಪರ ಆರಾಧನಾ ಪದ್ಧತಿಯಲ್ಲಿ ಸೌಹಾರ್ದತೆಯ ಮನೋಭಾವ ಬೆಳೆಸಿಕೊಂಡಿದ್ದರಿಂದ ಇಬ್ಬರ ನಡುವೆ ಮೈತ್ರಿ ಏರ್ಪಟ್ಟಿತ್ತು. ಇದರ ಪರಿಣಾಮ ಇಂದು ಬಸರೂರಿನಲ್ಲಿ ಚೀನಾದ ಅನೇಕ ವಿಧದ ಮೂರ್ತಿಗಳು ಕಂಡು ಬರುತ್ತವೆ. ಮೂಡಬಿದ್ರೆಯ ಬಸದಿಯ ಬಿತ್ತಿಯಲ್ಲಿ ಚೀನಾದ ಕಾಲ್ಪನಿಕ ಪ್ರಾಣಿ ಡ್ರೆಗನ್ ಚಿತ್ರ ಕಾಣುತ್ತದೆ. ಹಾಗೆಯೆ ಆಫ್ರಿಕಾದ ಜಿರಾಫೆಯ ಉಬ್ಬು ಶಿಲ್ಪವು ಇದೆ.

ಅಲ್ಬೆರೋನಿ (ಕ್ರಿ.ಶ ೯೭೩-೧೦೪೮)ಯು ಸಂಸ್ಕೃತ ಗ್ರಂಥ ಅಧ್ಯಯನ ಮಾಡಿದನು. ಖಲೀಪರಾದ ಅಲ್‌ಮರ್ಸೂರ್ (ಕ್ರಿ.ಶ ೭೫೪-೭೭೫) ಮತ್ತು ಹರೊನ್ ರಾಷಿದ್ (ಕ್ರಿ.ಶ ೭೮೬-೮೦೯) ಸಂಸ್ಕೃತದಿಂದ ಕೃತಿಗಳನ್ನು ಅನುವಾದಿಸಿದರೆ, ಗ್ರೀಕ್‌ನ ಅನೇಕ ಕೃತಿಗಳನ್ನು ಪರ್ಶಿಯಾಕ್ಕೆ ಅನುವಾದಿಸಿದರು. ಅಲ್-ಖುವಾರಿಸ್ಮಿ ಹಿಂದೂ ಮತ್ತು ಗ್ರೀಕ್ ಗಣಿತ ಒಟ್ಟು ಸೇರಿಸಿ ಹಿಂದೂ ಸಂಖ್ಯೆಗಳನ್ನು ಅರಬ್ ದೇಶಯಲ್ಲಿಯೂ, ಪಾಶ್ಚಿಮಾತ್ಯ ದೇಶಗಳಲ್ಲಿಯೂ ಹರಡಿದನು. ಅಲ್‌ಜಿಬ್ರ ಎಂದು ಬೀಜಗಣಿತಕ್ಕೆ ಹೆಸರು ಕೊಟ್ಟವನು ಮೊರಾಕ್ಕೋದ ಅಲ್ಬನ್. ಈತ ಹಿಂದೂ ಸಂಖ್ಯೆಗಳ ವಿಚಾರವಾಗಿ ಬರೆದನು. ಬ್ರಹ್ಮಾಗುಪ್ತನ ಬೀಜಗಣಿತದ ಪರಿಚಯವನ್ನು ಅರಬರು ಪಡೆದರು.

ಪ್ರಪಂಚದ ಯುವುದೇ ಭಾಗದಲ್ಲಿ ಹೊಸದು ಬಂದಾಗ ಅದು ಕೆಲವೇ ಕಾಲ ಅಲ್ಲಿರಬಹುದು. ಕಾಲಕ್ರಮೇಣ ಅದು ಎಲ್ಲೆಡೆ ಹರಡುತ್ತದೆ. ಇದೇ ನಾಗರಿಕತೆಗಳ ಸಂಸ್ಕೃತಿಗಳ ಅಂತರಾವಲಂಭನೆ. ನೀರಿನಕಣಗಳು ಪ್ರತ್ಯೇಕವಾಗಿದ್ದರೂ ಅವುಗಳು ಒಂದಾಗಿದ್ದಾಗ ಮಾತ್ರ ಅದರ ರೂಪ ಕಂಡುಬರುತ್ತದೆ. ಆದರೆ ಅದರ ಸ್ವತಂತ್ರ ರೂಪ ಕಣ್ಮರೆಯಾಗಿರುತ್ತದೆ. ಆ ನೀರು ನದಿಯಾಗಿ ಎಲ್ಲೆಲ್ಲೋ ಹರಿಯುತ್ತದೆ. ಹೀಗೆ ಸಂಸ್ಕೃತಿ ಎನ್ನುವುದು ಪರಸ್ಪರ ಕೊಡುಕೊಳುಗೆಗಳಿಂದ ರೂಪಿತವಾಗಿರುತ್ತದೆ. ಮುಂದೆ ಅದರ ಪ್ರತ್ಯೇಕತೆ ಕಣ್ಮರೆಯಾಗಿ ಅದು ಪ್ರತ್ಯೇಕವಾಗಿ ಗುರುತಿಸಲಾಗದಷ್ಟು ಒಂದಾಗಿರುತ್ತದೆ. ಅದೇ ರೀತಿ ಇಲ್ಲಿಯೂ ಸಾಂಸ್ಕೃತಿಕ ಹಾಗೂ ಇತರ ಕೊಡುಗೆಗಳು ಒಂದಾಗಿ ಬೆರೆತಿವೆ. ಇಲ್ಲಿಂದ ಹೋದ ರೀತಿ ನೀತಿಗಳೂ ವಿದೇಶಗಳಲ್ಲಿ ಸೇರಿಹೋಗಿವೆ.

ಹೀಗೆ ಬಂದರುಗಳ ಅಧ್ಯಯನದ ಸಂದರ್ಭದಲ್ಲಿ ನಿರೀಕ್ಷೆ ಮಾಡಿದಂತೆ, ಬಂದರುಗಳು ಕರಾವಳಿಯ ಆರ್ಥಿಕ ಹಾಗೂ ಸಾಂಸ್ಕೃತಿಕ ಜೀವನದ ಮೇಲೆ ಬಹುತರದ ಪ್ರಭಾವ ಬೀರಿದ್ದು ಕಂಡುಕೊಳ್ಳಲಾಗಿದೆ.

ಹೀಗೆ ಬಂದರುಗಳ ಅಧ್ಯಯನದ ಸಂದರ್ಭದಲ್ಲಿ ನಿರೀಕ್ಷೆ ಮಾಡಿದಂತೆ, ಬಂದರುಗಳು ಕರಾವಳಿಯ ಆರ್ಥಿಕ ಹಾಗೂ ಸಾಂಸ್ಕೃತಿಕ ಜೀವನದ ಮೇಲೆ ಬಹುತರದ ಪ್ರಭಾವ ಬೀರಿದ್ದು ಕಂಡುಕೊಳ್ಳಲಾಗಿದೆ. ಇದೊಂದು ಸಾಮಾಜಿಕ ಹಾಗೂ ಆರ್ಥಿಕ ಚರಿತ್ರೆ ರಚನೆಯ ಪ್ರಯತ್ನವಾಗಿದೆ. ಬಂದರುಗಳನ್ನು ಅಧ್ಯಯನ ನಡೆಸುವುದರ ಮೂಲಕ ಕರ್ನಾಟಕದ ಸಾಮಾಜಿಕ ಹಾಗೂ ಆರ್ಥಿಕ ಸ್ಥಿತಿಗತಿಗಳನ್ನು ಅರ್ಥೈಸಿಕೊಳ್ಳುವ ಪ್ರಯತ್ನವನ್ನು ಈ ಮಹಾಪ್ರಬಂಧದಲ್ಲಿ ಮಾಡಲಾಗಿದೆ. ಕರಾವಳಿ ಕರ್ನಾಟಕದ ಬಂದರುಗಳು ಪ್ರಾಚೀನ ಕಾಲದಿಂದ ಇಂದಿನವರೆಗೂ ರಾಜ್ಯದ ಹಾಗೂ ದೇಶದ ಆರ್ಥಿಕತೆಯಲ್ಲಿ ನಿರ್ಣಾಯಕವಾದ ಪಾತ್ರವನ್ನು ವಹಿಸಿಕೊಂಡು ಬಂದಿದೆ. ಆದರೆ ಚರಿತ್ರೆ ಬರವಣಿಗೆಯಲ್ಲಿ ಮಾತ್ರ ಬಂದರುಗಳ ಚರಿತ್ರೆ ವಿಶೇಷವಾಗಿ ಗುರುತಿಸಿಕೊಳ್ಳಲಿಲ್ಲ. ಚರಿತ್ರೆಯನ್ನು ಆರ್ಥಿಕ ಚರಿತ್ರೆಯನ್ನಾಗಿ ಪರಿಭಾವಿಸಿಕೊಂಡು ಜನಕೇಂದ್ರಿತ ಚರಿತ್ರೆ ನಿರ್ಮಾಣಕ್ಕೆ ಮುಂದಾದಾಗ ಮಾತ್ರ ಬಂದರುಗಳ ಚರಿತ್ರೆಯ ಪ್ರಾಮುಖ್ಯತೆ ಅರ್ಥವಾಗಲು ಸಾಧ್ಯ. ಈ ಬಗೆಯ ಚರ್ಚೆಯನ್ನು ಬೆಳೆಸುವ ಹಾಗೂ ಪೂರಕ ಆಕರಗಳನ್ನು ವಿಶ್ಲೇಷಿಸುವ ಪ್ರಯತ್ನವನ್ನು ಮಹಾಪ್ರಬಂಧದ ಅಧ್ಯಯಗಳಲ್ಲಿ ಮಾಡಲಾಗಿದೆ.

ಅನುಬಂಧ -೧

ಓದಿದ ಹಾಗೂ ಪರಿಶೀಲಿಸಿದ ಕೃತಿಗಳು

ಪರಾಮರ್ಶನ ಗ್ರಂಥಗಳು

ಪ್ರಾಥಮಿಕ ಆಕರಗಳು

ಶಾಸನಗಳ ಸಂಗ್ರಹ, ಪುರಾತತ್ವ ಇಲಾಖೆಯ ವರದಿಗಳು, ಇತ್ಯಾದಿ

ಗುರವ ಆರ್.ಎನ್., ಕಾರವಾರ ಜಿಲ್ಲೆ ಶಾಸನ

ರಮೇಶ ಕೆ.ವಿ., ಕರ್ನಾಟಕ ಶಾಸನ ಸಮೀಕ್ಷೆ

———— ತುಳುನಾಡಿನ ಶಾಸನಗಳು.

ಹಿರೇಮಠ ಆರ್.ಸಿ., ಕಲಬುರ್ಗಿ ಎಂ.ಎಂ., ಶಾಸನ ಸಂಪದ

ಕಲಬುರ್ಗಿ ಎಂ.ಎಂ., ವಿಜಾಪೂರ ಜಿಲ್ಲೆಯ ಶಾಸನಸೂಚಿ.

———— ಧಾರವಾಡ ಜಿಲ್ಲೆಯ ಶಾಸನಸೂಚಿ.

ಪಂಚಮುಖಿ ಆರ್.ಎಸ್., ಕರ್ನಾಟಕದ ಶಾಸನಗಳು.

ರಿತ್ತಿ ಶ್ರೀನಿವಾಸ ಅಶೋಕನ ಧರ್ಮಶಾಸನಗಳು.

ಶಾಸನ ಅಧ್ಯಯನ, ಸಂ.೫. ಸಂ. ೧, ಜನವರಿ–ಜೂನ್ ೨೦೦೮.

———— ಸಂ.೨. ಸಂಚಿಕೆ ೨, ಜುಲೈ, ಡಿಸೆಂಬರ್ ೨೦೦೬ ಕ.ವಿ.ವಿ. ಹಂಪಿ.

ಪಿಎಚ್.ಡಿ ಹಾಗೂ ಡಿ.ಲಿಟ್ ಮತ್ತು ಎಂ.ಫಿಲ್ ಪ್ರಬಂಧಗಳು

ಚಿದಾನಂದ ಮೂರ್ತಿ ಎಮ್., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕ್ರಿ.ಶ ೪೫೦–೧೧೫೦ ಸ್ವಪ್ನಾ, ಬೆಂಗಳೂರು ೨೦೧೧.

ಜಯಪ್ಪ ಗೌಡ ಡಿ.ಎಸ್., ಕರ್ನಾಟಕದ ಕಡಲಾಚೆಯ ಸಂಪರ್ಕಗಳು, ಶುಭೋದಯಾ ಪ್ರಕಾಶನ, ಮೈಸೂರು ೧೯೮೩.

ವರ್ಮ ಶೈಲಾ ಟಿ., ತುಳುನಾಡಿನ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಜ್ಞಾನೋದಯ ಪ್ರಕಾಶನ, ಬೆಂಗಳೂರು ೨೦೦೨.

ಹಿರೇಮಠ ಬಿ.ಆರ್., ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೮೬.

ಮಂಜುನಾಥ ಸಿ.ಯು., ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ, (ಕ್ರಿ.ಶ. ೧೧೫೦–೧೩೪೦) ಚಿತ್ತುಲಾ ಪ್ರಕಾಶನ, ಕುಪ್ಪಂ. ಆಂಧ್ರಪ್ರದೇಶ ೨೦೧೪.

ನಾಯಕ ಎನ್.ಆರ್., ಕಾರವಾರ ಜಿಲ್ಲೆಯು ಜನಪದ ಗೀತೆಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೮೨.

ಶೆಟ್ಟಿ ಎಸ್.ಡಿ., ತುಳುನಾಡಿನ ಜೈನಧರ್ಮ, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಉಡುಪಿ ೨೦೦೨.

ಶೇಷ ಶಾಸ್ತ್ರಿ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೨೦೦೪.

ವೆಂಕಟಸ್ವಾಮಿ ಎಮ್., ಕೋಲಾರ ಚಿನ್ನದ ಗಣಿಗಳು, ಡಿ.ಲಿಟ್ ಮಹಾಪ್ರವಬಂಧ, ಸಾಹಿತ್ಯ ಸುಗ್ಗಿ, ಬೆಂಗಳೂರು ೨೦೧೦.

ಕನ್ನಡ ಪುಸ್ತಕಗಳು

ಅಣ್ಣಿಗೇರಿ ಎ.ಎಮ್., ಶೇಷ ಶಾಸ್ತ್ರೀ ಆರ್., ಶಾಸನ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು–೧೮, ೧೯೯೯.

____________ ಮೇವುಂಡಿ ಮಲ್ಲಾರಿ, ಸಂ. ಶಾಸನ ಸಾಹಿತ್ಯ ಸಂಗ್ರಹ, ಕೆ.ಆರ್.ಐ., ಧಾರವಾಡ ೧೯೬೧.

ಅಣ್ಣಾರಾಯ ಮಿರ್ಜಿ, ತೀರ್ಥಂಕರ ಮಹಾವೀರ ಭಗವಾನ, ೨೫೦೦ ನೇ ನಿರ್ವಾಣೋತ್ಸವ ಸಮಿತಿ, ಬೆಂಗಳೂರು ೧೯೭೫.

ಅಮೃತ ಸೋಮೇಶ್ವರ, ತುಳುಜಾನಪದ ಕೆಲವು ನೋಟಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ ೨೦೦೭.

ಅನೀಕಿನ್ ಎ.ವಿ., ರಾಜಕೀಯ ಅರ್ಥಶಾಸ್ತ್ರದ ತಾರುಣ್ಯ, (ಅನು) ಕೆ.ಎಲ್. ಗೋಪಾಲಕೃಷ್ಣರಾವ್, ಪ್ರಗತಿ ಮಾಸ್ಕೋ ೧೯೮೨.

ಅಂತೋನಿಯೋ ಗ್ರಾಂಶ್ಚಿ, ಪ್ರತಿಸಂಸ್ಕೃತಿ (ಅನು) ಡಿ. ಮನೋಹರ ಪ್ರಸಾದ, ರಚನಾ, ಬೆಂಗಳೂರು ೨೦೧೩.

ಇರ್ಫಾನ್ ಹಬೀಬ್, ಪ್ರಾಚೀನ ಭಾರತದಲ್ಲಿ ಜಾತಿಗಳ ಉಗಮ, ನವಕರ್ನಾಟಕ ೨೦೧೧.

ಉದಯ ಬಾರ್ಕೂರು, ವಾಸ್ತವದ ಬಡಕುಗಳು: ಇತಿಹಾಸದ ತೊಡಕುಗಳು, ಚಿಂತನ ಪುಸ್ತಕ, ಬೆಂಗಳೂರು ೨೦೧೨.

ಉಮಾನಾಥ ಶೆಣೈ ವೈ., ಮೂಡಬಿದಿರೆ ಶ್ರೀ ಚಂದ್ರನಾಥ ಸ್ವಾಮಿಯ ಸಾವಿರ ಕಂಬದ ಬಸದಿ, ಶ್ರೀ ಧವಲತ್ರಯ ಟ್ರಸ್ಟ ಶ್ರೀ ಜೈನಮಠ ಮೂಡಬಿದಿರೆ ೨೦೦೮.

ಉಪಾಧ್ಯಾಯ ಭಗವತ್ ಶರಣ್, ಭಾರತೀಯ ಬಹುಮುಖಿ ಸಂಸ್ಕೃತಿ, (ಅನು) ಹೆಚ್.ಎಸ್. ಗೋಪಾಲ ರಾವ್, ನವಕರ್ನಾಟಕ ಬೆಂಗಳೂರು ೨೦೦೫.

____________ ಪ್ರಾಚೀನ ಭಾರತದ ಐತಿಹಾಸಿಕ ವಿಶ್ಲೇಷಣೆ, ೨೦೦೬.

ಉಡುಪ ಕೆ.ಎಸ್.ಎನ್., ಶ್ರೀ ಕ್ಷೇತ್ರ ಕೋಟೇಶ್ವರ, ಸುದರ್ಶನ ಪ್ರಕಾಶನ ಸುಬ್ರಹ್ಮಣ್ಯ, ಸುಳ್ಯ ೨೦೦೧.

ಎನ್ಕೆ, ಕೃಷ್ಣಾನದಿ, ಐ.ಬಿ.ಎಚ್., ಪ್ರಕಾಶನ, ಬೆಂಗಳೂರು ೧೯೮೩.

ಕಲಬುರ್ಗಿ ಎಮ್.ಎಮ್., ಸಮಾಧಿ ಬಲಿದಾನ, ವೀರ ಮರಣ ಸ್ಮಾರಕಗಳು, ಕನ್ನಡ ಅಧ್ಯಯನ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೮೦.

__________ ಐತಿಹಾಸಿಕ, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಬೆಂಗಳೂರು, ೧೯೯೧.

__________ ಸಂಸ್ಕೃತಿ–ವಿಕೃತಿ. ಸುವರ್ಣ ಸಾಹಿತ್ಯ ಗ್ರಥಮಾಲೆ, ಬೆಂ ೨೦೦೬.

ಕಡವ ಶಂಭುಶರ್ಮ, ಕದರಿ ಮಂಜುನಾಥ ಮಾಹಾತ್ಮೆ, (ಅನು) ಶ್ರೀಧರ ಎಚ್.ಜಿ., ಕಡವ ಶಂಭು ಶರ್ಮ ಸ್ಮಾರಕ ಪ್ರತಿಷ್ಠಾನ, ಪುತ್ತೂರು ೨೦೦೩.

ಕಲ್ಲುಡಿ ಬಸವರಾಜ, (ಸಂ), ಸುವರ್ಣ ವಿಚಾರ ಸಾಹಿತ್ಯ, ಸುವರ್ಣ ಸಾಹಿತ್ಯ ಗ್ರಥಮಾಲೆ, ಬೆಂಗಳೂರು ೨೦೦೬.

ಕಮಲಾ ಹಂಪಾನಾ, ಮಹಾಮಂಡಳೇಶ್ವರಿ ರಾಣಿ ಚೆನ್ನ ಬೈರಾದೇವಿ, ಸ್ವಪ್ನಾ, ಬೆಂಗಳೂರು ೨೦೧೧.

ಕಾಮತ್ ಸೂರ್ಯನಾಥ ಯು., ಕರ್ನಾಟಕ ಕೈಗನ್ನಡಿ, ಐ.ಬಿ.ಎಚ್., ಬೆಂಗಳೂರು ೨೦೧೧.

__________ ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಎಮ್.ಸಿ.ಸಿ., ಪಬ್ಲಿಕೇಶನ್ಸ್, ಬೆಂಗಳೂರು ೨೦೦೫.

ಕಾರಂತ ಶಿವರಾಂ ಕೆ., ಕರ್ನಾಟಕದಲ್ಲಿ ಚಿತ್ರಕಲೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ ೧೯೭೧.

__________ ಕಲಾ ಪ್ರಪಂಚ, ವ್ಯಾಸಂಗ ವಿಸ್ತರಣಾ ಮತ್ತು ಪ್ರಕಟಣಾ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೮.

__________ ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಲಲಿತ ಕಲಾ ಅಕೆಡೆಮಿ, ಬೆಂಗಳೂರು ೧೯೯೧.

ಕಾಪಸೆ ಗುರುಲಿಂಗ, (ಸಂ) ಚಿಂತಾಮಣಿ, ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರಂ ೨೦೧೦.

ಕೋಸಾಂಬಿ ಡಿ.ಡಿ., ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ, (ಅನು) ಟಿ.ಎಸ್. ವೇಣುಗೋಪಾಲ, ಶೈಲಜಾ, ಚಿಂತನ ಪುಸ್ತಕ, ಬೆಂಗಳೂರು ೨೦೧೧.

ಗಣಪತಿ ಗೌಡ ಎಸ್., ಶಿಶುಗಲಿ ಪಾಂಡ್ಯರು ಮತ್ತು ಚಂದಾವರ ಕಾದಂಬರು, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ, ೨೦೦೭–೦೮.

ಗಾಯತ್ರಿ ನಾವಡ, ಎ.ವಿ.ನಾವಡ, ಪಾಣಾರಾಟ, ೭೪ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮೇಳನ, ಉಡುಪಿ ೨೦೦೭,

ಗುರುವ ಆರ್.ಎನ್., ಕಾರವಾರ ಜಿಲ್ಲೆಯ ಶಾಸನಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೭೫.

ಗುರುರಾಜ ಭಟ್ ಪಾದೂರು, ತುಳುನಾಡು, ಗುರುರಾಜ ಭಟ್ ಮೆಮೋರಿಯಲ್ ಟ್ರಸ್ಟ ಉಡುಪಿ, ೨೦೦೯.

ಗುಂಡಾ ಜೋಯಿಸ್ ಕೆಳದಿ, ಕೆಳದಿ ವಸ್ತು ಸಂಗ್ರಹಾಲಯದಲ್ಲಿರುವ ಗೋಕರ್ಣ ಇತಿಹಾಸ ಶಾಸನಗಳು, ಭಾಗ ೧–೨ ಕರ್ನಾಟಕ ರಾಜ್ಯ ಪತ್ರಗಳ ನಿರ್ದೇಶನಾಲಯ ಬೆಂಗಳೂರು ೨೦೦೯.

ಗೋಪಾಲ ಆರ್., (ಸಂ) ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೨೦೦೭.

ಗೋಪಾಲ ಬಾ.ರಾ.,ಕರ್ನಾಟಕದ ನವಶಿಲಾಯುಗ, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ, ೧೯೬೧.

____________ ಬನವಾಸಿ ಕದಂಬರು, ಕದಂಬ ಇನ್ಸ್ಟಿಟ್ಯೂಟ್ ಆಫ್ ಕಲ್ಚರ್, ಶಿರಸಿ ೧೯೮೩.

____________ ಬನವಾಸಿ, ಸ್ವಪ್ನಾ ಬುಕ್ ಹೌಸ್, ಬೆಂಗಳೂರು ೨೦೧೨.

____________ ಕನ್ನಡ ಶಾಸನಗಳು, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರ ೧೯೯೫.

ಗೋಪಾಲರಾವ್ ಹೆಚ್.ಎಸ್., (ಸಂ) ನಾಗಾಭಿನಂದನಾ, ಎಮ್. ಜಿ., ನಾಗರಾಜ ಅಭಿನಂದನಾ ಸಮಿತಿ, ಬೆಂಗಳೂರು ೧೯೯೪.

ಗೋಪಾಲಕೃಷ್ಣ ಹೆಗಡೆ, ಅಘನಾಶಿನಿ, ಐ.ಬಿ.ಹೆಚ್., ಬೆಂಗಳೂರು ೧೯೮೪.

ಗೋಪಾಲಕೃಷ್ಣಯ್ಯ ಕೆ.ಎಲ್., ಇತಿಹಾಸದ ರಾಜಕೀಯ, ನವಕರ್ನಾಟಕ, ೨೦೦೨

ಗೌಡರ ಎಂ.ಬಿ., ಕರ್ನಾಟಕದ ಪ್ರಾದೇಶಿಕ ಭೂಗೋಳಶಾಸ್ತ್ರ, ವಿದ್ಯಾನಿಧಿ ಪ್ರಕಾಶನ ಗದಗ ೨೦೦೨–೦೩.

ಚೆನ್ನಕ್ಕ ಪಾವಟೆ, ಹಾನಗಲ್ಲ ಕದಂಬರು, ಚೆನ್ನಗಂಗಾ ಪ್ರಕಾಶನ, ಧಾರವಾಡ ೧೯೯೮.

ಚೆನ್ನಸ್ವಾಮಿ ಸೋಸಲೆ ಎನ್., (ಸಂ) ಕರ್ನಾಟಕದಲ್ಲಿ ಶ್ವೇತಾಂಬರ ಜೈನ ಸಮಾಜ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೩.

______________ ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ ಹಂಪಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೭.

—————— ಅಂಬೇಡ್ಕರ ದೃಷಿಯಲ್ಲಿ ದಲಿತರು ಮತ್ತು ಮತಾಂತರ, ಯಾಜಿ ಪ್ರಕಾಶನ, ಹೊಸಪೇಟೆ ೨೦೧೨.

—————— ದಲಿತರ ಬದುಕು ಮೆಲುಕು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೨.

ಚಿನ್ನಪ್ಪ ಗೌಡ ಕೆ., ಸೇರಿಗೆ, ಮದಿಪು ಪ್ರಕಾಶನ ಮಂಗಳಗಂಗೋತ್ರಿ ೨೦೦೦.

ಚಿದಾನಂದ ಮೂರ್ತಿ ಎಮ್., ಕನ್ನಡ ಸಂಸ್ಕೃತಿ ನಮ್ಮ ಹೆಮ್ಮೆ, ಸಾಹಿತಿ ಕಲಾವಿದರ ಬಳಗ, ಬೆಂಗಳೂರು ೧೯೯೦.

ಚಟ್ಟೋಪಾಧ್ಯಾಯ ದೇವಿಪ್ರಸಾದ, ದರ್ಶನ, (ಅನು) ರಾಮಕೃಷ್ಣ, ನವಕರ್ನಾಟಕ ೧೯೯೫

—————— ಲೋಕಾಯತ, (ಅನು) ಜಿ. ರಾಮಕೃಷ್ಣ, ನವಕರ್ನಾಟಕ ೨೦೧೧.

—————— ಪ್ರಾಚೀನ ಭಾರತದಲ್ಲಿ ಭೌತವಾದ, (ಅನು) ಗೌರೀಶ ಕೈಕಿಣಿ, ನವಕರ್ನಾಟಕ ೧೯೮೯.

ಜಮಿರುಲ್ಲಾ ಶರೀಫ್, ಕಾರವಾರ ತಾಲೂಕ ದರ್ಶನ ಐ.ಬಿ.ಹೆಚ್., ಬೆಂಗಳೂರು ೧೯೮೪.

—————— ನವಾಯತರು, ಐ.ಬಿ.ಹೆಚ್., ಬೆಂಗಳೂರು ೧೯೮೫.

ಜನಾರ್ಧನ ಭಟ್ ಬಿ., ಬೆರ್ಮರು ಏನಾದರು?, ಶ್ರೀರಾಮ್ ಪ್ರಕಾಶನ, ಮಂಡ್ಯ ೨೦೧೨.

ಜೋಶಿ ವಿ.ಎ., ಅಂಕೋಲಾ ತಾಲೂಕು ದರ್ಶನ, ಐ.ಬಿ.ಹೆಚ್., ಬೆಂಗಳೂರು ೧೯೮೪.

ಡಿಸೋಜಾ ನಾ., ವಾರಾಹಿ, ಐ.ಬಿ.ಹೆಚ್., ಬೆಂಗಳೂರು ೧೯೮೮.

ತಾಳ್ತಂಚೆ ವಸಂತ ಕುಮಾರ, ಸಂಸ್ಕೃತಿ ಸಂಶೋಧನೆ ಒಂದು ಮುನ್ನೋಟ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೮.

ದಿವಾಕರ ನಾ., ದಲಿತರು, ನವಕರ್ನಾಟಕ, ಬೆಂಗಳೂರು ೨೦೧೩.

ದೇಸಾಯಿ ಪಾಂಡುರಂಗ ರಾವ್, ಅನಂತ ರಂಗಾಚಾರ್ ಎನ್., ಕನ್ನಡನಾಡಿನ ಚರಿತ್ರೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ೧೯೫೭.

ನಂಜಮ್ಮಣ್ಣಿ ಎಮ್., ಭಾರತೀಯ ಸಾಮಾಜಿಕ ಸಂಸ್ಥೆಗಳು, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು ವಿಶ್ವವಿದ್ಯಾಲಯ ೧೯೮೨.

ನರಸಿಂಹ ಮೂರ್ತಿ ಎ.ವಿ., ಗಡಿಗಳಾಚೆ ಭಾರತೀಯ ಸಂಸ್ಕೃತಿ, ಎಮ್.ಪಿ. ಬಿರ್ಲಾ ಫೌಂಡೇಶನ್ ಭಾರತೀಯ ವಿದ್ಯಾಭವನ, ಬೆಂಗಳೂರು ೨೦೦೨.

—————— ಕನ್ನಡ ಲಿಪಿಯ ಉಗಮ ಮತ್ತು ವಿಕಾಸ, ವಿವೇಕ ಹಂಸ ಪ್ರಕಾಶನ, ಬೆಂಗಳೂರು ೧೯೯೯.

———————— ವಿಜಯನಗರದ ನಾಣ್ಯ ಸಂಪತ್ತು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾಲಯ ೧೯೯೬.

———————— ಕರ್ನಾಟಕದ ಸೇವುಣರ ಇತಿಹಾಸ, ಮೈಸೂರು ವಿಶ್ವವಿದ್ಯಾಲಯ ೧೯೭೧.

ನಂಬೂದರಿಪಾಡ್ ಇ.ಎಂ.ಎಸ್., ವೇದಗಳ ಈ ನಾಡಿನಲ್ಲಿ, (ಅನು) ಎ.ಅಶ್ವತ ನಾರಾಯಣ ರೆಡ್ಡಿ ಮತ್ತು ಎಮ್.ಎಚ್. ಶ್ರೀಧರ ಮೂರ್ತಿ, ಜನ ಸ್ನೇಹ, ಬೆಂಗಳೂರು ೧೯೯೧.

ನಾಯಕ ಎನ್.ಆರ್., ನಾಯಕ ಶಾಂತಿ, ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು, ಪ್ರಸಾರಾಂಗ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೯.

ನಾಯಕ ಸದಾನಂದ, ಸಾಹಿತ್ಯ ಸಂಶೋಧನೆ ಮತ್ತು ಸಮಾಲೋಚನೆ, ಮನೋಹರ ಗ್ರಂಥ ಮಾಲೆ ಧಾರವಾಡ ೧೯೫೯.

ನಾಗರಾಜ್ ಡಿ.ಆರ್., (ಸಂ) ಭಾರತೀಯ ಸ್ತ್ರೀವಾದ, ಅಕ್ಷರ ಪ್ರಕಾಶನ, ಹೆಗ್ಗೋಡು ೧೯೯೩.

ನಾಗರಾಜಯ್ಯ ಹಂಪ, ಮೂಲಚೂಲ, ಸುವರ್ಣ ಸಾಹಿತ್ಯ ಗ್ರಂಥಮಾಲೆ, ಬೆಂಗಳೂರು ೨೦೦೬.

ಪ್ರಭಾಕರ ಜೋಷಿ ಎಂ., ಹೆಗಡೆ ಎಂ.ಎ., ಭಾರತೀಯ ತತ್ವಶಾಸ್ತ್ರದ ಪ್ರವೇಶ, ಅಕ್ಷರ ಪ್ರಕಾಶನ, ಹೆಗ್ಗೋಡು ೨೦೦೮.

ಬನ್ನಂಜೆ ಬಾಬು ಅಮಿನ್, ತುಳುನಾಡ ದೈವಗಳು, ಕೆಮ್ಮಲಜ್ಜೆ ಪ್ರಕಾಶನ, ಉಡುಪಿ–೦೩, ೨೦೧೦.

ಬರ್ನಾಲ್ ಜೆ.ಡಿ., ಇತಿಹಾಸದಲ್ಲಿ ವಿಜ್ಞಾನ, ಸಂ. ೧,೨,೩. (ಅನು) ನರಸಿಂಹಮೂರ್ತಿ ಜಿ.ಎನ್., ನಿರ್ಮಲಾ ಜಿ.ವಿ., ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಬೆಂಗಳೂರು ೨೦೧೨.

ಬಾಲಗೋಪಾಲ, ಪ್ರಾಚೀನ ಭಾರತದ ಚರಿತ್ರೆ, (ಅನು) ಎಚ್.ಎಸ್.ಶ್ರೀಮತಿ ಬೆಳ್ಳಿ–ಚುಕ್ಕಿ ಪ್ರಕಾಶನ, ಬೆಂಗಳೂರು ೧೯೯೮.

ಬಾಬಾ ಸಾಹೇಬ ಅಂಬೇಡ್ಕರ ಬರಹಗಳು ಮತ್ತು ಭಾಷಣಗಳು, ಸಂ.೩, ಕನ್ನಡ ಸಂಸ್ಕೃತಿ ಬೆಂಗಳೂರು ೧೯೯೪.

ಭಟ್ಟ ಜಿ.ಎಸ್., ಕುಮಟಾ ತಾಲೂಕು ದರ್ಶನ, ಐ.ಬಿ.ಹೆಚ್., ಬೆಂಗಳೂರು, ೧೯೮೪.

ಭಟ್ಟ ಎಲ್.ಜಿ., ಉತ್ತರ ಕನ್ನಡದ ಮುಕ್ರಿಗಳು, ಐ.ಬಿ.ಹೆಚ್., ಬೆಂಗಳೂರು, ೧೯೮೫.

ಭಟ್ಟಸೂರಿ ಕೆ.ಜಿ., ಗೇರಸೊಪ್ಪಾ (ನಗರಬಸ್ತಿಕೇರಿ) ಜೈನ ವಾಸ್ತು ಮತ್ತು ಮೂರ್ತಿ ಶಿಲ್ಪ, ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ,ಮೈಸೂರು ೧೯೯೬.

ಭಟ್ ಕಪನೀಪತಿ ಎಚ್.ಸಿ., ಶಿಲ್ಪ ಮತ್ತು ನಾಗರಿಕತೆ, ಪ್ರಸಾರಾಂಗ ಮೈಸೂರು ೧೯೬೮.

ಭಟ್ಟ ವಾದಿರಾಜ ಕಾನರಾಡಿ, ಕುಂದಾಪುರ ದರ್ಶನ, ಐ.ಬಿ.ಹೆಚ್., ಬೆಂಗಳೂರು, ೧೯೮೬.

———————— ಬಸ್ರೂರು ಒಂದು ಅಧ್ಯಯನ, ಶಾರದಾ ಕಾಲೇಜು ಟ್ರಸ್ಟ್, ಬಸ್ರೂರು ೧೯೯೭.

ಬ್ರೊದ್ರೋವ್ ವಿ., ಆಧುನಿಕ ಯುಗದಲ್ಲಿ ಭಾರತೀಯ ತತ್ವಶಾಸ್ತ್ರ, (ಅನು) ಪ್ರಧಾನ್ ಗುರುದತ್ತ ನವಕರ್ನಾಟಕ, ಅಗಸ್ಟ್ ೧೯೯೦.

ಬೋರಲಿಂಗಯ್ಯ ಹಿ.ಚಿ., ಕುಣಬಿಯರು. ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೦.

———————— ಹಾಲಕ್ಕಿ ಒಕ್ಕಲಿಗರು, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೧.

ಮಹಮ್ಮೂದ್ ಟಿ.ಕೆ., ಸಿದ್ಧಾಪುರ ತಾಲೂಕ ದರ್ಶನ, ಐ.ಬಿ.ಹೆಚ್., ಬೆಂಗಳೂರು, ೧೯೮೮.

ಮಂಗಳಾ ಚಿ.ನಾ., ಮಾತೃಪೂಜೆ. ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೪.

ಮೇಲ್‌ಕರ್ ಎಸ್.ಕೆ., ಅಂಬಿಗರ ಸಮುದಾಯ ಮತ್ತು ಸಂಸ್ಕೃತಿ, ಭಾರತ ಸಿಂಧು ರಶ್ಮಿ ಪ್ರಕಾಶನ, ಧಾರವಾಡ ೨೦೧೧.

ಮಾರ್ಕ್ಸ್ ಕಾರ್ಲ್ ಮತ್ತು ಫ್ರೆಡರಿಕ್ ಎಂಗಲ್ಸ್, ಕಮ್ಯೂನಿಷ್ಟ ಪಕ್ಷದ ಪ್ರಣಾಳಿಕೆ, (ಅನು) ವೇದರಾಜ ಎನ್.ಕೆ. ಮಾರ್ಕ್ಸ್‌ವಾದಿ ಅಧ್ಯಯನ ಮಾಲೆ, ಸಿಪಿಎಂ ಪ್ರಕಾಶನ, ಬೆಂಗಳೂರು ೨೦೧೩.

ಮಾರ್ಕ್ಸ್ ರಾಜಕೀಯ ಅರ್ಥಶಾಸ್ತ್ರದ ಪರಾಮರ್ಶೆಗೆ ಒಂದು ಕಾಣಿಕೆ ,(ಅನು) ಕೆ.ಎಲ್.ಗೋಪಾಲಕೃಷ್ಣ ರಾವ್, ರಾದುಗ, ಮಾಸ್ಕೊ ೧೯೮೨.

ಮಾರ್ಕ್ಸ್ ಕೂಲಿ, ಬೆಲೆ ಮತ್ತು ಲಾಭ, ಪ್ರಗತಿ ಪ್ರಕಾಶನ, ಸೋವಿಯತ್ ಒಕ್ಕೂಟ ೧೯೮೦.

ಮಾರ್ಕ್ಸ್‌ವಾದಿ ತತ್ವಶಾಸ್ತ್ರ ಮತ್ತು ರಾಜಕೀಯ ಅರ್ಥಶಾಸ್ತ್ರ, ಸಿ.ಪಿ.ಎಂ. ಪ್ರಕಟನೆ, ೧೯೯೭ ಬೆಂಗಳೂರು.

ಮಾರ್ಕ್ಸ್, ಶೋಷಣೆಯ ಮೂಲ, ಕ್ರಿಯಾ ಬೆಂಗಳೂರು ೨೦೧೩.

ಮಾರ್ಕ್ಸ್, ಎಂಗೆಲ್ಸ್, ಆಯ್ದ ಕೃತಿಗಳು ,(ಅನು) ಕೆ.ಎಲ್. ಗೋಪಾಲಕೃಷ್ಣರಾವ್, ಪ್ರಗತಿ ಮಾಸ್ಕೊ ೧೯೯೦.

ಮುಜುಂದಾರ ಆರ್.ಸಿ., ವೇದಯುಗ, ಭಾಗ–೧, ೨ (ಅನು) ಎ.ವಿ. ನರಸಿಂಹ ಮೂರ್ತಿ, ಭಾರತೀಯ ವಿದ್ಯಾಭವನ, ಬೆಂಗಳೂರು ೧೯೯೭.

ಮೋತಿಚಂದ್ರ, ಸಾರ್ಥವಾಹ, (ಅನು) ಹೆಚ್.ಎಸ್. ಪಾಟೀಲ್, ಸಾಹಿತ್ಯ ಅಕಾಡೆಮಿ, ಹೊಸ ದೆಹಲಿ ೧೯೯೦.

ಮೋಹನ್‌ಕೃಷ್ಣ ರೈ ಕೆ., ವಸಾಹತು ಶಾಹಿ ಮತ್ತು ನಗರೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೭.

———————— ವಸಾಹತ್ತು ಪೂರ್ವ ಕರ್ನಾಟಕದ ನಗರ ವ್ಯವಸ್ಥೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೬.

——————— ಕೆನರಾದ ವಿಭಜನೆ ಹತ್ತಿ ರಾಜಕೀಯ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೦.

——————— ಚರಿತ್ರೆ ಕಥನ, ಪಲ್ಲವ ಪ್ರಕಾಶನ, ಚೆನ್ನಪಟ್ಟಣ ೨೦೦೯.

ರಮೇಶ ಕೆ.ವಿ., ತುಳುನಾಡಿನ ಇತಿಹಾಸ, ಗೋವಿಂದ ಪೈ ಸ್ಮಾರಕ ಸಂಶೋಧನಾ ಕೇಂದ್ರ, ಉಡುಪಿ ೧೯೬೯.

ರಘುನಾಥ ಭಟ್ ಎಚ್.ಆರ್., ಕಲಬುರ್ಗಿ ಎಂ.ಎಂ., ಬಿಳಗಿ ಅರಸುಮನೆತನ, ವೀರಶೈವ ಅಧ್ಯಯನ ಅಕಾಡಮಿ, ಶ್ರೀ ನಾಗನೂರು ರುದ್ರಕ್ಷಿಮಠ ಬೆಳಗಾವಿ ೧೯೯೫.

ರಘುನಾಥ ಭಟ್ ಎಚ್.ಆರ್., ಕರ್ನಾಟಕ ಶಾಸನ ಕಲೆ, ಭಾರತೀ ಪ್ರಕಾಶನ, ಮೈಸೂರು ೧೯೭೭.

ರಾಮಚಂದ್ರ ರಾವ್ ಎಸ್.ಕೆ., ಮೂರ್ತಿ ಶಿಲ್ಪ ನೆಲೆ–ಹಿನ್ನೆಲೆ, ಐ.ಬಿ.ಹೆಚ್., ಬೆಂಗಳೂರು, ೧೯೭೫.

ರಾಮರಾವ್ ಆರ್.ಎಸ್., ಗೋದಾವರಿ, ಐಬಿಎಚ್., ಬೆಂಗಳೂರು ೧೯೮೨.

ರಾಮಕೃಷ್ಣ ಜಿ., ಭಾರತೀಯ ವಿಜ್ಞಾನದಹಾದಿ, ಸಾಹಿತ್ಯ ಪರಿಷತ್, ಬೆಂಗಳೂರು ೨೦೦೬.

ರಾಬರ್ಟ ಸಿವೆಲ್, ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, (ಅನು) ಸದಾನಂದ ಕನವಳ್ಳಿ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೧೯೯೨.

ರೋಹಿಣಿ ಬಿ.ಎಮ್., ಶಶಿಲೇಖಾ ಬಿ., ತುಳುನಾಡಿನ ಮಾಸ್ತಿ ಕಲ್ಲುಗಳು, ವೀರಗಲ್ಲುಗಳು, ದೇವಕಿಕೃಷ್ಣ ಪ್ರಕಾಶನ, ಮಂಗಳೂರು ೨೦೧೦.

ವಸುಂಧರಾ ಫಿಲಿಯೋಜ್, ಧಾರವಾಡ ಜಿಲ್ಲೆಯ ಕಾಳಾಮುಖ ಮತ್ತು ಪಾಶುಪತ ದೇವಾಲಯಗಳು, ಹುನುಮಾಕ್ಷಿಗೋಗಿ, (ಅನು) ಕರ್ನಾಟಕ ಅನುವಾದ ಸಾಹಿತ್ಯ ಅಕಾಡಮಿ, ಬೆಂಗಳೂರು ೨೦೦೭.

ವಿವಿಧ ಲೇಖಕರು, ಆರು ಉಪನ್ಯಾಸಗಳು, ಕರ್ನಾಟಕ ಮತ್ತು ಜೈನ ಸಂಸ್ಕೃತಿ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ೧೯೭೩.

ವಿವೇಕ ರೈ ಬಿ.ಎ., ತುಳುವ ಅಧ್ಯಯನ ಕೆಲವು ವಿಚಾರಗಳು, ತುಳುವ ಪ್ರಕಾಶನ, ಮಂಗಳೂರು ೧೯೮೦.

——————— ತೌಳವ ಸಂಸ್ಕೃತಿ, ಸಹ್ಯಾದ್ರಿ ಪ್ರಕಾಶನ, ಕುವೆಂಪು ವಿದ್ಯಾವರ್ಧಕ ಟ್ರಸ್ಟ, ಮೈಸೂರು ೧೯೭೭.

ವಿಕ್ಟರ್ ಡಿಸೋಜಾ, ಕೆನರಾದ ನವಾಯತರು, ಕನ್ನಡ ಸಂಶೋಧನಾ ಕೇಂದ್ರ, ಧಾರವಾಡ ೧೯೫೫.

ವಿಲ್‌ಡ್ಯೂರಾಂಟ್, ನಮ್ಮ ಪ್ರಾಚೀನ ಪರಂಪರೆ, ನಾಗರಿಕತೆಯ ಕಥೆ ಸಂ೧, ಕರ್ನಾಟಕ ಅನುವಾದ ಸಾಹಿತ್ಯ ಅಕಾಡಮಿ, ೨೦೦೭.

ವೇಣುಗೋಪಾಲ ಟಿ.ಎಸ್., ಶೈಲಜ, ಲೋಕಾಯತ, ವಿಸ್ಮಯ ಮೈಸೂರು ೨೦೧೨.

ಶರ್ಮಾ ಎಮ್.ಜೆ., ತುಳುನಾಡಿನ ಅರಸು ಮನೆತನಗಳು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ ೧೯೮೫.

ಶರ್ಮಾ ಆರ್.ಎಸ್., ಪ್ರಾಚೀನ ಭಾರತ, (ಅನು) ಎನ್.ಪಿ. ಶಂಕರನಾರಾಯಣ ರಾವ್, ನವಕರ್ನಾಟಕ. ಬೆಂಗಳೂರು ೧೯೯೯.

____________ ಪ್ರಾಚೀನ ಭಾರತದಲ್ಲಿ ಶೂದ್ರರು, ನವಕರ್ನಾಟಕ ೧೯೧೨.

____________ ಆರ್ಯರಿಗಾಗಿ ಹುಡುಕಾಟ, ನವಕರ್ನಾಟಕ ೧೯೯೬.

ಶಾಸ್ತ್ರೀ ಎ.ಕೆ., ಕನ್ನಡದಲ್ಲಿ ಕಡತಗಳು, ಕ.ಸಾ.ಪರಿಷತ್ತು ೧೯೯೭.

____________ ಕೆಳದಿ ನಾಯಕರು ಹಾಗೂ ಪೋರ್ಚುಗೀಸರು, ಪಠ್ಯ ಪುಸ್ತಕ ನಿರ್ದೇಶನಾಲಯ ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೧೯೭೨.

ಶಿಲಾಕಾಂತ ಪತ್ತಾರ, ಶಿಲ್ಪಕಾಶಿ ಬಾದಾಮಿ, ಶಿಲ್ಪಿಪ್ರಕಾಶನ, ಬಾದಾಮಿ ೨೦೦೨.

ಶೇಷಾಶಾಸ್ತ್ರೀ ಆರ್., ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ ಬೆಂಗಳೂರು ೧೯೮೨.

ಶೆಟ್ಟರ್ ಷ., ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ, ಅಭಿನವ, ಬೆಂಗಳೂರು ೨೦೦೮.

____________ ಸಾವಿಗೆ ಆವ್ಹಾನ, (ಅನು) ಸದಾನಂದ ಕನವಳ್ಳಿ, ಷ. ಶೆಟ್ಟರ, ಪುಸ್ತಕ ಪ್ರಾಧಿಕಾರ ಬೆಂಗಳೂರು ೨೦೦೪.

____________ ಹಳಗನ್ನಡ ಲಿಪಿ, ಲಿಪಿಕಾರ, ಲಿಪಿ ವ್ಯವಸಾಯ, ಅಭಿನವ, ಬೆಂಗಳೂರು ೨೦೧೪.

ಶೇಖ್‌ಅಲಿ ಬಿ., ರಂಗಸ್ವಾಮಯ್ಯ ಜಿ.ಆರ್., ದಕ್ಷಿಣ ಭಾರತದ ಇತಿಹಾಸ, ಕನ್ನಡ ಅಧ್ಯಯನ ಕೇಂದ್ರ ಮೈಸೂರು ೧೯೭೭.

ಶೈಲಜ, ಮಾತೃ ಪ್ರಧಾನ ಪರಿಕಲ್ಪನೆ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೪.

ಸತ್ಯನಾಥ ಅಯ್ಯರ್ ಆರ್., ಪ್ರಾಚೀನ ಭಾರತ (ಅನು) ಎಮ್.ಆರ್., ಆನವಟ್ಟಿ, ಕನ್ನಡ ಅಧ್ಯಯನ ಪೀಠ, ಧಾರವಾಡ ೧೯೮೨.

ಸರದೇಸಾಯಿ ಎಸ್.ಜಿ., ಭಾರತೀಯ ತತ್ವಜ್ಞಾನ, (ಅನು) ಗೌರೀಶ ಕೈಕಿಣಿ, ನವಕರ್ನಾಟಕ ೧೯೯೪.

———————— ಪ್ರಾಚೀನ ಭಾರತದಲ್ಲಿ ದರ್ಶನಿಕ ಸಂಘರ್ಷ ಮತ್ತು ಅದರ ಸಾಮಾಜಿಕ ಮಹತ್ವ ,(ಅನು) ಕೆ.ಎಲ್. ಗೋಪಾಲಕೃಷ್ಣರಾವ್, ನವಕರ್ನಾಟಕ, ಬೆಂಗಳೂರು ೨೦೦೨.

———————— ಭಾರತೀಯ ಇತಿಹಾಸದ ವೈಲಕ್ಷಣ್ಯಗಳು, ನವಕರ್ನಾಟಕ ೨೦೧೩.

ಸಾಲೆತೊರೆ ಬಿ.ಎ., ದೇಸಾಯಿ ಪಾಂಡುರಂಗರಾಯ, ಕನ್ನಡ ನಾಡಿನ ಚರಿತ್ರೆ ಭಾಗ–೧ ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು ೧೯೫೭.

ಸುಮುಖಾನಂದ ಜಲವಳ್ಳಿ, ಹೊನ್ನಾವರ ತಾಲೂಕು ದರ್ಶನ, ಐ.ಬಿ.ಹೆಚ್., ಬೆಂಗಳೂರು, ೧೯೮೬.

ಸುಂದರ ಅ., ಬ್ರಹ್ಮಗಿರಿ ಮತ್ತು ಚಂದ್ರವಳ್ಳಿ, ಐ.ಬಿ.ಹೆಚ್., ಬೆಂಗಳೂರು, ೧೯೭೩.

ಸುರೇಂದ್ರರಾವ್ ಬಿ., ಇತಿಹಾಸ ಮತ್ತು ಸಮಾಜ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೦೫.

ಹಳ್ಳಿಕೇರಿ ಎಫ್.ಟಿ., (ಸಂ) ರೇವಣ್ಣಸಿದ್ಧಪರಂಪರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ ೨೦೧೪.

ಹಂಪ ನಾಗರಾಜಯ್ಯ, ಶಾಸನಗಳಲ್ಲಿ ಬಸದಿಗಳು, ರತ್ನತ್ರಯ ಪ್ರಕಾಶನ, ಮೈಸೂರು ೧೯೯೮.

———————— ಯಕ್ಷಯಕ್ಷೀಯರು, ಚಂದ್ರಸಾಗರವರ್ಣಿ ಗ್ರಂಥಮಾಲೆ, ಬೆಂಗಳೂರು ೧೯೭೬.

———————— ಕರ್ನಾಟಕ ಮತ್ತು ಜೈನಧರ್ಮ, ಐ.ಬಿ.ಹೆಚ್., ಬೆಂಗಳೂರು, ೧೯೮೧.

ಹಿರೇಮಠ ಆರ್. ಸಿ., ಕಾವೇರಿ ಗೋದೆಯರ ಆಚೆಗಿದ್ದ ಕನ್ನಡ ನಾಡು, ಸಹ್ಯಾದ್ರಿ ಪ್ರಕಾಶನ, ಮೈಸೂರು, ೧೯೮೪.

ಹೆಗಡೆ ಸೂರ್ಯನಾರಾಯಣ, ಶಾಲ್ಮಲಾ ನದಿ, ಐ.ಬಿ.ಹೆಚ್., ಬೆಂಗಳೂರು, ೧೯೮೩.

ಶ್ರೀನಿವಾಸ ಎಲ್., ಹಂಪಿ ಪರಿಸರದ ಆದಿಮಾನವನ ನೆಲೆಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೧೦.

ಸಬರದ ಬಸವರಾಜ, ಜನಪದ ದೈವಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ೨೦೦೯.

ಸುಬ್ಬಣ ರೈ, ಕದ್ರಿ, ಕನ್ನಡ ವಿಶ್ವವಿದ್ಯಾಲಯ ಹಂಪಿ, ೧೯೯೧.

ಸುಬ್ಬಣ್ಣ ಕೆ.ವಿ., ಕವಿರಾಜ ಮಾರ್ಗ ಮತ್ತು ಕನ್ನಡ ಜಗತ್ತು, ಅಕ್ಷರ ಹೆಗ್ಗೋಡು, ೨೦೦೯.

ಸ್ವಾಮಿ ಧರ್ಮತೀರ್ಥ, ಹಿಂದೂಸಾಮ್ರಾಜ್ಯಶಾಹಿಯ ಇತಿಹಾಸ, (ಅನು) ಕೆ.ಎಸ್. ಭಗವಾನ್, ಮಹಿಮ ಪ್ರಕಾಶನ, ಮೈಸೂರು, ೨೦೧೩.

ಆದಿವಾಸಿ ಆಖ್ಯಾನ, ಸಮುದಾಯಗಳ ಅಧ್ಯಯನಕ್ಕೊಂದು ಆಕರ, ಸಂ ಎ.ಎಸ್. ಪ್ರಭಾಕರ ಸಿದ್ಧಾರ್ಥ ಪ್ರಕಾಶನ, ಹೊಸಪೇಟೆ, ೨೦೦೬.

ಕೊಂಕಣಿ ಭಾಷೆಯ ಪುಸ್ತಕ

ಶಾನಭಾಗ ಅನಂದು ಕೊಡ್ಲ, (ಸಂ). ಕೊಂಕಣಿ ಚೋ ಇತಿಹಾಸ, ಸ್ನೇಹಾ ಪ್ರಕಾಶನ, ಶಿರಸಿ, ೨೦೦೭.

ವಿಶ್ವಕೋಶಗಳು, ಗೆಜಿಟಿಯರ್

ಅರವಿಂದ ಮಾಲಗತ್ತಿ (ಸಂ), ಕನ್ನಡ ವಿಷಯ ವಿಶ್ವಕೋಶ ಸಂ-೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೫.

ರಾಮಚಂದ್ರೇಗೌಡ ಹಿ.ಶಿ. (ಸಂ), ಕ್ನಡ ವಿಷಯ ವಿಶ್ವಕೋಶ ಸಂ-೨ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೨೦೦೭.

ವಿಜಯ ಪೂಣಚ್ಚ ತಂಬಂಡ (ಸಂ), ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ-೧-೮, ಚರಿತ್ರೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೧೦.

ಸಂಪುಟಗಳು

ದಿವಾಕರ್ ಆರ್.ಆರ್., ಕರ್ನಾಟಕ ಪರಂಪರೆ ಸಂಪುಟ ೧ ಮತ್ತು ೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು. ೨೦೦೬.

ನರಸಿಂಹಮೂರ್ತಿ ಎ.ವಿ. (ಪ್ರ.ಸಂ), ಭಾರತೀಯ ಜನತೆಯ ಇತಿಹಾಸ ಮತ್ತು ಸಂಸ್ಕೃತಿ, ಸಂಪುಟಗಳು-೧-೧೫, ಭಾರತೀಯ ವಿದ್ಯಾಭವನ, ಬೆಂಗಳೂರು.

ಮುಜುಂದಾರ ಆರ್.ಸಿ., ವೇದಯುಗ, ಭಾಗ-೧, ೨ (ಅನು) ಎ.ವಿ. ನರಸಿಂಹ ಮೂರ್ತಿ, ಭಾರತೀಯ ವಿದ್ಯಾಭವನ, ಬೆಂಗಳೂರು ೧೯೯೭.

ಷೇಕ್ ಅಲಿ ಬಿ (ಪ್ರ.ಸಂ), ಕರ್ನಾಟಕ ಚರಿತ್ರೆ ಸಂಪುಟ, ೧ ರಿಂದ ೨ ಸಂಪುಟಗಳು ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೭.

ನಾಗೇಗೌಡ ಹೆಚ್.ಎಲ್., ಪ್ರವಾಸಿಕಂಡ ಇಂಡಿಯಾ ಭಾಗ-೧, ೨, ೬ ಪ್ರಸಾರಾಂಗ ವಿಶ್ವವಿದ್ಯಾಲಯ ಮೈಸೂರು ೨೦೦೬, ೨೦೦೭.

ಪ್ರತಿಕೆಗಳು, ಸ್ಮರಣ ಸಂಚಿಕೆ, ಗೆಜೆಟಿಯರ್ ಇತ್ಯಾದಿ

ಅರುಹು ಕುರುಕು, ಸಂ.೩, ಸಂ.೧೨, ಜನವರಿ-ಮಾರ್ಚ ೨೦೧೨

ಕದಂಬ ಅಧ್ಯಯನ, ಕದಂಬೋತ್ಸವ ೧೯೯೬, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು ೧೯೯೭.

ಕನ್ನಡ ಅಧ್ಯಯಸ ಸಂ. ೧೦ ಸಂಚಿಕೆ ೧ ಮತ್ತು ೨ ಕ.ವಿ.ವಿ. ಹಂಪಿ, ೨೦೦೩.

ಕರ್ನಾಟಕ ಭಾರತಿ, ಸಂ. ೧೮, ಸಂಚಿಕೆ ೧, ಕ.ವಿ.ವಿ. ಧಾರವಾಡ, ೧೯೮೫.

——————— ಸಂಪುಟ ೧೮, ಸಂಚಿಕೆ ೨-೩ ಕ.ವಿ.ವಿ. ಧಾರವಾಡ, ೧೯೮೬.

ಕರ್ನಾಟಕ ಪರಂಪರೆ, ಸಂ. ೧ ಭಾಷಾಂತರ ಅಧ್ಯಕ್ಷರು ಸಂಪತ್ಗಿರಿ ರಾವ್ ಕೆ., ಕರ್ನಾಟಕ ಸರ್ಕಾರ ಬೆಂಗಳೂರು ೧೯೭೩.

ಕರ್ನಾಟಕ ರೋಡ್ ಅಟ್ಲಾಸ್, ಪ್ರಕಾಶನ ರೋಡ್ ಅಟ್ಲಾಸ್, ಬೆಂಗಳೂರು-೦೬

ಕಸ್ತೂರಿ, ಮಾಸಿಕ ಮೇ ೧೯೮೭, ಪುಸ್ತಕ ವಿಭಾಗ, ಕೊಪ್ಪಿಕರ ರಸ್ತೆ, ಹುಬ್ಬಳ್ಳಿ.

ಕಾರ್ಕಳ, ಒಂದು ಪ್ರಾದೇಶಿಕ ಅಧ್ಯಯನ, ರಜತೋತ್ಸವ ಸಮಿತಿ ಶ್ರೀ ಭುವನೇಂದ್ರ ಕಾಲೇಜು, ಕಾರ್ಕಳ ೧೯೮೫.

ಕುಂದದರ್ಶನ ವಿದ್ಯಾರ್ಥಿ ಸಂಚಿಕೆ, ವಿಶೇಷ ಪುರವಣಿ, ಭಂಡಾರಕರ್ಸ್ ಕಾಲೇಜು, ಕುಂದಾಪುರ; ೧೯೭೬-೭೭.

ಹೊನ್ನಾವರ ತಾಲೂಕಾ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸುರೇಶ ತಾಂಡೇಲ್, ಪ್ರಾಚೀನ ಭಾರತೀಯ ಇತಿಹಾಸ ಹಾಗೂ ಶಾಸನ ವಿಜ್ಞಾನ ವಿಭಾಗ, ಕ.ವಿ.ವಿ. ಧಾರವಾಡ, ಎಮ್.ಎ. ಪ್ರಥಮ ವರ್ಷದಲ್ಲಿ ಸಾದರಪಡಿಸಿದ ಪ್ರಬಂಧ ೧೯೯೦.

ಮಾನವಿಕ ಭಾರತಿ, ಸಂಚಿಕೆ ೧ ಸಂ. ೨ ಕ.ವಿ.ವಿ. ಧಾರವಾಡ ೧೯೮೫.

——— ಸಂ. ೧, ೧೯೯೬.

——— ಸಂ. ೨, ೧೯೯೭.

ವಿಜಯನಗರ ಅಧ್ಯಯನ, ಸಂ. ೯ ಕರ್ನಾಟಕ ಸರ್ಕಾರ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಹೊಸಪೇಟೆ ೨೦೦೪.

ಭಾರತ ಗೆಜೆಟಿಯರ್, ಸಂ. ೨, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಬೆಂಗಳೂರು, ೧೯೮೭.

ಶೋಧ, ಸಂ. ೧, ಸಂಚಿಕೆ ೧ ಜನವರಿ ೨೦೧೧, ಹಾಮಾನಾ ಸಂಶೋಧನಾ ಕೇಂದ್ರ, ಉಜಿರೆ.

——— ಸಂ. ೨, ಸಂಚಿಕೆ ೨ ೨೦೧೨.

——— ಸಂ. ೩, ಸಂಚಿಕೆ ೨ ೨೦೧೩.

ಸಂಯುಕ್ತ ಕರ್ನಾಟಕ, ದಿನ ಪತ್ರಿಕೆ ೧೭-೦೨-೧೯೯೧ ಹೈಗುಂದ ಐತಿಹಾಸಿಕ ದ್ವೀಪ, ಸುರೇಶ ತಾಂಡೇಲ್.

ದ್ರಾವಿಡ ಅಧ್ಯಯನ, ಸಂ.೧ ಸಂ.೨ ಜೂನ್ ೨೦೦೨, ಪ್ರಸಾರಾಗ, ಕೆ.ವಿ.ವಿ.ಹಂಪಿ

——— ಸಂ.೨ ಸಂಚಿಕೆ.೨ ಜುಲೈ-ಡಿಸೆಂಬರ ೨೦೦೯ ಕೆ.ವಿ.ವಿ.ಹಂಪಿ

——— ಸಂ ೩, ಸಂ೧, ಜನವರಿ-ಜೂನ್ ೨೦೦೪ ಪ್ರಸಾರಾಂಗ ಹಂಪಿ

———————— ಸಂ.೪, ಸ.೨, ಜುಲೈ–ಡಿಸೆಂಬರ್ ೨೦೦೫ ಪ್ರಸಾರಾಂಗ ಹಂಪಿ

———————— ಸಂ.೮, ಸಂ೧, ಜನವರಿ–ಜೂನ್ ೨೦೦೯, ಪ್ರಸಾರಾಂಗ ಹಂಪಿ

ವಿಕ್ರಾಂತ ಕರ್ನಾಟಕ ವಾರಪತ್ರಿಕೆ, ಸಂ.೨, ಸಂಚಿಕೆ ೩೫, ೧೮ ಎಪ್ರಿಲ್ ೨೦೦೮, ಸಂ.ಬಿ. ಪ್ರಸನ್ನಯ್ಯ

ಇಂಗ್ಲೀಶ್ ಭಾಷೆಯ ಪ್ರಕಟಣೆಗಳು

ಪ್ರಾಥಮಿಕ ಆಕರಗಳು

ಪುರಾತತ್ವ ಇಲಾಖೆಯ ವರದಿಗಳು, ಶಾಸನ ಸಂಪುಟಗಳು

ಎನಿವಲ್ ರಿಪೋರ್ಟ್ಸ್ ಆಫ್ ದ ಮೈಸೂರು ಆರ್ಕಿಲೋಜಿಕಲ್ ಡಿಪಾರ್ಟ್‌ಮೆಂಟ್ಸ್

ಎನಿವಲ್ ರಿಪೋರ್ಟ್ ಆಫ್ ಸೌತ ಇಂಡಿಯನ್ ಎಫಿಗ್ರಾಫಿ.

ಬಾಂಬೆ ಕರ್ನಾಟಕ ಇನ್ಸಕ್ರೆಪ್ಷನ್ಸ್

ಕೊರ್ಪಸ್ ಆಫ್ ಇನ್ಸಕ್ರಪ್ಷನ್ಸ್ ಆನ್ ದ ಕನ್ನಡ ಡಿಸ್ಟ್ರಿಕ್ಟ್ ಆಫ ಹೈದರಬಾದ ಸ್ಟೇಟ್.

ಡೆನೈಸ್ಟಿಸ್ ಆಫ್ ಕೆನಾರಿಸ್ ಡಿಸ್ಟ್ರಿಕ್ಟ್

ದಿ ಡಿಸ್ಕ್ರೆಪ್ಟಿವ್ ಲಿಸ್ಟ್ ಆಫ್ ಸ್ಟೋನ್ ಆಂಡ್ ಕೊಪ್ಪರ್ ಪ್ಲೇಟ್ ಇಸ್ಕ್ರೆಪ್ಷನ್ ೧೯೪೦–೧೯೪೧ ಟು ೧೯೪೨–೧೯೪೩ ಅಣ್ಣಿಗೇರಿ ಎ.ಎಮ್., ಜೋಶಿ ಬಿ.ಆರ್.,

ಎಫಿಗ್ರಾಫಿಯಾ ಕರ್ನಾಟಕ ಸಂ. ೪, ೫, ೮

ಎಫಿಗ್ರಾಫಿಯಾ ಇಂಡಿಕಾ.

ಇಂಡಿಯನ್ ಎಂಟಿಕ್ವೇರಿ.

ಇಂಡಿಯನ್ ಆರ್ಕಿಯೋಲೊಜಿ, ಎ ರಿವ್ಯೂ ೧೯೭೦–೭೧

ಇನ್ಸಕ್ರಪ್ಷನ್ ಆಫ್ ನೊರ್ದನ್ ಕರ್ನಾಟಕ ಆಂಡ್ ಕೊಲ್ಲಾಪುರ ಸ್ಟೇಟ್

ಕರ್ನಾಟಕ ಇನ್ಸ್‌ಕ್ರಪ್ಷನ್ಸ್ ಸಂ.೧, ೨, ೩, ೪

ಕನ್ನಡ ಇನ್ಸ್‌ಕ್ರೆಪ್ಷನ್ಸ್ ಆಫ್ ಕೊಪ್ಪಳ

ಕನ್ನಡ ಇನ್ಸ್‌ಕ್ರೆಪ್ಷನ್ಸ್ ಆಫ್ ಆಂಧ್ರಪ್ರದೇಶ.

ಕರ್ನಾಟಕ ಹಿಸ್ಟೋರಿಕಲ್ ರಿವ್ಯೂ ೧೯೭೩–೭೪

ಮೆಮೂರಿಸ್ ಆಫ್ ದ ಆರ್ಕಿಲೊಜಿಕಲ್ ಸರ್ವೆ ಆಫ್ ಇಂಡಿಯಾ

ಮೈಸೂರು ಆಂಡ್ ಕೂರ್ಗಾ ಪ್ರಾಮ ಇನ್ಸ್‌ಕ್ರೆಪ್ಷನ್ಸ್.

ಆರ್ಕಿಲೊಜಿಕಲ್ ಸ್ಟಡಿಸ್, ಮೈಸೂರು

ಜರ್ನಲ್ ಆಫ್ ದ ಬಾಂಬೆ ಬ್ರಾಂಚ್ ಆಫ್ ದ ರೊಯಲ್ ಎಸಿಯಾಟಿಕ್ ಸೊಸೈಟಿ. ಬಾಂಬೆ

ಜರ್ನಲ್ ಆಫ್ ದ ಎಪಿಗ್ರಾಫಿಕಲ್ ಸೊಸೈಟಿ ಆಫ್ ಇಂಡಿಯಾ, ಮೈಸೂರು

ಸೌತ ಇಂಡಿಯನ್ ಇನ್ಸ್‌ಕ್ರೆಪ್ಷನ್ಸ್ ಸಂ.೪, ೫, ೬, ೮, ೯

ದೇಸಾಯಿ ಪಿ.ಬಿ., (ಇಡಿ) ಸಮರೀಸ್ ಆಫ್ ಇನಸ್ಕ್ರೈಪ್ಸನ್ಸ್ ೧೯೪೩–೪೪ ಟು ೧೯೪೯–೫೦ ಕೆ.ಆರ್.ಐ. ಧಾರವಾಡ ೧೯೬೬.

ಪ್ರೊಗ್ರೆಸ್ ಆಫ್ ಆರ್ಕೆಲೋಜಿ ಇನ್ ಕರ್ನಾಟಕ ೧೯೫೬–೧೯೭೨

ಪ್ರೊಗ್ರೆಸ್ ಆಫ್ ಕನ್ನಡ ರಿಸರ್ಚ ಇನ್ ಬಾಂಬೆ ಸ್ಟೇಟ್ ೧೯೪೭–೧೯೫೨, ೧೯೫೨–೧೯೫೩ ಪಂಚಮುಖಿ ಆರ್.ಎಸ್. ಕೆಆರ್ಐ ಧಾರವಾಡ

ಸಮರೀಸ್ ಆಫ್ ಇಸ್ಕ್ರೈಪ್ಷನ್ ೧೯೪೩–೧೯೪೪ ಟು ೧೯೪೯–೧೯೫೦ ಗೋಪಾಲ ಬಿ. ಆರ್.

ಪಿಎಚ್.ಡಿ, ಎಂ.ಫಿಲ್ ಪ್ರಬಂಧಗಳು

ರೆಸಿಕ್ವಿನಾ, ಎ ಹಿಸ್ಟರಿ ಆಫ್ ನಾರ್ತ್ ಕೆನರಾ, ಅಪ್ರಕಟಿತ ಪ್ರೌಢ ಸಂಬಂಧ, ಮೈಸೂರು ವಿಶ್ವವಿದ್ಯಾಲಯ ಮೈಸೂರು, ೧೯೯೭.

ಬ್ರಿಜೇಶ್‌ಕೃಷ್ಣ, ಫೊರೆನ್ಸ್ ಟ್ರೇಡ್ ಇನ್ ಅರ್ಲಿ ಮಿಡಿವಲ್ ಇಂಡಿಯಾ, ಹಾರ್ಮನ್ ಪಬ್ಲಿಶಿಂಗ್ ಹೌಸ್, ನ್ಯೂಡೆಲ್ಲಿ ೨೦೦೦.

ಶೆಟ್ಟಿ ಎಸ್.ಆರ್., ಬನವಾಸಿ ಥ್ರೋ ದಿ ಏಜೆಸ್, ಅನ್‌ಪಬ್ಲಿಶ್ಡ್ ಥಿಸಿಸ್ ಕೆ.ಯು.ಡಿ. ಧಾರವಾಡ ೧೯೮೯.

ಉಷಾದೇವಿ ಎಚ್.ಎಸ್., ಎಗ್ರೇರಿಯನ್ ಸಿಸ್ಟಮ್ ಡುರಿಂಗ್ ದ ಹೊಯ್ಸಳ ಪಿರೇಡ, ಅನ್‌ಪಬ್ಲಿಶ್ಡ್ ಥಿಸಿಸ್, ಬೆಂಗಳೂರು ೧೯೯೦.

ವಸಂತ ಶೆಟ್ಟಿ ಬಿ., ಬಾರ್ಕೂರು–ಎ ಮೆಟ್ರೊಪೊಲಿಟಿನ್ ಸಿಟಿ ಆಫ್ ಎಂಟಿಕ್ವಿಟಿ ಇಟ್ಸ್ ಹಿಸ್ಟ್ರಿ ಎಂಡ್ ಕಲ್ಚರ್, ಅನ್‌ಪಬ್ಲಿಶ್ಡ್ ಥಿಸಿಸ್, ೧೯೮೪.

ಜಗದೀಶ ಶೆಟ್ಟಿ ಬಿ., ದಿ ಎಗ್ರೊ ಎಕೊನಾಮಿಕ್ ರಿಲೇಶನ್ ಎಂಡ್ ಸೋಶಿಯಲ್ ಸ್ಟ್ರಕ್ಚರ್ ಇನ್ ದಕ್ಷಿಣ ಕನ್ನಡ, ಅನ್‌ಪಬ್ಲಿಶ್ಡ್ ಥಿಸಿಸ್, ೧೯೯೨.

ಕೃಷ್ಣಪ್ಪ ಎಮ್.ವಿ., ಸೋಸಿಯಲ್ ಆ್ಯಂಡ್ ಎಕೊನೊಮಿಕ್ ಕಂಡಿಷನ್ ಆಫ್ ಕರ್ನಾಟಕ ಎ.ಡಿ. ೪೦೦–೧೦೦೦, ಪ್ರಸಾರಾಂಗ ಮೈಸೂರು ೧೯೮೧

ಮೋಹನ್‌ಕೃಷ್ಣ ರೈ ಕೆ., ಅರ್ಬನೈಜೇಶನ್ ಆಫ್ ಮಂಗಳೂರು–ಎ ಕಲೋನಿಯಲ್ ಎಕ್ಸ್‌ಪೀರಿಯನ್ಸ್ ೧೭೯೯–೧೯೪೭, ಅನ್‌ಪಬ್ಲಿಶ್ಡ್ ಥಿಸಿಸ್ ಪಿಎಚ್.ಡಿ ಥಿಸಿಸ್, ಮಂಗಳೂರು ಯುನಿವರಸಿಟಿ, ೨೦೦೪.

ಇಂಗ್ಲೀಶ್ ಕೃತಿಗಳು

ಅಪ್ಪಾದೊರೈ ಎಂ., ಇಕನಾಮಿಕ್ ಕಂಡೀಶನ್ಸ್ ಇನ್ ಸದರ್ನ್ ಇಂಡಿಯಾ, ೧೦೦೦-೧೫೦೦ ಎ.ಡಿ., ಎರಡು ಸಂಪುಟಗಳು, ಮದ್ರಾಸ್ ವಿಶ್ವವಿದ್ಯಾನಿಲಯ, ೧೯೩೬.

ಆಜಿಬೊಲ್ವಾ ಏ., ಡೊನಸ್ಕೆ ಜಿ., ಹಿಸ್ಟ್ರೀ ಆಫ್ ದಿ ಮಿಡ್ಲ ಎಜಸ್, ಪ್ರೊಗ್ರೆಸ್ ಪಬ್ಲಿಕೇಶರ್ಸ್ ಮಾಸ್ಕೊ ೧೯೮೨.

ಅಮಿಯ ಬಾಗ್ಚಿ, ದಿ ಪೊಲಿಟಿಕಲ್ ಇಕಾನಮಿ ಆಫ್ ಅಂಡರ್ ಡೆವಲಪ್‌ಮೆಂಟ್, ಕೇಂಬ್ರಿಜ್, ೧೯೮೨.

ಅಣ್ಣಿಗೇರೆ ಎ.ಎಮ್., ದಿ ಡಿಸ್ಕ್ರಿಪ್ಟಿವ್ ಲೀಸ್ಟ್ ಆಫ್ ಕೆ.ಇ.ಐ. ಧಾರವಾಡ ೧೯೬೧ ಸ್ಟೋನ್ ಆ್ಯಂಡ್ ಕೊಪ್ಪರ್ ಪ್ಲೇಟ್ ಇನ್ಸ್‌ಸ್ಕ್ರಪ್ಷನ್ಸ್ ೧೯೪೦-೪೧ ಟು ೧೯೪೨-೪೩.

ಆಶಿನ್‌ದಾಸ್ ಗುಪ್ತಾ, ಇಂಡಿಯನ್ ಮರ್ಚೆಂಟ್ಸ್ ಆ್ಯಂಡ್ ದಿ ಡಿಕ್ಲೈನ್ ಆಫ್ ಸೂರತ್ (೧೭೦೦-೧೭೫೦), ವೀಸ್ ಬೇಡನ್ ೧೯೭೯.

ಭಟ್ಟ್ ಗುರುರಾಜ ಪಾದುರು, ಹಿಸ್ಟ್ರೀ ಆ್ಯಂಡ್ ಕಲ್ಚರ್ ಆಫ್ ಸೌತ್ ಇಂಡಿಯಾ, ವೊಲ್ಯೂಂ ೧ ಗುರುರಾಜ ಭಟ್ಟ್ ಮೆಮೋರಿಯಲ್ ಟ್ರಸ್ಟ್, ಉಡುಪಿ ೨೦೧೦.

ಡಿಯೋ ಶಾಂತಾರಾಮ ಬಾಲಚಂದ್ರ, ಪ್ರೊಬ್ಲೆಮ್ ಆಫ್ ಸೌತ್ ಇಂಡಿಯನ್ ಮೆಗಾಲಿಥ್, ಕೆ.ಆರ್.ಐ. ಕರ್ನಾಟಕ ಯುನಿವರ್‌ಸ್ಸಿಟಿ ಧಾರವಾಡ ೧೯೭೩.

ದಾಸ್ ಎಸ್.ಕೆ., ದಿ ಎಕೊನೊಮಿಕ್ ಹಿಸ್ಟ್ರೀ ಆಫ್ ಎನ್‌ಸ್ಯೆಂಟ್ ಇಂಡಿಯಾ, ಓರಾ ಪಬ್ಲಿಶರ್ಸ್, ಅಲಹಾಬಾದ್ ೨೦೧೩.

ದಿಕ್ಷಿತ್ ಜಿ.ಎಸ್., ಲೋಕಲ್ ಬೊಡಿಸ್ ಇನ್ ಮಿಡಿವಲ್ ಸೌತ್ ಇಂಡಿಯಾ, ಡಿಪಾರ್ಟಮೆಂಟ್ ಆಫ್ ಆರ್ಕೆಲೊಜಿಸ್ ಆ್ಯಂಡ್ ಮ್ಯುಸಿಯಂ ಹೊಸಪೇಟ್ ೨೦೦೪.

ದ್ವಿಜೇಂದ್ರ ತ್ರಿಪಾಠಿ, ದಿ ಸ್ಟೈಟ್ ಹಿಂಟರ್‌ಲ್ಯಾಂಡ್: ದಿ ಟ್ರವೈಲ್ ಆಫ್ ದಿ ಕಾರವಾರ ಪೋರ್ಟ್ ಡೆಲವಪ್‌ಮೆಂಟ್ ಸ್ಕೀಮ್ ಇನ್ ಪ್ರೋರ್ಟ್ಸ್ ಆ್ಯಂಡ್ ದೇಯರ್ ಹಿಂಟರ್ ಲ್ಯಾಂಡ್ಸ್ ಇನ್ ಇಂಡಿಯಾ ೧೭೦೦-೧೯೦೦, ಇಂದುಬಂಗಾ (ಸಂ), ಮನೋಹರ್, ೧೯೯೨.

ಇಂದು ಬಂಗಾ(ಸಂ), ಪೋರ್ಟ್ಸ್ ಆ್ಯಂಡ್ ದೇಯರ್ ಹಿಂಟರ್ ಲ್ಯಾಂಡ್ಸ್ ಇನ್ ಇಂಡಿಯಾ (೧೭೦೦-೧೯೫೦), ಮನೋಹರ್ ಪಬ್ಲಿಶರ್ಸ್, ನ್ಯೂಡೆಲ್ಲಿ, ೧೯೯೨

ಇಂದುಬಂಗಾ(ಸಂ), ದಿ ಸಿಟಿ ಇನ್ ಇಂಡಿಯನ್, ಹಿಸ್ಟರಿ ಮನೋಹರ್ ಪಬ್ಲಿಕೇಶನ್ಸ್, ನ್ಯೂಡೆಲ್ಲಿ ೧೯೯೧.

ಇರ್ಫಾನ್ ಹಬೀಬ್, ಎಸ್ಸೇಸ್ ಇನ್ ಇಂಡಿಯನ್ ಹಿಸ್ಟರಿ ಟುವರ್ಡ್ಸ್ ಎ ಮಾರ್ಕ್ಸಿಸ್ಟ್ ಪರ್ಸೆಪ್ಷನ್, ತುಳಿಕ,

ನ್ಯೂಡೆಲ್ಲಿ ೧೯೯೫.

ಇರ್ಫಾನ್ ಹಬೀಬ್, (ಸಂ) ರೆಸಿಸ್ಟೆನ್ಸ್ ಆ್ಯಂಡ್ ಮಾಡರ್ನೈಜೇಶನ್-ಹೈದರ್ ಅಲಿ ಆ್ಯಂಡ್ ಟಿಪ್ಪು ಸುಲ್ತಾನ್, ಇಂಡಿಯನ್ ಹಿಸ್ಟರಿ ಕಾಂಗ್ರೆಸ್, ನ್ಯೂಡೆಲ್ಲಿ ೧೯೯೯

ಫ್ರಾನ್ಸಿಸ್ ಬಿಕ್‌ನಾನ್, ಎ ಜರ್ನಿ ಫ್ರಂ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರು, ಕೆನರಾ ಆ್ಯಂಡ್ ಮಲಬಾರ್, ಮೂರು ಸಂಪುಟಗಳು, ಏಷ್ಯಾನ್ ಎಜುಕೇಶನಲ್ ಸರ್ವೀಸಸ್, ನ್ಯೂಡೆಲ್ಲಿ, ೧೯೮೮ (ಮೊದಲ ಮುದ್ರಣ, ೧೮೦೭)

ಗೋಪಾಲ್ ಬಿ.ಆರ್., ತಾರಾನಾಥ್ ಎನ್.ಎಸ್., (ಇಡಿ) ಕದಂಬಾಸ್ ದೆರ್ ಹಿಸ್ಟ್ರೀ ಆ್ಯಂಡ್ ಕಲ್ಚರ್, ಡೈರಕ್ಟರೇಟ್ ಆಫ್ ಆರ್ಕೆಲೊಜಿಸ್ ಆ್ಯಂಡ್ ಮ್ಯುಸಿಯಂ, ಮೈಸೂರು ೧೯೯೬.

ಗೋಪಾಲ್ ಆರ್., ವೆನಿಟೈನ್ ಕೊಯಿನ್ಸ್ ಇನ್ ಕರ್ನಾಟಕ, ಡೈರಕ್ಟರೇಟ್ ಆಫ್ ಆರ್ಕೆಲೊಜಿಸ್ ಆ್ಯಂಡ್ ಮ್ಯುಸಿಯಂ ಹೊಸಪೇಟೆ ೨೦೦೫.

ಗೋಪಾಲ್‌ಕೃಷ್ಣ ನಾಯಕ ಪಿ., ಉತ್ತರಕನ್ನಡ ದರ್ಶನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೮೧

ಜೈನ್ ವಿ.ಕೆ., ಟ್ರೇಡ್ ಆ್ಯಂಡ್ ಟ್ರೇಡರ್ಸ್ ಇನ್ ವೆಸ್ಟರ್ನ್ ಇಂಡಿಯಾ, ಎ.ಡಿ.೧೦೦೦-೧೩೦೦, ಮನೋಹರ್ ಪಬ್ಲಿಶರ್ಸ್, ನ್ಯೂಡೆಲ್ಲಿ, ೧೯೯೦.

ಕಲಘಟಗಿ ಟಿ.ಜಿ., (ಇಡಿ) ಜೈನಿಸಂ ಆ್ಯಂಡ್ ಕರ್ನಾಟಕ ಕಲ್ಚರ್, ಪ್ರಸಾರಾಂಗ ಕೆ.ಯು.ಡಿ. ಧಾರವಾಡ ೧೯೭೭.

ಕಲ್ಲೂರ ಕೃಷ್ಣಕುಮಾರ, ಕಾರವಾರ ಆ್ಯಂಡ್ ಕಾರವಾರ ಪೋರ್ಟ್, ಯುನಿವರಸ್ಸಿಟಿ ಆಫ್ ಮುಂಬಯಿ.

ಕೆಮತೂರು ರಘುಪತಿ, ಎ ಗ್ಲೌಸರಿ ಆಫ್ ಪ್ಲೇಸ್ ನೇಮ್ ಎಲಿಮೆಂಟ್ಸ್ ಇನ್ ತುಳು ಆ್ಯಂಡ್ ಕನ್ನಡ, ಜನವಾದಿ ಪ್ರಕಾಶನ ಗುಂಡ್ಮಿ, ೧೯೮೯

ಕುಲಕರ್ಣಿ ಎ.ಆರ್., ಮೆಡೀವಲ್ ಕೊಂಕಣ; ಇಟ್ಸ್ ಹಿಸ್ಟರಿ, ಸೊಸೈಟಿ ಆ್ಯಂಡ್ ಇಕಾನಮಿ, ಇಡಿಯನ್ ಹಿಸ್ಟರಿ ಕಾಂಗ್ರೆಸ್, ಡೆಲ್ಲಿ, ೧೯೯೬

ಮುರಗೇಶ್ ಟಿ., (ಇಡಿ) ಬುದ್ಧಿಸಂ ಇನ್ ಕೋಸ್ಟಲ್ ಕರ್ನಾಟಕ ಎಮ್.ಎಸ್.ಆರ್.ಎಸ್. ಕಾಲೇಜು ಶಿರ್ವಾ ೨೦೧೨

ಮಾರ್ಕ್ಸ್, ಎಂಗಲ್ಸ್, ಸೆಲೆಕ್ಟೆಡ್ ವರ್ಕ್ಸ್, ಪ್ರೊಗ್ರೆಸ್ ಪಬ್ಲಿಷರ್ಸ್, ಮಾಸ್ಕೊ ೧೯೮೬

ಮಾಡ್ತಾ ವಿಲಿಯಂ, ದಿ ಕ್ರಿಶ್ಚಿಯನ್ ಕೊಂಕಣಿ ಆಫ್ ಸೌತ್ ಕೆನರಾ, ಪ್ರಸಾರಾಂಗ ಕೆ.ಯು.ಡಿ. ೧೯೮೪.

ಪ್ರಸಾದ ಓಂ ಪ್ರಕಾಶ, ಡಿಕೆ ಆ್ಯಂಡ್ ರಿವೈವಲ್ ಆಫ್ ಅರ್ಬನ್ ಸೆಂಟರ್ಸ್ ಇನ್ ಮೆಡಿವಲ್ ಸೌತ್ ಇಂಡಿಯಾ ಎ.ಡಿ. ೬೦೦–೧೨೦೦ ಕೊಮನ್‌ವೆಲ್ತ ಪಬ್ಲಿಕೇಶನ್, ನ್ಯೂ ಡೆಲ್ಲಿ ೧೯೮೯.

ರಘುಪತಿ ಭಟ್ಟ ಹೆಚ್.ಆರ್., ಸ್ಟಡೀಸ್ ಇನ್ ದ ಅರ್ಲಿ ಕೊಯಿನ್ಸ್ ಆಫ್ ಕರ್ನಾಟಕ, ಡೈರಕ್ಟರೇಟ್ ಆಫ್ ಆರ್ಕೆಲೋಜಿಸ್ ಆ್ಯಂಡ್ ಮ್ಯುಸಿಯಂ, ಹೊಸಪೇಟೆ ೨೦೦೩.

ರಮೇಶ ಕೆ.ವಿ., ಎ ಹಿಸ್ಟರಿ ಆಫ್ ಸೌತ್ ಕೆನರಾ, ಕರ್ನಾಟಕ ಯುನಿವರ್ಸಿಟಿ, ಧಾರವಾಡ, ೧೯೭೦

ರೆವೆರೆಂಡ್ ಅಲೆಗ್ಸಾಂಡರ್ ಕೆ.ನ್ಯೆರ್ನೆ, ಹಿಸ್ಟರಿ ಆಫ್ ದಿ ಕೊಂಕಣ, ಏಷ್ಯಾನ್ ಎಜುಕೇಶನಲ್ ಸರ್ವೀಸಸ್, ನ್ಯೂಡೆಲ್ಲಿ, ೨೦೦೧.

ರಾವ್ ನಾಗೇಂದ್ರ ಇ., ಕ್ರಾಪ್ಪ ಪ್ರೊಡೆಕ್ಷನ್ ಆ್ಯಂಡ್ ಟ್ರೇಡ್ ಇನ್ ಸೌತ್ ಕೆನರಾ ಎ.ಡಿ. ೧೦೦೦–೧೭೬೩, ೨೦೦೬.

ರಾಜಾ ಕೆ.ಎನ್., (ಸಂ) ಎಸ್ಸೇಸ್ ಆನ್ ದಿ ಕಮರ್ಷಿಯಲೈಜೇಶನ್ ಆಫ್ ಇಂಡಿಯನ್ ಅಗ್ರಿಕಲ್ಚರ್, ಆಕ್ಸ್ ಫರ್ಡ್ ಯುನಿವರ್ಸಿಟಿ ಪ್ರೆಸ್, ಡೆಲ್ಲಿ, ೧೯೮೫

ಸಂಜಯ ಸುಬ್ರಹ್ಮಣ್ಯಂ, ದಿ ಪೊಲಿಟಿಕಲ್ ಎಕೊನಾಮಿ ಆಫ್ ಕೊಮರ್ಸ ಸೌತ್ ಇಂಡಿಯಾ ೧೫೦೦–೧೬೫೦ ಕೆಂಬ್ರಿಡ್ಜ್ ಪ್ರೆಸ್ ೨೦೦೪

ಸಾಲೆತೊರೆ ಬಿ.ಎ., ಕರ್ನಾಟಕ ಟ್ರಾನ್ಸ್ ಒಸೆನಿಕ್ ಕಾಂಟೆಕ್ಟ್, ಕೆ.ಯು.ಡಿ. ಧಾರವಾಡ ೧೯೫೬.

ಶೆಟ್ಟಿ ವಸಂತ ಬಿ., ಶಿವತಾರಕ ಕೆ.ಬಿ., ಇಂಡಿಯನ್ ಇನ್‌ಸ್ಕ್ರಪಶ್ಯನ್ಸ್, ದಿ ಇನ್ಸಿಸ್ಟೂಟ್ ಆಪ್ ಇಂಡಿಯನ್ ಕಲ್ಚರಲ್ ಸ್ಟಡೀಸ್, ಬ್ರಹ್ಮಾವರ ೧೯೮೬.

ಶರ್ಮ ಆರ್.ಎಸ್., ಇಂಡಿಯನ್ ಫ್ಯೂಡಲಿಸಂ, ಮೆಕ್‌ಮಿಲನ್, ಮದರಾಸು, ೧೯೯೦

ಶ್ಯಾಮ್ ಭಟ್ ಎನ್., ಸೌತ್ ಕೆನರ್: ಎ ಸ್ಟಡಿ ಇನ್ ಕಲೋನ್ಯಲ್ ಎಡ್‌ಮಿನಿಸ್ಟ್ರೇಶನ್ ಆ್ಯಂಡ್ ರೀಜನಲ್ ರೆಸ್ಪಾನ್ಸ್, ಮಿತ್ತಲ್ ಪಬ್ಲಿಕೇಶನ್ಸ್, ನ್ಯೂ ಡೆಲ್ಲಿ, ೧೯೯೮

ತ್ರಿಪಾಠಿ ಡಿ.,(ಸಂ) ಬಿಸ್‌ನೆಸ್ ಕಮ್ಯೂನಿಟೀಸ್ ಆಫ್ ಇಂಡಿಯಾ, ನ್ಯೂ ಡೆಲ್ಲಿ, ೧೯೮೪.

ಥಾಪರ್ ರೋಮಿಲಾ, ಅರ್ಲಿ ಇಂಡಿಯಾ, ಪೆಂಗ್ವಿನ್ ಬುಕ್ಸ್ ೨೦೦೩.

ಇಂಗ್ಲೀಶ್ ಪತ್ರಿಕೆಗಳು ಇತ್ಯಾದಿ

ಫ್ರಂಟ್ ಲೈನ್, ಸಂಪುಟ ೨೨ ಸಂಚಿಕೆ ೧೦ ಮೇ ೭–೨೦, ೨೦೦೫ ಇಡಿ. ಇನ್ ಚೀಪ್ ಎನ್. ರಾಮ್.

ಫ್ರಂಟ್ ಲೈನ್, ಸಂ. ೨೭ ಸಂಚಿಕೆ ೮ ಏಪ್ರಿಲ್ ೨೩, ೨೦೧೦

ಫ್ರಂಟ್ ಲೈನ್, ಸಂ. ೨೭ ಸಂಚಿಕೆ ಸೆಪ್ಟೆಂಬರ್ ೨೫, ಅಕ್ಟೋಬರ್ ೦೮, ೨೦೧೦

ಮೆಕಮೆಲನ್ ಸ್ಕೂಲ್ ಅಟ್ಲಾಸ್, ಪಬ್ಲಿಶರ್ ಮೆಕಮೆಲನ್, ೨೦೧೨ ಬೆಂಗಳೂರು

ಕರ್ನಾಟಕ ಸ್ಟೇಟ್ ಗೆಜೆಟಿಯರ್, ಉತ್ತರ ಕನ್ನಡ ಡಿಸ್ಟ್ರಿಕ್ಟ್ ೧೯೮೫.

ಇಂಡಿಯನ್ ಇನ್‌ಸ್ಕ್ರೈಪ್ಯನ್ ಸಂಪುಟ ೫,೬,೭,೮,೧೨,೧೩, ಕೆಆರ್‌ಐ ಧಾರವಾಡ.

ಬಿಕೆಐಐ, ೨,೩, ಮುಂಬೈ ವಿಶ್ವವಿದ್ಯಾಲಯ, ಮುಂಬಯಿ.

ಗೆಜಿಟಿಯರ್

ಎಡ್ವರ್ಡ್ ಥ್ರಸ್ಟನ್, ಎ ಗೆಜಿಟಿಯರ್ ಆಫ್ ದ ಟೆರಿಟೊರಿಸ್ ಅಂಡರ್ ದ ಗವರ್ನಮೆಂಟ್ ಆಫ್ ಈಸ್ಟ ಇಂಡಿಯಾ ಕಂಪನಿ ಎಂಡ್ ದ ನೇಟಿವ್ ಸ್ಟೇಟ್ಸ್ ಸೆಂಟರ್ ಆಫ್ ಇಂಡಿಯಾ, ಅಲೆನ್ ಎಂಡ್ ಕಂಪನಿ, ಲಂಡನ್ ೧೮೫೮.

ಕಾಮತ ಸೂರ್ಯನಾಥ ಯು., ಕರ್ನಾಟಕ ಗೆಜಿಟಿಯರ್, ನೊರ್ಥ ಕೆನರಾ, ಬೆಂಗಳೂರು, ೧೯೮೬.

ಫ್ರಾನ್ಸಿಸ್ ಡಬ್ಲ್ಯೂ. ಕೆನರಾ ಗೆಜಿಟಿಯರ್, ಗವರ್ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು ೧೯೦೪.

ಹಯವದನ್ ರಾವ್ ಸಿ., ಮೈಸೂರು ಗೆಜಿಟಿಯರ್, ವಾಲ್ಯೂಮ್–೧ ಟು ೫, ಗವರ್ನಮೆಂಟ್ ಫ್ರೆಸ್, ಬೆಂಗಳೂರು ೧೯೩೦.

ರೈಸ್ ಬಿ.ಎಲ್., ಮೈಸೂರು ಗೆಜಿಟಿಯರ್, ಏಷಿಯನ್ ಪಬ್ಲಿಕೇಶ್ ಸರ್ವಿಸಸ್, ನ್ಯೂವ್ ಡೆಲಿ, ೨೦೦೧

ಅನುಬಂಧ -೨

ನಕ್ಷೆಗಳು



Scale 1:1,500,000
Kilometres 10 5 0 10 20 30 40 Kilometres
ಉತ್ತರ ಕನ್ನಡದ ಬಂದರುಗಳು


Scale : 1:1,500,000
Kilometres 10 5 0 10 20 30 40 Kilometres
10°C
40°C
1
2
3
4
ಮಳೆಯ ಪ್ರಮಾಣ..
1 :- 2500 ಎಂ:ಎಂ
2 :-1500-2500 ,,
3 :-1000-1500 ,,
4 :-1000 ಕಿಂತ ಕಡಿಮೆ.



Scale 1 : 1500,000
15 0 15 30 km


Sources: National Atlas & Thematic Mapping Organisation ; National Bureau of Soil Survey and Landuse Planning, Bangalore




Scale 1 : 1500,000
km 15 0 15 30 km

Source: National Atlas and Thematic Mapping Organisation


೧



ಕೃಪೆ : ಕರ್ನಾಟಕದ ಕಡಲೋತ್ತರ ಸಂಪರ್ಕಗಳು



ಕೃಪೆ : ಕರ್ನಾಟಕದ ಕಡಲೋತ್ತರ ಸಂಪರ್ಕಗಳು





ಕೃಪೆ : ಕರ್ನಾಟಕದ ಗ್ಯಾಜಿಟಿಯರ್

ಅನುಬಂಧ -೩

ಕರ್ನಾಟಕದ ಪ್ರಮುಖ ಬಂದರುಗಳ ಚಿತ್ರಗಳು





ಕಾರವಾರ





ಅಂಕೋಲಾ





ಕುಮಟಾ ಬಂದರು





ಹೊನ್ನಾವರ ಬಂದರು





ಭಟ್ಕಳ






ಬೈಂದೂರು





ಕುಂದಾಪುರ





ಬಾರ್ಕೂರು





ಮಂಗಳೂರು ಬಂದರು

ಚರಿತ್ರೆ ವಿಭಾಗ